ರುದ್ರಭಟ್ಟ ವಿರಚಿತ

ಜಗನ್ನಾಥ ವಿಜಯಂ

ಸಂಪಾದಕ
ಡಾ. ಆರ್. ಶಾಮಶಾಸ್ತ್ರಿ

ಕನ್ನಡ ಅಧ್ಯಯನ ಸಂಸ್ಥೆ :: ಮೈಸೂರು ವಿಶ್ವವಿದ್ಯಾನಿಲಯ





ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಣೆ–೨೮೪
ಪ್ರಾಚ್ಯಕಾವ್ಯ ಮಾಲೆ–೪೮

ಪ್ರಧಾನ ಸಂಪಾದಕ
ಡಾ. ಹಾ. ಮಾ. ನಾಯಕ

ವಿಭಾಗ ಸಂಪಾದಕ
ಎನ್. ಬಸವಾರಾಧ್ಯ

ರುದ್ರಭಟ್ಟ ವಿರಚಿತ

ಜಗನ್ನಾಥ ವಿಜಯಂ

ರುದ್ರಭಟ್ಟ ವಿರಚಿತ

ಜಗನ್ನಾಥ ವಿಜಯಂ

ಸಂಪಾದಕ

ಡಾ. ಆರ್. ಶಾಮಶಾಸ್ತ್ರಿ

ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
೧೯೭೬

JAGANNATHA VIJAYAM by Rudrabhatta; edited by Dr. R. Shamashastri; published by the Institute of Kannada Studies, University of Mysore, Manasa Gangotri, Mysore-6. pp. xxiv + 464.

ಪ್ರಾಚ್ಯಕಾವ್ಯಮಾಲೆಯಿಂದ ಮೊದಲ ಮುದ್ರಣ : ೧೯೦೪
ಪ್ರಾಚ್ಯಕಾವ್ಯಮಾಲೆಯಿಂದ ಎರಡನೆಯ ಮುದ್ರಣ : ೧೯೩೩
ಕನ್ನಡ ಅಧ್ಯಯನ ಸಂಸ್ಥೆಯಿಂದ ಮೊದಲ ಮುದ್ರಣ : ೧೯೭೬

ಬೆಲೆ : ರೂ. 12-00

ಮಾರಾಟಗಾರರು : ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–570012

ಮುದ್ರಣ : ಮಿತ್ರ ಪ್ರಿಂಟರ್ಸ್, ವಿದ್ಯಾರಣ್ಯಪುರಂ, ಮೈಸೂರು–570008

ಮುನ್ನುಡಿ

ಕನ್ನಡ ಅಧ್ಯಯನಕ್ಕೆ ಸಂಬಂಧಪಟ್ಟ ಚಟುವಟಿಕೆಗಳೆಲ್ಲವನ್ನೂ ಕೇಂದ್ರೀಕರಿಸುವ ದೃಷ್ಟಿಯಿಂದ ೧೯೬೬ ರ ಕೊನೆಯಲ್ಲಿ ಪ್ರಾಚ್ಯ ಸಂಶೋಧನಾಲಯದ ಕನ್ನಡ ವಿಭಾಗವನ್ನು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ವಿಲೀನಗೊಳಿಸಲಾಯಿತು. ಅಂದಿನಿಂದ ಈ ವಿಭಾಗವನ್ನು ಅಧ್ಯಯನ ಸಂಸ್ಥೆಯ 'ಸಂಪಾದನ ವಿಭಾಗ'ವೆಂದು ಹೆಸರಿಸಲಾಯಿತು. ಕ್ರಿ.ಶ. ೧೩೪೨ರಲ್ಲಿ ಪ್ರತಿಮಾಡಲಾಗಿರುವ ಹಾಗೂ ಅತ್ಯಂತ ಪ್ರಾಚೀನ ಉಪಲಬ್ಧ ಕಾಲನಮೂದಿತ ಹಸ್ತಪ್ರತಿಯಾಗಿರುವ ರನ್ನನ 'ಗದಾಯುದ್ಧ'ದ ಹಸ್ತಪ್ರತಿಯಿಂದ ಹಿಡಿದು ೧೮೫೦ರಲ್ಲಿ ಪ್ರತಿಮಾಡಲಾಗಿರುವ 'ಪ್ರಭಾವತಿ ಪರಿಣಯ'ದ ಹಸ್ತಪ್ರತಿಯವರೆಗೆ ಇಂದು ೫೦೦೦ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಹೊಂದಿರುವ 'ಸಂಪಾದನ ವಿಭಾಗ' ಅಧ್ಯಯನ ಸಂಸ್ಥೆಯ ಒಂದು ಪ್ರಧಾನ ಅಂಗವಾಗಿದೆ. ಕನ್ನಡ ಭಾಷಾ ಸಾಹಿತ್ಯಗಳಿಗೆ ಸಂಬಂಧಿಸಿದ ಅಧ್ಯಯನವನ್ನು ಕೈಗೊಳ್ಳುವವರಿಗೆ ಸಂಶೋಧಕರಿಗೆ ಸ್ನಾತಕ ಮತ್ತು ಸ್ನಾತಕೋತ್ತರ ಕನ್ನಡ ವಿದ್ಯಾರ್ಥಿಗಳಿಗೆ ಇದು ಆಕರ ಗ್ರಂಥಗಳ ತವರಾಗಿದೆ, ಪ್ರೇರಣೆಯ ಸ್ರೋತವಾಗಿದೆ.

ಮುದ್ರಣ ಸೌಲಭ್ಯ ಈಗ್ಗೆ ಕೆಲವು ಶತಮಾನಗಳಿಂದೀಚೆಗೆ ಮಾನವ ಜನಾಂಗಕ್ಕೆ ದೊರೆತಿರುವ ವರ. ಈ ಸೌಲಭ್ಯವಿಲ್ಲದಿದ್ದ ಕಾಲದಲ್ಲಿ ಓಲೆಗರಿ ಅಥವಾ ತಾಡಪತ್ರದ ಮೇಲೆ ಕಂಠದಿಂದ ಕೊರೆದು, ಅನನ್ಯ ಶ್ರದ್ಧೆಯಿಂದ ಆ ಸಾಹಿತ್ಯವನ್ನು ಅಭ್ಯಸಿಸಿ, ಅದನ್ನು ಕಾಯ್ದುಕೊಂಡು ಬಂದ ಹಿರಿಯರಿಂದ ಅಂದಿನ ಅಪೂರ್ವ ಸಾಹಿತ್ಯ ನಮ್ಮ ಸಂಪತ್ತಾಗಿ ಉಳಿದಿದೆ. ತಮಗೆ ಪ್ರಿಯವೆನಿಸಿದ ಸಾಹಿತ್ಯ ಕೃತಿಗಳನ್ನು ಪ್ರತಿಮಾಡಿಸಿ ಇಟ್ಟುಕೊಳ್ಳುತ್ತಿದ್ದುದು ಆ ಕಾಲದ ಒಂದು ಬಗೆಯ ಹವ್ಯಾಸವೇ ಆಗಿತ್ತು. ಈ ಕಾರಣದಿಂದಾಗಿಯೇ ಓಲೆಗರಿಯ ಒಂದು ಸಂಪುಟದಲ್ಲಿಯೇ ಅನೇಕ ಗ್ರಂಥಗಳನ್ನು ಗ್ರಂಥಭಾಗಗಳನ್ನು ಪ್ರತಿಲಿಪೀಕರಿಸಿರುವುದನ್ನು ಕಾಣುತ್ತೇವೆ. ಹಸ್ತಪ್ರತಿಗಳ ಅನೇಕ ಪ್ರತಿಗಳನ್ನು ಸಿದ್ಧಪಡಿಸಿ ಹಂಚುವುದನ್ನು ಪುಣ್ಯಕಾರ್ಯವೆಂದು ಬಗೆದು, ಆ ರೀತಿ ಮಾಡುತ್ತಿದ್ದುದಕ್ಕೂ ಉದಾಹರಣೆಗಳಿವೆ. ಪ್ರತಿಲಿಪೀಕರಣ ಹಲವರಿಗೆ ಜೀವನೋಪಾಯದ ಸಾಧನವಾಗಿಯೂ ಇತ್ತು. ಹಸ್ತಪ್ರತಿಗಳನ್ನು ಸುಂದರ ಸಂದರ್ಭೋಚಿತ ಚಿತ್ರಗಳಿಂದ ಅಲಂಕರಿಸುವ ವಾಡಿಕೆಯೂ ಇತ್ತು. ಇವು ನಮ್ಮ ಜನಗಳ ಸಾಹಿತ್ಯ–ಶಾಸ್ತ್ರ–ಕಲಾಭಿರುಚಿಯ ಪ್ರತೀಕವಾಗಿವೆ.

ಸಂಸ್ಕೃತಿ, ಇತಿಹಾಸ, ಭಾಷಾಚರಿತ್ರೆ–ಇವುಗಳ ಸಮಗ್ರ ಅರಿವಿಗೆ ಶಾಸ್ತ್ರೀಯವಾಗಿ ಸಂಪಾದಿಸಿದ ಸಾಹಿತ್ಯ ಅತ್ಯಾವಶ್ಯಕ. ಅಷ್ಟೇ ಅಲ್ಲ, ಕೋಶ ಅಥವಾ ನಿಘಂಟುಗಳ ರಚನೆಗೆ, ಅವುಗಳ ಮೂಲ ಘಟಕಗಳಾದ ಶಬ್ದಗಳ ಅರ್ಥನಿರ್ಧಾರಕ್ಕೆ ಶಾಸ್ತ್ರೀಯವಾಗಿ ಸಂಪಾದಿಸಿದ ಸಾಹಿತ್ಯಕೃತಿಗಳು ಅನಿವಾರ್ಯವಾಗುತ್ತವೆ. ಸಾಂಸ್ಕೃತಿಕ ಮತ್ತು

ಐತಿಹಾಸಿಕ ಪುನರ್ರಚನೆಗೆ ಅಗತ್ಯವಾಗಿ ಬೇಕಾಗಿರುವ ಅನೇಕ ಗ್ರಂಥಗಳು ಇಂದಿಗೂ ಅನುಪಲಬ್ಧವಾಗಿವೆ. ಶಾಸನಗಳಲ್ಲಿ, ಅನ್ಯಕವಿಗಳ ಕೃತಿಗಳಲ್ಲಿ ಉಕ್ತವಾಗಿರುವುದರಿಂದ ಮಾತ್ರ ಹಲವು ಕವಿಗಳ ಮತ್ತು ಗ್ರಂಥಗಳ ಹೆಸರುಗಳು ತಿಳಿದುಬರುತ್ತವೆ. 'ಕಾವ್ಯ ಪ್ರಯೋಗ ಪರಿಣತಮತಿ'ಗಳಾಗಿದ್ದ ಕನ್ನಡ ಜನತೆಯ ಬಳಿ ಒಂದು ಕಾಲದಲ್ಲಿ ಇವೆಲ್ಲ ಲಭ್ಯವಾಗಿದ್ದಿರಬೇಕು. ನಾಡಿನ ಹಲವೆಡೆಗಳಲ್ಲಿ ಓಲೆಗರಿಯ ಸಾಹಿತ್ಯ ಅನೇಕ ಶತಮಾನಗಳವರೆಗೆ ತನ್ನ ವೈಭವವನ್ನು ಮೆರೆದಿತ್ತು. ಕಾವ್ಯಪಾರಾಯಣ ಸಾಂಸ್ಕೃತಿಕ ಜೀವನದ ಅಂಗವಾಗಿ ಪರಿಣಮಿಸಿತ್ತು. ಕಾಲಕ್ರಮದಲ್ಲಿ ದೇಶ ಕಾಲ ಪರಿಸರಗಳ ಪ್ರಭಾವದಿಂದ, ಜನತೆಯ ಅಜ್ಞಾನ, ಅಶ್ರದ್ಧೆ ಮತ್ತು ಔದಾಸೀನ್ಯಗಳ ಫಲವಾಗಿ ಅವು ಮೂಲೆಗುಂಪಾಗುತ್ತ ಬಂದು ಕೀಟಗಳಿಗೆ ಆಹಾರವಾಗತೊಡಗಿದವು. ಅವುಗಳನ್ನು ಸಂರಕ್ಷಿಸಲಾರದೆ ನದಿಯ ಪಾಲೋ, ಬೆಂಕಿಯ ಪಾಲೋ ಮಾಡುತ್ತಿದ್ದ ಉದಾಹರಣೆಗಳೂ ಅಸಂಖ್ಯವಾಗಿವೆ. ಮತ್ತೆ ಕೆಲವೆಡೆಗಳಲ್ಲಿ ನವರಾತ್ರಿಯಂದು ಬೆಳಕುಕಂಡು, ಪೂಜಾರ್ಹವಾಗಿ, ಹಾಲುಂಡು ಮತ್ತೆ ಕತ್ತಲ ಕೋಣೆಯ ಮೂಲೆ ಸೇರಬೇಕಾದ ದುಃಸ್ಥಿತಿ ಒದಗಿ ಹಲವಾರು ಅಮೂಲ್ಯ ಪ್ರತಿಗಳು ತ್ರುಟಿತವಾಗಿ ಹೋಗಿವೆ. ಇಂಥ ಮೌಢ್ಯವನ್ನು ದೂರ ಮಾಡಿ, ಹಸ್ತಪ್ರತಿಗಳನ್ನು ಹೊರಗೆಳೆದು, ಅವುಗಳನ್ನು ಕೊಂಡು ಇಲ್ಲವೆ ಎರವಲಾಗಿ ಪಡೆದು ಪರಿಷ್ಕರಿಸಿ, ಸಂಪಾದಿಸುವ ಹೊಣೆಯನ್ನು ಹೊತ್ತಿದೆ, ಈ ಸಂಸ್ಥೆಯ ಸಂಪಾದನ ವಿಭಾಗ.

ಅನುಪಲಬ್ಧವಾಗಿರುವ ಸಾಹಿತ್ಯರಾಶಿಯನ್ನು ಹೊರತರಲು, ಉಪಲಬ್ಧ ಸಾಹಿತ್ಯಕ್ಕೆ ಪರಿಷ್ಕಾರನೀಡಲು ಹಸ್ತಪ್ರತಿಗಳ ಸಂಗ್ರಹಕಾರ್ಯ ಸತತವಾಗಿ ನಡೆಯಬೇಕಾಗಿದೆ. ಸಾಹಿತ್ಯಿಕ ಚಟುವಟಿಕೆಯ ಕೇಂದ್ರಗಳಾಗಿದ್ದ ಎಡೆಗಳಲ್ಲಿ, ಕವಿಗಳ ಕೀರ್ತಿ ಹರಡಿದ್ದ ಪ್ರದೇಶಗಳಲ್ಲಿ, ಜ್ಞಾನಗಂಗೆಯನ್ನು ಮನೆಮನೆಯ ಬಾಗಿಲಿಗೆ ಕೊಂಡೊಯ್ದ ಶಿವಶರಣರು ಮತ್ತು ದಾಸರುಗಳು ಸಂಚರಿಸುತ್ತಿದ್ದ ಸ್ಥಳಗಳಲ್ಲಿ ಅವರ ನೆನಪಿಗಾಗಿ ಮಠಗಳು, ಸ್ಮಾರಕಗಳು ನಿರ್ಮಿತವಾಗಿರುವ ಕಡೆಗಳಲ್ಲಿ, ಅನುಯಾಯಿಗಳ ಮತ್ತು ಭಕ್ತರ ಮನೆಗಳಲ್ಲಿ, ಸಾಹಿತ್ಯೋಪಾಸಕರ ಬಳಿಯಲ್ಲಿ ಹೇಗೋ ಎಂತೋ ಸಂಗ್ರಹಿತವಾಗಿರುವ ಹಸ್ತಪ್ರತಿಗಳನ್ನು ಸಂಗ್ರಹಿಸಿ ರಕ್ಷಿಸಬೇಕಾಗಿದೆ. ಈ ಸಂಸ್ಥೆಯ ಹಸ್ತಪ್ರತಿಯ ಭಂಡಾರವನ್ನು ಈ ದೃಷ್ಟಿಯಿಂದ ಬೆಳಸಿಕೊಂಡು ಬರುವತ್ತ ಆದ್ಯಗಮನ ಕೊಡಲಾಗಿದೆ.

ಸಂಗ್ರಹಿಸಿದ ಪ್ರತಿಗಳನ್ನು ಎಚ್ಚರಿಕೆಯಿಂದ ಕಾಪಾಡಿಕೊಂಡು ಬರುವುದೂ ಅತ್ಯಂತ ಮುಖ್ಯವಾದ ಹೊಣೆ. ಕೀಟಗಳ ಹಾವಳಿಗೆ ಸಿಕ್ಕಿ ಪ್ರತಿಗಳು ಶಿಥಿಲವಾಗದಂತೆ ನೋಡಿಕೊಳ್ಳುವ ದೃಷ್ಟಿಯಿಂದ ಸಾಧ್ಯವಾದಷ್ಟು ಸಲ ಅವುಗಳನ್ನು ಸ್ವಚ್ಛಗೊಳಿಸುವುದು, ಕೀಟನಿರೋಧಕತೈಲ ಲೇಪನಮಾಡುವುದು, ವಾಯುನಿಯಂತ್ರಿತ ಕೊಠಡಿಯಲ್ಲಿಟ್ಟು ಪ್ರಧೂಮನ ಉಪಚಾರ ನೀಡುವುದು (fumigation treatment), ತೀರ ತ್ರುಟಿತವಾದ ಹಸ್ತಪ್ರತಿಗಳನ್ನು ಮೈಕ್ರೊಫಿಲಂಗಳಲ್ಲಿ ಶಾಶ್ವತಗೊಳಿಸುವುದು ಅಗತ್ಯವಾಗುತ್ತದೆ. ಈ ರೀತಿ ಹಸ್ತಪ್ರತಿಗಳನ್ನು ಕಾಪಾಡಿಕೊಂಡು ಬರುವುದು ವ್ಯಕ್ತಿಗಳಿಗೆ ಶ್ರಮಸಾಧ್ಯವಾದ

ಹಾಗೂ ಆರ್ಥಿಕವಾಗಿ ಸುಲಭಸಾಧ್ಯವಲ್ಲದ ಕಾರ್ಯ. ಕನ್ನಡ ಅಧ್ಯಯನ ಸಂಸ್ಥೆ ಹಸ್ತಪ್ರತಿಗಳ ಸಂರಕ್ಷಣೆಗೆ ಅಗತ್ಯವಾದ ವೇಲ್ಕಂಡ ಎಲ್ಲ ಕ್ರಮಗಳನ್ನೂ ಕೈಗೊಂಡಿದೆ.

ಗ್ರಂಥಸಂಪಾದನೆ ಶ್ರಮಸಾಧ್ಯವಾದ ಕಾರ್ಯ. ವಿದ್ವತ್ತು, ವ್ಯುತ್ಪತ್ತಿ, ಪ್ರತಿಭೆ ಮೇಳವಿಸಿರುವ ಸಮರ್ಥರು ಕೈಗೊಳ್ಳಬೇಕಾದ ಕಾರ್ಯ. ಈ ಕಾರ್ಯದಲ್ಲಿ ಹಲವಾರು ಭಾಷೆಗಳ, ಶಾಸ್ತ್ರಗಳ ಪರಿಚಯವೂ ಅಗತ್ಯವಾಗುತ್ತದೆ. ಹಸ್ತಪ್ರತಿಗಳೂ ಕಾಲ ದೇಶ ಮತ್ತು ಪರಿಸರಗಳ ಪ್ರಭಾವಕ್ಕೆ ಒಳಗಾಗಿರುತ್ತವೆ. ಸಾಹಿತ್ಯಾಭ್ಯಾಸಿಗಳು ಹಸ್ತಪ್ರತಿಗಳ ಮೇಲೆ ಟಿಪ್ಪಣಿಗಳನ್ನು, ತಮ್ಮ ಅನಿಸಿಕೆಗಳನ್ನು ಬರೆದುಬಿಡುತ್ತಿದ್ದುದೂ ಉಂಟು. ಕಾಲ ಕ್ರಮದಲ್ಲಿ ಅವು ಮೂಲದ ಅಂಗವೋ ಎಂಬಂತೆ ಸೇರಿಬಿಡುತ್ತಿದ್ದುದೂ ಸಹಜವೆ. ಪ್ರತಿಭಾವಂತರೂ, ವ್ಯುತ್ಪನ್ನಮತಿಗಳೂ, ಕಾವ್ಯರಚನಾಸಮರ್ಥರೂ, ಮೂಲವನ್ನು ಕೆಲವು ವೇಳೆ ಉತ್ತಮಪಡಿಸಿ, ಕೆಲವು ವೇಳೆ ಕೆಡಿಸಿ, ಅರ್ಥಸೌಲಭ್ಯಕ್ಕಾಗಿ ಅರ್ಥ ವಾಗುವಂತಹ ಪಾಠಾಂತರಗಳನ್ನು ಕಲ್ಪಿಸಿ, ಅಲ್ಲಲ್ಲಿ ಮೂಲಧಾಟಿಗೆ ಭಂಗಬರದಂತೆ ತಮ್ಮ ಸ್ವಂತ ರಚನೆಗಳನ್ನು ಪ್ರಕ್ಷೇಪಿಸಿಬಿಟ್ಟಿರುವುದೂ ಉಂಟು. ಇಂತಹ ಪ್ರಕ್ಷೇಪಗಳು ಕೆಲವೊಮ್ಮೆ ಸನ್ನಿವೇಶದ ಪ್ರಭಾವವನ್ನು ಹೆಚ್ಚಿಸಿರುವುದೂ ಉಂಟು; (ಒಂದು ವೇಳೆ ವಾಸ್ತವವಾಗಿ ಹಾಗಾಗದಿದ್ದರೂ ಪ್ರಕ್ಷೇಪಕರು ಹಾಗೆ ಭಾವಿಸಿಕೊಂಡದ್ದೂ, ತಮ್ಮ ಚಪಲ ವನ್ನು ತೀರಿಸಿಕೊಂಡದ್ದೂ ಸತ್ಯ!) ಒಟ್ಟಿನಲ್ಲಿ ಅನಾವಶ್ಯಕ ವಿಸ್ತರಣಕ್ಕೆ ಕಾರಣವಾಗಿ ಕೃತಿಯ ಗಾತ್ರದ ಹೆಚ್ಚಳಕ್ಕೆ ಮಾತ್ರ ನೆರವಾಗಿರುವುದೂ ಉಂಟು. ಲಿಪಿಕಾರರೂ ಅನೇಕ ವೇಳೆ ತಮಗೆ ಸರಿದೋರಿದಂತೆ ಅಥವಾ ಸೂಕ್ತಕಂಡಂತೆ ಶಬ್ದರೂಪಗಳನ್ನು ಬದಲಾಯಿಸಿ ಅಥವಾ ಬೇರೆ ಶಬ್ದವನ್ನು ತಂದು ಗಿಡಿದು, ತಿಳಿದೋ ತಿಳಿಯದೆಯೋ ಮೂಲಕ್ಕೆ ತಿದ್ದುಪಡಿಗಳನ್ನು ತಂದುಬಿಡುತ್ತಿದ್ದುದುಂಟು. ಇಂತಹ ಅನೇಕ ಕಾರಣ ಗಳಿಂದಾಗಿ ಒಂದೇ ಕೃತಿಯ ಹಲವು ಪ್ರತಿಗಳಲ್ಲಿ ಪಾಠವ್ಯತ್ಯಾಸಗಳು ಕಂಡುಬರುತ್ತವೆ. ಒಂದೊಂದೇ ಪ್ರತಿಗಳು ದೊರಕಿದ್ದು ಅವೂ ತ್ರುಟಿತವಾಗಿರುವಂತಹ ಸಂದರ್ಭಗಳಲ್ಲಿ ಮೂಲಪ್ರತಿಯ ಪಾಠವನ್ನು ಪುನರ್ರಚಿಸಬೇಕಾಗುತ್ತದೆ. ಇದು ನಿಜಕ್ಕೂ ಪ್ರತಿಭೆಯ ಕೆಲಸವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಸಂಪಾದಕನ ಪರೀಕ್ಷೆಯೇ ನಡೆದು ಹೋಗುತ್ತದೆ. ವಿದ್ವತ್ತಿನ ಹಿನ್ನೆಲೆಯಲ್ಲಿ ತಾಳ್ಮೆ, ಶ್ರಮಸಹಿಷ್ಣುತೆ ಇಲ್ಲವಾದರೆ ಈ ಕ್ಷೇತ್ರದಲ್ಲಿ ಯಶಸ್ಸು ಪಡೆಯುವುದು ಸಾಧ್ಯವಾಗುವುದಿಲ್ಲ. ಗ್ರಂಥಸಂಪಾದನೆ ಇಂದು ವಿಶಿಷ್ಟ ಶಾಸ್ತ್ರವಾಗಿಯೇ ಬೆಳೆದಿದೆ.

'ಸಂಪಾದನ ವಿಭಾಗ' ಹಲವಾರು ಸಾಹಿತ್ಯ ಮತ್ತು ಶಾಸ್ತ್ರಗ್ರಂಥಗಳನ್ನು ವೈಜ್ಞಾನಿಕವಾಗಿ ಸಂಪಾದಿಸಿ, ಪಾಠಗಳನ್ನು ನಿರ್ಧರಿಸಿ, ಪಾಠಾಂತರಗಳನ್ನು ಒದಗಿಸಿ, ವಿಸ್ತಾರವಾದ ಪೀಠಿಕೆಗಳನ್ನು ಬರೆದು, ಕವಿಯ ಕಾಲ, ದೇಶ, ಕೃತಿಗಳ ವಿಚಾರವನ್ನು ಚರ್ಚಿಸಿ, ಅವುಗಳ ಸಾಹಿತ್ಯಿಕ ಮೌಲ್ಯವನ್ನು ಪರಿಶೀಲಿಸಿ, ಅಗತ್ಯವಾದಲ್ಲಿ ಟಿಪ್ಪಣಿ ವ್ಯಾಖ್ಯಾನಗಳನ್ನು ನೀಡಿ, ಕೆಲವು ಸಂದರ್ಭಗಳಲ್ಲಿ ಗದ್ಯಾನುವಾದಗಳನ್ನು ಕೊಟ್ಟು, ಅರ್ಥ ಕೋಶವನ್ನು ಒದಗಿಸಿ ಬೆಳಕಿಗೆ ತರುತ್ತಿದೆ. ಪ್ರಾಚ್ಯವಿದ್ಯಾ ಸಂಶೋಧನಾಲಯದ ಅಂಗ

ವಾಗಿದ್ದಾಗ ಹೊರತಂದಿರುವ ೪೦ ಗ್ರಂಥಗಳ ಜೊತೆಗೆ ಅಧ್ಯಯನ ಸಂಸ್ಥೆಯಲ್ಲಿ ಸೇರ್ಪಡೆಯಾದ ಮೇಲೆ 'ಪ್ರಾಚ್ಯಕಾವ್ಯ ಮಾಲೆ'ಯ ಹೆಸರಿನಲ್ಲಿ ಈಗಾಗಲೇ ೪೬ ಗ್ರಂಥಗಳನು ಹೊರತರಲಾಗಿದೆ. ಬೆಳಕು ಕಾಣಲು ಹಾತೊರೆಯುತ್ತಿರುವ ಗ್ರಂಥಗಳನ್ನು ವ್ಯವಸ್ಥಿತ ರೀತಿಯಲ್ಲಿ ಹೊರತರಲು ಸಂಸ್ಥೆ ಸತತವಾಗಿ ಶ್ರಮಿಸುತ್ತಿದೆ. ಇದುವರೆಗೆ ಸಂಪಾದನ ವಿಭಾಗದ ಸಂಶೋಧನ ಸಹಾಯಕರು ಸಿದ್ಧಪಡಿಸಿದ ಕೃತಿಗಳನ್ನು ಮಾತ್ರ ಪ್ರಕಟಿಸಲಾಗುತ್ತಿತ್ತು. ಈಗ ಈ ವಿಭಾಗದಲ್ಲಿ ಸಂಗ್ರಹಿತವಾಗಿರುವ ಹಸ್ತಪ್ರತಿಗಳನ್ನುಪಯೋಗಿಸಿಕೊಂಡು ಹೊರಗಿನವರೂ ಸಂಪಾದಿಸಬಹುದಾದ ಗ್ರಂಥಗಳನ್ನೂ ಪ್ರಕಟಿಸಲು ಯೋಜಿಸಲಾಗಿದೆ. ಇದರಿಂದ ಪ್ರಕಟನೆಯ ಕೆಲಸ ತ್ವರಿತಗೊಳ್ಳುತ್ತದೆ. ಹಸ್ತಪ್ರತಿಗಳಲ್ಲೇ ಉಳಿದು ಸಾಮಾನ್ಯರ ಕೈಗೆಟುಕದ ಗ್ರಂಥಗಳನ್ನು ಸರ್ವರ ಸ್ವತ್ತಾಗಿಸುವ ಉದ್ದೇಶವೂ ತೀವ್ರಗೊಳ್ಳುತ್ತದೆ.

ಸಂಪಾದನ ವಿಭಾಗ ಸಂಕಲಿತ ಗ್ರಂಥಗಳನ್ನು ಹೊರತರುವಲ್ಲಿಯೂ ನಮಗೆ ನೆರವಾಗುತ್ತಿದೆ. ಎರಡು ಸಾವಿರ ವರ್ಷಗಳ ಸುದೀರ್ಘ ಪರಂಪರೆಯುಳ್ಳ ಕನ್ನಡ ಸಾಹಿತ್ಯದ ಸಿಂಹಾವಲೋಕನ ಮಾಡಿಸುವಂತಹ ಪ್ರಾತಿನಿಧಿಕ ಸಂಕಲನ ಗ್ರಂಥಗಳನ್ನು ಸಿದ್ಧಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿಸಲಾಗುತ್ತಿರುವ ಈ ಗ್ರಂಥಗಳು ಆಯಾ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಕನ್ನಡ ಸಾಹಿತ್ಯದ ಪರಿಚಯವನ್ನು ಬಯಸುವವರಿಗೂ ಉಪಯುಕ್ತವಾಗುತ್ತವೆ. ಇಂಥ ಸಂಕಲನಗಳನ್ನು ಸಿದ್ಧಪಡಿಸುವುದೂ ಸಂಪಾದನ ವಿಭಾಗದ ಒಂದು ಪ್ರಮುಖ ಹೊಣೆಯಾಗಿದೆ.

ರುದ್ರಭಟ್ಟನ 'ಜಗನ್ನಾಥ ವಿಜಯಂ' ಈ ಮೊದಲು ಪ್ರಾಚ್ಯವಿದ್ಯಾ ಸಂಶೋಧನಾಲಯದಿಂದ ಪ್ರಕಟವಾಗಿದ್ದಿತು. ಪ್ರತಿಗಳು ಮುಗಿದುಹೋಗಿ ಸಹೃದಯರ ಬೇಡಿಕೆ ಅಧಿಕವಾಗಿದ್ದುದರಿಂದ ಇದನ್ನು ಪುನರ್ಮುದ್ರಿಸಲಾಗಿದೆ. ಪದ್ಯಗಳ ಅಕಾರಾದಿಯನ್ನು ಹೊಸದಾಗಿ ಈ ಆವೃತ್ತಿಯಲ್ಲಿ ಅಳವಡಿಸಲಾಗಿದೆ.

ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೬

ಹಾ. ಮಾ. ನಾಯಕ
ಪ್ರಧಾನ ಸಂಪಾದಕ

ದ್ವಿತೀಯಮುದ್ರಣದ ಉಪೋದ್ಘಾತ

ಈ ಗ್ರಂಥವು ನಾಲ್ಕು ತಾಳಪತ್ರ ಪ್ರತಿಗಳ ಆಧಾರದಿಂದ ಕ್ರಿ. ಶ. ೧೯೦೪ರಲ್ಲಿ ಈ ಲೈಬ್ರರಿಯಲ್ಲಿಯೇ ಲೈಬ್ರರಿಯನ್ ಆಗಿದ್ದ ಮ|| ರಾ|| ಎಸ್. ಜಿ. ನರಸಿಂಹಾಚಾರ್ಯರಿಂದ ಶೋಧಿತವಾಗಿ ಮುದ್ರಿತವಾಯಿತು.

ಈಗ ಮೈಸೂರು ಯೂನಿವರ್ಸಿಟಿ ವೈಸ್‌ಛಾನ್ಸೆಲರವರು ಮತ್ತೆ ಶೋಧನೆಮಾಡಿ ಮುದ್ರಿಸಬೇಕೆಂದು ಅಪ್ಪಣೆಮಾಡಿದುದರಿಂದ ಈ ಲೈಬ್ರರಿಯಲ್ಲಿರುವ ಮೂರು ತಾಳಪತ್ರ ಪ್ರತಿಗಳ ಆಧಾರದಿಂದ ಯಥಾಮತಿಯಾಗಿ ಶೋಧಿಸಿ ಪಾಠಭೇದಗಳಿರುವ ಸ್ಥಲಗಳಲ್ಲಿ ಉಚಿತವಾಗಿ ತೋರುವ ಪಾಠವನ್ನು ಮೇಲೆ ಬರೆದು ರುಚಿಭೇದದಿಂದ ಅಥವಾ ಪ್ರತಿಭಾ ವಿಶೇಷದಿಂದ ಕವಿಹೃದಯುವನ್ನು ಗೊತ್ತುಮಾಡುವ ಅಭಿಜ್ಞರಿಗೆ ತಿದ್ದಿಕೊಳ್ಳುವುದಕ್ಕೆ ಅನುಕೂಲವಾಗಿರುವುದಕ್ಕೋಸುಗ ಉಳಿದ ಪಾಠಗಳನ್ನು ಪುಸ್ತಕಸೂಚಕ ಚಿಹ್ನೆಗಳೊಡನೆ ಆ ಪುಟದಲ್ಲಿಯೇ ಕೆಳಗೆ ಬರೆದು ಎರಡನೆಯಾವೃತ್ತಿ ಮುದ್ರಿತವಾಗಿದೆ. ಈ ಮುದ್ರಣದಲ್ಲಿ ಮೊದಲನೆಯ ಮುದ್ರಣದಲ್ಲಿ ಕಂಡುಬಂದ ಹಲವು ತಪ್ಪುಗಳು ತಿದ್ದಿ ಸರಿಮಾಡಲ್ಪಟ್ಟವೆ. ಪ್ರಾಮಾದಿಕಗಳಾದ ತಪ್ಪುಗಳನ್ನು ತಿಳಿಸಲು ಶುದ್ಧಿಪತ್ರಿಕೆಯೂ ಸೇರಿಸಲ್ಪಟ್ಟಿದೆ. ಇನ್ನೂ ಪ್ರಾಮಾದಿಕವಾದ ತಪ್ಪು ತೋರಿದಲ್ಲಿ ಅದನ್ನು ಶೋಧನಕ್ಲೇಶವನ್ನರಿತ ಮಹಾಶಯರು ಅನಸೂಯರಾಗಿ ತಿದ್ದಿಕೊಳ್ಳುವುದು.

ಈ ಶೋಧನೆಗೆ ಆಧಾರವಾದ ಮೂರುಪ್ರತಿಗಳಲ್ಲಿ ೮೭ನೆಯ ನಂಬರಿನ (ಕ) ಎಂಬ ಪ್ರತಿಯು ಪ್ರಾಚೀನಪುಸ್ತಕವಾಗಿ ತೋರುತ್ತದೆ. ಆದರೆ ಆ ಪ್ರತಿಯಲ್ಲಿ ಅದನ್ನು ಬರೆದ ಕಾಲವನ್ನು ತಿಳಿಸುವ ಪಙ್ಕ್ತಿಯು ಹೋಗಿದೆ. ೧೧೪ನೆಯ ನಂಬರಿನ (ಖ) ಎಂಬ ಪ್ರತಿಯ ಕೊನೆಯಲ್ಲಿ ಲೇಖಕನು :

ಈತರದಿಂದೆ ರುದ್ರಕವಿವರ್ಯನುಸಿರ್ದ ಮನೋಜ್ಞಮಿಾಜಗ
ನ್ನಾಥಜಯಪ್ರಬನ್ಧಮನಿಶಂ ಕವಿಶೋಭಿತಮಾಗಮುಸ್ತುತ
ಖ್ಯಾತಮನೂಪಮಂ ಸುಮನಸಾಶ್ರಿತಮಾಗಿ ಮಹೇನ್ದ್ರಭೂಮಿಸಂ
ಜಾತದೊಲೊಪ್ಪಿ ಭಾವಕಮನಾಳಿಯನಿರ್ಕುಳಿಗೊಳ್ಗುಮಾವಗಂ ೧

ಕರಮಿಾಕಾವ್ಯಮ ಕುತ್ಸಗೋತ್ರಭವನಾಪಸ್ತಂಬಸೂತ್ರಂ ಬೃಹ
ಚ್ಚರಣಾಲಂಕರಣಂ ಶಿವಾಂಘ್ರಿವಿಲಸತ್ಪಾನೀಯಸಂಜಾತಸಂ
ಚರಣೋದ್ಭಾಸಿತಬಂಭರಾಯಿತಮತಿ ಶ್ರೀವೇಂಕಟಾಖ್ಯಂ ಕರಂ
ಬರೆದಂ ದುಂದುಭಿವತ್ಸರಾಶ್ವಯುಜಮಾಸಂ ಪೂರ್ಣ್ದೆರಲ್ಕಾದಿನಂ ೨

ಸುಮನೋರಾಜಿವಿರಾಜಿತಂ ಕುವಲಯಾನನ್ದಪ್ರಭಾಭಾವಿತಂ
ಕಮಲಾಕ್ಷಪ್ರತಿಪಾದಿತಂ ಕವಿಜನಾನಂದಪ್ರದಂ ಚೋದಿತಂ
ಪ್ರಮದಾಲಂಕರಣೋದಿತಂ ಹರಿಪದೈಕಧ್ಯಾನ ಸಮ್ಮಿಶ್ರಿತಂ
ಕ್ರಮದಿಂದೆನ್ನಯ ಪುಸ್ತಕಂ ಸರಸಿಯೊಲ್ ವ್ಯೋಮಂಬೊಲುದ್ಭಾಸಿತಂ ೩

ವಿಲಸದ್ಭೂಮಧ್ಯಮಧ್ಯಾಭ್ರದೊಳೊಗೆದ ತಮಂ ಕಾಣಿಸಲ್ ಕಾಣಿಪಕಾರ್ಗಂ
ಶುಲಸಚ್ಚಂದ್ರಾತಪಂಗಳ್ ಕುಡೆ ಸುಧೆಯೊಗೆದಾನಂದಮಂ ನಿರ್ಮಳಾಂತ
ಸ್ಸ್ಥಳದೊಳ್ ತೋರ್ಪಾತ್ಮಶೋಭಾಕಲಿತಜನಿತಚಿತ್ಸೌಖ್ಯದಿಂ ನಿತ್ಯಯೋಗಂ
ನೆಲೆಯಾಗಲ್ ಕೌತುಕಂ ತಾಳ್ದಿಸೆದೆ ತವಕೃಪಾನುಜ್ಞೆಯಿಂ ದೇಶಿಕಾರ್ಯಾ ೪

ಶ್ರೀಗೌರೀಕುಚಕುಂಕುಮ
ರಾಗಾಂಕಿತವಕ್ಷ ದಕ್ಷಲಕ್ಷಿತಲಕ್ಷ್ಯ
ಸ್ಥಾ ಗಾನಪ್ರಿಯ ಸುವಿಧೃತ
ನಾಗಾಧಿಪ ಶ್ರೀಭವಾನಿ ಶಂಕರ ಶರ್ವಾ

ದಯೆಗೈದೆಮ್ಮೊಳ್ ಭಕ್ತೋ
ದಯಮಂ ಸಾರ್ಥಪ್ರಭಾವಮುಮಮಸ್ಮಚ್ಛ್ರೀ
ಪಯನಾವಲೋಕನಸ್ಥಯಿ (?)
ನಯನಿರ್ದಂ ಭ್ರೂಸುಮಧ್ಯವಿಶದಸ್ಥಳದೊಳ್

ಎಂದು ಕಾವ್ಯವಿಷಯವನ್ನೂ, ತನ್ನ ವಿಷಯವನ್ನೂ, ಲೇಖನಕಾಲವನ್ನೂ, ತನ್ನ ಪುಸ್ತಕದ ರೀತಿಯನ್ನೂ ತನ್ನ ಗುರುಕೃಪಾಫಲವನ್ನೂ ಸೂಚಿಸಿ ಬರೆದಿರುವನು. ಬೇರೊಂದು ವೋಲೆಯಲ್ಲಿ

ಇಂತಿಂತು ರುದ್ರಭಟ್ಟಂ
ಸಂತೋಷಾನ್ವಿತನೆ ಪೇಳಲಾ ಸತ್ಕೃತಿಯುಂ
ಸ್ವಾಂತಸುಖಮುಣ್ಮೆ ಸಜ್ಜನ
ರಿಂ ತಾಂ ಭಾವಿಸಲುಮೊಪ್ಪುತಿರ್ಪುದನೂನಂ

ವರರುದ್ರಭಟ್ಟನಿಂದಂ
ವಿರಚಿತಮಾದೀ ಪ್ರಬಂಧಮಂ ಸಂತಸದಿಂ
ಬರೆದಂ ವೇಂಕಟಶರ್ಮ್ಮಂ
ಧರೆಯೊಳ್ ರಾಜಿಸೆ ಸಮಸ್ತವಿದ್ವಜ್ಜನದಿಂ

ದುಂದುಭಿಸಂವತ್ಸರದೊಡ
ನಂದಂಬೆತ್ತಿಸೆವ ಮಾರ್ಗಶಿರಮಾಸದೊಳಂ
ಪೊಂದಿದ ಶುಕ್ಲದ್ವಾದಶಿ
ಯಂದೀ ಸುಕರಪ್ರಬಂಧನಮಂ ವಿಲಿಖಿಸಿದೆಂ

ವರಗುಮ್ಮಳಾಪುರಸ್ಥಿತ
ನುರುವೇಂಕಟಶರ್ಮನಧಿಕಸಂತಸದಿಂದಂ
ಬರೆದಂ ಬುಧಜನರಿಂತಿದ
ಪರೀಕ್ಷಿಸಿಯೆ ತಪ್ಪ ತಿದ್ದಿ ಮೆರೆಯಿಂ ಗುಣಮಂ

ಸುಮನೋರಾಜಿವಿರಾಜಿತಂ ಕುವಲಯಾನಂದಪ್ರಭಾಭಾವಿತಂ
ಕಮಲಾಕ್ಷಪ್ರತಿಪಾದಿತಂ ಕವಿಜನಾನಂದಪ್ರದಂ ಚೋದಿತಂ
ಪ್ರಮದಾಲಂಕರಣೋದಿತಂ ಹರಿಪದೈಕಧ್ಯಾನಸಮ್ಮಿಶ್ರಿತಂ
ಕ್ರಮದಿಂದೆನ್ನಯ ಪುಸ್ತಕಂ ಸರಸಿಯೊಲ್ ಮೇಘಾಧ್ವದೊಲ್ ರಾಜಿಕುಂ

ಜಯ ಶರ್ವ ದೇವವಂದಿತ
ಜಯ ಚಂದ್ರಕಿರೀಟ ಫಣಿವಿಭೂಷಣ ಭಕ್ತೋ
ದಯಶ್ರೀಭವಾನಿ ಶಂಕರ
ಜಯ ಜಯ ಮದ್ವಾಂಛಿತಾರ್ಥದಾತ ಮದೀಶಾ

ಎಂದು ಬರೆದಿದೆ. ಮತ್ತು ಶಾಲಿವಾಹನ ಶಕ ೧೭೫೮ನೆಯ ನಳ ಸಂವತ್ಸರದ ಜಾತಕವೊಂದೂ, ೧೭೬೬ನೆಯ ರಕ್ತಾಕ್ಷಿ ಸಂವತ್ಸರದ ಜಾತಕವೊಂದೂ, ೧೭೯೪ನೆಯ ಆಂಗಿರಸ ಸಂವತ್ಸರದ ಜಾತಕವೊಂದೂ ಬರೆಯಲ್ಪಟ್ಟಿವೆ. ಆಂಗಿರಸ ಸಂವತ್ಸರದ ಜಾತಕವು ಈ ವೇಂಕಟೇಶನ ಮಗನದಾಗಿ ಅದರಿಂದಲೇ ತಿಳಿಯುತ್ತದೆ. ಆದುದರಿಂದ ಈ ಪುಸ್ತಕವನ್ನು ಬರೆದ ದುಂದುಭಿಸಂವತ್ಸರವು ಈಗ್ಗೆ ೧೮೧ ವರ್ಷಗಳ ಹಿಂದಣದಾಗಿರಬೇಕು. ೨೯ನೆಯ ನಂಬರಿನ (ಗ) ಎಂಬ ಪುಸ್ತಕದ ಕೊನೆಯಲ್ಲಿ:—ಸ್ವಸ್ತಿ ಶ್ರೀವಿಜಯಾಭ್ಯುದಯ ಶಾಲಿವಾಹನಶಕಾಬ್ದ ೧೬೫೭ನೆಯ ವರುಷಕ್ಕೆ ಸಂದ ರಾಕ್ಷಸಸಂವತ್ಸರದ ಫಾಲ್ಗುನ ಶುದ್ಧ ೧೦ ಚಂದ್ರವಾರ ಪುನರ್ವಸುನಕ್ಷತ್ರದಲ್ಲೂ ಹದಿನಾಡುಸೀಮೆಯ ಸೇನಬೋವ ದೊಡ್ಡತಮ್ಮರಸರ ಮಲ್ಲಪ್ಪರಸರ ಮಗ ಗವಿಯಣ್ಣನ ಮಗ ವೇಂಕಟಪತಿಯು ಬರೆದ ಜಗನ್ನಾಥ ವಿಜಯದ ಪುಸ್ತಕಕ್ಕೆ ಮಂಗಲಮಸ್ತು ಎಂದು ಬರೆದಿದೆ. ಇದರಿಂದ ಈ ಪುಸ್ತಕವನ್ನು ಬರೆದು ೨೪೨ ವರ್ಷಗಳಾದುವೆಂದು ತಿಳಿಯುತ್ತದೆ. ಇಂತಹ ಪುಸ್ತಕಗಳ ಸಹಾಯದಿಂದ ಮುದ್ರಿತವಾಗಿರುವ ಜಗನ್ನಾಥವಿಜಯವೆಂಬ ಈ ಗ್ರಂಥದ ಮಂಗಳಶ್ಲೋಕಗಳಿಗೆ ಮಾತ್ರ ಬರೆಯಲ್ಪಟ್ಟಿರುವ ಪಣ್ಣಾಪಾಷಾಣವ್ಯಾಖ್ಯೆಯೂ ಪರಿಶಿಷ್ಟದಲ್ಲಿ ಶೋಧಿಸಿ ಮುದ್ರಿತವಾಗಿ

ಸೇರಿಸಲ್ಪಟ್ಟಿರುವುದಲ್ಲದೆ ಆರಂಭದಲ್ಲಿಯೇ ವಿಷಯಸೂಚಿಯೂ ಪುಟಾಙ್ಕಗಳೊಡನೆ ಮುದ್ರಿತವಾಗಿದೆ. ಪ್ರಥಮ ಮುದ್ರಣದಲ್ಲಿ ಬರೆದಿದ್ದ ಕವಿಚರಿತ್ರೆಯೇ ಈ ಮುದ್ರಣ ದಲ್ಲಿಯೂ ಸೇರಿಸಲ್ಪಟ್ಟಿದೆ.

ಟಿ. ಎಸ್. ಸುಬ್ಬರಾಯಶಾಸ್ತ್ರಿ
ರೆಸಿಡೆಂಟ್ ಪಂಡಿತ

ಪ್ರಥಮ ಮುದ್ರಣದ ಉಪೋದ್ಘಾತ

ಈ ಗ್ರಂಥವು ನಾಲ್ಕು ತಾಳಪತ್ರಪ್ರತಿಗಳ ಆಧಾರದಿಂದ ಮುದ್ರಿತವಾಗಿದೆ. ಇವುಗಳಲ್ಲಿ ಎರಡು ಪ್ರತಿಗಳು ಒಂದೇ ಮಾತೃಕೆಯಿಂದ ಹುಟ್ಟಿದಂತೆ ಕಾಣುತ್ತವೆ; ಉಳಿದ ಪ್ರತಿಗಳು ಬೇರೆಬೇರೆಯಾಗಿವೆ. ಇವೆಲ್ಲವೂ ಪ್ರಾಯಃ ಶುದ್ಧವಾಗಿಯೇ ಇವೆ. ಆದರೆ ಕೆಲವು ಭಾಗಗಳಲ್ಲಿ ಒಂದು ಪುಸ್ತಕದಲ್ಲಿ ಒಂದು ಪದವೂ ಮತ್ತೊಂದು ಪುಸ್ತಕದಲ್ಲಿ ಸಮಾನಾರ್ಥಕವಾದ ಮತ್ತೊಂದು ಪದವೂ ದೊರಕುತ್ತವೆ. ಎರಡು ಪುಸ್ತಕಗಳಲ್ಲಿ ಮಾತ್ರ ದ್ವಿತೀಯಾಶ್ವಾಸದಲ್ಲಿಯೂ ಅಷ್ಟಾದಶಾಶ್ವಾಸದಲ್ಲಿಯೂ ಕೆಲವು ಪದ್ಯಗಳು ಹೆಚ್ಚಾಗಿ ದೊರೆಯುತ್ತವೆ. ಅವುಗಳನ್ನು ಮೂಲದಲ್ಲಿಯೇ ಸೇರಿಸಿದೆ. ಮದ್ರಾಸಿನಲ್ಲಿ ಅಚ್ಚಾಗಿರುವ ಪ್ರತಿಗೂ ಈ ಪುಸ್ತಕಕ್ಕೂ ಆಶ್ವಾಸಗಳಲ್ಲಿರುವ ಪದ್ಯಸಂಖ್ಯೆಯಲ್ಲಿ ಸ್ವಲ್ಪಸ್ವಲ್ಪ ವ್ಯತ್ಯಾಸವಿರುವಂತೆ ಕಾಣಿಸುತ್ತದೆ. ಈ ವ್ಯತ್ಯಾಸವು ಮುಖ್ಯವಾಗಿ ಪದ್ಯಗಳ ಲೆಕ್ಕದಲ್ಲಿ ಬಿದ್ದಿರುವ ಅಚ್ಚುತಪ್ಪಿನಿಂದ ಉಂಟಾಗಿದೆ. ವಾಚಕರ ಸೌಕರ್ಯಕ್ಕಾಗಿ ಅವುಗಳನ್ನು ಈ ಪಟ್ಟಿಯಲ್ಲಿ ತಿಳಿಸಿದೆ.

ಆಶ್ವಾಸ	ಮದರಾಸ್ ಪುಸ್ತಕ	ಈ ಪುಸ್ತಕ
i	೮೦	೮೦
ii	೮೪	೯೯ (ಇದರಲ್ಲಿರುವ ೯೯-೩೫ ಪದ್ಯಗಳು ಮದರಾಸ್ ಪುಸ್ತಕದಲ್ಲಿಲ್ಲ. ೯೬ ಎರಡು ಸಲ ಬಿದ್ದಿದೆ. ಒಂದು ಗದ್ಯಕ್ಕೆ ಸಂಖ್ಯೆ ಹಾಕಿಲ್ಲ.)
iii	೧೧೫	೧೧೪ (೨೮ನೆಯ ಪದ್ಯಕ್ಕೆ ಸಂಖ್ಯೆ ಬಿಟ್ಟುಹೋಗಿ ಒಂದು ಕಡಮೆಯಾಗಿದೆ).
iv	೧೨೭ನೆಯ ಪದ್ಯಕ್ಕೆ ಸಂಖ್ಯೆ ಬಿಟ್ಟುಹೋಗಿ ಒಂದು ಕಡಿಮೆಯಾಗಿದೆ	೧೨೮

ಆಶ್ವಾಸ	ಮದರಾಸ್ ಪುಸ್ತಕ	ಈ ಪುಸ್ತಕ
v	೧೧೩ (೬೮ನ್ನು ತಪ್ಪಾಗಿ ಎರಡು ಸಲ ಹಾಕಿದ ಪ್ರಯುಕ್ತ ಒಂದು ಕಡಿಮೆಯಾಗಿದೆ.	೧೧೪
vi-ix	ಸರಿಯಾಗಿದೆ	ಸರಿಯಾಗಿದೆ
x	೧೪೧	೧೪೩ (ಇದರ ೯೫, ೯೬ನೆಯ ಪದ್ಯಗಳು ಮದ್ರಾಸ್ ಪುಸ್ತಕದಲ್ಲಿಲ್ಲ)
xi	೯೪ (೫೭ಕ್ಕೆ ಪ್ರತಿಯಾಗಿ ೫೮ ಬಿದ್ದುದರಿಂದ ಒಂದು ಹೆಚ್ಚಾಗಿದೆ)	೯೩
xii	ಸರಿ	ಸರಿ
xiii	೧೧೦	೧೧೧ (೫೮ಕ್ಕೆ ೫೯ ಬಿದ್ದುದರಿಂದ ಒಂದು ಹೆಚ್ಚಾಗಿದೆ)
xiv	೧೧೪	೧೧೫ (ಇದರ ೪೮ನೆಯ ಪದ್ಯವು ಆ ಪುಸ್ತಕದಲ್ಲಿಲ್ಲ)
xv-xvi	ಸರಿ	ಸರಿ
xvii	೧೩೫	೧೩೬ (೬೪ ಆದಮೇಲೆ ತಪ್ಪಾಗಿ ೭೭ ಬಿದ್ದು ಹಾಗೆಯೇ ಲೆಕ್ಕವಾಗಿದೆ. ಆದರೂ ರಗಳೆಗೆ ಸಂಖ್ಯೆ ಬಿದ್ದಿಲ್ಲ. ಆದುದರಿಂದ ಒಂದು ಹೆಚ್ಚಾಗಿದೆ)
xviii	೧೧೨ (೨೦ ಆದಮೇಲೆ ೩೧ ಬಿದ್ದು ಹಾಗೆಯೇ ಕೊನೆಯವರೆಗೂ ತಪ್ಪಾಗಿ ಲೆಕ್ಕ ಮಾಡಿದೆ)	೧೧೪ (ಇದರಲ್ಲಿರುವ ೧೦-೨೨ ಪದ್ಯಗಳು ಇನ್ನೊಂದು ಪುಸ್ತಕದಲ್ಲಿಲ್ಲ)

ಈ ಗ್ರಂಥದ ಮಂಗಳ ಶ್ಲೋಕಗಳಿಗೆ ಪಂಚಪಾಷಾಣವ್ಯಾಖ್ಯೆ ಎಂಬ ಸಂಸ್ಕೃತದ ವ್ಯಾಖ್ಯಾನವು ದೊರಕುತ್ತದೆ. ನಮಗೆ ದೊರೆತ ಈ ವ್ಯಾಖ್ಯೆಯ ಪ್ರತಿಯಲ್ಲಿ ಕೊನೆಯ ಎರಡು ಮೂರು ಪಙ್ಕ್ತಿಗಳಿರಲಿಲ್ಲ ಪ್ರತ್ಯಂತರವು ದೊರಕದಕಾರಣ ದೊರತಷ್ಟನ್ನೇ ವಾಚಕರ ಸೌಕರ್ಯಕ್ಕಾಗಿ ಪರಿಶಿಷ್ಟದಲ್ಲಿ ಮುದ್ರಿಸಿದೆ.

ರುದ್ರಭಟ್ಟ*

ಈ ಕವಿಗೆ ರುದ್ರಭಟ್ಟ, ರುದ್ರ ಎಂಬ ಹೆಸರುಗಳುಂಟು, ಈತನು ಸ್ಮಾರ್ತ ಬ್ರಾಹ್ಮಣನು, ವಿಷ್ಣುಭಕ್ತನು. 'ಕಾವ್ಯಸಮಾಧಿಯಿಂ ಪರಂಜ್ಯೋತಿಮುಕುಂದನೆನ್ನ ಬಗೆಯೊಳ್ ನಿಲೆ ನಿರ್ಮಳತತ್ತ್ವ ಬೋಧನುದ್ದ್ಯೋತಿಪುದೆಂಬುದಂ ಬಯಸಿ ಪೇಟಿ ಲೊಡರ್ಚಿದೆಂ' 'ಅತರ್ಕ್ಯಮಲ್ಲವೆ ಮಹತ್ತ್ವಂ ವಿಷ್ಣು ಸರ್ವಜ್ಞನಾ' 'ವೇದಶಾಸ್ತ್ರ ರಹಸ್ಯಾಚಿಂತ್ಯ ಸಾಮರ್ಥ್ಯದ ಮುರಹರನಂ ಬಣ್ಣಿಸಲ್ ಬಲ್ಲನಾವಂ' ದುಗ್ಧೋದಧಿ ತಲ್ಪನಂ ನರನಭಿಷ್ಟುತಿಗೆಯ್ವುದು ಧಾರ್ಷ್ಟ್ಯಮಲ್ಲವೇ' 'ರುದ್ರಾಂಕನೆ ಪೇಟ್ದಂ ವಿಷ್ಣು ಕೈಕೊಳ್ವನೆಂದು' 'ವೈಷ್ಣವಕಾವ್ಯರಸಂ ತುಳುಂಕಾಡುಗೆ' ಎಂದು ಮೊದಲಾಗಿ ಹೇಳಿ ದ್ದಾನೆ. ಇದೂ ಅಲ್ಲದೆ ಅಲ್ಲಲ್ಲಿ ವಿಷ್ಣುವೇ ತ್ರಿಮೂರ್ತಿಗಳಿಗೂ ಮೂಲಪುರುಷನೆಂದು.

ಉದಯಸ್ಥಿತಿಸಂಹಾರ
ಪ್ರದರ್ ಜನಕ್ಕೆನಿಪ ಕಮಲಭವಹರಿಹರನಾ
ಮದ ಪುರುಷಾಕಾರತ್ರಯ
ಮದು ನಿನ್ನ ವಿಡಂಬಮಲ್ತೆ ಪರಮಜ್ಯೋತೀ (೩ನೆಯ ಆ|| ೧೦ಳನೆಯ ಪ)

ಎಂಬ ಇದೇ ಮೊದಲಾದ ಪದ್ಯಗಳಲ್ಲಿ ವರ್ಣಿಸಿದ್ದಾನೆ. ಹರಿಹರೈಕ್ಯವನ್ನು ಸೂಚಿಸುವ ಹಲವು ಪದ್ಯಗಳನ್ನೂ ಬರೆದಿದ್ದಾನೆ.

ನೊಸಲೊಳ್ ಕಣ್ಣುಳ್ಳ ಮನೋ
ಜಸೂದನಂ ಪೆಱನದಾವನಾನೆ ದಲೆಂದೀ
ವಸುಮತಿಗೆ ಸೂಚಿಪಂದದಿ
ನೆಸೆವಂ ಹರಿ ನೊಸಲಕಣ್ಪೊಲೆಸೆವರಲೆಲೆಯಿಂ ೩–೪೫

ಪುರಮಥನರೂಪದಿಂ ನೀಂ
ಮರುಳ್ಗಳೊಡನಾಡಿದ್ದೆ (೪–೧೦೬)
"ವಿಶ್ವರೂಪನ ಸಮೀಪಕ್ಕೆ ವಿರೂಪಾಕ್ಷನೇಳ್ತಂದು

* * * * *

ದ್ವಯಭಾವಂ ನಮಗಿಲ್ಲ ಬಲ್ಲವರೆ ನಾನುಂ ನೀನುಂ" (೧೮–೭೬)

---

* ಈ ಕವಿಗೂ 'ಭ'ಕಾರವನ್ನು ಅಡವಿಟ್ಟು ರುದ್ರಟ ಎಂಬ ಹೆಸರಿನಿಂದ ಸಂಸ್ಕೃತದ ಕಾವ್ಯಾಲಂಕಾರವನ್ನು ಬರೆದ ರುದ್ರಭಟ್ಟ ಕವಿಗೂ ಯಾವ ಸಂಬಂಧವೂ ಇಲ್ಲ.

'ಕೃತಿಶಾರದಾಭ್ರಚಂದ್ರಾತಪರುದ್ರ'[1] 'ಕವಿಕವಿರಾಜಂ'[2] ಎಂದು ಹೇಳಿಕೊಂಡಿರುವುದರಿಂದ ಈತನಿಗೆ ಕೃತಿಶಾರದಾಭ್ರಚಂದ್ರಾತಪ, ಕವಿರಾಜ ಎಂಬ ಬಿರುದುಗಳಿದ್ದಂತೆ ಕಾಣುತ್ತದೆ.

ಈ ಕವಿ ರಸಕಲಿಕೆ ಎಂಬ ಒಂದು ಲಕ್ಷಣಗ್ರಂಥವನ್ನು ಬರೆದಿರುವುದಾಗಿ ಸಾಳ್ವನು ತನ್ನ ರಸರತ್ನಾಕರದಲ್ಲಿ ಹೇಳುತ್ತಾನೆ. ಈ ಗ್ರಂಥವು ಇದುವರೆಗೂ ಎಲ್ಲಿಯೂ ದೊರೆತಿಲ್ಲ.

ಈ ಕವಿಯ ದೇಶಕಾಲಗಳೊಂದೂ ಇದುವರೆಗೂ ನಿಷ್ಕೃಷ್ಟವಾಗಿ ಗೊತ್ತಿಲ್ಲದೆ ಅನೇಕರು ಅನೇಕ ವಿಧವಾಗಿ ಅಭಿಪ್ರಾಯಪಡುತ್ತಿದ್ದರು. ಕೆಲವರು ಹೀಗೆ ಹೇಳುತ್ತಿದ್ದರು. "ಈ ಕವಿ, ರಾಜಶೇಖರವೇ ಮೊದಲಾದ ಗ್ರಂಥಗಳನ್ನು ಬರೆದ ಷಡಕ್ಷರಿದೇವನ ಕಾಲದವನು; ಆತನ ಯಶಸ್ಸಿನಲ್ಲಿ ಮಾತ್ಸರ್ಯಪಟ್ಟು ಅವನಿಗಿಂತ ಅತಿಶಯವಾದ ಕೀರ್ತಿಯನ್ನು ಪಡೆಯಬೇಕೆಂಬ ತಾತ್ಪರ್ಯದಿಂದ (ಶಿವಕಲಾಬ್ದ) ೧೬೧೧ರಲ್ಲಿ—ಎಂದರೆ ಕ್ರಿ. ಶ. ೧೬೮೯ರಲ್ಲಿ—ಈ ಜಗನ್ನಾಥ ವಿಜಯವನ್ನು ಬರೆದನು. ಪಂಡಿತರು ಈ ಎರಡು ಗ್ರಂಥಗಳನ್ನೂ ಪರೀಕ್ಷಿಸಿನೋಡಿ ರಾಜಶೇಖರವೇ ಉತ್ತಮತರವಾದ ಗ್ರಂಥವೆಂದು ನಿರ್ಣಯಿಸಿದರು ಬಳಿಕ ಷಡಕ್ಷರಿದೇವನು ತಾನು ಕಿತ್ತುಕೊಂಡಿದ್ದ ಬಿರುದುಗಳನ್ನೆಲ್ಲಾ ಪುನಃ ಇವನಿಗೆ ಕೊಟ್ಟನು. ಈ ಸಂಗತಿಯನ್ನೆಲ್ಲಾ ಈತನ ಸ್ನೇಹಿತನಾದ ಲಕ್ಷ್ಮೀಶನು ಕೇಳಿ ಚಿಂತಾಕ್ರಾಂತನಾಗಿ ಬ್ರಾಹ್ಮಣರಿಗುಂಟಾದ ಅಪಮಾನವನ್ನು ನಿವಾರಿಸಬೇಕೆಂದು ನಿಶ್ಚಯಿಸಿ ಜೈಮಿನಿ ಭಾರತವೆಂಬ ಗ್ರಂಥವನ್ನು (ಗುಣೇಂದುಕಲಿಪರಿಮಿತಾಬ್ದದಿ) ೧೬೧೩ರಲ್ಲಿ—ಎಂದರೆ ಕ್ರಿ. ಶ. ೧೬೯೧ರಲ್ಲಿ—ಬರೆದು ವಿದ್ವಾಂಸರನ್ನು ಮೆಚ್ಚಿಸಿ ಅವರಿಂದ 'ಕವಿಚೂತಚೈತ್ರ'[3] ಎಂಬ ಬಿರುದನ್ನು ಪಡೆದು ಬ್ರಾಹ್ಮಣರ ಗೌರವವನ್ನು ಉಳಿಸಿದನು". ಈ ಅರ್ಥವನ್ನೇ ಹೇಳುವ ಈ ಪದ್ಯಗಳೂ ಪ್ರಚಾರದಲ್ಲಿದ್ದಂತೆ ಕಾಣುತ್ತದೆ.

ಶಿವಕಲಾಬ್ದಶಕ ಶುಕ್ಲವರ್ಷಮಾ
ಧವಸಿತಾರ್ಕದಿನ ಜೀವವಾರದೊಳ್
ಭವಿಗಳೆಲ್ಲ ವರರುದ್ರಭಟ್ಟನೇ
ಕವಿಯನಲ್ಕೊರೆದನೊಂದು ಕಾವ್ಯಮಂ

ಅರಸಲ್ ಜಗನ್ನಾಥವಿಜಯಮೆನಿಪಾಕಬ್ಬ
ಮುರುದೋಪಪೂಗಪರಿಚಿತಮಾಗೆ ಲಾಕ್ಷಣಿಕ
ಪರರದಂ ರಾಜಶೇಖರವಿಳಾಸಕೆ ಪಡಿಯನೊರೆಯದಿರೆ ರುದ್ರಭಟ್ಟಂ
ಪರಿಭವಕೆ ಗುರಿಯಾದನೆಂದು ಸಭಿಕರ್ ಪೇಳ್ದ
ಪರಿಯರಿತು ಕರುಣದಿಂದಾ ಷಡಕ್ಷರಿದೇವ
ಬಿರುದುಗಳ ಕೊಂಡು ಮಗುಳಿತ್ತು ಮನ್ನಿಸಿ ಪೊರೆವನದ ಕೇಳಿ ಲಕ್ಷ್ಮೀಶನು

---

[1] ಆಶ್ವಾಸ ೧ ಪದ್ಯ ೧೭. [2] ಆಶ್ವಾಸ ೧ ಪದ್ಯ ೨೨. [3] ಇದು ಜೈಮಿನಿಯಲ್ಲಿ 'ಕವಿಚೂತವನಚೈತ್ರ' ಎಂದಿದೆ. ಸಂಧಿ ೧ ಪದ್ಯ ೧೧.

ಹರಿಚರಿತದಿಂ ಕೂಡಿ ಹರಿಮೇಧಪರ್ವಕಥೆ
ಯೊರೆದ ವಾರ್ಧಿಕಷಟ್ಪದಿಗಳಿಂದ ಜೈಮಿನಿಯ
ವರಸೂಕ್ತಿತಾತ್ಪರ್ಯಭರಗರ್ಭಿತವುದಾಗೆ ರಸಿಕರ್ಕಳನುಮೋದಿಸಲ್
ಪರಿಪರಿಯಲಂಕಾರ ರಸಭಾವಪುಷ್ಟಿಯಿಂ
ಮೆರೆದುದು ಗುಣೇಂದುಕಲೆಪರಿಮಿತಾಬ್ದದ ಶಕದಿ
ಹರಿವಾರ ಕಾರ್ತಿಕದ ಸಿತಪಂಚಮಿಪ್ರಜಾಪತಿಶರದಿ ಸಾಂಗವೆನಸಲು

ಕನ್ನಡಗಬ್ಬಿಗರಾತನ
ಮನ್ನಿಸಿ ಲಕ್ಷ್ಮೀಶನೊರ್ವನೇ ಕವಿರತ್ನಂ
ಸನ್ನುತನೆಂದುರೆಬಿರುದಂ
ಚಿನ್ನದಿ ಕವಿಚೂತಚೈತ್ರನೆನೆ ಬರೆದಿತ್ತರ್

ಕೆಲವು ಕಾಲಕ್ಕೆ ತರುವಾಯು, ಈ ಜಗನ್ನಾಥವಿಜಯದ ಮಂಗಳಶ್ಲೋಕವು, ೧೬೦೪ರಲ್ಲಿ ರಚಿತವಾದ ಭಟ್ಟಾಕಳಂಕನ ಶಬ್ದಾನುಶಾಸನದಲ್ಲಿ ಉದಾಹೃತವಾಗಿರುವುದಾಗಿ ತಿಳಿಯಬಂದಿತು. ಅನಂತರ ಮೇಲಿನ ಸಂಗತಿಗಳೆಲ್ಲಾ ಕಲ್ಪಿತಕಥೆಗಳೆಂದು ಗೊತ್ತಾಗಿ ರುದ್ರಭಟ್ಟನು ೧೬೦೪ಕ್ಕೆ ಹಿಂದೆ ಇದ್ದನನೆಂದು ನಿರ್ಣಯವಾಯಿತು. ಇದಾದ ಮೇಲೆ ಜಗನ್ನಾಥ ವಿಜಯದಿಂದ ಉದ್ಧೃತವಾದ ಅನೇಕ ಪದ್ಯಗಳು ಶಬ್ದಮಣಿದರ್ಪಣಕಾರನ ತಂದೆಯಾದ ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವದಲ್ಲಿ ದೊರಕಿದುವು. ಈ ಮಲ್ಲಿಕಾರ್ಜುನನು ತನ್ನ ಗ್ರಂಥವನ್ನು ೧೨೩೩ ರಿಂದ ೧೨೫೪ರವರೆಗೆ ರಾಜ್ಯವಾಳಿದ ಹೊಯ್ಸಳವೀರಸೋಮೇಶ್ವರನ ಕಾಲದಲ್ಲಿ ಬರೆದಂತೆ ಅದೇ ಗ್ರಂಥದಿಂದ ತಿಳಿಯಬರುವ ಕಾರಣ ರುದ್ರಭಟ್ಟನು ೧೨೩೩ಕ್ಕೆ ಹಿಂದೆಯೇ ಇದ್ದಿರಬೇಕೆಂದು ಊಹಿಸಬೇಕಾಯಿತು.

ಇದೂ ಅಲ್ಲದೆ ಸೂಕ್ತಿಸುಧಾರ್ಣವದಲ್ಲಿ ಕುಸುಮಾವಳಿಯೆಂಬೊಂದು ಗ್ರಂಥದಿಂದ ಅನೇಕ ಪದ್ಯಗಳು ಉದ್ಧೃತವಾಗಿವೆ. ಈ ಕುಸುಮಾವಳೀ ಕಾವ್ಯವನ್ನು ಬರೆದ ದೇವಕವಿಯು ರುದ್ರಭಟ್ಟನನ್ನು

ಕವಿನಿರ್ವಾಣಂಗೆ ಬಾಣಂಗವನಿಗೆಸೆವ ಹರ್ಷಂಗೆ ಹರ್ಷಂಗೆ ವಿಖ್ಯಾ
ತವಿಜನ್ನಾಘಂಗೆ ಮಾಘಂಗಖಿಳಸುಕವಿರತ್ನಂಗೆ ರತ್ನಂಗೆ ಸಂದೊ
ಪ್ಪುವಿಳಾರುದ್ರಂಗೆ ರುಂದ್ರಂಗೊದವಿದ ಪದೆಪಿಂದಗ್ಗಳಂಗಗ್ಗಳಂಗು
ತ್ಸವದಿಂದಾವಂ ದಿಟಂ ವಂದಿಸುವದಟನವಂ ಸತ್ಕವೀಂದ್ರಾವತಂಸಂ

ವಿದಿತಕಥಾವಿಚಿತ್ರಮೆಸೆವೀ ಕುಸುಮಾವಳಿಯೆಂಬ ನವ್ಯಕಾ
ವ್ಯದೊಳಿದು ಸ........ ಶೋಭೆಶ........ ಬಾಣನ ಸೂಕ್ತಿಕಳಾಕಳಾಪವ
ಗ್ಗದ ಕವಿಮಾಘಹರ್ಷರ ವಚಶ್ಶಿ........ಸತಿ ರುದ್ರಭಟ್ಟನೊಳ್
ಪುದಿದ ಪದಪ್ರಗಲ್ಭಗುಣಮಗ್ಗಳದೇವನ ಭಾವಗೌರವಂ

ಎಂಬ ಪದ್ಯಗಳಲ್ಲಿ ಸ್ಮರಿಸಿದ್ದಾನೆ.

ಈ ದೇವಕವಿಯು ಸುಮಾರು ೧೨೮೦ ರಲ್ಲಿದ್ದಂತೆ ಊಹಿಸುವುದಕ್ಕೆ ಕಾರಣವಿದೆ. ಆದಕಾರಣ ಇವನಿಂದ ಸ್ತುತನಾದ ರುದ್ರಭಟ್ಟನು ೧೨೦೦ಕ್ಕೆ ಹಿಂದೆಯೋ ಅಥವಾ ಸಮಕಾಲದಲ್ಲಿಯೋ ಇದ್ದಿರಬೇಕು. ೧೨೪೫ಕ್ಕೆ ಹಿಂದೆಯೇ ಇದ್ದನೆಂಬ ವಿಷಯದಲ್ಲಿ ಯಾವ ಸಂದೇಹಕ್ಕೂ ಅವಕಾಶವಿಲ್ಲ.

ಈ ರೀತಿಯಾಗಿ ರುದ್ರಭಟ್ಟನು ೧೨೪೫ಕ್ಕೆ ಈಚೆಯಿದ್ದವನಲ್ಲವೆಂದು ನಿರ್ಣಯಿಸಿದಂತೆಯೇ ಇವನು ೧೧೪೦ಕ್ಕೆ ಹಿಂದೆ ಇದ್ದವನಲ್ಲವೆಂದು ನಿಶ್ಚಯಿಸುವುದಕ್ಕೂ ಕೆಲವು ಆಧಾರಗಳಿವೆ. ಜಗನ್ನಾಥವಿಜಯದಲ್ಲಿ ಪೂರ್ವಕವಿಗಳನ್ನು ಸ್ತೋತ್ರಮಾಡುವ ಕಾಲದಲ್ಲಿ ರುದ್ರಭಟ್ಟನು ಇತರ ಕವಿಗಳೊಡನೆ 'ಕಣ್ಣಪನ ಜಾಣ್ಣುಡಿ'[1] ಎಂದು ಕರ್ಣಪಾರ್ಯನೆಂಬ ಕವಿಯನ್ನು ಸ್ತುತಿಸಿದ್ದಾನೆ. ಈ ಕರ್ಣಪಾರ್ಯನು ಸುಮಾರು ೧೧೪೦ರಲ್ಲಿದ್ದುದಾಗಿ ಊಹಿಸುವುದಕ್ಕೆ ಕಾರಣವಿದೆ. ಆದುದರಿಂದ ರುದ್ರಭಟ್ಟನು ೧೧೪೦ಕ್ಕೆ ಈಚೆ ಇದ್ದಿರಬೇಕಾಯಿತು. ಆದಪ್ರಯುಕ್ತ ರುದ್ರಭಟ್ಟನು ೧೧೪೦ಕ್ಕೆ ಈಚೆಯೂ ೧೨೪೫ಕ್ಕೆ ಹಿಂದೆಯೂ ಇದ್ದಿರಬೇಕು.

ಈ ಗ್ರಂಥಸ್ಥವಲ್ಲದ ಇತರವಾದ ಆಧಾರಗಳಿಂದ ಹೀಗೆ ಈತನ ಕಾಲವನ್ನು ಇಷ್ಟುಮಟ್ಟಿಗೆ ನಿರ್ಣಯಿಸಲಾಯಿತು; ಇನ್ನುಮೇಲೆ ಈ ಗ್ರಂಥಸ್ಥವಾದ ಕೆಲವು ಆಧಾರಗಳಿಂದ ಈ ಕವಿಯು ಮೇಲೆ ಸೂಚಿಸಿದ ಕಾಲದಲ್ಲಿಯೇ—ಎಂದರೆ ೧೧೮೦ರಲ್ಲಿಯೇ—ಇದ್ದಂತೆ ನಿರ್ಣಯಿಸಲಾಗುತ್ತದೆ. ಹೇಗೆಂದರೆ :—ಈತನು 'ಚಂದ್ರಮೌಳಿಪ್ರಮುಖ ನಿಖಿಳವಿದ್ವಜ್ಜನಂ ಮೆಚ್ಚೆ ರುದ್ರಾಂಕನೆ ಪೇಟ್ದಂ'[2] ಎಂದು ಹೇಳಿಕೊಂಡಿದ್ದಾನೆ. ಆದುದರಿಂದ ಈತನ ಕಾಲದಲ್ಲಿ ಚಂದ್ರಮೌಳಿಯೆಂಬೊಬ್ಬ ವಿಖ್ಯಾತನಾದ ಪಂಡಿತನಿದ್ದಿರಬೇಕು. ಇದನ್ನು ನಿಶ್ಚಯಿಸುವುದಕ್ಕಾಗಿ ಆ ಕಾಲದಲ್ಲಿ ಹುಟ್ಟಿದ ಕೆಲವು ಶಾಸನಗಳನ್ನು ನೋಡುವಲ್ಲಿ ೧೧೭೩ರಿಂದ ೧೨೨೦ರವರೆಗೆ ಆಳಿದ ವೀರಬಲ್ಲಾಳನೆಂಬ ರಾಜನಲ್ಲಿ ಚಂದ್ರಮೌಳಿಯೆಂಬ ಹೆಸರಿನ ಒಬ್ಬ ಪ್ರಖ್ಯಾತನಾದ ಪಂಡಿತನು ಮಂತ್ರಿಯಾಗಿದ್ದಂತೆ ತಿಳಿಯಬರುತ್ತದೆ. ೧೧೮೩ರಲ್ಲಿ ಬರೆದ ಶ್ರವಣಬೆಳ್ಗೊಳದ ೧೩೪ನೆಯ[3] ಶಾಸನದಲ್ಲಿ ಆತನ ವಿಷಯವಾಗಿ

[1] ಆಶ್ವಾಸ ೧ ಪದ್ಯ ೧೦. [2] ಆಶ್ವಾಸ ೧ ಪದ್ಯ ೨೨. [3] ಮೆ॥ ರೈಸ್ ಸಾಹೇಬರು ಮೈಸೂರು ಸರ್ಕಾರಕ್ಕಾಗಿ ಮುದ್ರಿಸಿರುವ ಶಾಸನದ ಪುಸ್ತಕಗಳಲ್ಲಿ ಕೊಟ್ಟಿರುವ ಸಂಖ್ಯೆ.

ವರತರ್ಕಾಂಬುಜಭಾಸ್ಕರಂ ಭರತಶಾಸ್ತ್ರಾಂಭೋಧಿಚಂದ್ರಂ ಸಮು
ದ್ಧುರಸಾಹಿತ್ಯಲತಾಲವಾಲನೆಸೆದಂ ನಾನಾಕಳಾಕೋವಿದಂ
ಸ್ಥಿರಮಂತ್ರಂ ದ್ವಿಜವಂಶಶೋಭಿತನಶೇಷಸ್ತುತ್ಯನುದ್ಯದ್ಯಶಂ
ಧರೆಯೊಳ್ ವಿಶ್ರುತಚಂದ್ರಮೌಳಿಸಚಿವಂ ಸೌಜನ್ಯಜನ್ಮಾಲಯಂ

ಪತಿಭಕ್ತಂ ವರಮಂತ್ರಶಕ್ತಿಯುತನಿಂದ್ರಂಗೆಂತು ಭಾಸ್ವದ್ಬೃಹ
ಸ್ಪತಿ ಮಂತ್ರೀಶ್ವರನಾದನಂತೆ ವಿಳಸದ್ಬಲ್ಲಾಳದೇವಾವನೀ
ಪತಿಗೀವಿಶ್ರುತ ಚಂದ್ರಮೌಳಿವಿಬುಧೇಶಂ ಮಂತ್ರಿಯಾದಂ ಸಮು
ನ್ನತತೇಜೋನಿಲಯಂ ವಿರೋಧಿಸಚಿವೋನ್ಮತ್ತೇಭಪಂಚಾನನಂ

ಎಂಬೀ ಪದ್ಯಗಳು ಬರೆದಿವೆ. ಇವುಗಳಲ್ಲಿ ವರ್ಣಿತನಾದ ಮಂತ್ರಿ ಚಂದ್ರಮೌಳಿಯೂ ರುದ್ರಭಟ್ಟನ ಚಂದ್ರಮೌಳಿಯೂ ಒಬ್ಬನೇ ಆಗಿರಬೇಕೆಂದು ತೋರುತ್ತದೆ. ಈ ಅಭಿಪ್ರಾಯವನ್ನೇ ಜಗನ್ನಾಥ ವಿಜಯದ ಮಂಗಳ ಶ್ಲೋಕಗಳ ಮಧ್ಯೇ ದೊರಕುವ—

ಅರಿಕಾಮಧ್ವಂಸಿನಾಗಪ್ರಜನುಯಕಟಕಂ ರಾಜರಾಜಪ್ರತಿಷ್ಠಾ
ನಿರತಂ ಲೀಲಾಕ್ರಮೋದಂಚಿತನಿರವಧಿಗಾಂಗೇಯಕಂ ದ್ವಿಟ್ಪುರಧ್ವಂ
ಸರತಕ್ರೋಧಂ ವೃಷಾಂಕಂ ವಿಬುಧನುತನುಮಾಕಾಮಿನೀ ಜೀವಿತೇಶಂ
ಪರಮೈಶ್ವರ್ಯಾಸ್ಪದಂ ರಕ್ಷಿಸುಗೆ ವಸುಧೆಯಂ ಯುದ್ಧರಂಗತ್ರಿಣೇತ್ರಂ

ಎಂಬ ಪದ್ಯದಲ್ಲಿರುವ ಅರಿಕಾಮಧ್ವಂಸಿ. ರಾಜರಾಜಪ್ರತಿಷ್ಠಾನಿರತಂ, ಉಮಾಕಾಮಿನೀ ಜೀವಿತೇಶಂ ಎಂಬ ವಿಶೇಷಣಗಳೂ ದೃಢೀಕರಿಸುವಂತಿವೆ. ಏಕೆಂದರೆ ಈ ಮೂರು ವಿಶೇಷಣಗಳೂ ಕಾವ್ಯದಲ್ಲಿ ಈ ಪ್ರಕರಣದಲ್ಲಿ ವರ್ಣನೀಯನಾದ ಈಶ್ವರನಿಗೆ ಮಾತ್ರವಲ್ಲದೆ ಚಂದ್ರಮೌಳಿಯ ರಾಜನಾದ ವೀರಬಲ್ಲಾಳನಿಗೂ ಅನ್ವಯಿಸುತ್ತವೆ. ಹೇಗೆಂದರೆ:—ಮೇಲೆ ಹೇಳಿದ ಶ್ರವಣಬೆಳ್ಗೊಳದ ಶಾಸನದಲ್ಲಿ ದೊರೆವ—

ಚಿರಕಾಲಂ ರಿಪುಗಳ್ಗಸಾಧ್ಯಮೆನಿಸಿರ್ದುಚ್ಚಂಗಿಯಂ ಮುತ್ತಿ ದು
ರ್ಧರತೇಜೋನಿಧಿಧೂಳಿಗೋಂಟೆಯನೆ ಕೊಂಡಾ ಕಾಮದೇವಾವನೀ
ಶ್ವರನಂ ಸಂದೊಡೆಯಕ್ಷಿತೀಶ್ವರನನಾ ಭಂಡಾರಮಂ ಸ್ತ್ರೀಯರಂ
ತುರಗವ್ರಾತಮುಮಂ ಸಮಂತು ಪಿಡಿದಂ ಬಲ್ಲಾಳಭೂಪಾಳಕಂ

ಎಂಬ ಪದ್ಯದಿಂದ 'ಅರಿಕಾಮಧ್ವಂಸಿ'ಯೆಂಬ ವಿಶೇಷಣವು ವೀರಬಲ್ಲಾಳನ ವಿಷಯದಲ್ಲಿಯೂ ಸಾರ್ಥಕವಾಗಿದೆ.

ಬಲ್ಲಾಳರಾಜರಿಗೆ 'ಚೋಳರಾಜಪ್ರತಿಷ್ಠಾಚಾರ್ಯ' ಎಂಬ ಬಿರುದು ಇರುವುದಾಗಿ ಅನೇಕ ಶಾಸನಗಳಿಂದ ತಿಳಿದುಬರುವುದರಿಂದಲೂ ಈ ಚೋಳರಾಜರಲ್ಲಿಯೇ 'ರಾಜರಾಜ' ಎಂಬ ಹೆಸರು ವಿಶೇಷವಾಗಿರುವುದರಿಂದಲೂ 'ರಾಜರಾಜ' ಶಬ್ದವು ಚೋಳಪರವಾಗಿ ಪ್ರಯೋಗಿಸಿರಬಹುದಾಗಿ ಕಾಣುತ್ತದೆ. ಅಲ್ಲದೆ ಶಾಸನಗಳಲ್ಲಿ ದೊರಕುವ—

ಕಮನೀಯಚಕೋರೇಕ್ಷಣೆ
ಕುಮುದಾನನೆಯೆನಿಸಿ ನೆಗಳ್ದುಮಾದೇವಿಗೆ ವಿ
ಕ್ರಮಸೋಮವಂಶಬಲ್ಲಾ
ಳಮಹೀಶಂ ಕೂರ್ಪನಾದನದು ತಕ್ಕುದೆ ದಲ್

ಎಂಬ ಇದೇ ಮೊದಲಾದ ಹಲವು ಪದ್ಯಗಳಿಂದ ಈ ವೀರಬಲ್ಲಾಳರಾಜನಿಗೆ ಉಮಾದೇವಿ ಎಂಬ ಮಹಿಷಿ ಇದ್ದುದಾಗಿ ತಿಳಿಯಬರುತ್ತದೆ. ಇದರಿಂದ 'ಉಮಾಕಾಮಿನೀಜೀವಿತೇಶಂ' ಎಂಬ ವಿಶೇಷಣವು ಸಾಭಿಪ್ರಾಯ ವಿಶೇಷಣವೇ ಆಗಿರಬೇಕೆಂದು ತೋರುತ್ತದೆ. ಚಂದ್ರಮೌಳಿಯ ಹೆಸರೂ ಅವನ ಸ್ವಾಮಿಗೆ ಅನ್ವಯಿಸುವಂತೆ ಕೊಟ್ಟಿರುವ ಈ ಮೂರು ವಿಶೇಷಣಗಳೂ ಉದ್ದೇಶಪುರಸ್ಸರವಾಗಿ ಬರೆದುವಾಗಿರಬೇಕೇ ಹೊರತು ಕಾಕತಾಳೀಯವಾಗಿ ಬೇರೆ ಸೇರಿದುವಲ್ಲವೆಂದು ತೋರುತ್ತದೆ.

ಈ ಕಾರಣಗಳಿಂದ ರುದ್ರಭಟ್ಟನು ೧೧೮೦ರಲ್ಲಿ ವೀರಬಲ್ಲಾಳನ ಕಾಲದಲ್ಲಿಯೇ ಇದ್ದಿರಬೇಕು.

ಬ್ರಾಹ್ಮಣರು ದೇಶಭಾಷೆಯಲ್ಲಿ ಪ್ರೀತಿಯನ್ನು ಕೈಕೊಳ್ಳದಿದ್ದ ಆ ಕಾಲದಲ್ಲಿ ಈತನು ಕನ್ನಡದಲ್ಲಿ ಗ್ರಂಥವನ್ನು ಬರೆದುದೇ ಈತನು ಕರ್ನಾಟಕ ದೇಶದವನೆಂಬುದನ್ನು ದೃಢಪಡಿಸುತ್ತದೆ. ಈತನು ವೀರಬಲ್ಲಾಳನ ರಾಜಧಾನಿಯಾದ ದೋರಸಮುದ್ರವೆಂಬ ಹಳೆಯಬೀಡಿನಲ್ಲಿ ಕೆಲವು ಕಾಲವಾದರೂ ಇದ್ದಿರಬಹುದು. ಆದರೂ ವೀರಬಲ್ಲಾಳನನ್ನು ತನ್ನ ಪೋಷಕನೆಂದು ಸಾಕ್ಷಾತ್ತಾಗಿ ಹೇಳದೆ 'ರಕ್ಷಿಸುಗೆ ವಸುಧೆಯಂ ಯುದ್ಧರಂಗತ್ರಿಣೇತ್ರಂ' ಎಂದು ಸಾಮಾನ್ಯವಾಗಿ ಹೇಳಿರುವುದನ್ನು ನೋಡಿದರೆ ಇವನು ಆಸ್ಥಾನದಲ್ಲಿ ಕವಿಯಾಗಿದ್ದಂತೆ ಕಾಣುವುದಿಲ್ಲ. ಚಂದ್ರಮೌಳಿಯೇ ಮೊದಲಾದವರು ಮೆಚ್ಚುವಂತೆ ಬರೆದುದಾಗಿ ಹೇಳಿಕೊಂಡಿರುವುದರಿಂದ ಆ ಕಾಲದ ವಿದ್ವದ್ಗೋಷ್ಠಿಯಲ್ಲಿ ಸನ್ಮಾನಿತನಾಗಿದ್ದಿರಬೇಕು.

ಈತನೇ ಕನ್ನಡದಲ್ಲಿ ಬ್ರಾಹ್ಮಣರ ಪುರಾಣವನ್ನು ಕಾವ್ಯವಾಗಿ ರಚಿಸಿದ ಮೊದಲನೆಯ ಬ್ರಾಹ್ಮಣಕವಿ. ಈತನು ಕರ್ಣಾಟಕ ಭಾಷೆಯ ಅತ್ಯುಚ್ಛ್ರಾಯಕಾಲದಲ್ಲಿದ್ದವನಾದುದರಿಂದಲೂ ವಿದ್ವದ್ಗೋಷ್ಠಿಯಲ್ಲಿ ಸನ್ಮಾನಿತನಾದವನಾದುದರಿಂದಲೂ ಬಹಳ ದೊಡ್ಡ ಕವಿಯೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಈತನನ್ನು ದೇವಕವಿ, ಚಿಕುಪಾಧ್ಯಾಯ ಇವರೇ ಮೊದಲಾದ ಕರ್ಣಾಟಕ ಕವಿಶ್ರೇಷ್ಠರು ಶ್ಲಾಘಿಸಿರುವರು. ಸಾಳ್ವನು ತನ್ನ ರಸರತ್ನಾಕರದಲ್ಲಿ ಈ ಕವಿಯ ರಸಕಲಿಕೆ ಎಂಬ ಅಲಂಕಾರಗ್ರಂಥದಿಂದ ಅನೇಕ

ಭಾಗಗಳನ್ನು ತೆಗೆದುಕೊಂಡಿರುವುದಾಗಿ ಹೇಳುತ್ತಾನೆ. ಮಲ್ಲಿಕಾರ್ಜುನದೇವನ ಸೂಕ್ತಿಸುಧಾರ್ಣವದಲ್ಲಿಯೂ ಅಭಿನವವಾದಿವಿದ್ಯಾನಂದನ ಕಾವ್ಯಸಾರದಲ್ಲಿಯೂ ಈತನ ಗ್ರಂಥದಿಂದ ಉದ್ಧೃತವಾದ ಅನೇಕ ಪದ್ಯಗಳು ದೊರೆಯುತ್ತವೆ. ಸರಸ್ವತೀತಿಲಕಕಾರನು ತನ್ನ ಗ್ರಂಥದ ವ್ಯಂಗ್ಯ ಪ್ರಕರಣದಲ್ಲಿ ಈ ಗ್ರಂಥದ ಪದ್ಯಗಳನ್ನು ಉದಾಹರಣ ಮಾಡಿ ವ್ಯಾಖ್ಯಾನ ಮಾಡಿದ್ದಾನೆ. ಶಬ್ದಾನುಶಾಸನಕಾರನು ಇಲ್ಲಿಯ ಪದ್ಯಗಳನ್ನು ತನ್ನ ವ್ಯಾಕರಣದಲ್ಲಿ ಲಕ್ಷ್ಯ ಪದ್ಯಗಳನ್ನಾಗಿ ಉದಾಹರಿಸಿದ್ದಾನೆ. ಯಾವನೋ ಒಬ್ಬ ಸಂಸ್ಕೃತ ಪಂಡಿತನು ಈ ಗ್ರಂಥದ ಮಂಗಳ ಶ್ಲೋಕಗಳಿಗೆ ಪಂಚಪಾಷಾಣ ವ್ಯಾಖ್ಯಾ ಎಂಬ ಹೆಸರಿನಿಂದ ಸಂಸ್ಕೃತದಲ್ಲಿ ವ್ಯಾಖ್ಯಾನವನ್ನು ಬರೆದಿದ್ದಾನೆ. ಇದನ್ನೆಲ್ಲಾ ನೋಡಿದರೆ ಈ ಗ್ರಂಥದ ಉತ್ಕೃಷ್ಟತೆಯು ಸ್ವತಃ ವೇದ್ಯವಾಗುತ್ತದೆ.

ಈತನು ರಸಕಲಿಕೆ, ಜಗನ್ನಾಥವಿಜಯ ಇವೆರಡನ್ನೂ ಬರೆದಿದ್ದಾನೆ. ಮೊದಲನೆಯ ಗ್ರಂಥವು ಅದ್ಯಾಪಿ ದೊರೆತಿಲ್ಲ.

ಜಗನ್ನಾಥವಿಜಯವು ಚಂಪೂರೂಪವಾಗಿದೆ. ಇದೊಂದು ಮಹಾಕಾವ್ಯ; ಹದಿನೆಂಟು ಆಶ್ವಾಸಗಳಾಗಿ ವಿಭಾಗಿಸಲ್ಪಟ್ಟಿದೆ. ಕಥೆ 'ವಿಷ್ಣುಪುರಾಣಂ' ಎಂದು ಕವಿಯೇ ಹೇಳಿದ್ದಾನೆ, ವಿಷ್ಣುಪುರಾಣದ ೫, ೬ನೆಯ ಅಂಶಗಳಲ್ಲಿ ದೊರಕುವ ಕೃಷ್ಣಚರಿತವೇ ಈ ಗ್ರಂಥದಲ್ಲಿ ವಿಸ್ತಾರವಾಗಿ ವರ್ಣಿತವಾಗಿದೆ. ಕವಿಯು ಕೆಲವು ಕಡೆಗಳಲ್ಲಿ ವಿಷ್ಣುಪುರಾಣದಲ್ಲಿ ದೊರಕುವ ವರ್ಣನೆಗಳನ್ನೂ ಪದಗಳನ್ನೂ ಕನ್ನಡಿಸಿದ್ದಾನೆ; ಕೆಲವು ಕಡೆ ಮೂಲದ ಆನುಪೂರ್ವಿಗಳನ್ನೂ ವರ್ಣನೆಗಳನ್ನೂ ವ್ಯತ್ಯಾಸಪಡಿಸಿದ್ದಾನೆ; ವರ್ಣನಾಭಾಗಗಳಲ್ಲಿ ಅನೇಕ ಪದ್ಯಗಳನ್ನು ಸ್ವಪ್ರತಿಭಾಶಕ್ತಿಯಿಂದಲೂ ಕೆಲವು ಕೆಲವನ್ನು ಪಂಪಾದಿಗಳಂತೆ ಪೂರ್ವಕವಿಗಳ ಭಾವಾನುವಾದದಿಂದಲೂ ರಚಿಸಿದ್ದಾನೆ. ಈ ಗ್ರಂಥದಲ್ಲಿ ಕೃಷ್ಣನ ಜನನ ಮೊದಲುಗೊಂಡು ಸಾಲ್ವವಧದವರೆಗೆ ಕಥೆ ಹೇಳಿದೆ. ಈ ಭಾಗದಲ್ಲಿ 'ಏಕೋತ್ತರಶತ ಕೃತ್ಯಗಳು' ವರ್ಣಿತವಾಗಿರುವಂತೆ ಗ್ರಂಥಾಂತ್ಯದಲ್ಲಿ ದೊರಕುವ ವಿಷಯ ಸಂಗ್ರಹದಿಂದ ಗೊತ್ತಾಗುತ್ತದೆ.

ಈ ಕಾವ್ಯವು ಪ್ರೌಢವಾಗಿಯೂ ಬಹಳ ಮಟ್ಟಿಗೆ ಜೈನಸರಣಿಯಲ್ಲಿಯೇ ಗ್ರಥಿತವಾಗಿಯೂ ಇದೆ. ಕವಿಯು ತನಗೆ 'ಪೊಸತೆನೆ ಪೇಳ್ವತಿದುರ್ಪಜಂವು' ಉಂಟೆಂಬುದಾಗಿ ತಿಳಿಸಿ ತಾನು 'ವಚಸ್ಸುಂದರೀನೃತ್ಯನಿವಾಸ' ನೆಂದೂ ತನ್ನ ಕಾವ್ಯವು 'ಅನವದ್ಯಂ ರೀತಿ ಚೋದ್ಯಂ ಸಕಳ ವಿಬುಧಹೃದ್ಯಂ' ಎಂದೂ ಹೇಳುತ್ತಾನೆ. ಈ ಅಭಿಪ್ರಾಯವನ್ನೇ ಸಮರ್ಥಿಸುವಂತೆ ದೇವಕವಿಯೂ ಕೂಡ 'ರುದ್ರಭಟ್ಟನ ಪುದಿದ ಪದಪ್ರಗಲ್ಭಗುಣ'ವನ್ನು ಶ್ಲಾಘಿಸಿದ್ದಾನೆ. ಈ ಗ್ರಂಥವು ಕೆಲವು ಮಟ್ಟಿಗೆ ಜೈಮಿನಿಯಂತೆಯೇ ಪಂಡಿತರಿಂದಲೂ ಪಾಮರರಿಂದಲೂ ಸಹ ಪರಿಗೃಹೀತವಾಗಿದ್ದಂತೆ ಕಾಣಬರುತ್ತದೆ.

ವಿಷಯಾನುಕ್ರಮಣಿಕೆ

ರುದ್ರಭಟ್ಟ ವಿರಚಿತ

ಜಗನ್ನಾಥ ವಿಜಯಂ

ಪ್ರಥಮಾಶ್ವಾಸಂ

ಶಾ॥ ಶ್ರೀರಾಮಾಸಟಿ ಕೌಸ್ತುಭದ್ಯುತಿಕಿರತ್ಪುಷ್ಪಾಂಜಲಿಕ್ಷೇಪವ
ಕ್ಷೋರಂಗಸ್ಥಿತೆಯಾದ ಪಾದನಖರೋಚಿರ್ಗಂಗೆ ಪೃಥ್ವೀಶಕೋ
ಟೀರವ್ಯಾಪ್ತಿಗೆ ಸಂದ ಚಕ್ರರವಿ ದೈತ್ಯಧ್ವಾಂತಮಂ ಗೆಲ್ದು ಭೂ
ಭಾರಚ್ಛೇದವಿನೋದಿ ಕೃಷ್ಣನೆಮಗೀಗಾನಂದಸಂದೋಹಮಂ ೧

ಚಂ॥ ಜನನುತರಾಜಹಂಸನಯನಂ ಕಮಳಾವಸಥಂ ಕಳಾನಿಕೇ
ತನನೆನಿಸಿರ್ದ ಪೆಂಪುಮಮೆವೆತ್ತೊಡಮೇನೊ ಹಿರಣ್ಯಗರ್ಭನೆಂ
ದೆನಿಸಿಯುದಾರನೆಂಬ ರಜಮೊಂದಿಯೆ ಸತ್ತ್ವನಿಧಾನನೆಂಬ ಪೆಂ
ಪಸುಗುಣಮಾದ ಲೋಕಪಿತನೊಲ್ದು ಚತುರ್ಮುಖನೀಗೆ ರಾಗಮಂ ೨

ಮ॥ಸ್ರ॥ ಅರಿಕಾಮಧ್ವಂಸಿ ನಾಗವ್ರಜಮಯಕಟಕಂ ರಾಜರಾಜಪ್ರತಿಷ್ಠಾ
ನಿರತಂ ಲೀಲಾಕ್ರಮೋದಂಚಿತ ನಿರವಧಿ ಗಾಂಗೇಯಕಂ ದ್ವಿಟ್ಪುರಧ್ವಂ
ಸರತ[1]ಕ್ರೋಧಂ[1] ವೃಷಾಂಕಂ ವಿಬುಧನುತನುಮಾಕಾಮಿನೀಜೀವಿತೇಶಂ
ಪರಮೈಶ್ವರ್ಯಾಸ್ಪದಂ ರಕ್ಷಿಸುಗೆ ವಸುಧೆಯಂ ಯುದ್ಧರಂಗತ್ರಿಣೇತ್ರಂ ೩

ಜನಚಿತ್ತಾಹ್ಲಾದಪಾದಂ ಸಕಲಧರಣಿಭೃನ್ಮಸ್ತಕನ್ಯಸ್ತಮಾಗಿ
ರ್ದಿನಮುಚ್ಚಂಡಪ್ರತಾಪೋದಯಮರಿಕುಮುದಾಭೋಗವಿಧ್ವಂಸಿಯಾಗಿ
ರ್ದಿನಮುದ್ಯನ್ಮಂಡಲಾಗ್ರಂ ಸಲೆ ಘನಪದವೀಶೋಭೆಯಂ ಪೆರ್ಚಿಸುತ್ತಿ
ರ್ದಿನಮೊಳ್ಪಂ ಪೆತ್ತುದಾತ್ತಂ ಬೆಳಗುಗೆ ಜಗಮಂ [2]ಗೋಪಮಾರ್ತಂಡದೇವಂ[2] ೪

ಮ॥ ಅರಿರೌದ್ರಂ ಕರದೈಶ್ವರ್ಯಮುಲ್ಲಸದಹೀನಾಲಂಕೃತಂ ಮೂರ್ತಿ ಸಾ
ಕ್ಷರಸೇವ್ಯಂ ನಿಜವಿದ್ಯೆ ವಿಶ್ವವಿನುತಂ ಪಾದಂ ಸದಾಳಿಪ್ರಿಯಂ
ವರದಾನಂ ನತಭದ್ರಲಕ್ಷಣಪದಂ ಪದ್ಮಾನುಷಂಗಿತ್ವಮಾ
ಗಿರೆ ಪೆಂಪಚ್ಚರಿಯಾದ ದೇವಗಣಪಂ ರಕ್ಷಿಕ್ಕೆ ಭೂಚಕ್ರಮಂ ೫

---

[1] ಕ್ರೋಢಂ (ಕ) [2] ಶ್ರೀಜಗನ್ನಾಥದೇವಂ (ಕ) ಶ್ರೀಜಗನ್ನಾಥಸೂರ್ಯಂ (ಗಘ)

ಮ॥ ಕೆಸಱಿಂದೊಳ್ ಪುಟ್ಟಿದುದೆಂತುಮಲ್ಲದೆ ರಜಸ್ಸಂಲೀಢಮೆಂತುಂ ಜಡಾ
ವಸಥಂ ಚೀಃ ಮಧುಪಪ್ರಸಂಗಿ ಖರದಂಡಂ ಮತ್ತೆನುತ್ತಬ್ಜಮಂ
ಬಿಸುಟತ್ಯುತ್ತಮಮಿಂತುಟೆಂದು ಪಿರಿದುಂ ಸಂತೋಷದಿಂ ವಾಣಿ ಬಂ
ದು ಸಮುಂತಿರ್ಕೆ ನವೀನಸೌರಭದವೋಲ್ ಜಿಹ್ವಾಗ್ರದೊಳ್ ರುದ್ರನಾ ೬

ಕಂ॥ ಕೋಕನದಗರ್ಭನಿಂ ವಾ
ಲ್ಮೀಕಿಯೆ ಕವಿ ಮುನಿನಿಕಾಯದೊಳ್ ಸಂದತ್ತೀ
ಲೋಕಕ್ಕೆ ನಾನೃಷಿಃ ಕುರು
ತೇ ಕಾವ್ಯಮೆನಿಪ್ಪ ಮಹಿಮೆ ತನ್ಮುನಿವರನಾ ೭

ಮ॥ ಸ್ತುತಿಗೆಯ್ವೆಂ ಕೃತಪಂಚಮಶ್ರುತಿಪುರಾಣವ್ಯಾಸನಂ ವ್ಯಾಸನಂ
ಕೃತಿಲೋಕಶ್ರುತಿಪೂರಕಲ್ಪಕವಿತಾಗೀರ್ಬಾಣನಂ ಬಾಣನಂ
ಚತುರೋಕ್ತಿಪ್ರಚುರಾರ್ಥಕಾವ್ಯಜನಿತೋರ್ವೀಹರ್ಷನಂ ಹರ್ಷನಂ
ಶತಪತ್ರಾಕ್ಷ ಕಥಾಮೃತಬುಧಸ್ತೋಮಾಘನಂ ಮಾಘನಂ ೮

ಕಂ॥ ಸುಕವಿಜನಗಣನೆಯೊಳ್ ದ
ತ್ತಕನಿಷ್ಠಿಕನಾಗೆ ಕಾಳಿದಾಸಂ ಮೊದಲೆಂ
ದು ಕರಂ ಬಣ್ಣಿಪರದಱಿಂ
ದೆ ಕಾಳಿದಾಸಂಗೆ ದಾಸರೆನಿಪರ್ ಕವಿಗಳ್ ೯

ಚಂ॥ ಇನಿತುಮುವಿರ್ಕೆ ಮತ್ಕೃತಿಯೊಳೀಧರೆ ಬಣ್ಣಿಸೆ ಸಂದ ಶಂಖವ
ರ್ಮನ ಬಗೆ ಶಾಂತಿವರ್ಮನ ನಯಂ ಗುಣವರ್ಮನ ಬಂಧಗೌರವಂ
ಮನಸಿಜನೋಜೆ ಕಣ್ಣಮನ ಜಾಣ್ಣುಡಿ ಪಂಪನ ರೀತಿ ಚಂದ್ರಭ
ಟ್ಟನ ಜತಿ ಪೊನ್ನಮಯ್ಯನ ಬೆಡಂಗು ಗಜಾಂಕುಶನುಳ್ಳ ಬಿನ್ನಣಂ ೧೦

ಕಂ॥ ಉತ್ಸವಕರಮೆನೆ ಬೆಳಪ ಶ
ರತ್ಸಮಯದೊಳಿಂದುಕಾಂತಿದಳವೇಱುವವೋಲ್
ವತ್ಸಳರೆನಿಸುವ ಬುಧರಿನ
[1]ಮತ್ಸರರಿಂ ಕೃತಿ[1] ಕೃತಾರ್ಥಮಕ್ಕುಮಮೋಘಂ ೧೧

---

[1] ಅಮತ್ಸರಮತ್ಕೃತಿ (ಕ)

ತುಡುಕಿದ ದೋಷಿಯನಲ್ಲದೆ
ಪಿಡಿಯದು ಘಟಸರ್ಪನಂತುಟಲ್ಲದೆ ತನ್ನಂ
ತುಡುಕದ ನಿರ್ದೋಷಿಯುಮಂ
ಪಿಡಿವುದು ಖಳಮುಖಘಟೋಗ್ರಜಿಹ್ವಾಸರ್ಪಂ ೧೨

ಮ॥ ಕವಿತಾಪ್ರೌಢನೆ ಸೋಲ್ವವೊಲ್ ಕೃತಿಯೊಳಜ್ಞಂ ಸೋಲ್ವನೇ ಚಂದ್ರಕಾಂ
ತವೊಸರ್ವಂತಿರೆ ಗೋರಿಕಲ್ಲೊಸರ್ಗುಮೇ ಬೆಳ್ದಿಂಗಳೊಳ್ ತುಂಬಿ ಪೀ
ರ್ವವೊಲೇಂ ಪೀರ್ದಪುದೇ ಕಡಂದುಱುತೆ ನವ್ಯಾಮೋದಮಂ ಪೂಗಳೊಳ್
ನವಚೂತಂ ತಳಿರ್ವಂದದಿಂ ತಳಿರ್ಗುಮೇ ಸ್ಥಾಣೂತ್ಕರಂ ಚೈತ್ರದೊಳ್ ೧೩

ಕಂ॥ ಅರ್ಥಾಭಾಸದಿನಕ್ಷರ
ಸಾರ್ಥಮನುಚ್ಚರಿಸೆ ಕಾವ್ಯ[1]ವೆಂತೆಸೆಗುಂ[1] ತ
ತ್ತ್ವಾರ್ಥಮನಱಿಯದ ಮುನ್ನಮ
ಪಾರ್ಥಂ [2]ರಂಜಿಸದ[2] ಪಳಿಕು ಮಣಿಯವೊಲಿರದೇ ೧೪

ಚಂ॥ ಪೊಸತೆನೆ ಪೇಳ್ವ ತಿರ್ದುವಱಿವೆನ್ನೊಳೆ ಸನ್ನಿದಮಾದೊಡಂ ಕರಂ
ರಸಿಕರಿನೆಯ್ದೆ ತಿರ್ದಿಸಿದೊಡಲ್ಲದೆ ನಿಲ್ಲದು ಚಿತ್ರಮಂತೆ ತಿ
ರ್ದಿಸುವುದೆ ನಲ್ನಯಂ ಬೆಳಗೆ ಕನ್ನಡಿ ಸೋದಿಸೆ ಪೊನ್ ವಿರಾಜಿಪಂ
ತೆಸೆದು ಬಱಿಕ್ಕೆ ಮತ್ಕೃತಿ ಚಮತ್ಕೃತಿಯಂ ಧರೆಗುಂಟುಮಾಡುಗುಂ ೧೫

ಇನಿಯಳ ಸೋಂಕಿನಂತೆ ಪೊಸಮಾವಿನ ಪೂವಿನ ಜೊಂಪದಂತೆ ಚಂ
ದನರಸದಣ್ಪಿನಂತೆ ನನೆಯೇಱಿದ ಮಲ್ಲಿಗೆಯಂತೆ ಪೂರ್ಣಚಂ
ದ್ರನ ಸಿರಿಯಂತೆ ಬಂದೆಸಪ ತೆಂಕಣ ತಂಬೆಲರಂತೆ ರುದ್ರಭ
ಟ್ಟನ ಕವಿತಾರಸಂ ಮನಮನಿರ್ಕುಳಿಗೊಳ್ವುದು ಸಜ್ಜನರ್ಕಳಾ ೧೬

ಉ॥ ಈತೆಱದಿಂ ಬುಧರ್ ಪೊಗಟ್ದು ಮತ್ಕೃತಿಯಂ ನೆಱೆ ಶಾರದಾಭ್ರಚಂ
ದ್ರಾತಪ ರುದ್ರ ಕೃಷ್ಣ ಕಥೆವೇಟಿೞನೆ ಕಾವ್ಯಸಮಾಧಿಯಿಂ ಪರಂ
ಜ್ಯೋತಿ ಮುಕುಂದನೆನ್ನ ಬಗೆಯೊಳ್ ನಿಲೆ ನಿರ್ಮಳತತ್ತ್ವಬೋಧಮು
ದ್ದ್ಯೋತಿಪುದೆಂಬುದಂ ಬಯಸಿ ಪೇಟಲೊಡರ್ಚಿದೆನೀಪ್ರಬಂಧಮಂ ೧೭

---

1 ಮಂತೆಸೆಗುಂ (ಖ) 2 ರಂಜಿಸಿದ (ಕ)

ಮ॥ ಅಳವಲ್ಲೀಸ್ತುತಿಯೆನ್ನ ಚಿತ್ತವಣುಮಾತ್ರಂ ಜಿಹ್ವೆಯೊಂದಕ್ಕರಂ
ಗಳುಮೈವತ್ತೆರಡೆಂಬ ಚಿತ್ತವಖಿಳೋರ್ವಿವ್ಯಾಪಕಂ ಜಿಹ್ವೆ ಕೇ
ವಳಮಲ್ತೇನುಮನೆಂಬುದಕ್ಕರವುಮೆಲ್ಲಾ ವೇದಶಾಸ್ತ್ರಂಗಳಂ
ಬಳಸಿತ್ತಂತುಮತರ್ಕ್ಯಮಲ್ಲವೆ ಮಹತ್ತ್ವಂ ವಿಷ್ಣು ಸರ್ವಜ್ಞನಾ ೧೮

ಮ॥ಸ್ರ॥ ಪಿರಿಯಂ ಬ್ರಹ್ಮಾದಿದೇವರ್ಕಳೆ[1]ನೆನುತುಮದೇಂ ವಿಷ್ಣುಗಶ್ಲಾಘೆಯಂ[1] ಬಿ
ತ್ತರಿಸೆಂ ಕುಂಭಾಂಬುವಿಂದಂಬುಧಿಜಳಮಣುವಿಂ ಪರ್ವತಂ ಕ್ಷುದ್ರಶಂಖೋ
ದರದಿಂ ಬ್ರಹ್ಮಾಂಡಗರ್ಭಂ ಪಿರಿದೆನೆ ಪೊಗೞಲ್ಕೊಂದಂದಮೇ ವೇದಶಾಸ್ತ್ರಾ
ರ್ಥರಹಸ್ಯಾಚಿಂತ್ಯಸಾಮರ್ಥ್ಯದ ಮುರಹರನಂ ಬಣ್ಣಿಸಲ್ ಬಲ್ಲನಾವಂ ೧೯

ಉ॥ [2]ಏದೊರೆಸೆಂಪೊ[2] ಲಕ್ಷ್ಮಿ ನಿಜವಲ್ಲಭೆ ಜಾಹ್ನವಿ ತನ್ನ ಪಾದಪ
ದ್ಮೋದಕಮಿಂದ್ರಮುಖ್ಯದಿವಿಜರ್ ಸ್ವಪರಿಗ್ರಹಮಬ್ಜಜಂ ಸ್ವಕೀ
ಯೋದರಪದ್ಮಯೋನಿಭವನಾತ್ಮತನೂಭವನೆಂದೆನಿಪ್ಪ ದು
ಗ್ಧೋದಧಿತಲ್ಪನಂ ನರನಭಿಷ್ಟುತಿಗೆಯ್ವುದು ಧಾರ್ಷ್ಟ್ಯಮಲ್ಲವೇ ೨೦

ಕಂ॥ ಕತೆ ವಿಷ್ಣುಪುರಾಣಂ ಸ
ತ್ಕೃತಿವೇಳ್ದಂ ಸುಕವಿರುದ್ರನೀಕೃತಿಗೆ ಕಥಾ
ಪತಿ ಕೃಷ್ಣಂ ಕೃತಿಯುಂ ಭೂ
ನುತಮೆ ಜಗನ್ನಾಥವಿಜಯಮೆನೆ ಮೆಚ್ಚದರಾರ್ ೨೧

ಮ॥ಸ್ರ॥ ವನಜಾಕ್ಷಖ್ಯಾತಿಪೂತಂ ಕಥೆ ಕವಿ ಕವಿರಾಜಂ ವಚಸ್ಸುಂದರೀನೃ
ತ್ಯನಿವಾಸಂ ಚಂದ್ರಮೌಳಿಪ್ರಮುಖನಿಖಿಲವಿದ್ವಜ್ಜನಂ ಮೆಚ್ಚೆ ರುದ್ರಾಂ
ಕನೆ ಪೇಳ್ದಂ ದೇವಚೂಡಾಮಣಿಮಣಿಮುಕುರಂ ವಿಷ್ಣು ಕೈಕೊಳ್ವನೆಂದಂ
ದನವದ್ಯಂ ರೀತಿಜೋದ್ಯಂ ಸಕಲವಿಬುಧಹೃದ್ಯಂ ಸಮಂತೀಪ್ರಪದ್ಯಂ ೨೨

ವ॥ ಅದೆಂತೆಂದೊಡೆ

ಮ॥ಸ್ರ॥ ನಳಿನೀಗರ್ಭಾಂಡಮಾಲಾಫಲಿತಮೆನಿಪ ಪೃಥ್ವೀಮಹಾವಲ್ಲಿಯಂ ತಾಂ
ಬಳಸಿರ್ದಾಳವಾಲದಂತಿರ್ಪುದು ಜಲಚರಸಂಭೂತಸಂಪದ್ವಿಧಾನಂ
ವಿಳಸದ್ರತ್ನಪ್ರತಾನಂ ಕುಲಗಿರಿಶರಣಸ್ಥಾನಮುತ್ಕೀರ್ಣಫೇನಂ
ಬಳವದ್ವೀಚೀವಿತಾನಂ ಪ್ರಬಳಘುಳುಘುಳುಧ್ವಾನಮಂಭೋನಿಧಾನಂ ೨೩

---

1 ನೆನೆಯುಮದೇಂ ವಿಷ್ಣುಗಶ್ಲಾಘ್ಯವಾಂ (ಕಖ) 2 ಮೋದಮೆ ಮೂರ್ತಿ (ಕ)

ಕಂ॥ ಆ ನೆಗಟ್ದ ಮಹಾವಾರಿನಿ
ಧಾನಂ ಪರಿವೇಷ್ಟಿಸಿರ್ದ ಜಂಬೂದ್ವೀಪಂ
ತಾನೆಸೆದುದು ವೃತ್ತಶ್ರೀಯಿಂ
ದಾನವಮರ್ದನನ ಕೂರ್ಮಮೂರ್ತಿಯ ತೆಱದಿಂ ೨೪

ಮ॥ ನೆಗಟ್ದಾ ದ್ವೀಪದ ಮಧ್ಯದಲ್ಲಿ ಕಲಶಂ ಚಂಡಪ್ರಭಂ [1]ಪಲ್ಲವಂ
ಭಗಣಂ ಪಂಜರಮಂಬುದಾಳಿಯೆನೆ[1] ಪೂಣ್ದಬ್ಜಾಸನಂ ಪ್ರೀತಿ ಕೈ
ಮಿಗೆ ದೈತ್ಯಾಂತಕನಾಮದಿಂದೆಸೆವ ಲಕ್ಷ್ಮೀವಲ್ಲಭಂಗೆತ್ತಿದಾ
ಗಗನಚ್ಛತ್ರದ ಹೇಮದಂಡಮೆನಿಸಲ್ ಸಾಲ್ದತ್ತು ಹೇಮಾಚಲಂ ೨೫

ವ॥ ಆ ಮೇರುಗಿರಿಯ ಶಿಖರನಿವಾಸದೊಳ್

ಮ॥ ನತನಾನಾಸುರಮೌಳಿರತ್ನಕಿರಣಂ ನಾನಾಪ್ಸರಃಕೇಕರ
ದ್ಯುತಿ ನಾನಾಚಮರೀಜವಾಯು ಸಭೆಯಂ ತಳ್ಪೊಯ್ಯುಲಿರ್ದಂ ಜಗ
ತ್ಪತಿಯೊಡ್ಡೋಲಗದೊಳ್ ಚತುರ್ಮುಖನತರ್ಕ್ಯಬ್ರಹ್ಮತೇಜಶ್ಶಿಖಂ
ಶ್ರುತಿಗಾನೈಕಸುಖಂ ನಮಚ್ಛತಮುಖಂ ವಾಣೀವಧೂಟೀಸಖಂ ೨೬

ವ॥ ಅಂತಿರ್ಪನ್ನೆಗಂ*

ಕಂ॥ ಗರ್ವಿತನೃಪಾಲಕಾಧಮ
ದುರ್ವಿಳಸನಜನಿತಭೂರಿಭಾರದೊಳೆನಸುಂ
ನಿರ್ವಿಣ್ಣೆಯಾಗಿ ಭೂವಧು
ಗೀರ್ವಾಣಾವೃತ ವಿರಿಂಚಿ ಸಭೆಯಂ ಪೊಕ್ಕಳ್ ೨೭

ವ॥ ಅಂತು ಪೊಕ್ಕು ಮುಕುಲಿತಾಂಜಲಿಯಾಗಿ ಮುಂದೆ ನಿಂದಿರ್ದ ಮೇದಿನೀ ದೇವಿಯ ದೈನ್ಯಭಾವಮಂ ವಿರಿಂಚಿ ಕಾರುಣ್ಯಚಿತ್ತದಿಂ ನೋಡಿ

ಕಂ॥ ಹೃದಯದಯಾಮೃತವಾಹಿನಿ
ವದನದೆ ಕಡೆಗೋಡಿವರಿದುದೆನೆ ನಿಜದಶನಾ
ಘದ ವಿಶದಪ್ರಭೆ ಸಭೆಯಂ
ಪುದಿಯೆ ಮಹೀವಧುಗೆ ವನಜಭವನಿಂತೆಂದಂ ೨೮

---

[1] ಪಂಜರಂ ಭಗಣಂ ಪಲ್ಲವಮಂಬುರಾಶಿಯೆನೆ (ಕಖ) * ಕಥಾವತಾರಮೆಂತೆಂದೊಡೆ ಅಂಬುಧಿಪರಿವೃತ ಜಂಬೂದ್ವೀಪಮಧ್ಯದ ಮೇರುಗಿರಿಯ ಶಿಖರದ ನಿಜನಿವಾಸದೊಳ್ ಸಕಲದೇವ ಗಣಪರಿವೃತನಾಗಿ ಲೀಲೆಯಿಂದೊಡ್ಡೋಲಗದೊಳಿರ್ದ ಪಿತಾಮಹಂಗೆ ಪೇೞಲೆಂದು ಭೂಕಾಂತೆ ತಳರ್ದಳ್ (ಕಘ)

ಮ॥ಸ್ರ॥ ಇನಿತೊಂದುದ್ವೇಗಮೇವಂ ಮರುಕಮದವಳಲ್ಪೇವಸಂ ನಿನ್ನೊಳೇಕಾ
ಯ್ತನಿಮಿತ್ತಂ ಪುಟ್ಟಿತೇಕಾರಣದಿನುದಯಿಸಿತ್ತೇತಱಿಂ ಪ್ರಾಪಿಸಿತ್ತಾ
ವನಿನಾದತ್ತೆಂತು ಪೊಣ್ಮಿತ್ತೆನೆ ವನರುಹಗರ್ಭಪ್ರಸಾದೋಕ್ತಿಯಂ ಕೇ
ಳ್ದನಿತಾನುಂ ಗದ್ಗದತ್ವಂ ನೆಗೞೆ ವಸುಮತೀಕಾಂತೆಯಿಂತೆಂದಳಾಗಳ್ ೨೯

ಮ॥ ತಿದಿವೋಲ್ ದಿಗ್ಗಜರಾಜಿ ಗೋಣ್ಗುಸಿದು ವಕ್ತ್ರಶ್ವಾಸಮಂ ಬೀಱುತಿ
ರ್ಪುದು ನಾಲ್ಪಟ್ಟೆಯ ಪಿಟ್ಟಿವೊಲ್ ಕುಲನಗೌಘಂ ನುರ್ಗಿದತ್ತಾನೆ ಮೆ
ಟ್ಟಿದೆಸಮುರ್ಜಿಟ್ಟಿವೊಲಾಗಿ ಕೂರ್ಮನೊಡೆದಂ ಶೇಷಂ ಫಣಂ ಬಳ್ಕಿ ಸು
ರ್ಕಿದಪಂ ಸೀರೆಯ ಸಿಂಬಿವೋಲ್ ಖಳನೃಪಾಲಾಕ್ಷೌಹಿಣೀಭಾರದಿಂ ೩೦

ಪ್ರಕಟಂ ವಾರಿಧಿವೇಲೆ ವಾರ್ಧಿಗೆ ಜಲೌಘಸ್ಪರ್ಧೆಯೊಳ್ ಬಾಧ್ಯಬಾ
ಧಕ[1]ಭಾವಂ[1] ನೆಗೞಲ್ಕೆ ನಿಲ್ವ ತೆಱದಿಂದೀಸೃಷ್ಟಿಗನ್ಯೋನ್ಯಸೈ
ನಿಕಸಂಗ್ರಾಮದೆ ಬಾಧ್ಯಬಾಧಕತೆ ಪುಟ್ಟಲ್ ನಿಲ್ವೆನಾನಿಂತು ಸೃ
ಷ್ಟಿಕರಂ ಪೆರ್ಚಿದೆ ದೇವ ತಾಳ್ದು ನಿಲಲಾಱೆಂ ತನ್ಮಹಾಭಾರಮಂ ೩೧

ವ॥ ಎಂದು ಮೇದಿನೀದೇವಿ ಬಿನ್ನಪಂಗೆಯ್ಯೆ ಸರೋಜಸಂಭವಂ ದೇವೇಂದ್ರಮಂತ್ರಿಯಪ್ಪ ಬೃಹಸ್ಪತಿಯ ಮೊಗಮಂ ನೋಡಲಾಂಗಿರಸಂ ಕರಕಮಲಂಗಳಂ ಮುಗಿದು*

ಉ॥ ಪಾವಕನೇತ್ರನಾಗಿ ತಮದಿಂ ರಜದಿಂದಜನಾಗಿ ಸತ್ತ್ವದಿಂ
ಶ್ರೀವರನಾಗಿ ತೋಱುವ ಗುಣತ್ರಯಧಾಮನಮೇಯನವ್ಯಯಂ
ದೇವರ ದೇವನಾದಿಪುರುಷಂ ಜಳಶಯ್ಯೆಯೊಳಿರ್ದಪಂ ತ್ರಿಲೋ
ಕಾವನನಾ ಮಹಾವಿಭುಗೆ ಪೇೞಿದೆ ಪದ್ಮಜ ತೀಱಿದಾರೊಳಂ ೩೨

ಕಂ॥ ಸುರರ್ಗೆ ಗುರು ವಜ್ರಿ ವಜ್ರಿಗೆ
ಗುರುವಾನೆನಗಬ್ಜಗರ್ಭ ನೀಂ ಗುರು ನಿನಗಂ
ಪರಮಗುರು ವಿಷ್ಣು ವಿಷ್ಣುಗೆ
ಪಿರಿಯರ್ ಮತ್ತಿಲ್ಲ ದೇವರಿದುವೆ ಯಥಾರ್ಥಂ ೩೩

ವ॥ ಎನೆ ವನಜಸಂಭವನದಂ ಮನದೆ ಕೊಂಡು

---

1 ಭಾರಂ (ಕಖ) * ಇದು (ಘ) ಪುಸ್ತಕದಲ್ಲಿ ಮಾತ್ರ ದೊರೆಯುತ್ತದೆ.

ಕಂ|| ಜನಕನೆ ನಾಂ ನಿನಗೆನಗಾ
ದನುಜಹರಂ ಜನಕನದಱಿಂ ನಾನಭಿಮತನುಂ
ನಿನಗೆನಗಭಿಮತನುಂ ವಿ
ಷ್ಣು ನೆಗೞ್[1]ದೊಡೆಮಗದಾತ[1] ಚರಣಂ ಶರಣಂ ೩೪

ವ|| ಎಂದು ತಮ್ಮೊಳಾಳೋಚಿಸಿ ಮೇದಿನೀದೇವಿಗತಿಪ್ರಮೋದಮಂ ಪಡೆದು ಕಳಿಪಿ ತದೀಯಖೇದಮಂ ತನಗಪ್ಪುಕೆಯ್ದಿರ್ದುದಂ ಕಂಡು

ಮ||ಸ್ರ|| ಎಸಗಾದೀಖೇದಮಂ [2]ಬಿನ್ನವಿಷಸಹಿಷ[2] ತಲ್ಪಂಗೆ [3]ದರ್ಪೋನ್ಮಿಳದ್ದಾ
ನವ[3] ಸೇನಾಕಾಲಕಲ್ಪಂಗಘಕುಲವನದಾವಂಗೆ ರಕ್ಷಾರ್ಥಮೊಂದೊಂ
ದವತಾರಂಗೆಯ್ದು ದೇವಂಗೆನುತೆ ತೆರಳಲುದ್ಯುಕ್ತರಾದರ್ ಸಭೂಭಾ
ರವಿಷಾದರ್ ದೈತ್ಯಪೀಡಾಕುಪಿತನಿಜಮನಃಪದ್ಮರಾ ನಾಕಸದ್ಮರ್ ೩೫

ವ|| ತದನಂತರಂ

ಉ|| ಭೋರೆನೆ ತೂರ್ಯಮಂಚೆಯನಜಂ ಗಜಮಂ ಬಳವೈರಿ ಮೇಷಮಂ
ಮಾರುತಬಂಧು ಸೈರಿಭಮನಂಬುಜಮಿತ್ರಸುತಂ ನೃವಾಹಮಂ
ನೈರುತಿ[4]ಯಬ್ಧಿಪಂ ಮಕರಮಂ[4] ಮೃಗಮಂ ಪವನಂ ವಿಮಾನಮಂ
ಮಾರಹರಪ್ರಿಯಂ ವೃಷಭಮಂ ಹರನೇಱಿ ನಭಕ್ಕೆ ಸಲ್ವುದುಂ ೩೬

ಕಂ|| ಧವಳಾಬ್ಜಗೌರಹಂಸ
ಪ್ರವರನ ಮೇಲಬ್ಜರಾಗರುಚಿಯೆನಿಪಬ್ಜೋ
ದ್ಭವನೇಂ ಬೆಳಗುತ್ತಿರ್ದನೊ
ಧವಳಾಭ್ರದ ಮೇಲೆ ಬೆಳಗುವೆಳನೇಸಱವೋಲ್ ೩೭

ಅಮರನದೀಹಂಸಕುಳಂ
ಕಮಳಜಹಂಸೇಂದ್ರಸೇವೆಗೆಟ್ಟಿರ್ದ ವಿಳಾ
ಸಮದೆನಿಸಿ ದೇಸೆವೆತ್ತುವು
ಕಮಳಭವಂಗಿಕ್ಕುವಮಳ ಚಮರರುಹಂಗಳ್ ೩೮

ಚಂ|| ಪಳಯುರಮಂಗಳುಣ್ಮೆ ಸುರಕನ್ಯೆಯರಿಕ್ಕುವ ಚಾಮರಂ ತೆಱಂ
ಬೊಳೆಯೆ ಸುರೇಭಕಂಧರದೊಳಿರ್ದ ಸಹಸ್ರವಿಳೋಚನಂ ಮನಂ
ಗೊಳಿಸಿದನಿಂಚರಂ ಬೆರಸಿದಂಚೆಗಳಾಡುವ ಗಾಂಗತುಂಗನಿ
ರ್ಮಳಪುಳಿನಾಗ್ರದೊಳ್ ಮಿಸುಪ ನೀಳಸರೋಜವನಾಳಿಯಂದದಿಂ ೩೯

---

1 ದೆಂತುಮಾರ (ಕ) 2 ಬಿನ್ನವಿಷ ಫಣಿಪ (ಕಖಗ) 3 ದರ್ಪೋನ್ಮದದ್ದಾನವ (ಕಖ)
4 ಮತ್ಸ್ಯಮಂ ವನಧಿಪಂ (ಘ)

ವ|| ಆಗಳುಂ

ಮ|| ಹಿಮಶೈಲೇಂದ್ರಮೇಖಂಕೆಯಂ ತಳೆದು ಬಂದಾಕಾಶದೊಳ್ ನೋಡೆ ಮೇ
ರುಮಹಾಶೈಲಮನಾಂತು ಪಾಱದಪುದೆಂಬನ್ನಂ ಮಹಾಪಾಂಡುರೇ
ಹಮುಮುಜ್ಜೃಂಭಿಪೆಖಂಕೆಯುಂ ಬಗೆಗೊಳಲ್ ಪದ್ಮೋದ್ಭವಂ ಭೂರಿರಾ
ಗಮಯಾಂಗಂ ತನಗೊಪ್ಪಲಬ್ಜಭವಹಂಸಂ ಪಾಱತಬ್ದಾಧ್ವದೊಳ್ ೪೦

ಚಂ|| ನಿಜನಿಜರಾಜಚಿಹ್ನನಿವಹಂ ಪರಿರಂಜಿಸೆ ಶಂಖಕಾಹಳಾ
ಪ್ರಜವಿಜಯಾನಕಧ್ವನಿ ವಿಜೃಂಭಿಸೆ ಕಿನ್ನರಗೇಯನಿಸ್ವನಂ
[1]ವಿಜಯಿಸೆ[1] ದಿವ್ಯಭೂಷಣಮರೀಚಿ ರವಿಪ್ರಭೆಯಂ ಪಳಂಚೆ ನಾ
ಕಜರಜನಿರ್ಕೆಲಂಬಿಡದದೇಂ ನಡೆಗೊಂಡರೊ ಮೇಘಮಾರ್ಗದೊಳ್ ೪೧

ಕಂ|| ಪವನಪಥಾಂತರದೊಳ್ ಪವ
ನವೇಗದಿಂ [2]ಸಾಮಜಾದಿವಾಹನಸಹಿತರ್[2]
ದಿವಿಜರನೇಕದ್ವೀಪಾ
ರ್ಣವಂಗಳಂ ಕಱದು ಮುಟ್ಟಿವರ್ಪವಸರದೊಳ್ ೪೨

ಮ|| ಒಳಪೊಯ್ದಾಗಸಮಂ ಸಮುದ್ರಮೆಸೆದತ್ತಾಕಾಶಮಾರ್ಗಶ್ರಮಂ
ಗಳನೊಲ್ದಾಱಸಲುಷ್ಣರೋಚಿಗೆ ನಿಜೋತ್ಫೇನಾತಪತ್ರಂಗಳಂ
ತಳೆವುಚ್ಛೀಕರಪುಷ್ಪಮಂ ಕೆದಱುವುನ್ಮುಕ್ತಾಕ್ಷತವ್ರಾತಮಂ
ತಳೆವುದ್ವೀಚಿವಿಲೋಲಚಾಮರಮನೆತ್ತಂ ಬೀಸುವೊಂದಂದದಿಂ ೪೩

ಚಂ|| ಚಕಿತತರಂಗಸಂಘಹತಿಯಿಂ ಪೊಱಪೊಣ್ಮುವ ಮುತ್ತು ದಿಗ್ವಧೂ
ನಿಕರದ ತೊಟ್ಟ ಮುತ್ತಿನೊಳೊಡಂಬಡೆ ಸೂಸುವ ಶೀಕರಾಳಿ ತಾ
ರಕಗಣದೊಳ್ ಸಮಂಬಡೆಯೆ ತೇಂಕುವ ಮೌಕ್ತಿಕರತ್ನಗರ್ಭಶು
ಕ್ತಿಕೆ ಪೆಱೆಯೊಳ್ ತಡಂಬಡೆ ಸುಧಾರ್ಣವಮೊಪ್ಪಿದುದುದ್ಗತಾರ್ಣವಂ ೪೪

ವ|| ಆ ಮಹಾರ್ಣವಂ ಸಮುದ್ರಮಾಗಿಯುಂ ಅಪಾರವಿಸ್ತಾರಿಯುಂ; ಭಂಗವ್ಯಾಕುಳಿತಮಾಗಿಯುಮಚ್ಯುತಪ್ರಭಾವಭಾಸುರಮುಂ; ಅಪ್ರತಿಷ್ಠಿತಮಾಗಿಯುಂ ಲಕ್ಷ್ಮೀಜನ್ಮಭವನಮುಂ; ಮದ್ಯಜನ್ಮಸ್ಥಾನಮಾಗಿಯುಂ ಬಾಡಬೋಪಭೋಗಯೋಗ್ಯಮುಂ; ಕಾಲಕೂಟಪ್ರಭವಮಾಗಿಯುಂ ಅಮೃತೋದಯಕ್ಷೇತ್ರಮುಂ; ಜಡಪ್ರಕೃತಿಯಾಗಿಯುಮುದಾತ್ತಸತ್ತ್ವಮುಂ; ಮಜ್ಜಾಪಲಂಬಿಯಾಗಿಯುಂ ಕುಲಶೈಲಪಾಲನಸ್ವಭಾವಯುಕ್ತಮುಂ; ಮುಕ್ತಾಧಾರಮಾಗಿಯುಮನಂತಾಧಾರಮುಂ; ಮತ್ತಮದು ರಸಾತಳದಂತೆ

---

1 ಭಜಿಯಿಸೆ (ಕಖ) 2 ಕಾಮಗಾಮಿವಾಹನಸಹಿತರ್ (ಖ)

ವಿಷಧರನಿಷೇವ್ಯಮುಂ; ಸಾರ್ವಭೌಮಭವನಾಂಗಣದಂತನೇಕವಾಹಿನೀಪ್ರಸಂಗಿಯುಂ; ಗಾಣಿಕ್ಯಗೇಹರಾಜಿಯಂತೆ ಪಲ್ಲವಿಕಸಂತಾನಕ್ರೀಡಾಪ್ರಪಂಚಿಯುಂ; ಅರಣ್ಯದಂತಗಣ್ಯ ವಿದ್ರುಮವಲ್ಲರೀವೇಲ್ಲಿತಮುಂ; ತಾರಾಧ್ವದಂತೆ ದುರ್ಧರಗ್ರಹನಿರುದ್ಧಮುಂ; ನಾಕಲೋಕ ದಂತನಿಮಿಷಪ್ರಕೀರ್ಣಕಮುಂ; ಕಂದರ್ಪನಂತೆ ಶಂಬರಮದವಾರಣೋದಾರಮುಂ; ಐರಾ ವತದಂತೆ ಪುಷ್ಕರಶೀಕರೋದಾರಮುಂ; ತ್ರಿಪುರಾರಿಯಂತೆ ವಿಷೋರಗಧಾರಿಯುಂ; ಪುರು ಷೋತ್ತಮನಂತೆ ಶಂಖಚಕ್ರಾಂಕಿತಮುಂ; ಚತುರ್ಮುಖನಂತೆ ಸರಸ್ವತೀಪತಿಯುಮೆನಿಸಿ ದುದು. ಅಂತುಮಲ್ಲದೆ

ಮ॥ಸ್ರ॥ ಪದಿನಾಲ್ಕುಂ ಲೋಕಮಂ ಕಿಬ್ಬೊಡೆಯೊಳ್ ತಳೆದಾವಿಷ್ಣು ತನ್ನೇಕದೇಶಾ
ಗ್ರದೊಳಿರ್ಪಂ ವಾರಿದಂ ತನ್ನೊಳೆ ಕತಿಪಯವಾರ್ಬಿಂದುವಂ ಪೇಱತಂದಂ
ತದಱಿಂದಂ ಲೋಕಮಂ ತೀವುವುದು ಪವಿಭಯಭ್ರಾಂತಿಯಿಂದಂ ಶರಣ್ಬೊ
ಕ್ಕುದು ತನ್ನಂ ಗೋತ್ರಧಾತ್ರೀಧರತತಿಯೆನೆ ಪೆಂಪರ್ಣವಕ್ಕೇನೊ ಚೋದ್ಯಂ ೪೫

ವ॥ ಎಂದು ಸುಧಾರ್ಣವಮಂ ಪೊಗೞುತ್ತರವಿಂದನಾಭನಂ ಪುರಂದರಾದಿವೃಂದಾ ರಕವೃಂದವಾನಂದದಿಂ ನೋಡುತ್ತುಂ ಬರೆವರೆ

ಮ॥ ಸುರಯೋಗೀಂದ್ರಸಮಾಜಸಂಸ್ತವಜಯಧ್ವಾನಂ ಚಳಚ್ಚಾಮರಾ
ಮರಕಾಂತಾಜನರತ್ನ ಕಂಕಣಝಣತ್ಕಾರಸ್ವನಂ ಕಿನ್ನರೋ
ತ್ಕರವೀಣಾಕ್ವಣಿತಾರವಂ ವಿಬುಧವಂದಿವ್ರಾತಮಾಂಗಲ್ಯಪಾ
ಠರವಂ ಭೋಂಕನೆ ಕೇಳಲಾಯ್ತು ಗೆಲೆವಂದಂಭೋಧಿನಿರ್ಘೋಷಮಂ ೪೬

ವ॥ [1]ಆ ಪ್ರಘೋಷದೊಳ್[1]

ಕಂ॥ ಶೀತೋಷ್ಣಭಾವರಹಿತ
ಜ್ಯೋತಿರ್ಮಂಡಲಮನಂತಕೋಟಿದಿನೇಶ
ದ್ಯೋತಾಮಮಿದರ್ುದನಿಮಿಷ
ಜಾತಂ ಚಿರನಿಮಿಷಮಾಗೆ [2]ಕಣ್ಣುಳ್ಕ[2]ಮಿನಂ ೪೭

ವ॥ ಆ ಮಹಾಪ್ರಕಾಶಮಂ ಕುಶೇಶಯಗರ್ಭಂ ನೋಡಲಳ್ಕಿ[3]ಬಳ್ಕುತ್ತುನ್ಮೀಲಿತ ನೇತ್ರನಾಗಿ[3] ನಿಜಾಂತರಂಗದೊಳ್

---

[1] ಆ ಪ್ರದೇಶದೊಳ್ (ಮೊಅ) [2] ಕಣ್ಮುಕ್ಕ (ಕ) [3] ಬಳ್ಕುತ್ತುಂ ನಿಮೀಲಿತನೇತ್ರ ನಾಗಿ (ಮೊಅ)

ಕಂ|| ಅತಿದುರ್ನಿರೀಕ್ಷ್ಯಮಾದೀ
ದ್ಯುತಿಯಂ ತೊಲಗಿಪುದು ತೋರ್ಪುದಾಕಾರಮನ
ಚ್ಯುತ ನೀನೆಂದಾಬ್ರಹ್ಮಂ
ಸ್ತುತಿಯಿಸೆ ತೊಲಗಿದುದು ತತ್ಪ್ರಕಾಶವಿಶೇಷಂ ೪೮

ವ|| [1]ಅಂತುಮಲ್ಲದೆ[1]

ಮ|| ನವನೀಲೋತ್ಪಲಸನ್ನಿಭಾಂಗರುಚಿಯಿಂ ಸತ್ಕಿಂಕಿರಾತೋದ್ಗಮ
ಚ್ಛವಿ ಪೀತಾಂಬರಕಾಂತಿಯಿಂ ಸಮುದಿತಾರ್ಕಾಕಾರಚಕ್ರಾಂಶುವಿಂ
ಧವಳಾಂಶೂಜ್ಜ್ವಳಶಂಖದೀಧಿತಿಯಿನಾ ರತ್ನಾಕರಂ ಕೂಡೆ ಬ
ಣ್ಣವುರಂ ತೀವಿದ ಮಾಟಿಕ್ಕಯಿಂದೆಸೆವಿನಂ ಚೆಲ್ವಾದನಬ್ಜೋದರಂ ೪೯

ವ|| ಮತ್ತಮಂತಂತೆ ನಡೆಯೆ

ಲಲಿತವೃತ್ತಂ (ಲಯಗ್ರಾಹಿ)||
ಶ್ರೀಸ್ತನಸುಕುಂಕುಮರಜಸ್ತತಿವಿಲೇಪನಗಭಸ್ತಿಪರಿರಂಜಿತ ನಿಜೋನ್ನತ ವಿಶಾಲೋ
ರಸ್ತಲಪರಿಸ್ಫುರಿತ ಕೌಸ್ತುಭವಿಭೂಷಣರುಚಿಸ್ತಬಕಿತಾಖಿಳನಭಂ ದಿವಿಜಕಾಂತಾ
ಹಸ್ತಚಮರಾನಿಳಮುಹುಸ್ತರಳಿತಪ್ರಥಿತ ವಸ್ತುಚಯಕುಂಡಲವಿಮಂಡಿತ
ಕಪೋಲಂ
[2]ಧ್ವಸ್ತದಿತಿಜಂ[2] ನತಸಮಸ್ತವಿಬುಧಂ ಭುವನ ವಿಸ್ತರಣಪಾದನೆಸೆದಂ
ಫಣಿಪತಲ್ಪಂ ೫೦

ವ|| ಮತ್ತಮನಂತರಮಾ ಕಮಳನಾಭನಭಿಮುಖದೊಳಿರ್ದ ವೈನತೇಯನಂ
ಕಂಡು

ಮ|| ವಿನತಾನಂದನನಿಂದಮಕ್ಕೆ ವಿನತಾನಂದಂ ಪದಂ ಚಾರುಕಾಂ
ಚನವರ್ಣಂ ಸ್ಫಟಿಕಾಶ್ಮವರ್ಣಮುದರಂ ಮಾಣಿಕ್ಯವರ್ಣಂ ಕೊರಲ್
ಘನನೀಲೋತ್ಪಲವರ್ಣಮಾಸ್ಯಮೆಸೆದತ್ತೀವರ್ಣಮಾವರ್ಣಶೂ
ನ್ಯನ ಭೃತ್ಯಂಗೆಸೆವಂದಮಚ್ಚರಿಯೆನುತ್ತುಂ ಬಂದು ವೃಂದಾರಕರ್ ೫೧

ಕಂ|| ತವಗಿದಿರ್ವಂದುದಧಿಪನಿ
ತ್ತಮಳಮಣಿವ್ರಜದೆ ಕಲ್ಪಕುಜಮಿತ್ತ ಮಹಾ
ಸುಮನಃಪುಂಜದೆ ಹರಿಗ
ರ್ಘ್ಯಮನಿತ್ತರ್ ಜಯಜಯಾನ್ವಿತರ್ ಬ್ರಹ್ಮಾದ್ಯರ್ ೫೨

1 ಅನ್ತುಮಲ್ಲದೆಯುಂ (ಕ) 2 ಸ್ವಸ್ತಿವಚನಾ (ಕ)

ಮ||ಸ್ರ|| ತೆರೆವೊಯ್ಲಿಂದಾದ ತುಂತುರ್ವನಿ ನಿಜತನುವಂ ತೀವಿ ನಿದ್ರಾಂಗನಾನಿ
ರ್ಭರಸಂಭೋಗಾಂತ್ಯದೊಳ್ಪೊಣ್ಮಿದ ಬೆಮರ್ವನಿಯಂ ಪೋಲೆ ವಾರಾಶಿಧೀರ
ಸ್ವರಮಂ [1]ತಳ್ಪೊಯ್ವ[1]ಜೇಂದ್ರಾದ್ಯಮರಜಯಜಯಧ್ವಾನದಿಂದಾಗಳೆಲ್ದಾ
ದರದಿಂ ಕುಳ್ಳಿರ್ದನಾಲೋಕನಕೃತವಿಬುಧಾನಂದಕಂದಂ ಮುಕುಂದಂ ೫೩

ವ|| ತದನಂತರಂ

ಕಂ|| ತಾರಗೆದುಱುಗಲ್ ನವಸಂ
ಧ್ಯಾರಾಗದೊಳೆಸೆವ ತೆಱದೆ ಪದನಖರುಚಿಗಳ್[2]
ಚಾರುಮಣಿಮಕುಟರುಚಿಯೊಳ್
ರಾರಾಜಿಸೆ ವಿಷ್ಣುಗೆಱಗಿ ನುಡಿದಂ ಬ್ರಹ್ಮಂ ೫೪

ಮ|| ಸುಮನಸ್ಸಿಂಧುವ ರೂಪದಿಂ ಮುಱಿಯ ಪಾಂಗಿಂದಿನ್ನುವೆಟ್ಟಿ ಪ್ಪುದಂ
ದು ಮಹಾವಾಲದ ಪೊಯ್ಲೊಳುಚ್ಚಲಿಸಿದಾ ಮುನ್ನೀರ ನೀರೆಂಬಿನಂ
ತಮನಂ ದೈತ್ಯಕದಂಬವೀರತಮನಂ ನಿರ್ಧೂತಬೃಂದಾರಕೋ
ತ್ತಮನಂ ಮರ್ದಿಸಿ ಮತ್ಸ್ಯರೂಪದೊಳ್ ತಂದ್ಯೆ ವೇದಮಂ ಮಾಧವಾ ೫೫

ಮ||ಸ್ರ|| ಬಸಿಱೊಳ್ ಸರ್ವಾಂಗಮಂ ಬೈತಿಡುವುದಿತರಕೂರ್ಮಕ್ಕಮಾಗಳ್ ನಿಜಂಬೆ
ತ್ತೆಸೆದತ್ತಂತಾತ್ಮಕೂರ್ಮಾಕೃತಿಗುದಧಿತಳಂ ಸಾಲದಂಗಂಗಳಂ ನೀಂ
ಬಸಿಱೊಳ್ ಬೈತಿಟ್ಟಭಿಪ್ರಾಯದಿನೆನೆ ಕಮಠಾಕಾರಮಂ ತಾಳ್ದಿದ್ಯೆ ರಾ
ಕ್ಷಸವಂಶಧ್ವಂಸಿ ನೀನಂದುದಧಿಮಥನದೊಳ್ ಮಂದರೋದ್ಧಾರಣಾರ್ಥಂ ೫೬

ಮ|| [3]ಭುವನಂ ತಾಂ ಭುವನಾತ್ಮಮಾಗೆ ಧರೆಯಂ ಕಳ್ದಾ[3] ಹಿರಣ್ಯಾಕ್ಷನಂ
ದಿವಿಜಾಧೀಶ್ವರರೂಕ್ಷನಂ ಸಕಲಲೋಕಾಸ್ಫೋಟನಾಪೇಕ್ಷನಂ
ತವೆ ಕೊಂದಾದಿವರಾಹರೂಪದೊಳ್ ನೀನಂದೆತ್ತಿದ್ಯೆ ಗೋವಿಂದನೀ
ಧನ ದಂಷ್ಟ್ರಾಗ್ರದ ನೀಲಜಾಲಮಣಿಯೆಂಬಂತಾಗೆ ಭೂಗೋಳಮಂ ೫೭

ಘನಮಾರ್ಗಂ ನಖಟಂಕಭಿನ್ನದಿತಿಜಾಸೃಕ್ಪಂಕದಿಂ ಕೆಂಕಮಾ
ಗಿ ನಿಲಲ್ ಸಂಜೆಯೊಳಂದಿನಿಂ ಬೞಿಕೆ ನಿಚ್ಚಂ ಸಂಜೆಗೆಂಪೆಂಬುದಾ
ಯ್ತೆನೆ ದೈತ್ಯಾಂತಕ ನೀಂ ನಿರಸ್ತಜಗದಂಹಂ ರೌದ್ರರಂಹಂ ನೃಸಿಂ
ಹನೆನಿಪ್ಪಾಕೃತಿಯಿಂ ಹಿರಣ್ಯಕಶಿಪುಪ್ರಧ್ವಂಸಮಂ ಮಾಡಿದ್ಯೆ ೫೮

---

[1] ತಳ್ಪೊಯ್ದು (ಕ) [2] ರುಚಿಯುಂ (ಮೊಅ) ರುಚಿರಂ (ಕಖ) [3] ಭುವನಂಗಳ್ ಭುವನಾತ್ಮಮಾಗೆ ಧರೆಯುಂ ತಾಳ್ದಾ (ಖ)

ಜಲದಾಧ್ವಂಬರಮೆತ್ತಿದಂಘ್ರಿಯ ನಖಾಂಶುಶ್ರೇಣಿ ತಾರಾಗಣ
ಜ್ವಲದಿಂದಿರ್ಪಿನಮಿನ್ನುಮಂದವನಿಚಕ್ರಂ ವಿಕ್ರಮಕ್ಕೆಯ್ದಿದಾ
ಬಲಿಯುಂ ದೈತ್ಯಕದಂಬಕ್ಕೆಕಬಲಿಯಂ ಯತ್ನೀಕೃತಶ್ಮಶ್ರುಭೃ
ದ್ಬಲಿಯಂ ಮೆಟ್ಟಿ ರಸಾತಳಕ್ಕಿೞಿಪಿದೈ ನೀಂ ವಾಮನಾಕಾರದಿಂ ೫೯

ಪರಶುಸ್ಪರ್ಶಶತಂಗಳಿಂ ನೆಗೞ್ದವೀ ಪೊಂದೋಳ್ಗಳೀತಂಗೆನಲ್
ಪರಶುತ್ರುಟ್ಯದಯಃಕಠೋರಭುಜಮೂಲಾಸೃಕ್ಪಯೋಧಾರೆ ಸಾ
ಸಿರಮುಣ್ಮಲ್ ತಱಿದೈ ಸಹಸ್ರಭುಜನಂ [1]ಮತ್ತಿರ್ಪತೊಸೂರ್ಟ್ನರೇ
ಶ್ವರರಂ[1] ನೀಂ ತಱಿದೊಟ್ಟಿದೈ ಪರಶುರಾಮಾಕಾರದಿಂದಚ್ಯುತಾ ೬೦

ಉ॥ ದೇವ ನಿಜೋಗ್ರಬಾಣಹತಿಯಿಂ ತಲೆಗಳ್ ಗಗನಕ್ಕೆ ವೀರಲ
ಕ್ಷ್ಮೀವಧುವಾಡುತಿರ್ಪ ತಿಱಿಕಲ್ಲೆನೆ ಸೂಟಿಱೞೆ ಪಾಱುತಿರ್ಪಿನಂ
ರಾವಣನಂ ಜಗತ್ರಿತಯರಾವಣನಂ ವಿಜಿತೋರುಪೀಡಿತೈ
ರಾವಣನಂ ರಘುಪ್ರಭವರೂಪದೆ ಮರ್ದಿಸಿದೈ ಜನಾರ್ದನಾ ೬೧

ಮ॥ ಅರಿಯಂತೀಯರಿಯಂ ಕಱುತ್ತರಿಯೆನುತ್ತಾರ್ದಿಟ್ಟಮತ್ರಂ ನಭೋಂ
ತರದೊಳ್ ತಾಂ ಶಿಶುಪಾಲಮಸ್ತಕಸಮೇತಂ ಪಾಱಿ ಧರ್ಮಾತ್ಮಜಾ
ಧ್ವರದೊಳ್ ಬಾಯಿನಮುಂ ಸುರಾಂಗನೆಯರೀವಂತಾಯ್ತೆನಿಪ್ಪಂಬುಜೋ
ದರ ನೀಂ ತನ್ನನು[2]ಜಾತನಾದ[2] ಬಲಭದ್ರಾಕಾರಮೇಂ ವಂದ್ಯಮೋ ೬೨

ಜಗಮೆಲ್ಲಂ ನಿಜಬೋಧದೃಷ್ಟಿಯೊಳ್ ಕಾಣಲ್ಕಂದುದೀಚರ್ಮಚ
ಕ್ಷುಗಳಿಂ ಕಾಣ್ಬ ಪದಾರ್ಥಮಿಲ್ಲೆನುತೆ ನೀರಾಗುಕ್ಕುತಿರ್ದತ್ತು ದೃ
ಗ್ಯುಗಳಂ ವ್ಯರ್ಥತೆಯಿಂದಮೆಂಬಿನೆಗಮಾನಂದಾಶ್ರುಧಾರಾಳಿ ಕೈ
ಮಿಗೆ ಬೌದ್ಧಾಕೃತಿಯಿಂದೆ ಯೋಗದೊಳೆ ಕೂಡಿರ್ದೈ ಸರೋಜಾಂಬಕಾ ೬೩

ಚಂ॥ ಅತಿಮಲಿನಾಂಗಮಾದ ಜಗಮಂ ಭವದೀಯಹಯಸ್ಫುರತ್ಖುರಾ
ಹತಿಯಿನುದಗ್ರಖಡ್ಗಹತಿಯಿಂ ಲಯಮೆಯ್ದಿಸುವಲ್ಲಿ ನಿನ್ನ ಸಂ
ಗತಿಯೊಳ್ ಕಿಲ್ಬಿಷಂ [3]ಕಿಡುವುದುಂ[3] ಕಲಿಕಾಲಮನೊಕ್ಕು ಭೂತಳಂ
ಕೃತಯುಗದಂತೆ ವರ್ತಿಸುವುದೇವೊಗೞ್ವೆಂ ನಿಜಕಲ್ಕಿಮೂರ್ತಿಯಂ ೬೪

---

1 ಮತ್ತಿರ್ಪತೊಂದುರ್ವರೇಶ್ವರರಂ (ಕಖಗ) 2 ಜಾತಮಾದ (ಕಖ) 3 ಕಿಡುವುದೇಂ (ಕಖ)

ಕಂ॥ ಆ ನಿನ್ನವತಾರಂಗಳ
ದಾನವರುಂ ಮುನ್ನಿನವರೆ ಮಗುಳ್ದರ್ [1]ಗಡಮೇಂ[1]
ನೀನಳವಡಿಸಿದ ಕಾರ್ಯವಿ
ಧಾನಂಗಳಿವೆಮಗೆ ಪೊಸತೆ ಪೇಳಬ್ಜಾಕ್ಷಾ ೬೫

ಮ॥ಸ್ರ॥ [2]ವಿದಿತವ್ಯಾಪಾರ ನೀಂ ಭಾವಿಸು[2] ಕೃತಯುಗದಿಂದಾದವರ್ ತ್ರೇತೆಯೊಳ್ಪು
ಟ್ಟಿದವರ್ ಮತ್ತೀಗಳೀದ್ವಾಪರದೊಳೊಗೆದವರ್ ದೈತ್ಯರಿರ್ದಪ್ಪರಾದು
ರ್ಮದರಾರೆಂತಪ್ಪರಾರ್ಗಾವುದು ಪೆಸರವರಿಂದಾದುದುದ್ವೃತ್ತವೇನೆಂ
ಬುದನಾನಿಂ ಪೇೞ್ವೆನಲ್ಲೆಂ ವಿಭುಗಪರಿಮಿತಾಳಾಪಮಶ್ಲಾಘ್ಯಮಲ್ತೇ ೬೬

ವ॥ ಎಂದು ಭಾರತೀಪತಿ ಚತುರಪರಿಮಿತೋದಾರಗಂಭೀರಭಾಷಿತಂಗಳಿಂ ಬಿನ್ನಪಂಗೆಯ್ಯೆ ತದೀಯಹೃದಯಾಭಿಪ್ರಾಯಮಂ ಸಕಲ ಲೋಕವೃತ್ತಾಂತಮಂ ನಿಜಸ್ವಾಂತದೊಳ್ ತಿಳಿದು

ಕಂ॥ ಉದರಾಬ್ಜದಿಂ ನಿಜಾಸ್ಯಾ
ಬ್ಜದ [3]ಕಂಪಿಂಗೆಱಗುವಳಿಕುಲಂ ಬೆಳ್ಪಡರ್ವಂ
ತೊದವೆ[3] ದಶನಾಂಶು ಪಾಲ್ಗಡ
ಲಿದೊಂದೆನಲ್ ಪುದಿಯೆ ಹರಿ ವಿರಿಂಚಿಗೆ ನುಡಿದಂ ೬೭

ಮ॥ ಭಯಮಂ ದೇವಗಣಕ್ಕೆ ಮಾಡಿ ಪದಿನಾಲ್ಕುಂ ಲೋಕಮಂ ದೈತ್ಯನಾ
ಜ್ಞೆಯೊಳಿಟ್ಟಾಂಡಿರೆ ನಾಕಿಗಳ್ಗಭಯಮಂ ಕೊಟ್ಟೀಱು ತೇಱಿಂ [4]ಜಗ
ತ್ತ್ರಯಮಂ[4] ಕಾದು ಸುರಾಸುರಾಹವದೊಳಾಂ ಕೊಂದಂದಿನಾ ಕಾಲನೇ
ಮಿಯೆ ಕಂಸಾಸುರನಾಗಿ ಪುಟ್ಟಿದುದನಾಂ ಬಲ್ಲೆಂ ವಚೋವಲ್ಲಭಾ ೬೮

ಮೊದಲೊಳ್ ದಾನವನುಯ್ದು ತದ್ಭುಜಗಸದ್ಮಕ್ಕೈದಿಸಲ್ ಕ್ರೋಡರೂ
ಪದಿನಾಂ ಧಾತ್ರಿಯನೆತ್ತಲಾ ವಸುಮತೀಸ್ತ್ರೀಗೆನ್ನ ಸಂಭೋಗಕಾ
ಲದ ಸಂಸರ್ಗದೆ ಪುಟ್ಟಿದಂ ನರಕನಾತಂ ಲೋಕಸಂಹಾರಮೂ
ರ್ತಿ ದಶಾಸ್ಯಾದಿಗಳಿಂ ಬಲಾಧಿಕನದಂ ಬಲ್ಲೆಂ ಸರೋಜಾಸನಾ ೬೯

---

1 ಗಡಮೇಣ್ (ಮೊಅ) 2 ವಿದಿತವ್ಯಾಪಾರನೆಂ ಭಾವಿಸು (ಕ) ವಿದಿತವ್ಯಾಪಾರನೆಂ ಭಾವಿಸೆ (ಮೊಅ) 3 ಸೊಂಪಿಂಗೆಱಗುವಂಚೆವಿಂಡುಗಳೆನೆ ಬೆಳ್ಪೊದವೆ (ಮೊಅ) 4 ಜಗನ್ತ್ರಯಮಂ (ಕಖ)

ಚಂ॥ ಗಿರಿಗಳನೆತ್ತಿ ಪೆರ್ಮರಗಳಂ ಪಿಡಿದಾಂತ ಮಹಾಬಲಸ್ಥ ವಾ
ನರಭಟಕೋಟಿಯಂ ಶ್ವಸಿತವಾತದೆ ಪಾಱಿಸುವಂಘ್ರಿಯುಗ್ಮದಿಂ
ದೊರಸುವ ಕೈಗಳಿಂ ಪೊಸೆದು ಮುಕ್ಕುವಗುರ್ವಿನ ಕುಂಭಕರ್ಣನೀ
ಧರಣಿಗೆ ದಂತವಕ್ರನೆನಿಸಿರ್ದ(ರ್ಪ)ದನಾನಱಿವೆಂ ಚತುರ್ಮುಖಾ ೭೦

ಹರಸಖನಲ್ಲಿ ಪುಷ್ಪಕಮನಿಟ್ಟುಕಳಿಗೊಂಡು ಹರಾದ್ರಿಯಂ ಹರಂ
ಬೆರಸು ಭುಜಂಗಳಿಂ ನೆಗಪಿ ಶಕ್ರನುಮಂ ಸೆಱಿಗೆಯ್ದ ಜಯ್ಯನಾ
ಗಿರೆ ಬಹುಯತ್ನಗೌರವದಿನಾಂ ಪೊಣರ್ದಿಕ್ಕಿದ ರಾವಣಂ [1]ವಚೋ
ಧರ[1] ಶಿಶುಪಾಲನೆಂಬಸುರನಾದುದನಾಂ ತಿಳಿದೆಂ ನಿರಾಕುಳಂ ೭೧

ಕ್ರಮದೆ ವಿಜೃಂಭಣಕ್ರಮದೆ ಕೊಂಡು ಧರಾತಳಮಂ ರಸಾತಳ
ಕ್ಕಮರವಿರೋಧಿಯಂ ಕಳುಪಿದೆಂ ಬಳಿಯಂ ಬಳಿಯಂ ತದಾತ್ಮಜಂ
ಯಮಸಮಭೀಕರಂ ಯಮಸಮಾಧಿಯಿನೀಶ್ವರನಿಂ ವರಂ ವರಂ
ಸಮನಿಪ ಬಾಣನೀ ಸುರರ್ಗೆ ಹೃದ್ಗತಬಾಣನೆ ಬಲ್ಲೆನಬ್ಜಜಾ ೭೨

ಉ॥ ಚಕ್ರಧರತ್ವಮಂದು ಸಫಲಂ ಭುಜಸಾಹಸಮಂದು ಧನ್ಯಮಾ
ಜಿಕ್ರತುವಂದು ಪೂರ್ಣಮಸುರಾಂತಕನಾಮಮದಂದು ಸಾರ್ಥಕಂ
ಶಕ್ರವಿರಿಂಚಿಮುಖ್ಯಸುರರಕ್ಷಣಮಂದು ಕೃತಾರ್ಥಮೆನ್ನೊಳಾ
ವಿಕ್ರಮಸಾಲ್ವನಂ ತವಿಸಿದಂದಿದ ನಾನಱಿದೆಂ ಪಿತಾಮಹಾ ೭೩

ಮ॥ ಇವರಂ ಕೊಲ್ವ [2]ಸಮಿಪಾಪದೊಳ್[2] ಮಗಧಭೂಭೃದ್ಯುದ್ಧದೊಳ್ ಷಟ್ಪ್ರರಾ
ಹವದೊಳ್ ಪಾಂಡವಕೌರವಾಜಿಯೊಳನೇಕಾಕ್ಷೌಹಿಣೀಸೈನ್ಯಸಂ
ಘಮನುನ್ಮೂಲಿಸಿ [3]ಭೂಮಿಭಾರವನವೋಘಂ[3] ಪಿಂಗಿಸಲ್ವೇಟ್ಟಿದೀ
ಭವನವ್ಯಾಪ್ತಿಯನೆಲ್ಲಮಂ ತಿಳಿದೆನಾಂ ವಾಣೀವಧೂವಲ್ಲಭಾ ೭೪

ಕಂ॥ ಆದಿತ್ಯನ ಪಿತೃಮಾತೃಗ
ಳಾದಾ ಕಶ್ಯಪನುಮದಿತಿಯುಂ ವರುಣನ ಶಾ
ಪಾದೇಶದೆ ಯದುವಂಶಜ
ರಾದರ್ ವಸುದೇವದೇವಕೀಸಂಜ್ಞೆಗಳಿಂ ೭೫

---

1 ವಚೋವರ (ಮೊಅ) 2 ಸಮಿಪಾಕದೊಳ್ (ಮೊಅ) 3 ಭೂರಿಭಾರವನವೋಘಂ (ಮೊಅ)

ಗೋಸಂಬಂಧದ ತೋಟಿಯೊ
ಳಾ ಸಾಗರನಾಥನಿತ್ತ ಶಾಪದಿನವರ್ಗ್ಗ
ದಾ ಸುತರುಂ ಗೋಪಾಲ
ವ್ಯಾಸಂಗದೆ ಕೆಲವುಕಾಲಮಿರ್ಕುಂ ವ್ರಜದೊಳ್ ೨೬

ಆ ಗೋಪತನಯರೊಡನುಪ
ಭೋಗಿಸಲೆಂದಪ್ಸರೋಗಣಂ ದಿವದಿಂ ಬಂ
ದಾ ಗೋಕುಲದೊಳ್ ಗೋಪ
ಸ್ತ್ರೀಗಣವಾಗಿರ್ದು(ರ್ಪು)ದೀಗಳಂಬುಜಗರ್ಭಾ ೨೭

ಶ್ರೀವೇದದುಪನಿಷದ್ವಾ
ಕ್ಯಾವಳಿ ಗೋವೃಂದಮಾಯ್ತು ಗೋಕುಲದೊಳದಂ
ಕಾವ ಬಿನದಮೆ ಪವಿತ್ರಂ
ಕೇವಲಮೇ ಕಾರ್ಯಸೂತ್ರಮಿಂತಿದು ಚಿತ್ರಂ ೨೮

ಸುತನಪ್ಪೆಂ ದೇವಕಿಗಾಂ
ಕತಿಪಯದಿನಮೊಲ್ದು ರಮಿಯಿಪೆಂ ಗೋಕುಲದೊಳ್
ದಿತಿಸುತರಂ ಕಂಸಾದ್ಯರ
ನತಿಬಲರಂ ಕೊಲ್ವೆನಿಱುಪುವೆಂ ಭೂಭರಮಂ ೨೯

ಮ॥ಸ್ರ॥ ಪುಳಕಂ ತಲೆದೋರ್ಪಿನ್ನೆಗಂ ತತ್ಸಭೆಗಭಯಮನಿಂತಿತ್ತು ನೀಮುಂ ನಿಜಾಂಶಂ
ಗಳಿನೀಭೂಭಾಗದೊಳ್ ಬಂದವತರಿಸುವುದೆಂದಾಜ್ಞೆಯಂ ಮಾಡಿ ಗಂಡ
ಸ್ಥಳದೊಳ್ ಶ್ರೀಕುಂಡಲಂ ಮೆಲ್ಲನೆ ತೊನೆಯೆ ಚಲದ್ಭ್ರೂಲತಾಕೋಟಿಯಿಂ ಬೀ
ಱುತ್ತುಂ ಕಳವೇೞ್ದಿಂದ್ರಾದಿಗೀರ್ವಾಣರನವತರಿಪುದ್ಯೋಗದಿಂ ದೇವನಿರ್ದಂ ೩೦

ಇದು ಸಮಸ್ತಕಮಲಭವಾಂಡಮಾಲಾ ಘಟೀಘಟಿತಾರಘಟ್ಟಘಟನಾಸ್ವತಂತ್ರ
ನಿಜಸ್ವರೂಪನಿರೂಪಣಚಕಿತಸಕಲಸಾಮ್ನಾಯತಂತ್ರ ಲಕ್ಷ್ಮೀಕಾಂತ
ಶ್ರೀಪಾದಭಕ್ತಿಯುಕ್ತ ಸುಕವೀಂದ್ರ ರುದ್ರಪ್ರಣೀತ ಶ್ರೀಜಗ
ನ್ನಾಥ ವಿಜಯಮಹಾಪ್ರಬಂಧದೊಳ್ ಸುರಜ್ಯೇಷ್ಠ
ವಿಜ್ಞಾಪನಾಕರ್ಣನ ಸುಧಾರ್ಣವಾವತರಣೋ
ದ್ಯೋಗವರ್ಣನಂ ಪ್ರಥಮಾಶ್ವಾಸಂ

ದ್ವಿತೀಯಾಶ್ವಾಸಂ

ಕಂ॥ ಶ್ರೀವರನ ಚರಣಮಂ ಕ
ಲ್ಪಾವನಿಜಪ್ರಸವಚಯದಿನರ್ಚಿಸಿ ಬೀಟಿಙ್ಕೊಂ
ಡಾ[1]ವಿಬುಧರ್ ಮುದದಿಂ[1] ನಾ
ನಾವಿಧ ವಾಹನದೆ ಮೇರುಗಿರಿಗೆಟ್ಟಿಂದರ್ ೧

ವ॥ ಆ ಮೇರುಗಿರಿಯ ದಕ್ಷಿಣದಿಶಾಭಾಗದೊಳನೇಕನಗರನಿಗಮಾಗ್ರ ಹಾರಗ್ರಾಮ ನಿಕರಖೇಟಖರ್ವಟಮಟಂಬಪತ್ತನದ್ರೋಣಾಮುಖಸಂವಾಹನಿಚಯನಿಚಿತಮುಂ, ಹರಿಹರಹಿರಣ್ಯಗರ್ಭಾದಿ ಸಕಲಗೀರ್ವಾಣ ಮಣಿಭವನ ವಾಪೀಕೂಪದೀರ್ಘಿಕಾತಟಾಕತಟಿನೀನಿಕರಶೋಭಾಕರಮುಂ, ಅಗಣ್ಯಪುಣ್ಯಾರಣ್ಯಪುಣ್ಯಾಶ್ರಮಪುಣ್ಯಶೈಲಪುಣ್ಯಹ್ರದಸಮಾಜ ವಿಭ್ರಾಜಿತಮುಂ, ಸಿತಾಸಿತೇಕ್ಷುವಾಟೀನಾನಾಪುಷ್ಪವಾಟಬಹುವಿಧಸುಗಂಧಬಂಧುರ ಗಂಧಶಾಲಿವನಮನೋಹರಮುಮೆನಿಸಿದ ಭರತಕ್ಷೇತ್ರದ ಮಧ್ಯದೊಳ್ ಮಧ್ಯದೇಶಮುಂಟು. ಅದಱ ಪೆಂಪನಭಿವರ್ಣಿಸುವೊಡೆ ವರ್ಣಸಂಕರಂ ಚಿತ್ರದೊಳ್, ದೋಷಾಭಿಸಂಧಿ ದಿವಸವಿರಾಮದೊಳ್, ಅವ್ಯವಸ್ಥೆ ಜಡಶ್ರಯದೊಳ್, ಪರಾಭವಂ ಸಂವತ್ಸರದೊಳ್, ಆಕ್ರೋಶಂ ಪಥಪ್ರಮಾಣಂಗಳೊಳ್, ಉಪಪ್ಲವಂ ಚಂದ್ರಾರ್ಕಬಿಂಬಂಗಳೊಳ್ [2]ಉತ್ತುಂಗಭಂಗಂ[2] ಕಡಲೊಳ್, ವಿಶ್ವಾಸಘಾತಂ [3]ವನದ್ರುಮನೀಡದೊಳ್,[3] ಸ್ವಾಮಿವಿರೋಧಂ ತಾರಕಚಿತ್ರಕಥೆಯೊಳ್, ಪರಾರ್ಥಸ್ಪೃಹೆ ಗುಣವಿಶೇಷದೊಳ್, ಅಸತ್ಕಾರಂ ನೀರಸಕ್ಷೇತ್ರದೊಳ್, ಪವಮಾನವಿಸ್ತಾರಂ ವ್ಯೋಮದೊಳ್, ಕೃತಘ್ನಭಾವಂ ತ್ರೇತಾಪ್ರವೇಶದೊಳ್, ವಕ್ರವಾಕ್ಯಂ ಕೋಕಿಳಂಗಳೊಳ್, ಉತ್ಕಂಠತೆ ಮಯೂರಂಗಳೊಳ್, ಆಱಡಿ ತುಂಬಿಯೊಳ್, ಅಭಿಮಾನಹಾನಿ ವಿರಹಿಗಳೊಳ್, ಹಾಹಾಕಾರಂ ಹೋಮಮನ್ತ್ರಾಕ್ಷರಾಂತ್ಯದೊಳ್, ವಂಶಚ್ಛೇದಂ ಮೇದರೊಳ್, ನಿಷ್ಕಾರುಣ್ಯಂ ಭೂಷಣಂಗಳೊಳ್, ನಿರ್ಗುಣತ್ವಂ ಬಿಡುವೂಗಳೊಳ್, ಅಗ್ರಹಾರಪೀಡೆ ಯುವತೀಕುಚಂಗಳೊಳ್, ನಿಗಳನಿರೋಧಂ ಮದಗಜಂಗಳೊಳ್ ಊನ್ಮಾರ್ಗತೆ ಜಾತ್ಯಶ್ವಂಗಳೊಳ್. ವಕ್ರಚಾಪಂ ಸರ್ಪಂಗಳೊಳ್, ಪಙ್ಕ್ತಿಭೇದಂ ಲಿಪಿಗಳೊಳ್ ಅಕ್ಕುಮಲ್ಲದೆ ಜನಪದದ ಜನಂಗಳೊಳಿಲ್ಲ. ಅದಲ್ಲದೆಯುಂ

---

1 ವಿಬುಧಸಂಕುಲಂ (ಕ) 2 ಭಂಗತರಂಗಂ (ಕಖ) 3 ವನದ್ರುಮನಿಬಿಡದೊಳ್ (ಕಖ)

ವೃ|| ದಳಿತಾಬ್ಜಪ್ರಸರಂ ಸರಂ ಕುಸುಮಮಾಳಾರಾಮಮಾರಾಮಮು
ಜ್ಜ್ವಳರತ್ನಾರ್ಚಿರಲಂಕೃತಂ ಕೃತಕಶೈಲಂ ರಾಜಕೀರಚ್ಛದಾ
ನೀಳೋಲತ್ಕಣಿಶಾಳಿ ಶಾಳಿ [1]ಜನ[1]ಚೇತೋನಂದನಂ ನಂದನಂ
ಲಳಿತಶ್ರೀಪರಿರಂಜನಂ ಜನಮೆನಲ್ ಚೆಲ್ವಾದುದುರ್ವೀತಳಂ ೨

ಬಲಿರಾಜ್ಯಂ ಸತತಂ ಪ್ರಜಾಪ್ರತತಿಗೆಲ್ಲಂ ಯೌವನಶ್ರೀಭರಂ
ಸಲೆ ಕಾಂತಾತತಿಗೆಲ್ಲಮೂರ್ಜಿತವಸಂತಂ ಸಂತತಂ ನಂದನಾ
ವಲಿಗೆಲ್ಲಂ ರತಕೇಳಿರಾಗವನಿಶಂ ಸ್ತ್ರೀಪುಂಪ್ರಜಕ್ಕೆಲ್ಲಮು
ಜ್ಜ್ವಲಚಂದ್ರಾತಪ[2]ಮೊಪ್ಪುಗುಂ[2] ರಜನಿಜಾತಕ್ಕೆಲ್ಲಮಾದೇಶದೊಳ್ ೩

ಉ|| ದಾರಿಯ ನಂದನಂಬಿಡಿದು ಪೂತ ಕೊಳಂ ಕೊಳದೊಳ್ ಬಟಲ್ಕೆಯಂ
ಬಾರಿಸಲೆಂದು ಬಂದ ಪಥಿಕರ್ ಪಥಿಕಾನಯನಪ್ರಭಾಮೃತಾ
ಸಾರದೆ ತೀವಿ ಬರ್ಪ ಪರಿಕಾಲ್ ಪರಿಕಾಲ್ಗಳ ನೀರನುಣ್ಬ ಕೇ
ದಾರವನಂ ಮನಂಗೊಳಿಸುತಿರ್ಪುದು ಭೂವನಿತಾವಿಭೂತಿವೋಲ್ ೪

ವೃ|| ಸಲೆ ಕಾಲಂ ಪಿಡಿದೆತ್ತಿರಲ್ ಭುವನಮೆನ್ನಿರ್ದಲ್ಲಿಗಾಂ ಮುನ್ನವಾ
ದೊಲವಿಂದಂ ತಲೆಗೊಯ್ಸಿಕೊಂಡೆನೆನುತುಂ ಲಜ್ಜಾಮಹಾಭಾರದಿಂ
ತಲೆವಾಗಿತ್ತೆನೆ ಪಕ್ವಶಾಳಿ ಕಣಿಶಾಳೀನಮ್ರಮೊಪ್ಪಿರ್ದದೇಂ
ಗೆಲೆವಂದತ್ತೊ ಸುವರ್ಣವರ್ಣದಿನಿಳಾಶ್ರೀಯುಟ್ಟ ಪೊಂಬಟ್ಟೆವೋಲ್ ೫

ಕಳಮಕ್ಷೇತ್ರದುಪಾಂತನಂದನದೊಳಿರ್ದಾನಂದದಿಂ ಪಕ್ಕಿಸೋ
ವ ಳತಾಂಗೀಜನದೊಂದು ಮೆಲ್ಲುಲಿಪುಮಂ ಕೇಳ್ದಂತದಂ ತದ್ವನಾಂ
ತಳತಾನೀಕದಿನುಣ್ಮುತಿರ್ಪ ಕಳಕಂಠಧ್ವಾನಸಂತಾನಮೆಂ
ದಿಟಿಕೆಯ್ದೆಂತುಮಗಲ್ದು ಪೋಗವು ರುವತ್ಕೀರಾಳಿ ಕೇದಾರದಿಂ ೬

ಉ|| ಭೋಂಕನೆ ಬಂದುವಂದು [3]ತೊಸೆದಿಕ್ಕೆಯ[3]ನಿರ್ಕೆಲದೊಳ್ ಕಲಂಕುವ
ನ್ನಂ [4]ಕುಡುಕಿಂಗೆ[4] ಪಾಯ್ದುಲಿವ ತಮ್ಮುಲಿಪಿಂ ಗಿಳಿಸೋವ ಪಾಮರೀ
ಸಂಕುಳದೊಂದು ಮೆಲ್ಲುಲಿಪುಮಂ ನಸುಗೇಳದೆ ನಿಂದ ಕೀರವೃಂ
ದಂ ಕಳಕೂಜಿತಾನುಮಿತಮಾದುದು ಶಾಡ್ವಲಗಂಧಶಾಲೆಯೊಳ್ ೭

---

[1] ವನ (ಕ) ವರ (ಗ) [2] ಮೊಮೆರ್ಯುಂ (ಕಖ) [3] ತೊಸೆದಿಕ್ಕೆಯಿ (ಮೊಅ)
[6] ಕುಟಕಿಂಗೆ (ಕಖ)

2

ಚಂ॥ ವಿಕಸಿತಮಾದ ಕಾಂಚನಸರೋರುಹಷಂಡದ ಪರ್ಬುಗೆಯುಂ ತದಂ
ತಿಕದ ಸುವರ್ಣವರ್ಣಕಣಿಶಾಳಿಯ ಶಾಳಿಯದೊಂದು ಪರ್ಬುಗೆಯುಂ
ಶುಕತತಿ ನೋಡಿ ನೋಡಿ ನೆಱಿ ನಿಟ್ಟಿಸಲಾಱದೆ ಮಂಜುಳಾರವಂ
ಪ್ರಕಟಿಸಿ ಪರ್ಬಿಗೊಂಡು ಸುೞಿದಾಡುವುದಲ್ಲಿಯ ಕೆಯ್ವೊಲಂಗಳೊಳ್ ೮

ಮ॥ ವನಲಕ್ಷ್ಮೀಶ್ವಸಿತಂಬೊಲಾಡುವೆಲರಿಂದಂ ಕಂಪಿಸುತ್ತಿರ್ಪ ಕ
ರ್ಬಿನ ಕೋಲ್ಗಳ್ ಬಿಡದೊಂದನೊಂದೊರಸೆ ಪರ್ವಾಘಾತದಿಂದುರ್ಬಿ ಭೋ
ರೆನೆ ಪಾಯ್ತಿರ್ಪ ರಸಪ್ರವಾಹಚಯಮಾವಾಳಂಗಳಂ ತೀವುತಿ
ರ್ಪಿನಮಿರ್ದತ್ತಮೃತಾಕರಾವನಿಯವೊಲ್ ಪುಂಡ್ರೇಕ್ಷುವಾಟೀಕುಲಂ ೯

ಚಂ॥ ಅಲರ್ದಲರ್ಗಂಡನುಂಡು ಕಳನಾದದಿನಾಣತಿಗೆಯ್ವ ತುಂಬಿ ಕೋ
ಮಲಕಳಿತಾರಸಾಸವಮನೀಂಟೆ ಮುದೋತ್ಸವದಿಂ ಕುಕಿಲ್ವ ಕೋ
ಗಿಲೆ ಮಿಡಿಯಂ ಕರ್ದುಂಕಿ ನಲಿದಾಡುವ ರಾಜಶುಕಂ ಸರೋಜಕಂ
ದಲಮನೊಱಲ್ದು ಕರ್ಚಿ ಸುೞಿಸಂಚಿಗೆ[1] ಇಲ್ಲದುದಿಲ್ಲ[1] ನಂದನಂ ೧೦

ಉ॥ ಪಾರಡೆ ಕಾಮುಕವ್ರಜಮನಾರ್ದಿಸುವಂಗಜವೀರನಸ್ತ್ರಭೀಂ
ಕಾರನುಮಮ್ಮಿಜಂ ನೆರೆವ ನಲ್ಲರ ಸಪ್ರಣಯಪ್ರಕೋಪಹೂಂ
ಕಾರಮುಮುಲ್ಲಸತ್ಕುಸುಮದಿಂ ಪೊರೆದೇಱ್ವಳಿಜಾಲದೊಂದು ಝಂ
ಕಾರಮುಮೊರ್ಮೆಯುಂ ತವದು ಭಾವಿಪೊಡಲ್ಲಿಯ ನಂದನಂಗಳೊಳ್ ೧೧

ವ॥ ಅಂತತಿಶಯಶೋಭಾವಿಷಯಮಾದ ವಿಷಯಾಂತರಾಳದೊಳ್

ಚಂ॥ ಬಿದಿ ಮನದೆಚ್ಚಱಿಯಿಂ ಭುಜಗಲೋಕದ ಮಾನವಲೋಕದಿಂದ್ರಲೋ
ಕದ ಬಹುಸಾರವಸ್ತುಗಳನೊಂದೆಡೆಗೆಯ್ದೆ ತೆರಳ್ಚಿ ತಂದು ಮಾ
ಡಿದನತಿರಮ್ಯಮಂ ಪುರಮನೆಂಬಿನೆಗಂ ಯಮುನಾ[2]ತಟಪ್ರದೇ
ಶ[2]ದೊಳೆಸೆದಿರ್ಪುದಲ್ತೆ ಮಧುರಾಪುರಮರ್ಧಶಶಾಂಕಸನ್ನಿಭಂ ೧೨

ಮ॥ಸ್ರ॥ ತಿಳಿನೀರಿಂ ನೆಯ್ದಿಲಿಂ ತಾವರೆಯಿನೆಸೆವ ಲೀಲಾಸರಸ್ಸಂಕುಳಂ ಕೆಂ
ದಳಿರಿಂ ಪೂವಿಂ ಫಲವ್ರಾತದಿನಿಡಿದ ರಸಾಳದ್ರುಮಶ್ರೇಣಿ ಪೊನ್ನಿಂ
ಪಳುಕಿಂ ಮಾಣಿಕ್ಯದಿಂ ತೀವಿದ ಕೃತಕನಗೇಂದ್ರಾಳಿ ತಳ್ತಿರ್ಪೆವಿಂಡಿಂ
ಗಿಳಿವಿಂಡಿಂ ನೋಗೆವಿಂಡಿಂ ಸೊಗಯಿಸಲೆಸೆಗುಂ ತತ್ಪುರೋದ್ಯಾನಮೆಂದುಂ ೧೩

1 ಇಲ್ಲದವಿಲ್ಲ (ಕಖ) 2 ತಟಸ್ಥದೇಶ (ಕಖ)

ಕಂ॥ ಲತೆಯೊಳಲತೆ ಮಾವಿಮ್ಮಾ
ವು ತೆಂಗು ಜೆಂಡೆಂಗು ಕೌಂಗು ಪೂಗೌಂಗೆಲಿಪ
ಳ್ಪಿ ತೊವಲ್ತೆಲೆವಳ್ಳಿ ನಗಂ
ಕೈತಕನಗಂ ಪಲಸು ಬಕ್ಕೆವಲಸಾ ಬನದೊಳ್ ೧೪

ಉ॥ ತಿಂತಿಣಿವಣ್ಣನಾಂತ ಕದಳಂ ಪದವಣ್ಪುದಿರ್ದೀಳೆ ಬೀಡೆನ
ಣ್ಣಿಂ ತುಱುಗಿರ್ದ ದಾಡಿಮಚಯಂ ಕಿಸುವಣ್ಮುಸುಕಿರ್ದ ನಾಗರಂ
ಗಂ ತನಿವಣ್ ಪೊದಱ್ದೆಸೆವ ಮಾವೆಳಗಾಯ್ಪೊಱೆತ ತಳ್ತ ತೆಂಗು ಬೇ
ರಿಂ ತುದಿಮುಟ್ಟೆ ಕಾಯ್ತು ಪಲಸೆಂಬಿವು ಕುಂದವು ನಂದನಂಗಳೊಳ್ ೧೫

ಮ॥ ಫಳವೆಂದುಂ ಕೞುನಣ್ಣಳಾಗವಲರೆಂದುಂ ಬೀಯುವಬ್ಜಾಕರಂ
ತಿಳಿದೆಂದುಂ ಬಗೆಗೊಳ್ಪುದುರ್ಕುಡುಗದೆಂದುಂ ತುಂಬಿಗಂ ಹಂಸೆಗಂ
ಗಿಳಿಗಂ ಕೋಗಿಲೆಗಂ ವಿಯೋಗಿಮಥನಕ್ಕೆಂದುಂ ವಸಂತಪ್ರಿಯಂ
ಮುಳಿಸಿಂದಾರ್ದಲರಂಬುವೊಯ್ದು ತೆಗೆದಿರ್ಪಂ ಬಿಲ್ಲನುದ್ಯಾನದೊಳ್ ೧೬

ಚಂ॥ ನೆರೆದಿಭಶಿಕ್ಷಕರ್ ಕಲಿಸಲೇರ್ವೆಸನಂ ಕಲುತಿರ್ಪ ಗಂಧಸಿಂ
ಧುರಚಯವೇಱಿದಾತನ ಮನಂ ಮನವಾಗೆ ಮನೋಜವಂಗಳಿಂ
ಪರಿವೆ ಹಯಾಳಿ ಶಸ್ತ್ರವಿದರೊಳ್ ಭರದಿಂ ನಿಜಶಸ್ತ್ರವಿದ್ಯೆಯಂ
ಪರಿವಿಡಿಗೆಯ್ವ ರಾಜಸುತರೊಪ್ಪುಗುಮಾಪುರಗೋಪುರಂಗಳೊಳ್ ೧೭

ಮ॥ಸ್ರ॥ ಬಡಪಾರ್ವಂ ಜಾಮದಗ್ನ್ಯಂ ತುಡೆ ವಿಶಿಖಮನೀರೆಲ್ಪಿತೆಣ್ಗಾವುದಂ ಮೆ
ಯ್ವೆಡೆದೋಡಿತ್ತೊರ್ಬಗಸ್ತ್ಯಂ ತನುಮುನಿ ಮುನಿದಾಪೋಶನಂಗೊಂಡೊಡೆತ್ತಂ
ಪುಡಿವಟ್ಟಿತ್ತೊಂದೆ ಧೀಂಕಾದುದು ಕಪಿಗಣಮಂಗೆಂದಗೞ್ ವಾರ್ಧಿಯುಂ ಕೇ
ಟ್ಪಡಿಕುಂ ನಾನಾಮರಾಳೀಬಹುಳಕಳಕಳಧ್ವಾನಸಂತಾನದಿಂದಂ ೧೮

*ವ॥ ಅಂತತಿಗಂಭೀರಮಾದ ಪರಿಖಾಚಕ್ರದಿಂದೊಳಗೆ

* ಈ ವಚನದಿಂದ ೩೫ನೆಯ ಪದ್ಯದ ಮುಂದಣ ವಚನದವರೆಗೂ ಇರುವ ಗ್ರಂಥಕ್ಕೆ ಪ್ರತಿಯಾಗಿ ಕೆಲವು ಪುಸ್ತಕಗಳಲ್ಲಿ ಈ ರಗಳೆಯಿದೆ:

ರಗಳೆ॥ ಎನೆ ಪೆಂಪಂ ತಳೆದಗಳಿಂದೊಳಗೆ । ನಿಜದೀಧಿತಿ ದೆಸೆತತಿಯಂ ಬೆಳಗೆ । ಮುಗಿಲಟ್ಟಳೆಗಳ್ಮುಗಿಲ ಮುರುಂಟೆ। ಪಟವಿಗೆಗಳ್ ದಿವಮಂ [1]ಮಿಳಿರ್ದುಪಿಂಟಿ[1] । ಚೆಂಬೊನ್ನ ಕೋಂಟೆ ಥಳಥಳಿಸಿ ಪೊಳೆದು । ಪರಿರಂಜಿಸೆ ನಭಮಂ ಮುಟ್ಟಿಬಳೆದು । ನಡೆನೋಟ್ಪರ ಕಣ್ಗಳ ಪಸಪೋಡೆ। ಪೊಸಪೊಂಗಳಸಂಗಳನಾಂತು ಕೂಡೆ। ದೇವಾಯತನಂಗಳ್ ಚೆಲ್ವು ಬೀಱಿ।ಸಂಗೀತಕಮವಱೊಳಗೊಪ್ಪಿ ತೋಱಿ। ರತಿಯುಂ ಸೌಭಾಗ್ಯದ ಬಲದಿನಲಿವ । ಬಸುಕೆಳೆಯೊಳ್ಪಾರತಿಗೆದರಿ ಮಲೆವ ।

[1] ಮಿಳಿರ್ದಿಂ ಟಿ (ಮೊಅ)

ಉ॥ ಶ್ರೀಪತಿ ಲೀಲೆಯಿಂ ವಸುಮತೀಭರಮಂ ತವಿಸಲ್ಕೆ ಬಾಲ್ಯದಿಂ
ದೀಪುರದಲ್ಲಿ ಪುಟ್ಟಿದಪನಿಂ ಗಡ ನೋೞ್ಪೆನು ಮರ್ತ್ಯವೇಷಸ
ದ್ರೂಪನನೆಂದು ಭೋಗಿಪತಿ ತನ್ನ ಸಹಸ್ರಫಣಾಮಣಿದ್ಯುತಿ
ವ್ಯಾಪಿಸೆ ಸುತ್ತಿ ನಿಂದನೆನೆ ಕೋಂಟೆಯ ಪೊಂದೆನೆಗಳ್ ವಿರಾಜಿಕುಂ ೧೯

ಕಂ॥ ಮಿಗಿಲೆನಿಪಟ್ಟಣೆಯಿಂದಂ
ಮುಗಿಲಂ ಮುಟ್ಟುವ ಪತಾಕೆಯಿಂ ತೋರಣದೋ
ಳಿಗಳಿಂ ರವಿಹಿಮಕರವೀ
ಧಿಗಳಿಂದಂ ಪುರಮುದೇಂ ಮನಂಗೊಳಿಸಿದುದೋ ೨೦

ಮ॥ ಕರಿಯಂ ಶಿಕ್ಷಿಪ ವಾಜಿಸಂಕುಳಮನಂತೊಲ್ದಟ್ಟಿಯಿಂ ತಿರ್ದುವ
ಕ್ಕರಮಂ ಪೇೞುವ ಶಸ್ತ್ರಕೌಶಲಧನುರ್ವಿದ್ಯಂಗಳಂ ಬೋಧಿಪಿ
ರ್ಪರದಿಂ ಮಲ್ಲರ ಹೋರಿಪಾ ಸಕಲವಾದ್ಯಶ್ರೇಣಿಯಂ ಬಾಜಿಪ
ಬ್ಬರಮೆತ್ತಂ ನೆರೆ ಕುಂದದಿರ್ಕುಮನಿಶಂ [1]ರಥ್ಯಾಜನಾತಿಥ್ಯದಿಂ[1] ೨೧

ವ॥ ಅಂತೆಸೆವ ಮಹಾರಭಸದಿನತಿಮನೋಹರತೆಯನೊಳಕೊಂಡಿರ್ಪ ರಮ್ಯ ಹರ್ಮ್ಯನಿರ್ಮಿತಮಣಿಪ್ರಭಾವಪುಂಜರಂಜಿತದಿನಿರ್ತರಂಬಿಡಿದು ಮೆಱೆವ ನಾನಾಸದನ ಪಙ್ಕ್ತಿಗಳೊಳತಿಸೊಬಗುವೆತ್ತಿರ್ಪುದದೆಂತೆಂದೊಡೆ

ಮೇನಕೆಯ ವಿಳಾಸಮನೀೞ್ದುಕೊಂಡ। ರಂಭೆಯ ರೂಪಂ ನೆರೆ ಸೂಱೆಗೊಂಡ। ಪೆಸರೂರ್ವಸಿಯಂ ಕೀೞ್ಪಡಿಸಲಾರ್ಪ। ಫಣಿಕಾಂತೆಯರಂದದನೊಪ್ಪಿ ತೋರ್ಪ। ಕಿನ್ನರಿಯರ ಚೆನ್ನಂ ಪೞಿದು ನಗುವ। ಖಚರಿಯರಂ ಭಾವದೊಳೆಯ್ದೆ ಮಿಗುವ। ಜತ್ತಕರಂ ಸುತ್ತಿಂದೊಳಗುಮಾೞ್ಪ।ವಾತ್ಸಾಯನನಂ ಪೊಱವರಸುಮಾೞ್ಪ। ಕಂಡವರಂ ಮೂಂವಣ್ಣಂಬರಿಪ। ನವವಾರವಿಳಾಸಿನಿಯರಿರುತಿರ್ಪ। ನೆಲೆ ವನೆಗಳಿನೊಪ್ಪುವ ಸೂಳೆಗೇರಿ। ಸೊಗಯಿಸುತಿರೆ ವಿಟಜನಹೃದಯಹಾರಿ। ಗಡಿಯಿಲ್ಲದ ನೀಳ್ದಂ ಗಡಿಗಳಿಂದ। ಮಲ್ಲಲ್ಲಿಗೆ ಬಜ್ಜರವಸರದಿಂದ। ಮಲ್ಲಲ್ಲಿಗೆ ಘಟ್ಟವಳರ್ಕಳಿಂದ। ಮಲ್ಲಲ್ಲಿಗೆ ಪೂವಿನಸಂತೆಯಿಂದ। ಮಲ್ಲಲ್ಲಿಗೆ ಪೆಸರರವನೆಗಳಿಂದ। ಮಲ್ಲಲ್ಲಿಗೆ ಮಂದುರದೋಳಿಯಿಂದ। ಮಲ್ಲಲ್ಲಿಗೆ ಕರಿಗಳಸಾಲೆಯಿಂದ। ಮಲ್ಲಲ್ಲಿಗೆ ತೀವಿದಕೊಳಗಳಿಂದ। ಮಲ್ಲಲ್ಲಿಗೆ ದೂಸಿಗವಸರದಿಂದ। (ಮಲ್ಲಲ್ಲಿಗೆ ಗಂದಿಗವಸರದಿಂದ) ಮಲ್ಲಲ್ಲಿಗೆ ಕಂಚಿನ ವಸರದಿಂದ। ಮಲ್ಲಲ್ಲಿಗೆ ತಂಬುಲವಸರದಿಂದ। ಮಲ್ಲಲ್ಲಿಗೆ ಲೀಲೋದ್ಯಾನದಿಂದೆ। ಮಧುರಾಪುರವೊಪ್ಪಮನಪ್ಪುಕೆಯ್ದು। ಸುರಪತಿಪುರದಳವುಮನಿೞಿಕೆಯ್ದು। ಮಧುರಿಪು[2]ಕೃಪೆಯತಿಶಯದೆಸೆವುದಿಂತು[2]। ಪೊಗೞಲ್ಫಣಿಪತಿಗಮಸಾಧ್ಯಮಿಂತು

---

[1] ರಥ್ಯಂ ಜನಾತಿಥ್ಯದಿಂ (ಖಮೊಱ) [2] ಕೃಪೆಯಿಂ ನಯಮೆಸೆವುದಿಂತು (ಮೊಱ)

ಕಂ|| ಪರದರ ಪಾರ್ವರ ಗೋಟಿಾ
ಯ್ಲರ ಜೋದರ ಮಾಲೆಗಾಱ ಮಣಿಗಾಱರ ಪ
ಲ್ಲರ ಮಂಡಳಿಕರ ಸಾಮಂ
ತರ ದಂಡಾಧೀಶರಾಲಯಂಗಳ್ ಮೇಱೆಗುಂ ೨೨

ವಿವಿಧಮಣಿಶಬಲಿತಂ ರ
ಮ್ಯವಿಧಾನ ಸುವರ್ಣಕಲಶಕಿರಣೋದ್ದ್ಯೋತಂ
ಅವಿರಳವಾದ್ಯಸಮೇತಂ
ಧವಳಪ್ರಾಸಾದಸಾರ ದೇವಾಗಾರಂ ೨೩

ಪಳುಕಿನ [1]ನೆಲೆಗಟ್ಟುಗಳುಂ[1]
ಕಳಧೌತಸುರತ್ನಕೃತಭಿತ್ತಿಸ್ತಂಭೋ
ಜ್ಜ್ವಳಮುಕ್ತಿಕಾವಿತಾನಂ
ಥಳಥಳಿಪುವು ಪುರದ ನಿಳಯನಿಳಯದೊಳೆಲ್ಲಂ ೨೪

ವ|| ಅಂತತಿರಮಣೀಯತೆಯನೊಳಕೊಂಡಖಿಳಜನಮನೋರಂಜನಮಾದ ಬೀದಿಗಳೊಳ್

ಕಂ|| ಸೌರಭಕುಸುಮವಿಹಾರಂ
ಪೌರವಧೂಶ್ವಸಿತಪದ್ಮಗಂಧವಿಚಾರಂ
ಸಾರತರಶೈತ್ಯಭಾರಂ
ಸ್ವೈರಚರಂ ಸುಳಿವುದಲ್ಲಿ ಚಾರುಸಮೀರಂ ೨೫

[2]ಸಾಲಿಡೆ ಕಟಾಕ್ಷಮಾಲೆ ವಿ
ಲೋಲತರಭ್ರಮರಮಾಲೆಯೆಂಟಿಸೆ ಸುಮನೋ
ಮಾಲೆಯ ಬಂಬಲ್ವೆಳಗುಂ
ಲೀಲೆಯುಮೊಡನೆಸೆಯೆ ಮಾಲೆಗಾರ್ತಿಯರೆಸೆವರ್ ೨೬

ಬಂದುಗೆಯೊಳ್ ನಯನದ್ಯುತಿ
ಬಂದುಗೆ ಮಲ್ಲಿಗೆಯ ಪೂಗಳೆಂದೀವರ್ ಕಂ
ಪಂ ದಳವೇಱಿಪರಳಿಗಿಂ
ಪಂದಳವಡೆ ಪುಲ್ಲವಡಿತಿಯರ್ ಸೊಗಯಿಸುವರ್ ೨೭

---

1 ನೆಲೆಗಟ್ಟುಗಳಿಂ (ಖ) 2 ವ|| ಮತ್ತಲ್ಲಿಂ ಬಳಿಯಂ ಎಂದು ಹೆಚ್ಚಾಗಿದೆ (ಮೊಅ)

ಮಲ್ಲಿಗೆಯಂ ನಗೆಯಿಂ ಕರ
ಪಲ್ಲವದಿಂದರುಣಸರಸಿರುಹಮಂ ರದನದೆ*
ಮೊಲ್ಲೆಯ ಮುಗುಳಂ ತೋರ್ಪರ್
ಸಲ್ಲಲಿತಾಂಗದ ಲತಾಂಗಿಯರ್ ಮಾನಿನಿಯರ್ ೨೮

ಉ॥ ಎತ್ತಿದ ಪುಷ್ಪಮಾಲೆ ಲಲಿತೇಕ್ಷಣತೀಕ್ಷ್ಣ ಮರೀಚಿ [1]ಗಾಡಿಯಂ
ಬಿತ್ತುವ[1] ಪುರ್ವುಗಳ್ ಪೊಸತಿದೆಂದು ನಿರೀಕ್ಷಿಸಲೊಂದು ದೇಸೆಯಂ
ಪೆತ್ತು ಮದಾಳಿಶಿಂಜಿನಿಯನಾ ಕುಸುಮಾಸ್ತ್ರಮನಿಕ್ಷುಚಾಪಮಂ
ಚಿತ್ತಜನಾಂತು ನಿಂದನೆನೆ ವಿಕ್ರಯಿಪರ್ ಸತಿಯರ್ ಲತಾಂತಮಂ ೨೯

ವ॥ ಇಂತೆಸೆವ ಮಾಲಾಕಾರವಧೂಜನಂಗಳಿಂ ಚೆಲ್ವುವೆತ್ತು ಪಲ್ಲವೋಲ್ಲಸಿತಮಪ್ಪ ಗಾಣಿಕ್ಯಸದನಪಙ್ಕ್ತಿಗಳೊಳ್

ಕಂ॥ ರತಿಯಂ ಕಳೆಗುಂದಿಪ ಭಾ
ರತಿಯಂ ಜಾಣಿಂದೆ ಪೞಿವ ಸೊಬಗಿಂದಂ ಸುರ*
ಸತಿಯರನಿೞಿಕೆಯ್ವಗ್ಗದ
ಸತಿಯರ್ ಪೆಸರ್ವೆತ್ತ ವಾರನಾರಿಯರೆಲ್ಲಂ ೩೦

ಸ್ಮರನಂ ಪೂಜಿಪ ರತಿಯಂ
ಪಿರಿದರ್ಚಿಪ ಪರಕೆಯಂ ವಸಂತಂಗೆತ್ತುವ†
ನೆರೆದಿಂದುವನೊಲಿಸುವ ವಾ
ರಿರುಹದಳಾಕ್ಷಿಯರ ಕಳಕಳಂ ಮನೆಮನೆಯೊಳ್ ೩೧

ಓದಿಸುವ ಗಿಳಿಯನಂಚೆಯ
ನಾದರದಿಂ ನಡೆಯಿಪುಲಿವ ಪಾರಾವತದ ವಿ†
ನೋದಮನೋಲ್ದೀಕ್ಷಿಸುವ ತ
ಳೋದರಿಯರ್ ಗುರುನಿತಂಬೆಯರ್ ಸೊಗಯಿಸುವರ್ ೩೨

---

[1] ಗಾಡಿಯಂಚೊತ್ತಿದ (ಮೊಅ)

* ಈ ಪದ್ಯಗಳ ದ್ವಿತೀಯಪಾದಾಂತ್ಯದಲ್ಲಿ ಗುರುವಿಗೆ ಪ್ರತಿಯಾಗಿ ಲಘುದ್ವಯವಿದೆ. ಕ್ರಮವಾಗಿ ಅಲ್ಲಲ್ಲಿ ರದದಿಂ, ಸ್ವರ್ ಎಂದು ತಿದ್ದಿದರೆ ಕಂದದ ಗಣನಿಯಮವು ನೇರ್ಪಡುವುದು.

† ಈ ಪದ್ಯಗಳಲ್ಲಿ ದ್ವಿತೀಯಪಾದಾಂತ್ಯದಲ್ಲಿ ಗುರುವಿಗೆ ಪ್ರತಿಯಾಗಿ ಲಘುದ್ವಯವಿದೆ. ಕ್ರಮವಾಗಿ ವಸಂತಗುಯ್ಯಾ, ಪಾರಾವತದಾ ಎಂದು ತಿದ್ದಿದರೆ ಗಣನಿಯಮವು ನೇರ್ಪಡುವುದು.

ಮ॥ಸ್ರ॥ ಲಲಿತಭ್ರೂ ಕಾರ್ಮುಕಂ ಕೇಕರರುಚಿ ನನೆಗೋಲ್ ಕುಂತಳಂ ಮೌರ್ವಿಮಂಜೀ
ರಲಸದ್ಧ್ವಾನಂ ಧನುಷ್ಟಂಕೃತಮೆನೆ ವಿಶಿಖಾರೋಪಿತಾಕರ್ಣಚಾಪಂ
ಲಲನಾಯೂಥಂ ಬರಲ್ ಬೆಂಬಲಕೆ ಬರಿಸಿ ಕಾಮಾತುರವ್ರಾತಮಂ ಮೆ
ಲ್ಲೆಲರಿಂ ಪಂಚೇಷು ಗೆಲ್ಲಂಬಡೆವಿನ[1]ಮೆಸೆಗುಂ[1] ವಾರನಾರೀಕದಂಬಂ ೩೩

ವ॥ [2]ಅಂತೆಸೆದು[2] ಕಮನೀಯತರಸ್ವಾಂತಬಂಧುರಮಾಗಿ ಸೊಬಗುವೆತ್ತ ಪಣ್ಯಾಂಗನಾವೀಧಿಗಳೊಳಂದಂಬಡೆದಿರ್ದುಮತಿಮನೋಹರಮನಪ್ಪುಕೆಯ್ದಿರ್ಪುದದೆಂತೆಂದೊಡೆ

ಉ॥ ಮೇಳವಿಸಿರ್ದ ದಂಪತಿಜನಂ ನಲಿದಾಡುವ ರಮ್ಯಹರ್ಮ್ಯದಿಂ
ಕೇಳಿವನಂಗಳಿಂದೆಸೆವ ತಣ್ಗೊಳನಿಂ ಕಳಕಂಠನಾದದಿಂ
ಬಾಳರಸಾಲದಿಂ ನೆರೆವ ಭೋಗಿಗಳಿಂ ಮಣಿಕುಟ್ಟಿಮಂಗಳಿಂ
ಬಾಳೆಯರೊಟ್ಟಿನಿಂ ಸಕಲವೈಭವದಿಂದೆಸೆದಿರ್ಪುದಾಪುರಂ ೩೪

ವ॥ ಅಂತುಮಲ್ಲದೆ

ಚಂ॥ ಚೆಲುವಿಕೆಗಿಂಬು ಚೈತ್ರನೊಲಿದಾವಗಮಿರ್ಪೆಡೆ ಕಂತುಗಿಂತಿದೇ
ನೆಲೆಮನೆ ಸಂಪದಂ ಪದಪಿಗಿಂಪಿಡಿದೊಪ್ಪುವ ತಾಣ ಸೌಖ್ಯ ಸಂ
ದೊಲಿದಿಹ ಬೀಡು ಮೈಮೆಗೆ ತವರ್ಮನೆ ಸನ್ನಿಗೆ ಮೇರೆಯಾಗಿ ನಿ
ಚ್ಚಲುಮೆಸೆದಿರ್ಪುದಾನಗರಮಿಂದ್ರಪುರಕ್ಕಮುದಾತ್ತಮಗ್ಗಳಂ ೩೫

ವ॥ ಅಂತೆಸೆವ ನಗರಮಧ್ಯಪ್ರದೇಶದೊಳ್

ಕಂ॥ ಇದು ಬನಮಿದು ನೃಪಗೃಹಮೆಂ
ಬುದಮೋಘಂ ಸ್ಪರ್ಶನಾನುಮಿತಮಪ್ಪುದು ಪ
ಟ್ಟದ ಶುಕಪಿಕಾಳಿಗೆನೆ ನೃಪ
ಸದನಂ ಸೊಗಯಿಪುದು ಚಿತ್ರಮಣಿಶಬಲತೆಯಿಂ ೩೬

ಮ॥ ಅಹಿರಾಜಂ ದ್ವಿಸಹಸ್ರಜಿಹ್ವನಜೆಯುಂ ವ್ಯಾವರ್ಣಿಸಲ್ ಬಲ್ಲನೇ
ಮಹಿಯೊಳ್ ಮಾನವನೊಂದೆ ನಾಲಗೆಯೊಳಂತಾ ಭೂಭುಜಾಗಾರಮಂ
ಬಹುವಿಸ್ತಾರಮನಿಂದ್ರಪುಷ್ಪಕವಿಮಾನಾಕಾರಮಂ ತನ್ಮಹಾ
ಮಹಿಮಾಧಾರಮನತ್ಯುದಾರಮನಿಳಾಜೇತಶ್ಚಮತ್ಕಾರಮಂ ೩೭

ವ॥ ಆ ರಾಜನಿಳಯದೊಳ್

---

1 ಮಿಸುಗುಂ (ಮೊಅ) 2 ಅಂತೆಸೆವ (ಖ)

ಮ॥ ಯದುವಂಶಾಭರಣಂಗೆ ರಾಜ್ಯಭರಧುರ್ಯರ್ಗುಗ್ರಸೇನಂಗೆ ಪು
ಟ್ಟಿದನಭ್ರಮಕ್ಕೆ ಸಿಡಿಲ್ ಸುಧಾಬ್ಧಿಗೆ ಮಹಾಹಾಳಾಹಳಂ ಕಾನನ
ಕ್ಕೆ ದವೋಗ್ರಾಗ್ನಿ ಕಡಂಗಿ ಪುಟ್ಟಿದವೊಲಂತಾ ಕಂಸದೈತ್ಯಂ [1]ವಿಳಾ
ಸದಿನಿರ್ದಂ[1] ಸೆಱೆಗೆಯ್ದು ತಜ್ಜನಕನಂ ಸಾಮ್ರಾಜ್ಯಸಂಪತ್ತಿಯೊಳ್ ೩೮

ಕಂ॥ ಮಸಕದ ಹಾಳಾಹಳದೊಡ
ನೆಸೆವಿಂದುವ ಲೇಖೆ ಪುಟ್ಟುವಂದದಿನಾ ರಾ
ಕ್ಷಸನೊಡನೆ ಪುಟ್ಟಿ ದೇವಕಿ
ವಸುದೇವಂಗರಸಿಯಾಗಿ ಸುಖದಿಂದಿರ್ದಳ್ ೩೯

ವ॥ ಅಂತಿರ್ಪುದುಮೊಂದು ಸಮಯದೊಳ್ ಉಗ್ರಸೇನನ ಸೂನು ಸಿಂಹಾಸನಾ
ಸೀನನಾಗಿ ಲೀಲೆಯಿಂದೊಡ್ಡೋಲಗಂಗೊಟ್ಟಿರ್ದಲ್ಲಿ ಚಿತ್ರ ಚೀನಾಂಶುಕ ಸುಗಂಧಾನುಲೇಪನ
ನೂತ್ನರತ್ನಾಭರಣಂಗಳಿಂ ಶೃಂಗಾರಂಗೆಯ್ದು ಪರಿವೇಷ್ಟಿಸಿರ್ದಂಗನಾಜನಂಗಳಿಂ ಶೃಂಗಾ
ರರಸಮುಂ; ನಮುಚಿ ಸೂದನಪ್ರಚೋದಿತವಜ್ರಾಕರ್ಷಣಲೇಖಾವಿಸಂಕಟವ್ಯೂಢವಕ್ಷಸ್ಸ್ಥ
ಲರುಂ ಐರಾವತದಂತಿದಂತೋತ್ಪಾಟನಪಟು ಬಾಹುಪರಿಘರುಮಪ್ಪನೇಕವೀರ ದಾನವ
ಸೇನಾಗ್ರಣಿಗಳಿಂ ವೀರರಸಮುಂ; ಅಕ್ರೂರಾದಿಚತುರುಪಧಾವಿ ಶುದ್ಧಯಾದವಪ್ರಧಾನ
ಸಂತಾನದಿಂ ಶಾಂತರಸಮುಂ; ಎತ್ತಲಾನುಮವಸರಂಬಡೆದು ಬಂದೋಲೈಸುವಷ್ಟಲೋಕ
ಪಾಲಕರ ಕಳಕಳಮನುೞಿಯಿನೆಂದು ಜಡಿದು ನುಡಿವ ಕಣ್ಣಂ ಬಿಡುವ ಪಡಿಯಱರ
ತಂಡದಿಂ ರೌದ್ರರಸಮುಂ ; ಆಸ್ಥಾನವಲ್ಲಭನ ಮನಮನಱಿದು ನಗಿಸುವ ಕುಬ್ಜವಾಮನ
ಬಧಿರಮೂಕರ್ ಮೊದಲಾದ ಪಲತೆಱದ ಸಬ್ಬವಗಾಱರಿಂ ಹಾಸ್ಯರಸಮುಂ; ತಂತಮ್ಮ
ಸರ್ವಸ್ವಮಂ ಕೊಟ್ಟನುಗ್ರಹಂಬಡೆಯದೆ ನಿಗ್ರಹಶಂಕಾಭರಾತಂಕಿತಹೃದಯರಾದ ಅಂಗ
ವಂಗ ಕಳಿಂಗ ಕೊಂಗ ಮಾಳವ ಚೋಳ ನೇಪಾಳ ಸಿಂಹಳ ಪಾಂಡ್ಯ ಗೊಲ್ಲ ಪಲ್ಲವ
ಘೂರ್ಜರ ಬರ್ಬರ ಪಾರಸೀಕ ಪಾರಿಯಾತ್ರ ಹಂಮೀರ ಡೊಕ್ಕಾರ ತುರುಷ್ಕ ಮರುಪ್ರಭೃತಿ
ಭೂಪಾಲಕರಿಂ ಭಯಾನಕರಸಮುಂ; ಇತ್ತಲಸುರೋತ್ತಮ ಕೋಪದಿಂ ಪುರ್ಬಿನಜರ್ಬಿನಿಂ
ಪೊಗೆ ನೆಗೆಯಲ್ಕತ್ತನಾಕಲೋಕಮುರಿಯುತಿರ್ದುದೆಂಬ ವಾರ್ತಾಪರಂಪರೆಯಿನದ್ಭುತ
ರಸಮುಂ; ಅಧಿನಾಥನಾಜ್ಞೆಯಿಂ ರಕ್ಷಾವಿನಿರ್ದಿಷ್ಟರೂಕ್ಷರಾಕ್ಷಸರ ತೋಳ ಬಾಳ ನೆೞಲೊಳ್
ಕೞಂಗಿ ಕರಿಗರಿಗಂದಿ ಕುಂದಿ ಮಿಡುಕಲಣ್ಮದಿರ್ಪ ದಾಯಾದ ಯಾದವರಿಂ ಕಾರುಣ್ಯರಸ
ಮುಂ; ಕಂಸನೊಳಡಱಿ ಮಿಱಿ ಮಾಱಾಂತು ಬದುರ್ಂಕುವನಾವನೆಂಬ ತಲ್ಲಣದಿಂ
ಪುಲ್ಲಂ ಕರ್ಚಿ ಕೊಲ್ಲದಿರೆಂದು ಪಲತೆಱದೆ ನಾಣಂ ತೊಱೆದು ಬೆಂಗೊಟ್ಟೋಡಿ[2]ದಿಂದ್ರನೋ
ಟಮಂ[2]ನಭಿನಯಿಸಿಯಾಡಿ ತೋರ್ಪ ನೈತಾಳಿಕರಿಂ ಬೀಭತ್ಸರಸಮುಂ; ಇಂತು ನವರಸಂ
ಗಳಿಂದಭಿನವರಸಂಗಳಾಗಿ ನೆಗೞುತ್ತುಮಿರೆ

---

[1] ವಿಲಾಸದಿನಿರ್ಪಂ (ಕ) [2] ಇಂದ್ರನ ನೋಟಮಂ (ಖ)

ಕಂ॥ ಆ ನೆಗೞ್ದ ಸಭೆಗೆ ಗಗನ
ಸ್ಥಾನದಿನಿೞಿತಂದನೊರ್ವೋದಲ್ ಪಗಲುಳ್ಕಂ
ತಾನೆನೆ ಮುನಿ ವಿಖ್ಯಾತಂ
ದಾನವಕುಲನಿಧನದೂತನಜಸಂಜಾತಂ ೪೦

ಬಂದು ಸಭೆವುಗೆ ಮುನೀಶಂ
ಗಂದಿದಿರೆೞ್ದರ್ಘ್ಯಹಸ್ತನೆಱಗಿದನಸುರಂ
ಸಂದೆಯಮೇನೆಱಗಿಸುವುದೆ
ದೊಂದುಗ್ರತಪಃಪ್ರಭಾವಮೆಂತಪ್ಪವರಂ ೪೧

ಪ್ರತ್ಯುತ್ಥಾನಾನಂತರ
ಮತ್ಯುನ್ನತಕನಕಪೀಠಮಂ ಮುನಿಗಿತ್ತಾ
ದೈತ್ಯಂ ಬೆಸಸುವುದೆನಗಾ
ದಿತ್ಯಪ್ರಭ ನಿಮ್ಮ ಬಂದ ಕಾರ್ಯಾಂತರಮಂ ೪೨

ವ॥ ಎನೆ ತದೀಯಕರ್ಣಾಭ್ಯರ್ಣಮಂ ಪೊರ್ದಿ

ಕಂ॥ ಅತಿದುಸ್ಸಹವಾರ್ತಾ ವಿಷ
ಲತೆಯಂ ನಾಂಟಿಸಲಿದಲ್ತೆ ಕಂಸಶ್ರೋತ್ರ
ಕ್ಷಿತಿಖನನಪವಿಶಲಾಕಾ
ತತಿಯೆನೆ ದಶನಾಂಶು ನಿಮಿರೆ ಮುನಿಯಿಂತೆಂದಂ ೪೩

ಮ॥ಸ್ರ॥ ಚತುರಾಸ್ಯೇಂದ್ರಾದಿದೇವರ್ ನಡೆದು ಜಲಧಿತಲ್ಪಂಗೆ ದೈತ್ಯೇಂದ್ರರುದ್ವೃ
ತ್ತತೆಯಂ ಪುಯ್ಯಲ್ಚೆ ಕಂಸಪ್ರಭೃತಿ ದಿತಿಜರಂ ಕೊಲ್ವೆನಾನೆಂದು ಪೂಣ್ದ
ಚ್ಯುತದೇವಂ ದೇವಕೀಗರ್ಭದೊಳುದಯಿಸಲೆಂದಿರ್ದನೆಂದಿಂತಿದಂ ಪೇ
ೞ್ದಿತಿಮಾತ್ರಂ ಪಾಂಡುಗಾತ್ರಂ ತಳರ್ದನಘಲತಾದಾತ್ರನಾ ಬ್ರಹ್ಮಪುತ್ರಂ ೪೪

ವ॥ ಆಗಳತ್ಯಂತವಿಸ್ಮಿತಸ್ವಾಂತನಾಗಿ ಕಂಸಂ ನಿಜಾಂತಿಕದೊಳಿರ್ದ ಮಂತ್ರಿಗಳ್ಗಾ ವೃತ್ತಾಂತಮಂ ಪೇೞ್ವುದುಮಾಕಾರ್ಯಮಾಕದರ್ಯಂಗೆ ವಿಪರ್ಯಯಪ್ರದಮೆಂದು ಸಕಳಸಂಯುತಜನಮುಂ ಮನದೊಳನುಮಾನಿಸೆ ತತ್ಪ್ರಯೋಜನಪ್ರತೀಕಾರವಿಸಮ್ಮತಮತಿಗಳಕ್ರೂರಾದಿ ಯಾದವ ಪ್ರಧಾನರ್ ನಾರದನ ತಥ್ಯವಚನಮನತಥ್ಯಂ ಮಾಡಲೆಂದು

ಮ॥ಸ್ರ॥ ಕಿಸಲಜಂ ಪೊತ್ತಿಕ್ಕುವೀ ದಂದುಗಮೆ ತನಗನುಷ್ಠಾನಮುಂ ಧ್ಯಾನಮುಂ ತ
ತ್ತ್ರ್ಯಸಂಖ್ಯೈಕಜ್ಞಾನಮುಂ ಕೇವಳಮೆನೆ ಕುಟಿಲಂ [1]ಕ್ಲಿಷ್ಟಕಂ[1] ಸಾಧುದುಷ್ಟಂ
ಪಿಸುಣರ್ ಪುತ್ತಾರೊ ಪೇೞ್ ನಾರದಮುನಿಯುವೊಲೆಂಬೀಪ್ರಧಾನೋಕ್ತಿಯಂ ರಾ
ಕ್ಷಸರಾಜಂ ಕೇಳ್ದು ದಂಷ್ಟ್ರಾಕಿರಣಧವಳಿತಾಸ್ಥಾನನಿಂತೆಂದನಾಗಳ್ ೬೩

ಕಂ॥ ತೊಡಳಲ್ತು ನಾರದಂ ಪೇ
ೞ್ದುದದೆಂತೆನಲೆನ್ನ ತೇರನೇಱಿಸಿ ವಿಭವಾ
ಸ್ಪದಮೆನೆ ದೇವಕಪುತ್ರಿಯ
ಮದುವೆಯ[2]ನಾನೊಲ್ದು ಮಾಡಿ[2] ಪೋಪುವ ಪಥದೊಳ್ ೬೪

ಅಮರಾಧ್ವದೊಳೊಂದಶರೀ
ರನುಹಾಧ್ವನಿ ಕಂಸ ಕಂಸ ಕೇಳ್ ದೇವಕಿಯ
ಷ್ಟಮಗರ್ಭದಾತನಿಂದ
ಷ್ಟಮಚಂದ್ರಂ ನಿನಗೆ ನೆರೆಗುಮೆಂದುದಮೋಘಂ ೬೫

ವ॥ ಅದಂ ಕೇಳ್ದಾಂ ಮದೀಯಜೀವಾಪಹರಣಕಾರಿವಿರೋಧಿವಿಷಸಸ್ಯಮುಮಶ್ಯ
ಮುದಯಿಸುವೀ ದೇವಕೀಗಾತ್ರಕ್ಷೇತ್ರಮನೀಗಳೆ ವಿನಾಶಮನೆಯ್ದಿಸುವೆನೆಂದು ಬಗೆದಂದು

ಕಂ॥ ಪೇೞ್ವೆ ಬಗೆಯಿರ್ಕೆ ಪಕ್ಕದ
[3]ಕೀೞ್ವಾಳನ್[3] ಕೈಯೊಳಿರ್ದ ಬಾಳಂ ಕೊಂಡಾ
ನೇೞ್ವುದುಮಾ ವಸುದೇವಂ
ಬಾೞ್ವಾಸೆಯೊಳಾದ ಖೇದದಿಂದಿಂತೆಂದಂ ೬೬

ಮ॥ ಅಹಿಮರ್ತ್ಯಾಮರವಿಷ್ಟಪತ್ರಿತಯಮುಮಂ ಮುಂ ಗೆಲ್ದ ನಿನ್ನೊಂದು ದು
ಸ್ಸಹದೋಸ್ಸಾಹದಿಂದಮಾದ ಜಸಮೆಲ್ಲಂ ಮಾಸುಗುಂ ತ್ವತ್ಪ್ರತಾ
ಪಹುತಾಶಂ [4]ಕಡುದಣ್ಪನೇಱುಗು[4]ಮಮೋಘಂ ಸ್ತ್ರೀವಧಂಗೆಯ್ಯೆ ಮಾ
ಣಹಹಿನ್ನೆತ್ತದಿರೀ ನಿಜಾನುಜೆಗೆ ನೀಂ ನಿಸ್ತ್ರಿಂಶ ನಿಸ್ತ್ರಿಂಶಮಂ ೬೭

ಉ॥ ಸೆಟ್ಟನೆ ಮೃತ್ಯುವೀಕೆಯ ಸುತರ್ ನಿನಗೆಂದೊಡೆ ಕೊಲ್ವುದೀಕೆಗಂ
ಪುಟ್ಟಿದ ಮಕ್ಕಳಂ ಪರಸಿ ಸೇಸೆಯನಿಕ್ಕಿದ ಕೈಯೊಳೆಂತು ಕೈ
ಮುಟ್ಟೆಱುದಪ್ಪೆ ಪೂಮುಡಿಯ ಬಾಲೆಯನೀಕೆಯನೆಂದು ಬಾಸಿಗಂ
ಗಟ್ಟಿದ ಶೀರ್ಷದಿಂದೆಱಗಿದಂ ವಸುದೇವನತೀವಭೀತಿಯಿಂ ೭೦

---

1 ಕೃಷ್ಣಕಂ (ಕಖ) 2 ನಾನಂದು ಕೊರ್ತುರ್ (ಮೊಅ) ನಾನಂದುಮಾಡಿ (ಕ)
3 ಕೀೞ್ವಾಳಿನ (ಕಖ) 4 ಕಡುದಣ್ಣಸೇಱುಗು (ಕಖ)

ವ॥ ಅದಂ ಕಂಡು

ಉ॥ ಆಂ ದಯೆಗೈದು ಕಾದನುಜೆಯಂ ವಸುದೇವಸಮೇತಮಂದು [1]ಮ
ನ್ಮಂದಿರ[1] ಮಧ್ಯಕೇಳಿಗೃಹದೊಳ್ ಸೆಱೆಗೆಯ್ದು ತದೀಯಗರ್ಭನಿ
ಷ್ಯಂದಿಗಳಪ್ಪ ಕೂಸುಗಳನಿಂ ಕೊಲಲಿರ್ದೆನದಿಂತುಟೆಂದು ನೋ
ಟ್ಪಿಂದನುರೂಪಮಾದುದಶರೀರಸಹೋಕ್ತಿಗೆ ನಾರದೇರಿತಂ ೫೧

ವ॥ ಎಂದು ನುಡಿದು ದೇವಕೀಗರ್ಭಾರ್ಭಕದ್ವೇಷಿ ಸುರದ್ವೇಷಿ ಕತಿಪಯದಿನಂಗಳಂ ಕಟೞಿಪಲಿರ್ತ್ತಲ್

ಕಂ॥ ನಂದನವನಮಧ್ಯದ ಕೊಳ
ದಿಂದಗಲದ ಹಂಸಮಿಥುನಮೆನೆ ಕಂಸಮಹಾ
ಮಂದಿರಮಧ್ಯದ ಮಣಿಗೃಹ
ದಿಂದಗಲದೆ ನಲಿಯುತಿರ್ದರಾ ದಂಪತಿಗಳ್ ೫೨

ವ॥ ಅಂತು ನಿಕಾಮಪ್ರೇಮದಿಂ ಕಾಮಸುಖಮನನುಭವಿಸುತ್ತಿರಲನ್ಯೋನ್ಯಪ್ರೀತಿಬೀಜದಿಂ ಜನಿಸಿದ, ನಿರ್ಭರಸ್ವೇದಸಲಿಲಸೇಚನದಿಂ ನಯಂಬಡೆದ, ಪುಳಕಜಾಳದಿಂ ಜಾಳಕಮನಪ್ಪುಕೆಯ್ದು, ಚುಂಬನಾದಿ ಬಹುಕಳಾಕಳಾಪದಿಂ ಪಲ್ಲವಿಸಿದ, ಸಮುಪದಸ್ಖಲನಸುಖನಿಮೀಳಿತೋನ್ಮೀಲಿತನಯನಂಗಳಿಂ ಮುಕುಳಿತಮುಂ ಕುಸುಮಿತಮುಮಾದ, ನಿಶ್ವಾಸಪವನನಿಂ ಪರಿಮಳಮಂ ಬೀಱುವ ವಧೂವರರಾಗವಿಷಯವಲ್ಲರಿ ಫಲಿತಮಾದುದೆನಿಸಿ

ಕಂ॥ ಆ ಗುಣವತಿ ಫಲವತಿ ತಾ
ನಾಗೆಯುಮಿದು ವಿಫಲಮೆಂದು ಪತಿಗುತ್ಸವಮಂ
[2]ತಾಗದು[2] ಸಂಸೃತಿ ಫಲವತಿ
ಯಾಗಿರೆಯುಂ ಯೋಗಿಗುತ್ಸವಂ ಪುಟ್ಟದವೋಲ್ ೫೩

ವ॥ ಅನ್ನೆಗಂ ನವಮಾಸಂ ತೀವಿ ದೇವಕಿ [3]ಬೆಸಲೆಯಪ್ಪುದುಮದಂ[3] ಗೃಹಾಧ್ಯಕ್ಷನಿಂದಾಕ್ಷಣದೊಳ್ ಕೇಳ್ದು ಕಂಸಂ ತದೀಯಬಾಲಹಿಂಸಾಪರನಾಗಿ ಸೂತಿಕಾಸದನಮಂ ಪೊಕ್ಕು, ವಿಶ್ರಾಂತಮಂತರಿಸೆ, ಪೆಂಪು ಸೊಂಪೞಿಯೆ, ಭುಜಬಳಮೊಳಸರಿಯೆ, ಮಾನಂ ಮ್ಲಾನತೆಯನೆಯ್ದೆ, ಜಸಂ ಮಸುಳೆ, ಧೃತಿ ಗತಿಗಿಡೆ, ಪೊಡರ್ಪಡೆಯುಡುಗೆ, ಕರುಣವಸರಣಂಗೆಯ್ಯೆ, ರೂಢಿ [4]ಗೋಡುಗೊಳೆ[4], ಧರ್ಮಂ ನಿರ್ಮದಮಾಗೆ, ಪೈಮೆ ಮೆಯ್ಯಱೆಯೆ, ಪಾೞಿ ಹೂೞಿ, ಪೆಸರ್ಗೆ ಪೆಸರೞಿಯೆ, ಹೇಯಂ ಮಾಯಮಾಗೆ, ಸತ್ತ್ವಂ

[1] ತನ್ಮಂದಿರ (ಕಖ) [2] ತಾಗದೆ (ಕಖ) [3] ಬೆಸಲೆಯಪ್ಪುದನಱಿದುಮದಂ (ಕಖ)
[4] ಗೋಣುಗೊಳೆ (ಮೊಅ)

ಸತ್ತ್ವಂಗಿಡೆ, ಕಣ್ಬುರಿ ಬೆಂಬರಿಯೆ, ಕುಲಂ ಮಲಿನಮೆನಿಸೆ, ವಿಳಾಸಮೋಸರಿಸೆ, ಬೆಡಂಗಡಂಗೆ, ಮೆಯ್ಯಮಾಸಾಱದಕೂಸಂ ತಲೆಕೆಳಗಾಗೆ ಪಿಡಿದುಕೊಂಡು ನಡೆಪನ್ನಂ, ಬೆನ್ನನೆ ಬಱಸಂದು ಮಂತ್ರಿಗಳಮಂತ್ರಮೆನೆ, [1]ವಯಸ್ಯರಪಹಾಸ್ಯಮೆನೆ,[1] ಧರ್ಮಜ್ಞರಧರ್ಮಮೆನೆ, ವೃದ್ಧರಸಂಬದ್ಧಮೆನೆ, ಪಾರ್ಥಿವರಪಾರ್ಥಮೆನೆ, ಸೋದರರಪವಾದಮೆನೆ, ಸೇವ್ಯರಸೇವ್ಯಮೆನೆ, ಯೋಗಿಗಳಬಿಯೋಗಮೆನೆ, ಧಿಷಣರ್ವಿಷಮಮೆನೆ, ಶಿಷ್ಟರಶಿಷ್ಟಮೆನೆ, ವಂಶಜರವಂಶಮೆನೆ, [2]ಪರಿಚಾರರಪಚಾರಮೆನೆ,[2] ನಾಕಿಗಳವಿವೇಕಮೆನೆ, ವಾರ್ತಿಕರಕೀರ್ತಿಯೆನೆ, ಮಾರ್ಗಣರಮಾರ್ಗಮೆನೆ, ಬಂಧುಗಳಬಂಧುರಮೆನೆ, ವಂದಿಗಳ್ ನಿಂದ್ಯಮೆನೆ, ಮಾಗಧರಾಗಡೆನೆ, ಸೂತರನೀತಿಯೆನೆ, ವಲ್ಲಭೆಯರ್ ಪೊಲ್ಲದೆನೆ, ಪುರಸ್ತ್ರೀಯರನ್ಯಾಯಮೆನೆ, ಸಮುದ್ರಕ್ಷೋಭದಂತೆ ಘೂರ್ಣಿಸುವ ಜನಕ್ಷೋಭಮಂ ಕೈಕೊಳ್ಳದೆ

ಕಂ|| ದಿವಿಜವಧಪಟುಗೆ ನಿನಗಭಿ
ಭವಮೀ ಶಿಶುವಧಮೆನಲ್ಕೆ ಮಾಣ್ಬೆನೆ ಮತ್ತೀ
ಭವಧಪ್ರಚಂಡಯಮದಂ
ಡವದೇಂ ಮಾಣ್ಬುದೆ ಪಿಪೀಲಿಕಾವಧವಿಧಿಯಂ ೫೪

ವ|| ಎಂದೊದಱಿ ಪಾಸಱೆಯೊಳ್ ಕೂಸನಪ್ಪಳಿಸಿ ಬಾಲನಿಬರ್ಹಣಗರ್ಹಣಾತಿರೇಕದಿಂ ಗತಶ್ರೀಕನಾಗಿ ನಿಜರಾಜಮಂದಿರಮಂ ಪೊಕ್ಕಂ. ಅದಲ್ಲದೆಯುಂ

ಕಂ|| ಕುತ್ಸಿತಮಿದೆಂಬಿನಂ ಪ್ರತಿ
ವತ್ಸರಮಾಕ್ರಮದೆ ಶಿಶುಗಳಾಱುಮನೞಿದಂ
ಹೃತ್ಸಂತಾಪದೆ ನಯನಗ
ಳುತ್ಸಲಿಲಂ ಕುಚದೊಳಿೞಿಯೆ ದೇವಕಸುತೆಯಾ ೫೫

ಉ|| ಲೋಕಮಬಲ್ವಿನಂ ಶಿಶುಗಳಾಱುಮವಿಕ್ರಮದಿಂದೆ ಕಾಲಕಾ
ಲಾಕೃತಿಕಂಸನಿಂ ಲಯಮನೆಯ್ದಿರೆ ದೇವಕಿ ಪೊತ್ತಳಂತತಿ
ವ್ಯಾಕುಳವೃತ್ತಿಯಂ ನಿಜಫಲಸ್ತಬಕಂ ವನಮತ್ತಹಸ್ತಿಹೇ
ಳಾಕರಭಗ್ನವಾಗೆ ಕಡುಪಾಡೞಿದೊಂದು ನವಾಮ್ರವಲ್ಲಿವೋಲ್ ೫೬

ವ|| ಅನ್ನೆಗಮತ್ತಲ್ ಪನ್ನಗಶಯನನವತರಣೋದ್ಯೋಗದಿಂ ನಾಗೇಂದ್ರನಂ ನೋಡಿ

---

1 ವೈಶ್ಯರಪಹಾಸ್ಯಮೆನೆ (ಕಖ) 2 ಪರಿಚಾರರಪರಿಚಾರಮೆನೆ (ಕಖ)

ಚಂ॥ ಎಲೆ ಫಣಿರಾಜ ನಿನ್ನ ಫಣರತ್ನಸಹಸ್ರದ ಮಧ್ಯರತ್ನದೊಳ್
ಜಲಧಿವೃತೋರ್ವಿಯಂ ಸರಸಕಿಂಶುಕಕುಟ್ಮಳಸಂಗಿಭೃಂಗಿಯಂ
ಗೆಲೆ ತಳೆದಾ ಮಹಾಮಹಿಮ ನೀಂ ತಳೆದುರ್ವರೆಗಾದ ಭಾರಮಂ
ತೊಲಗಿಪನಿಂ ಮದಂಶವಿಭುವಾ ವಿಭುಗಗ್ರಜನಾನು ಲೀಲೆಯಿಂ ೫೭

ಮ॥ಸ್ರ॥ ಎಲೆ ಮಾಯಾದೇವಿ ಲೋಕತ್ರಯಜನನಿ ಮದಾಜ್ಞಾಸಮುತ್ಪನ್ನೆಯುಷ್ಮ
ತ್ಕಲೆ ದಿವ್ಯಾಕಾರದಿಂ ಪುಟ್ಟುಗೆ ಭಗವತಿಯುಂ ಚಂಡಿಯುಂ ದುರ್ಗಿಯುಂ ವೀ
ರಲುಲಾಯಧ್ವಂಸಿಯುಂ ಕನ್ನೆಯುಮೆನಿಸುಗೆ ಪೂಜಿಕ್ಕೆ ಮಾಂಸಾದಿ ನಾನಾ
ಬಲಿಯಿಂ ದೇವರ್ ನರರ್ ತ್ವಚ್ಚರಣಕಮಲಮಂ ಶ್ರೀಜಯಶ್ರೀನಿಮಿತ್ತಂ ೫೮

ಮೊದಲೊಳ್ ನೀಂ ದೇವಕೀಗರ್ಭದ ಶಿಶುವನನಂತಾಂಶಮಂಕರ್ಷಣಂಗೆ
ಯ್ದದನಿಂಬಿಂ ತತ್ಸಪತ್ನೀಜಠರದೊಳಿರಿಸಲ್ಲಿಂ ಬಳಿಕ್ಕಂ ವ್ರಜಸ್ಥಾ
ನದ ನಂದಸ್ತ್ರೀಯ ಗರ್ಭಕ್ಕವತರಿಸಿ ಮದೀಯಾನುಸಂಜಾತೆಯಾಗೀ
ತ್ರಿದಶತ್ರಾಣಾರ್ಥಮಾಂ ದೇವಕಿಯ ಬಸಿಱೊಳಂಶಾಂಶದಿಂ ಪುಟ್ಟಿದಪ್ಪೆಂ ೫೯

ವ॥ ಎಂದು ಬೆಸಸುತಿರ್ಪನ್ನೆಗಮಿತ್ತಲೊಂದುದಿವಸಂ ದೇವಕೀದೇವಿ ಪುಷ್ಪವತಿಯಾಗಿ ಚತುರ್ಥಸ್ನಾನಾನಂತರಂ ಮಂಗಳಪ್ರಸಾಧನಮನಪ್ಪುಕೆಯ್ದು ವಸುದೇವನೊಡನೆ ಧವಳಶಯ್ಯಾತಳಮನಳಂಕರಿಸಿ ಬಹುವಿಧಪ್ರಣಯಕೇಳೀಕಳಾವಿಡಂಬಸಂಭೋಗಸುಖಸುಧಾರಸತೃಪ್ತಿಯಿಂ ಸುಖಸುಪ್ತೆಯಾಗಿರ್ಪಿನಂ

ಕಂ॥ ಧರೆಗವತರಿಸುವ ಲಕ್ಷ್ಮೀ
ವರನವತಾರಕ್ಕೆ ಪೀಠಿಕಾಪ್ರಕರಣದಂ
ತಿರೆ ಬಂದನಂತಭೋಗೀ
ಶ್ವರನಾ ದೇವಕಿಯ ಗರ್ಭದೊಳ್ ಜನಿಯಿಸಿದಂ ೬೦

ವ॥ ಅಂತನಂತನನಂತಶಯನನಾಜ್ಞೆಯಿಂ ಬಂದು ದೇವಕಿಯ ಗರ್ಭದೊಳ್ ನೆಲಸೆ ಕತಿಪಯಮಾಸಂಗಳ್ಗೆ

ಮ॥ ವನಜಾಕ್ಷಂ ಬೆಸವೇಳ್ದುದಂ ನೆನೆದು ಮಾಯಾದೇವಿ ಬಂದೆಯ್ದೆ ಕಂ
ಸನ ಮಾಱುಪ್ಪಂದಪಚಾರದಿಂದಿೞಿದುದಿಂದೀ ದೇವಕೀಗರ್ಭಮೆಂ
ಬಿನಮಾದೇವಿಯ ಗರ್ಭದರ್ಭಕನನತ್ತಲ್ ಗೋಕುಲಕ್ಕುಯ್ದು ಮೋ
ಹನಸಾಮರ್ಥ್ಯದೆ ನಿಂದು[1] ಯೋಜಿಸಿದಳಂತಾ ರೋಹಿಣೀಗರ್ಭದೊಳ್ ೬೧

[1] ಕುಸಾಮರ್ಥ್ಯವಿನಿಂತು (ಕ)

ವ॥ ಆಗಳಾ ದೇವಕಿ ಪುಷ್ಪವತಿಯಾದಂತೆ ಮಣಿಭೂಷಣಂಗಳಂ ತೊಲಗಿಸಿ ಕಂಸಕೃತಾಪಚಾರದಿಂ ನಿರ್ವಿಚಾರಮೆ ಪೊಲ್ಲಮೆಯಾದುದೆಂದು ಖೇದಿಸುತ್ತಿರಲದಂ ಕಂಡು

ಉ॥ ಸ್ನಿಗ್ಧತರಾಂಗಚೇಷ್ಟೆ ವದನೇಂದುಮರೀಚಿ ಕಪೋಲ[1]ಪಾಂಡುವಿಂ[1]
ದೃಗ್ಧವಳಾಂಶುವಂಬಿಕೆಗೆ ಗರ್ಭದ ಚಿಹ್ನಮದೆತ್ತವೋದುದೀ
ಮುಗ್ಧೆಗದೆಂತು ಪುಟ್ಟಿದುದೊ ಖೇದಮೆನುತ್ತುಮೆ ತತ್ಪ್ರಪಂಚಸಂ
ದಿಗ್ಧಯರಾತ್ಮಮೋಹಶಿಖಿ[2]ದಗ್ಧಯರೀಕ್ಷಿಸಿದರ್[2] ವಿದಗ್ಧೆಯರ್ ೬೨

ವ॥ ಅವರೊಳಗೊರ್ಬಳ್ ಮನದನ್ನಳಪ್ಪ ಕೆಳದಿ ತತ್ಪ್ರಪಂಚಮಂ ತಿಳಿಯ ಲೆಂದಾ ದೇವಕಿಯಂ ಮೆಲ್ಲನೆ ಪೊರ್ದಿ

ಚಂ॥ ಉಗುಟ್ಟಿಪುದಿಲ್ಲ ಚಂದ್ರಿಕೆಯನುಜ್ಜ್ವಳಲೋಚನೆ ಲೋಚನಂ ಮನಂ
ಬುಗೆ ನಯಮಂ ಪುದುಂಗೊಳಿಸಿತಿಲ್ಲ ಲತಾಂಗಿ ಲತಾಂಗಲೇಖೆ ಮೆ
ಲ್ನಗೆವೆಳಗಂ ತುಳುಂಕಿದಪುದಿಲ್ಲೆ ಸೆವಿಂದುಮುಖೀ ಮುಖೇಂದುವೇ
ಕೆ[3]ಗ[3] ನಿನಗಾವಕಾರಣದಿನಾದುದು ಪೇಳೆನಿತೊಂದು ಬೇಸಮಂ ೬೩

ವ॥ ಎಂದು ಬೆಸಗೊಳ್ವುದುಂ

ಕಂ॥ ಮುತ್ತಂ ಕೊಯ್ದೆಲಿಕ್ಕಿದ
ಬಿತ್ತರದಿಂ ಸುರಿವ ತೋರಕಣ್ಬನಿಯಿಂ ತ
ನ್ನುತ್ತುಂಗಕುಚಕೆ ಹಾರಮ
ನಿತ್ತಳ್ ಸತಿಯಿತ್ತುದಿಲ್ಲ ಸಖಿಗುತ್ತರಮಂ ೬೪

ವ॥ ಆಗಳ್ ದೇವಕಿ ಮನವನೆಂತಾನುಂ ಸಂತೈಸಿ ಕೆಳದಿಗಿಂತೆಂದಳ್

ಕಂ॥ ಪ್ರಸವಸಮಯಮನೆ ಪಾರ್ದಿ
ರ್ದಸುರಂ ಬಂದೆನ್ನ ಶಿಶುವನುಯ್ವುದುಗೆಟ್ಟೇ
ಬಸಿಱೊಳ್ ಕರಗಿಸೆ ಪಡೆದೆಂ
ಪೊಸತಪ್ಪದವಟಲನೆನ್ನೊಳಿಂದಿಂದುಮುಖೀ ೬೫

---

1 ಪಾಂಡುವೀ (ಮೊಅ) 2 ದಗ್ಧಯನೀಕ್ಷಿಸಿದರ್ (ಕಖ) 3 ಮುಖೇಂದುವೇಕೆಗೆ (ಮೊಅ)

ಕಳಹಂಸಂ ಸುಳಿಯದ ಪೂ
ಗೊಳನಮೃತರ್ಮ(ಚಿಯಿ)ಲ್ಲದಂಬರಚಕ್ರಂ
ಕಳಭಂ ಸಂಚರಿಸದ ವನ
ವಳಯಂ ಸುತನಾಡದಂಗಳಂ ರಂಜಿಕುಮೇ ೬೬

ಮ|| ಮೊಗಮಂ ನೋಡುವ ಲಲ್ಲೆಗೆಯ್ವ [1]ಮೊಲೆಯಂಬಬ್ಬಬ್ಬ ಜಾಬೆಂಬ[1] ಕೆ
ಮ್ಮಗೆ ಕಾಲ್ಪತ್ತುವ ದೂರದಿಂದೆ ಪರಿತಂದಪ್ಪಪ್ಪೆನುತ್ತಪ್ಪುವೊ
ಯ್ಯಗೆ ಜೆಯ್ಯಾಡುವ ಮೇಲುದಂ [2]ಮುಸುಕಿಡುತ್ತೋಯೆಂಬ[2]ದಾಯೆಂಬ ಮು
ದ್ದುಗಳಂ ಬೀಱುವ ಕಂದನೊಳ್ ನಲಿವ ಪೆಣ್ಣೇಂ ನೋಂಪಿಯಂ ನೋಂತಳೋ ೬೭

ಉ|| ಆನತಭೂಮಿಪಾಲಕಕುಲಂಗೆ ಹಿಮಾಂಶುಕುಲಂಗೆ ಕೀರ್ತಿಸಂ
ತಾನಕುಲಂಗೆ ಪೈಮೆಯ ಕುಲಾಂಗನೆಯಪ್ಪಿನಿತರ್ಕೆ ನೋಂತೆನಾಂ
ನೋನೆನೆ ನೋಡೆ ಕಂಸನ ವಿಜೃಂಭಣಮಂ ಜಯಿಸಲ್ ಸಮರ್ಥನಂ
ಭೂನುತನಂ ಯಶೋವಿದಿತನಂ ಸುತನಂ ಪಡೆವೊಂದು ನೋಂಪಿಯಂ ೬೮

ವ|| ಎನಲತಿಪ್ರೌಢೆಯೆನಿಸಿದ ಕೆಳದಿ

ಮ|| ಎನಸುಂ ನಿನ್ನ ತಪಕ್ಕೆ ಮೆಚ್ಚಿ ವರವಿತ್ತಂ ಶ್ರೀವರಂ ತಾನೆ ನಂ
ದನನಪ್ಪಂ ನಿನಗೆಂದು ಪೂರ್ವಭವದೊಳ್ ವೃದ್ಧೋಕ್ತಿಯಿಂ ದೇವಿ ಕೇ
ಳ್ದೆನಿದಂ ನೀಂ ಪಡೆದಪ್ಪೆಯಿನ್ನವಿತಥಂ ಕ್ಷತ್ರಾಧಮಾಕ್ಷೌಹಿಣೀ
ವನ[3]ದಾಹೋಗ್ರ[3]ಕೃಶಾನುವಂ ರಿಪುರವಿಸ್ವರ್ಭಾನುವಂ ಸೂನುವಂ ೬೯

ವ|| ಎಂದು ನುಡಿಯೆ

ಕಂ|| ನವಘನಮಾಲಾರವದಿಂ
ದವನೀದೇವಿಯ ನಿದಾಘಪರಿತಾಪಮುಡಂ
ಗುವವೊಲ್ ಸಖಿಯ ಸುಭಾಷಿತ
ರವದಿನಡಂಗಿದುದು ದೇವಕೀಹೃತ್ತಾಪಂ ೭೦

ವ|| ಆಗಳಾಗರ್ಭಸ್ಥಲನಸಮಯಮೆ ಋತುಸಮಯಮಾಗೆ ಚತುರ್ಥ ದಿವಸಮ
ನಂತರಂ ಮಜ್ಜನಂಬೊಕ್ಕು ಮಂಗಳಾಚಾರಮನಪ್ಪುಕೆಯ್ದು

---

1 ಮೊಲೆಯುಣ್ಬಬ್ಬಜಾಬೆಂಬ (ಖಮೊಅ) 2 ಮುಸುಕಿದತ್ತೋಯೆಂಬ (ಕಖಗ)
3 ದಾವೋಗ್ರ (ಕಖಗ)

ಚಂ॥ ವಿಸುಪ ದುಕೂಲದೊಳ್ಪುಡಿಗೆ ಚಂದನಕರ್ದಮದಣ್ಪು ಮಲ್ಲಿಕಾ
ಕುಸುಮಮನಾಂತ ಕುಂತಳಭರಂ ಸುಲಿಪಲ್ಗಳ ಕಾಂತಿಯಿಂ ಬೆಳ
ರ್ತೆಸೆವಧರಂ ತಳತ್ತಳಿಪ ಮುತ್ತಿನ ಪಚ್ಚಮನಂಗಕೀರ್ತಿಯಂ
ಪಸರಿಸೆ ಕೊಂಡ ಬೆಳ್ವಸದನಂ ಬಗೆಗೊಂಡುದು ಕೋಮಲಾಂಗಿಯಾ ೭೧

ಮ॥ ಇದು ಚಿತ್ರಂ ನಿಜವಕ್ತ್ರಶೋಭೆಯೊಳೆ ತಾರಾಧೀಶನಂ ಗೆಲ್ದುದ
ಲ್ಲದೆ [1]ತತ್ತಾರಕಚಂದ್ರಿಕಾಬಲಮುಮಂ[1] ಮುಕ್ತಾಫಲಾಲಂಕೃತೌ
ಘದುಕೂಲಂಗಳಿನೀಕೆ ಗೆಲ್ದಪಳೆನಲ್ ತನ್ವಂಗಿಗೇಂ ಚೆಲ್ವವೀ
ಱಿದುವೋ ಮುತ್ತಿನ ಪಚ್ಚಮುಂ ದುಗುಲಮುಂ ಮಾಂಗಲ್ಯಶೃಂಗಾರಮುಂ ೭೨

ವ॥ ತದನಂತರಂ

ಚಂ॥ ನೆಗಲ್ದುಡೆನೂಲ ಗೆಜ್ಜೆಯುಲಿ ಕೀರದ ಸಾರಿಕೆಯಿಂಚರಂಗಳಂ
ಮಿಗೆ ಚರಣಸ್ಫುರನ್ನಖಮಯೂಖದ ಬೆಳ್ಪುಪಹಾರಪುಷ್ಪಮಂ
ದ್ವಿಗುಣಿಸೆ ಸುಯ್ಯ ಕಂಪಗುರುಧೂಪದ ಕಂಪನದಿರ್ಪೆ ದೀಪಕಾಂ
ತಿಗೆ ತನುಕಾಂತಿ ಮಾರ್ಮಲೆಯೆ ಪೊಕ್ಕಳಿಳಾನುತೆ [2]ಸೆಜ್ಜೆವಾಡಮಂ[2] ೭೩

ಕಂ॥ ಜಳಶಯನವತರಿಸುವುದಂ
ತಿಳಿದಲ್ಲಿಂ ಮುನ್ನ ದುಗ್ಧವಾರಿಧಿ ತಳ್ಪ
ಚ್ಛಳದಿಂದವತರಿಸಿತ್ತಾ
ನಿಳಯದೊಳೆನೆ ಧವಳತಲ್ಪಮೆಸೆದುದನಲ್ಪಂ ೭೪

ಸ್ಮಿತಧವಳಕಮಳವನದೊಳ್
ರತಿರಾಗದೆ ಹಂಸಿ ಹಂಸನಂ ಸೋಂಕುವವೋಲ್
ಅತಿಶಯಶಯನಸ್ಥಳದೊಳ್
ಪತಿಯೊಡನಾ ಕಾಂತೆ ಸುರತಸುಖದಿಂದಿರ್ದಳ್ ೭೫

ವ॥ ಅಂತಶ್ರಾಂತರಾಗದಿಂ ಸಂಭೋಗಸುಖಸಾಗರದೋಳೋಲಾಡಿ ಪರಿಶ್ರಮ ನಿಮೀಳಿತಲೋಚನೆಯಾಗಿ ವಸುದೇವನೊಡನೆ ಪವಡಿಸಿರ್ದು ಯಾಮಿನೀ ಯಾಮತ್ರಯ ವಿರಾಮ ಸಮಯದೊಳ್

---

[1] ತತ್ತಾರಕಚಂದ್ರಿಕಾಜ್ವಲಮುಮಂ (ಖಗ) ತತ್ತಾರಕಚಂದ್ರಿಕೋಜ್ಜ್ವಲಮುಮಂ (ಮೊಅ) [2] ಶಯ್ಯೆಗೇಹಮಂ (ಕ)

ಮ॥ಸ್ರ॥ ದ್ಯುತಿಧೌತವ್ಯೋಮಚಂಡಾಂಶುಮಸಮಲಸುಧಾಸೂತಿಯಂ ದರ್ಪದ್ವೈರಾ
ವತಮಂ ಪ್ರೋದ್ದಾಮಹೇಮಾಚಲಮನಭಿನುತಾಂಭೋಜಮಂ ತ್ವಂಗದುತ್ತುಂ
ಗತರಾಂಭೋರಾಶಿಯಂ ಸತ್ಫಲ[1]ಲಳಿತ[1] ಸುರೋರ್ವೀಜಮಂ ಶೈಲಶೃಂಗ
ಸ್ಥಿತಗರ್ಜತ್ಸಿಂಹಮಂ ಸ್ವಪ್ನದೊಳತಿಮುದದಿಂ ದೇವಕೀದೇವಿ ಕಂಡಳ್ ೭೬

ವ॥ ಅಂತುಮಲ್ಲದೆ

ಮ॥ ಮಿಗುಮಂಗದ್ಯುತಿ ಲೋಕಮಂ ಬೆಳಗೆ ಚಂಚತ್ಕುಂಡಲಂ ಗಂಡಭಿ
ತ್ತಿಗಳಂ ಚಿತ್ರಿಸೆ ಕೌಸ್ತುಭಂ ಪೊಳೆಯೆ ವಕ್ಷೋದೇಶದೊಳ್ ಶಂಖಚ
ಕ್ರಗದಾಪದ್ಮಧರಂ ಸುಪೀತವಸನಂ ಬಂದಾಸ್ಯದೊಳ್ ಪೊಕ್ಕುದಂ
ಮೃಗಲಕ್ಷ್ಮಾಕ್ಷಿ ನಸೆ ಕಂಡಳುಣ್ಮೆ ನಭದೊಳ್ ದೇವೇಂದ್ರತೂರ್ಯಸ್ವನಂ ೭೭

ವ॥ ಆ ಮಹಾಶ್ಚರ್ಯಸ್ವಪ್ನದರ್ಶನೋತ್ಸವಾನಂತರಂ ಸಹಸ್ರಕಿರಣೋದಯ
ಸಮಯದೊಳ್

ಮ॥ಸ್ರ॥ ಕಳಕಾಂಚೀಮಂಜುಮಂಜೀರಕವಳಯರವಂ ಪೊಣ್ಮೆ ನೇತ್ರಾಂಬುಜಂ ಪಾ
ಟಳಕಾಂತಿಶ್ರೀಯಿನೊಪ್ಪುತ್ತಿರೆ ತನುಲತೆ ಸೌರಭ್ಯಮಂ ಬೀಱೆ ಸೂಸಿ
ರ್ದಳಕಂ ಜೋಲ್ದಿರ್ದ ಬಂಬಲ್ಮುಡಿ ಶಿಥಿಲತೆವೆತ್ತಿರ್ದ ನೀವೀಭರಂ ಕ
ಣ್ಗೊಳಿಪನ್ನಂ ಲೀಲೆಯಿಂದುಪ್ಪವಡಿಸಿದಳೆ [2]ನೀದ್ರಾಂಗಿ[2] ಶಯ್ಯಾಗ್ರದಿಂದಂ ೭೮

ಕಂ॥ ದೇವಗುರುದ್ವಿಜರಂ [3]ಸ
ದ್ಭಾವದಿನರ್ಚಿಸಿ ಸು[3]ವಸ್ತ್ರಭೂಷಾದಿಗಳಿಂ
ದೇವಕಿ ಕೈಗೆಯ್ದೆಸೆದಳ್
ಲಾವಣ್ಯದೆ ದಿವಸಲಕ್ಷ್ಮಿ ಪೊಳಪೇಱುವವೊಲ್ ೭೯

ವ॥ ಅನ್ನೆಗಂ ನಿರ್ವರ್ತಿತ ನಿತ್ಯನಿಯಮನಾಗಿ ವಸುದೇವನಿರೆ

ಉ॥ ಇಂದಿದು ಚಿತ್ರಮಾಗಮುಕಮಾಪರಿಯಾದರಹಾಸಮಾಚೆಡಂ
ಗೆಂದಿನ ಭಂಗಿಯಲ್ಲಿದೆನುತುಂ ಜನಮಾಕ್ಷಿಸೆ ತನ್ನ ಲೀಲೆಯಿಂ
ಬಂದಳದೊಂದು ವಿಭ್ರಮಮದೊಂದುವಿಳಾಸಮದೊಂದು ಜೆಲ್ವದೊಂ
ದಂದಮದೊಂದು ದೇಸೆ ಪೊಸತಾಗಿರೆ ವಲ್ಲಭನಲ್ಲಿಗಟ್ಟಿಱಿಂ ೮೦

ವ॥ ಅಂತು ಬಂದು ನಿಜಕಾಂತನರ್ಧಾಸನಮನಲಂಕರಿಸಿ ಕುಳ್ಳಿರ್ದು

---

[1] ದಳಿತ (ಕಖಗ) [2] ನಿದ್ರಾಂಗಿ (ಕಖಗ) ಹೃದ್ಯಾಂಗಿ (ಮೊಅ) [3] ಸದ್ಭಾವದಿನರ್ಚಿ
ಸುವ (ಗ)

ಕಂ॥ ಪಗಲೊಳಗೆಳವೆಳ್ದಿಂಗಳ
ನುಗುಳ್ದಿಪ್ಪುದಿದೊಂದು ಚಂದ್ರಮಂಡಲಮೆನೆ ದಂ
ತಗಭಸ್ತಿಗಳ್ ನಿಜಾಸ್ಯದಿ
ನೊಗೆತರೆ ಸತಿ ಪತಿಗೆ ಕಂಡ ಕನಸಂ ಪೇಳ್ದಳ್ ೮೧

ವ॥ ಆ ಕನಸುಗಳನನುಕ್ರಮದಿಂ ಕೇಳ್ದು

ಕಂ॥ ಪರಮಾನಂದರಸಾರ್ಣವ
ಪರಿಸರವೃಕ್ಷಮೆ ಕೊನರ್ತುದೆನೆ ವಸುದೇವಂ
ಧರಿಯಿಸಿ ಪುಳಕಮನಾಶುಭ
ಚರಿತೆಗೆ ತತ್ಫಲಮನಱಪಲಂದಿಂತೆಂದಂ ೮೨

ಮ॥ ರವಿಯಿಂ ಭಾಸುರಮೂರ್ತಿ ಪೂರ್ಣಶಶಿಯಿಂ ಸದ್ವೃತ್ತನಿಂದ್ರೇಭದಿಂ
ದವನೀಭರ್ತೃ ಸುರಾದ್ರಿಯಿಂ ಸ್ಥಿರತರಂ ಪಂಕೇಜದಿಂ ಶ್ರೀವಧೂ
ಧವನಾವಾರಿಧಿಯಿಂದಪಾರಮಹಿಮಂ ಕಲ್ಪದ್ರುಮಿಂ ಸತ್ತ್ವಗೌ
ರವಯುಕ್ತಂ ಮೃಗರಾಜನಿಂ ಪುರುಷಸಿಂಹಂ ಪುಟ್ಟುಗುಂ ನಂದನಂ ೮೩

ವ॥ ಅಂತುಮಲ್ಲದೆ

ಉ॥ ಪೋದ ಭವಂಗಳೊಳ್ ನೆರಪಿದೊಂದು ತಪಂ ಫಲಮಾಯ್ತು ನಿನ್ನೊಳಿಂ
ದಾ ದನುಜಾರಿ ಬಂದು ಭವದಾನನದೊಳ್ ಪುಗೆ ಕಂಡುದೊಂದು ಪು
ಣ್ಯೋದಯದಿಂ ಚತುರ್ಭುಜನೆ ಪುಟ್ಟಿದಪಂ ಯದುವಂಶರಾಜಸಂ
ಪಾದನನುಗ್ರಸೇನಭಯಭೇದನನುದ್ಧತಕಂಸಸೂದನಂ ೮೪

ಮ॥ ಮಡದೀ ನೀಂ ಪಡೆವಾಸುತಂ ರಿಪುಚಮೂಸಂಹಾರಮಂ ಹಾರಮಂ
ಪೊಡರಲ್ ಮಾಟ್ಕುವನಾಕುಳಂ ತವಿಕುಮಾದೇವಾರಿಯಂ ವಾರಿಯಂ
ವಡಬಾಸ್ಯಂ ತವಿಪಂತಿ[1]ರಾವುಕನನೀ[1] ನಿರ್ಬಂಧದಿಂ ಬಂಧದಿಂ
ಬಿಡಿಕುಂ ತನ್ನಯ ತೇಜದಿಂದೆ ಮಿಗುವುದ್ಯದ್ಭಾನುವಂ ಭಾನುವಂ ೮೫

ಕಂ॥ ಎನಲಪ್ರತಿಹತಸುತಲಾ
ಭನಿವೇದಕವಾರ್ತೆ ತೀವೆ ಪುಳಕಮನಾಂತಳ್
ವನಿತೆ ವಸಂತಾನಿಳನಿಂ
ವನಲತೆ ಕಳಿಕಾಕಳಾಪಮಂ ತಾಳ್ದುವವೋಲ್ ೮೬

---

1 ರಾವುಕನಸೇ (ಕಖಗ)

ವ॥ ಅನ್ನೆಗಮಿತ್ತಲ್

ಉ॥ ದೇವಕಿ ವಿಷ್ಣುವಂ ಬಸಿಱೊಳಾಂತಿರೆ [1]ವೈಷ್ಣವಮಾಯೆಯಂ[1] ಯಶೋ
ದಾವಧು ನಂದಗೋಪನ ಮನಃಪ್ರಿಯೆ ಗರ್ಭದೊಳಾಂತಳಿಂದ್ರದಿ
ಗ್ದೇವಿ ನವಾರ್ಕಮಂಡಲಮನಾಂತಿರೆ ತತ್ಪ್ರಭೆಯಂ ನಭೋಂಗಣ
ಶ್ರೀವಧುವೊಂದೆ ಕಾಲದೊಳೆ ತಾಳ್ದಿ ವಿರಾಜಿಸುವೊಂದು ಮಾಟಿಕ್ಕೆಯಿಂ ೮೭

ವ॥ ಆಗಳಾಗೋಕುಲದೊಳಿರ್ದ ವಸುದೇವನರ್ಧಾಂಗಿ ರೋಹಿಣೀದೇವಿ ಪರಿ
ಪೂರ್ಣಗರ್ಭನಿರ್ಭರಭಾರವತಿಯಾಗಿರೆ ಶುಭಮುಹೂರ್ತದೊಳ್

ಕಂ॥ ಜಲಧರಪಥಪರ್ಯಟನ
ಕ್ಕಲಸಿ ಸುಧಾಸೂತಿ ಧಾತ್ರಿಯೊಳ್ ಶಿಶುರೂಪ
ಚ್ಛಲದಿಂ ನೆಲೆವಡೆದವೊಲು
ಜ್ಜ್ವಲತನು ರೋಹಿಣಿಗನಂತನಂದುದಯಿಸಿದಂ ೮೮

ವ॥ ಅಂತು ಪುಟ್ಟುವಿನಮಿತ್ತಲ್

ಕಂ॥ ಗರ್ಭಸ್ಥನಪ್ಪ ಶೌರಿಯು
ನಿರ್ಭರಸರಸಪ್ರಕಾಶಮಾಜನನಿಯೊಳಾ
ವಿರ್ಭವಿಸಿದುದೆನೆ ತನು ಸಂ
ದರ್ಭಿತ[2]ಗೌರಿಮದಿ[2]ನೆಸೆದುದಾದೇವಕಿಯಾ ೮೯

ಎಳವಯಕೆಯಿಂ ಬೆಳರ್ತಂ
ಗಳೇಱೆ ಕರ್ಪಡರ್ದ ಬಾಸೆಯಂ ತಳದೆಸೆದ
ತ್ರಳಿನೀಮಾಲೆಯ ತಿಱುವಂ
ತಳೆದಂಗಜಪುಷ್ಪಚಾಪಮೆನೆ ದೇವಕಿಯಾ ೯೦

ತ್ರಿದಶಾರಿಧೂಮಕೇತುವ
ನುದರದೊಳೀದೇವಿ [3]ತಳೆದುದರ್ಕಿದೆ ದೃಷ್ಟಾಂ
ತದೌ ಧೂಮಲೇಖೆಯೆನೆ ಕ
ರ್ಪೊದವಿದ ರೋಮಾಳಿ ರಂಜಿಕುಂ ದೇವಕಿಯಾ ೯೧

---

[1] ವಿಷ್ಣುವ ಮಾಯೆಯಿಂ (ಕಖಗ) [2] ಗೌರವದಿ (ಕಖಗ) [3] ತಳೆದಳೆನೆ ತದ್ವಧು
ಗರ್ಭದ (ಗ)

ಕಂ॥ ತರಣಿಪ್ರಭನರ್ಭಕನೀ
ತರುಣಿಯ ಹೃತ್ತಿಮಿರಮಂ ನಿರಾಕರಿಸಿ ಬಹಿ
ಷ್ಕರಿಸಿದನೆನಲೆಸೆಗುಂ ಕುಚ
ಭರಚೂಚುಕಯುಗಳಕಾಳಿಮಂ ದೇವಕಿಯಾ ೯೨

ಮೇದಿನಿಯ ಭಾರವಮರರ
ಖೇದಂ ಖಳರೆಸಕವೆಂಬರಿಷ್ಟತ್ರಯಮಿಂ
ಪೋದಪುವೆಂದಱಿಪುವವೊಲ್
ಪೋದುವು ಮಧ್ಯದ ವಳಿತ್ರಯಂ ದೇವಕಿಯಾ ೯೩

ಘನತೀವ್ರತೇಜನಂ ಮಾ
ನಿನಿ ಗರ್ಭದೊಳಾಂತು ಗೌರವರ್ಣೆನಿ ಮಧ್ಯಂ
ದಿನರವಿಯಂ ಮಧ್ಯದೊಳಾಂ
ತು ನಿಂದ ಶರದಭ್ರಲೇಖೆವೋಲ್ ಸೊಗಯಿಸಿದಳ್ ೯೪

ಚಂ॥ ಸುದತಿಯ ಗರ್ಭಚಿಹ್ನಮನದೇವೊಗಟ್ದಪ್ಪುದೊ ಬಾಸೆ ಕರ್ಪನಾಂ
ತುದು ನಡು ಕೊಡೆ ಪೊಂಗಿದುದು ಬೀಗಿದುದುರ್ಬಿ ಕುಚಂ ಮೊಗಂ ಬೆಳ
ರ್ತುದು ವಳಿ ಪಿಂಗಿಪೋಯ್ತು ನಯವೇಱಿದುದಂಗಶಲಾಕೆ ಗುಜ್ಜುಗೊಂ
ಡುದು ನಡೆ ಮೆಲ್ಪುಗೊಂಡುದು ಸರಂ ಕುಡಿಗೊಂಡುದು ಕುಂತಳೋತ್ಕರಂ ೯೫

ವ॥ ಅಂತಿರ್ದ ದೇವಕಿಯ ಸಮೀಪದೊಳಂದೇಕಾಂತಸಮಯದೊಳ್ ಸಮಸ್ತ ಸುರಗಣಂ ನೆರೆದು ಬಂದಂತರ್ಹಿತರೂಪದಿಂದಂತರಿಕ್ಷದೊಳ್

ಚಂ॥ ಪಿರಿದು ಸಮಸ್ತ[1]ವಿಷ್ಟಪವದಂ ಪಡೆದಂ ಪಿರಿಯಂ[1] ವಿರಿಂಚನಾ
ಸರಸಿಜಯೋನಿಯಂ ಜಠರಹೇಮಪಯೋರುಹದಲ್ಲಿ ಪುಟ್ಟಿಪಂ
ಬುರುಹವಿಲೋಚನಂ ಪಿರಿಯನಾ ದನುಜಾರಿಯನಾತ್ಮಗರ್ಭದೊಳ್
ಧರಿಯಿಸಿ [2]ನಿಂದನೀಂ[2] ಪಿರಿಯಳಿಂ ಪಿರಿಯರ್ ಪೆಱರಿಲ್ಲ ಲೋಕದೊಳ್ ೯೬

ವ॥ ಇಂತು ವಿಶ್ವರೂಪಗರ್ಭಿಣಿಯಪ್ಪ ದೇವಿ, ನೀಂ ಬ್ರಹ್ಮಗರ್ಭ ಪ್ರಕೃತಿಯಂತೆಯುಂ, ಪ್ರಾಗಲ್ಭ್ಯಗರ್ಭದೃಷ್ಟಿಯಂತೆಯುಂ, ವಿವೇಕ ಗರ್ಭವಿದ್ಯೆಯಂತೆಯುಂ, ವೇದ ಗರ್ಭವಾಣಿಯಂತೆಯುಂ, ಯಜ್ಞಗರ್ಭ ಶ್ರುತಿಯಂತೆಯುಂ, ಆಚಾರಗರ್ಭಸ್ಮೃತಿಯಂತೆಯುಂ, ಹೋಮಗರ್ಭಸ್ವಾಹೆಯಂತೆಯುಂ, ವಹ್ನಿಗರ್ಭಾರಣಿಯಂತೆಯುಂ, ಮಣಿಗರ್ಭ

---

[1] ವಿಷ್ಟಪವಳಂ ಪಿರಿಯಂ ಜಗದೊಳ್ (ಕ) [2] ನಿಂದಳ್ (ಕಖಗ)

ಜ್ಞ್ಯೆಯುಂತೆಯುಂ, ಜ್ಞಾನಗರ್ಭೆಸನ್ನತಿಯುಂತೆಯುಂ, [1]ಅವಬೋಧಗರ್ಭೆಮೇಧೆ[1]ಯುಂತೆಯುಂ, [3]ಕಾಮಗರ್ಭೆಶ್ರೀ[2]ಯುಂತೆಯುಂ, ನಯಗರ್ಭೆನೀತಿಯುಂತೆಯುಂ, ಪ್ರಭಾವಗರ್ಭೆ ಶಕ್ತಿಯುಂತೆಯುಂ, ಪರಿಣಾಮಗರ್ಭೆ ತುಷ್ಟಿಯುಂತೆಯುಂ, [3]ಧೈರ್ಯಗರ್ಭೆ[3] ಧೃತಿಯುಂತೆಯುಂ, ಪ್ರಣಯಗರ್ಭೆ ಭಕ್ತಿಯುಂತೆಯುಂ, ಅಭ್ಯುದಯಗರ್ಭೆ ಧರೆಯುಂತೆಯುಂ, ಐಶ್ವರ್ಯಗರ್ಭಾಜ್ಞೆಯುಂತೆಯುಂ, ಪ್ರಕಾಶಗರ್ಭೆ ಪ್ರಭೆಯುಂತೆಯುಂ, ಪ್ರಸಾದಗರ್ಭೆ ದಯೆಯುಂತೆಯುಂ, ಶೃಂಗಾರಗರ್ಭೆ ವಿಭೂತಿಯುಂತೆಯುಂ, ಆನಂದಗರ್ಭೆ ಲೀಲೆಯುಂತೆಯುಂ ಮಹತ್ತ್ವಮಂ ಪಡೆದೆಯೆಂದು ಸ್ತುತಿಗೈದುಪ್ರೋಗೆ ಕತಿಪಯಮಾಸಂಗಳಿಂ ಬಳಿಯಂ

ಉ|| ಲಾಳಿತವಾಗಿ ತನ್ನ ನಡೆಯಿಂ ನಡೆಗಲ್ತುದನರ್ಪ ಕೇಳಿಹಂ
ಸಾಳಿಯು ಬೆನ್ನೊಳ್ಪೆದೆ ನಡೆಯಲ್ ಬಸನಲ್ಲದೆ ನಿಂದು [4]ಕೈಗಳಿಂ
ಲೀಳೆಯನಾಂತು[4] ರಾಗರಸಮೊಬ್ಬುಳಿಯಾದವೊಲೆಬ್ಬಿ ಪೆಟ್ಟಿ ಭಾ
ರಾಳಸದಿಂದವಾದ ಗಮನಾಲಸವೃತ್ತಿಯನೇನಸೆಂದಪೆಂ ೯೭

ಚಂ|| ಗುರುಕಬರೀಭರಸ್ತನಭರೋರುಭರಸ್ಥಿತಿಯಿಂ ಸ್ವಭಾವಮಂ
ಥರಗತಿಯಪ್ಪ ತನ್ವಿಗೆ ಚತುರ್ದಶಲೋಕಮನೆಯ್ದೆ ಗರ್ಭದೊಳ್
ಧರಿಯಿಸಿದಚ್ಯುತಂ ಬಳೆಯೆ ತನ್ನುದರಾಂತರದೊಳ್ ತದೀಯನಿ
ರ್ಭರಭರದಿಂದವಾದಗಮನಾಲಸವೃತ್ತಿಯನೇನಸೆಂದಪೆಂ ೯೮

ಮೊಲೆಗೆ ವಿಚಿತ್ರಪತ್ರಲತೆ ದುರ್ವಹಮೆಂಬ ವಿಲೋಚನಕ್ಕೆ ಕ
ಜ್ಜಲಮತಿಭಾರಮೆಂಬ ತನುಲೇಖೆಗೆ ಚಂದನದಣ್ಪುಬಿಣ್ಣಿತೆಂ
ಬಲಸಪದಕ್ಕಲಕ್ತಕರಸಂ ಪೊರೆಯೆಂಬಿನಿತೊಂದುಚಿತ್ತಮಾ
ಲಲನೆಗೆ ದೇವಕೀವನಿತೆಗಾದುದು ನಿರ್ಭರಪೂರ್ಣಗರ್ಭದೊಳ್ ೯೯

ವ|| ಅಂತು [5]ನಿರ್ಭರಗರ್ಭೆ[5] ಪ್ರಾದುರ್ಭಾವಮಾಗಿ ನವಮಾಸಂ ತೀವೆ ಸಮನಂತರಂ ಶ್ರಾವಣಕೃಷ್ಣಪಕ್ಷಾಷ್ಟಮಿಯಾ ರೋಹಿಣೀನಕ್ಷತ್ರದೊಳ್ ಮಹೋತ್ಕೃಷ್ಟಮಪ್ಪ [6]ಮುಹೂರ್ತದಿಂ ಸನಾಥವಾದ ನಿಶಾಮಧ್ಯಸಮಯದೊಳ್[6]

ಮ||ಸ್ರ|| ಅತಸೀಪುಷ್ಪಾಭಭಾಸಂ ತನುವೆಸೆವಿನೆಗಂ ಕಿಂಕಿರಾತಪ್ರಸೂನ
ಪ್ರತಿಮಂ ಪೀತಾಂಬರಂ ರಂಜಿಸುವಿನಮುದಿತಾರ್ಕಪ್ರಭಂ ಕೌಸ್ತುಭಪ್ರ
ದ್ಯುತಿ ಬೀಜಿತ್ರಿರ್ಪಿನಂ ಶಾಶ್ವತನವತರಿಸಿದಂ ಗದಾಶಂಖಚಕ್ರಾಂ
ಕಿತಹಸ್ತಂ ವಾಸುದೇವಂ ದನುಜವಿಪಿನದಾವಂ ಸಮಸ್ತಪ್ರಭಾವಂ ೧೦೦

---

[1] ಅವಬೋಧಗರ್ಭೆಮೇಧೆ (ಕಖಗ) [2] ಕಾಮಗರ್ಭೆಶ್ರೀ (ಕಖಗ) [3] ಜಯಗರ್ಭೆ (ಕಖಗ) [4] ಕೈಗಳಂ ಲೀಲೆಯನಾಂತು (ಕಖ) [5] ಗರ್ಭನಿರ್ಭರಂ (ಕಖಗ) ಗರ್ಭನಿರ್ಭರ (ಮೊಅ) [6] ಮುಹೂರ್ತ ಸನಾಥವಾದ ನಿಶಾವಸಾನಸಮಯದೊಳ್ (ಕಖಗ)

ಇದು ಸಮಸ್ತಕಮಲಭವಾಂಡಮಾಲಾಘಟೀಘಟಿತಾರಘಟ್ಟಘಟನಾ
ಸ್ವತಂತ್ರನಿಜಸ್ವರೂಪನಿರೂಪಣಚಕಿತ ಸಕಳಾಮ್ನಾಯತಂತ್ರ
ಲಕ್ಷ್ಮೀಕಾಂತ ಶ್ರೀಪಾದಭಕ್ತಿಯುಕ್ತ ಸುಕವೀಂದ್ರರುದ್ರ
ಪ್ರಣೀತ ಶ್ರೀಜಗನ್ನಾಥವಿಜಯಮಹಾಪ್ರಬಂಧ
ದೊಳ್ ಬಲಭದ್ರಾವತಾರ ಕೃಷ್ಣೋತ್ಪತ್ತಿ
ವರ್ಣನಂ ದ್ವಿತೀಯಾಶ್ವಾಸಂ

ತೃತೀಯಾಶ್ವಾಸಂ

ಕಂ॥ ಶ್ರೀರಮಣಂ ಪುಟ್ಟಿರೆ ಕೋ
ಟೀರಾದ್ಯಾಭರಣಚಕ್ರಮುಖ್ಯಾಯುಧ ನಾ
ನಾರಶ್ಮಿಯನುವಿಜೃಂಭಿಸೆ
ರಾರಾಜಿಸಿದತ್ತು ಕೌಸ್ತುಭಂ ಪೇರುರದೊಳ್ ೧

ವ॥ ಆಗಳಭೂತಪೂರ್ವಮಾದ ಪ್ರಸೂತಿಕಾಕೌತುಕಮನಾತ್ಮೀಯಾಪ್ತಗುಪ್ತ ವಾಕ್ಯದಿಂ ಕೇಳ್ದ ಕ್ರೂರಾದಿ ಯಾದವರ್ ಬಂದು ನೋಡಿ

ಮ॥ಸ್ರ॥ ಇದು ತೇಜೋದುರ್ನಿರೀಕ್ಷ್ಯಂ ತೊಳಗಿ ಬೆಳಗಿ ಕಣ್ಗೊಪ್ಪುತಿರ್ದಪ್ಪುದಿಂತೀ
ಮದವತ್ಕಂಸಂಗಕಾಂಡಕ್ಷಯಸಮುದಿತಚಂಡಾಂಶು ಚಂಡಾಂಶುವೆಂಬಂ
ದದಿಸೊಪ್ಪುತ್ತಿರ್ಪುದಂದಬ್ಧಿಯೊಳುದಯಿಸಿದಾ ಕೌಸ್ತುಭಂ ಕೌಸ್ತುಭಂದಾ
ಳ್ದದನೀತಂ ಕೇವಲಂ ದಾನವರಿಪುವೆ ಪೆಱಂಗೆಲ್ಲಿತೀ ದಿವ್ಯರೂಪಂ ೨

ವ॥ ಎಂದು ಪರಮಾನಂದದೊಳವರ್ ತಮ್ಮೊಳೋರೊರ್ಬರೊಂದೊಂದು ಮಾತಂ ತಮ್ಮ ಮನಕ್ಕೆ ತೋಱಿದಂತೆ ನುಡಿಯುತ್ತಿರಲಾ ಪ್ರಸ್ತಾವದೊಳ್

ಚಂ॥ ಘನಪಥವಾಹಿನೀಲಹರಿಕಾರವಮೆಂಬಿನಮುಣ್ಮಿದತ್ತು ಭೋ
ರೆನೆ ದಿವಿಜೇಂದ್ರತೂರ್ಯರವಮಂಬರಲಕ್ಷ್ಮಿಯ [1]ಮಂದಹಾಸಮೆಂ
ಬಿನಮೆಸೆದತ್ತರಲ್ವಲರ ಬೆಳ್ಸರಿ[1] ತತ್ಸುರನಂದನಾಳಿನೀ
ಸಿನದವಿಮೆಂಬಿನಂ ಪಸರಿಸಿತ್ತಮರೀಮೃದುಗೇಯನಿಸ್ವನಂ ೩

ವ॥ ಅಂತುಮಲ್ಲದೆ

ಮ॥ಸ್ರ॥ದನುಜಕ್ಷತ್ರಾಧಮಾನೀಕಮನಗಣಿತಮಂ ಕೂಡೆ ನಿರ್ಮೂಲನಂಗೆ
ಯ್ದನಿತುಂ ಭೂಭಾರಮಂ ಪಿಂಗಿಸಲುದಯಿಸಿದಂ ಚಕ್ರಿ ನಮ್ಮಾಭರಾಕ್ರಾಂ
ತಿನಿರೋಧಂ ಮಾಣ್ದುದಿನ್ನೆಂದಹಿಪತಿ ಪೆಡೆಯಂ ಬಿಚ್ಚಿದಂ ದಿಗ್ಗಜಂ ಭೋ
ರೆನೆ ದಾನಾಸಾರಮಂ ಸೂಸಿದುವು ಕಮಠನುಂ ತೂಗಿದಂ ಹರ್ಷದಿಂದಂ ೪

[1] ಮಂಟಪಕ್ಕೆ ಬಂದನಿಮಿಷರೆಲ್ಲರುಂ ನಲಿದರಂತತಿ (ಕಖ)

ವ|| ಅಂತು ಸಕಲಲೋಕಂಗಳೊಳುತ್ಸವಪರಂಪರೆ ನೆಗೞುತ್ತುಮಿರಲಿತ್ತಲವ ತಾರಂಗೆಯ್ದು ಮುಂದೆ ನಿಂದಿರ್ದ ಜನಾರ್ದನಂಗೆ ಬದ್ಧಾಂಜಲಿಯಾಗಿ

ಮ|| ಮತಿಯೊಳ್ ನಿರ್ಭರಭಕ್ತಿ ಕಣ್ಮಲರೊಳಾನಂದಾಶ್ರು ಮೆಯ್ಯೊಳ್ ಸಮು
ದ್ಗತರೋಮಂ ಮುಖದೊಳ್ ವಿಲಾಸಮೆಸೆಯುತ್ತಿರ್ಪನ್ನಮಿಂತೆಂದರಾ
ನತಮೂರ್ಧರ್ ಪಿತೃಮಾತೃಗಳ್ ದಯೆಯಿನಸ್ಮದ್ಗರ್ಭದೊಳ್ ಗೋಪಿನೀ
ಪತಿ ನೀಂ ಪುಟ್ಟಿದೆ ಧನ್ಯರೆಮ್ಮವೊಲವಾರ್ ಮುನ್ನಾದವರ್ ಯಾದವರ್ ೫

ವ|| ಎಂದು ನುಡಿದನಂತರಂ ಕಂಸಕೃತಾಪಚಾರಮಂ ತತ್ಪ್ರಪಂಚಮನಱಿಪೆ, ಕಮಲನಾಭಂ ಕರುಣರಸಾರ್ದ್ರಹೃದಯನಾಗಿ ಮುನ್ನಂ ನಿಮಗೆ ಪುಟ್ಟಿದುವಾಱುಂ ಮಕ್ಕಳೆಂಬಿವು ಪಾತಾಳದೊಳಿರ್ದ ಹಿರಣ್ಯಕಶಿಪುವಿನ ಮಕ್ಕಳ್, ಮದೀಯಸಂದೇಶದಿಂ ಪುಟ್ಟಿ ಪೋದುವು. ಮತ್ತೊಂದು ಶಿಶುವೆಂಬುದಂ ಬಸಿಱೞಿದುದೆಂಬಂತೆ ಗರ್ಭದಿಂ ತೆಗೆದುಯ್ದು ರೋಹಿಣಿಯ ಗರ್ಭದೊಳ್ ನಿಲಿಸಿದೆಂ. ಅತ್ತ ಗೋಕುಲದೊಳಾಮಹಾತ್ಮನುದಯಿಸಿರ್ಪಂ. ಅಂತುಮಲ್ಲದೆಯುಂ

ಮ|| ಮುನಿದಸ್ಮತ್ಸಹಜಾತರಂ ಶಿಶುಗಳಂ ಕೊಂದುಗ್ರಸೇನಂಗೆ ಬಂ
ಧನಮಂ ತಂದು ತದೀಯ ರಾಜ್ಯಪದದೊಳ್ ನಿಂದಾತನಂ ತಾತ ಕೊ
ಲ್ವೆನಮೋಘಂ ದನುಜಾವತಂಸನನತರ್ಕ್ಯೈಶ್ವರ್ಯಕಾಸಾರಹಂ
ಸನನತ್ಯಂತನೃಶಂಸನಂ ಸುರಬಲಪ್ರಧ್ವಂಸನಂ ಕಂಸನಂ ೬

ವ|| ಎಂದು ವಿಶ್ವರೂಪಂ ಕರ್ತವ್ಯಮನಱಿಪಿ ತನ್ನ ದಿವ್ಯರೂಪಮನಡಂಗಿಸಿ ವಿಷ್ಣುಮಾಯೆಯಂ ಪಸರಿಸಿ ಸಾಮಾನ್ಯಶಿಶುರೂಪಮಂ ಕೈಕೊಂಡು ನಿಲ್ವುದುಂ, ಆ ವಸುದೇವನುಂ ದೇವಕಿಯುಮಿದಾರೊಡನೆ ನುಡಿದೆವೆಮಗುತ್ತರಮಂ ಕೊಟ್ಟರಾರ್, ಇದು ಶಿಶುತಾಂ ಬೇಱೆ; ನಾರಾಯಣನೆ ಬಂದು ನುಡಿದು ಪೋದನೆಂಬ ವಿಭ್ರಾಂತಿಯುಮಪ್ಪುಕೆಯ್ದುಮೆಂತಾದೊಡಮಿಾಶಿಶುಮಂ ನಮ್ಮ ಸಂತಾನಕ್ಕುೞಿಪಿ ಕೃತಕೃತ್ಯರಪ್ಪುದರ್ಕುಪಾಯಮಾವುದು. ಈ ಶಿಶುವಿನೞ್ಕಯುಂ ರಕ್ಕಸಂ ಕೇಳ್ದೊಡುೞಿಯಲೀಯಂ; ಇದಂ ಕೇಳ್ದೊಡೆ ಕಂಸಂ ಕೊಂಡುಯ್ಗುಮೆಂದು ನಾಡೆಯುಂ ಮಱುಗಿ ಸಿಡಿಮಿಡಿಗೊಳುತ್ತಿರ್ಪನ್ನೆಗಂ

ಉ|| ಇಂದೆನಿತಾನುಮುಬ್ಬಿಧರಕಾಲದ ಕಾಳದಿರುಳ್ಗಳೆಲ್ಲವೇಂ
ನಿಂದುವೊ ಗಟ್ಟಿಗೊಂಡವೆ ಭಯಂಕರಮಾದುದು ವಿಷ್ಣುಮಾಯೆಯಿಂ
ದಂದಿನ ಕಾರಿರುಳ್ ನೆಗೆದ ಕಾರ್ಮುಗಿಲಿಂ ದಳವೇಱಿದೊಂದುಮ
ಬ್ಬಿಂದ ಸುಜಾಂಡಮಂ ಜನಕರಂಡಕದಂತೆ ಕಱಂಗಿ ನಿಲ್ವಿನಂ ೭

ಕಂ॥ ನೆಗೆದ ಮುಗಿಲೆಂಬ ನೀಲಾ
ದ್ರಿಗಳಿಂ ನಿರ್ಝರಮೆ ಸೂಸಿ ಸುರಿದಪುವೆಂಬ
ನ್ನೆಗಮೇಂ ಕಱಿತದುದೊ ಪೆರ್ಮಳೆ
ಜಗಮೆಲ್ಲಂ ಸಲಿಲಪೂರದಿಂ ತೇಂಕುವಿನಂ ೮

ವ॥ ಅಂತಗುರ್ವಾಗಿ ಪರ್ವಿದ ಮುಂದಗತ್ತಲೆಯೊಳಂ ಧಾರಾವರ್ತಮೆನಿಸಿ ಕಾಮುರ್ಗಿಲಿಂ ಕಱಿತವ ಪೆರ್ಮಳೆಯೊಳಮಂಜದೆ ಮಗನನೆತ್ತಿಕೊಂಡು ವಸುದೇವನೆಂತಾ ನುಮಾರಾಕ್ಷಸರಕ್ಷಿತಪ್ರಸೂತಿಕಾನಿಳಯದಿಂ ತಳರ್ದು ನಡೆವಾಗಳಾ ಯೋಗನಾಥಂ ಪುರ ಜನಂ ಮೆಯ್ಯಱಿಯದಂತು ನಿದ್ರೆಯಂ ಕವಿಸೆ ಮಥುರಾಪುರಮಂ ಪೊಱಮಟ್ಟು ಬಯ ಲ್ದೊಱೆತರಿವ ಬಟ್ಟೆಯೊಳುದ್ದೇಶಕ್ಕೆ ಬರ್ಪಲ್ಲಿ

ಮ॥ ಅರಿದಾಯ್ತೀ ಶಿಶುಗೆತ್ತ ಸಾರ್ವೆನೞಿಸಲ್ ಕಂಸಾಸುರಂ ಪೇೞ್ದ ಚಾ
ರರ ಕೈದೀವಿಗೆ ಮಾಲೆಗೊಂಡು ಬೆಳಗುತ್ತೀಬಂದುದೆಂಬೊಂದು ಭೀ
ತಿರಸಂ ಶ್ರೀವಸುದೇವನೊಳ್ ನೆಗಳ್ವಿನಂ ನಾನಾಫಣಾರತ್ನಮೊ
ಪ್ಪಿರೆ ಬಂದಂ ಮಳೆಯಂ ನಿವಾರಿಸಲನಂತಂಗಂಡನಂತೋರಗಂ ೯

ವ॥ ಅಂತು ಬಂದುರಗಪರಿವೃಢಂ ಪ್ರಸಾರಿತಫಣಾಸಹಸ್ರನಾಗಿ ಕೊಡೆವಿಡಿದಂತೆ ಬರೆ ಪೆಡೆವಣಿಯ ಬೆಳಗಿನಿಂ ಬಟ್ಟೆಗೊಂಡತಿತ್ವರಿತಗತಿಯಿಂ ಪೋಗೆವೋಗೆ ತನ್ಮಹಾ ವೃಷ್ಟಿಯಂ ತೆಕ್ಕನೆ ತೀವಿ ಬಂದ ಕಾಳಿಂದಿಯಂ ಕಂಡು

ಮ॥ ಪಿರಿದುಂ ಕಂಸನ ಭೀತಿಯಿಂದೆ ವಸುದೇವಂ ಮುಂದುಗೆಟ್ಟಲ್ಲಿ ಕ
ಮ್ಮರಿವಾಯ್ದಂತಿರೆ ಪೊಕ್ಕಡಂಗೆ ತನಗಾ ತೀವಿರ್ದ ಕಾಳಿಂದಿ ಜೆ
ಜ್ಜರಮಾಗಲ್ ನೆಲೆಯಾಗೆ [1]ದಾಂಟಿ ನಡೆದಂ[1] ದುರ್ವಾರಸಂಸಾರಸಾ
ಗರಮಂ ದಾಂಟಿಸುವಾ ಮಹಾಮಹಿಮನಂ ಪೆತ್ತಂಗಿದೇಂ ಚಿತ್ರಮೋ ೧೦

ಉ॥ ತೀರದೊಳಿರ್ದ ಗೋಕುಲಮನಾನಕದುಂದುಭಿ ಪೊಕ್ಕು ಸೂತಿಕಾ
ಗಾರದೊಳಾಗಳಾಗಳೆ ಯಶೋದೆಗೆ ಸಂಭವಿಸಿರ್ದ ಕನ್ನೆಯೊಳ್
ಶೌರಿಯನಂದು ಪಲ್ಲಟಿಸಿ ಜೆಚ್ಚರಮಾಕೆಯನೆತ್ತಿಕೊಂಡು ದು
ರ್ವಾರತಮೋನಿಗೂಢಗತಿಯಿಂ ಪರಿದೈದಿದನಾತ್ಮಗೇಹಮಂ ೧೧

ವ॥ ಅಂತೆಯ್ದಿ ಪೊಕ್ಕು ಸುತ್ರಾಮಾರಿಗೆ ಮಾರಿಯಂ ತರ್ಪಂತೆ ತಂದಾ ಕುಮಾ ರಿಯಂ ದೇವಕಿಯ ಮುಂದೆ ಪಟ್ಟಿರಿಸಿ ಪೋದ ಬಂದ ವೃತ್ತಾಂತಮಂ ಪೇೞ್ದು ತತ್ಪೂರ್ವ ಪ್ರಸವೋಚಿತಮಿಥ್ಯಾಸಂಭ್ರಮಮನಪ್ಪುಕೆಯ್ದಿರ್ಪುದುಂ

[1] ದಾಂಟಿದೆನದಂ (ಕ)

ಕಂ॥ ಘನಘೋರನಿಷ್ಠುರಾಂಗ
ಧ್ವನಿಯಿಂದಾಶಿಶುವಿನಟ್ಟಿಕ್ಕೆ ತೆಕ್ಕನೆ ತೀವಿ
ತ್ರನಿತಂ ದಿಕ್ತಟನುಂ ಭೋ
ರೆನೆ ಶಂಕಾಕುಳಿತಮಪ್ಪಿನಂ ಭುವನಜನಂ ೧೨

ಮ॥ಸ್ರ॥ ಸಕಳಬ್ರಹ್ಮಾಂಡಭಾಂಡೋದರವೊಡೆದುದಿದೆಂತಪ್ಪ ಕೋಳಾಹಳಂ ಕೌ
ತುಕದಿಂದ್ರಂ ಪಾಯ್ದನಕ್ಕುಂ ಕವಿಯಲೆಲೆಲೆ ಸನ್ನಾಹವಂ ತಾಳ್ದಿ ಸೈನ್ಯ
ಪ್ರಕರಂ ಬರ್ಕೆಂಬುದುಂ ತಸ್ಸುಮಯದೊಳ್ ಗೃಹಾಧ್ಯಕ್ಷನಿಂತೀರಸಂ ದೇ
ವಕಿ ಪೆತ್ತಾ ಕೂಸಿನೊಂದಟ್ಟಿಕ್ಕೆಯ ದನಿಯೆನೆ ಕೇಳ್ದಲ್ಲಿಗೆಯ್ತಂದು ಕಂಸಂ ೧೩

ವ॥ ಅಂತು ಸೂತಿಕಾಸದನಮಂ ಪೊಕ್ಕು ದೇವಕಿಯ ಮುಂದೆ ಪಟ್ಟಿರ್ದ ಶಿಶುವಿನ ಪಿಂಗಾಲಂ ಪಿಡಿದುಕೊಂಡು ನಡೆತಂದು

ಮ॥ ಅಸುರಂ ಕನ್ನೆಯನುಯ್ದು ವಧ್ಯಶಿಲೆಯೊಳ್ ಪೊಯ್ವಲ್ಲಿ ಕೈಯಿಂ ಸಿಡಿ
ಲ್ದು ಸಿಡಿಲ್ ಪೋಪವೊಲಂಬರಕ್ಕೆ ನೆಗೆದೆಂದಳ್ ನಿನ್ನನಾಂ ಕಂಸ ರಾ
ಕ್ಷಸ ಕೇಳ್ಕೊಲ್ವೊಡೆ ಕಾವರಾರೆಲವೊ ಮಾಣ್ ನಿನ್ನಂ ಕೊಲಲ್ವೇಡಿ ಪು
ಟ್ಟಿ ಸರೋಜೇಕ್ಷಣನತ್ತಲೊಂಪೆಡೆಯೊಳಾಯಿರ್ದಪ್ಪನೆಮ್ಮಗ್ರಜಂ ೧೪

ವ॥ ಎನೆ ಕೇಳ್ದು ತದೀಯಪರುಷಭಾಷಿತಂ ತನಗೆ ಕರ್ಣಶೂಲಮಾಗೆ

ಕಂ॥ ಈಕೃತಕಿಯೇಕೆ ಪುಟ್ಟಿದ
ಳೇಕಾರಣದಿಂದೆ ಪಾಱಿಪೋದಳ್ ಗಗನ
ಕ್ಕೇಕೆಯದಾವಳೊ ಮೃತ್ಯುವೊ
ಮಾಕಾಳಿಯೊ ಚಂಡಿಯೋ ಮಹಾಭೈರವಿಯೋ

ವ॥ ಎಂದನಿಮಿಷದ್ರೋಹನನಿಮಿಷಮಾರ್ಗದೊಳಿರ್ದ ದುರ್ಗಿಯನನಿಮಿಷ[1]ನೇತ್ರನುಮ[1]ತ್ರಾನಿತಾನನನುಮತ್ಯಂತವಿಸ್ಮಯಸ್ವಾಂತನುಮಾಗಿ ನೀಡುಂ ನೋಡುತ್ತುಮಿರೆ

ಮ॥ ವದನಂ ಪೂರ್ಣಶಶಾಂಕನಂತೆಸೆಯೆ ಮೇಘಶ್ಯಾಮಳಾಂಗಂ ತ್ರಿಭಂ
ಗದಿನಿಂಬಾಗಿರೆ ನೀಲಚೇಲದುಡೆಯುಂ ಪೇಲ್ಕೊಂಡ ಪೊಂಬಟ್ಟೆಯುಂ
ಕದಪಂ ಮೋದುವ ಕುಂಡಲದ್ವಿತಯಮುಂ ಜೊಲ್ವಾಗೆ ತಾನಾಗಳಾ
ಡಿದಳೆಂಟುಂ ನಳಿತೋಳ್ಗಳಂ ಪಸರಿಸುತ್ತುಂ ಕನ್ನೆ ರೋದೋಂತದೊಳ್ ೧೬

1 ನೇತ್ರೆಯನು (ಖ)

ವ|| ಅಂತು ಗಗನರಂಗದೊಳ್ ನೃತ್ಯಲೀಲೆಯಂ ಮೆಱೆದು ವಾಸವನಿವಾಸಕ್ಕಭಿಮುಖಿಯಾಗಿ ಪೋದಳ್. ಅನ್ನೆಗಮತ್ತಲ್

ಮ|| ಇದಿರ್ವಂದೊಪ್ಪುವ ದೇವದುಂದುಭಿಯೊಳಂ ದೇವಾಂಗನಾನೃತ್ಯಗೀ
ತದೊಳಂ ದೇವಮಹೀರುಹವ್ರಜದೊಳಂ ದೇವಾಪಗಾತೋಯಕುಂ
ಭದೊಳಂ ದೇವವರಂ ಸ್ತವಂಗೆಯೆ ವರಂಗೊಟ್ಟಾಮಹೇಂದ್ರಂಗೆ ಸ
ನ್ಮದದಿಂ ದುರ್ಗಿ ಬಟಿಕ್ಕೆ ತಾಂ ನೆಲಸಿ ನಿಂದಳ್ ಯೋಗಪೀಠಾಗ್ರದೊಳ್ ೧೭

ದನುಜಂ ದುರ್ಗಿಯ ತೇಜದೊಂದು ತೆಱನಂ ಕ್ಕೆಮಿಕ್ಕು ಪೋದಂದವಂ
ತನಗೆಂದುಗ್ರದುರುಕ್ತಿಯಂ ನೆನೆದಿದೇನಾಶ್ಚರ್ಯಮೆಂದಂದು ನೆ
ಟ್ಟನೆ ಚಿಂತಾಗಿರಿ ಮೇಲೆ ಬೀೞೆ ಪಿರಿದುಂ ಬೆಂಬಿಲ್ದು ಬಂದೆಯ್ದಿ ಪೊ
ಕ್ಕು ನಿಜಾವಾಸಮ[1]ನಾಪ್ತ[1]ಮಂತ್ರಿನಿವಹಕ್ಕಿಂತೆಂದನಾಸ್ಥಾನದೊಳ್ ೧೮

ಅಶರೀರಧ್ವನಿಯಂತೆ ನಾರದನ ಪೇೞ್ದಾದೇಶಮಿಂದಾಯ್ತು ವ
ಧ್ಯಶಿಲೋಚ್ಛೃಂಖಲೆಯಾಗಿ ದುರ್ಗೆ ನುಡಿದಳ್ ಪುಟ್ಟಿರ್ದನೀಗಳ್ ಚತು
ರ್ದಶಲೋಕಪ್ರಭು ವಿಷ್ಣು ನಿನ್ನ ಪಗೆಯೆಂದಾರ್ಗೆಲ್ವರೀಭದ್ರಬಾ
ಲಿಶನಂ ದೈವವಿಸೂತ್ರಮಂ ಪುರುಷಕಾರಂ ಮೀಱಲೇನಕ್ಕುಮೋ ೧೯

ಉ|| ಆ ನೆಗೞ್ದಿಂದ್ರನೆಕ್ಕತುಳದೊಳ್ ಧುರದೊಳ್ ಬಲದೊಳ್ ಕಡಂಗಿ ನಿಂ
ದಾನಲೊಡರ್ಚಲಾಂಕೆಗೊಳಲಾಱದೆ ಪೋಗಿ ಗಡಂ ಮುರಾಂತಕಂ
ಗಾನತನಾಗಿ ಪುಯ್ಯಲಿಡೆ ಕೇಳ್ದು ಮದೀಯವಧಾರ್ಥಮಾಸುಧಾಂ
ಭೋನಿಧಿತಳ್ಪನಿಂದು ಗಡ ಪುಟ್ಟಿದನಿಲ್ಲಿಗದಾವುದುದ್ಯಮಂ ೨೦

ವ|| ಎಂದು ಸಚಿವರೊಳ್ ಸಮಾಳೋಚಸಂಗೆಯ್ದಾಗಳಂತೆ ನಿಜವಿವೇಕವನಮಂ ಸ್ವಕೀಯಕೋಪವಹ್ನಿ ಸುಡಲೊಡರ್ಚೆ

ಮ|| ತೊಡೆವೆಂ ಶಕ್ರನ ನಾಮಮುಂ ತುಡುಕಿ ನೀರೊಳ್ ಮೆಟ್ಟುವೆಂ ವಹ್ನಿಯಂ
ಪೊಡೆವೆಂ ಕಾಲನನಿಕ್ಕಿ ಡೊಕ್ಕರಿಸುವೆಂ ದೈತೇಯನಂ ಕಟ್ಟುವೆಂ
ಜಡರಾಶೀಂದ್ರನ[2]ನೆಯ್ದುವೆಂ[2] ಪವನನಂ ಸರ್ವಸ್ವಮಂ ಕೊಂಡು ಕೊ
ಗಿಡಿಪೆಂ ವಿತ್ತಪನಂ ಪರಾಭವಿಸುವೆಂ ದಕ್ಷಾಧ್ವರಧ್ವಂಸಿಯಂ ೨೧

ವ|| ಎಂದಾಸ್ಫೋಟಿಸಿ ಲೋಕಪಾಲಕರಂ [3]ನೀದಾರ್ಗಂಟಿಸಿ[3]

[1] ನಾತ್ಮ (ಖ) [2] ಸೆಟ್ಟುವೆಂ (ಮೊಅ) [3] ನಿದಾರ್ಗಟಿಸಿ (ಕಖ)

ಕಂ॥ ಅಸುಹೃದ್ದ್ವೇಷಾಂಕುರಮುಂದ
ಯಿಸಿದತ್ತುಗುರ್ಳೊಳ್ ಚಿವುಂಟುವಂ ಕೊಡಲಿಗೊಳಲ್
ಬಸಮಲ್ಲದು ಬಳೆದೊಡೆ ಬಳೆ
ಯಿಸುವುದು ನೀತಿಯೆ ವಿರೋಧಿಯಂ ವ್ಯಾಧಿಯುಮಂ ೨೨

ವ॥ ಎಂದು ನಿಶ್ಚಯಿಸಿ ನಿಜವಕ್ಷೋಜನಿಕ್ಷಿಪ್ತಕ್ಷ್ವೇಡಪೀಡಿತ ಲೋಕಘಾತಿನಿಯಪ್ಪ ಪೂತನಿಯುಮಂ, ಸ್ವಕೀಯಪರಿಧಾವನವೇಗವಿಘಟಿತವೈರಿಜಾಲಶಕಟನೆಂಬ ಶಕಟನುಮಂ, ರಾಕ್ಷಸವೀರದಕ್ಷಿಣಕಟೀತಟ ಪ್ರಬದ್ಧಾಸಿಧೇನುಕನೆಂಬ ಧೇನುಕನುಮಂ, ನಿಸ್ಸೀಮನಿಕಾಮಬಾಹುಸಾಹಸಾಡಂಬರಪ್ರಳಂಬನೆಂಬ ಪ್ರಳಂಬನುಮಂ, ಮಾನವ ಭುಜಾವಷ್ಟಂಭಾರಿಷ್ಟನೆಂಬರಿಷ್ಟನುಮಂ, ಹೇಷಿತಘೋಷಣಶ್ರವಣಮಾತ್ರವಿತ್ರಾಸನರಚಿತ ಜಂಭಾರಿದೇಹಪರಿರಂಭಸಂಭಾತಿಲೋತ್ತಮೋರ್ವಶೀಸುಕೇಶಿಯೆಂಬ ಕೇಶಿಯುಮಂ, ಮತ್ತಮನೇಕರೂಪಪರಾವರ್ತನರಸಾದಾನಪರೆಂಬ ದಾನವರುಮಂ, ಕರೆದೆನ್ನ ಶತ್ರುವದೊಂದು ತಾಣದೊಳ್ ಪುಟ್ಟಿರ್ಪನಾತನಂ ಸಕಲಭೂತಳದೊಳುಳ್ಳ ಚತುರ್ವರ್ಣಜಾತ ಶಿಶುಜಾತದೊಳನ್ಯರೂಪಾವಷ್ಟಂಭಸೌಷ್ಠವವಿಶೇಷದಿಂದಱಿದೊಡಂಬಡಿಸಿದಂ ದದೊಳೋರೊರ್ಬರೊಂದೊಂದು ಸೆವದಿನೊರ್ವರ್ ತಪ್ಪಿದಡೊರ್ವರ್ ಕೊಂದಿಕ್ಕುವುದೆಂದು ಬೆಸಸಿ ವಸುದೇವನ ದೇವಕಿಯ ಸೆಱೆಯಂ ಬಿಟ್ಟು ಎನ್ನ ಪಗೆಯೆನಿಸಿರ್ದ ವನಜನಾಭು ಮತ್ತೊಂದು ತಾಣದೊಳ್ ಪುಟ್ಟಿದಂ; ಕಮ್ಮನೆ ನಿಮ್ಮನಚ್ಚಿಗಂ ಬಡಿಸಿದೆನೆಂದು ಚಾಟುವಚನಂಗಳಂ ಮೆಱೆದು ಮಿಥ್ಯಾವಿನಯವಿನೋದೋಪಗೂಹಿತಸ್ವಾಂತಚಿಂತಿತಚಿತ್ತನಾಗಿರ್ದಂ. ಆಗಳಾ ಭೋಜರಾಜಂಗೆ ಕರಮಂ ತೆಱಲೆಂದು ಬಂದ ನಂದಗೋಪನಂ ಕಂಡು ಕಪಟನಾಟಕ ಸೂತ್ರಧಾರ ನಾರಾಯಣಪ್ರೇರಿತಮನಸ್ಕನಾಗಿ ವಸುದೇವನಿಂತೆಂದಂ

ಮ॥ ಪ್ರಿಯ ಕೇಳುತ್ಸವವಾರ್ತೆಯಂ ತನಯನಂ ಪೆತ್ತಳ್ ಗಡಂ ನಿನ್ನ ಪ
ತ್ನಿ ಯಶೋದಾವಧು ತತ್ತನೂಜನೊಡನಿಂಬಿಂ ಭಾವನಿರ್ದ್ವಂದ್ವನಾ
ಗಿಯೆ ನೀಂ ರಕ್ಷಿಸು ರೌಹಿಣೇಯನೆನಿಪಸ್ಮತ್ಪುತ್ರನಂ ವಿಕ್ರಮೋ
ದಯರಾರಾದೊಡೆ [1]ಕಾವರೆಂದು[1] ನುಡಿದಂ ಶ್ರೀನಂದಗೋಪಾಲನೊಳ್ ೨೩

ವ॥ ಎನೆ ಸಂತೋಷಂಬಟ್ಟು ನಂದಗೋಪಂ ನಂದನಮುಖಾರವಿಂದಾವಲೋಕನೋತ್ಸುಕಂ ಗೋಕುಲಕೆ ಪೋಗಿ ನೀಲೋತ್ಪಲದಳಶ್ಯಾಮಸಪ್ಪ ತಾಮರಸನೇತ್ರನಂ ನೋಡಿ ಪರಮಪ್ರೇಮರೋಮಾಂಚಿತಗಾತ್ರನುಮಾನಂದಬಾಷ್ಪಜಲಲುಳಿತನೇತ್ರನುಮಾಗಿ ಸುಖದಿನಿರಲ್; ಆ ಪ್ರಸೂತಿಕಾಸದನಕ್ಕೆ ದನುಜವೈರಿ ಪುಟ್ಟಿದಷ್ಟಮದಿನದೊಳ್ ಯಶೋದೆ ಪೊಱಮಟ್ಟ ಸಮಯಮಂ ಪಾರ್ದು

[1] ಕಾವುದೆಂದು (ಕಗ)

ಮ॥ ಪ್ರಣಯಾಲಂಬಿನಿಯಂತೆ ಪೂತನೆ ಯಶೋದಾಕಾರದಿಂ ಬಂದು ನಿ
ರ್ಘೃಣೆ ನಂಜೂಡಿದ ತನ್ನ ಪೆರ್ಮೊಲೆಯನೂಡಲ್ ಬಾಲಕಂ ನೇತ್ರಱಿಂ
ನೆಣನಂ ಖಂಡಮನೆಯ್ದೆ ಪಿಂಡಿ ಪಿೞಿದುಂಡೋಹೋಹೊ ಹಾ ಮಾಣ ದಾ
ರುಣ ಮಾಣೆಂದೊಱಲುತ್ತೆ ಬೀೞೆ ತವೆ ಪೀರ್ದಂ ಪೂತನಾ ಜೀವಮಂ ೨೪

ವ॥ ಆಗಳಟ್ಟಾಸುರಮಾಗಿ ಬೆಟ್ಟು ಕೆಡೆವಂತೆ ಭೂತಲದೊಳ್ ಕೆಡೆದ ಪೂತನೆಯ ಮೇಲೆ ಮೊಲೆಯಂ ಕಡೆವಾಯೊಳಿಟ್ಟು ಪಟ್ಟಿರ್ದ ಶಿಶುವಂ ಯಶೋದೆ ಬಂದು ಕಂಡು

ಕಂ॥ ಪೂತನೆಯ ಕೆಡೆದ ವಿಕೃತಿಗೆ
ಭೀತಿಯನೊಳಕೊಳ್ಳದೆತ್ತಿಕೊಂಡಳ್ ಮಗನಂ
ಕೌತುಕಮೇಂ ಪೆಂಡಿರೊಳಂ
ಭೀತಿರಸಂ ಮೋಹರಸಮನೊತ್ತರಿಸುಗುಮೇ ೨೫

ತತ್ಸಮಯೋಚಿತಶಾಂತಿಯ
ನುತ್ಸವದಿಂ ಮಾಡಿ ವಿವಿಧರಕ್ಷಾವಿಧಿಯಂ
ವತ್ಸಂಗೆ ನೆಗೞ್ದು ಸಕಲಸು
ಹೃತ್ಸಂತತಿ ಪರಸೆ ನಂದನಿರ್ದಂ ಸುಖದಿಂ ೨೬

ವ॥ ಅನ್ನೆಗಂ ವಸುದೇವನಾದೇಶದಿಂ ದ್ವಾದಶದಿನಕ್ಕೆ ನಾಮಕರಣೋತ್ಸವಮಂ ಮಾಡಲೆಂದು ಗಾರ್ಗ್ಯನೆಂಬ ಪುರೋಹಿತಂ ತಿರೋಹಿತ ವೇಷನಾಗಿ ಬಂದು ಯಥೋಚಿತ ಮಂಗಳಾಚಾರಮಂ ಮೆಱೆದು ರೋಹಿಣೀಸುತಂಗಂ ರಾಮನಾಮಮಂ ಮೊದಲಾಗೆ ಪೆಸರಿಟ್ಟು ದೇವಕೀಸುತಂಗೆ ಕೃಷ್ಣಾಭಿಧಾನಮಂ ಮಾಡಿ ತನಯರ್ಗೆ ರಾಮಕೃಷ್ಣರೆಂಬ ನಾಮಕರಣಂ ಮೊದಲಾಗೆ ಪಲವುಮನ್ವರ್ಥನಾಮಮನಿಟ್ಟು ಮತ್ತಮಾಗಾಮಿಕಾರ್ಯಮನಱಿಪಿ ಪರಸಿ ಪೋಪುದುಮನಂತರಂ

ಕಂ॥ ಬಲಿ ಬಾಯನಂಗಳುಂ ಮಂ
ಗಲತೂರ್ಯಮುಮೆಸೆಯೆ ಗೇಯರವಮಂ ಪೊಂದೊ
ಟ್ಟಿಲ ಪೊಳಪುಂ ರಂಜಿಸುತಿರೆ
ಕಲನಾದದ ಗೋಪಕಾಂತೆಯರ್ ನೆರೆದಾಗಳ್ ೨೭

ಚಂ॥ ಉದರಮೆ ತೊಟ್ಟಿಲಾಗೆ ಭುವನತ್ರಯಮಂ ನೆಱೆ ತಾಳ್ದಿ ದೇಹಿವ
ರ್ಗದ ಕೃತಪಾಪಪುಣ್ಯಫಲಮಂ ಸಲೆ ತೂಗುವ ಕರ್ಮಸಾಕ್ಷಿಯಂ
ಪದುಳದೆ ತೊಟ್ಟಿಲೊಳ್ ಪಡಿಸಿ ತೂಗಿದರಚ್ಯುತ ಜೋ ಮಹಾತ್ಮ ಜೋ
ಸದಮಲಬೋಧ ಜೋ ಪರಮ ಜೋ ಹರಿ ಜೋಯೆನುತಂ ಲತಾಂಗಿಯರ್ ೨೮

ವ॥ ಆ ಮಹೋತ್ಸವದಿಂ ಬೞಿಕ್ಕೆ ಕತಿಪಯದಿನಂಗಳ್ಗೆ

ಕಂ॥ ಅನಿಮಿತ್ತದರಸ್ಮಿತದಿಂ
ದನಕ್ಷರಾಳಾಪದಿಂದ ಸಂಕೇತವಿಳೋ
ಕನದಿಂದ ಕಾರಣಾನಂ
ದನದಿಂದುತ್ತಾನಶಯನದಿಂ ಹರಿಯೆಸೆದಂ ೨೯

ವ॥ ಅಂತೆಸೆಯುತ್ತಿರ್ಪನ್ನೆಗಮೊಂದುದಿವಸಂ ಯಶೋದೆ ಪರಿಚಾರಿಕಾಜನಂ ಬೆರಸು ಕಾಳಿಂದೀನದಿಗೆ ಪೋದ ಪಿಂದೆ

ಕಂ॥ ತೊಟ್ಟಿಲನೊದೆದಾಡುತ್ತುಂ
ಪಟ್ಟಿರ್ದನನುರುಳಿವರಿದು ಶಿಶುವಂ ಕೊಲಲೆಂ
ದಿಟ್ಟೊತ್ತಿತದಂಘ್ರಿತಳಂ
ಮುಟ್ಟೆ ಸಿಡಿಲ್ ಪೊಡೆವ ತೆಱದೆ ಕೆಡೆದಂ ಶಕಟಂ ೩೦

ಮ॥ ಶಕಟಂ ಬೀೞ್ವೆಡೆಯೊಳ್ ಮಹಾಕುಲನಗಂ ಬೀೞ್ವಂತೆ ಬೇಱೊಂದು ದೈ
ತ್ಯಕರಾಳಾಕೃತಿ ಬೀೞೆ ಗೋಪರಿದನಿಂ ಕಂಡಂಜುಗುಂ ನೋಡೆ ಕೌ
ತುಕಮೀಕೂಸಿನ ಸಾಸವೆಂದುಮಿದು ಪೊಲ್ಲೆಂದಚ್ಯುತಂ ನುರ್ಗಿದಾ
ಶಕಟಂ [1]ತೋರ್ಪ[1] ನಿಶಾಟರೂಪವನದೃಶ್ಯಂ ಮಾಡಿ ಪಟ್ಟಿರ್ಪಿನಂ ೩೧

ಚಂ॥ ಗುರುಕುಚೆ ಗೋಪಿ ಬಂದು ಶಕಟಂ ಶತಧಾಕೃತಮಾದುದಿಂತಿದೆಂ
ದಿರದೆ ಬೞಿಕ್ಕೆ ಕೇಳಿ ಶುಕಜಲ್ಪಿತದಿಂ ಬಗೆವೋಗಿ ಕಂದನ
ತ್ಯರುಣತಳಾಂಘ್ರಿಯಿಂದಱಿದು ತತ್ಕಮಳಾಕ್ಷನನೆತ್ತಿಕೊಂಡು ಘೂಂ
ಕರಿಸಿ ನಿಜೇಶ್ವರಂಗಱಿಪಿ ಮಾಡಿಸಿದಳ್ ಬಹುಶಾಂತಿಕರ್ಮಮಂ ೩೨

ಕಂ॥ ಅಲಿಗಳ ಸೋಂಕಿಂ ಪ್ರಾತ
ರ್ಜಲರುಹಮಲರ್ವಂತೆ ಗೋಪಿಯರ್ ಪದೆಪಿಂ ಜ
ಕ್ಕುಲಿಸೆ [2]ಲಲಿತಾ[2]ನನಾಂಬುಜ
ಮಲರ್ದೆಸೆದುದು ಮಂದಹಾಸದಿಂ ಮುರಹರನಾ ೩೩

ಅಲಿಗಳೆಱಗಿರ್ದ ತಾವರೆ
ಯಲರಂ ಸಕಳಂಕಮಾದ ಶಶಿಮಂಡಲಮುಂ
ಗೆಲೆವೆಂದುದಂಜನಂ ಪರೆ
ದಲರ್ದ ಮೊಗಂ ಸಕಳಸುರಮನೋರಂಜನನಾ ೩೪

---

1 ತೋಱಿ (ಮೊಅ) 2 ಯಸಿತಾ (ಖಗ)

ಕುಸುಮಾಕರಸಮಯದೊಳತಿ
ಮಸೃಣತರಂ ಚೂತಪೋತಕಂ ಸನಿಯಿಂ ರಂ
ಜಿಸುವಂತಿರೆ ತನಯಂ ರಂ
ಜಿಸಿದಂ ಶೈಶವದೊಳಾ ಕುಶೇಶಯನಯನಂ ೩೫

ವಿವಿಧಸಟಾವಳಿ ಕಿರುಜಡೆ
ನವಕೇಸರಕಾಂತಿ ಕೊರಲ [1]ರಕ್ಕೆಯ[1] ರತ್ನ
ಚ್ಛವಿಯಾಗಲಂಬೆಗಾಲಿ
ಕ್ಕುವ ಪದದೊಳ್ ಸಿಂಹಶಿಶುವೊಲೆಸದಂ ಕೃಷ್ಣಂ ೩೬

ಉ॥ ತನ್ನದಟಿಂದೆ ಮಾಣದೆ ಗೃಹಾಂಗಣಮಂ ಪೊಱಮಟ್ಟುಪೋಪನಂ
ಬೆನ್ನನೆ ಪೋಗಿವೋಗಿ ಪಿಡಿತಂದೆನಸುಂ ಜಡಿದೊರ್ವೆ ಗೋಪಿ ದಾ
ಮಿನ್ನಡುಮಂ ತೊಡರ್ಚಿ ದೃಢವಾಗಲುಲೂಖಲದಲ್ಲಿ ಕಟ್ಟಿ ಪೋ
ಗಿನ್ನೆಲೆಪೋಗಲಾರ್ಪೊಡೆಲೆ ಚಂಚಲಚೇಷ್ಟಿತ ನೋೞ್ಪೆನೆಂಬುದುಂ ೩೭

ಚಂ॥ ಪನೆ ಮಿೞುಗಲ್ ಮುಗುಳ್ನಗೆನಗುತ್ತೊರಲಂ ತೆಗೆಯುತ್ತುಮೊಯ್ಯನೊ
ಯ್ಯನೆ ಮುರಿದಂಬಿಕಾಮುಖಮನೀಕ್ಷಿಸುತಂ ನಡೆಯಲ್ ಮಹಾಯಮಾ
ರ್ಜುನಕುಜದಲ್ಲಿ ಸಿಲ್ಕಿದೊರಲಂ ತೆಗೆಯಲ್ಕನುಗೆಯ್ದೊಡಾಯಮಾ
ರ್ಜುನ ತರು ಕಿೞ್ತು ಬೇರ್ವೆರಸು ಬಿೞ್ದಿರೆ ಮಧ್ಯದೊಳಿರ್ದನಚ್ಯುತಂ ೩೮

ಮ॥ ವಿಯದಾಶಾವಧಿಯಾಗಿ ಪೆರ್ಚಿ ಬೆಳೆದಿರ್ದಾ ಮತ್ತಿಯಂ ಕೃಷ್ಣನ
ೞ್ತಿಯ ಕೂಸಾಟದೆ ಕಿೞ್ತಿ ಮಾನುಷಚರಿತ್ರಂ ನೋೞ್ಪ ಗೋಪಾಲರೊಳ್
ಭಯಮಂ ಮಾಡದೆ ಮುದ್ದಿದೆಂಬದಟಿದೆಂಬಂತಾಯ್ತು ಯುಕ್ತಂ ಜಗ
ತ್ತ್ರಯರಕ್ಷಾಪ್ರಿಯನಪ್ಪ ಕೃಷ್ಣನ ಚರಿತ್ರಂ ಭೀತಿಯಂ ಮಾೞ್ಕುಮೇ ೩೯

ವ॥ ಆಗಳಾ ಕಳಕಳಧ್ವನಿಯಂ ಕೇಳ್ದಿದೇನೆಂದು ನಂದಗೋಪಂ ಪೊಱವೊೞಲಿಂ ಬಂದು ಭಗ್ನವಾಗಿರ್ದಾಮಹಾಸ್ಕಂಧಶಾಖಾರ್ಜುನವಿಟಪಿಯುಮಂ ದರಸ್ಮಿತಭಿನ್ನೋಷ್ಠಪುಟನಾಗಿರ್ದ ದಾಮೋದರನುಮಂ ಕಂಡು ಕೌತುಕಾನನ್ದನಿರತಿಶಯಹೃದಯನಾಗಿರ್ಪಿನಂ ಯಶೋದೆ

---

[1] ಭೂಷಿತ (ಖಗ)

ಚಂ॥ ಪರಮಸುಖಾರ್ದ್ರಲೋಚನದಿನೀಕ್ಷಿಸಿ ನಂದನನಂ ಸರೋರುಹೋ
ದರನನಿದಾರ ಮಾಣಿಕವಿದಾರ ನಿಧಾನವಿದಾರ ಮುದ್ದಿದಾ
ರರಸನಿದಾರ ಬಲ್ಲಹನಿದಾರ ಕರೀಂದ್ರನಿದಾರ ಸಿಂಹವೆಂ
ದಿರದಮರ್ದಪ್ಪಿದಳ್ ಪಡೆಪಿನಿಂ ಮೊಲೆವಾಲ್ ತೊಱಿದೆಚ್ಚುಪಾಯ್ವಿನಂ ೪೦

ಕಂ॥ ತರುಣೇಂದು ದಿನಕ್ರಮದಿಂ
ಪರಿವರ್ಧಿಸಿ ವಾರಿನಿಧಿಯನೊದವಿಪ ತೆಱದಿಂ
ಮುರರಿಪು ದಿವಸಕ್ರಮದಿಂ
ಪರಿವರ್ಧಿಸಿ ಜನದ ಮುದಮನೊದವಿಸುತಿರ್ದಂ ೪೧

ಒಂದಡಿಯನಿಟ್ಟು ಹರಿ ಮ
ತ್ತೊಂದಡಿಗಡಿಯೆತ್ತುವಾಗಳುಂ ವಿಕ್ರಮನಾ
ದಂದಿನ ಸಂಸ್ಕಾರಂ ಬಿಡ
ದೆಂದೆನೆ ಬಗೆಗೊಳಿಸಿದಂ ತಳರ್ನಡೆವೆಡೆಯೊಳ್ ೪೨

ಚಂ॥ ಕಮಲಭವಾದ್ಯರುಂ ಪಡೆವರೇ ಹರಿಪಾದರಜೋಲವಪ್ರಸಾ
ದಮನೆನಲತ್ಯಲಭ್ಯತರಮಾದ ತದಂಘ್ರಿಗಳೆನ್ನ ಮೇಲೆ ಸಂ
ಕ್ರಮಿಸಿದುವೆಂದು ತನ್ನ ಕೃತಕೃತ್ಯತೆಗೇಂ ತಲೆದೂಗುತಿರ್ದಳೋ
ಕ್ಷಮೆಯೆನೆ ಕಂಪಿಕುಂ ಧರೆ ತಳರ್ನಡೆಪಂಘ್ರಿಭರಕ್ಕೆ ಕೃಷ್ಣನಾ ೪೩

ಕಂ॥ ಎಡೆಗಿಱಿದಿರೆ ಪೊಂಗವಡಿಕೆ
ಬಿಡೆ ಘಲ್ಲೆನೆ ಗೆಜ್ಜೆ ಮಿಱುಗೆ ದಶನಾಂಶು ಕುರುಳ್
ಜಡಿಯೆ ತೊದಳ್ನುಡಿಯ ತಳ
ರ್ನಡೆಯ ಬೆಡಂಗಸುರವೈರಿಗಡಿಗಡಿಗೆಸೆಗುಂ ೪೪

ಒಡವುಟ್ಟಿದ ಕೌಸ್ತುಭಮಿ
ರ್ಪೆಡೆಗಂ ದಾಯಾದನಪ್ಪೆನೆನ್ನೆಗವೆಂದಂ
ದುಡುಪತಿಕಳೆ ನೆಲಸಿತ್ತೆನೆ
ಪೊಡೆಯಲರನ ಕೊರಲ ಪುಲಿಯುಗುರ್ ಕರವೆಸೆಗುಂ ೪೫

ನೊಸಲೊಳ್ ಕಣ್ಣುಳ್ಳ ಮನೋ
ಜಸೂದನಂ ಪೆಱನದಾವನಾನೆ ದಲೆಂದೀ
ವಸುಮತಿಗೆ ಸೂಚಿಪಂದದಿ
ನೆಸೆದಂ ಹರಿ ನೊಸಲಕಣ್ಬೊಲೆಸೆವರಲೆಲೆಯಿಂ ೪೬

ಕಂ॥ ವಿಕ್ರಮನನೂರ್ತಿಗೆ ತಾರಾ
ಚಕ್ರಂ ಕಟಿಸೂತ್ರಮಾಗೆ ತತ್ಕಟಿಸೂತ್ರಂ
ಚಕ್ರಿಗೆ ಬಾಲ್ಯಕ್ಕನುರೂ
ಪಕ್ರಮವಾಯ್ತೆನಿಸಿ ಮುತ್ತಿನುಡೆವಣಿಯೆಸೆಗುಂ ೪೭

ಸಲೆ ಪಾಱುಗಿಡದೆ ಗುಣದಿಂ
ತೊಲಗಿರದೀ ಕೃಷ್ಣಪದಮನಾಶ್ರಯಿಪೆನ್ನಂ
ತೆಲೆ ಮರ್ತ್ಯಪದಮನಾಶ್ರಯಿ
ಸಲೊಲ್ವನೆಂಬಂತೆ ಹರಿದು ನೂಪುರ[1]ಮುಲಿಗುಂ[1] ೪೮

ಎನಿತೊಂದು ಪದೆಪು ಮೋಹಂ
ವನಜಾಕ್ಷನೊಳನಿತು ಪದೆಪು ಮೋಹಂ ಬಳನೊಳ್
ತನಗಾಗೆ ನಂದವಧು ತ
ತ್ತನಯದ್ವಯಕೇಳಿಯಿಂದೆ ಸುಖಮಂ ಪಡೆದಳ್ ೪೯

ಚಂ॥ ಒಡನೊಡನಾಡಿಗಳ್ ಗಡಣದಿಂ ಬರೆ ಗೆಜ್ಜೆಯ ನುಣ್ಚರಂ ಪೊದ
ಱ್ದುಡೆವಣಿಯಿಂಚರಂ ನೆಗೞೆ ಕಣ್ಮಲರ್ಗಳ್ ಪೊಳೆದಾಡೆ ಧೂಳಿ ಮೆ
ಯ್ಗುಡರ್ದಿರೆ ಮುಗ್ಧಜಲ್ಪನಮೊಡಂಬಡೆ ರಂಜಿಸಿ ತಾಯ ದಿಟ್ಟಿ ತ
ಮ್ಮೊಡನೊಡನೆತ್ತಲುಂ ಪರಿವಿನಂ ಪರಿದಾಡಿದರಾಬಳಾಚ್ಯುತರ್ ೫೦

ಘನಕುಚೆ ಗೋಪಿ ಪಾಲ್ಗಡೆಯುತುಂ ಮನೆವಾೞ್ತೆಗೆ ಪೋಗೆ ಗೆಜ್ಜೆಯಿಂ
ದನಿ ನಸುಪೊಣ್ಮದಂತು ಪರಿತಂದೆಡಗೆಯ್ಯೊಳೆ ತೋಡಿ ಬೆಣ್ಣೆಯಂ
ತಿನುತಿರೆ ಗೋಪಿ ಕಂಡೆಲೆಲೆ ಕಳ್ಳತನಂಗಳನಣ್ಣ ಕಂಡೆವಾ
ಮೆನೆ ಕಡೆವಾಯ ಬೆಣ್ಣೆವೆರಸೊಯ್ಯನೆ ಪಿಂಗುವ ಕೃಷ್ಣನೊಪ್ಪಿದಂ ೫೧

ವ॥ ಮತ್ತೊಂದು ಸಮಯದೊಳ್ ಪಾಲ್ಗುಡಿಯಲೊಲ್ಲದಾಱುಗುಟ್ಟುವ ದಾಮೋದರನಂ ಯಶೋದೆ ಕಂಡು

ಚಂ॥ ಶಕಟವಿಮರ್ದನಾ ಮುಸಲಿ ಬಾರದ ಮುನ್ನಮೆ ನಮ್ಮ ಹೇಮಘಂ
ಟಿಕೆ ಘಣಿಲೆಂಬ ನಂದಿನಿಯ ಪಾಲಿದೆ ನೀಂ ಕುಡಿಯಲ್ಕೆ ನಿನ್ನ ಜೆಂ
ಡಿಕೆ ಬಳೆದಪ್ಪುದೆಂದಬಲೆ ನಂಬಿಸೆ ಪಾಲ್ಗುಡದೀಗಳಜ್ಜೆ ಜೆಂ
ಡಿಕೆಯೆನಿಸಿತುದ್ದವಾದುದೆನುತಂ ಬೆಸಗೊಳ್ವ ಮುಕುಂದನೊಪ್ಪುಗುಂ ೫೨

[1] ಮೆಸೆಗುಂ (ಕಖಗ)

ಮಲ್ಲಿಕಾಮಾಲೆ॥

ಚಾರಿಮೆಟ್ಟುವ ಭಂಗಿ ದೋರ್ವಲನಂ ಪನಂಗೊಳೆ ಮಂಜುಮಂ
ಜೀರಕಂಕಣಕಿಂಕಿಣೀರುತಿ ಪೊಣ್ಮೆ ವಕ್ರಿತಕಂಧರಂ
ಸ್ಮೇರವಕ್ತ್ರಸರೋರುಹಂ ಲಲಿತಾಯತೇಕ್ಷಣನಾಗಿ ಸಂ
ಸಾರನಾಟಕಸೂತ್ರಧಾರಿ ಮುರಾರಿ ಕೈವಱಿಸಿಗಾಡಿದಂ ೫೩

[1]ನೀರದೋತ್ಪಲ[1] ವರ್ಣನಾಡಿದನಾಡಿದಂ ಕಮಲೇಕ್ಷಣಂ
ಚಾರುಹಾಸನಿವಾಸನಾಡಿದನಾಡಿದಂ ಸುಭಗಂ ಶುಭಾ
ಕಾರನಾಡಿದನೆಂದು ಗೋಪಿಯರಾಡಿಸುತ್ತುಮಿರಲ್ಕೆ ಸಂ
ಸಾರನಾಟಕಸೂತ್ರಧಾರಿ ಮುರಾರಿ ಕೈವಱಿಸಿಗಾಡಿದಂ ೫೪

ಕ್ಷೀರಲಂಪಟನಾಡಿದಂ ನವನೀತಚೋರಕನಾಡಿದಂ
ದಾರಕವ್ರಜಮಲ್ಲನಾಡಿದನಾಡಿದಂ ಹರಿ ಗೋಕುಲಾ
ಧಾರನಾಡಿದನೆಂದು ಗೋಪಿಯರಾಡಿಸುತ್ತುಮಿರಲ್ಕೆ ಸಂ
ಸಾರನಾಟಕಸೂತ್ರಧಾರಿ ಮುರಾರಿ ಕೈವಱಿಸಿಗಾಡಿದಂ ೫೫

ದಾರುಣಾಕೃತಿಪೂತನಾಂತಕನಾಡಿದಂ ಶಕಟಪ್ರಸಂ
ಹಾರನಾಡಿದನಾಡಿದಂ ಯಮಳಾರ್ಜುನದ್ರುಮಘಾತಿಯೆಂ
ಬೀರವಂ ನೆಗೞಲ್ಕೆ ಗೋಪಿಯರಾಡಿಸುತ್ತುಮಿರಲ್ಕೆ ಸಂ
ಸಾರನಾಟಕಸೂತ್ರಧಾರಿ ಮುರಾರಿ ಕೈವಱಿಸಿಗಾಡಿದಂ ೫೬

ವೀರದೈತ್ಯರ[2]ನಿಕ್ಕಲಾಡಿಯೆ[2] ಪುಟ್ಟಿದಂ ಹರಿಯೆಂದು ಕೈ
ವಾರದಿಂದವೆ ಮಾತನಾಡೆ ವಿರೋಧಿಗಳ್ ಯಮಲೋಕಮಂ
ಸಾರಲಾಡೆ ಯಶೋದೆ ರಾಗರಸಾಬ್ಧಿಯೊಳ್ ತುಳುಕಾಡೆ ಸಂ
ಸಾರನಾಟಕಸೂತ್ರಧಾರಿ ಮುರಾರಿ ಕೈವಱಿಸಿಗಾಡಿದಂ ೫೭

ಕಂ॥ ಆನಂದಮೂರ್ತಿ ಸುಖಲ
ಕ್ಷ್ಮೀನಿಳಯಂ ಸಕಲಸಾರಸರ್ವಸ್ವನೆನಿ
ಪ್ಪಾನೀರಜನೇತ್ರನ ಲೀ
ಲಾನುಷ್ಠಿತಬಾಲಕೇಳಿ ಬಣ್ಣಿಪರಳವೇ ೫೮

---

[1] ನೀರಜೋತ್ಪಲ (ಕಮೊಅ) [2] ನಿಕ್ಕಲೋಸುಗ (ಖಗ)

ಚಂ॥ ಸಸಜಜ ಬನ್ನಿಮಿತ್ತ ಹಸ ಕುಳ್ಳಿರಿಮುನ್ನತಪೀಠದೊಳ್ ಸದಾ
ಸಸತಿಯಿನೇಟಿಬ್ ಮಹೇಂದ್ರ ದಿವಿಜರ್ ಪುಗೆ ಬಾರಿಸವೇಡೆನುತ್ತೆ ಮು
ನ್ನಿನ ನಿಜಲೀಲೆಯೋಲಗದ ಪೆರ್ಮೆಯ ಮಾತನದೊರ್ಮೆ ಸುಪ್ತಿಯೊಳ್
ಕನವರಿಸುತ್ತುಮಿರ್ಪ ಹರಿ ಗೋಪಿಗೆ ವಿಸ್ಮಯಮಂ ನೆಗಟ್ಟಿದಂ ೫೯

ಕಂ॥ ಒಂದಲ್ಲದೊಂದನೆನುತುಮ
ದೊಂದುದಿನಂ ಕೃಷ್ಣನಾಟಿಗುಟ್ಟಿದೊಡದನೇ
ನೆಂದುಂ ಮಾಣಿಸಲಱಿಯದ
ದೊಂದು ಕಥಾಂತರದೆ ಗೋಪಿ ಮಾಣಿಪ ಬಗೆಯಿಂ ೬೦

ಮ॥ ಕತೆಯಂ ಕೇಳಿಲೆ ಕಂದ ಹುಂ ರಘುಜನೆಂಬಂ ಹುಂ ಸಕಾಂತಂ ವನ
ಸ್ಥಿತನಾದಂ ಗುರು ಪೇಳ್ದ ಹುಂ ದಶಶಿರಂ ಕೊಂಡುಯ್ದನಾ ರಾಮನಾ
ಸತಿಯಂ ತಾನೆನೆ ಪೂರ್ವಮಂ ನೆನೆಯುತಂ ಹುಂಕೊಳ್ಳದುತ್ಕ್ರೋಪಹುಂ
ಕೃತಿಯಂ ಮಾಡುತುಮೌಂಡುಗರ್ಚಿ ಕಿಸುಗಣ್ಬಿಟ್ಟಚ್ಯುತಂ ರಂಜಿಕುಂ ೬೧

ಕಂ॥ ಆಡುತ್ತುಂ ಸಹಪಾಂಸು
ಕ್ರೀಡಿತರೊಳ್ ಕೃಷ್ಣನಬ್ಬ ಮಣ್ಣಂ ತಿಂದಂ
ನೋಡೆಂದು ಹಳಧರಂ ಪಿಸು
ಣಾಡಲ್ ಕೇಳ್ದೊರ್ಮೆ ಗೋಪಿ ಸೆಳೆವಿಡಿದೊಲವಿಂ ೬೨

ಮ॥ಸ್ರ॥ ಹರಿ ನೀಂ ಮಣ್ದಿಂದೆ ತಿನ್ನೆಂ ಜನನಿ ಪುಸಿದನೆನ್ನಗ್ರಜಂ ತೋಱು ವಕ್ತ್ರಾಂ
ತರಮಂ ನೋಡೆಂದು ಬಾಯಂ ತೆಱೆವುದುಮದಱೊಳ್ ವಾರ್ಧಿಯೇೞುಂ ಕುಲೋರ್ವೀ
ಧರವೇೞುಂ ದ್ವೀಪವೇೞುಂ ಬೆರಸು ಜಗಮನೀರೇೞುಮಂ ಕೂಡೆ ಕಂಡ
ಚ್ಚರಿವಟ್ಟಂ ಮುಚ್ಚುಮುಚ್ಚಾನನಮನೆನುತುಮಾಕಾಂತೆ ವಿಭ್ರಾಂತೆಯಾದಳ್ ೬೩

ಕಂ॥ ಕಮಳಾಕ್ಷನ ಮಹಿಮೆಯನಱಿ
ದುಮದಂ ತನ್ಮಾಯೆಯಿಂದೆ ಮಱೆವರ್ ಗೋಪರ್
ಯಮಿಗಳುಮಂ ಮೋಹಿಪ ವಿ
ಷ್ಣುಮಾಯೆ ಮೋಹಿಸದೆ ಗೋಪರಂ ತತ್‌ಕ್ಷಣದೊಳ್ ೬೪

ಉ॥ ಪೂತನೆ ಬಿರ್ದುದಂ ಶಕಟನೊತ್ತಿದುದಂ ಯಮಳಾರ್ಜುನಾವನೀ
ಜಾತಮನಾಹತಂ ಕೆಡೆದುದಂ ನೆನೆದದ್ಭುತಮಿಲ್ಲಿ ಕಾಣಲಾ
ಯ್ತಾತತಪಾತಕದಿಂದಮಿದು ನಿಸ್ತೃಣನಿರ್ಜಳನಿಪ್ಪ ವಾಳವ
ಳ್ಳೀ ತರುವಾದುದೀಯೆಡೆಯೊಳಿನ್ನಿರವಾಗದು ಪೋಪುದುತ್ತಮಂ ೬೫

ಮ॥ [1]ನಮಗಿನ್ನಿರ್ಪೊಡಮೊಂದೆ[1] ಸುಸ್ಥಳಮತೀವಾಸೇವ್ಯಮೀ ನಮ್ಮ ಗೋ
ಸಮುದಾಯಕ್ಕೆ ಬಹುಪ್ರಕಾರತೃಣಮುಂ ಸುಚ್ಛಾಯೆಯುಂ ತನ್ನೊಳ
ಪ್ರಮಿತಂ ಕೇಳಿಸುಖಪ್ರದೇಶಮೆಸೆಗುಂ ವೃಂದಾವನಂ ಕೀರಕೇ
ಕಿಮರಾಳಪ್ರಜದಾವನಂ ಪ್ರಚುರಕಾಳಿಂದೀವನಂ ಪಾವನಂ ೬೬

ವ॥ ಎಂದು ನಂದಗೋಪಂ ಗೋಪವೃದ್ಧರೊಳ್ ಸಮಾಳೋಚನಂಗೆಯ್ದು ನಿಶ್ಚಯಿಸಿ ನಿಖಿಲಗೋಪಕಟಕಂ ಬೆರಸು ಕತಿಪಯಪ್ರಯಾಣಂಗಳಿಂ ಪೋಗಿ

ಕಂ॥ ವೃಂದಾವನತಟದೊಳ್ ಗೋ
ವೃಂದಾವನವಾಂಛೆಯಿಂದೆ ಮನೆಗಟ್ಟಿದನಾ
ನಂದು ಕೃತಗೋಪಜನಾ
ನಂದಂ ದುರ್ಭೇದಶ[2]ಕಟರುಚಿ[2] ರಂಜಿಪಿನಂ ೬೭

ಮ॥ ನಯಮುಂ ತೋರ್ಕೆಯುಮಿರ್ಪುವೋಡಿದ ನಿದಾಘಾಕ್ರಾಂತಭೂಜಾಳಿ ಶೌ
ರಿಯ ಸಂಕಲ್ಪದೆ ಪತ್ರಪುಷ್ಪಫಲಭಾರಾಕ್ರಾಂತಮಾಗಿರ್ದುವೊ
ರ್ಮೆಯೆ ವೃಂದಾವನಭೂಮಿಯೊಳ್ ನಿಜನಿಮೇಷೋನ್ಮೇಷಮಾತ್ರಂ ಜಗ
ತ್ರಯಸೃಷ್ಟಿಕ್ಷಮನಾದ ಕೃಷ್ಣನ ಮಹತ್ತ್ವಕ್ಕೇನಿದಾಶ್ಚರ್ಯಮೋ ೬೮

ಅಸುರಾರಿ ಕಾಕಪಕ್ಷದಿ
ನೆಸೆದಿರ್ದಂ ಕಾಕಪಕ್ಷವಿಸರದ ತಣ್ಪಿಂ
ದಸುರಗಣಮಿರ್ಕುಮಿಾರಣ
ವಸುಧೆಯೊಳಂದಮರರೊಸಗೆವಡೆಡೆವಾಜಿಪಿನಂ ೬೯

ಆದಿಪುರುಷಂ ಸರೋಜಭ
ವಾದಿನುತಂ ತ್ರಿಭುವನಾದಿಗುರು ಗೋಪಪದ
ಕ್ಕಾದಿಪದಮಿಂತಿದೆನೆ ತುಱು
ಗಾದಂ ಲೀಲಾಯಿತಂ ಸ್ವಯಂಪ್ರಭುಗುಚಿತಂ ೭೦

ಮ॥ ಮಿಳಿರ್ವನ್ನಂ ಕುಡಿವಾಲಮುಜ್ವಳಿಸುವನ್ನಂ ದಿಟ್ಟಿ ಸೂಱುಕ್ಕಿ ಕೆ
ಕ್ಕಳಿಪನ್ನಂ ಕಿವಿ ಸೋಂಕಿನಿಂ ಕೊಣಕಿಡುತ್ತುಂ ಬರ್ಪಿನಂ ಪೋಗಿ ತಂ
ದೆಳವುಲ್ಲುಂ ಮೊಳೆವುಲ್ಲುಮೆಂಬ ಪಸುವುರ್ಲ್ಲೊಳ್ ತಾಂಗಿ ಕಾಳಿಂದಿಯೊಳ್
ತಿಳಿನೀರೂಡಿ ಮುರಾರಿ ವತ್ಸಕುಲಮಂ ಕಾದಂ ಮಹೋತ್ಸಾಹದಿಂ ೭೧

---

1 ನಮಗಿಂತಪ್ಪಡಮೊಂದೆ (ಕಗ) 2 ಕಟಕರುಚಿ (ಮೊಅ)

ಕಂ॥ ಶೈಶವದೊಳಬಲೆಯರ್ಗೆ ಕು
ಶೇಶಯಲೋಚನನ ಮೂರ್ತಿ ಪಡೆದುದು ರಾಗಾ
ವೇಶಮನೆಳವೆಱೆಯು ಕಳಾ
ವೇಶಮದುತ್ಪಲಿನಿಗಳ್ಗೆ ಪಡೆವವೊಲೊಲವಂ ೭೨

ಚಂ॥ ಅನುನಯದಿಂ ಬಸಕ್ಕೊಡಸೆ ಪೋಗಿ ಲತಾಗೃಹದಲ್ಲಿ ಗೋಪಿಯರ್
ವನರುಹನೇತ್ರನಂ ಪಿಡಿದು ಚುಂಬಿಸೆ ತಳ್ತಮರ್ದಪ್ಪಿ ಪೀವರ
ಸ್ತನಭರದೊಳ್ ಪೊರಳ್ಚಿ ನಿಬಿಡೋರುಯುಗಂಗಳೊಳಿಟ್ಟಮರ್ಚಿ ಸಂ
ಜನಿತ ಕಟೀತಟದ್ರವೆಯರುತ್ಪುಲಕಾಂಗಿಯರಾಗಿ ರಂಜಿಸರ್ ೭೩

ಕಂ॥ ಕಾಮಾಂಗಚೇಷ್ಟೆಯಿಲ್ಲದ
ದಾಮೋದರನಂಗಸಂಗದೊಳಗಾ ಸತಿಯರ್
ಕಾಮಾಮೃತಮಂ ತಳೆದರ್
ಸೋಮಮಣಿಸ್ಥಳಿಗಳೊಸರ್ವವೋಲ್ ಶಶಿರುಚಿಯಿಂ ೭೪

ವಿಕಸಿತತಿಲಾತಸೀಕುಸು
ಮಕಾಂತಿಗಳ್ ನೀಲಹೇಮರುಚಿನಿಚಯರ್ ಗೈ
ರಿಕಲಸಿತಫಾಲಕರ್ ಬಾ
ಲಕರೆಸೆದರ್ ವತ್ಸಪಾಲಕರ್ ಬಲಕೃಷ್ಣರ್ ೭೫

ಸ್ಮಿತಕರ್ಣಿಕಾರಸುಮನ
ಶ್ರುತಿಪೂರರ್ ಚಿತ್ರಕುಸುಮಮಯವನಮಾಲರ್
ಶಿತಿಕಂಠಬರ್ಹಶೀರ್ಷರ್
ಸುತವೇಣೀಸ್ಫುರಿತಚೂಡರಸಕೃತ್ಕ್ರೀಡರ್ ೭೬

ಅನುಕೃತಮಯೂರಕೇಕಾ
[1]ನಿನಾದ[1] ಮೃದುಗಾನತಾನನ[2]ನಿಪುಣರ್[2] ಮಧುರ
ಸ್ವನಪತ್ರವಾದ್ಯ[3]ನಿರತರ್[3]
ಮನೋಜ್ಞಗೋಪಾಲವೇಣುವಾದನಸುಭಗರ್ ೭೭

---

[1] ನಿನದರ್ (ಖ) [2] ನಿಯುತರ್ (ಖ) [3] ಚತುರರ್ (ಖ)

ತೋಯಜನಾಭನನಂತಸ
ಹಾಯಂ ನಲಿದಿಂತು ವತ್ಸಕುಲಮಂ ಕಾದಂ
ಕಾಯೆ ವಿರಹಿಣಿಗನಂಗಂ
ಕಾಯೆ ಮನೋರಥಿಮಹೀರುಹಂ ನಾಕಿಗಳಾ ೭೮

[1]ಅಚ್ಛನವಪೀತ[1] ಪಟನ
ಭೃಚ್ಛವಿ ನವಕುಸುಮಭೂಷಿತಂ ಕಮಳಾಕ್ಷಂ
ಸ್ವಚ್ಛಂದಗಾಮಿ ಯಮುನಾ
ಕಚ್ಛಂಬಿಡಿದೆಯ್ತರುತ್ತುಮೊಂದವಸರದೊಳ್ ೭೯

ಚಂ|| ಘುಳುಘುಳಿಸುತ್ತೆ ಬುದ್ಬುದಚಯಂ ನೆಗೆದಪ್ಪುದಿದೇಕೆ ನೀರಜಂ
ಗಳ ರಾಜದಂತದೊಂದರುಣಕಾಂತಿ ಪೊದಟ್ಟಿಪುದೇಕೆ ಧೂಮಮುಂ
ಡಳಮೊಗೆದಪ್ಪುದೇಕಿದಱಿಳೀಹ್ರದಮದ್ಭುತಮೆಂದು ಗೋಪರಂ
ಜಳರುಹನಾಭನಂದು ಬೆಸಗೊಳ್ವುದುಮಿಂತಿದು ಕಾಳಿಯಹ್ರದಂ ೮೦

ವ|| ಈ ಕರ್ಮಡುವಿನೊಳ್ ಕಾಳಿಯಮಹಾಸರ್ಪನಿರ್ಪಂ. ಈಘುಳುಘುಳು ಧ್ವಾನೋದ್ಗತಬುದ್ಬುದಪ್ರಕಾರವಾಸ್ಫಟಾಧರ ನತಿಸ್ಫಾರಸ್ಫಟಾಫೂತ್ಕಾರವಾತೋದ್ಗತ ಬುದ್ಬುದಪ್ರಕರಂ. ಈಯರುಣಕಿರಣಮಂಜರೀಪುಂಜಮಾ ಫಣೀಂದ್ರನ ಫಣಾಮಣಿ ಗಣಾರುಣಕಿರಣಮಂಜರೀಪುಂಜಂ. ಈ ಸಮುದ್ದಾಮಧೂಮಸ್ತೋಮಮಾಲೇಲಿಹಾನ ನಾಭೀಲಹಾಳಾಹಳೋದ್ದಾಮ ಧೂಮಸ್ತೋಮಂ. ಅದಲ್ಲದೆಯುಂ

ಕಂ|| ಆ ವಿಷಮಾಹಿಯ ವಿಷಮುಖ
ಪಾವಕನಿಂ ಪಾಱುತಿರ್ಪ ಖಗಕುಳಮುಂ ತೀ
ರಾವನಿಜ ಭೂಜಕುಳಮುಂ
ಬೇವುದು ಯೋಜನಪರಿಪ್ರಮಾಣಾಂತರದೊಳ್ ೮೧

ವ|| ಆ ಪ್ರದೇಶಮಂ ಪೊರ್ದಲಾ ಕಾಳಕೂಟಮಂ ಧರಿಸಿದ ಪುರಹರಂಗಮರಿದು; ನಾಮತ್ತ ಪೋಗಲಾಗದೆಂದು ಸಹಪಾಂಸುಕ್ರೀಡಿತರಪ್ಪ ಗೋಪಾಲಕರ್ ಪೇಟೞ

ಕಂ|| ತ್ರಿದಶಾಸುರರಂ ಸುಡುವ
ಗ್ಗದ ವಿಷಮಂ ನುಂಗಿದಾ ತ್ರಿಣೇತ್ರನುಮಾನೆಂ
ಬುದನರಿಯರ್ ಮಾನವರೆಂ
ದದರ್ಕೆ ನಗುವಂತೆ ದನುಜರಿಪು ನಸುನಗುತಂ ೮೨

---

1 ಅಚ್ಛನ್ನಪೀತ (ಖಗ)

ದುಷ್ಟೋರಗನಂ ತಗುಳ್ದಿಂ
ಶಿಷ್ಟಜನಂ ಸೇವಿಸಂತು ಮಾಡುವೆಸಿದನು
ತ್ಕೃಷ್ಟಮೆನೆ ದುಷ್ಟನಿಗ್ರಹ
ಶಿಷ್ಟಪ್ರತಿಪಾಲನಾರ್ಥಮೆನ್ನವತಾರಂ ೬೩

ವ|| ಎಂದು ಮನದೊಳ್ ಕೃತಪ್ರತಿಜ್ಞನಾಗಿ ನೋಡುವೆನೆಂದು ತತ್ಸಮೀಪಕ್ಕೆ ಬಂದು ನೋಟ್ಪಲ್ಲಿ

ಮ|| ಮದನೋಚ್ಛ್ವಾಸದಿನುಣ್ಮಿತಿರ್ಪ ಧುಮುರ್ಮೋರ್ಮಿಶ್ರೇಣಿಯಂ ತನ್ನ ಪ
ಕ್ಕದ ಸೇವಾಗತಭೋಗಿಭಂಗುರವಪುಃಕಾಂಡಂಗಳಿಂ ಮಿಕ್ಕು ನಿ
ಲ್ಲದೆ ಮಿಕ್ಕಂ ವಿಷವಹ್ನಿಯಿಂ ವಿಳಯಕಾಲಜ್ವಾಲೆಯಂ ಭೋಗರ
ತ್ನದ ಜೆಲ್ವಿಂ ದ್ಯುತಿಮಾಲಿಯಂ ಮಸಕದಿಂದಂಭೋಳಿಯಂ ಕಾಳಿಯಂ ೬೪

ವ|| ಆ ಕುಂಭೀನಸನ ಸಂರಂಭಮಂ ಕಂಡುಮಿರ್ಕೆಲನಂ ನೋಡೆ

ಕಂ|| ಅಮರಪತಿಯೊಡನೆ ತಳ್ತಿಱಿ
ದಮೃತಮನುಯ್ವಲ್ಲಿ ಗರುಡಹಸ್ತದಿನಂದೊಂ
ದಮೃತದ ಮನಿ ತನ್ನೊಳ್ ಮನಿ
ತು ಮಹೀಜಂ ವಿಷದೆ ಬೇಯದಿರ್ದುದು ತಡಿಯೊಳ್ ೬೫

ಆಗಸದಿಂ ಪದ್ಯತಿಲಾ
ನಾಗಂಗೆ ಗರುತ್ಮನೆಱಗುವಂತಾಮರದಿಂ
ನಾಗಾರಿಕೇತು ಕಾಳಿಯ
ನಾಗಂಗೆಱಗಿದನಮರ್ತ್ಯರೀಕ್ಷಿಸೆ ನಭದೊಳ್ ೬೬

ಸಿಡಿದ ಪೆಡೆವಣಿಗಳಂ ನೂ
ರ್ಮಡಿಸುತ್ತುಂ ನೆಗೆವ ತದ್ವಿಷಾಗ್ನಿಯ ಕಿಡಿಯಿಂ
ದೊಡನೆಯು ಗೋಪರ್ ತಂತ
ಮ್ಮೊಡಲೊಳ್ ಪುಗುಳೇಱಿ ಪೋಗಿ ಪುಯ್ಯಲ್ಚುವುದಂ ೬೭

ಶಿಶಿರಪಯಃಕಣವೆರಸಿದ
ಕುಶೇಶಯಚ್ಛದಮನಕ್ಷಿಗಳ್ ಬಾಷ್ಪಜಲ
ಪ್ರಶಮಿತರುಚಿಗಳ್ ಪೋಲ್ತಿರೆ
ಯಶೋದೆಯುಂ ನಂದಗೋಪನುಂ ನಡೆತಂದರ್ ೬೮

ಉದಯಿಪ ವಿವೇಕಲಕ್ಷ್ಮಿಯ
ನಿದಿರ್ಗೊಳ್ವರ್ಘ್ಯಂಬುವೆನಿಸಿ ಖೇದಾಶ್ರುಜಲಂ
ಮೊದಲೊಳ್ ಸೂಸೆ ಬಟಿಕ್ಕಂ
ವಿದಿತಾಚ್ಯುತಪುಹಿಮನಾಗಿ ಬಲನೆಟ್ಟಿಂದಂ ೮೯

ಮ|| ನಸುಜೋಲ್ದುಳ್ಳುಡೆಯುಂ ತೆಱಂಬೊಳೆದು ಪಾಱುತ್ತಿರ್ಪ ಸಂವ್ಯಾನಮುಂ
ನೊಸಲೊಳ್ ತಳ್ತ ಕುರುಳ್ಗಳುಂ ತುಱುಗಿ ನೀರೇಱಿರ್ದಲರ್ಗಣ್ಗಳುಂ
ಬಿಸುಸುಯ್ವೆಂಕೆಯಿನಿರ್ಪುಗುಂದಿದಧರಂ ಬಿಟ್ಟಿರ್ದ ಧಮ್ಮಿಲ್ಲಮುಂ
ಪೊಸತೊಂದೊಪ್ಪಮನೀಯೆ ವಿಹ್ವಳತೆಯಿಂ ಬಂದತ್ತು ಗೋಪೀಜನಂ ೯೦

ಉ|| ದಾರಕನುಲ್ಲನೆಲ್ಲಿದನಮಾನುಷಖೇಳನಡೆಲ್ಲಿದಂ ವ್ರಜಾಂ
ಭೋರುಹಮಿತ್ರನೆಲ್ಲಿದನನಂತಸಹಾಯನಡೆಲ್ಲಿದಂ ಕನ
ನ್ನೀರದಕಾಂತಿಯೆಲ್ಲಿದನುದಂಚಿತಚಂದ್ರಕಳಾಪನೆಲ್ಲಿದಂ
ಚಾರುಸುವರ್ಣವರ್ಣಪಟನೆಲ್ಲಿದನೆಲ್ಲಿದನಬ್ಜಲೋಚನಂ ೯೧

ವ|| [1]ಎನುತ್ತೆಯ್ದೆವಂದು[1] ನೋಟ್ಪಲ್ಲಿ

ಚಂ|| ಘನಗರಳಂ ವಿಜೃಂಭಿಸೆ ಫಣಾಮಣಿ ರಂಜಿಸೆ ಘೋರಫೂತ್ಕೃತ
ಧ್ವನಿ ಮಿಗೆ ಪಾವು ಸುತ್ತಿರಲನಾಹತಲೀಲೆಯೊಳಂದು ಬಾಳಚಂ
ದನಕುಜದಂತೆ ಕೃಷ್ಣನೆಸೆದಿರ್ದೊಡಮಾದುದಪಾಯಮೆಂದು ವೇ
ದನೆ ಪಿರಿದಾಯ್ತು ನಂದನ ಯಶೋದೆಯ ಗೋಪಿಯರಂತರಂಗದೊಳ್ ೯೨

ಕಂ|| ಭವದೀಯಮನೋಹರಬಾ
ಲ್ಯವಿನೋದಾಮೃತದೊಳೆಯ್ದೆ ತೀವಿದ ಮತ್ಸ್ವಾಂ
ತವ[2]ನಿಂತೀವಿಷದಿಂ[2] ತೀ
ವುವುದೇ ಶ್ರೀವತ್ಸವತ್ಸ ವತ್ಸ ಸವತ್ಸಾ ೯೩

ಪಿರಿದುಂ ಮದೀಯಜನ್ಮಾಂ
ತರಪುಣ್ಯದಿನೆಮಗೆ ನಿನ್ನ ದೊರೆಯ ತನೂಜಂ
ದೊರೆಕೊಂಡನೆಂಬ ಸುಖಸಾ
ಗರಮುಂ ದುಃಖಾನಳಾರ್ಚಿ ಪೀರ್ದಪುದಲ್ತೇ ೯೪

---

[1] ಎನುತ್ತೈತಂದು (ಖ) [2] ನಾಶೀವಿಷದಿಂ (ಕಖಗ)

ಹರಿಯಿಲ್ಲದ ಪವನಾಧ್ವಂ
ಹರಿಯಿಲ್ಲದ ಲೋಕಪಾಲಪರಿಷದ್ವಲಯಂ
ಹರಿಯಿಲ್ಲದ ಕಾಂತಾರಂ
ಹರಿ ನೀನಿಲ್ಲದ ಮದೀಯಗೋಕುಲಮಫಲಂ ೯೫

ವ|| ಎಂದು ನಂದಗೋಪನುಂ ಯಶೋದೆಯುಮಳವಿಗಱಿದಟಲನೊಳಕೊಂಡು ಚಂಡಾಹಿತುಂಡಖಂಡಿತಪುಂಡರೀಕಾಕ್ಷವದನವಿನ್ಯಸ್ತ [1]ತರಳತಾರನೇತ್ರರುಂ[1] ನಿಸ್ಸಂಜ್ಞ ತ್ರಿಸಂಜ್ಞಗಾತ್ರರುಮಾಗೆ ತದನಂತರಂ

ಮ||ಸ್ರ|| ರಮಣೀಯಸ್ಥಾನದೊಳ್ ನಿನ್ನೊಡನೆ ನಲಿದು ಸರ್ವೋಲ್ಬಣಸ್ಥಾನದೊಳ್ ಮಾ
ಣ್ದೆಮೆ [2]ನೀನೆಲ್ಲಿರ್ಪೆ[2]ಯಿರ್ದಲ್ಲಿಯೆ ಸುಖಮೆಮಗಾ ಕಾಮಬಾಣಾಗ್ನಿಯಿಂ ಸ
ರ್ಪಮುಖಕ್ಷ್ವೇಡಾಗ್ನಿಯೇಂ ದುಸ್ಸಹಮೆ ಸುಭಗ ನಿನ್ನಲ್ಲಿಗೀಬರ್ಪೆವೆಂದ
ಶ್ರಮದಿಂ ಗೋಪೀಜನಂ ಕರ್ಮಡುವುಗೆ ಪುಗವೇಡೆಂದು ಸಂತೈಸಿ ರಾಮಂ ೯೬

ಕಂ|| ಜನಕಂ ರಕ್ಷಕನಂತಕ
ನನಾದಿಮಧ್ಯಾಂತ ನಿನಗದಾವನಜಂಗಂ
ಜನಕಂ ರಕ್ಷಕನಂತಕ
ನೆನಿಸಿದೆ ಕೇಳ್ ಪೊಗೞ್ವರಳವೆ ನಿನ್ನ ಮಹತ್ತ್ವಂ ೯೭

ಪರನಪರಂ ಭವನಭವಂ
ಚರನಚರಂ ಸುಗುಣನಗುಣನೇಕನನೇಕಂ
ಕ್ಷರನಕ್ಷರನೆನಿಪಗಣಿತ
ವಿರುದ್ಧಗುಣ ನಿನ್ನ ನಿಜಮದೇಂ ಕೇವಳಮೋ ೯೮

ನೆನೆ ನಿನ್ನ ಮಹಿಮೆಯುಂ ನೀ
ನೆನಿತನಿದಂ ಕೊಂಡುಕೊನೆವೆ ನೀರ್ವಾವನಿದ
ರ್ಕೆನಿತೇಕೆ ಮಾನುಷತ್ವಮ
ನೆನಸುಂ ನಟಿಯಿಸುವೆ ಕೃಷ್ಣ ಪೊಱಮಡು ಮಡುವಿಂ ೯೯

ವ|| ಎನಲೊಡಂ

ಚಂ|| ತಿಳಿಯೆ ವಿನೋದನಿದ್ರೆ ಹರಿ ಮೆಲ್ಲನೆ ಮೆಯ್ಮುಱಿವಂತೆ ಗೆಯ್ದು ತ
ನ್ನಳವಱಿದೆಯ್ದೆ ಸುತ್ತಱಿದ ಪಾವಿನ ಪೆರ್ವೆಡೆಯುಂ ಪದಾಂಬುಜಂ
ಗಳ ಕೆಱಗಿಕ್ಕಿ ಮೆಟ್ಟಿ ಕರದಿಂದೆ ತದೀಯಶರೀರಕಾಂಡಮಂ
ಜಳರುಹಕಾಂಡಮಂ ಪಿಡಿವವೋಲ್ ಪಿಡಿದಾಡಿದನಂದು ಲೀಲೆಯಿಂ ೧೦೦

---

[1] ನಿರಸ್ತತರಳತಾರಾನೇತ್ರರುಂ (ಕಗ) [2] ನೀನೆಲ್ಲಿರ್ದೆ (ಕಖಗ)

ಕಂ|| ಕಾಳಿಯನಂ ಮರ್ದಿಪ ವನ
ಮಾಳಿಗೆ ಸುಗಿದೀಗಳುಗುೞುತಿರ್ದನೊ ರಾಹು
ವ್ಯಾಳಂ ಮುನ್ನೆಂಡಮರ್ದಂ
ಪೇೞಿತನಿಸಿದುದರಲ ಸುರಿವ ಬಲ್ಸರಿ ಸುರರಾ ೧೦೧

ವ|| ಆ ಪ್ರಸ್ತಾವದೊಳ್

ಉ|| ಮಾಱುವ ಸುಯ್ಯೆಲರ್ ಕೊಱಗಿ ತೋಱುವ ವಕ್ತ್ರಪ್ರಯೋಜನಶ್ರುವಂ
ಪೇಱುವ ಕಣ್ಮಲರ್ ಪೊಳೆದು ಪಾಱುವ ಮೇಲುದು ಮಂಜುಘೋಷಮಂ
ಬೀಱುವ ಸಿಂಜಿನೀವಳಯಕಾಂಚಿಗಳೆಂಬಿವಱಿಂದದೊಂದು ಜೆ
ಲ್ವೇಱಿರೆ ಭೋಗಿಬಾಮಿನಿಯರಾ ಮಡುವಿಂ ಪೊಱಮಟ್ಟರೆಲ್ತ್ತಿಯಿಂ ೧೦೨

ಕಂ|| ಬಂದಚ್ಯುತನಭಿಮುಖದೊಳ್
ನಿಂದು ಕೃತಾಂಜಲಿಗಳಾಗಿ ಕಾಳಿಯಸತಿಯರ್
ಸಂದ ಪತಿಭಕ್ತಿಗುಣದಿಂ
ದಂದುದಯಿಸಿದಮಲಬೋಧದಿಂದಿಂತೆಂದರ್ ೧೦೩

ಅನಿಮೇಷರಕ್ಷಣಾರ್ಥಂ
ನಿನಗೆ ತನುಗ್ರಹಣವಾ[1]ದುದಱಿಂದಿನ್ನಾ[1]
ಮುನಿಸಂತತಿಗಮಚಿಂತ್ಯವ
ದೆನಿಪ ಪರಂಜ್ಯೋತಿ ನೀಂ ಕುಶೇಶಯನಯನಾ ೧೦೪

ಉದಯಸ್ಥಿತಿಸಂಹಾರ
ಪ್ರದಂ ಜಗಕ್ಕೆನಿಪ ಕಮಲಭವಹರಿಹರನಾ
ಮದ [2]ಪುರುಷಾಕಾರತ್ರಯು[2]
ಮದು ನಿನ್ನ ವಿಡಂಬಮಲ್ತೆ ಪರಮಜ್ಯೋತೀ ೧೦೫

ಕ್ಷಮರಾರಿತರರ್ ನಿಜಪದ
ಮುಮನಱಿಯಲ್ ಪದ್ಮಭವನ ಮತಿಗಂ ಹರಿ ನಿ
ನ್ನ ಮಹತ್ತ್ವಂ ಪ್ರಥಿತಮಗಾ
ಧಮಗಾಧಮಮುನ್ನತೋನ್ನತೋನ್ನತಮಲ್ತೇ ೧೦೬

---

1 ಅದಱಿಂದಂ ನೀಂ (ಕಖಗ) 2 ಪುರುಷಕಾರಣತ್ರಯ (ಕಖ)

ವಿವಿಧಬ್ರಹ್ಮಾಂಡಂ [1][ಮಾ
ಧವ ನಿನ್ನವಕಾಶಮಪದಱ][1] ಸೂಕ್ಷ್ಮತರಾಂಶಾಂ
ಶವೆನಲ್ ನಿಜಸ್ವರೂಪದ
ಪವಣುಮನಾರ್ ಬಲ್ಲರೆಂತದಂ ಬಣ್ಣಿಸುವರ್ ೧೦೭

ನಾಕಿಗಳಿಂದ್ರಾದ್ಯರ್ ಪರ
ಮಾಕೃತಿ ದುರ್ಲಕ್ಷ್ಯವೆಂದೆನಲ್ ನಿನ್ನವತಾ
ರಾಕೃತಿಯನರ್ಚಿಪರ್ ಮಹಿ
ಮಾಕರ ಪರಮಾರ್ಥವಾರ್ಗೆ ಲಕ್ಷ್ಯಂ ನಿನ್ನಾ ೧೦೮

ಯೋಗಾಕ್ಷಿಯಿಂದೆ ಕಂಡು ಮ
ನೋಗೃಹದೊಳ್ ನಿಲಿಸಿ ಭಾವಕುಸುಮೋತ್ಕರದಿಂ
ಯೋಗಿಗಳರ್ಚಿಪ ನಿನ್ನನ
[2]ದೇಗಾಣ್ಬೆವಬಲೆಯರಾವದಂ[2]ತರ್ಚಿಪೆವೋ ೧೦೯

ಬಿತ್ತರಿಸಲರ್ಚಿಸಲ್ ಮುನಿ
ಪೋತ್ತಮರುಂ ಬಲ್ಲರೇ ಕ್ರಿಯಾಮಾತ್ರಮನೋ
ವೃತ್ತಿಗಳ[3]ನೆಂತು[3] ನಿನ್ನಂ
ಬಿತ್ತರಿಸುವೆವೆಂತು ನಿನ್ನನರ್ಚಿಪೆವೀಶಾ ೧೧೦

ಜಗದಾಧಾರಕನೈ ನೀ
ನಗಧರ ನಿನ್ನಂಘ್ರಿಭಾರಮಂ ಕ್ಷೀಣಬಲೋ
ರಗನೆಂತು ಸೈರಿಪಂ ಕಂ
ಠಗತಾಸು ಗತಾಸುವಕ್ಕುಮೇಕಕ್ಷಣದಿಂ ೧೧೧

[4]ರಿಕ್ಕಟದ ಶಕ್ತಿಯುಂ ಮುಂ[4]
ದಿಕ್ಕಿಯುಮಾತ್ಮಾಂತರಂಗದೊಳ್ ಮುಳಿಸಂ ಪಿಂ
ದಿಕ್ಕಿಯುಮೀಫಣಿಯುಂ ಕೊಂ
ದಿಕ್ಕದಿರಿಕ್ಕೆಮಗೆ ಪುರುಷಭಿಕ್ಷಮನರಸಾ ೧೧೨

---

[1] ಭೂಪವನ್ನಾಗಿ ಜಲಾಮ್ಬರಮವು (ಎಲ್ಲ ಪ್ರತಿ) [2] ದೇಗಾಮ್ಬಬಲೆಯರೆನಾವದಂ (ಕಖಗ) [3] ಸೆಂದು (ಕಖಗ) [4] ಅಕ್ಕಟ ಮದುಕ್ತಿಯುಂಪಿಂ (ಕಖಗ)

ಸೃಷ್ಟಿಸಮಯದೊಳಿದರ್ಕಿದು
ಜೇಷ್ಟಿತವೆಂದಖಿಳಜಾತಿಯೊಳ್ ಕಲ್ಪಿಸೆ ನೀಂ
ದುಷ್ಟತೆ ನಿಸರ್ಗಮಾಯ್ತೆನೆ
ದುಷ್ಟವಿಷೋರಗತೆ ನಿನ್ನ ಮಾಡಿದ ಮಾಟಂ ೧೧೩

ಅಪರಾಧಮಿಲ್ಲ ಪರಿಭಾ
ವಿಪೊಡೀತೆಱದಿಂದವೆಮ್ಮೊಳದುಕಾರಣದಿಂ
ಕೃಪೆಗೆಯ್ವುದೆಮಗೆ ನೀಂ ರ
ಕ್ಷಿಪುದೀಕಾಳಿಯಫಣೀಂದ್ರನಂ ಫಣಿಶಯನಾ ೧೧೪

ವ॥ ಎಂದು ದಂದಶೂಕವನಿತಾಜನವಭಿಷ್ಟುತಿಗೆಯ್ದು ಬಿನ್ನವಿಸೆ ಸಂತುಷ್ಟನಾಗಿ [1]ಕಾಳಿಯ[1] ವ್ಯಾಳಕುಳಾಂಗನಾಜನದ ದೈನ್ಯವಚನಪರಂಪರೆಗೇಳ್ದು ಕರುಣಂಗೆಯ್ದು ಕಾಳಿಯನಂ ನೋಡಿ ನೀನಿಲ್ಲಿರಲ್ವೇಡ ಅಪತ್ಯಭೃತ್ಯಬಾಂಧವಾಂತಃಪುರಪುರಸ್ಸರಮುರಗೇಶ್ವರ ಸಮುದ್ರಮಂ ಪೋಗಿ ಪುಗು ನಿನ್ನ ಪೆಡೆದುಱುಗಲೊಳೆನ್ನ ಪದಪದ್ಧತಿಗಳಿರ್ದಪುವು. ಇವಂ ಕಂಡೊಡೆ ಪನ್ನಗವಿರೋಧಿಯುಂ ಕಾದು ಕಱುಪುಗುಂ ಪೋಗೆಂದು ಪೇಱೆ ಕೞುಪೆ ಕಾಳಿಯವ್ಯಾಳನುಂ ತನ್ಮಹಾಹ್ರದಮಂ ಕ್ರೀಡಾಹ್ರದಮೆಂದೆಂಬಿನಮಬಲಾಬಾಲಗೋಪಾಲ ಸುಲಭನುಪ್ಪಂತು ಮಾಡಿ ತದಾಶ್ರಯಕ್ಕೆ ಬರ್ಪನ್ನೆಗಮಿತ್ತ

ಮ॥ ಜಗಮೆಲ್ಲಂ ಪೊಗೞ್ವಂತು ಕಾಳಿಯಮಹಾಸರ್ಪಾಂಕನಂ [2]ಕಾದು ಮಾ
ತ್ರೆಗೆ[2] ನಂದಂಗೆ ಬಲಂಗೆ ಗೋಪವಧುಗಳ್ಗಾನಂದನುಂ ಮಾಡಿ ದೇ
ವಗಣಂ ಕೀರ್ತಿಸೆ ತನ್ಮಹಾಹ್ರದದಿನೆಟ್ಟಂದೆತ್ತಲಾಶೀರವಂ
ಮಿಗೆ ಪೊಕ್ಕಂ ವ್ರಜಮಂ ಸವತ್ಸನಿವಹಂ ವಿಕ್ರಾಂತಚಕ್ರಾಯುಧಂ ೧೧೫

ಇದು ಸಮಸ್ತ ಕಮಲಭವಾಂಡಮಾಲಾಘಟೀಘಟಿತಾರಘಟ್ಟಘಟನಾಸ್ವತಂತ್ರ
ನಿಜಸ್ವರೂಪನಿರೂಪಣಚಕಿತಸಕಳಾಮ್ನಾಯತಂತ್ರಲಕ್ಷ್ಮೀಕಾಂತಶ್ರೀ
ಪಾದಭಕ್ತಿಯುಕ್ತ ಸುಕವೀಂದ್ರರುದ್ರಪ್ರಣೀತ ಶ್ರೀಜಗನ್ನಾಥ
ವಿಜಯಮಹಾಪ್ರಬಂಧದೊಳ್ ಬಾಲಲೀಲಾವಿನೋದ
ಪೂತನಾವಧಶಕಟಾಸುರಭಂಜನಯಮಳಾರ್ಜು
ನೋನ್ಮೂಲನವತ್ಸಗೋಪಾಲ ವಿನೋದ
ಕಾಳಿಯಸರ್ಪದರ್ಪದಳನಂ
ತೃತೀಯಾಶ್ವಾಸಂ

---

1 ತದೀಯ (ಕಖಗ) 2 ಕಾದೆಶೋದೆಗೆ (ಕ)

ಚತುರ್ಥಾಶ್ವಾಸಂ

ಕಂ॥ ಶ್ರೀವತ್ಸಾಂಕಂ ಸುಭಗಂ
ಶ್ರೀವತ್ಸಾಂಕೇಷುದಳಿತಗೋಪೀಹೃದಯಂ
ಗೋವರ್ಧನಪಟು ನಲಿದಂ
ಗೋವರ್ಧನಗಿರಿಯೊಳೆಸೆವ ವೃಂದಾವನದೊಳ್ ೧

ಚಂ॥ ವರುಣವಧೂವರಶ್ವಸಿತಗಂಧವಹಂ ಮಕರೇಶಚಾರುಚಾ
ಮರಮರುತಂ ಜಳೇಶಮಕರೋದ್ಗತಪುಚ್ಛಸಮೀರನಂಜನ
ದ್ವಿರದನಕರ್ಣತಾಳಪವಮಾನನಿಡೆಂದು ವಿತರ್ಕಿಪನ್ನಮ
ಸ್ಫುರಿತದವಾನಳಂ ಸುೞಿದುದೊಯ್ಯನೆ ಪಶ್ಚಿಮದಿಗ್ಭವಾನಿಳಂ ೨

ಕಂ॥ ಪಡುವಣೆಲ[1]ರಿರ್ಪು[1]ವಡೆಯಿಸ
ಲಡವಿಯೊ[2]ಳೊತ್ತಂಬ[2]ದಿಂದಮುದ್ದಂ ಬರ್ಪಾ
ಸಡಿಯಿಂ ಮುನ್ನಂ ಬಂದಾ
ಸಡಿಯೊಳ್ ನಳನಳಿಸುವೆಳದಳಿರ್ಗಳ್ ರಯ್ಯಂ ೩

ಚಂ॥ ಮುಗಿಲಿದಿರೇಱೆ ಕಾದಲಲರೇಱೆ ಪೊಲಂ ಪಸುರೇಱೆ ಕಾಡ ಮ
ಲ್ಲಿಗೆ ನನೆಯೇಱೆ ಮೊಲ್ಲೆ ನಯವೇಱೆ ಬಿಸಿಲ್ ಕಡುದಣ್ಣಸೇಱೆ ಕೇ
ದಗೆ ಸುೞಿಯೇಱೆ ಹಂಸೆ ಭಯವೇಱೆ ನವಿಲ್ ನಲವೇಱೆ ಕಾಮಬಾ
ಹುಗೆ ಜಯವೇಱಿದತ್ತು ವಿರಹಿಪ್ರಕರಕ್ಕೞಲೇಱಿತಿರ್ಪಿನಂ ೪

ಕಂ॥ ಎಱಗದೆ ತಮ್ಮೊಳ್ ಮಧುಕರ
ನೆಱಗಿರೆ ಕೇದಗೆಯೊಳೞಲ್ದು ಕಣ್ಬನಿವೞೆಯುಂ
ಕಱೆನಂತಿರೆ ಕೞಿವೂಗಳ್
ನಱೆ ಬೀತುವು ಸುರಗಿ ಹೊನ್ನೆ ಮಲ್ಲಿಗೆ ವನದೊಳ್ ೫

---

[1] ರಿಪು (ಕ) [2] ಳಂ ಬಣ್ಣ (ಖ)

ಚಂ|| ಪೊದಲಿಡೆ ಕಾರ್ಮುಕಂ ಗಿಳಿಯೆಱಂಕೆಯ ಬಣ್ಣದ ಪುಲ್ಲೊಗ್ಗಸರ್ ಪೊದ
ಱ್ದುದು ಪೊಲದೊಳ್ ವಿರಾಜಿಸುವ ಮಾಣಿಕವಣ್ಣದ ಕೋರಕಂಗಳಿಂ
ಪುದಿದೆಸೆದತ್ತು ಸಾಳತರು ಮುತ್ತಿನ ಬಣ್ಣದ ಕುಟ್ಮಳೌಘವಾ
ದುದು ಕುಟಜಂಗಳೊಳ್ ಪವಳವಣ್ಣದ ಪೂಗಳನಾಂತುದರ್ಜುನಂ ೬

ಉ|| ಚಾದಗೆ ನಾಟಕಂ ನಲಿದುದದ್ರಿಕುಜಂಗಳ ಕೋಟರಂಗಳೊಳ್
ಪೋದಗೆ ತತ್ತಿಯಿಕ್ಕಿದುದು ಮಾನಸಪದ್ಮವನಕ್ಕೆ ಪೋಪ ಚಿ
ತ್ತೋದಯಮಂಚೆಗಾಯ್ತು ಮಱಿಗೋಗಿಲೆಗಳ್ ಗಱಿವೊಯ್ದನಾಕುಳಂ
ಪೋದುವು ಪಾಱಿ ವಾಯಸದ ಗೂಡುಗಳಿಂ ನವಮೇಘಕಾಲದೊಳ್ ೭

ಮ|| ಹರಿಗೋಪಾಲಪದಕ್ಕೆ ತೂರ್ಯಪಟುಘೋಷಂ ಕೇಕಿನಾಟ್ಯಕ್ಕೆ ಬಂ
ಧುರಢಕ್ಕಾನಿನದಂ ವಿಯೋಗಿನಿವಹಕ್ಕಂಗೋದ್ಭವಜ್ವಾಲತೋ
ದ್ಧುರನಾದಂ ಕಳಹಂಸಯೂಥಗಮನೋದ್ಯೋಗಕ್ಕೆ ಭೇರೀಗಭೀ
ರರವಂ ತಾನೆನೆ ನವ್ಯಮೇಘನಿನದಂ ಪೊಣ್ಮಿತ್ತು ರೋದೋಂತದೊಳ್ ೮

ಚಂ|| ನೆರೆದ ಮುಗಿಲ್ ಕಲಂಕುವುದನೀಕ್ಷಿಸಿ ತಮ್ಮ ಮನಂ ಕಲಂಕಿ ಕ
ಱ್ಗಿರೆ ಮಱಿದುಂಬಿವಿಂಡನೊಳಕೊಂಡಿರುಳೊಳ್ ಮುಗಿದಿರ್ದ ಪಾಂಡುಪಂ
ಕರುಹದ ಭಂಗಿಯುಂ ತಳೆದು ವಿಸ್ಮಿತಮಾನಸರಾಗಿ ಮಾನಸರ್
ಪರಿಕಿಸೆ ಮಾನಸಕ್ಕೆ [1]ಪರಿಗೊಂಡುದು[1] ಕೂಡೆ ಮರಾಳಮಂಡಲಂ ೯

ಕಂ|| [2]ಅಱಿದಿನಿಸಂ ಬೆಟ್ಟದೆ ತಾ
ೞ್ಚಿಱಿ[2]ಗೊಂಡಿರಲೆಂದು ಬಿಲ್ಲಪಳ್ಳಿಗಳೆಲ್ಲಂ
ತೊಱೆದುವು ತೊಱೆದಡಿಗಳನಾರ್
ತೊಱೆಯದದನುಕೂಲವೃತ್ತಿಗೆಟ್ಟಿಸಗುವರಂ ೧೦

ದಿನನಾಥಂ ನವವರ್ಷಾ
ವನಿತೆಯ ಪೀವರಪಯೋಧರಸ್ಪರ್ಶನದಿಂ
ವಿನತಾಂಶುಕನಾದನೆನಲ್
ವನಿತೆಯ ಮೊಲೆ[3]ಮುಟ್ಟೆ[3] ಶೌಚಿಯಾವಂ ಜಗದೊಳ್ ೧೧

---

[1] ಸರಿಗೊಂಡುದು (ಖಗ) [2] ಅರಿದೆನಿಸಂ ಬೆಟ್ಟದ ತಾೞ್ಚಿಱಿ (ಕಗ) ಅರಿದಿನಿಸು ಬೆಟ್ಟದ ತಾೞ್ಚಿಱಿ (ಮೊಅ) [3] ಮುಟ್ಟೆ (ಖಗ)

ಮಾಕಂದಂ ಬೀತಿರೆ ಜಂ
ಭೂಕುಜಫಳದಿಂ ಶುಕಾಳಿ ಸುಖಿಯಾಯ್ತು ಪಿಕಂ
[1]ಮೂಕತೆವೆತ್ತಿರ್ದುದು ಮ
ತ್ರೇ[1]ಕಗ್ರಾಹಿಗೆ ಸುಖೋದಯಂ ಸಮನಿಸಿಪುದೇ ೧೨

ವಿದಳಿಸೆ ಘನದಂತಿ ಬಿಸಿ
ಲ್ಗುದುರೆಗಳಂ ಪನಿತು ಪೆತ್ತನೆತ್ತರ ಪನಿಯಂ
ದದಿನಲ್ಲಲ್ಲಿಗೆ ಕಣ್ಗೊಳಿ
ಸಿದತ್ತು ಕಾರ್ಮುಕದೊಳಿಂದ್ರಗೋಪಕಳಾಪಂ ೧೩

ಮ॥ಸ್ರ॥ ವಿಳಸಲ್ಲೋಲಪ್ರವಾಳಪ್ರತತಿಯನಪರಾಂಭೋಧಿವೀಚೀಚಯಂ ಕೆಂ
ದಳಿರಂ ತದ್ವಾರ್ಧಿವೇಳಾವನಸಮಿತಿ ದವಜ್ವಾಳೆಯಂ ನೀಲಶೈಲಾ
ವಳಿ ಕೈಕೊಂಡಭ್ರಮಂ ತಳ್ತಡರ್ದವೊಲಡರ್ದತ್ತೆತ್ತಲುಂ ಬಳ್ಳಿಮಿಂಚಂ
ತಳೆದಾಶಾಮಂಡಲಂ ಕಟ್ಗನೆ [2]ಕುನಿಯೆ[2] ಜಳಸ್ಫೀತಜೀಮೂತಜಾತಂ ೧೪

ಜಳಮಂ ವಾರಾಶಿಯೊಳ್ಮೀನ್ ಬೆರಸುಮೊಗೆತರಲ್ ಮೇಘವಾ ಬಾಳೆಮೀನ್ಗಳ್
ಪೊಳೆದಾಡುತ್ತಿರ್ದುವಾಕಾಶದೊಳೆನಲವಿಭಿನ್ನಾಂಜನಚ್ಛಾಯೆಯಿಂ ಗೊಂ
ದಳಿಸಿರ್ದಂಭೋದದೊಳ್ ತಾಂ ಬಳಸಿ ಪೊಳೆವ ವಿದ್ಯುಲ್ಲತಾಜಾಳಮಾಗಳ್
ತಳೆದತ್ತಾಶ್ಚರ್ಯಮಂ ಕಟ್ಟಿಲೆ ಬಿಡೆ ಬಿಸಿಲಂ ಕಾಱುತಿರ್ಪಂದದಿಂದಂ ೧೫

ಮ॥ ಗಗನಶ್ರೀಯ ವಿಚಿತ್ರವಸ್ತ್ರವಿಳಸತ್ಸಂವ್ಯಾನಮೆಂಬಂತೆ ಕಾ
ರ್ಮುಗಿಲೆಂಬಾನೆಯ ರನ್ನ[3]ದಗ್ಗವಣೆ[3]ಯೆಂಬಂತಬ್ಜಗರ್ಭಾಂಡಭೂ
ರಿಗೃಹದ್ವಾರದುದಾರತೋರಣಮಿದೆಂಬಂತಭ್ರದೊಳ್ ನೋಡೆ ದಿ
ಟ್ಟಿಗೆ ಚೆಲ್ವಾಯ್ತು ಬಹುಪ್ರಭಾಶಬಳಿತಂ ಗೀರ್ವಾಣಬಾಣಾಸನಂ ೧೬

ಚಂ॥ ಮನದನುರಾಗದಿಂ ನೆಗೆದು ನೀಡಿದ ಕಂಠಮುರಲ್ದ ತುಪ್ಪುೞು
ರ್ಬನಿಮಿಷಮಾದ ಕಣ್ ತೆಱೆದ ಚಂಚು ವಿಜೃಂಭಿಪೆಱಂಕೆ ರಂಜಿಸಿ
ತ್ತಿನೆ ನಲವೇಱು ತೋರವನಿ ತಣ್ಬನಿ ಮುಂಬನಿಯೆಂಬ ಕಾರ್ಮುಗಿ
ಲ್ಪನಿಸುಸಲಂಪಿಸಿಂದ[4]ಮಿದಿಗೊಂಡು[4] ಕದುಂಕಿದುದುದ್ಧಚಾತಕಂ ೧೭

---

[1] ಮೂಕತೆವೆತ್ತಿರ್ಪುದಱಿಂದೇ (ಕಗ) [2] ಕನಿಯೆ (ಕಗ) ಕವಿಯೆ (ಖ) [3] ದಂಕವಣೆ (ಪೊಅ) [4] ಸವಿಗೊಂಡು (ಘ)

ಪಳುಕಿನ ಬಟ್ಟುಗಳ್ ಗಗನದಿಂದುದಿರ್ದಪ್ಪುವು ಚಿತ್ರವೆಂಬಿನಂ
ಘಳಘಳನಭ್ರದಿಂದವಿಡುಕುಂಬನಿ ಸೂಸೆ ಬಟಿಕ್ಕೆ ವೃಷ್ಟಿ ಕ
ಣ್ಗೊಳಿಸಿದುದಂದು ತೀವ್ರಪವನಾಹತಿಯಿಂ ತಟದಂಶುವೆಂಬ ಕೆಂ
ದಳಿರ್ಗಳನಾಂತ ಮೇಘಲತೆಯಿಂದಲರಲ್ಲುಗುತಿರ್ದುವೆಂಬಿನಂ ೧೮

ನಿಳಯದ ಸೂರ್ಗಳೊಳ್ ತೞಿದೆ ಮುತ್ತಿನ ಸೂಸಕದಂತೆ ನಂದನಂ
ಗಳ ತರುಪತ್ರದೊಳ್ ಮುಕುಳಮಂಜರಿಯಂತೆ ಚರತ್ಪುರಾಂಗನಾ
ವಳಿಯ ಕುರುಳ್ಗಳೊಳ್ ತಳಿದ ಸೇಸೆಗಳಂತೆಳವುಲ್ಗಳೊಳ್ ಘನೋ
ಪಳಕುಳದಂತೆ ತೋಱಿದುವು ನವ್ಯಘನಚ್ಯುತತೋಯಬಿಂದುಗಳ್ ೧೯

ಮ॥ ಸುರಗೋಪಂಗಳುಮಾಲಿಕಲ್ಲುಮೆಳವುಲ್ಲುಂ ಕೆಂಪಿನಿಂ ಬೆಳ್ಪಿನಿಂ
ಹರಿತಚ್ಛಾಯೆಯಿನಲ್ಲಿಗಲ್ಲಿಗೆಸೆಗುಂ ಮಾಣಿಕ್ಯದಿಂ ಮುತ್ತಿನಿಂ
ಗರುಡೋದ್ಗಾರದ ಪಚ್ಚೆಯಿಂ ಸಮೆದ ನಾನಾಭೂಷಣಾನೀಕಮಂ
ಧರಣೀವಲ್ಲಭೆಗಂಬುದಾಗಮವಿಟಂ ತಂದಿಕ್ಕಿದೊಂದಂದದಿಂ ೨೦

ಮ॥ಸ್ರ॥ ನನೆವಿಲ್ಲಂ ಬಿಟ್ಟು ವಿದ್ಯುಲ್ಲತೆಯ ತಿಱುವುವೊಯ್ದಿಂದ್ರಕೋದಂಡಮಂ ಕೊಂ
ಡು ನಿಜಾಗ್ರಸ್ಕಂಧದೊಳ್ ಕೇದಗೆಯೆಸೆವರಲೆಂದೆಂಬ ಕೂರಂಬು ತೀವಿ
ರ್ದ ನಿಷಂಗಂ ಕಣ್ಗೊಳಲ್ಕೊಲ್ಲೆಯ ನನೆಗಣೆಯುಂ ತೂಗುತುಂ ಕಂತುವೀಬಂ
ದನೆನುತ್ತುಂ ಗರ್ಜಿಪಂತಾದುದು ವಿರಹಿಗಳಂ ಕೇಕಿಭೇಕಪ್ರಣಾದಂ ೨೧

ಮ॥ ತವೆ ಮುಂ ತಿಂದು ನಿದಾಘಸಲ್ಲಕಿಯನಾದಿತ್ಯೇಂದುಬಿಂಬಂಗಳಂ
ಕವಳಂಗೊಂಡು [1]ಸಿಡಿಲ್ಗಳೆಂಬ[1] ಕಿಸುಗಣ್ಬೇಡುಂ ಮರುಚ್ಚಾಪಮೆಂ
ಬ ವಿಚಿತ್ರಾಂಬರದೊಂದು ಜೆನ್ನಮಿಳಿಯುಂ ಮಿಂಚೆಂಬ ಕೊಂಬುಂ ಕರಾ
ಳವೆನಲ್ ಗರ್ಜಿಸಿದತ್ತಗಲ್ದಿನಿಯರಂ ಕಾರೆಂಬ ಮಾರದ್ವಿಪಂ ೨೨

ಕಂ॥ ಮರಕತರುಚಿಯೊಳ್ ದೂರ್ವಾಂ
ಕುರಮಂ ನಿಶ್ಚಿಯಿಸದಿರ್ದ ಮೃಗಶಿಶುಗೆ ನಗಾಂ
ತರದಲ್ಲಿ ಹರಿಣನಿತ್ತುದು
ಕರುಣಿಸಿ ನಿಜಸೃಕ್ವದೂರ್ವೆಯಂ ಕಾರ್ಮುಕದೊಳ್ ೨೩

---

1 ಬಿಸಿಲ್ಗಳೆಂಬ (ಕ)

ಕಂ॥ ಕೆಱೆಕೞಭಂಗಳ್ ಬಿಸವ
ಲ್ಲರಿಗೆತ್ತೆಱಗುತ್ತುಮಿರ್ಪ ಧಾರಾಧರಪು
ಷ್ಕರಧಾರೆಗಳಂ ಕರಪು
ಷ್ಕರದಿಂ ಬರೆ ತೆಗೆದುವಂದರಣ್ಯಾಂತರದೊಳ್ ೨೪

ಮ॥ ದಱಿಗೊಂಡೀಡಿಱಿದಾಡುತುಂ ಕೊಣಕುತುಂ ಬಾರುತ್ತುಮೊಳ್ಗಾಡೊಳಾ
ದರದಿಂ ಮೇದೆಳವುಲ್ಲಳಂ ತೊರೆದು ಪಾಲ್ಗಳ್ ಕೆಚ್ಚಲಿಂದೆಚ್ಚುಪಾ
ಯ್ವುರೆ ಪಟ್ಟಿರ್ದುವೆಬಿಲ್ವ ಕಣ್ಣವರೆನುಚ್ಚಿರ್ದಪಕ್ಷಿಗಳ್ ಪೊಯ್ವ ಸುಯ್
ನೂರೆವಿಂಡುಣ್ಮುವ ಸೃಕ್ವಮುಂದೆಸೆಯೆ ಮೆಲ್ಕೊತ್ತುತ್ತೆ ಕಾಡೆರ್ಮೆಗಳ್ ೨೫

ಅವಿಶಾಲಾಂಬರಮಪ್ರಸನ್ನದಿವಸಸ್ಪಷ್ಟಾಧ್ವಮಸ್ವಚ್ಛತೋ
ಯಮನುದ್ಯೋಗಜನೌಘಮಸ್ತಮದಮಸ್ಫೀರಾಬ್ಜಮಶ್ಲಕ್ಷ್ಣಕೈ
ರವಮಕ್ರೀಡಿತಹಂಸಮಸ್ಫುರಿತಚಂದ್ರಾದಿತ್ಯಮಶ್ಲಿಷ್ಟಕೋ
ಕಮಯೂನಾಧ್ವಗಮಸ್ವರಾನ್ಯಭೃತಮಂದೊಪ್ಪಿರ್ದುದಭ್ರಾಗಮಂ ೨೬

ಮ॥ಸ್ರ॥ ನವನೀಲಾಂಭೋದಸಂಭೋದದಿನೆಱಗುವ ಧಾರಾಳಿ ಧಾರಾಳಿಗಳ್ ಸೂ
ಸುವಿನಂ ತಳ್ಪೊಯ್ವ ಜಂಝಾನಿಳನನಿಳನಿನಾಮೋದಮಂ ಪೇಱಿ ಪೂವೇ
ಱುವ ಕುಂದಂ ಕುಂದದೊಳ್ ತಳ್ತಳಿಗಳಳಿಗಳಂ ಪಣ್ಗಳಿಂ ಗೆಲ್ದ ಜಂಬೂ
ನಿವಹಂ ಜೆಲ್ವಾಗೆ ಜೆಲ್ವಾದುದು ಚಟುಲತಟಿಜ್ಜಾಲಸಂಭೋದಕಾಲಂ ೨೭

ಮ॥ ತಳಿದಾರ್ತಾತ್ಮಾಲಯದಿಂದಿರುಳ್ ಸುಱಿವ ಜಾರಸ್ತ್ರೀಯ ವಕ್ತ್ರೇಂದುವಂ
ಚಳವಿದ್ಯುನ್ಮಯನಾವಲೋಕದೊಳೆ ಕಂಡನ್ಯಾಯಮಾಯ್ತೀ ವಿಯ
ತ್ತಳಚೂಡಾಮಣಿಚಂದ್ರನಂ ಕೞಿಪೆನೋ ವರ್ಷಾಂಬುವಿಂ ಕೂಡೆ ಭೂ
ವಳಯಕ್ಕೆಂಬಿನಮಂತದೇಂ ಮೊೞಗಿತೋ ಮೇಘಂ ನಿಶೀಥಂಗಳೊಳ್ ೨೮

ಮ॥ಸ್ರ॥ ಚಪಳಾಪಾಂಗಾಂಶು ವಿದ್ಯುಲ್ಲತೆಯನಡರೆ ಚಂದ್ರಾತಪಂ ನೀಳ್ದ ಬಾಳಾ
ತಪಮಂ ತಳ್ತಂದನೂಗಲ್ ಸುಱಿದುದು ಪದಚಂಚನ್ನಖದ್ಯೋತಸುವ್ಯ
ಕ್ತಪದಂ ಮಾರ್ಗಾಳಜಾಳಂ ಬಳಸಿದ ಜಳದೇವೀಸಮೂಹಂಬೊಲಂಭೋ
ದಪಯೋಧಾರಾಳಿ ತಳ್ಪೊಯ್ವಿನಮೆಸೆದಿರುಳೊಳ್ ಜಾರನಾರೀಕದಂಬಂ ೨೯

ಚಂ॥ ಒದವಿದ ಕೇಗು ನೀಳ್ದ ಕೊರಲೆತ್ತಿದ ಪಕ್ಷಮೊಱಲ್ಚುತಿರ್ಪಿನಂ
ಮದನನ ಪಂಚರತ್ನಮಯಖೇಟಕದಂತಿರೆ ಬಿರ್ಚಿ ಬರ್ಹಮಂ
ಪಡೆದು ನವಿಲ್ಗಳಾಡೆ ಚಪಲಾಕ್ಷಿಘನಾಗಮಲಕ್ಷ್ಮಿ [1]ಗಂಡು[1] ಹ
[2]ರ್ಷದಿನುಗುತಿರ್ಪ[2] ಕಣ್ಬನಿಯಸೋನೆವೊಲಾದುವು ಭೂರಿವೃಷ್ಟಿಗಳ್ ೩೦

---

[1] ಕಂಡು (ಕಖಗ) [2] ಹರ್ಷದಿನಗುತಿರ್ಪ (ಕಖ)

ಚಂ॥ ಪರಿವ ಮುಗಿಲ್ ಪಳಂಚೆ ಖಚರೀನಿಚಯಸ್ತನತಾರಹಾರವ
ಲ್ಲರಿ ಪಱಿಯಲ್ ಪೊದಟ್ದು ಬಿಡುಮುತ್ತು ಘನೋಪಳದೊಂದುರೂಪದಿಂ
ಸುರಿಯಲನಂತರಂ ಬಱಿಯದಾರವೆಟಿಲ್ದ ಪುದೆಂಬ ಜೆಲ್ವನಾ
ವರಿಸಿದುವಂದು ಸಂದಣಿಸಿ ನೀಳ್ದ ಪಯೋಧರವಾರಿಧಾರೆಗಳ್ ೩೧

ಕಂ॥ ಬಲ್ಸರಿ ಬಿಱುಸರಿ ಪೆರ್ಮೞೆ
ಮೆಲ್ಸರಿ ತುಂತುರ್ ತುಷಾರವಿಡುಕುಂಬನಿ ತಂ
ದಲ್ಲೋನೆ ನಟ್ಟಬಡಪಮೆ
ನಲ್ಸರಿದುವು ಬಿಡದೆ ಮೞೆಗಳಿರುಳುಂ ಪಗಲುಂ ೩೨

ಕೆಱೆ ಕಾಲ್ಪುರದಿಂ ತೀವಿರೆ
ಕೆಱೆಗಳ ಕಡೆನೋಡಿ ಪಳ್ಳಮಂ ಪಳ್ಳಂಗಳ್
ತೊಱೆಯುಂ ತಾಂ ತೊಱೆಗಳ್ ಬಾಂ
ದೊಱೆಗೋರೆಯೆನಲುರ್ಬೆ ಪೊಕ್ಕರಳ್ಕುಱೆ ಪಥಿಕರ್ ೩೩

ಉ॥ ಸಂದಣಿಸಿರ್ದ ಕೇದಗೆಗಳೊಳ್ಗಱಿಯೊಳ್ ಗಱಿಸೋಂಕಿ ಕುಂದದೊಳ್
ಕುಂದದ ಲೀಲೆಯಿಂ ಸುೞಿದು [1]ಕಂದಳದೊಳ್[1] ದಳಮಂ ಕಲಂಕಿ ಕೈ
ವಂದ ಕದಂಬಪುಷ್ಪದ ಪರಂಪರೆಯೊಳ್ ಪರಿದಾಡಿ ತಣ್ಪು ಕಂ
ಪೊಂದಿರೆ ಬಂದು ತೀಡಿದುದು ಮಾರುತನಾತ್ತಕಳಾಪಿನೀರುತಂ ೩೪

ಚಂ॥ ವಿದಳಿತವಾದ ಕಂಟಕಕದಂಬದಿನುರ್ಬಿದ ವಾಹಿನೀಸಮೂ
ಹದಿನಭಿವೃದ್ಧಿವೆತ್ತ ಭುವನಾಶ್ರಯದಿಂ ಬಗೆಗೊಳ್ವ ಕುಂದದ
ಭ್ಯುದಯದಿನೇೞ್ಗೆಗೆಟ್ಟಳಱಿ ಪೋದ ಮಹೋದ್ಧತರಾಜಹಂಸತೇ
ಜದಿನೆಸೆದತ್ತು ರಾಜ್ಯವಿಭವಂ ಜಳದಾಗಮಚಕ್ರವರ್ತಿಯಾ ೩೫

ಮ॥ ಸುಮನೋಗೋಪಸಮಾವೃತಂ ಜಲಧರಶ್ಯಾಮಂ ಕದಂಬದ್ರುಮೋ
ದ್ಗಮಮಾಳಾಸುಭಗಂ ಮಯೂರನವಬರ್ಹಾಳಂಕೃತಂ ಕುಂದಹಾ
ಸಮನೋಜ್ಞಂ ಭುವನಾತ್ಮಕಂ ವಿಜಿತಚಂದ್ರಾದಿತ್ಯತೇಜಂ ಘನಾ
ಗಮದೊಳ್ ಶೌರಿ ಘನಾಗಮಂಬೊಲೆಸೆದಂ ಗೋಪಾಲಲೀಲಾಸ್ಪದಂ ೩೬

---

1 ಕೆಂದಳದೊಳ್ (ಕಖಗ)

ಚಂ॥ ತೊಲಗದ ಪೋಡವೋಡಿದುದು ತಂದಲಗುಂದಲೆಯಾಯ್ತು ಮೇಘಮಂ
ಡಲವಳಜಿುತ್ತು ಮಿಂಚು[1]ಪೆಳಗುಂ ಬರನಾಯ್ತು[1] ಶಿಖಂಡಿ ತಾಂಡವ
ಕ್ಕಲಸಿದುದೆಯ್ದೆ ಕುಂದಲಕೆ ಕುಂದಲೊಡರ್ಚಿದುದಂಚೆ ಚಂಚುವಿಂ
ನಲಿದು ಮೃಣಾಳಮಂ ಸವಿವುದಾಯ್ತು ಶರತ್ಪ್ರಥಮಪ್ರವೇಶದೊಳ್ ೩೭

ಮ॥ಸ್ರ॥ಕಿಱುದಾನುಂ ಪೊಟ್ಟು ಜೆಂಬೊಂದರಳಿರ ಪಸೆಗಳೊಳ್ ಗೋಷ್ಠಿಯಿಂ ಕುಳ್ಳಿರುತ್ತುಂ
ಕಿಱುದಾನುಂ ಪೊಟ್ಟು ಮಲ್ಲಶ್ರಮದೆ ಪೊಣರ್ದ ಗೋಪಾಲರಿಂ [2]ಜಾಳಿಸುತ್ತುಂ[2]
ಕಿಱುದಾನುಂ ಪೊಟ್ಟು ನಾದಾಮೃತಮೊಸರ್ವಿನೆಗಂ ವೇಣುವಂ ಬಾಜಿಸುತ್ತುಂ
ತುಱುಗಾಮಂ ಗೋಪವೇಷೋಚಿತವನಕುಸುಮಾಲಂಕೃತಂ ಪಂಕಜಾಕ್ಷಂ ೩೮

ವ॥ ಅಂತು ಗೋಪಾಲವಿನೋದದಿಂ ಕಾಮಪಾಲಂಬೆರಸು ಗೋವರ್ಧನಗಿರೀಂ
ದ್ರದತ್ತಮತಿದೂರಾಂತರದೊಳ್ [3]ಚರಿಸುತ್ತಿರ್ದಲ್ಲಿ[3]

ಉ॥ ತಾಳದಳಾವಳೀಕಳಕಳಾನಿಳನುಣ್ಮಿಸಿ ತೀಡೆ ಪೇಱುಮಿಾ
ಗಾಳಿಯಿನಾದ ನಿಷ್ಠುರನಿನಾದಮಿದಾವುದೆನಲ್ಕೆ ಕೇಳ್ದು ಗೋ
ಪಾಳರಿದಲ್ತೆ ಕಂಸವಧುಗಳ್ ಮಧುವಂ ಕುಡಿವೊಂದು ತಾಟಿಭೂ
ಜಾಳಿಯ ತೀವ್ರಘೋರರವವಲ್ಲಿಗೆ ಪೋಗಲೆ ಬಾರದಚ್ಯುತಾ ೩೯

ವ॥ ಅದೆಂತೆಂದೊಡಾ ಮಹೋತ್ತಾಳ ತಾಟಿವನಮಂ ಧೇನುಕನೆಂಬ ರಾಸಭರಾಕ್ಷಸಂ ಕಾದಿರ್ಪಂ ಆ ರಾಸಭನ ರಭಸಮಂ ಪೇಟಿಕ್ಕೊಡೆ ಮುನ್ನೊಂದು ಸಮಯದೊಳ್ ಪೌಲೋಮಿ ತಾಟಿಮಧುವಂ ಬಯಸಿ ಕಾಪಿಲ್ಲದ ಪೊಟ್ಟಱುದಲ್ಲಿಗೆ ಪುರಂದಪುರಸ್ಸರಂ ಬಂದು ಹೃದ್ಯಮಪ್ಪ ಮದ್ಯಮಂ ಕೇಳಿವಟ್ಟಲೊಳಱುದು ಕುಡಿಯಲುಜ್ಜುಗಂಗೈವುದುಂ ಮರುಜ್ಜವದಿನಟ್ಟಾಸುರಂ ಮಸಗಿ ರಾಸಭಂ ಬಂದುಮಾವಾಸವಸೈನ್ಯಮಂ ಕರ್ಚ್ಚಿಯುಮೊದೆದುಂ ಚಿಗುಳಿದುಱುದುಂ ಪಡಲ್ವಡಿಸುತ್ತುಮಿರೆ ಸತ್ತು ಕಾಣ್ಬ ಸಗ್ಗದಿಂದಿರ್ದುಕಾಣ್ಬನರಕಮೆ ಲೇಸೆಂಬ ನಾಣ್ನುಡಿಯುಮುಂಟು ಅಲ್ಲದೆಯುಮೆಮಗೆ ವಿಶೇಷದಿಂದಿರ್ದುಕಾಣ್ಬ ಸಗ್ಗದಿಂ ಕೆಟ್ಟಿತ್ತಯಿಂ ಸತ್ತು ಕಾಣ್ಬ ನರಕಮೇವುದು; ಅಂ ಮರುಳಲ್ಲೆಂ. ಈ ಸಾಂಪರಾಯದಿಂ ಪಲಾಯನಮೆ ಲೇಸೆಂದು ವಾಸವನತಿಜವಾಶ್ರಮೆನಿಸಿದುಚ್ಚೈಶ್ರವಮನೇಱು ಮನೋವೇಗದಿಂ ಪೋಗೆ ದಿನಂಬರಂ ಬೆಂಬತ್ತಿ ಮರಳ್ದು ಬಂದಂ ಧೇನುಕನಿಂತಟಿಸೆ, ದರಹಸಿತವದನಾರವಿಂದನಾಗಿ

ಕಂ॥ ರಾಸಭವಿಜೃಂಭಣಕ್ಕೇ
ನೋಸರಿಪುದೆ ಪೋಗಿ ತಾಟಿ ಪಣ್ಗಳನೊಲವಿಂ
ಲೇಸಪ್ಪವನಾಸ್ವಾದಿಸಿ
ಗೋಸಮಿತಿಯೆನಲ್ಲಿ ಮೆಲ್ಲನಾಡಿಸಿ ಬರ್ಪೆಂ ೪೦

---

1 ಪೆಳಗಂಚಿರಮಾಯ್ತು (ಕಗ) 2 ಬಾಳಿಸುತ್ತುಂ (ಕ) 3 ಚರಿಯಿಸುತ್ತಿರ್ದಲ್ಲಿ (ಕಗ)

ವ॥ ಎಂದು ಪೋಗಿ ತಾೞವನಮಂ ಪೊಕ್ಕು ಪಕ್ವಫಲಮಂ ಕಂಡೞ್ತಿವಟ್ಟು ಮಿದಸಿಟ್ಟು ಕೆಡಪುವೋಡೀಸ್ಥಳಂ ಕಾಷ್ಠಪಾಷಾಣವರ್ಜಿತಂ ಅಲ್ಲಾಡಿ ಕೆಡಪುವೆನೆಂದುಱದೆ ಗೊಂಡಳ್ಳಾಡಲಾ ಕಳಕಳನಮಂ ಕೇಳ್ದು ರಾಸಭರಾಕ್ಷಸನತಿಕ್ಷೋಭನಮಂ[1]ತಳೆದಂತಕಂಗುರುಬಾಡು[1]ವೋವರಿಗಳಂತಿರ್ದ ಘೋರಘೋಷಣಘೋಣಾವಿವರಂಗಳುಂ ಸುರನರರುಧಿರ ಮಾಂಸಂಗಳಿಂ ತಣಿಪಿದಪೆನಂಜದಿರಿಮೆಂದು ಭೂತಪಿಶಾಚಂಗಳ್ಗ ಭಯಮಿತ್ತ ಮೃತ್ಯು ದೇವತೆಯ ಕರತಳಂಗಳಂತಿರ್ದುದ್ಗತಶ್ಫುರಿತಕರ್ಣಂಗಳುಂ, ವದನಹ್ರದ ರೌದ್ರರಸದ ಪೊನಲ್ ಪೊಱಪೊಣ್ಮಿ ಸೂಸಿ ಪರಿಯದಂತು ಕಟ್ಟಿಗಟ್ಟಿದ ಶಿಲಾಶಕಲಂಗಳಂತಿರ್ದ ಕುಲಿಶ ಕಠಿನದಶನಂಗಳುಂ, ಜಗಮೆಲ್ಲಮನುಡುಗಿ ಸುಡುವ ಕಲ್ಪಾಂತಹುತವಹಂಗಿದಱ ಕಣ್ಬೇಡೆ ಬೀಡುದಾಣಮೆಂಬಂತೆ ಕೆಂಪಡರ್ದ ಕೆಂಡಮಂ ಕೇಸುರಿಯನುಗುೞ್ವ ಕಣ್ಗಳುಂ, ಲೋಕ ಪಾಲಕರ ನೊಸಲಕ್ಕರಮಂ ತೊಡೆವ ಸಮ್ಮಾರ್ಜನಿಯಿದೆಂಬಂತೆ ದೆಸೆದೆಸೆಗೆ ಬೀಸುವುದ್ದಂಡ ಬಾಳದಂಡಮುಂ, ಪ್ರಳಯಜಲಧರದ ಮೊೞಗಿಂದೆಱಗುವ ಬಱಸಿಡಿಲ ಬಳಗಕ್ಕಮಿದಱ ಕಂಠನಾಳಮೆ ನಿರ್ಗಮಮಾರ್ಗಮೆಂಬಂತೆ ಗರ್ಗರಮಾಗಿ ನೆಗೆವ ಹೇಷಾವಿನಿರ್ಘೋಷಮುಂ ಸ್ವಪಕ್ಷರಾಕ್ಷಸರ್ ಪೊಱಮಡಲೋಸುಗಂ ಪಾತಾಳದಳದ ಮುಚ್ಚುಳನೊಡೆದು ಕಳೆದಪುದೆಂಬಂತೆ ಭೂತಳಮನಪ್ಪಳಿಸಿ ಪೊಯ್ವ ನಿಷ್ಠುರಶಫಟಂಕಮುಂ, ಭಯಂಕರಮಪ್ಪಿನಂ ಬಂದು ಇತ್ತ ಗೋಪಾಲಗಣಮನತ್ತ ದೇವಗಣಮಂ ಕಂಡು ಮಹಾಹೂಂಕಾರಂ ಮಾಡಿ ಭರದಿಂ ಕರ್ಚಿ ಮುಱುದೊದೆವ ಸಮಯದೊಳ್ ಮುರಾಂತಕನದಱ ಪಿಂಗಾಲ್ಗಳನಡಸಿ ಪಿಡಿದು ತಾೞ ಪಣ್ಗಳನಿಟ್ಟು ಕೆಡಪಲಿದೊಂದುಪಾಯಮಾದುದೆಂದು

ಮ॥ಸ್ರ॥ ಅರಿಜೀವಕ್ಕಂತಕಂ ಕಣ್ಣಿಡಲಹಿತಪುರಾಭ್ಯಂತರಂ ಗೋೞಿಡಲ್ ದೇ
ವರ ತಂಡಂ ರಾಗದಿಂ ಬೊಬ್ಬಿಡೆಯಿಡೆ ಖರನಿಂ ತಾೞಪಣ್ಣಂ ರಿಪುಸ್ತ್ರೀ
ಯರ ಬಾಷ್ಪಂ ಬೀೞೆ ದೈತ್ಯಪ್ರತತಿ ಭಯರಸಾಂಭೋಧಿಯೊಳ್ ಬೀೞೆ ಕಂಸಂ
ಪಿರಿದುಂ ಬೆಂಬೀೞೆ ಬೀೞ್ತಂದುವು ಧರೆಗೊಡನಾ ಕೞ್ತೆಯುಂ ತಾೞಪಣ್ಣುಂ ೪೧

ಚಂ॥ ಪರುಷತರಸ್ವನೋನ್ಮುಖರನಂ ಖರನಂ ಖರನಂ ಮುರಾರಿ ಸಂ
ಹರಿಸೆ ಜಯಪ್ರಮೋದಸುಮನರ್ ಸುಮನರ್ ಸುಮನಸ್ಸುವೃಷ್ಟಿಯಂ
ಸುರಿಯೆ ಲತಾಂತದೊಳ್ಪಸದನಂ ಸದನಂ ಸದನಂಗಲಕ್ಷ್ಮಿಗಾ
ಗಿರೆ ತಳರ್ದಂ ಶುಭಾಚರಣದಿಂ ರಣದಿಂ ರಣದಿಂದ್ರಕಾಹಳಂ ೪೨

ವ॥ ಅಂತಲ್ಲಿಂ ತಳರ್ದು

---

1 ತಳೆದಂತಕನಂಗುರುಬಾಡು (ಕಗ) ತಳೆದಂತಕನಂಗುರುಬಾಡಿಸು (ಖ) ತಳೆಸಂತಕನಂಗುಱುಬಾಡು (ಮೊಅ)

ಕಂ॥ ಎಳವುಲ್ಲಂ ಮೇಯಿಸುತುಂ
ತಿಳಿನೀರ್ಗುಡಿಯಿಸುತುಮುಂಪುದ್ದು ತಣ್ಣೆಲರೊಳ್ ಗೋ
ಕುಳಮಂ ನಿಲಿಸುತ್ತುಂ ಮುಂ
ಗಳಚರಿತಂ ಕ್ರೀಡಮಾನನೆಸೆದಂ ಕೃಷ್ಣಂ ೪೩

ಪರಿವರಿ ಪಾಱುಂಬಳೆ ಮುರ
ಗೆರಸಿ ಕುಳಿಸ್ಸೆಂಡು ಬಟ್ಟು ತಿಱುಕಲ್ಲಟ್ಟುಂ
ಗರೆ ಹೊಣೆ ಗುಂಡೆಂಬಿವನಾ
ಮುರಹರನಲ್ಲಲ್ಲಿಗಾಡುತುಂ ಬರಲಿದಿರೊಳ್ ೪೪

ಗಗನೇಚರಿಯರ ಪದದಲ
ತೆಗೆವೊರೆದರುಣಂಗಳಾದುವಿದಱ ಫಲಶ್ರೀ
ಣಿಗಳೆನೆ ಪಣ್ಗಳ ಕೆಂಪಿಂ
ಸೊಗಯಿಸಿತುದ್ದಂಡಕಾಂಡಭಾಂಡೀರವಟಂ ೪೫

ವಸುಧೆಗೆ ಗುಡಿ ಕವಿದಂತೆ
ಣ್ದೆಸೆಯಂ ಬಾಸಣಿಸಿ ಶಿಖರಶಾಖೆಯ ನೆಟಲಿಂ
ಮಸುಳಿಸಿ [1]ಖಚರಶ್ರಾಂತಿಯ[1]
ನೆಸೆದುದು ಭುವನೈಕಭವನದಂತಾ ಭೂಜಂ ೪೬

ವ॥ ಆ ಭಾಂಡೀರವೆಂಬ ಮಹಾವಟವಿಟಪಿಯೊಳ್

ಕಂ॥ ನೀಲೋತ್ಪಲ[2]ರುಚಿ ಧೃತ[2] ವನ
ಮಾಲಂ ರಾಜೀವಲೋಚನಂ ಕ್ರೀಡಿಸಿದಂ
ಪೀಲಿಯ ತಲೆಸುತ್ತಿನ ಪ
ಚ್ಚೋಲೆಯ ಪೊಂಬಟ್ಟೆಯುಡೆಯ ಚೆಲ್ವೆಸೆವಿನೆಗಂ ೪೭

ಖೇಡನ ನರ್ತನ ಹಾಸ್ಯವ
ನಾಡಂಬರ ನಟನ ವೇಣುವಾದನಗೇಯ
ಕ್ರೀಡೆಗಳಿಂ ಗೋವುಗಳೊಡ
ನಾಡುತ್ತುಂ ರಾಮಕೃಷ್ಣರಿರ್ದವಸರದೊಳ್ ೪೮

---

1 ಖಚರಶ್ರುತಿಯ (ಕ) 2 ಕೃತಧೃತ (ಖಗ)

ಛಿದ್ರಾನ್ವೇಷಿ ನಿಶಾಟಂ
ರೌದ್ರತ್ವಮನಃಟಿಂದು ಗೋಪವೇಷದೆ ಬಂದಂ
ತದ್ರಮಣೀಯರ ಪೊರೆಗನ್ನ್ಯ
ತದ್ರವನಿಭವೇಣುನಿನದನುಕ್ತಿಪ್ರೌಢಂ ೪೯

ಸ್ರಕ್ಸ್ರಭಗೋರಸ್ಸ್ಥಳನಂ
ದೃಕ್ಸೌಮ್ಯಶರೀರನಂ ಸವೇಣುಸ್ವನನಂ
ವಾಕ್ಸಾರನನಾಬಳ ವಿ
ಷ್ವಕ್ಸೇನರ್ ಗೋಪಬಂಧುಗೆತ್ತರ್ ಖಳನಂ ೫೦

ನಾಡೆ ಮನಮಂ ಪ್ರಬೋಧಿಸಿ
ಮಾಡೆ ಖಳಂ ಹರ್ಷಮಂ ಬಟಿಕ್ಕಂ ಹರಿಣ
ಕ್ರೀಡನವೆಂಬುದನೆರೆವ
ಚ್ಚಾಡಲ್ ವಸುದೇವನಂದನರ್ ಬಗೆದಂದರ್ ೫೧

ಈ ವಸುದೇವತನೂಜರೊ
ಳಾವನೊಳಾಂ ಪೊಣರ್ವೆನೆಂದು ಹೞಿಬಳರಂ ದು
ರ್ಭಾವದಿನೀಕ್ಷಿಸಿ ಹರಿಯ ಭು
ಜಾವಷ್ಟಂಭಕ್ಕೆ ಮನದೊಳಳ್ಕಿದನಸುರಂ ೫೨

ವ|| ಅಂತಾ ಪ್ರಳಂಬನೆಂಬ ದಾನವಂ ಕೃಷ್ಣನದ್ಭುತಪರಾಕ್ರಮನೆಂದು ಸಂಕರ್ಷಣ ವಧಪ್ರಯತ್ನದಿಂದಿರ್ಪಿನೆಗಮೆರಲೆ ಧೀಂಕನಾಡಲೆಂದಿರ್ಬರಿರ್ಬರೊಂದಾಗೆರೆವಚ್ಚಾಡುವಲ್ಲಿ ದಾಮೋದರಂ ಸುಧಾಧಾಮನೆಂಬ ಗೋಪ ಕುಮಾರಕನೊಡನೆ ರೌಹಿಣೇಯಂ ಮಾಯಾ ವೇಶನಾಗಿ ಗೋಪನಪ್ಪ ಪ್ರಳಂಬನೊಡನೆ ವಿಕ್ಕ ಗೋಪಾಲರೆಲ್ಲರುಂ ಗೋಪಾಲರೊಡನೆ ಗೆಡೆಯಾಗಿ ಲಘುಕ್ರಮದೆ ಸಮಪಾದದಿಂ ಲಂಘಿಸಿ ಗೆಲ್ಲಂಗೊಂಡು ಭಾಂಡೀರಸ್ಕಂಧಮಂ ಗೊತ್ತುಮಾಡಿ ತಂತಮ್ಮೊಳಾಡಿ ಸೋಲ್ತವರ ಪೆಗಲೇಱುಬರ್ಪ ಸಮಯದೊಳ್

ಮ|| ಯುಗಸಂವರ್ತನಕಾಲಕಾಲಜಲದಂ ಬಾಲೇಂದುಮಂ ಪೊತ್ತಿದೇಂ
ನೆಗೆದತ್ತೆಂಬಿನಮದ್ಭುತಾಕೃತಿಯನಾಂತಾ ರಾಮನಂ ಪೊತ್ತುಕೊಂ
ಡಗಲುತ್ತುಂ ದಿಗಿಭಂಬಮಂ ಬಳೆಯುತಂ ನಾಕಂಬರಂ ಪಾಱುತಂ
ಗಗನಾಗ್ರಂಬರಮಿಂತು ದಾನವಖಳಂ ಪೋತಂದನಾಟೋಪದಿಂ ೫೩

ಕಂ॥ ಕಾಡುದಾಡೆ ಮಿಂಚು ಕಿಸುಗಣ್
ಸಿಡಿಲೆನೆ ನೀಲಾಭ್ರಘಟೆಯೆ ಶರದದ ಪೇಘ
ಕ್ಕೆಡೆಗುಡದೆ ಮುಗುಳಿತ ಗಗನಮ
ನೆಡೆಗೊಂಡವೊಲಾಯ್ತು ದನುಜನಾಕೃತಿ ನಭದೊಳ್ ೫೪

ವ॥ ಆಗಳಾ ಮಹಾಕಾಯದೈತ್ಯಸ್ಕಂಧದೊಳಿರ್ದ ಸಂಕರ್ಷಣಂ ಕಿಂಕರ್ತವ್ಯತಾ ಮೂಢನಾಗಿ ಪೋಗುತ್ತುಮಿರೆ ಕಮಳಲೋಚನಂ ನೋಡಿ

ಚಂ॥ ಎಲೆಲೆ ಮಹಾತ್ಮ ನೀನಿತರಬಾಲಕರಂತೆವೊಲಿಂತು ಪೋಗಿ ವಿ
ಹ್ವಲತೆಯನೇಕೆ ಮಾಡಿದಪೆ ನೀಂ ನೆನೆ ನಿನ್ನ ಮಹತ್ತ್ವಮಂ ಜಗಂ
ವಿಲಯಮನೆಯ್ದುವಾಪದದೊಳಂ ಲಯಮೆಯ್ದದ ಶೇಷಮೂರ್ತಿ ನೀಂ
ಹಲಧರ ಶೇಷನಾಮಮದಱಿಂ ನೆಗಟ್ದಾ ಪ್ರಭು ನೀನೆ ನಿಶ್ಚಯಂ ೫೫

ಮ॥ ಪದಿನಾಲ್ಕುಂ ಜಗಮಿರ್ಪುದಾರುದರದೊಳ್ ಶಕ್ರಾದಿದೇವರ್ ಮಹಾ
ಪದವೀಸಂಸ್ಥಿತರಾದರಾರ ದಯೆಯಿಂ ವಾರಾಶಿ ಮರ್ಯಾದೆದ
ಪ್ಪದದಾರಾಜ್ಞೆಯಿನಿಂದ್ವಿನರ್ ಬೆಳಪರಾರಾದೇಶದಿಂ ತದ್ರಮಾ
ಸ್ಪದನೆನ್ನಂ ತಳೆದಿರ್ಪನಂತ[1]ನಯಸಂತಜ್ಞತ್ವ[1]ಮೇನಕ್ಕುಮೋ ೫೬

ವ॥ ಎಂಬುದುಂ ಸ್ವಕೀಯಸಾಮರ್ಥ್ಯಮಂ ತಿಳಿದು ಸಪ್ತಾರ್ಣವಮೇಖಲಾವೃತ ವಸುಂಧರಾವಹಶಕ್ತಿಯುಕ್ತನಾಗಿ ನಕ್ತಂಚರನ ಮಸ್ತಕಮಂ ಮುಷ್ಟಿಯಿಂ ತಿವಿದು

ಚಂ॥ ಕುಲಿಶವಿಘಾತಮೆಂಬ ದೃಢಮುಷ್ಟಿವಿಘಾತದಿನುಣ್ಮಿ ಪಾಯ್ವಿನಂ
ತಲೆಯ ಮಿದುಳ್ಗಳುಚ್ಚಳಿತಲೆಯುಮಟ್ಟಿಯೊಳಾಟ್ವಿನಮಟ್ಟಿಯುಂ ಧರಾ
ತಲದೊಳುರುಳ್ವಿನಂ ತಲಮುಮಾಖಳನಟ್ಟಿಯ ಬಿಣ್ಪಿನಿಂ ರಸಾ
ತಲಕಿಱಿವನ್ನಮಂತು ಮುಸಲಾಯುಧದಿಕ್ಕಿದನಾಪ್ರಳಂಬನಂ ೫೭

ವ॥ ಅಗಳ್

ಮ॥ ಅನಿಮೇಷಾಹಿತನಾಸ್ಯಗಹ್ವರವಿನಿರ್ಯಲ್ಲೋಹಿತಂ ಕಾಕಗೃ
ಧ್ರನಿಕಾಯಚ್ಛದನಾವಗೂಹಿತಮೆನಲ್ ಬಿಟ್ಟಿರ್ದನಂ ಗೆಲ್ದ ನಿಂ
ದನನೊಲ್ದೀಕ್ಷಿಸಿದಂ ನಿಜಾಗ್ರಭವನಂ ದೈತ್ಯಾರಿ ತೇಜೋಧಿರಾ
ಮನನುಗ್ರಾರಿವಿರಾಮನಂ ವಿಜಯಭೃಂಗಾರಾಮನಂ ರಾಮನಂ ೫೮

[1] ನಿನಗಿಂತಜ್ಞತ್ವ (ಮೊಳ)

ವ॥ ಅಂತು ವಿಜಯಮಂಗಳಂ ನೆಗೞೆ ಗೋಕುಲಮಂ ಪೊಕ್ಕು ನಂದನಂದನಂ ಗೋಪಾಲವಿನೋದಮೆ ನಿತ್ಯೋತ್ಸವಮಾಗೆ ಸುಖದಿಂದಿರ್ಪನ್ನೆಗಂ

ಕಂ॥ ತುಱುಗಿರ್ದ ನೀಲಮೇಘದ
ತುಱುಗಲ್ ನೆಱೆ ಪಿಂಗಿ ಪೋಗೆ ತೆಱಪಾದುದಱಿಂ
ದೆಱಗಿದಳಿಪಟಲಿ ಪೋಗಲ್
ತೆಱಪಾದುತ್ಪಲವನಂಬೊಲಿರ್ದುದು ಗಗನಂ ೫೯

ಲವಣಾರ್ಣವಮಂ ದುಗ್ಧಾ
ರ್ಣವದೊಳ್ದೆರೆಮಾಲೆ ಮುಸುಕಿದಂತಿರೆ ನೀಳ
ಚ್ಛವಿಯೆನಿಪ ಘನಾಧ್ವಮನಡ
ರ್ದುವು ಶರದದ ಮುಗಿಲ್ಗಳೆಸೆದುವತಿಧವಳಂಗಳ್ ೬೦

ರವಿಹಯಲಾಲಾಪಿಂಡಂ
ದಿವಿಜನದೀಫೇನಮಾಲೆ ರಾಹುವ ನಿರ್ಮೋ
ಕವಿದೆಂಬಿನಮುಲ್ಲಲ್ಲಿಗೆ
ಧವಳಾಂಬುದಪಟಲಮೆಸೆದುದಂಬರತಳದೊಳ್ ೬೧

ಮ॥ಸ್ರ॥ ದರಿಯಂ ಮಾಱಿರ್ದ ನೀರೊತ್ತಿಱೆ ತರೆ ತೊಱೆಗೆಲ್ಲಂ ಪುಳಿಲ್ವಜ್ಜೆ ಮೆಯ್ದೋ
ಱಿರೆ ಸೈವಾಳಂ ಮಳಲ್ದಿಂಟೆಗಳೆಸೆಯೆ ಶರತ್ತಾಪಸಂಪತ್ತಿಯಿಂದಂ
ತೆರೆಗಳ್ ನೀರ್ವೊಕ್ಕವೊಲ್ ತೀರದ ತರುಪಟಲಚ್ಛಾಯೆ ನೀರೊಳ್ ಬೆಡಂಗಾ
ಗಿರೆ ತತ್ತ್ವಾವಾಸಚಿತ್ರಕ್ಕೆಣೆಯೆನೆ ತಿಳಿದತ್ತಂದು ಸಿಂಧುಪ್ರತಾನಂ ೬೨

ಕಂ॥ ಬಾಲೆಯುರರದೊಳ್ ಕಿಱುಮೊಲೆ
ಮೇಲುದು ನಸುದೊಲಗೆ ತೋರ್ಪ ತೆಱದಿಂ ಸರಸೀ
ಮಾಲೆಯೊಳೆಸೆದುವು ನವಪ
ತ್ರಾಲಿಯ ತೆಱಪಿಂದೆ ತೋರ್ಪ ಕಮಲದ ಮುಗುಳ್ಗಳ್ ೬೩

ಉ॥ ಮಾನಸದಿಂ ಸಿತಾಂಬುಜಶತಂ ತಳರ್ವಂತೆವೊಲೆಯ್ದೆ ನೀರದ
ಸ್ಥಾನದೊಳಿರ್ದ ಬೆಳ್ಮುಗಿಲ ಮಕ್ಕಳವೋಲ್ ನಿಜಪಾಂಡುದೇಹಸಂ
ತಾನಕವಭ್ರದೊಳ್ ಮಿಱುಗೆ ಬಂದೆಱಗಿತ್ತು ಕೊಳಂಗಳೊಳ್ ತಟೀ
ಫೇನವಿತಾನವಾತ್ಮರುಚಿಯೊಳ್ ತಡಮಾಗೆ ಮರಾಳಮಂಡಳಂ ೬೪

ಮ॥ಸ್ರ॥ ಇವು ಕಂದರ್ಪಂಗೆ ದೋರ್ದರ್ಪಮನಳಿಗಱಿಪಂ ಗಂಧವಾಹಂಗೆ ಸೌಗಂ
ಧಮನಬ್ಜಂಗೂರ್ಜಿತಾಟೋಪಮನಡರ್ಪುಗುಂ ತಮ್ಮ ಪುಷ್ಪೇಷುವಿಂ ತ
ಮ್ಮ ವಿಕಾಸೋಲ್ಲಾಸದಿಂ ತಮ್ಮತಿಪರಿಮಳದಿಂ ತಮ್ಮ ಚೆಲ್ವಿಂದೆನಲ್ ಜಾ
ತಿ ಮನೋಜಾತಪ್ರಸೂನಾವಳಿಯಸಿಱಿಸಿ ಸಂಪತ್ತುವೆತ್ತಿರ್ದುದತ್ತಂ ೬೫

ಉ॥ ಪಿಂಗಳಮಾದ ನೆಲ್ಲತೆನೆಯಂ [1]ನಸು[1]ಗರ್ಚಿದ ರಕ್ತಚಂಚು ಪ
ಕ್ಷಂಗಳ ಶಾಡ್ವಲಚ್ಛವಿ ಮಸಂಗೊಳೆ ಪಾಱುವ ಕೀರಮಾಲೆ ರೋ
ದೋಂಗಣಮೆಂಬ ಪಟ್ಟಣದೊಳೊಪ್ಪುವ ಬೆಳ್ಮುಗಿಲೆಂಬ ಬಳ್ಳಿಮಾ
ಡಂಗಳ ಪೊನ್ನ ಮಾಣಿಕದ ಪಚ್ಚೆಯ ತೋರಣದಂತೆ ರಂಜಿಕುಂ ೬೬

ಕಂ॥ ಐರಾವಣಕುಲಸಂಭವ
ವಾರಣಘಟೆ ನೆರೆದು ಪತ್ತಿ ಶೀಕರಜಲಮಂ
ಧಾರಿಣಿಗೆ ಸೂಸಿದಪುವೆನೆ
ಶಾರದಘನಘಟೆಯಿನೆಱಗಿದುವು ಬೆಳ್ಸರಿಗಳ್ ೬೭

ವಾರಿಧಿಯೊಳುಳ್ಳ ನೀರಂ
ಕಾರ ಮುಗಿಲ್ ಕಱೆದು ಪೋಗಲುೞಿದಾ ಮುತ್ತಂ
ಶಾರದಮೇಘಾವಳಿ ತಂ
ದೋರಂತಿರೆ ಕಱೆದುವೆನಿಸಿದುವು ಬೆಳ್ಸರಿಗಳ್ ೬೮

ನೀರಧಿಯ ನೀರ್ಗೆ ಪೋಪಾ
ಕಾರ ಮುಗಿಲ್ ಮರಳಮೆಂದು ಶರದಭ್ರಂಗಳ್
ಸಾರಿರ್ದ ಗಗನಗಂಗೆಯ
ನೀರನೆ ಕಱೆವಂತಿರೆಱಗಿದುವು ಬೆಳ್ಸರಿಗಳ್ ೬೯

ಶರದಭ್ರಕುಸುಮತರುಗಳ್
ಮರುದಾಹತಿಯಿಂ ಪರಾಗಪಾಂಸುಪ್ರಸರಂ
ಬೆರಸರಲಂ ಸುರಿದಪುವೆನೆ
ಸುರಿವ ಬಿಸಿಲ್ಮೞೆಗಳೆಸೆದು[2]ವಭ್ರಾಂಗಣದೊಳ್[2] ೭೦

---

[1] ಸಲಿ (ಖಗ) [2] ಅಭ್ರಾಗಮದೊಳ್ (ಕಖಗ)

ಚಂ॥ ಮದಚಳೆಯಾಗಿ ನೀರ್ವೊಗೆವ ಖೇಚರಕಾಂತೆಯ ಹಸ್ತದಿಂ [1]ಬಟಿ
ಲ್ಚಿದ[1] ನವರೌಪ್ಯಕುಂಭಮೆ ತರಂಗಿತನಾಕತರಂಗಿಣೀಪ್ರವಾ
ಹದೊಳಿದೆ ಕಾಣಲಾದಪುದೆನಲ್ ನಿಱಿಗೊಂಡ ಶರಪ್ಪನಾಳಿಯಿಂ
ಪುದಿದನಿಳಾಧ್ವದೊಳ್ ಪೊಳೆಯುತಿರ್ದುದು ಚಂಡಮರೀಚಿಮಂಡಲಂ ೭೧

ಕಂ॥ ಶರದಭ್ರಮೆಂಬ ಬೆಳ್ದಾ
ವರೆಗಳ ಮಕರಂದರೇಣು ಪವನಾಹತಿಯಿಂ
ಪರೆದು ಪಸರಿಸಿದುದೆನೆ ಪಿಂ
ಜರರುಚಿ ರಂಜಿಸಿದುದಂದು ಕಂಜಪ್ರಿಯನಾ ೭೨

ಕಡಲಂ ಸುರಾಸುರರ್ ಕಡೆ
ವೆಡೆಯೊಳ್ ತೆರೆತೆರೆಗಳೊಳಗೆ ಪುಟ್ಟಿದ ಜೆಲ್ವಿಂ
ಗೆಡೆಗೊಂಡು ನಿಱಿಮುಗಿಲ್ಗಳ
ನಡುವೆ ಕರಂ ಮಿಱುಗಿದತ್ತು ಹಿಮಕರಬಿಂಬಂ ೭೩

ಮ॥ ಮೃಡಹಾಸದ್ಯುತಿಯಂತೆ ಕಂತುಶರದಂತಿರ್ದಚ್ಚವೆಳ್ದಿಂಗಳಂ
ಕಡುದಣ್ಪಿಂಗೆಡೆಗೊಂಡಿದೊಂದು ಬಿಸಿಲೆಂದಾಶ್ಚರ್ಯದಿಂದಂ ಜನಂ
ನಡೆ ನೋಡುತ್ತೆ ಮಹೋತ್ಪಳೋತ್ಪಳನಿಮೇಷೋನ್ಮೇಷಚಿಹ್ನಂಗಳಿಂ
ಗಡ ಬೆಳ್ದಿಂಗಳಿದೆಂಬುದೇವೊಗಟ್ವೆ[2]ನೂರ್ಜಚ್ಛ್ರೀಯ ಬೆಳ್ದಿಂಗಳಾ[2] ೭೪

ಉ॥ ರಾಜಿಸುತಿರ್ದುವಂದರುಣಪಂಕಜಪಾಂಡುಪಯೋಜನೀಳ ನೀ
ರೇಜಕದಂಬಕಂಗಳ [3]ಪೊದಟ್ದಿರವಂ ಪರೆಪುತ್ತೆ[3] ಷಟ್ಪದೀ
ರಾಜಿಯು ವರ್ಣಸಂಕರತೆಯಿಂದೆ ಕೊಳಂಗಳನಂಗರಾಜನೀ
ರಾಜನ ಲೀಲೆಗೆಂದು ರತಿ ತೀವಿದ ಬಣ್ಣವುರಂಗಳಂದದಿಂ ೭೫

ವ॥ ಅಂತು ವಿಮಳಾಬ್ಜವಿಭವಂ ನಭದೊಳಂ ನಳಿನಿಯೊಳಂ ಗೋಸಮೃದ್ಧಿ ಗೋಕುಲದೊಳಂ ಮಾರ್ತಂಡಮಂಡಳದೊಳಂ; ಕುಸುಮಶಿಳೀಮುಖಪ್ರಚಾರಂ ವಿರಹಿತತಿಯೊಳಂ ಮಾಳತಿಯೊಳಂ, ಮದೋದಯಂ ಮದನಗೊಳಂ ಮತ್ತಗಜದೊಳಂ, ಅನುಕೂಲವೃತ್ತಿ ನದಿಯೊಳಂ ನಲ್ಲರೊಳಂ, ಪ್ರಸನ್ನಭಾವಂ ಜಲದೊಳಂ ಜನದೊಳಮಾದ ಶರತ್ಸಮಯದೊಳ್

---

[1] ಬಿರ್ದುಂಕಿದ (ಕ) ಕಟಲ್ಚಿದ (ಖ) ಬರ್ದುಂಕಿದೆ (ಗ) [2] ಊರ್ಜಶ್ರೀಯ ಬೆಳ್ದಿಂಗಳಂ (ಮೊಅ) [3] ಪೊದಟ್ದಿರೆವಂಬರಮುತ್ತ (ಕಖಗ) ಪೊದಟ್ದಲಿವಂಚೆಯಮುತ್ತ (ಮೊಅ)

ಕಂ॥ ನಂದಾದಿಗೋಪರಿಂದು ಪು
ರಂದರನುಹವೆಂದು ಹರ್ಷದಿಂ ಸಂಭ್ರಮಿಸಲ್
ಮಂದರಧರನೀಕ್ಷಿಸಿ ಸಂ
ಕ್ರಂದನಮುಹವೇನಿಮಿತ್ತಮೆಮಗಿದು ಚಿತ್ರಂ ೭೬

ವ॥ ಎಂದು ಬೆಸಗೊಳ್ವುದುಂ

ಉ॥ ತೀವಿದ ಗಟ್ಟಿಪಾಲೊದವು ಗೋಧನದೊಳ್ ನೆಗಟ್ಟಿಗಂ ತೃಣಾದಿ ಸ
ಸ್ಯಾವಳಿ ಪೆರ್ಚುಗುಂ ನದನದೀಕುಳದೊಳ್ ಪರಿವರ್ಧಿಕುಂ ಜಗ
ಜ್ಜೀವನಜೀವನಂ ಮುಟಿತಗಳಿಂ ಮುಟಿತಯುಂ ಕಜಿತಮಂ ಹಿತಾರ್ಥಮಿ
ಭೂವಳಯಕ್ಕೆ ಶಕ್ರನದುಕಾರಣಮುರ್ಬಿಪುದಿಂದ್ರನಂ ಜನಂ ೭೭

ವ॥ ಎಂದು ನುಡಿದ ನಂದಗೋಪನ ಮಾತಂ ಕೇಳ್ದು ಪುರುಹೂತಂಗೆ ಕೋಪಮಂ ಪುಟ್ಟಿಸಲ್ವೇಡಿ ಕೃಷ್ಣನಿಂತೆಂದಂ :— ನಮಗೀ ದಿವಿಜರಾಜನಿಂ ಪ್ರಯೋಜನಮಿಲ್ಲ, ಗೋಪಾಲರಾಗಿ ವನದೊಳ್ ಚರಿಯಿಸುವ ನಮಗೆ ವನಾನ್ವಿತಂಗಳಪ್ಪ ಗಿರಿಗಳುಂ ಗೋಧನಂಗಳುಂ ಪರಮಗತಿಯುಮಿಷ್ಟದೈವತಮುಮಲ್ಲದಿಲ್ಲ. ಈ ಗಿರಿಗಳ್ ಕಾಮರೂಪಿಗಳ್ ತಂತಮ್ಮ ತರುತೃಣಚ್ಛೇದದಿಂದಪರಾಧಂ ಮಾಡಿದ ನಮ್ಮ ಮಂದಿಗಳಂ ಸಿಂಹ ಶರಭ ಭೇರುಂಡ ಶುಂಡಾಲ ಶಾರ್ದೂಲ ಸರ್ಪಾದಿ ಕ್ರೂರರೂಪಂಗಳಿಂ ಬಾಧಿಸದಂತು ಶಾಂತಿಯುಂ ಮಾಡಲ್ವೇಟ್ಪುದಿನ್ನೆಮಗೆ ಗಿರಿಯಜ್ಞಮುಂ ಗೋಯಜ್ಞಮುಂ ಪ್ರಧಾನಮಂಗಳಂ. ಅದು ಕಾರಣದಿಂ

ಕಂ॥ ಘನರಸ[1]ಭಕ್ಷ್ಯಾನ್ನಗಳಿಂ[1]
ಘನರಸಗಂಧಾಕ್ಷತೌಘದಿಂದಂ ನೆಗಟ್ಟಿಂ
ಅನುಮತಿಯೊಳೆ ಗಿರಿಯಜ್ಞಮಿ
ದನುಮತಿಯೆನಗೆಂದು ಚಕ್ರಿ ಮತ್ತಿಂತೆಂದಂ ೭೮

ಅನ್ನಿಮಗೆ ಪುತ್ರನಪ್ಪೊಡ
ಮೆನ್ನೊಳ್ ನಿಮಗಟ್ಕಟುಳ್ಳೊಡಂ ನಿಮಗೆನ್ನಿಂ
ದನ್ನಂ ಪುಟ್ಟುವೊಡಂ ನೀ
ಮೆನ್ನೆಂದುದುಗೆಯ್ವುದೆನಗೆ ಮಾಟ್ಪುದು ಮುದಮಂ ೭೯

ವ॥ ಎಂಬುದುಂ, ನಂದಗೋಪಪ್ರಭೃತಿಗೋಪವೃದ್ಧರಿಂತೆಂದರ್:—ಎಲೆ ಕೃಷ್ಣ, ನಿನ್ನ ರೂಪಮಂ, ಸೌಷ್ಠವಪ್ರತಿಷ್ಠೆಯುಂ, ಪ್ರಭಾವಪ್ರಕರ್ಷಮಂ, ಶೃಂಗಾರಗೌರವಮಂ,

---

[1] ಭಕ್ಷ್ಯಾರ್ಣವದಿಂ (ಕ)

ವಿಲಾಸವಿನ್ಯಾಸವುಂ, ವೇಷವಿಶೇಷವುಂ, ಸತ್ಪ್ರವರ್ತನೆಯುಂ, ವಿಕ್ರಮಾಧಿಕ್ಯಮುಂ, ವಿವೇಕಾತಿರೇಕವುಂ, ನೋಡಲ್ ನೀಂ ಪರದೈವತಕಳಾಸ್ವರೂಪನಾಗಿ ತೋರ್ಪೆ, ನಿನ್ನಭಿಮತಾರ್ಥಮನೆ ಮಾಡಿ ಕೃತಾರ್ಥರಪ್ಪೆಮಗೆ ನೀಂ ದರಸ್ಮಿತಪ್ರಸನ್ನ ವದನನಪ್ಪಕಾರ್ಯಮೇ ಕರಣೀಯಮೆಂದು ಮಹೇಂದ್ರಮಹಮಂ ಮಾಣ್ದು ಗಿರೀಂದ್ರಮಹಮನೊಡಂಬಟ್ಟು ತನ್ನ ಹಾಮಹೋಚಿತಪರಿಕರಂಗಳಂ ಗೋವರ್ಧನಗಿರಿಗೆ ನಡೆಯಿಸಿ ಗೋಪಾಲಬಾಲಕರೆಲ್ಲರುಂ ಕೈಗೈದು ಗೋಧನಂಗಳಂ ಶೃಂಗಾರಂಗೆಯ್ಸಿ ನೆರೆದು ಬರ್ಪುದೆಂದು ಗೋಕುಲದೊಳೆಯ್ದೆ ಸಾಱಿಸುವುದುಂ

ಕಂ॥ ತನತನಗೊಲವಿಂ ಕೈಗೆ
ಯ್ವ ನಗಾರ್ಚನಪರಿಕರಂಗಳಂ ನೆರಪುವ ಗೋ
ಧನಮನಲಂಕರಿಸುವ ಘೋ
ಷನಿವಾಸಿಗಳಿಂದಮಾಯ್ತು ಕಳಕಳನಿನದಂ ೮೦

ವ॥ ಆಗಳಾಸಂಭ್ರಮಮಾನ್ತ ಜನದ ಕಳಕಳದಿಂ ದಳಂಬಡೆದು ಭೋರ್ಗರೆದು [1]ಲಿವ ಕೊರಲ ಗಂಟೆಯುಮುರದಗೆಜ್ಜೆಯುಂ[1]ಮುಂದಂಬಡೆಯೆ; ಪೊಳೆವ ಪಂಚವರ್ಣಿಗೆಯ ಪಟ್ಟೆಯ ತೋರದೊಂಗಲುಂ, ಬೇವಿನದಂಡೆಯುಂ, ನವಿಲ ಕಂಠದ ಬಾಸಿಗಮುಂ[2]ಮಲುಗೆ; ವಾರಮುಂ, ಉಱಚೆಲ್ಲಿಯುಂ, [2]ನೇವಣಮುಂ ಲೀಲೆವಡೆಯೆ; ಮೆಯ್ದೊಡೆದ ಹರಿದ್ರಾದ್ರವಮುಂ, ಕುಂಕುಮ ಪಂಕಮುಂ ಬಿಂಕಂ ಬಡೆಯೆ; ಶೃಂಗಾರದಿಂ ಭಂಗಿವಡೆದು, ವೃಷಬಲೀವರ್ದಧ್ವಾನಮುಂ, ಗೋವತ್ಸಕದಂಬಹಂಭಾರವಮುಂ ವಿಜೃಂಬಿಸೆ ಗೋಲೋಕಮುವನಿಗವತರಿಸಿದಂತೆ, ಗೋಮಂಡಲಮೆ ಗೋಮಂಡಲಾದ್ವೈತಮಾದಂತಸಂಖ್ಯಾತಮೆನಿಸಿ ಮುಂದುವರಿವ ತುಱುಗಳುಮನವಱ ಪಿಂದೆ ಶಂಖರಸದರಿದಾಳದ ಪಸುರ ತಿಗುರೊಳಂ, ಮೃಗಮದಘುಸೃಣಚಂದನಚರ್ಚೆಯೊಳಂ, ನಿಂಬಮಾಲೆಯ ಕಿಱುವೀಲಿಯ ಪೆಂಜೆಯದ ಕೇಶಬಂಧದೊಳಂ, ಶಾರದೈಕವನ್ಯಕುಸುಮದ [3]ಚಿತ್ರಹಾರ[3] ಕೇಯೂರ ಕರ್ಣಪೂರದ ಭೂಷಣಂಗಳೊಳಂ, ಪಟ್ಟಪಟ್ಟಾವಳಿಯ ಗಂಡುಡಿಗೆಯೊಳಮೆಸೆದು ಪಸದನಂಗೆಯ್ದು ಸಂಮಾರ್ಜಿತೋಜ್ಜ್ವಲದಶನನಿಚಯತಾಂಬೂಲಚರ್ವಣಭರಿತಕಪೋಲರುಂ ಗೋನಿಯೋಗದಂಡಧರರುಮಾಗಿ, ಕೆಲಬರ್ ಕೋಡ ಕಾಳೆಗಳನೂದುತ್ತುಂ, ಕೆಲಬರ್ ಪಿಂಡೊಡೆದು ಪರಿವಬಲವದ್ದರ್ಪಯುಕ್ತ ವತ್ಸಂಗಳ ಬಱಿವಿಡಿದು ಪರಿಯುತ್ತುಂ, ಕೆಲಬರ್ ಮಾರ್ತಳಂಬೊಯ್ದಾರ್ದು ವೃಷಭಂಗಳಂ ಕೆಂಗೋಲ್ಮಸಗಿಸುತ್ತುಂ ಬರೆ, ಗೋಪಾಲರಂ ಕಂಡತಿಮುದಿತಹೃದಯನಾಗಿ ಮುಕುಂದಂ ನಗಯಜ್ಞೋಪಯೋಗ್ಯದ್ರವ್ಯಂಗಳಂ ತಂದು ಮುಂದೆ ನಿಂದಿರ್ದನಂದಗೋಪಪುರೋಗಮರನನುರಾಗದಿಂ ನೋಡಿ

---

[1] ಆ ಉಲಿವಘಂಟೆಯುಮುರಗೆಜ್ಜೆಯು (ಮೊಅ) [2] ಅಲಗೆವಾರಮುಂ ಚೆಲ್ಲಿಯುಂ (ಕಖಗ) [3] ಚಿತ್ರಪೂರ (ಕಗ)

ಕಂ॥ ದಿವ್ಯಸ್ರಗ್ದಿವ್ಯಾಂಬರ
ದಿವ್ಯಾಲಂಕಾರ ದಿವ್ಯಲೇಪನಭಾಸ್ವ
ದ್ದಿವ್ಯಾಕೃತಿಯಂ ಧರಿಯಿಸಿ
ದಿವ್ಯಗಭೀರೋಕ್ತಿಯಿಂದಮಾಗಳ್ ಪೇಳ್ದಂ ೮೧

ಉ॥ ಪೂಜಿಸಿಮೆನ್ನನಿಲ್ಲಿಗಧಿದೇವತೆಯಾನೆನುತದ್ರಿಯಲ್ಲಿ ನಿಂ
ದಾ ಜಲಜಾಕ್ಷನಂ ನೆರೆದು ಘೋಷಜನಂ ವಿವಿಧೋಪಚಾರದಿಂ
ಪೂಜಿಸಿದತ್ತು ಬಿತ್ತರಿಸೆ ಗೋಪಕದಂಬಕವೊಳ್ಗೊಳಲ್ಗಳಂ
ಬಾಜಿಪ ಕೋಡ ಕಾಳೆಗಳನೂದುವ ಬೊಬ್ಬಿಱಿದಾರ್ವ ಸಂಭ್ರಮಂ ೮೨

ವ॥ ಅಂತು ವಿಕೀರ್ಯಮಾಣಪ್ರಸವಧವಳಾಕ್ಷತಾಸಾರಾಪ್ರಕಾಶವಿಶದಮುಂ, ಕಾಳಾಗರುಧೂಪೋದ್ದಾಮ ಧೂಮಸ್ತೋಮಜಲಜೀಮೂತಸಮುದಯಶ್ಯಾಮಳಮುಂ, ನೀರಾಜನದೀಪಕಳಿಕಾಶ್ರೇಣೀಶೋಣಾಂಶುಬಾಲಾತಪಪ್ರಸರಪಿಶಂಗಮುಂ, ಯಕ್ಷಕರ್ದಮ ಕರ್ದಮೀಭೂತ ಧಾತುಸ್ಥಲಸ್ಥಗಿತಮುಂ, ವಿಚಿತ್ರವಾದಿತ್ರನಿನದಘನಗರ್ಜಿತೋರ್ಜಿತಮುಂ ವಿವಿಧೋಪದಂಶಭಕ್ಷ್ಯೌದನರಾಶಿಪ್ರತಾನಪ್ರತ್ಯಂತಪರ್ವತ ಪರೀತಮುಂ, ಲೇಹ್ಯಚೋಷ್ಯಪಾಯಸದ್ರೋಣೀಕಟಾಹದೀರ್ಘಿಕಾಸಂಕುಲವಿಶಂಕಟಮುಂ, ಆಜ್ಯ ನಿರ್ಝರಪರಂಪರಾಪರೀತಮುಂ, ದುಗ್ಧಕುಂಭಸಹಸ್ರಸಂಗತಮುಂ ದಧಿಹ್ರದಶತಾವರ್ತಮುಮೆನಿಸಿ, ಗೋವರ್ಧನನಗಂ ಸೊಗಯಿಸೆ, ನಗೇಂದ್ರಯಜ್ಞಮಂ ನೆಗೞ್ದು ಗೋಪಸಮಾಜಂ ವಿರಾಜಿಸೆ ತದನಂತರಂ

ಕಂ॥ ಅಪ್ರಮಿತ ಪಾಯಸಾಜ್ಯರ
ಸಪ್ರಿಯಪಕ್ವಾನ್ನ ಚಯಮನುಂಡೆಂ ತಣಿದೆಂ
ಸುಪ್ರೀತನಾದೆನಾಂ ಶೈ
ಳಪ್ರಭು ನಿಮಗೆಂದಗಾಗ್ರದೊಳ್ ಹರಿ ನುಡಿದಂ ೮೩

ವ॥ ಎಂದು ನುಡಿದಾಗಳಾ ದಿವ್ಯಮೂರ್ತಿಯಂ ತೊಲಗಿಸಿ ತನ್ನ ಮುನ್ನಿನ ಗೋಪಸ್ವರೂಪದಿಂ ಗೋಪಗೋಪೀಜನಂಗಳೊಡನೆ ತನ್ಮಹಾಮಹಮಂಗಳ ಪ್ರಶಂಸೋಕ್ತಿಗಳಂ ನೆಗೞುತ್ತುಂ ಬಂದು ನಂದನಂದನನಾನಂದದಿಂ ಗೋಕುಲದೊಳಿರ್ಪನ್ನೆಗಮಿತ್ತಲ್

ಕಂ॥ ಮಾಣ್ದೆನ್ನಮಹಮನಗಮಂ
ಪೂಣ್ದರ್ಚಿಸಿದಂ ಮುಕುಂದನೆಂದು ಮಹೇಂದ್ರಂ
ಕಣ್ದುಱುಗಲ್ ಕೆಂಪಡರ್ದಿರೆ
ನುಣ್ದಳಿರಿಂ ತಳ್ತಶೋಕಕುಜದಂತಾದಂ ೮೪

ವ|| ಅಂತು ಭೂಧರವಿರೋಧಿ ಭೂಧರಂಗೆ ಕ್ರುದ್ಧನಾಗಿ ಪುಷ್ಕಳಾವರ್ತಕ ಬಲಾಹಕನಿಕಾಯಯುಮಂ ಕರೆದು

ಕಂ|| ಇಂದೆ ಲಯಕಾಲಮಕ್ಕೆಮ
ಸಂದೆಯಮೇಂ ಗೋಕುಲಕ್ಕೆ ನೀಂ ಪೋಗಿ ಶಿಲಾ
ವೃಂದಾನ್ವಿತವೃಷ್ಟಿಯನೇ
ೞುಂ [1]ದಿನಮುಂ ಕಱೆಯಿಮೆಂದು[1] ಬೆಸವೇೞಲೊಡಂ ೮೫

ಮರನಂ ಮರದಿಂ ಮೋದುವ
ಗಿರಿಯಂ ಗಿರಿಯಿಂದೆ ಪೊಡೆವ ಕಡಲಂ ಕಡಲೊಳ್
ಬೆರಸುವ ವಿಳಯಾನಿಳನೆನೆ
ಭರದಿಂ ಕಡುಗಾಳಿ ಬೀಸಿದುದು ಗೋಕುಲದೊಳ್ ೮೬

ಗಾಳಿಯ ಪೊಯ್ಲಿಂದಂ ದ್ಯುತಿ
ಮಾಳೆ ತೆರಳ್ದೊಡನೆ ನೆಗಟ್ದಿ ತಮದೊಡ್ಡೆನಲಾ
ಭೀಳತೆನೆತ್ತುದು ನೀಳಘ
ನಾಳಿ [2]ನಿರಕ್ಷೀಕೃತಾಂಬರಂ[2] ಘನಪಥದೊಳ್ ೮೭

ಸಿಡಿಲುಂ ಮಿಂಚುಂ ಮೊೞಗುಂ
ಗಡಣಿಸೆ ಶುಂಡಾಲಹಸ್ತವಿಭಧಾರೆಯೊಳಂ
ದೊಡಗೂಡಿ ಶಿಲಾವಳಿಗಳ್
ಕೆಡೆಯೆ ಘನಾಘನಘಟಾಳಿ ಕಱೆದುವು ಮೞೆಯಂ ೮೮

ವ|| ಆ ಸಮಯದೊಳ್

ಮ||ಸ್ರ|| ಸಮುದಗ್ರಗ್ರಾವವರ್ಷಂ ಕಱೆಯೆ [3]ತುಱುವುಮಾವುಂ ಪಡಲ್ವಿಟ್ಟು ಬಿಟ್ದಿ
ಪ್ಪ[3]ಮೆನುತ್ತುಂ ಗೋಪಗೋಪೀತತಿ ಮಱೆವುಗೆ ಗೋವರ್ಧನಾದ್ರೀಂದ್ರಮಂ ಕಿ
ೞ್ತು ಮಹಾಂಭೋನಿರ್ಝರಂ ಝಲ್ಲರಿವೊಲಿರೆ ಮಹಾವೃಷ್ಟಿಯಿಂ ವಾಮ ದೋರ್ದಂ
ಡಮೆ ಕಾವಾಗಿರ್ಪಿನಂ ಗೋಕುಲಕೆ ಕೊಡೆವೊಲಂದೆತ್ತಿ ನಿಂದಂ ಮುಕುಂದಂ ೮೯

---

[1] ದಿನಪರ್ಯಂತಮೆಂದು (ಕಗ) [2] ನಿರೀಕ್ಷಿಸೆ ವೃತಾಂಬರಂ (ಖ) [3] ಕಱುವುಮಾವುಂ ಪಡಲ್ವಟ್ಟುಬೀೞ್ತರ್ಕುರ್ (ಮೊಱ)

ವ|| ಅಂತು ದಿವ್ಯರೂಪದಿಂ ನಗಮಂ ನೆಗಪಿ ಗೋಪಗೋಪೀಜನಂಗಳ ಮೊಗಮಂ ನೋಡಿ

ಕಂ|| ನೀವರ್ಬ್ಬಿಸೆ ತಣಿದೀ ನಗ
ದೇವತೆ ಹಿಮವೃಷ್ಟಿಚಯಮುಮನಪಹರಿಸಲ್ ಬಂ
ದಾವಿರ್ಭವಿಸಿದೊಡೆನಗೆ ಮ
ಹಾವಪುವಾಯ್ತೆಂದು ನಗುತಮಗಧರನೆಂದಂ ೯೦

ಹರಿ ತನ್ನಂಶಾಂಶದಿ[1]ನೊಸೆ
ದಿರೆ[1] ತೋಱುವ ತನ್ಮಹತ್ವದಂಶಾಂಶಮೆ ಗೋ
[2]ಧರಣಬಲಮಂತು[2]ಮಾತ್ಮೋ
ದರಸ್ಥಲೋಕಂಗೆ ಪಿರಿದೆ ಶೈಲೋದ್ಧರಣಂ ೯೧

ನಾನಾವನಸಂಕೀರ್ಣಂ
ನಾನಾಶೃಂಗೋಪಕುಧರನಿರ್ಝರಯುಕ್ತಂ
ನಾನಾಮೃಗಗಣಘೋರಂ
ನಾನಾಯೋಜನವಿಶಾಲಮಾಶೈಲೇಂದ್ರಂ ೯೨

ಮರವಾಯ್ವ ಪೊಣರ್ವ ವಿಸಟಂ
ಬರಿವ ಕರೇಣುಗಳ ನೆರೆವ ಹರಿವಿರುತಿಗೆ ಕೊ
ಕ್ಕರಿಸುವ [3]ನೀರ್ಸೆರೆ[3]ಗೆಯ್ವಿಭ
ಪರಿಕರಮೆಸೆಗುಂ ಮುರಾರಿ ನೆಗಪಿದ ನಗದೊಳ್ ೯೩

ಮಂಡಳಿಸಿರಲಲಸಿ ಮಹೀ
ಮಂಡಳಮಂ ಪೊತ್ತು ನೆಗೆದ ಶೇಷನೆನಲ್ ಶ್ರೀ
ಖಂಡರಸಭೂಷಿತಂ ಭುಜ
ದಂಡಂ ಒಗೆಗೊಂಡುದಗಮನಾಂತಚ್ಯುತನಾ ೯೪

ಅಂಭೋಜನಾಭನಿಂದು
ತ್ತಂಭಿತಮಾದೊಂದುದಗ್ರಗೋವರ್ಧನಮು
ಜ್ಜೃಂಭಿಸುತಿರ್ದುದು ರುದ್ರಂ
ಸ್ತಂಭಿಸಿದಾ ತ್ರಿಪುರದಂತೆ ಗಗನಾಂಗಣದೊಳ್ ೯೫

---

[1] ಸೊಗೆದಿರೆ (ಮೊಳ) [2] ಪರಣಬಲಮೆಂತು (ಖ) [3] ನಿಪ್ಪರೆ (ಕಗ)

ತಳರದತಂದ್ರಿತಮಿಳಿಯಂ
ತಳಿದಿರ್ಪಚ್ಚಿಸಮಡಂಗೆ ಹರಿಕರಶಯ್ಯಾ
ತಳದೊಳೊಱಗಿದವೊಲಿರ್ದುದು
ಜಳದನಿಮೀಳಿತ ಗುಹಾವಿಳೋಚನಮಂಚಳಂ ೯೬

ಇರುಳುಂ ಪಗಲುಂ ಮಾಣದೆ
ಸುರಿವ ಮಹಾವೃಷ್ಟಿಯಂ ನಿವಾರಿಸಲಗಮಂ
ಹರಿ ಧರಿಯಿಸೆ ಸಪ್ತದಿನಂ
ಬರಮಲ್ಲಿಂ ಬೞಿಕ ಪರೆದು ಪೋಯ್ತು ಘನೌಘಂ ೯೭

ವ|| [1]ಅಂತು ವಿಫಲೋದ್ಯೋಗಮಾಗಿ[1] ಮಹಾದ್ಭುತವೃಷ್ಟಿಪೋಪುದುಂ ಕಂಡು ಗೋಪಗೋಪೀಜನಂ ನಿಜಸ್ವೈರದಿಂ ಸಂಚರಿಸೆ ಪೂರ್ವಪ್ರದೇಶದೊಳ್ ಪರ್ವತಮನಿರಿಸಿ ತದೀಯಶಿಖರಶಿಳಾತಳದ ಮೇಲೆ ವನಮಾಲಿ ಲೀಲೆಯಿಂ ಕುಳ್ಳಿರ್ಪನ್ನೆಗಮುತ್ತಲಮರೋತ್ತಮಂ ವಿಸ್ಮಿತಸ್ವಾಂತನಾಗಿ ನಿಜಾಂತರಂಗದೊಳಿಂತೆಂದಂ

*ಪೃಥ್ವಿ|| ಕ್ಷಮಾಧರನಿವಾಸದೊಳ್ ಬಳಿಯನಿಕ್ಕಿದಾ ಶೌರ್ಯಕಂ
ಕ್ಷಮಾಧರತೆಯಂ ಕಿರಿಚ್ಚಲದೆ ತೋಱಿದಾ ಧೈರ್ಯಕಂ
ಕ್ಷಮಾಧರಮನೀಗಳೆತ್ತಿ ಮೆಱೆದಾ ಮಹಾವೀರ್ಯಕಂ
ಕ್ಷಮಾಧರನನಾತನಂ ಕ್ಷಮೆಗೊಳಲ್ಕೆವೇೞ್ಕುಂ ದಿಟಂ ೯೮

ವ|| ಎಂದು ನಿಶ್ಚೈಸಿ

ಮ|| ಮಿಳಿರ್ವನ್ನಂ ಚಮರೀರುಹಂ ಮಿಱುಗುವನ್ನಂ ಪಾಂಡರಚ್ಛತ್ರಮಂ
ಡಳಮೈರಾವತಮಸ್ತಕಸ್ಥಿತನಮರ್ತ್ಯವ್ಯೂಹಸೇವ್ಯಂ ವಿಯ
ತ್ತಳದಿಂ ಭೋಂಕನೆ ಬಂದನೀಕ್ಷಿಸುವಲಂಪಿಂ ವಜ್ರಿ ಗೋವರ್ಧನಾ
ಚಳಭಾರೈಕಸಹಿಷ್ಣುವಂ ಜಳಧರಭ್ರಾಜಿಷ್ಣುವಂ ವಿಷ್ಣುವಂ ೯೯

ವ|| ಅಂತು ಬಂದು

---

1 ವಿಪುಲೋದ್ಯೋಗಮಾಗಿ (ಕಖ)

* ಬದಲಾಗಿ (ಖಗ) ಪ್ರತಿಗಳಲ್ಲಿ
ಕ್ಷಮಾಧರನಿವಾಸದೊಳ್ ಬಲಿಯನಿಕ್ಕಿದಾ ಶೌರ್ಯಮಂ
ಕ್ಷಮಾಧರತೆಯಂ ಕಿಟಿಲ್ ಚಲದೆ ತೋಱಿದಾ ಧೈರ್ಯಮಂ
ಕ್ಷಮಾಧರಮನೀಗಳೆತ್ತಿ ಮೆಱೆದಂ ಮುಕುಂದಂ ನತ
ಕ್ಷಮಾಧರನನಾತನಂ ಕ್ಷಮೆಗೊಳಲ್ಕೆವೇೞ್ಕುಂ ದಿಟಂ

ಮ॥ಸ್ರ॥ನೆಗೞ್ದಾ ಗೋವರ್ಧನಾಗ್ರೋಪಲದಿನೆಸೆದು ಕುಳ್ಳಿರ್ದ ಮೇಘಾಧ್ವದೊಳ್ ನಿಂ
ದು ಗರುತ್ಮಂ ಮಾಟ್ಪ ಪಕ್ಷಾವಳಿಯ ನೆೞಲೊಳೊಪ್ಪಿರ್ದ ಗೋಪಾಲವೇಷಂ
ಬಗೆಗೊಳ್ವಬ್ಜಾಕ್ಷನಂ ಶ್ಯಾಮಳತನುರುಚಿಯಂ ಬಾಳನಂ ದೀರ್ಘಬಾಹಾ
ಯುಗನಂ ಶ್ರೀವತ್ಸವಕ್ಷಸ್ಸ್ಥಳನನತುಳತೇಜಸ್ವಿಯಂ ವಜ್ರಿ ಕಂಡಂ ೧೦೦

ಕಂ॥ ತ್ರೈಲೋಕ್ಯಪಾಲಕಂ ಗೋ
ಪಾಲಕನಾಗಿರ್ದ ಲೀಲೆಯಂ ಕಂಡು ಮರು
ತ್ಪಾಲಕನೆನಗಕ್ಷಿಸಹ
ಸ್ರಾಲಂಬನವಿಂದು ಸಫಲಮೆಂದೀಕ್ಷಿಸಿದಂ ೧೦೧

ವ॥ ಅಂತು ಸಹಸ್ರಲೋಚನಂ ಪರ್ಯಾಪ್ತಸಹಸ್ರಲೋಚನನಾಗಿ ಸಹಸ್ರಪತ್ರಾ
ಯತನೇತ್ರನಂ ನೋಡಿ

ಮ॥ ಎಲೆ ಸರ್ವಾತ್ಮ ಪಿಪೀಲಿಕಾದಿ ಗಜಪರ್ಯಂತಂ ಜಗತ್ಪ್ರಾಣಿಸಂ
ಕುಲಮೆಲ್ಲಂ ಭವದಂಶಜಾಲಮುದಱಿಂ ನೀನೀಗಳಂಶಾಂಶದಿಂ
ದಿಲೆಯೊಳ್ ಪುಟ್ಟಿದ ನಿನ್ನದೊಂದೆಸಕಮೇಂ ಸಾಮಾನ್ಯಮೋ ಮೇಣ್ ಜಗ
ದ್ವಲಯತ್ರಾಣ[1]ಸಮರ್ಥಮೋ[1] ತಿಳಿವೆನೆಂದೀ ವೃಷ್ಟಿಯಂ ಮಾಡಿದೆಂ ೧೦೨

ಕಂ॥ ಇನ್ನಮರಕಾರ್ಯಸಿದ್ಧಿಯು
ಮಿನ್ನಖಿಳವಿರೋಧಿವಧಮುಮಕ್ಕುಂ ನಿನ್ನಿಂ
ನಿನ್ನ ಭುಜಬಲಮನಱಿದೆಂ
ನೀನ್ನಗಮಂ ನೆಗಪಿ ಸಪ್ತದಿನಮಿರ್ದುದಱಿಂ ೧೦೩

ಏಕಂ ಕೂಟಸ್ಥಂ ನಿ
ನ್ನಾಕಾರತ್ರಿತಯಮಾದ ವಿಭುತೆ ಸಮಗ್ರಂ
ಶ್ರೀಕಾಂತ ಮದ್ವಿಧರ್ ಸ್ವ
ಭ್ರೂಕೋಟಿಯ [2]ಪರ್ಬಿನಿಂದ[2]ಮಪ್ಪರ್ ಕಿಡುಪರ್ ೧೦೪

ವ॥ ಆ ಸಮಗ್ರಪ್ರಭಾವಮುಂ ನಿನ್ನೀಗಳವತಾರದೊಳ್ ಕಾಣಲಾದಪುದೆಂತೆನೆ

ಕಂ॥ ನೀಂ ತುಱುಗಾವೊಡಮೇಂ ನಿ
ನ್ನಂತಿಕದೊಳ್ ನೋಡೆ ಮದ್ವಿಳಾಸಂ ಮಸುಳ್ದ
ತ್ತಂತುಟೆ ವಲಂ ಸ್ವಯಂಪ್ರಭು
ವೆಂತಿರ್ದೊಡಮಿರ್ದ ತೆಱನೆ ಚೆಲ್ವಾಗಿರ್ಕುಂ ೧೦೫

[1] ಸಮಗ್ರಮೋ (ಖ) [2] ಜರ್ಬಿನಿಂದ (ಖ)

ಪುರಮಥನರೂಪದಿಂ ನೀಂ
ಮರುಳ್ಗಳೊಡನಾಡಿದೈ ನರಾಕೃತಿವಿಷದಿಂ
ಹರಿ ಗೋವುಗಳೊಡನಾಡಿದೆ
[1]ಪರಮೈಕಂಗುಚಿತ[1]ಮಕ್ಕುಮೀ ಸ್ವಾತಂತ್ರ್ಯಂ ೧೦೬

ಚಂ|| ಜಗದುದಯಸ್ಥಿತಿಪ್ರಳಯಕಾರಣ ಭಕ್ತಸನಾತನ ತ್ರಿಮೂ
ರ್ತಿಗಳ ಮಹಾಧಿಪತ್ಯಮದು ನಿನ್ನ ವಿಡಂಬಮೆನಲ್ ಜುಗುಪ್ಸಿತಂ
ಬಗೆವೊಡಿದಾಧಿಪತ್ಯಸವನಂ ನಿನಗಾಗಿದನೆಂಬೆನೆಟ್ಟಿಯಿಂ
ನೆಗಧರ ಗೋಪನಾಗಿ ನಲಿವಲ್ಲಿಗೆ ತಾಳ್ದು ಗವಾಧಿಪತ್ಯಮಂ ೧೦೭

ಕಂ|| ಶ್ರೀವರ ನಿನಗಾಂ ಮಾಟಿಪ್ಪಂ
ಗೋವಿಂದಪದಾಭಿಷೇಕಮಂ ಧರಿಯಿಸು ನೀಂ
ಗೋವಿಂದನಾಮಮಂ ನಿನ
ಗಾಪಭಿಧಾನಕ್ಕಮಾ ಪೆಸರ್ ಪ್ರಿಯಮಕ್ಕುಂ ೧೦೮

ವ|| ಎಂದು ದೇವೇದ್ರಂ ಪಯೋನಿಧಿಯ ಪಾಲಂ ತೀವಿ ತರಿಸಿ ಐರಾವತದ ಕೆಲ ಸಣಿಯ ಚಂದ್ರಕಾಂತದ ಘಟಂಬಿಡಿದು ನೀಲಗಿರಿಯ ಚೂಳಿಕೆಯೊಳಿಂದುಮಂಡಲವನ್ಮೃತ ಧಾರೆಯಂ ಕಱಿಪುದೆನೆ ಕೃಷ್ಣಂಗಭಿಷೇಕಂಮಾಡಿ ಪಾರಿಜಾತದ ಪುಷ್ಪದಿಂ ಸಮೆದ ಬಾಸಿಗಮಂ ಕಟ್ಟಿ ದೇವದುಂದುಭಿಗಂಧರ್ವಗೇಯಜಯಜಯಧ್ವಾನಮಂತರ್ಧಾನದೊಳ್ ಭೋರ್ಗರೆಯೆ ಪುಷ್ಪವೃಷ್ಟಿಲಾಜವರ್ಷಸಿತಾಕ್ಷತಾಸಾರಮಂತರಿಕ್ಷದೊಳ್ ಸುರಿಯೆ ಗೋವಿಂ ದಾಭಿಧಾನಮುನನುಕರಿಸಿ ವಿಭೂತಿಯಂ ಮೆಱೆಯೆ ದರಸ್ಮಿತಪ್ರಸನ್ನವದನಾರವಿಂದನಾಗಿ ಗೋವಿಂದನಾಮೋತ್ಸವವಿಭೂತಿಯಂ ಮೆಱೆದ ಪುರುಹೂತನಂ, ನಿನಗೆ ಸಂತುಷ್ಟನಾದೆಂ ವರಂಗಳಂ ಬೇಡಿಕೊಳ್ಳೆನೆ, ಶತಕ್ರತು ಮುಕುಳಿತಾಂಜಲಿಪುಟನಾಗಿ ಬಿನ್ನಪಂ ಜಗನ್ನಾಥ, ಪಾಂಡವಮಧ್ಯಮನರ್ಜುನನೆಂಬನೆನಗತಿಪ್ರಿಯತನಯಂ ದುರ್ಯೋಧನಂಗೆ ಭಾಗಿನೇಯಂ, ನಿನಗೆ ಮೈದುನನುಮಪ್ಪಂ. ಆ ವಿಜಯನೊಳಿಂದು ನಿನ್ನದೊಂದು ವಿಜಯಶಕ್ತಿಯ ಕಳೆಯಂ ನಿಯೋಜಿಸುವುದು. ಆಪಾರ್ಥನೊಳಪ್ರತ್ಯೂಹಮೈತ್ರಿಯಿಂ ವರ್ತಿಸುವುದು. ಮುಂಡೆ ನೆಗಲ್ವ ಭಾರತಯುದ್ಧದೊಳ್ ಕಪಿಧ್ವಜಂಗೆ ನೀನೆ ಸಾರಥಿಯಪ್ಪುದು. ಈ ವರತ್ರಯಮಂ ನೀನೆನಗೆ ದಯೆಗೆಯ್ವುದೆನೆ ಭಕ್ತವತ್ಸಲಂ ಶ್ರೀವತ್ಸಾಂಕನುತ್ಸಾಹದಿಂ ದೇವವರಂಗೆ ವರಂಗಳಂಕೊಟ್ಟಂದಿನಿರುಳ ಬೆಳ್ದಿಂಗಳೊಳ್ ರಾಸಕ್ರೀಡೆಯನಾಡಿದಮೆಂ; ನೀನಾ ವಿನೋದಮನೆನ್ನ ಸಮೀಪದೊಳಿರ್ದು ಗೋಪಜನಕ್ಕದೃಶ್ಯರೂಪನಾಗಿ ನೋಡಿ ಪೋಪುದೆಂದು ನಿಲಿಸುವುದುಂ. ಇಂದ್ರನಂ ಕಳುಪಿದನೆಗೆತ್ತು ಗೋಪಾಲಕರ್ ಬಂದು

[1] ಪರಮೇಶಂಗುಚಿತ (ಕ)

ಪರಿವೇಷ್ಟಿಸಿ ಗೋಷ್ಠಿಯುಂ ಕುಳ್ಳಿರ್ದು ಪೂತನಾಹರಣದಿಂ ಗೋವರ್ಧನೋದ್ಧರಣ ಪರ್ಯಂತವಾದ ಸಾಹಸಂಗಳನೆಣಿಸಿ ವಿಸ್ಮಯವಿಧೂನಿತೋತ್ತಮಾಂಗರಾಗಿ ಕೈಗಳಂ ಮುಗಿದು

ಕಂ॥ ಪಸುಗೂಸುತನದೊಳಂ ಸಾ
ಹಸವತಿಮಾನುಷವತೀಂದ್ರಿಯಂ ನಿನಗದಱಿಂ
ಬೆಸಗೊಂಡಪೆವೊಂದಂ ಬಂ
ಚಿಸದುಳ್ಳುದನೆಮಗೆ ಕೃಷ್ಣ ಪೇೞಲೆವೇೞ್ಕುಂ ೧೦೯

ಮ॥ ಸುರನೋ ಸಿದ್ಧನೊ ಯಕ್ಷನೋ ಗರುಡನೋ ನೀನಾರ್ಗೆ ಪೇೞೆಂದು ಗೋ
ಪರಿನಲ್ ಸಪ್ರಣಯಪ್ರಕೋಪಿ ಹರಿ ಕೇಳ್ದಾನಾರುಮಲ್ಲೆಂ ಮದಾ
ಚರಣಂ ದೂಷ್ಯಮೆ ಮಾಣ್ಪುದೆನ್ನ ಕೆಳೆಯಂ ಮೇಣ್ ಮಚ್ಚರಿತ್ರಂ ಮನೋ
ಹರಮೇ ಭಾವಿಪುದೆನ್ನನಾತ್ಮಸಮನೆಂದೇಕನ್ಯಥಾಕಲ್ಪನಂ ೧೧೦

ವ॥ ಎಂಬುದುಮಾ ದಿವ್ಯವಚನವಕ್ರಿಮಕ್ರಮಮೆ ತಮಗನುಗ್ರಹಪಕ್ಷಮಾಗೆ ಕೃಷ್ಣನಂ ಪರಮಾತ್ಮಸ್ವರೂಪನೆಂದಱಿದು ಗೋಪರ್ ಕೃತಕೃತ್ಯರಾಗಿರ್ಪಿನಮನಂತರಂ

ಕಂ॥ ಅರುಣಾಂಶುಗಳಿಂ ಪಶ್ಚಿಮ
ಗಿರಿಕೂಟಮನರ್ಕಪೂರ್ವಪಲ್ಲವಚಯದಿಂ
ನೆರಪಿ ಪಡುನೇಸಱಿೞಸೆದುದು
ಶರನಿಧಿನಾಥಂಗೆ ಪಿಡಿದ ಮಾಣಿಕಗೊಡೆವೋಲ್ ೧೧೧

ವ॥ ಅಂತು ನೇಸರ್ಪಡಲೊಡಂ

ಕಂ॥ ಅವಿತತಮಳುರ್ವ ಮಹಾಬಾ
ಡವವಹ್ನಿಯ ಭೀತಿಯಿಂದಮೊಯ್ಯನೆ ಪೂರ್ವಾ
ರ್ಣವದಿಂದಂ ಪೊಱಮಟ್ಟುದು
ಪವಳದ ಕೆಂಪಡರ್ದ ಕೂರ್ಮನೆನೆ ವಿಧುವೆಸೆದಂ ೧೧೨

ವ॥ ಅಂತು ನಿಶೀಥಿನೀನಾಥಮಂಡಲಮುದಯಶಿಖರಿ[1]ಶಿಖರ[1]ಮಂಡನಮಪ್ಪುದುಂ

---

[1] ಶೇಖರ (ಕ)

ಉ॥ ಇಂಗಡಲಿಂದವಿಂದು ಗಡ ಪುಟ್ಟಿದನಂತದು ಕೆಮ್ಮನಿಂದುವಿಂ
ದಿಂಗಡಲಲ್ತೆ ಪುಟ್ಟಿತೆನೆ ರಂಜಿಸಿ ಗೋಪವಧೂಕದಂಬಕಾ
ಪಾಂಗರುಚಿಚ್ಛಟಾಪಟಲದಿಂ ದಳವೇಱಿ ಪಳಚ್ಚನಚ್ಚವೆ
ಳ್ದಿಂಗಳಶೇಷಮಂ ಬೆಳಗಿದತ್ತು ನಿಶಾಲತೆ ಪೂತ ಮಾಟಿಕ್ಕಯಿಂ ೧೧೩

ವ॥ ಅಂತು ವಿಕಸಿತಕುಮುದಕುವಲಯಮಾಲತೀಕುಸುಮಾಮೋದಿತದಿಗಂತರಾಳವಾದಮಲಕೌಮುದೀವಿಲಾಸಮಂ ಮನದೆಕೊಂಡು

ಮ॥ಸ್ರ॥ ಚಳವಾಲೋರಸ್ಸ್ಥಳಂ ಕಾಂಚನರುಚಿಸಿಚಯಂ ಸಂಚಲತ್ಕರ್ಣಪೂರಂ
ವಿಳಸದ್ಬರ್ಹಾವತಂಸಂ ಸ್ಫುರದಧರಸುಧಾಪೂರದಿಂ ವೇಣುರಂಧ್ರಾ
ವಳಿಯಂ ತೀವುತ್ತುಮುದ್ಯನ್ನಟಧರವಪುವಿಂ ಬಂದು ವೃಂದಾವನಾಂತ
ಸ್ಸ್ಥಳಮಂ ಪೊಕ್ಕಂ ಪದಾಬ್ಜನ್ಯಸನವೆಸೆಯೆ ರಾಸಕ್ರಿಯಾರಂಭಚಿತ್ತಂ ೧೧೪

ಕಂ॥ ಮುರಹರನ ಕೊಟಿಲ ಸನ್ನೆಯ
ವರರವಕನುಸರವಿದೆಂಬಿನಂ ಬಗೆಗೊಳಲಾ
ಸರದ ಬಟಿಱವಿಡಿದು ತನ್ಮುರ
ಹರನಲ್ಲಿಗೆ ನೆರೆದು ಗೋಪಿಯರ್ ನಡೆವೆಡೆಯೊಳ್ ೧೧೫

ಕೊಂಕಿದ ಪುರ್ಬುಂ ತೆಳ್ವಸಿ
ಱಿಂ ಕೋಮಲತನುವುವೆಸೆಯೆ ನಡೆತಂದುದು ಚೆ
ಲ್ವಿಂ ಕದಳೀಪತ್ರದ ದೂ
ರ್ವಾಂಕುರದೆಳವಿದಿರ ಬಣ್ಣದಬಲಾನೀಕಂ ೧೧೬

ವದನೇಂದುವ ಕಾಂತಿ ಕಟಾ
ಕ್ಷದ ರುಚಿ ದರಹಾಸದಂಶು ತಳ್ತಿರೆ ನಡೆತಂ
ದುದು ಹಂಸಯಾನದಿಭಯಾ
ನದ ಮಂದರಯಾನದಂಗನಾನಿಕುರುಂಬಂ ೧೧೭

ಕಣ್ಬಾವರೆಗಳ ಪೊಳೆವುಗ
ಳೆಣ್ದೆಸೆಯಂ ಪುದಿಯೆ ಬಂದುದತಿಮೃದುಗತಿಯಿಂ
ಪೂಣ್ದೆಸೆವ ತೋರದೊಡೆಗಳ
ನುಣ್ಪೊಡೆಗಳ ಬಟ್ಟದೊಡೆಗಳಬಲಾನೀಕಂ ೧೧೮

ನಡು [1]ನಳಿಯೆ[1] ಪೊಳೆಯೆ ಕಣ್ಗಳ್
ಪೊಡರೆ ಕುಚಂ ಮಿಳಿರೆ ಮೇಲುದೆಸೆಯೆ ವಿಳಾಸಂ
[2]ನಡೆದರ್ ಕೇಸಡಿಗಳ[2] ತಳಿ
ರಡಿಗಳ ಮೆಲ್ಲಡಿಗಳತನುಶರಸನ್ನಿಭೆಯರ್ ೧೧೯

ಉಡೆನೂಲ್ ಸಡಿಲಲ್ ಮೆಲ್ಲುಲಿ
ಪೊಡರೆ ನಿಜಾವಳಿಯ ಶೋಭೆ ರಂಜಿಸೆ ಬಂದರ್
ಗಡಣದೆ ತೆಳ್ಪಡುವಿನ ಸೆಳೆ
ನಡುವಿನ ಬಡನಡುವಿನಸಿಯನಡುವಿನ ಸತಿಯರ್ ೧೨೦

ಲಳಿತನಿಜರೂಪವಿಭ್ರಮ
ವಿಳಾಸಮುಡರ್ಪೆಸೆಯೆ ಬಂದರಾಮಳಕಕುಚಂ
ಗಳ ನಾರಂಗಕುಚಂಗಳ
ನಳಿನೀ ಕುಟ್ಮಳಕುಚಂಗಳೆಳಜವ್ವನೆಯರ್ ೧೨೧

ಅವಯವದ ಚೆಲ್ವು ತಾನಂ
ತವಯವದಿಂ ಗೆಲೆ ವಿಳಾಸವಮರಿಯರ ವಿಳಾ
ಸವನಿಳಿಸಲ್ ಬಂದರ್ ಪವ
ಳವಾಯು ತಳಿರ್ವಾಯ ತೊಂಡೆವಾಯೊಳ್ಪೆಂಡಿರ್ ೧೨೨

ಜಗುಳೆ ಕಳಕಾಂಚಿ ಹಾರಮು
ನುಗುಳೆ ಕುಚಂ ನೆಗಳೆ ನೂಪುರಧ್ವನಿ ರೂಪಂ
ಪೊಗಳೆ ಜನಮಂದು ಬಂದರ್
ನಗೆಮೊಗದುಡುಮೊಗದ ಮುದ್ದುಮೊಗದಂಗನೆಯರ್ ೧೨೩

ಲಳಿತಾಕಾರಂ ವಿಭವಂ
ಬೆಳಗುವ ಲಾವಣ್ಯಮೆಸೆಯೆ ಬಂದರ್ ನಗೆಗ
ಣ್ಗಳ ಚೆಲ್ಲೆಗಣ್ಗಳಲರ್ಗ
ಣ್ಗಳ ನಿಡುಗಣ್ಗಳ ಬೆಡಂಗಿಯರ್ ಕೋಮಲೆಯರ್ ೧೨೪

---

1 ನೆಳೆಯೆ (ಕಖಗ) 2 ನಡೆತಂದರ್ ಕೇಸಡಿ (ಕಗ)

[1]ದೊರೆಯಾರೋ[1] ಚೆಲ್ವಿಂಗೆ
ಪ್ಸರಸಿಯರೀಕೆಯರೊಳೆನಿಸಿ ಮೆಱೆತವರ್ ಸುಕರ್ಣಂ
ಗುರುಳ ಸುಱಿಗುರುಳ ನಿಡುಗುರು
ಳುರುಳಿಗುರುಳ ತುಂಬಿಗುರುಳ ಗೋಪಸ್ತ್ರೀಯರ್ ೧೨೫

[2]ತುಡುಗೆಯ ಬಂ[2]ಬಲ್ಮೆಳಗಿಂ
ಪಡೆಯುತ್ತಿರ್ದ್ದ ಸೆಯೊಳಿಂದ್ರಚಾಪಶ್ರೀಯಂ
ನಡೆತಂದರ್ ಚೆಲ್ವಿಂದೊ
ಳ್ನುಡಿಯ ತಡಂನುಡಿಯ ತೊದಳ ನುಡಿಯೊಳ್ಪಿಂಡಿರ್ ೧೨೬

ಬಂದೆಳಸಿ [3]ಬಳಸೆ[3] ಗೋಪೀ
ವೃಂದಂ [4]ತುಹಿನಾಂಶು[4] ಬೆಳಗೆ ಕುಮುದಾಮೋದ
ಸ್ಯಂದಿ ಮೃದುಪವನನೆಸಗೆ ಮು
ಕುಂದಂ ತತ್ಕೇಳಿರಂಗದೊಳ್ ರಂಜಿಸಿದಂ ೧೨೭

ಮ॥ಸ್ರ॥ ಮುಡಿಗಟ್ಟಿಂಬಾಗೆ ನುಣ್ಬೇಲಿಯಿನಮರೆ ಭುಜಂ ರತ್ನಕೇಯೂರದಿಂದು
ಳ್ಳುಡೆ ಚೆಲ್ವಂ ಬೀಱೆ ಪೀತಾಂಬರದಿನಗಲ್ದುರಂ ಕೌಸ್ತುಭಶ್ರೀಯಿನೊಳ್ಪಂ
ಕುಡೆ ಗಂಡಂ ಕುಂಡಲಾಂದೋಳನದಿನೆಸೆಯೆ ನಿಂದಂ [5]ತ್ರಿಭಂಗಾಂಗದಿಂ[5] ನೋ
ಟಱೊಪ್ಪಡೆ ಶೃಂಗಾರಾವತಾರಂ ಮುರರಿಪು ಕೊಟಿಲಂ ಬಾಜಿಸುತ್ತಿರ್ದನಾಗಳ್ ೧೨೮

ಇದು ಸಮಸ್ತಕಮಲಭವಾಂಡಮಾಲಾಘಟೀಘಟಿತಾರಘಟ್ಟಘಟನಾಸ್ವತಂತ್ರ
ನಿಜಸ್ವರೂಪನಿರೂಪಣಚಕಿತಸಕಲಾಮ್ನಾಯತಂತ್ರಲಕ್ಷ್ಮೀಕಾಂತಶ್ರೀ
ಪಾದಭಕ್ತಿಯುಕ್ತಸುಕವೀಂದ್ರರುದ್ರಪ್ರಣೀತ ಶ್ರೀಜಗನ್ನಾಥ
ವಿಜಯಮಹಾಪ್ರಬಂಧದೊಳ್ ಪಯೋಧರಾಗಮನಧೇನು
ಕನಿರ್ಧೂನನಪ್ರಲಂಬನಿಸುಂಭನಶರತ್ಕಾಲಗಿರಿಯಜ್ಞ
ಗೋವರ್ಧನೋದ್ಧರಣ ಶಕ್ರಾಗಮನ
ಗೋವಿಂದಾಭಿಷೇಕೋತ್ಸವರಾಸ
ಕ್ರೀಡಾಪ್ರಾರಂಭವರ್ಣನಂ
ಚತುರ್ಥಾಶ್ವಾಸಂ

---

[1] ಬರೆಯಾರೋ (ಖಗ) [2] ನಿಡುಗಂಗಳ (ಖ) [3] ಬಯಸಿ (ಕಗ) [4] ಕುಮುದಾಂಶು (ಕಗ) [5] ತ್ರಿಭಂಗಾಗ್ರದಿಂ (ಕಖಗ)

ಪಂಚಮಾಶ್ವಾಸಂ

ಕಂ|| ಶ್ರೀಕಮಳಲೋಚನಂತ್ರ್ಯ
ಶ್ರೀಕೃತಪದನುನ್ನತೈಕಜಘನಂ ಲಲಿತ
ಭ್ರೂಕಂ ತಿರ್ಯಗ್ವಳಿತ
ವ್ಯಾಕುಂಚಿತಕಂಠನೂದುತಿರ್ದಂ ಕೊೞಲಂ ೧

ಮ|| ಕೆಳೆಯಂ ಪತ್ತಿಸಿ ರಾಗಮಂ ನಿಲಿಸಿ ನುಣ್ಪಂ ನಣ್ಪುಗೆಯ್ದಿಂಪನಿ
ಕ್ಕುಳಿಗೊಂಡೊಟ್ಟಜೆಯಂ ನಿಮಿರ್ಚಿ ನಯಮಂ ತಳ್ಪೊಯ್ದಲಂಕಾರಮಂ
ಕೆಳೆಗೊಂಡಾಣತಿಯಂ ತೆರಳ್ಚಿ ಜತಿಯಂ [1]ಸೈತೋಜೆಯಂ[1] ತಾಳ್ದಿ ಗೋ
ವಳರಾಯಂ ಕೊೞಲೂದಿದಂ ನೆಗೞ್ವಿನಂ ಮಾಧುರ್ಯತೂರ್ಯಸ್ವನಂ ೨

ಚಂ|| ಭಣಿತೆ ಬೆಡಂಗು ಕಾಕು ಖಚರಂ ಗಮಕಂ ತಿರುಪಿಂಪು ನುಣ್ಪು ನೇ
ವಣೆ ಕಣೆ ಬಣ್ಣದೊಡ್ಡವಣೆ ಕಾಳಸಿ ಬೈಸಿಕೆ ಪಟ್ಟ ಕಾಂತಿ ಕೊಂ
ಕಣು ಕಸುಜಾಯಿ [2]ಗೀತಿ[2] ಜತಿ ಜೋಕೆ ನಯಂ ಬಹುಲಾಯಿ ದೇಸೆ ಪೆ
ಲ್ಲಣೆ ಕಳೆಯೆಂಬಿವಂ ಮೆಱೆದು ಬಾಜಿಸಿದಂ ಮುರವೈರಿ ವಾಸವಂ ೩

ಮ|| ರಸಭಾವಂ ಪೆಱತೋಜೆ ಬೇಱೆ ಜತಿ ಮತ್ತೊಂದಿಂಪಪೂರ್ವಂ ನಯಂ
ಪೊಸತೆಂಬಂತಿರೆ ನಾಳಿಕೇರರಸಧಾರಾವೃಷ್ಟಿ ಜೇನೆಯ್ಯ ಸೋ
ನೆ ಸುಧಾಸಾರವಿದೆತ್ತಣಿಂ ಪಸರಿಸಿತ್ತೆಂಬಂತು ದೈತ್ಯಾರಿ ಬಾ
ಜಿಸಿದಂ ಬಣ್ಣಿಸೆ ವಾಸವಂ ಮಧುರನಾದಾವಾಸವಂ ವಾಸವಂ ೪

ಚಂ|| ಕಮಳದಳಾಕ್ಷನಾಕೃತಿಯನೀಕ್ಷಿಸಿ ಸಾಸಿರ ಕಣ್ಗಳಿಂಗದೊಳ್
ಸಮನಿಸಿದೀಕ್ರಮಂ ಸಫಲಮಾಯ್ತೆನಗೀತನದೊಂದು ವೇಣುನಾ
ದಮನೊಸೆದಾಲಿಸಲ್ ಕಿವಿಗಳೇಕೆಯೊ ಸಾಸಿರವಾದುವಿಲ್ಲೆನು
ತ್ತಮರವರಂ ಮನಂಗೊಳೆ ನೆಗೞ್ದುದು ಕೃಷ್ಣನ ವೇಣುನಿಸ್ವನಂ ೫

ವ|| ಅನಂತರಂ

---

[1] ತ್ರೈಕೋಜೆಯಂ (ಕಖಗ) [2] ರೀತಿ (ಖ)

ಕಂ॥ ಸುರುಚಿರಚಿತ್ರಾಭರಣಾಂ
ಬರಗೋಪೀರಚಿತರಾಸಮಂಡಲಬದ್ಧಾಂ
ತರ[1]ವೃತ್ತಿ[1] ಗೋಪಚಂದ್ರಂ
ಪರಿವೇಷಂಗೊಂಡ ಚಂದ್ರನಂತೆಸೆದಿರ್ದಂ ೬

ಮ॥ಸ್ರ॥ ಅಸಕೃದ್ಭ್ರೂಪಲ್ಲವೋಲ್ಲಾಸಿತವೆಸೆಯೆ ಚಳಲ್ಲೋಚನಾರೇಚನಂ ರಂ
ಜಿಸೆ ಮುಕ್ತಾಚ್ಛೋಟಿಕಾಡಂಬರಮುಳವಡೆ ಬಾಹಾಲತಾಂದೋಳನಮುನ್ಮೀ
ಲಿಸೆ ಕೃಷ್ಣಂ ನೃತ್ಯಮಂ ಸೂತ್ರಿಸುವುದುಮೊಲವಿಂ ಪಾಡುತುಂ ಗೋಪಿಯರ್ ನ
ರ್ತಿಸಿದರ್ ಚೈತ್ರಾನಿಳಂ ಸೂತ್ರಿಸೆ ವನಲತಿಗಳ್ ನರ್ತಿಪೊಂದಂದದಿಂದಂ ೭

ಇನಿಸಂ ಕೀಟುಕ್ಕಾಡಿ ಭೃಂಗೀರುತಿಯನಿಟಿಸಿ ಪುಷ್ಪಾಯುಧಜ್ಯಾಲತಾನಿ
ಸ್ವನಮಂ ವಾಣೀವಿಪಂಚೀರವಮನಲೆದು ಗೇಯಸ್ವನಂ ಪೊಣ್ಮೆ ಗೋವಿಂ
ದನೆ ನಾನಾರೀತಿಯಿಂ ಕೆತ್ತುರಿಯ ಸೆಳೆಯನಳ್ಳಾಡಿದೊಂದಂದದಿಂ ವಾ
ಸನೆಯಾದತ್ತೆಂಬಿನಂ [2]ಪಾಡಿದುದೆಸೆಯೆ[2] ನಟದ್ಗೋಪಕಾಂತಾಕದಂಬಂ ೮

ಕಂ॥ ತನತನಗೆ ಗೋಪಿಯರ್ ಕೃ
ಷ್ಣನಂಕಮಾಲೆಯನೆ [3]ಪಾಡಿದರ್[3] ಕೃಷ್ಣಂ ಚಂ
ದ್ರನ ಬೆಳ್ದಿಂಗಳ ತಣ್ಣೆಲ
ಲ[4]ನೆಯ್ದಿಲೊಪ್ಪಮನೆ ಪಾಡಿದಂ[4] ಕಳರವದಿಂ ೯

ಮ॥ ವಲಯಾಳೀರವಮಂಘ್ರಿಭೂಷಣರವಂ ಕಾಂಚೀರವಂ ಪೊಣ್ಮೆ ಸು
ಯ್ಯೆಲರ್ಗಂಪಣ್ಪಿನ ಕಂಪು ಪೂಮುಡಿಯ ಕಂಪೊಂದೊಂದನೊಟ್ಟೈಸೆ ದೋ
ರ್ವಲನಂ ಭ್ರೂವಲನಂ ಕಟಾಕ್ಷವಲನಂ ಚೆಲ್ವಾಗೆ ಗೋಪಾಂಗನಾ
ವಲಿಯೊಳ್ ರಂಜಿಸಿದತ್ತು ಕಂಜನಯನಸ್ವಾಂತಕ್ಕೆ ಣಂ ಪೆಕ್ಕಣಂ ೧೦

ಗೀತರಸಪ್ರವಾಹನದಿ ಚಂಚಳನೇತ್ರಮರೀಚಿವೀಚಿ ಸಂ
ಘಾತಿತಹೃದ್ಯವಾದ್ಯಘನಘೋಷಣದೇಳ್ಗೆ ನಿಸರ್ಗವಾದ ಸಂ
ಗೀತರಸಾಬ್ಧಿ ಪೆರ್ಚೆ ಹರಿಲೋಚನಚಂದ್ರಿಕೆಯಿಂ ವಿಧೂದಯ
ಸ್ಫೀತಸುಧಾಬ್ಧಿಯಂತೆ ಪರಿಪೂರ್ಣಿಸುತಿರ್ದುದು ರಾಸಕೇಳಿಯೊಳ್ ೧೧

---

1 ವರ್ತಿ (ಕಖಗ) 2 ಪಾಡಿದನೆಸೆಯೆ (ಮೊಅ) 3 ಪಾಡುತುಂ (ಕಖಗ) 4 ನೆಯ್ದಿಲೊಪ್ಪಮನೆ ಪಾಡಿದರ್ (ಕಖಗ) ನೆಯ್ದಿಲೊಪ್ಪಮೆನೆ ಪಾಡಿದರ್ (ಮೊಅ)

ಕಂ॥ ನನಯೌವನೆಯರ್ ಲಾವ
ಣ್ಯವತಿಯರಱಿಂದದ್ರಿಧರನ ಮನಮಂ ಕೋಲಾ
ಟವನಾಡಲ್ ಕೆಲರಾಟಂ
ದು ವಿನೋದದೆ ಕನಕದಂಡಮಂ ಪಿಡಿದೆಸೆದರ್ ೧೨

ವ॥ ಯುಗಪತ್ಪೂರ್ವವಿಧಾನದಿಂ ಯುಗಪದುತ್ಥಾನಾಂಗಸಂಸ್ಥಾನದಿಂ
ಯುಗಪದ್ವಿಭ್ರಮವೇಗದಿಂ ಯುಗಪದಭ್ಯಾಯಾತಚಾತುರ್ಯದಿಂ
ಯುಗಪದ್ದಂಡ ಖಣಿಲ್ ಖಣಿಲ್ ಕ್ವಣಿತದಿಂ ಕೋಲಾಟದೊಳ್ ಕೃಷ್ಣನಂ
ಬಗೆಗೊಂಡರ್ ನಮಸತ್ತ್ವವಿಭ್ರಮಣೆಯರ್ ಶ್ರೀರೂಪೆಯರ್ ಗೋಪಿಯರ್ ೧೩

ಉ॥ ಈ ನಟೆಯಂತರಂಗಮೆ ಮುಕುಂದನ ಚಿತ್ತಮೆ ಬಲ್ಲುದೀಕೆಗಿಂ
ತೀ ನಯದಿಂದೆ ನರ್ತಿಪುದನೆಂಬಿನೆಗಂ ರಸಭಾವರವ್ಯಸಂ
ಸ್ಥಾನಕನೃತ್ಯಮಾ ಪರಮತತ್ತ್ವಸುಖಕ್ಕೆಣೆಯಾಗಿ ತೋಱಿ ಗೋ
ಪೀನಟಿ ತೋಱಿದಳ್ ಮಿಸುಗುವೋಲೆಯು ತೂಕಮೆ ತೋಱಿ ನೃತ್ಯಮಂ ೧೪

ನಗೆಮೊಗದಿಂ ಮುಗುಳ್ನಗೆ ತುಳುಂಕೆ ಬಳಲ್ಕುಡಿಯಿಂದರಲ್ಗಳ
ಲ್ಲುಗೆ ನಿಡುಗಣ್ಗಳಿಂ ಪೊಳಪು ಸಾಲಿಡೆ ನೀಳಚಳಾಳಕಾಳಿಯಿಂ
ಮೃಗಮದರೇಣು ಸೂಸೆ ಲತೆ ತೆಂಬೆಲರ್ಗೊಯ್ಯನೆ ನರ್ತಿಪಂದದಿಂ
ಸೊಗಯಿಸೆ ಗೋಪಿ ಡಕ್ಕೆಯ ಲಯಕ್ಕೆ ಪೆಱಳ್ ಜತಿಮೆಟ್ಟುತಾಡಿದಳ್ ೧೫

ಮಸೃಣಕಟಾಕ್ಷದಿಂ ಕುಮುದದೊಳ್ಪೆಸಳಂ ಕರೆವಂತಿರಂಘ್ರಿವಿ
ನ್ಯಸನದಿನಬ್ಜಮಂ ಕೆದಱುವಂತಿರೆ ಕೈಸಿರಿಯೊಂದು ದೇಸೆಯಿಂ
ಕಿಸಲಯಜಾಲಮಂ ಪರಪುವಂತಿರೆ ಭೂಷಣಕಾಂತಿಯಿಂ ತಟ
ತ್ಪ್ರಸರಮನೆತ್ತಲುಂ ಪಸರಿಪಂತಿರೆ ಜೊಂಬುಳಿಗೊರ್ವಳಾಡಿದಳ್ ೧೬

ವ॥ ಮತ್ತೊರ್ವಳ್

ಕಂ॥ ತ್ರಿಗುಣಿಸೆ ನಯನವಿಭೂಷಾಂ
ಶು[1]ಗಳಲಗಿನರುಚಿಯನಲಗ[1]ನೆರಡುಂ ಕೈಯೊಳ್
ತ್ರಿಗುಣಿಸಿ ಚಿತ್ರಂಬಡೆದಳ್
ಬಿಗಿಯೆ ಕುಚಂ ಬಿಗಿಯಿಪಂತು ಕಂತುಗೆ ದೊಣೆಯುಂ ೧೭

ವ॥ ಮತ್ತೊರ್ವಳ್

---

[1] ಗಳಿಂ ತನುರುಚಿಯ ಬೆಳಗ (ಖ)

ಚಂ|| ಸರಳತರಾಂಗುಳೀಮೃದುನಿವರ್ತನದಿಂ ಕಱಿತಗಣ್ಮುತಿರ್ಪ ಬಂ
ಧುರರಸಗೇಯಮೆಂಬಮೃತಪೂರಮನೊಯ್ಯನಲಾಬುವಿಂದಮು
ತ್ತರಿಸುತುಮಿರ್ದಳೀಕೆಯೆನೆ ಬಾಜಿಸಿದಳ್ ಪೆಱಳುನ್ನತಸ್ತನಾಂ
ತರದೊಳಗೌಂಕಿ ವೀಣೆಯನದೇವೊಗೞ್ವಂ ಸುರತಪ್ರವೀಣೆಯಂ ೧೮

ವ|| ಮತ್ತೊರ್ವಳ್

ಚಂ|| ಅಲಕಚಯಂಗಳಾಡೆ ನೊಸಲೊಳ್ ಕಬರೀಭರವಾಡೆ ಬೆನ್ನೊಳು
ಜ್ಜ್ವಲತರಹಾರವಾಡೆ ಕುಚದೊಳ್ ಮಿಸುಪೋಲೆಗಳಾಡೆ ಗಂಡಮಂ
ಡಲದೊಳದೊಂದು ಕಂತುಕದ ಬೆಂಬಱಯೊಳ್ ಪೊಳೆದಾಡೆ ಕಣ್ಬೊಣರ್
ಸುಲಲಿತೆ ಸೆಂಡನಾಡಿ ಮುಳುಗಾಡಿಸಿದಳ್ ಹರಿಯಂ ಸುಖಾಬ್ಧಿಯೊಳ್ ೧೯

ವ|| ಅಂತು ಮನೋಹರಮಾದ ವಿವಿಧವಿನೋದಮಂ ನೋಡಿ ಸಫಲೀಕೃತ ಸಹಸ್ರಲೋಚನನರವಿಂದಲೋಚನಂಗಭಿಮುಖನಾಗಿ ದೇವ, ನಿನ್ನ [1]ಸಮಿಾಪದೊಳಾನಿರೆ[1] ನೀನುಪೇಂದ್ರನಾಗಿ ರಾಸಗೋಷ್ಠಿಯನನುಕರಿಸಿದ ಕಾರಣದಿಂದುಪೇಂದ್ರಾಭಿಧಾನಮಂ ಧರಿಯಿಸುವುದೆಂದತಿಪ್ರೀತಿಯಿಂ ನುಡಿದಿಂದ್ರಂ ಬೀೞ್ಕೊಂಡು ಪೋದಂ. ಇತ್ತ ಗೋಪಿಯರೊಡನೆ ಸುಖಸಂಕಥಾವಿನೋದದಿನಿರ್ದೊರ್ವೆ ಕೃಷ್ಣನನ್ಯಪ್ರದೇಶಕ್ಕೆ ಪೋಗೆ ಕೃಷ್ಣ ಚೇಷ್ಟಿತಸ್ವಾಯತ್ತರೂಪೆಯರ್ ಗೋಪಿಯರ್ ವೃಂದಾವನದೊಳಿರ್ದಲ್ಲಿ

ಕಂ|| ಆಂ ಕೃಷ್ಣನೆನಿಸಿ[2]ಯಿರ್ಪೆನೆ[2]
ಪಂಕಜಮುಖಿಯರಿರ ನೋಡಿಮೆನುತುಂ ಶ್ರೀವ
ತ್ಸಾಂಕನ ಸುಲಲಿತಯಾನದ
ಬಿಂಕಮನನುಕರಿಸಿ ತೋಱುತಿರ್ದಳದೊರ್ವಳ್ ೨೦

ದಾಮೋದರನಾಂ ಮತ್ತಿಯ
ನೀಮುಱಿದಪೆನೆಂದದೊಂದು ಕುಜಮಂ ಕಾಂಚೀ
ದಾಮದೆ ತೊಡರ್ಚಿ ಶಿಶುಲೀ
ಲಾಮುಗ್ಧಸ್ಮಿತಮನೊರ್ವಳಾಗಳ್ ಮೆಱೆದಳ್ ೨೧

ಕಾಳಿಯನ ಮಡುವನಾಂ ವನ
ಮಾಳಿಯೆನಿದೆ ಕದಡಿದಪ್ಪೆ[3]ನೆನುತುಂ ನೀರೊಳ್[3]
ತೋಳೆರಡುಮನಾಸ್ಫೋಟಿಸಿ
ನೀಳಾಬ್ಜದ ಕಾವುವಿಡಿದು ಕುಣಿದಳದೊರ್ವಳ್ ೨೨

1 ಸುಖಪದದೊಳಾನಿರೆ (ಕಗ) 2 ಇರ್ದನೆ (ಕಖಗ) 3 ನೆನತುಮದೊರ್ವಳ್ (ಕಖ)

ತಾಳಫಳಂದಿಂಗೆವು ಗೋ
ಪಾಳರ್ ಖಳನಿಂದೆ ತಾಟನಿಟ್ಟಪೆನೆನುತ್ತುಂ
[1]ಲೋಳಾಕ್ಷಿ[1] ಪೊರೆಯ ಕೌಂಗಂ
ನೀಳಾಬ್ಜದಿನಿಟ್ಟು ಹರಿಯ ಪರಿಯಂ ಮೆಱೆದಳ್ ೨೩

ಪಿಂಗುಗೆ ವೃಷ್ಟಿಭಯಂ ನಿಮ
ಗಾಂ ಗೋವರ್ಧನಮನೆತ್ತಿದೆಂ ಕೃಷ್ಣನೆನೆಂ
ದಂಗತ್ರಿಭಂಗಿ ಸೊಗಯಿಸ
ಲಂಗನೆ ಕಂತುಕಮನೆತ್ತಿ ನಿಂದಳದೊರ್ವಳ್ ೨೪

ಮೃಗನಯನೆ ನೋಡಿ ವನವೀ
ಧಿಗಳಂ ಧ್ವಜ ವಜ್ರ ಪಂಕಜಾಂಕುಶರೇಖಾ
ಳಿಗಳಿಂದೆಸೆದಪುದಿದು ಲಲಿ
ತಗಾಮಿ ನಗಧರನ ಪಜ್ಜೆಯೆಂದೊಸೆದುಲಿದಳ್ ೨೫

ನಳಿನಾಕ್ಷನ ಪದಪದ್ಧತಿ
ಗಳ ಬೞಿಯೊಳಲಕ್ತಕಾಂಕ ಪದಪದ್ಧತಿಗಳ್
ಪೊಳವುವಿವೆ ನೋಡಿದಾವಳೊ
ಬಳರಿಪುವೊಡನಲಿವ ಧನ್ಯೆಯೆಂದಳದೊರ್ವಳ್ ೨೬

ಅನ್ಯಾಸಕ್ತಂ ಕೃಷ್ಣಂ
ಮಾನ್ಯೆಯದೊರ್ವಳನವಜ್ಞೆಗೆಯ್ದು[2]ನಿದಂತಾ[2]
ಮನ್ಯುನಿರಾಯಸವಿಮುಖಪ
ದನ್ಯಾಸದ ಪಜ್ಜೆಯೆಂದು ನುಡಿದಳದೊರ್ವಳ್ ೨೭

ಒಡನಲಿವ ನಲ್ಲಳಚ್ಚ್ಯುತ
ನಡಿಪಜ್ಜೆಗಳಲ್ಲಿ ಕೇಳಿಗೆಳಸಿ[3]ದಳವನೀ
ಯಡಿಯೊಳ್ ಪೋರ್ಕುಳ್[3]ಯಾಯ್ತೆಂ
ದಡಿಗಡಿಗಾಯೆಡೆಯನೊರ್ವಳೀಕ್ಷಿಸುತಿರ್ದಳ್ ೨೮

---

[1] ಲೀಲಾಕ್ಷಿ (ಕಗ) [2] ನದಂತಾಂ (ಕಖಗ) [3] ದನವನೀಯೆಡೆಯೊಳ್ ಪೊಕ್ಕುಳ್ (ಕಖಗ)

ಚಂ॥ ಅನುಗತಿವೆತ್ತ ನಲ್ಲಳಡಿವಜ್ಜೆಗಳಲ್ಲಿಯೆ ನಿಂದುಪಜ್ಜಲೋ
ಚನನಡಿವಜ್ಜೆ ನೀಡುವಿದಿರಿಂ ಬೞಿಯುಂ ಪುದಿದಿರ್ದುವಂತವಳ್
ಮುನಿದು ನಿಲಲ್ಕೆ ತಾಂ ತಿಳಿಪಲೆಂದೆಡೆಯಾಡಿದ ಪಾಂಗಿದೊಂದು ತ
ದ್ವನಿತೆಯೊಳಾದ ಕೃಷ್ಣನೊಲಪೆಂದು ಪೆಜಳ್ ಮನದೊಳ್ ಕಲಂಕಿದಳ್ ೨೯

ಕಂ॥ ಸ್ತನವತಿಗನುಯಾತೆಗೆ ಕೃ
ಷ್ಣನೊಲ್ದು ಕೈಗೊಟ್ಟು ನಡೆದನೀಯೆಡೆಯೊಳಿದಾ
ವನಿತೆಯ ಲಘುಪದಪದ್ಧತಿ
ಯೆನ್ನುತುಮದಂ ಸಖಿಗೆ ತೋಱಿದಳ್ ಮತ್ತೊರ್ವಳ್ ೩೦

ವ॥ ಇಂತನೇಕಪ್ರಕಾರದಿಂ ಪ್ರಣಯಯುವತಿಯರ್ ತೊೞಲ್ದು ನೋಡಿ

ಮ॥ ಹರಿ ಪೋತಂದಡಿವಜ್ಜೆಗಳ್ ಬಯಲೊಳಿಲ್ಲಿಂದಿತ್ತವಿನ್ನಿಲ್ಲ ಚಂ
ದ್ರರುಚಿಶ್ರೇಣಿಗಭೇದ್ಯಮಪ್ಪ ಬನದೊಳ್ ಪೊಕ್ಕಿರ್ದನಾ ಧೂರ್ತನೆಂ
ದಿರೆ ಗೋಪೀಜನವಾಗಳೊರ್ಮೊಗಲೆ ವೃಕ್ಷಚ್ಛಾಯೆಯಂ ಕೈಕೊಳು
ತ್ತಿರೆ ಶೃಂಗಾರರಸಾಬ್ಧಿ ಮೇಲೆ ಕವಿದಂತೆಟ್ಟಿಂದನಬ್ಜೇಕ್ಷಣಂ ೩೧

ವ॥ ಅಂತು ಬಂದು ವಿಕಸಿತಮುಖಾರವಿಂದನಾಗಿ ಮುಂದಿರ್ದ ಶೃಂಗಾರನಿಧಿಯಂ [1]ಕಂಡತಿಪ್ರಣಯ[1] ಕುಪಿತೆಯರಾದ ಗೋಪಿಯರೊಳ್

ಮ॥ ಪ್ರಿಯೆಯೊರ್ಬಳ್ ವಿನಿಗೂಢಸಂಭ್ರಮೆಯುಮೊರ್ಬಳ್ ಪಾಟಲೀಲೋಲನೇ
ತ್ರೆಯುಮೊರ್ಬಳ್ ವಿತತಸ್ಮಿತಾನ್ವಿತೆಯುಮೊರ್ಬಳ್ ದಂತದಷ್ಟಾರುಣೋ
ಷ್ಠೆಯುಮೊರ್ಬಳ್ ವಿಮುಖೀಕೃತಾಕೃತಿಯುಮೊರ್ಬಳ್ ಕುಂಚಿತಭ್ರೂಶಲಾ
ಕೆಯುಮಾಗಿರ್ದ ಬೆಡಂಗದೇಂ ಪಡೆದುದೋ ಕೃಷ್ಣಂಗತಿಪ್ರೀತಿಯಂ ೩೨

ವ॥ ಆಗಳ್

ಕಂ॥ ಸರಸಾಲೋಕನದಿಂ ವಚ
ನರಚನೆಯಿಂ ಹಸ್ತಕಮಳಸಂಸ್ಪರ್ಶದಿನಂ
ಬುರುಹೇಕ್ಷಣಂ ಪ್ರಸನ್ನಾ
ಚರಿತೆಯರಪ್ಪಂತುಮಾಡಿದಂ ಗೋಪಿಯರಂ ೩೩

---

1 ಕಂಡತಿಪ್ರಣೇಯ (ಖಗ)

ಮಾರ್ದವದೆ ಸಖಿಯರೊಡನೆ ಜ
ನಾರ್ದನನಾಡುತ್ತುಮಿರ್ದ ಪದದೊಳ್ ದೆಸೆಗಳ್
ಮಾರ್ದನಿವಿಡಲದ್ಭುತವೃಷ
ನರ್ದನಮುಣ್ಮಿದುದದೊಂದು ವಜ್ರಾಶನಿವೊಲ್ ೩೪

ವ॥ ಅನಂತರಂ

ಮ॥ಸ್ರ॥ ಒಲಭಿನ್ನಾಗೇಂದ್ರನೊಳ್ ಮಾರ್ಮಲೆದ ಹರವೃಷಾಧೀಶನೊಳ್ ಪೋರ್ದ ಕೀನಾ
ಶಲುಲಾಯಶ್ರೇಷ್ಠನೊಳ್ ತಾಗಿದ ರಣಗಣನಾರೇಖೆಯೆಂಬಂತು ರೇಖಾ
ವಲಿ ಪೀನಸ್ಕಂಧದೊಳ್ ತಳ್ತಿರೆಯಿರೆ ಪೊಱಮಟ್ಟತ್ತು ಕಾಂತಾರದಿಂ ಪಾ
ಟಲನೇತ್ರಂ ತುಂಗಗಾತ್ರಂ ಘನತರಕಕುದಂ ಶಾತಶೃಂಗಂ ಗವೇಂದ್ರಂ ೩೫

ಮ॥ ಕಲಿಕಾಟೋಪಮನಂತಕಾರಭಟಿಯಂ ಕಂಠೀರವಕ್ಷೋಭಮಂ
ಕುಲಿಶಾಡಂಬರಮಂ ಲಯಾನಲಶಿಖಾಸಂರಂಭಮಂ ಘೋಷದಿಂ
ಗೆಲೆವಂದೊರ್ಮೆಯೆ ಮುಟ್ಟಿವಂದುದು ಬೆಱಂಟುತ್ತುಂ ಮಹೀರಂಗಮಂ
ಕೆಲೆದುರ್ಬೇಱಿಸುತಂ ಗಮಂ ಮೊನೆಯಿಡುತ್ತುಂ ಶೃಂಗಮಂ ಪುಂಗವಂ ೩೬

ವ॥ ಅಂತು ಮುಟ್ಟಿಬರ್ಪರಿಷ್ಟಾಸುರನಂ ಕಂಡು

ಕಂ॥ ಭಯಚಕಿತನೇತ್ರೆಯರ್ ಗೋ
ಪಿಯರೀಕ್ಷಿಸೆ ಕೃಷ್ಣನಾರ್ದು ತಳಶಬ್ದದುರ
ತ್ರಯನಸುರವೃಷಂಗಭಿಮುಖ
ತೆಯಿನೆಯ್ದಿದನೆಸೆಯೆ ಗಂಡಗರ್ವಮುಖರ್ವಂ ೩೭

ವ॥ ಅಂತೆಯ್ದಿ ಪೊಣರ್ದು

ಚಂ॥ ಗಿರಿ ಪವಿ ಮುಟ್ಟಿದನ್ನೆಗವರಣ್ಯಕುಜಂ ದವಮುಟ್ಟಿದನ್ನೆಗಂ
ಕರಿ ನಖರಾಯುಧಂ ಮುಳಿಯದನ್ನೆಗಮುಗ್ರನಿಶಾಟರಚ್ಯುತಂ
ಪರಿಯಿಡದನ್ನೆಗಂ ಬಱಿಯಮೇನೆನೆ ಶೃಂಗಮನೊತ್ತಿ ಗಂಟಲಂ
ಮುರಿದರುಣಾಂಬುವಂ ಪಿಱಿದು ಮರ್ದಿಸಿದಂ ವೃಷನಂ ಜನಾರ್ದನಂ ೩೮

ವ॥ ಆ ಸಮಯದೊಳ್

ಕಂ॥ ಅಪರಿಮಿತಂ ಪೊಣ್ಮಿದುದೆಮ
ರಪಟಹರವವಾರವಪ್ರಹಾರದೆ ಚಂದ್ರಾ
ತಪಮೆ ಕಟಿಲ್ದಿ ಳಿಗುಗುಮಂ
ತೆ ಪೊದಟ್ದುದು ಭೋರೆನಲಲರ ಬೆಳ್ಸರಿ ನಭಮೊಳ್ ೩೯

ವ॥ ಅಂತು ವಿಜಯೋತ್ಸವಂ ನೆಗೞೆ ಗೋಪವರಾಂಗನಾಜನಂಬೆರಸು ಬಂದು
ಪೇಂದ್ರಂ ಗೋಕುಲದೊಳ್ ಸುಖದಿನಿರೆ ಮಱುದೆವಸಮುದಯಸಮಯದೊಳ್

ಕಂ॥ ತ್ರಿದಶಾರಿ ಕೇಶಿ ಮಡಿದಪ
ನಿದು ಶುಭದಿನಮೆಂದು ಶಕ್ರ[1]ಮಂಗಳಸವನ[1]
ಕ್ಕುದಯಾಚಲವೇದಿಯೊಳಿಟ್ಟು
ಪಿದ ಪೊಂಗಳಸಂಬೊಲಾಯ್ತು ದಿನಕರಬಿಂಬಂ ೪೦

ಬಾಳಾತಪದ ವಿಳಾಸಮ
ನೇಳಿಸೆ ಪೀತಾಂಬರಾಂಶು ವೃಂದಾವನದೊಳ್
ಲೀಳಾಲಂಕೃತಗಮನಂ
ನೀಳೋತ್ಪಳವರ್ಣನಚ್ಯುತಂ ಕ್ರೀಡಿಸಿದಂ ೪೧

ಚಂ॥ ಸುರಭಿ ಘಟೋಧ್ನಿ ದುಗ್ಧನಿಧಿ ನಂದಿನಿ ವತ್ಸಲೆ ಕಾಮಧೇನು ಪೀ
ವರಕುಚೆ ಗೋಪಿ ಸಲ್ಲಕಿಯೆನಿಪ್ಪಭಿಧಾನದ ಗೋಕದಂಬಮಂ
ಕರೆದು ಮುರಾರಿ ಮೆಯ್ದೊಡೆದು ಮೇಯಿಸಿಯುಂ ತಿಳಿನೀರನೂಡಿಯುಂ
ಮರದ ನೆೞಲ್ಗಳೊಳ್ ನಿಲಿಸಿಯುಂ ಮೆಱೆದಂ ನಿಜಗೋಪಲೀಲೆಯಂ ೪೨

ಉ॥ ಮುತ್ತಿನ [2]ನೀಲದೆಕ್ಕಸರದೋಲೆ[2] ಕದಂಪಿನೊಳಾಡೆ ನೆತ್ತಿಯೊಳ್
ಕತ್ತುರಿವೀಲಿಯುಂ ಮಿಱುಗೆ ಪೀತಪಟಂ ಕಟಿಯೊಳ್ ಬೆಡಂಗು ಮೆ
ಯ್ವೆತ್ತಿರೆ ಕಾಲ ಪೊಂದೊಡರ ದೈತ್ಯರ ಹಾಹೆಗಳೊಪ್ಪೆ ವೇಣುವಿಂ
ತುತ್ತುರುನಿಸ್ವನಂ ನೆಗೞೆ ಗೋವಳರಾಯನ ಲೀಲೆ ರಂಜಿಕುಂ ೪೩

ವ॥ ಆ ಸಮಯದೊಳ್

ಮ॥ ತುರಗಾಕಾರದೆ ಕಾಳರಕ್ಕಸನೆ ಮೂಱುಂ ಲೋಕಮಂ ನುಂಗಲೆ
ಟ್ದಿರುತಿರ್ಪಂತಿಳೆಯಂ ಖುರಾಗ್ರಹತಿಯಿಂ ನುರ್ಗೊತ್ತುವಾಶಾಗಜೋ
ತ್ಕರಮಂ ಪೋಗೊದೆವಬ್ಧಿಯಂ ಸರಳಿಪರ್ಕಾಶ್ವಂಗಳಂ ನಿಳ್ಕಿ ಕೊ
ಪ್ಪರದಿಂ ಪಾಯ್ವುಳವಿಂದೆ ಕೇಶಿ ಪರಿತಂದಂ ಕಂಸನಾದೇಶದಿಂ ೪೪

[1] ಮಂಗಳವಸನ (ಖ) ಮಂಗಳಸಮಯ (ಗ) [2] ನೀಲದೆಕ್ಕತರದೋಲೆ (ಖಗ)

ವ॥ ಅಂತು ನಿಜಗತಿವಿಜೃಂಭಣಂ ಭುವನಕ್ಷೋಭನಮಾಗೆ

ಮ॥ ಪೆಸರ್ವೆತ್ತರ್ ದಶಕಂಧರಾದಿದನುಜರ್ ಮುನ್ನಾದೊಡಂ ಕೇಶಿಯಂ
ಪೆಸರ್ಗೊಂಡನ್ಯನಿಶಾಟರಂ ಪೆಸರ್ಗೊಳಲ್ವೇಡಿಂತತಿಕ್ರೂರರಿಂ
ತುಸಮುಚ್ಛೃಂಖಳರಿಂತು ಸಾಹಸಿಕರಿಂತುದ್ವೃತ್ತರಾರೆಂಬಿನಂ
ಗ್ರಸನಾಟೋಪದಿನೆಯ್ದಿದಂ ಹರಿಯನುತ್ಕರ್ಣಂ [1]ವಿದೀರ್ಣಾನನಂ[1] ೪೫

ವ॥ ಆಗಳಾ ಕೇಶಿಯುಂ ಮುಂಜಕೇಶಿ ಮಾರ್ಕೊಂಡು

ಮ॥ ಕರಮಂ ತೂಂತಿ ತದಾಸ್ಯದೊಳ್ ಬಳೆಯಿಸಲ್ ತದ್ವರ್ಧನೋದ್ರೇಕದಿಂ
ಸೆರೆಗಳ್ ಬೀಗಿ ನೆಳಲ್ ನೆಳಲ್ಗರೆಯೆ ನೆತ್ತರ್ ಮೂಗಿನೊಳ್ ತೀವಿ ಪಾ
ಯ್ತುರೆ ನಿಟ್ಟೆಲ್ವು ಛಟಚ್ಛಟೆಂದೊಡೆಯೆ ತದ್ದೈತ್ಯಾಧಮಂ ನೀಳದಿಂ
ಬಿರಿದಂ ಭೂತಗಣಕ್ಕಮಂಡಜಗಣಕ್ಕಂ [2]ಪರ್ಚುಗೊಟ್ಟಂದದಿಂ[2] ೪೬

ವ॥ ಆ ವಧಕ್ರಮಮಂ ಕಣ್ಣಾರೆ ನೋಡಿ

ಪೃಥ್ವಿ॥ ಅದೊಂದು ಪರಿ ತಾಟನಿಟ್ಟು ಖರದೈತ್ಯನಂ ಕೊಂದ ಪಾಂ
ಗದೊಂದು ಪರಿ ಗಂಟಲಂ ಮುರಿದರಿಷ್ಟನಂ ಕೊಂದಗು
ರ್ವದೊಂದು ಪರಿ ಕೇಶಿಯಂ ಸಮದೆ ಸೀಳ್ದು ಕೊಂದಂದಮೆಂ
ದದೇಂ [3]ಕಹಕಹೋರು[3] ನಿಸ್ವನದೆ ನಕ್ಕನಾ ನಾರದಂ ೪೭

ಕಂ॥ ಅಭಿನವಭಂಗಿಯೊಳರಿಯಂ
ವಿಭು ಮಡಿಪಿದೆ ಭಾಪುಭಾಪೆನುತ್ತುತ್ಸವದಿಂ
ನಭದೊಳ್ ಮುನಿಪತಿ ನಾರದ
ನಭಿನುತನುತಿ [4]ಮುಖರನಾಗಿ[4] ಹರಿಗಿಂತೆಂದಂ ೪೮

ಮ॥ ಜಗಮಂ ನುಂಗುವ ಶೂಲಿ ನೀನೆ ಜಗಮಂ ಮಾಳ್ಪಬ್ಜಜಂ ನೀನೆ ತ
ಜ್ಜಗಮಂ ರಕ್ಷಿಪ ವಿಷ್ಣು ನೀನೆ ಜಗಮುಂ ಪೋ ನೀನೆ ಸರ್ವೇಶ ಸ
ರ್ವಗ ಸರ್ವಾತ್ಮಕ ಸರ್ವಭೂತಮಯ ನಿನ್ನಿಂ ಭಿನ್ನವಾಗಿರ್ಪ ವ
ಸ್ತುಗಳಿಲ್ಲೀ ರಿಪು ಭಿನ್ನನಾದನಿದು ಚಿತ್ರಂ ಪದ್ಮಪತ್ರಾಂಬಕಾ ೪೯

---

[1] ವಿಶೀರ್ಣಾನನಂ (ಖಗ) [2] ಪಚ್ಚುಕೊಟ್ಟಂದದಿಂ (ಕಗ) [3] ಕಹಕಹಾರ (ಕಖಗ)
[4] ಮುಕುರನಾಗಿ (ಖ)

ಕಂ॥ ಗತಿಗೇ್ಟ ಕೇಶಿ ಸಮರ
ಕ್ಷಿತಿಯೊಳ್ ಕೆಡೆದಿರ್ದುವೀಗ ಮುನ್ನಿಲ್ಲದಂದೊಂ
ದತಿಶಯಸುಗತಿಯನೊಳಕೊಂ
ಡು ತರಣಿಮಂಡಲಮನೆಯ್ದಿದಂ ಕಡುಚೋದ್ಯಂ ೫೦

ದಾನವರೊಳತಿಕ್ರೂರಂ
ತಾನಿವನೆನಿಸಿರ್ದ ಕೇಶಿಯಂ ಕೊಂದುದಱಿಂ
ನೀನಿಂ ಕೇಶವನೆಂಬಭಿ
ಧಾನದೆ ವರ್ತಿಸು ಮುರಾರಿ ಧರೆ ಕೀರ್ತಿಪಿನಂ ೫೧

ವ॥ ಎಂದು ಅರವಿಂದನಂದನಸೂನುವಂತರ್ಧಾನಗತನಾಗಿ ಪೋಗಿ ಮಧುರಾಪುರ ನಿವಾಸಿಗುಗ್ರಸೇನಸೂನುಗದೊಂದು ಕಾರ್ಯಮನಱಪಲೆಂದಂದು ಬಗೆದಂದು

ಕಂ॥ ಬಿಂಬದಧಿದೈವಮರ್ಕನ
ಬಿಂಬದೆ ತಳರ್ದಿೞಿದುದಿಂತಿದದ್ಭುತವಸುರಂ
ಗೆಂಬಿನಮಿನಬಿಂಬದ ದೆಸೆ
ಯಿಂ ಬಂದಿಳೆಗಿೞಿದನಮಲಕಾಂತಿಮುನೀಂದ್ರಂ ೫೨

ವ॥ ಅಂತು ಬಂದು ದೈತ್ಯರಾಜನಿಂದಾತಿಥ್ಯಪೂಜೆಯಂ ಕೈಕೊಂಡು ವಿಶಿಷ್ಟವಿಷ್ಟ ರಾಸೀನನಾಗಿ

*ಕಂ॥ ಪಿಸುಣಂ ಪೇೞಿಶ್ದೊಡದೇವುದೊ
ಕಿಸುಜಡೆಯುಂ ಬೂದಿ ಕಚ್ಚುಟಂ ಬೊಕ್ಕಣಮುಂ
ಪಿಸುಣಱಿತ ಮತ್ತೆನೆ ಮಾಣ್ಬನೆ
ಪಿಸುಣರ ದೇವಂಗೆ ನಾರದಂಗಿದು ಸಹಜಂ ೫೩

* ಈ ರೀತಿಯಾದ ಪಾಠವು ತಾಳಪತ್ರ ಪುಸ್ತಕಗಳಲ್ಲಿದೆ.
ಪಿಸುಣಂ ಪೇೞಿದೊಡೇವುದೊ
[1]ಬಿಸು[1]ಜಡೆಯುಂ ಬೂದಿ ಕಚ್ಚುಟಂ ಬೊಕ್ಕಣಮುಂ
[2]ಪಿಸುಣರೆ ಮತ್ತೆಯುಮಾಣ್ಬುದೆ[2]
ಪಿಸುಣರೆ ದೇವಂಗೆ ನಾರದಂಗಿದು ಸಹಜಂ

1 ಬಸು (ಕ) 2 ಪಿಸುಣರೆ ಮತ್ತೆನೆ ಮಾಣ್ಬನೆ (ಕ)

ಅಸುರನ ಮುಖಾಬ್ಜಮಂ ಕೊರ
ಗಿಸುವಲ್ಲಿಗಿದೊಂದು ಸಾಂದ್ರಚಂದ್ರಿಕೆಯೆನೆ ದಂ
ತಸಮುಜ್ಜ್ವಲರುಚಿ ಪಸರಿಸ
ಲಸಹ್ಯಮಂ ದಿತಿಜಪತಿಗೆ ಯತಿಪತಿ ನುಡಿದಂ ೫೪

ದೇವಕಿಯ ಸುತನಿನಟಿಯೆ ಮ
ಹಾವೀರರ್ ಖರವೃಷೇಂದ್ರ ಕೇಶಿಪ್ರಮುಖರ್
ದೇವಾರಿ ತೀಕ್ಷ್ಣನಖದಂ
ಷ್ಟ್ರಾವಳಿಯುಟಿದೊಂದು ಸಿಂಗಮಂ ನೀಂ ಪೋಲ್ತೈ ೫೫

ನಿನಗಂತಕನುಂ ದೇವಕ
ತನಯಾಷ್ಟಮಗರ್ಭಜಾತನಾ ಬಾಲನೆ ತ
ದ್ದನುಜರನಿಕ್ಕಿದನಿಂ ಥೌ
ಘನಾಗದನ್ನೆಗಮೊಡರ್ಚುಪಾಯಾಂತರಮಂ ೫೬

ವ|| ಎಂದು ನಾರದಂ ನೀರದಪಥಕ್ಕೆ ಪೋದಂ. ಆಗಳಾ ಭೋಜರಾಜಂ

ಕಂ|| ದೇವಮುನಿ ನುಡಿದ ನುಡಿಯಿಂ
ಭಾವಿಸಿ ವಸುದೇವಕೃತಕಮಂ ಭಯನಿಷ್ಪಂ
ದಾವಯವಂ ಪರ್ಯಾಕುಲ
ಜೀವಂ ಪಾವಡರ್ದ ಪಂದೆಯಂತೆವೊಲಿರ್ದಂ ೫೭

ವ|| ಅಂತು ಕಿಱಿದಾನುಂ ಬೇಗಮಿರ್ದು ತನ್ನಂ ತಾನೆ ಸಂತೈಸಿಕೊಂಡು ನಿಜಾಂತಿಕ
ದೊಳಿರ್ದ ಮಂತ್ರಿಗಳ ಮೊಗಮಂ ನೋಡಿ

ಕಂ|| ದೇವಕಿಯ ಪುತ್ರನಸ್ಮ
ಜ್ಜೀವಾಂತಕನಲ್ಲದುಟಿದ ಪಗೆಯೆನಗರಿದೇ
ಗೋವಳಿಗರ ಶಿಶುವೆಂದಿರ
ಲಾ ವೈರಿಯೆ ದೇವಕೀಸುತಂ ಗಡದೆಂತೋ ೫೮

ಶಾ|| ಎನ್ನಂ ವಂಚಿಸಿ ಗೋಕುಲಕ್ಕೆ ವಸುದೇವಂ ದೇವಕೀಪುತ್ರನಂ
ಛನ್ನಾಕಾರದಿನುಯ್ದು ಪಲ್ಲಟಿಸೆ ಮಾಯಾಬಾಲೆಯೊಳ್ ನಂದನುಂ
ತನ್ನಂಗೋದ್ಭವನೆಂದೆ ರಕ್ಷಿಸಿದನಕ್ಕುಂ ಕೃಷ್ಣನಂ ಪೊಲ್ಲಕೆ
ಯ್ದನ್ನೋಡಿಂ ವಸುದೇವನಿಂ ಕಿನಗೆ ಕೌಟಿಲ್ಯಜ್ಞರೇಗೆಯ್ವರೋ ೫೯

ಕಂ|| ಇಡುವಳಿಯೊಳಿರ್ಪವೊಲ್ ಮೆ
ಲ್ಪಡಿಸಿದನೆಂತೆನ್ನನೆನಗೆ ವಸುದೇವನೆನಲ್
ಪೆಡದಲೆಯ ಪಾವು ಸೋಂಕಿಲ
ಕಿಡಿ ನಣ್ಪಿನ ಮೃತ್ಯುವಿಂಪುದೋಱುವ ಗರಳಂ ೬೦

ವ|| ಎಂದು ನೊಂದು ನುಡಿದು ಪ್ರಧಾನಪುರುಷರೊಳಕ್ರೂರನಂ ಕರೆದು

ಚಂ|| ವದನಚತುಷ್ಕವಿಲ್ಲದ ರಜೋಗುಣವಿಲ್ಲದ ಪದ್ಮಪೀಠವಿ
ಲ್ಲದ ಕಳಹಂಸವಿಲ್ಲದ ಕಮಂಡಲುವಿಲ್ಲದ ಪಾಶರಜ್ಜುವಿ
ಲ್ಲದ ವಿಮಳಾಕ್ಷಮಾಲಿಕೆಯುಮಿಲ್ಲದಪೂರ್ವವಿರಿಂಚ ಧರ್ಮಕೋ
ವಿದ ನಯಯುಕ್ತ ದಾನಪತಿ ಪೇಳ್ದಪೆನಾಂ ನಿನಗೊಂದು ಕಾರ್ಯಮಂ ೬೧

ವ|| ಅದೆಂತೆಂದೊಡೆ, ಬಳಸೂದನಸೂದನನಪ್ಪೆನಗೆ ನಂದನನಂದನನೊಳ್ ಸಂಧಾನಂ ನೀತಿನಿಂದಿತಮುಂ, ಪ್ರಭಂಜನಸಖಪ್ರಭಾವಪ್ರಭಂಜನನಪ್ಪೆನಗೆ ಕುಲಹೀನ ವನಿತಾಸ್ತನ್ಯೋಪಪುಷ್ಟನೊಳನುಬಂಧಿಕೆಯತಿಕಷ್ಟಮುಂ, ಕಾಲಪ್ರಳಯಕಾಲನಪ್ಪೆನಗೆ ಸಹಾಯಶೂನ್ಯದೊಳ್ ಯಾನಮತಿಹೀನಮುಂ, ಕ್ರವ್ಯಾದಸಂಹನನಕ್ರವ್ಯಾದನಪ್ಪೆನಗೆ ಅನಭ್ಯಸ್ತಶಸ್ತ್ರನೊಳ್ ಯುದ್ಧಮತಿನಿಷಿದ್ಧಮುಂ, ಕೀಲಾಲಪವಕ್ಷಸ್ಥಲಕೀಲಾಲಪನಪ್ಪೆನಗೆ ಕಾಕಪಕ್ಷಧಾರಿಯೊಳ್ ಸಾಮಮಪ್ಪುದಕಾರ್ಯಮುಂ, ಪ್ರಕಂಪನಜೀವಪ್ರಕಂಪನನಪ್ಪೆನಗೆ ಗೋಪಾಲಯುಕ್ತನೊಳ್ ಭೇದಮಯುಕ್ತಮುಂ, ಪುರಮಥನಮಿತ್ರಪುರಮಥನನಪ್ಪೆನಗೆ ನವನೀತಚೋರನೊಳ್ ಪ್ರದಾನಮಪ್ರಯೋಜನಮುಂ, ಉಗ್ರಸಂಗ್ರಾಮೋಗ್ರನಪ್ಪೆನಗೆ ಗೋನಿಯೋಗದಂಡಧರನೊಳ್ ದಂಡಮಪಹಾಸ್ಯಮುಮಪ್ಪುದು. ಅದುಕಾರಣದಿಂ ಕೃಷ್ಣನೊಳ್ ಕುಟಿಲೋಪಾಯಮೆ ಕರಣೀಯಂ. ಆ ಮಾಯಾವಿಯಂ ಧನುರ್ಮಹೋತ್ಸವಾಮಂತ್ರಣವ್ಯಪದೇಶದಿಂ ವಿನಾಶಮನೆಯ್ದಿಸುವೆಂ. ಅಲ್ಲಿಂ ಬೞಿಯಂ

ಕಂ|| ಆಂ ದೇವಕಜೆಯನಾನಕ
ದುಂದುಭಿಯಂ ನಂದನಂ ಯಶೋದಾವಧುವಂ
ಕೊಂದವರ ರಕ್ತಜಲದಿಂ
ನಂದಿಸುವೆಂ ಮತ್ಪ್ರಕೋಪತೀವ್ರಾನಳನಂ ೬೨

ಯಾದವರನಿಕ್ಕಿ ನಿರ್ದಾ
ಯಾದವರ ಪ್ರಾಜ್ಯರಾಜ್ಯಲಕ್ಷ್ಮೀವಧುಗಾಂ
ಕಾದಲನಪ್ಪೆಂ ಬೞಿಯಂ
ಕಾದಲಣಂ ಗೋತ್ರವೈರಿಯುಂ ನೆಱೆದಪನೇ ೬೩

ಚಂ॥ ಧಿಷಣನೆನಿಪ್ಪ ಮಂತ್ರಿಗುಚಿತಂ ಪತಿಕಾರ್ಯಮದರ್ಕೆ ನೀನಕ
ಲ್ಮಷಮತಿ ಪೋಗಿ ಗೋಕುಲಕೆ ಗೋಪಕದಂಬಕಮಿಂದು ಗನ್ಯಸಾ
ಹಿಮರಸಸಂಕುಳಂಬೆರಸು ಕಾರ್ಮುಕಪೂಜೆಗೆ ಬರ್ಪುದೆಂದು ತ
ನ್ನಿಷದೊಳೆ ಬೆಚ್ಚರಂ ರಥಮನೇಱಿಸಿ ತರ್ಪುದು ರಾಮಕೃಷ್ಣರಂ ೬೪

ವ॥ ಎನಲಂದು

ಕಂ॥ ಕರ್ಕಶಮನಂ ಸುರಾರಿ ಕು
ತರ್ಕೋಕ್ತಿಯನೆಂತು ಪೂಣ್ದು ಬೆಸವೇಳ್ದನದಂ
ಮಾರ್ಕೊಂಡುಪಾಂಶುವೆನ್ನದು
ದರ್ಕಪರಿಜ್ಞಾನದಾನಪತಿ ಕೈಕೊಂಡಂ ೬೫

ಶುಭಲಕ್ಷಣಾಶ್ವಯುಕ್ತಮ
ನಭಿನುತಸಾರಥಿಸನಾಥಮಂ ಮಣಿಘಂಟಾ
ಸುಭಗಮನುದಿತಧ್ವಜಮಂ
ಪ್ರಭಾವಿರಾಜಿತಮನೇಱಿದಂ ಪೊಂದೇಱಂ ೬೬

ವ॥ ಅಂತು ನಿಜರಥಮನೇಱಿ ಪೊೞಲಿಂ ತಳರ್ದು

ಕಂ॥ ಮುಖಪುರುಷನಿರ್ದ ದೆಸೆಗಭಿ
ಮುಖನಾದೊಡೆ ಪೋಯ್ತ್ತು ಘಂ ಪರಾಙ್ಮುಖನಂತ
ರ್ಮುಖವಾದುದು ಮಾನಸಮು
ನ್ಮುಖವಾದುದು ಭೋಂಕನಲರ್ದುದಾಸ್ಯಾಂಭೋಜಂ ೬೭

ಸನಕಾದ್ಯರನಂತಯುಗಂ
ಮನದೊಳ್ ಚಿಂತಿಸಿಯುಮೆಯ್ದಲಱಿಯದ ಲಕ್ಷ್ಮೀ
ಶನನಾನೆಯ್ದಿದಪೆಂ ಪೋ
ಗಿ ನಿಮಿಷದಿಂ[1]ದೆನ್ನಿನೆಯ್ದೆ ಧನಮೆಯ್ದಿದರಾರ್[1] ೬೮

ಯಮಿವರರುಂ ಲಕ್ಷಿಸಲ
[2]ಕ್ಷಮರೆನಲಾ[2]ಕಾರಶೂನ್ಯಮಾದ ಪರಬ್ರ
ಹ್ಮಮೆ ಸಾಕಾರತೆವೆತ್ತಂ
ದಮನೀಕ್ಷಿಸುವೊಂದು ಸೈಪು ಸಮನಿಸಿತೆನ್ನೊಳ್ ೬೯

[1] ದೆನ್ನನೆಯ್ದಿ ಜಸಮೆಯ್ದಿದರಾರ್ (ಕಖ) ದೆನ್ನನೆಯ್ದೆ ಜಸಮೆಯ್ದಿದರಾರ್ (ಗ)
[2] ಕ್ಷಮವೆನಲಾ (ಕಖಗ)

ತ್ರಿದಶಮುನಿಶ್ರೇಷ್ಠರ ಚಾ
ರುದೃಷ್ಟಿಗಂ ಕಾಣಲರಿದೆನಿಪ್ಪಮಿತಾಕಾ
ರದ ನಾರಾಯಣನಂ ಚ
ರ್ಮದೃಷ್ಟಿಯೊಳೆ ಕಂಡಪೆಂ ಗಡಾನೆ ಕೃತಾರ್ಥಂ ೭೦

ಪೊಡವಿಯೊಳಾಂ ಮೆಯ್ಯಿಕ್ಕಿರೆ
ನಡೆ ನೋಡಿ ದಯಾನ್ವಿತಂ ಸುದರ್ಶನಚಕ್ರಂ
ಬಿಡಿವ ನಿಜದಿವ್ಯಕರದಿಂ
ಪಿಡಿದೇಂ ನೆಗಪುಗುಮೆ ಕಮಳಲೋಚನನೆನ್ನಂ ೭೧

ಧರೆಯಿಂದೇಟ್ಟಿದು ಮಾನುಂ[1]
ಬರೆತೆಗೆದು ಪುನಃಪುನಂ ಜನಾರ್ದನನಾ ಮಂ
ದರಮಂ ತಳ್ಕೈಸಿದ ಭುಜ
ಪರಿಘಂಗಳಿನೆನ್ನನೊಲ್ದು ತಳ್ಕೈಸುಗುಮೇ ೭೨

ಅವನತಿಯಿಂ ಪೊರೆದ ಮದೀ
ಯ ವದನ ಭೂರಜಮನೊಲ್ದು ತೊಡೆಗುಮೆ ಲಕ್ಷ್ಮೀ
ಯುವತಿಯ ಮುಖಘರ್ಮಪಯೋ
ಲವಮಂ ತೊಡೆವರುಣಹಸ್ತತಳದಿಂ ಕೃಷ್ಣಂ ೭೩

ಸನ್ನುತಿಗೆಯ್ದಾರಾಧಿಸೆ
ತನ್ನಂ ಬ್ರಹ್ಮಾದಿದೇವರೊಳಗೆತ್ತಾನುಂ
ಮುನ್ನುಡಿದ ದಿವ್ಯವಚನಮ
ನೆನ್ನೊಳ್ ನುಡಿಗುಮೆ ನೃಕೀಟನೊಳ್ ನರಸಿಂಹಂ ೭೪

ಅಸುರನ ಚರನೆಂದಪಮಾ
ನಿಸುಗುಮೊ ಮೇಣ್ ಭಕ್ತನೆಂದು ಮನ್ನಿಸುಗುಮೊ ಭಾ
ವಿಸಿ ತಿಳಿದೆನಿಂತಿದಂ ಕ
ರ್ಮಸಾಕ್ಷಿ ಚೈತನ್ಯರೂಪನಱಿಯನೆ ಕೃಷ್ಣಂ ೭೫

ವ॥ ಎಂದು ಪರಮಭಾಗವತಂ ಶುಭಧ್ಯಾನಪರಾಯಣನಾಗಿ

---

1 ಮೆನ್ನಂ (ಕಖಗ)

ಕಂ॥ ನಿಜದಕ್ಷಿಣಾಕ್ಷಿದಕ್ಷಿಣ
ಭುಜಪರಿಘಸ್ಪಂದಮೊಗೆಯೆ ವನಮೃಗಶಕುನಿ
ವ್ರಜಶಕುನಂ ಶುಭಮೆನೆ ಪವ
ನಜವಾಶ್ವಿತರಥದಿನೆಯ್ದಿದಂ ಗೋಕುಲಮಂ ೭೬

ಶಾ॥ ಗೋಪಸ್ತ್ರೀದಧಿಮಂಥನಶ್ರಮಹರಂ ಗೋದೋಹನಕ್ಷೀರಧಾ
ರಾಪಾತೋತ್ಥಲವಾಪಹಾರಪಟು ಸದ್ಯಸ್ತಪ್ತಸರ್ಪಿಸ್ಸು ಗಂ
ಧೋಪೇತಂ ಸುಟಿಯಲ್ ವಿಭಾತಪವಮಾನಂ ಪೊಕ್ಕನಕ್ರೂರನಂ
ದಾಪೊಟ್ಟುತ್ಸವದಿಂದೆ ವತ್ಸಕುಲಹಂಭಾ ಘೋಷಮಂ ಘೋಷಮಂ ೭೭

ವ॥ ಅಂತು ಪೊಕ್ಕು ನಂದಗೋಪನ ಮನೆಗೆ ಬಂದು ವರೂಥದಿಂ ಪ್ರಾಂಗಣ ತಳಕ್ಕವತರಿಸಿ

ಚಂ॥ ಭುಜಯುಗಮಾದೊಡಂ ಭುಜಚತುಷ್ಟಯಮೆಂಬಿನಮೊಪ್ಪುತಿರ್ಪುವಾ
ಭುಜದೊಳ್ ಶಂಖಚಕ್ರನಳಿನೀಗದೆಗಳ್ ತೊಡರ್ದಂತೆ ಸೌಷ್ಠವಂ
ಭಜಿಯಿಸಿದತ್ತು ಕೌಸ್ತುಭಮನಾಂತವೊಲಿರ್ದುದು ವಕ್ಷಮಂತೆ ನೀ
ರಜದಳಲೋಚನಂಗಳೆಸೆದಿರ್ದಪುವೀತನೆ ಕೃಷ್ಣನಾಗನೇ ೭೮

ವ॥ ಎಂದು ಮನದೊಳೆ ಭಾವಿಸಿ

ಕಂ॥ ಗೋದೋಹನಲೀಲೆಯೊಳ
ಬ್ಜೋದರನಿರೆ ಕಂಡು ದಾನಪತಿ ಸಂತಸದಿಂ
ದಾದಿಸ್ವರೂಪದಿಂ ಜಿ
ಲ್ಹಾದುದು ಲೀಲಾಸ್ವರೂಪಮೆಂದೀಕ್ಷಿಸಿದಂ ೭೯

ವ॥ ಅಂತು ಸಂತೋಷದಿಂದಕ್ರೂರಂ ನಿರೀಕ್ಷಿಸುವುದುಂ ಭಕ್ತಜನಮನೋನಿವಾಸಂ ವಾಸುದೇವಂ ಗೋದೋಹನವಿನೋದಮಂ ಮಾಣ್ದು ಗೋಪಾಲವಿಭೂಷಣವಿಲಾಸಮೆಸೆವಿನಮಿದಿರೆಟ್ಟು ವಂದು

ಕಂ॥ ಹೃಷ್ಟತೆಯಿಂದಕ್ರೂರಂ
ಸಾಷ್ಟಾಂಗಪ್ರಣತನಾಗೆ ಕಾರುಣ್ಯಸುಧಾ
ವೃಷ್ಟಿ ಪಸರಿಸಿದುದೆನೆ ನಿಜ
ದೃಷ್ಟಿಪ್ರಭೆ ಸಿಮಿರೆ ನೋಡಿದಂ ಕಮಳಾಕ್ಷಂ ೮೦

ಆರಿಂತುಧನ್ಯರೆನಲ
ಕ್ರೂರಂ ತಾಂ ಪಡೆದನೆಂತು ಬಯಸಿದನಂತಾ
ಶೌರಿಯ ಕರಸಂಸ್ಪರ್ಶನ
ಕಾರುಣ್ಯನಿರೀಕ್ಷಣಪ್ರಸಾದೋಕ್ತಿಗಳಂ ೮೧

ವ॥ ಅನ್ನೆಗಂ

ಕಂ॥ ರಾಗದೆ ಬಂದಿದಿರೆಟ್ಟಿ
ಭ್ಯಾಗತಪೂಜೆಯನೊಡರ್ಚಿ ನಂದಂ ನುಡಿದಂ
ಸ್ವಾಗತಮೆ ಸುಖಮೆ ಭವದೀ
ಯಾಗಮದಿಂ ಸುದಿನಮಾದುದಿಂದಿನ ದಿವಸಂ ೮೨

ವ॥ ಎಂದು ಸಂಭಾಷಣಂಗೆಯ್ದು ನಂದಗೋಪನ ಮುಖಾರವಿಂದಮಂ ನೋಡಿ ದಾನವಲ್ಲಭನಿಂತೆಂದಂ

ಕಂ॥ ಏತೆಱದ ತಪೋದಾನ
ವ್ರಾತದೊಳೀಂ ಪೊಗ್ಗೆ ನಂದ ನೀನೀ ತ್ರಿಜಗ
ತ್ರಾತಂಗೆ ಜಳಧಿಶಾಯಿಗೆ
ತಾತನೆ ಆದೊಂದು ಪೆಂಪಜಂಗಮಲಭ್ಯಂ ೮೩

ಉ॥ ರೂಡಿಯನಪ್ಪುಕೆಯ್ದುಮರಮಾತ್ರಗಮಿಲ್ಲದ ಪುಣ್ಯಶಕ್ತಿ ಕೈ
ಗೂಡಿದುದೀಕೆಗಬ್ಧಿಶಯನಂ ಗಡ ನಂದನನೀ ಮನೋಹರ
ಕ್ರೀಡನನೆತ್ತಿಕೊಂಡು ಮೊಲೆಯೂಡಿದ ತಳ್ತಮರ್ದಪ್ಪಿದೊಲ್ದು ಮು
ದ್ದಾಡಿಸಿದೀ ಭವತ್ಸತಿ ಯಶೋದೆ ಕುಲಕ್ಕೆ ಯಶೋದೆಯಲ್ಲಳೇ ೮೪

ವ॥ ಎಂದು ನುಡಿದನಂತರಂ

ಮ॥ ಭುವನೋತ್ಸಾಹಕರಂ ಧನುರ್ಮಹಮದರ್ಕಂ ಪಾಲ್ಕೊಸರ್ ತುಪ್ಪಮೆಂ
ಬಿವನುಯ್ದೀವುದು ಪೋಗಿ ನೀನಖಿಲಗೋಪಾಲಾನ್ವಿತಂ ನಂದ ಮುಂ
ದಿವರಂ ರಾಮಮುಕುಂದರಂ ರಥದ ಮೇಲಿಟ್ಟುಯ್ದಪೆಂ ನೋಱ್ಕೆ ಪ
ರ್ವಮನೀ ಬಾಲಕರೆಂಬಿದರ್ಕೆ ಬಱಿನಂದೆಂ ಭೋಜರಾಜಾಜ್ಞೆಯಿಂ ೮೫

ಕಂ॥ ಎನೆ ಮಿಕ್ಕು ಮನದೆ ಕೊಂಡಸು
ರನ ಪೊರೆಗಾತ್ಮಜರನಟ್ಟುವೆಡೆಗುತ್ತರಮೊಂ
ದಿನಿಸು ಪೊಱಮಡದೆ ಬಿಡೆ ಕ
ಣ್ಬನಿ ಪೊಱಮಟ್ಟುವು ಯಶೋದೆಗಂ ನಂದಂಗಂ ೮೬

ವ|| ಅಂತಿರ್ದರನಕ್ರೂರಂ ದರಸ್ಮಿತವದನಾರವಿಂದನಾಗಿ ನೋಡಿ

ಕಂ|| ಈ ತರುಣರನೆಂತಟ್ಟುವೆ
ವಾ ತೀಕ್ಷ್ಣಂ ಕಂಸನಲ್ಲಿಗೆಂಬೊಂದು ಭಯಾ
ಕೂತಂ ಬೇಡಟ್ಟಿದೊಡೇ
ನೀತಂಗಳನಾದಿಮಧ್ಯನಿಧನರಮೋಘಂ ೮೭

ಭುವನಂ ಸಹಸ್ರಶತವಾ
ದವಱಿಯೆ ನಿಲ್ವಾ ಹಿರಣ್ಯಗರ್ಭನುಮಂ ನುಂ
ಗುವದೊಂದು ಮಹಾಪ್ರಳಯಮು
ನವಯುವದಿಂ ನುಂಗಿ ನೊಣೆವ ಹರಿಗರಿದುಂಟೇ ೮೮

ಆ ಕಥೆಗಳನಱಿಯದೊಡೇ
ನೀ ಕೃಷ್ಣನ ಜಯಮನೀಗಳಱಿಯಿರೆ ಕಡುಕೆ
ಯ್ದಾ ಕೇಶಿಧೇನುಕರ್ಕಳ
ನೇಕಾಂಗದೆ ಗೆಲ್ದುದಲ್ಲವೇ ದೃಷ್ಟಾಂತಂ ೮೯

ವ|| ಎಂದು ನುಡಿದು ನಂದಗೋಪನುಮಂ ಯಶೋದೆಯುಮನೆಂತಾನುಮೊಡಂ
ಬಡಿಸಿ ರಾಮಕೃಷ್ಣರನೊಡಗೊಂಡುಯ್ಯಲುದ್ಯೋಗಿಸಿರ್ಪುದಂ ಕಂಡು

ಮ|| ವನಜಾತಾಕ್ಷನನುಯ್ದು ಗಲ್ಬುವುದಱಿಂದಕ್ರೂರನಾಗಿರ್ದ ಮಾ
ಣ್ದನೆ ಹಿಂದೋಳರವಕ್ಕೆ ಮಲ್ಲಿಗೆಗೆ ಬೆಳ್ದಿಂಗಳ್ಗೆ ತಣ್ಗಾಳಿಗಿ
ನ್ನೆನಸುಂ ಕ್ರೂರತೆಯುಂ ನೆಗಳ್ಚಿದಪನೋ ಅಕ್ರೂರನೆಂತಾದನೀ
ತನತಿಕ್ರೂರನಮೋಘಮೆಂದರಟಲಿಂದಕ್ರೂರನಂ ಗೋಪಿಯರ್ ೯೦

ಕಂ|| ದಿತಿಸುತನ ರಾಜಧಾನಿಯ
ಚತುರೆಯರಂ ಕಂಡೊಡೆಮ್ಮನೀ ಗ್ರಾಮ್ಯೆಯರಂ
ದಿತಿಜಾರಿ ನೆನೆಗುಮೇ ಮಾ
ಳತಿಗೆಱಗಿದ ತುಂಬಿ ನೆನಗುಮೇ ಮಿಕ್ಕಲರಂ ೯೧

ಆ ನಗರಮನಿಂ ಪೊಕ್ಕೊಡೆ
ದಾನವರಿಪು ಗೋಪಪಳ್ಳಿಯಂ ನೆನೆದಪನೇ
ಮಾನಸದೊಳಿರ್ಪ ಹಂಸಂ
ತಾನಿತರಸರೋಜಷಂಡಮಂ ನೆನೆದಪುದೇ ೯೨

ಇಂತಪ್ಪ ಸುಭಗರೂಪನ
ನಂತನನಿಂ ಕಂಡರಪ್ಪೊಡಾ ಕಂಸಪುರೀ
ಕಾಂತೆಯರೇಂ ಬರಲೀಗುವೆ
ತಂತಮ್ಮ ವಿಳಾಸನಿಗಡದಿಂ ಸೆಱೆಗೆಯ್ವರ್ ೯೩

ಸೋಗೆ ಕಚಂ ಸುರಧನು ಭೂ
ಭಾಗಣವಚಿರಾಂಶುವಕ್ಷಿ ಬೆಮರ್ವನಿ ಮುೞಿ ತಾ
ನಾಗಿರೆ ಪೆಱತೊರ್ಬಳ್ ಮೇ
ಘಾಗಮಲಕ್ಷ್ಮಿವೊಲುಪೇಂದ್ರನಂ ಬಗೆಗೊಂಡಳ್ ೯೪

ಕರಯುಗಳಂ ತೆರೆ ಶೃಂಗಾ
ರರಸಂ ನೀರ್ ನಿಮ್ನನಾಭಿ ಸುೞಿಯಾಗೆ ತನೂ
ದರಿ ಪೆಱತೊರ್ವಳ್ ನದಿಯಂ
ತಿರೆ ಜಳಶಯನನ ಮನಕ್ಕೆ ಸುಖಮಂ ಪಡೆದಳ್ ೯೫

ಘನಜಘನಕೃತಕಗಿರಿಯಿಂ
ಸ್ತನಫಲದಿಂ ಬಾಹುಲತಿಕೆಯಿಂ ಪಿಕರವದಿಂ
ವನಮಾಲೆಯಂದದಿಂದಂ
ವನಮಾಲಾಧರನೊಳೊರ್ವಳೊಲವಂ ಪಡೆದಳ್ ೯೬

ಕುಂತಳಭೃಂಗಂ ನೇತ್ರಲ
ತಾಂತಂ ನಿಜಸೌರಭಂ ವಿಲಾಸಸ್ಥಿತಿ ಜೆ
ಲ್ವಂ ತಳೆಯೆ ಮಾಧವೀಲತೆ
ಯಂತಿರೆ ಮಾಧವನನೊರ್ಬವಧು ರಂಜಿಸಿದಳ್ ೯೭

ವ॥ ಅಂತು ಗೋಪಿಯರ್ ತಮತಮಗೆ ನೆರೆದು ನೋಡುತ್ತುಮಿರೆ

ಕಂ॥ ಒಡನೇಱಿ ರಥಮನಗ್ರಜ
ನೊಡವರಲಕ್ರೂರನೊಡನೆ ಹರಿ ಪೊಱಮಡಲಾ
ಗಡೆ ಪೊಱಮಟ್ಟುದದೊರ್ವಳ
ನಿಡುಸುಯ್ಲ ಸಮೀರನೊಡನೆ ಜೀವಸಮೀರಂ ೯೮

ವ॥ ಮತ್ತಮಂತಂತೆ ಕಿಱಿದಂತರಮಂ ದೇವಕೀನಂದನಸ್ಯಂದನಂ ನಡೆಯೆ

ಕಂ॥ [1]ಒಡನೆಯ್ದಿದುವಲರ್ಗಣ್ಗಳ್
ಬಿಡವೆ[1] ಮನಂ ಪೋಯ್ತು ಮನದ ಪಿಂತಣೆ ಧೈರ್ಯಂ
ನಡೆಗೊಂಡುದು ಧೈರ್ಯದ ಬೆಂ
ಬಿಡಿದೊರ್ವಳ ಜೀವಮಿರದೆ ಪೋದತ್ತಾಗಳ್ ೯೯

ವ॥ ಅದಲ್ಲದೆಯುಂ ಮತ್ತೊರ್ವಳ್ ವಿಯೋಗಂ ತನಗೆ ದುಸ್ಸಹಮಾಗೆ

ಚಂ॥ ಪೊಡೆಯಲರಾತನಕ್ಷಿಗಮಗೋಚರಮಾಗಿರೆ ನಿಟ್ಟಿಸ ನೋಡಿ ಧೀಂ
ಕಿಡುವ ರಥಧ್ವಜಾಗ್ರಮನದುಂ ಮಸುಳುತ್ತಿರೆ ತೇರ ಧೂಳಿಯಂ
ಬಿಡೆ ನಡೆ ನೋಡಿ ಧೂಳಿಯುಮಡಂಗಿರೆ ಕೃಷ್ಣನ ತೇರ ಧೂಳಿಯು
ಪ್ಪೊಡಮಿರದಾಯ್ತೆನುತ್ತಬಳೆ ಧೂಳಿವಿಡುತ್ತಿರೆ ಬಾಯ್ವಲುಂಬಿದಳ್ ೧೦೦

ಕಂ॥ ನಯನಕ್ಕೆ ಗಮ್ಯನಲ್ಲಂ
ಪ್ರಿಯಂ ಮನೋಗಮ್ಯನೀಕ್ಷಿಪೆಂ ಮನದೊಳೆ ಶೌ
ರಿಯನೆಂದು ನಿಮೀಲಿತನಯ
ನೆಯುಮೊರ್ಬಳೆ ಗೋಪಿ ಯೋಗರೂಢೆವೊಲಿರ್ದಳ್ ೧೦೧

ವ॥ ಅನ್ನೆಗಮಿತ್ತಲಕ್ರೂರಂ

ಚಂ॥ ತರುಪಟಲೀಪಿನದ್ಧವನರಾಜಿಯನಲ್ಲಿ ವನೇಚರೀ ವನೇ
ಚರಜನಲೀಲೆಯಂ ಶರಭಸಿಂಧುರಸಿಂಹತರಕ್ಷುಮುಖ್ಯಭೀ
ಕರವನಸತ್ತ್ವಸಂಭ್ರಮಮನೀಕ್ಷಿಸಿ ತೋಱುತುಮಚ್ಯುತಂಗೆ ಜಿ
ಜ್ಞರಮಿರದೆಯ್ದಿದಂ ಜಗುನೆಯಂ ಮಧುರೋಪವನಾಂತರಸ್ಥಮಂ ೧೦೨

ವ॥ ಅಂತೆಯ್ದಿ ವನಪವನ ಲೋಲತ್ಕಲ್ಲೋಲದೊಳಂ, ವಿಸ್ಫುರತ್ಫೇನದೊಳಂ, ಚಳಚ್ಚಿಳಿಚಿಮದೊಳಂ, ವಿಲುಠತ್ಕಮಠದೊಳಂ, ಜೃಂಭತ್ಕುಂಭೀರದೊಳಂ, ಪ್ರೇಂಖಚ್ಛಂಖದೊಳಂ, ವಿರುವತ್ಸ್ಕರವದೊಳಂ, ಗುಂಜತ್ಕುಂಜದೊಳಂ, ಭ್ರಮದ್ಭ್ರಮರದೊಳಂ, ಸಂಸನತ್ಕಳಹಂಸದೊಳಂ, ಚಂಚತ್ಕ್ರೌಂಚದೊಳಂ, ರಾರಟತ್ಕಾರಂಡದೊಳಂ, ರಂಗದ್ರಥಾಂಗದೊಳಂ, ಅತಿಮನೋಹರಮಾದ ಯಮುನಾಹ್ರದದ ಪರಿಸರ ಪ್ರದೇಶದೊಳಕ್ರೂರಂ ನಿಜಮರೂಥಮಂ ನಿಲಿಸಿ, ನೀವೀ ರಥದ ಮೇಲೆ ಕುಳ್ಳಿರಿಂ, ಆಂ ಮಾಧ್ಯಾಹ್ನಿಕಾನುಷ್ಠಾನಮಂ ಮಾಡಿ ಬಂದಪೆನೆಂದು ವಸುದೇವನಂದನರ್ಗೆ ಪೇೞ್ದು, ಆ ಹ್ರದಿನಿಯೊಳ್ [2]ಯದುಕುಲಾಪನಘ[2]ಮರ್ಷಣಂಗೆಯ್ದಿರ್ಪುದುಮಲ್ಲಿ

---

[1] ಒಡನೆಯ್ದುವಲರ್ಗಣ್ಗಳ್ ಬಿಡಿದು (ಕಖಗ) [2] ಯದುಕುಲಾವರನಘ (ಕ)

ಮ॥ಸ್ರ॥ ಅನಿಮೇಷರ್ ಸುತ್ತುಗೊಂಡಿರ್ಪಿನಮುಖಿಲಮರುದ್ವಂದಿಗಳ್ ಕೀರ್ತಿಸುತ್ತಿ
ರ್ಪಿನಮೆತ್ತಂ ದೇವಯೋಗಿಪ್ರತತಿ ಜಯಜಯಧ್ವಾನಗರ್ಭಾಸ್ಯವಾಗಿ
ರ್ಪಿನಮಿರ್ದಂ ಶ್ರೀಸನಾಥಂ ಫಣಿಪತಿಶಯನಂ ಶಂಖಚಕ್ರಾಂಕಹಸ್ತಂ
ವನಮಾಲಾಕೌಸ್ತುಭಾದ್ಯಾಭರಣಯುತನನಂತಾರ್ಕಕೋಟಿಪ್ರಕಾಶಂ ೧೦೩

ಕಂ॥ ಆ ಲಕ್ಷ್ಮೀ[1]ಕಾಂತನೊಳೊಸೆ
ದಾಲೋಚಿಸುತುಂ[1] ಯದೃಚ್ಛೆಯಿಂದಂ ತದ್ಗ
ರ್ಭಾಲಯಮುಮಂ ನಾಭ್ಯಂಬುಜ
ನಾಲದ ಮಾರ್ಗದೊಳೆ ಪೊಕ್ಕು ವಿಸ್ಮಿತಚಿತ್ತಂ ೧೦೪

ವನಜೋದರನುದರದ ಲೋ
ಕನಿಕಾಯದೊಳಾತನಾಜ್ಞೆಯಿಂ ದಿವ್ಯವಿಲೋ
ಚನನುಂ [2]ಕಾಮಾಕೃತಿಯಿಂ[2]
ಮನೋಜವಾನ್ವಿತನುಮಾಗಿ ನಡೆದಕ್ರೂರಂ ೧೦೫

ಗೋಲೋಕ ಸತ್ಯಲೋಕ ತ
ಪೋಲೋಕ ಬ್ರಹ್ಮಲೋಕ ಜನಲೋಕ ದಿವೌ
ಕೋಲೋಕ ಧ್ರುವಲೋಕಮ
ನೇಳುಮನೇಳುಧರಲೋಕಮಂ ನೆರೆ ಕಂಡಂ ೧೦೬

ದಿಗಿಭಮನೆಂಟುಮನೆಣ್ಬರ್
ದಿಗಧಿಪರಂ ದ್ವೀಪಮೇಳನೇಳುಂಕಡಲಂ
ನಗಕುಲಮುಂ ಹಿಮವದ್ವಿಂ
ಧ್ಯಗಂಧಮಾದನಹರಾದ್ರಿಯುತಮಂ ಕಂಡಂ ೧೦೭

ಭೂತಳಮಧ್ಯಸ್ಥಿತಮುಂ
ಜ್ಯೋತಿರ್ಮಂಡಲಪರೀತಮುಂ ಗಗನವಿನಿ
ರ್ಧೌತಶಿಖಂಡಮುನಮರ
ವ್ರಾತಾಶ್ರಯಮುಮಂ ಸುಮೇರುಗಿರಿಯಂ ಕಂಡಂ ೧೦೮

---

[1] ಕಾಂತನನೊಸೆದಾಲೋಕಿಸುತುಂ (ಮೊಅ) [2] ಕಾಮಾಕೃತಿಯುಂ (ಮೊಅ)

ಉಶನನನಮರ್ತ್ಯಗುರುವಂ
ಪಿಶಾಚ ಗಂಧರ್ವ ಯಕ್ಷ ರಾಕ್ಷಸರಂ ದ್ವಾ
ದಶಮಾರ್ತಂಡರನೇಕಾ
ದಶರುದ್ರರನಷ್ಟವಸುಗಳಂ ನೆಱೆಕಂಡಂ ೧೦೯

ವಿವಿಧನದೀನಿವಹನುಮಂ
ವಿವಿಧಮಹಾರಣ್ಯತತಿಯುಮಂ ವಿವಿಧಮುನಿ
ಪ್ರವರರುಮಂ ವಿವಿಧಕ್ಷೇ
ತ್ರವರ್ಗಮುಮನಲ್ಲಿಗಲ್ಲಿಗಿಳೆಯೊಳ್ ಕಂಡಂ ೧೧೦

ನಿಖಿಳಜನಪದಮುಮಂ ನಗ
ರ ಖೇಡ ಖರ್ವಡ ಮಡಂಬ ನಿಗಮದ್ರೋಣಾ
ಮುಖ ಪತ್ತನಾಗ್ರಹಾರಾ
ದ್ಯಖಿಳಮಹಾಗ್ರಾಮಕೋಟಿಗಳುಮಂ ಕಂಡಂ ೧೧೧

ಗಣನಾತೀತಮಹಾಕ್ಷೌ
ಹಿಣೀಬಲಂಬೆರಸು ತಮ್ಮೊಳೋರೊರ್ವರ ಮೇ
ಲಣಿಯರಮೆತ್ತುವ ಮುತ್ತುವ
ಪೊಣರ್ವ ಕಱುತ್ತಿಱಿವನೇಕನೃಪರಂ ಕಂಡಂ ೧೧೨

ವ|| [1]ಅಂತನಂತ[1]ಭುವನಾಂತರಮಂ ತೊಟಲ್ದು ನೋಡಿ ವಿಸ್ಮಯಾಕ್ರಾಂತನಾಗಿ ದಾನವಲ್ಲಭನಿದೆಂತಹಿಶಯನಂ ಕಾಳಿಂದಿಯೊಳಿರ್ದನೆಂತಾತನುದರದೊಳಾಂ ಪೊಕ್ಕೆಂ ಅಲ್ಲಿ ಚತುರ್ದಶಭುವನಮಿರ್ದುದೆಂತೆಂತೀ ಸಮಸ್ತಭುವನಾಂತರಾಳಮನೊಂದೆ ಮುಹೂರ್ತ ದೊಳ್ ತೊಟಲ್ದೆನೆಂತೆನಗಿನಿತುಂ ಸಾಮರ್ಥ್ಯಮಾದುದಿನ್ನಾವುದು ಕೃತ್ಯಮೆಂದು ನಿಜಾಂತ ರಂಗದೊಳ್ ಚಿಂತಿಸುತಿರ್ಪಿನಂ, ಒರ್ಮೊದಲೆ ಪೊಱಮಟ್ಟು ಮುನ್ನಿನಂತೆ ಯಮುನಾಹ್ರದ ದೊಳಘಮರ್ಷಣಮಿರ್ದ ತೆಱನಾದುದುಮನಾ ಸಲಿಲಮಧ್ಯದಲ್ಲಿ ಶೇಷಾಹಿಶಯನನಾಗಿ ದೇವರೂಪಮನುಡುಗಿ ಕೃಷ್ಣನಿರ್ದುದುಮಂ ಕಂಡು ರಥದ ಮೇಲಿರ್ದ ಕೃಷ್ಣನೆತ್ತಬಂದ ನೆಂದು ನಿಳ್ಕಿಪೊಱಗಂ ನೋಡಿ ಪೂರ್ವಸ್ಥಿತಿಯಿಂ ರಥದ ಮೇಲಿತ್ತಲ್ ಕೃಷ್ಣನಿರ್ದುದಂ ಕಂಡು ಸಂತುಷ್ಟಮಾನಸನನುಷ್ಠಾನಮಂ ತೀರ್ಚಿ ಬಂದು ವಿಕಸಿತಮುಖಾರವಿಂದನಾಗಿ ಪೊಂದೇರಮೇಲಿರ್ದ ವಸುದೇವನಂದನರ್ಗೆ ಮುಕುಳಿತಾಂಜಲಿಯಾಗಿ

1 ಅನಂತರಂ (ಖ)

ಲಲಿತರಗಳೆ

ದೇವ ಸಾಕ್ಷಾತ್ಪರಬ್ರಹ್ಮಸ್ವರೂಪ ಜಯ
ದೇವ ನಿಜಮಹಿಮಚಕಿತಾಗಮಕಳಾಪ ಜಯ
ದೇವ ಯೋಗೀಶ್ವರಮನೋಗಮ್ಯಮಾನ ಜಯ
ದೇವ ಪುರುಷತ್ರಯಾಕಾರಪ್ರಧಾನ ಜಯ
ದೇವ ಜನನಸ್ಥಿತಿಪ್ರಳಯಮೌಘಹೇತು ಜಯ
ದೇವ ಭಕ್ತಾಘವನದವಧೂಮಕೇತು ಜಯ
ದೇವ ಚಂದ್ರಾರ್ಕಗಗನಾದ್ಯಷ್ಟಮೂರ್ತಿ ಜಯ
ದೇವ ಮಧುಕೈಟಭಪ್ರಳಯಸಮವರ್ತಿ ಜಯ
ದೇವ ನಿಜಕುಕ್ಷಿನಿಕ್ಷಿಪ್ತತ್ರಿಲೋಕ ಜಯ
ದೇವ ವಿನತಾಪ್ರಿಯತನೂಭವಪತಾಕ ಜಯ
ದೇವ ಶೇಷೋರಗವರಾನಲ್ಪತಲ್ಪ ಜಯ
ದೇವ ವಕ್ಷೋರುಚಿರಕೌಸ್ತುಭಾಕಲ್ಪ ಜಯ
ದೇವ ಚಂಪಕರುಚಿರಪೀತಪಟಲೀಲ ಜಯ
ದೇವ ಮಂಡಿತಮಕರಕುಂಡಲಕಪೋಲ ಜಯ
ದೇವ ವನಮಾಲಾಸ್ಫುರದ್ಬ್ರಹ್ಮಸೂತ್ರ ಜಯ
ದೇವ ನೀಲೋತ್ಪಲದಳಶ್ಯಾಮಗಾತ್ರ ಜಯ
ದೇವ ನಂದಕಗದಾಶಂಖಚಕ್ರಾಂಕ ಜಯ
ದೇವ ಲಕ್ಷ್ಮೀಲೋಚನೋತ್ಪಲಶಶಾಂಕ ಜಯ
ದೇವ ವಿಕಸಿತಪುಂಡರೀಕದಲನಯನ ಜಯ
ದೇವ ಪೀಯೂಷಪಾರಾವಾರಶಯನ ಜಯ
ದೇವ ಸತತಾನತ ಸಮಸ್ತಸುರಯೂಥ ಜಯ
ದೇವ ಸಂಸ್ತವಮುಖರ ಮುನಿಗಣಸನಾಥ ಜಯ
ದೇವ ಶುದ್ಧಸ್ಫಟಿಕಸಂಕಾಶವಿಮಳ ಜಯ
ದೇವ ವಾಕ್ಪತಿಭೃಂಗಯುತನಾಭಿಕಮಳ ಜಯ
ದೇವ ದಿವಿಜಾರ್ಥಕೃತ ವಿವಿಧಾವತಾರ ಜಯ
ದೇವ ಸಂಸಾರನಾಟಕಸೂತ್ರಧಾರ ಜಯ
ದೇವ ದುರ್ಧರತಮೋದೈತ್ಯಮದಹರಣ ಜಯ
ದೇವ ಸಮುದಗ್ರಮಂಥಾಚಲೋದ್ಧರಣ ಜಯ
ದೇವ ಸಂಹಾರಿತ ಹಿರಣ್ಯಾಕ್ಷವೀರ ಜಯ
ದೇವ ಸಂದಾರಿತ ಹಿರಣ್ಯಕಶರೀರ ಜಯ
ದೇವ ಬಲಿಬಂಧನೋಚ್ಛೃಂಖಲಾಕಾರ ಜಯ

ದೇವ ದಶಕಂಠಕಂಠದ್ರುಮಕುಠಾರ ಜಯ
ದೇವ ಹೈಹಯ ಬಾಹುಗಹನದವದಹನ ಜಯ
ದೇವ ದನುಜಾಹತ ಸುದರ್ಶನೋದ್ಯಮನ ಜಯ
ದೇವ ನುತದೇವಕೀಗರ್ಭಪ್ರಸೂತ ಜಯ
ದೇವ ಮಹಿಮಾಸ್ಪದ ಹಲಾಯುಧಸಮೇತ ಜಯ
ದೇವ ವಸುದೇವ ಹರ್ಷಾಂಬುನಿಧಿಚಂದ್ರ ಜಯ
ದೇವ ಯದುಕುಲ[1]ಮಹೋತ್ಪಲ ವಾಸರೇಂದ್ರ[1] ಜಯ
ದೇವ ನಂದಿತ ನಂದಗೋಪಪ್ರಮೋದ ಜಯ
ದೇವ ಶೈಶವಕೇಳಿತೋಷಿತ ಯಶೋದೆ ಜಯ
ದೇವ ಪರಿಪೀತಖಲಪೂತನಾಜೀವ ಜಯ
ದೇವ ವಿಘಟಿತಶಕಟಕುಟಿಲಪ್ರಭಾವ ಜಯ
*
[2]ದೇವ ನಿರ್ಮೂಲ ಯಮಳಾರ್ಜುನೋರ್ವೀಜ ಜಯ[2]
ದೇವ ಚಾಳಿತಕಾಳಿಯವ್ಯಾಳರಾಜ ಜಯ
ದೇವ ಧೇನುಕಮಾಂಸಹೃಷ್ಟರಣಭೂತ ಜಯ
ದೇವ ಕೇಶಿಪ್ರಾಣತುಷ್ಟರವಿಜಾತ ಜಯ
ದೇವ ವೃಷಭಾಕಾರದನುಜರವಿರಾಹು ಜಯ
ದೇವ ಗೋವರ್ಧನೋದ್ಧಾರಪಟುಬಾಹು ಜಯ
ದೇವ ಜಿತೋಗುಪ್ತಕಂಸವಧರೋಷ ಜಯ
ದೇವ ಹೇಳಾರಚಿತ ಗೋಪಾಲವೇಷ ಜಯ
ದೇವ ಸುಸ್ನಿಗ್ಧತರ ಬರ್ಹಾವತಂಸ ಜಯ
ದೇವ ಸಂತತವೇಣುವಾದ್ಯಪ್ರಶಂಸ ಜಯ
ದೇವ ಗೋಪಾಂಗನಾ [3]ಮಾನಸಮರಾಳ[3] ಜಯ
ದೇವ ಗೋಪಾಂಗನಾ ನಯನಝಷಜಾಳ ಜಯ
ದೇವ ಗೋಪಾಂಗನಾ ಸ್ತನತರಲಹಾರ ಜಯ
ದೇವ ಗೋಪಾಂಗನಾ ಮಣಿಕರ್ಣಪೂರ ಜಯ
ದೇವ ಗೋಪಾಂಗನಾ ಕನಕಕಟಿಸೂತ್ರ ಜಯ

---

1 ಪದ್ಮಿನೀವಾಸರೇಂದ್ರ (ಮೊಅ) 2 ದೇವ ಯಮಳಾರ್ಜುನವಿಶಾಪಕ ವಿನೋದಿ ಜಯ (ಖ) 3 ಹೃದ್ಯನ್ಮರಾಳ (ಕಖಗ)

* (ಖ) ಪುಸ್ತಕದಲ್ಲಿ—ದೇವದುರ್ವೃತ್ತವಾತಾಸುರವಿಘಾತಿ ಜಯ। ದೇವ ನಗದನುಜ ಸಂಹರಣವಿಕ್ರಮಣ ಜಯ। ದೇವ ಗೋಪಾಂಗನಾನಿತ್ಯೋತ್ಸವಾತ್ಮ ಜಯ। ದೇವಕಾರುಣ್ಯಾಬ್ಧಿ ಭಕ್ತಸಂಸಾರಿಜಯ। ಎಂದು ಅಧಿಕ ಪಾಠವಿದೆ.

ದೇವ ಗೋಪಾಂಗನಾ ಭುಜಮಕರಪತ್ರ ಜಯ
ದೇವ ಗೋಪಾಂಗನಾ ಮೃಗಮದಲಲಾಮ ಜಯ
ದೇವ ಗೋಪಾಂಗನಾಕಚಕುಸುಮದಾಮ ಜಯ
ದೇವ ನಿತ್ಯೋತ್ಸವದ ನಮಸ್ತೇ ನಮಸ್ತೇ ೧೧೩

ವ|| ಎಂದಭಿಷ್ಟುತಿಗೆಯ್ದು ಕೃತಕೃತ್ಯನಾಗಿ

ಮ|| ನಿಜಲೀಲಾಗತಿಯಿಂದೆ ಬರ್ಪುದು ಪೊೞಲ್ಗಾಂ ಪೋದಪೆಂ ಭೋಜಭೂ
ಭುಜನೆನ್ನಂ ಬರವಾರ್ಗುವೆಂದು ಸರಥಂ ಬೀೞ್ಕೊಂಡು ಪೋದಂ ಚಲ
ದ್ಧ್ವಜನಕ್ರೂರನನಂತರಂ ಕಿಱಿದುಬೇಗಂ ಕ್ರೀಡಿಸುತ್ತಿರ್ದನ
ಗ್ರಜಯುಕ್ತಂ ಮಧುರಾಪುರೋಪವನದೊಳ್ ಶ್ರೀದೇವಕೀನಂದನಂ ೧೧೪

ಇದು ಸಮಸ್ತ ಕಮಲಭವಾಂಡಮಾಲಾಘಟಿತಾರಘಟ್ಟಘಟನಾ
ಸ್ವತಂತ್ರನಿಜಸ್ವರೂಪನಿರೂಪಣಚಕಿತ ಸಕಲಾಮ್ನಾಯತಂತ್ರ
ಲಕ್ಷ್ಮೀಕಾಂತಶ್ರೀಪಾದಭಕ್ತಿಯುಕ್ತ ಸುಕವೀಂದ್ರರುದ್ರ
ಪ್ರಣೀತ ಶ್ರೀಜಗನ್ನಾಥವಿಜಯ ಮಹಾಪ್ರಬಂಧ
ದೊಳ್ ರಾಸಕೇಳಿ ಪುಂಗವಾಸುರಸಂಹ
ರಣ ಕೇಶಿಮಥನಾಕ್ರೂರದರ್ಶನ
ಯಮುನಾಹ್ರದವರ್ಣನಂ
ಪಂಚಮಾಶ್ವಾಸಂ

ಷಷ್ಠಾಶ್ವಾಸಂ

ಕಂ॥ ಶ್ರೀಕೃಷ್ಣಂ ಕಂಸಪುರಾ
ಲೋಕನಕೌತುಕರಸೋದಯಂ ವೀರರಸೋ
ದ್ರೇಕಕ್ಕೆಡೆಗುಡೆ ಬಲಖ
ರ್ವೀಕೃತನಾ ದೈತ್ಯಖಳನ ಪೊೞಲ್ಗೆಯ್ತಂದಂ ೧

ವ॥ ಅಂತು ಬಂದು ನಗರದ್ವಾರಮಂ ಪೊಗುವಲ್ಲಿ

ಮ॥ಸ್ರ॥ ವಿಪುಲೋದ್ಯತ್ಸ್ವರ್ಣಕೋಟಾಕಟಿಘನಪರಿಖಾಕಾಂಚಿ ತುಂಗಧ್ವಜಾಲೋ
ಲಪಟೀಸಂವ್ಯಾನೆ ದೇವಾಲಯಕಳಶಕುಚಾಭೋಗೆ ಸೌಧಾಂಶುಚಂದ್ರಾ
ತಪಹಾಸದ್ಯೋತೆ ನಾನಾಮಣಿಮಯವಿಲಸತ್ತೋರಣಸ್ಫಾರಹಾರೌ
ಘೆ ಪುರಶ್ರೀ ದೇವಕೀಪುತ್ರನ ಬಗೆಗೊಲವಂ ಬೀಱುತಿರ್ಪನ್ನವಾಗಳ್ ೨

ಕಂ॥ ಸುರಧನುಪುಂಜವಿದಾಯ್ತು
ಚ್ಚರಿ ದಲ್ ಕಾರ್ಮುಗಿಲ ಮೇಲೆನಲ್ಕೆ ವಿಚಿತ್ರಾಂ
ಬರಭಾರಂ ಬೆರಸಿದಿರೊಳ್
ಬರುತಿರ್ದಂ ರಂಗಕಾರನಸಿತಾಕಾರಂ ೩

ವ॥ ಅದಂ ಕಂಡು

ಕಂ॥ ಎಲವೆಲವೋ ರಜಕಾ ನಿ
ಲ್ಲೆಲೊ ಪೋದೊಡೆ ಕಂಸನಾಣೆ ಕಾರ್ಮುಕಮಹಮಂ
ಗಲದರ್ಶನಕ್ಕೆ ಕೈಗೆ
ಯ್ಯಲಪೇಕ್ಷಿಂ ಕುಡುವುದೆಮಗೆ ದಿವ್ಯಾಂಬರಮಂ ೪

ವ॥ ಎಂಬುದುಂ ರಂಗಕಾರಂ ನಿಜಾಂತರಂಗದೊಳ್ ಈ ಗೋಪಾಲ ಬಾಲಕರ್ ವಿವೇಕಶೂನ್ಯರೆಂದು ಮುಗುಳ್ನಗೆಯಂ ನಕ್ಕು

ಕಂ॥ ಪಟ್ಟಣದೊಳಿರ್ದಿರಲ್ಲಿರ್
ನೆಟ್ಟನೆ ನೀವಡವಿಯೊಳ್ ಮೃಗಂಗಳ ತೆಱದಿಂ
ಪುಟ್ಟಿದಿರಲ್ಲದೊಡೇಂ ಮತಿ
ಗೆಟ್ಟಿಱಿವಿರೆ ಕಂಸದೇವನುಡುವಂಬರಮಂ ೫

ಸಂಸಾರಸುಖಮನನುಪಮ
ಮಂ ಸುರಪಂ ಕಪ್ಪವಿತ್ತ ಮಡಿವರ್ಗಮನಾ
ಮಂ ಸುಭಟನುಡುವನವನೇಂ
ಕಂಸಂ ಪುಟ್ಟಿದ ಮುಹೂರ್ತದೊಳ್ ಪುಟ್ಟಿದನೇ ೬

ವ॥ ಎನೆ ವನರುಹಾಕ್ಷಂ ಕನಲ್ದು

ಕಂ॥ ದನುಜೇಂದ್ರನ ಮಡಿವರ್ಗಮ
ನೆನಗೀಯದೊಡೂರ ಸೀರೆಗಸಗಂ ಬಡಿವೆ
ತ್ತ್ರನೆನಿಪ್ಪ ಜನದ ನಾಟ್ನುಡಿ
ನಿನಗಾಗಲ್ಕಸಗಪೊಯ್ಲ ಸವಿಯಂ ತೋರ್ಪೆಂ ೭

ವ॥ ಎಂದು ಜಡಿದು ನುಡಿದು

ಕಂ॥ ಇರದೆಯ್ದಿ ರಂಗಕಾರನೊ
ಳುರವಣೆಯಿಂ ಕೊಂಡ ಮೌಲ್ಯಮೆನಿಸಿದ ನೀಲಾಂ
ಬರಮಂ ರಾಮಂಗಿತ್ತೆಸೆ
ದಿರೆ ಕೃಷ್ಣನನರ್ಘ್ಯಪೀತವಸನಮನುಟ್ಟಂ ೮

ಎಳವಿಸಿಲೆಳಸಿದ ನೀಳಾ
ಚಳಶಿಖರದೊಳಸಿತಮೇಘಮೆಳಸಿದ ತುಹಿನಾ
ಚಳಶಿಖರದೊಳೆಣೆಯೆನೆ ಹರಿ
ಬಳರೆಸೆದರ್ ಪೀತನೀಲಪಟಪರಿಧಾನರ್ ೯

ವ॥ ಅಂತು ಭುಜಬಲಾಡಂಬರದಿನಂಬರಂಗಳಂ ಕಳೆದುಕೊಳ್ಳುದುಂ ಅಂಬರಂಬರಂ ಸಿಡಿಲ್ದೆಟ್ಟಿ ದುರ್ಧರತರಕೋಪಾಟೋಪದಿಂ ಭಯಂಕರಾಕಾರನಾಗಿ ರಂಗಕಾರಂ ಸ್ವಕೀಯ ನಿಷ್ಠುರಭುಜಾಸ್ಫಾಲನದಿನೀ ಗೋಪಾಲ ಬಾಲಕರಂ [1]ಮಚ್ಚಿಸುವೆನೆಂದು[1] ತಕ್ಕುಮಿಕ್ಕು ಬರೆ

[1] ಮುಟಿಗ್ಗಿಸುವೆನೆಂಬ (ಕಗ)

ಮ॥ಸ್ರ॥ ತಲಸಜ್ಞಾಘಾತದಿಂ ಮರ್ದಿಸಿ ರಜಕನನಾತ್ಮಪ್ರವೇಶಕ್ಕಿದೇ ಮಂ
ಗಲಮೆಂಬಂತಾ ಪುರದ್ವಾರದೊಳಮನಡಗಿಂ[1] ಬುತ್ತಿಯಿಟ್ಟೆಲ್ವಿನಿಂ ಪೂ
ವಲಿಗೆಯ್ದಸ್ರಾಂಬುವಿಂ ಚಿಟ್ಟೆಜಿಂದು ಕರುಳಿನಿಂ ತೋರಣಂಗಟ್ಟಿ ಕೋಲಾ
ಹಲನಾದಂ ಪೆರ್ಚೆ ಪೊಕ್ಕಂ ದನುಜನ ಪೊಲಲಂ ಸಾಗ್ರಜನ್ಮಂ ಮುಕುಂದಂ ೧೦

ವ॥ ಆ ಸಮಯದೊಳ್

ಕಂ॥ ಅಂಬುಜದಳನೇತ್ರನ ಪೀ
ತಾಂಬರದೊಳ್ ಸೆಣಸಿ ಭೀತಿಯಿಂದೋಡಿದುದೀ
ಕೆಂಬಿಸಿಲೆನೆ ಪಡುನೇಸಲ
ಕೆಂಬಿಸಿಲೆಸೆದತ್ತು ಗಿರಿಕುಜಾಗ್ರಸ್ಥಳದೊಳ್ ೧೧

ವ॥ ಆಗಳಾ ಪೂವಿನ ಪೊೞ್ತಿನೊಳ್ ದೇವಕೀನಂದನಂ ಮಾಲೆಗಾಱಗೇರಿಯೊಳ್ ವಿಹಾರಿಸುತ್ತುಂ ಬರ್ಪಲ್ಲಿ

ಉ॥ ಉಟ್ಟ ನವಾಂಬರಕ್ಕಮರೆ ಪೂಡೊಡಮಂ ತುಡುವೊಂದು ಕೌತುಕಂ
ಪುಟ್ಟೆ ಮುರಾರಿಗೀಯಲರ ಕಂಪನೆ ಕಾಣಿಕೆಯಾಗಿ ಪೋಗಿ ನೀಂ
ಕೊಟ್ಟೊಡಗೊಂಡು ಬರ್ಪುದೆನುತುಂ ದನುಜೇಂದ್ರನ ಮಾಲೆಗಾಱನೊ
ಲ್ದಟ್ಟಿದ ದೂತನಂತಿದಿರೆಸಂದುದು ಪುಷ್ಪಸುಗಂಧಮಾರುತಂ ೧೨

ವ॥ ಅಂತು ಬಂದ ಮಂದಮಾರುತನ ಕಂಪುಮಂ ಮನದೆಕೊಂಡಾ ಮಾರುತನ ಸೌರಭ್ಯದ ಬೞಿವಿಡಿದು ಮಾಲಾಕಾರಪರಿವೃಢನ ಮಂದಿರಮಂ ಸಸಹೋದರಂ ದಾಮೋದರಂ ಪುಗುವುದುಮತಿಪ್ರಮೋದದಿಂದಿದಿರ್ವಂದು ನಿಜಮಂದಿರೋಚಿತವಿಷ್ಟರಂಗಳಂ ಕೊಟ್ಟು ಕುಳ್ಳಿರಿಸಿ

ಕಂ॥ ಆ ಪುಷ್ಪಲಾವಕಪ್ರಭು
ಗೋಪಾಲಕನಪ್ಪ ನಂದಸುತನಂ ಕಂಡು
ಶ್ರೀಪುರುಷೋತ್ತಮನೆಂದು ಮ
ಹಾಪರಮಪ್ರೀತಿಯಿಂ ನಿರೀಕ್ಷಿಸುತಿರ್ದಂ ೧೩

ಹರಿಯುಂ ಕಾಣ್ಬುದುಮಾದುದು
ಪರಮಜ್ಞತೆ ಪುಷ್ಪಲಾವಕಂಗಮಿದೊಂದ
ಚ್ಚರಿ ಕೃಷ್ಣನನುಗ್ರಹದಿಂ
ದೊರೆಕೊಳ್ಗುಂ ಝಡಿತಿಯಿಂದೆ ಪರಮಜ್ಞಾನಂ ೧೪

[1] ದ್ವಾರಮುನವನಡಗಿಂ (ಕಖಗ)

ಚಂ|| ಹರಿಯುಮುಸಂತೆ ರಾಮನುಮನೀಕ್ಷಿಸಿ ಮುಂ ಮೃದುವಸ್ತ್ರದಿಂದಿವರ್
ಪರಿವೃತರಾದರಿನ್ನೆಸೆವ ಪೂದೊಡವಂ ತುಡುಗೆಂದು ಜೆಚ್ಚರಂ
ವಿರಚಿಸಿದಂ ವಿಚಿತ್ರತರಮುಪ್ಪಲರ್ಚ್ಚಮನುನ್ಮದಾಳಿಯುಂ
ಹರಿಬಲಭದ್ರರೀಕ್ಷಣಮದಾಳಿಗಳೊಲ್ದೆಱಗುತ್ತುಮಿರ್ಪಿನಂ ೧೫

ವ|| ತದನಂತರಂ

ಕಂ|| ಮದನನ ಸುಗಂಧಭಂಡಾ
ರದ ಪುಟಿಕೆಗಳೆನಿಸಿ ಕಂಪು ಮಗಮಗಿಪಲರ್ವ
ಚ್ಚದ ಪಡಲಿಗೆಗಳನೊಟ್ಟೈ
ಸಿದನವನಚ್ಯುತನ ಮುಂದೆ ಮಾಲಾಕಾರಂ ೧೬

ವ|| ಅಂತು ಪೂವಿನ ಪಡಲಿಗೆಗಳಂ ಪಸರಿಸೆ, ಕೊಸಗಿನೆಸಳ ಕೇಸರಮಂ ತೊಡರ್ಚಿದ ತೋರಮಲ್ಲಿಗೆಯ ಮುಗುಳ್ಗಳಾರಂಗಳುಮಂ, ಸುರಹೊನ್ನೆಯ ಚೆನ್ನನಪ್ಪರಲನೊತ್ತರದೆ ಸುತ್ತಿ ತೆತ್ತಿಸಿದ ಕೈರವದ ಕರ್ಣಪೂರಂಗಳುಮಂ, ಎಡ್ಡಮಾದ ಪಡ್ಡಳಿಯ ಕಿಱುನನೆಯ ಕೊನೆ ತರಂಬಿಡಿದು ತೋಱಿ ಮೂಱುಂ ಧಾರೆಗಳಿನಳವಡಿಸಿದ ಕಿಂಕಿರಾತದೆಸಳ ಕಂಕಣಂಗಳುಮಂ, ಅಶೋಕೆಯ ಪಲ್ಲವಮಂ ನಡುವೆ ಕೀಲಿಸೆ ಲೀಲೆವಡೆದ ನಸುವಿರಿದ ಸೇವಂತಿಗೆಯ ಕೇಸಣದುಂಗುರಂಗಳುಮಂ, ಎಡೆಯೆಡೆಗೆ ಸಜ್ಜುಕಮೆನಿಸಿದ ಗೊಜ್ಜಗೆಯರಲ ಮಿಶ್ರದಿಸುಪಾಶ್ರಯಂಬಡೆದ ಹೇಮಂತಾಮರಸದ ಮೊಗ್ಗೆಯ ತೋಳ್ಗಟ್ಟುಗಳುಮಂ, ಒಂದೊಂದೆಡೆಯೊಳ್ ಬಂದುಗೆಯಲರಿನಂದಂಬೆತ್ತ ದಿಮುರ್ತ್ತೆಯ ನೆತ್ತಿವಂದಂಗಳುಮಂ, ಅಲ್ಲಲ್ಲಿಗೆ ಬೆರಸಿದ ಮರುಗದ ಕೋದ ಪಾದರಿಯ ಬಳಸಿದ ತುಳಸಿಯ ಸಂಪಾದಿಸಿದ ಸಂಪಗೆಯ ಕುಟ್ಮಳದಿನಿಟ್ಟೆಳಂಗಟ್ಟೆ ದಿಟ್ಟಿಗೆಸೆಯೆ ದಂಡೆಗಟ್ಟಿದ ಮಾಲತಿಯ ಮುಗುಳ ವನಮಾಲೆಗಳುಮಂ, ಬೇಱೆವೇಱೆ ನೋಡಿ ಪೊನ್ನ ರನ್ನದ ತೊಡವುಗಳ್ಗೆ ಕಂಪುಂ ಮೇಲ್ಪುಮಾದಂತೆ ಚೆಲ್ವಾದ ತೊಡವುಗಳೊಳಂ ನಿಜನಿಜಾಂಗರುಚಿಗೊಡಂಬಡುವ ಪೂದೊಡವಂ ತಾನುಮಗ್ರಜನುಮೆಸೆಯೆ ಪಸದನಂಗೆಯ್ದು ಮಾಲಾಕಾರನಂ ಕಾರುಣ್ಯದಿಂದೀಕ್ಷಿಸಿ

ಉ|| ಶ್ರೀ ನೆಲಸಿರ್ಕಖಂಡಿತಮೆನಲ್ ಪ್ರಿಯ ನಿನ್ನೊಳಮಂತೆ ನಿನ್ನ ಸಂ
ತಾನದೊಳಂ ಮನಂ ತಣಿಯೆ ನೀಂ ಸಿರಿಯೊಳ್ ನಲಿದಂತ್ಯದೊಳ್ ಸುಧಾಂ
ಭೋನಿಧಿತಳ್ಪನೊಳ್ [1]ನೆರೆವನಾಗೆನುತಂ[1] ಬರವಿತ್ತು ಮಾಲಿಕಂ
ಗಾ ನಳಿನೇಕ್ಷಣಂ ತಳರ್ದನುತ್ಸವದಿಂ ಬಱಿಯಂ ಬಳಾನ್ವಿತಂ ೧೭

---

1 ನೆರೆವೆಯಕ್ಕೆನುತಂ (ಕಖಗ)

ಕಂ॥ ಹರಿಬಲರಲ್ಲಿಂ ತಳರ್ದಾ
ದರದಿಂ ದೂಸಿಗರ ಕಂಚುಗಾಱರ ಬಳೆಗಾ
ಱರ ತಂಬುಲಿಗರ ಮಣಿಗಾ
ಱರ ಗಂದಿಗರಾವಣಂಗಳೊಳ್ ನಡೆತಂದರ್ ೧೮

ವ॥ ಅಂತು ನಡೆತಂದು ಗಟ್ಟಿವಳ್ತಿಯರ ಕೇರಿಯೊಳಗಣೆ ಬರ್ಪಲ್ಲಿ ಕಟ್ಟೆದಿರೊಳ್ ಕಳಧೌತದ ಕೊಳವಿಗೆಗಳೊಳಂ, ರೂಪ್ಯದ ಕುಪ್ಪಿಗಳೊಳಂ, ಪಳಿಕಿನ [1]ಪುಟಿಕೆಗಳೊಳಂ,[1] ಹರಿನೀಲದ ನಾಳಿಗಳೊಳಂ, ಮೌಕ್ತಿಕದ ಶುಕ್ತಿಕೆಗಳೊಳಂ, ಕೆಂಬರಲ ಸಂಬಳಿಗೆಗಳೊಳಂ, ಗರುಡೋದ್ಗಾರದ ಪಚ್ಚೆಯ ಕರಡಿಗೆಗಳೊಳಂ, ತೀವಿದೆನಿತಾನುಂ ತೆಱದ ಬಂಧುರ ಸುಗಂಧ ವಸ್ತುಸಂದೋಹಮಂ ಪಿಡಿದೊಡನೆ ಬರ್ಪ ಪರಿಚಾರಿಕಾನಿಕಾಯಂಬೆರಸು ಸಾಯಂಕಾಲ ಶೃಂಗಾರಸಮಯಮೆಂದು ಮಧುರಾಪುರಾಧೀಶ್ವರನಲ್ಲಿಗೆ ಪೋಪ ಬಗೆಯಿಂ ಕುಬ್ಜೆಯೆಂಬ ಸೈರಂಧ್ರಿ ನಡೆತರೆ

ಕಂ॥ ಅವಯವದ ವಿಕಟಚೇಷ್ಟೆಯ
[2]ನವವಯದಿಂ[2] ಮುಖವಿಲಾಸದಿಂ ಮೆಱೆಯಿಸುತಿ
ರ್ಪವಳಂ ವಕ್ರಾಂಗಿಯನಿಂ
ದುವಕ್ತ್ರೆಯಂ ಗಟ್ಟಿವಳ್ತಿಯಂ ಹರಿ ಕಂಡಂ ೧೯

ವ॥ ಅಂತು ಕಂಡು

ಚಂ॥ ವರಮುಖಿ ನಿನ್ನ ಕೈಗುಣದಿನಾದ ಸುಗಂಧವಿಲೇಪನಂಗಳೀ
ದೊರೆಯುವಿವಾರ್ಗೆ ಯೋಗ್ಯಮೆನೆ ಯೋಗ್ಯನೆ [3]ನೀನೆ ದಲಂತರಾತ್ಮನಂ[3]
ಬರೆ ತೆಗೆದಂಗ ಸೌಮ್ಯ ನಿನಗೆನ್ನಯ ಬಾಹ್ಯಸುಗಂಧವಸ್ತುವೇ
ನಱಿದೆ ನಿಜೇಚ್ಛೆಯಿಂ ಕಳೆದುಕೊಳ್ [4]ಮನಮೊಲ್ದ[4] ಸುಗಂಧವಸ್ತುವಂ ೨೦

ವ॥ ಎಂದು ಮುಂದಿರಿಸೆ

ಕಂ॥ ಬಳನ ರುಚಿ ಕೃಷ್ಣನೊಳ್ ಮಾ
ರ್ಪೊಳೆದುದೆನಲ್ ಕೃಷ್ಣನಂಗರುಚಿ ಬಳನೊಳ್ ಮಾ
ರ್ಪೊಳೆದುದೆನಲ್ ಕೃಷ್ಣ ಬಳರ್
ಮಳಯಜ ಮೃಗಮದ ಸುಗಂಧದಣ್ಪಿಂ ತಳೆದರ್ ೨೧

[1] ಲಳಿಗೆಗಳೊಳಂ (ಖ) [2] ನವಯುವದಿಂ (ಕ) [3] ನೀನೆನಲಂತರಾತ್ಮನಂ (ಕಗ)
[4] ಮನವೊಲ್ದು (ಕಗ)

ತರುಣತಮೋರುಚಿ [1]ಕುಮುದಾ
ಕರಮೊಳ್[1] ನವಚಂದ್ರಕಿರಣಮುತ್ಪಲವನದೊಳ್
ಪರಿಕಲಿಸಿದಂತೆ ಕತ್ತುರಿ
[2]ಸಿರಿಗಂಧಗಳಣ್ಪು[2] ರಾಮಕೃಷ್ಣರೊಳಸೆಗುಂ ೨೨

ವ॥ ಆಗಳ್

ಮ॥ಸ್ರ॥ ಉಪಮಾತೀತಾಂಗ ಪೋಪಂ ನಡೆ ತಡೆಯದೆ ಕೇಳೀನಿವಾಸಕ್ಕೆನುತ್ತಾ
ಟಿಪಳಂ ಕಂಡಿಂತುಟೊಂದಾಕೃತಿ ತನಗಿದು ಚೇತೋವಿಕಾರಂ ನಿಸರ್ಗಂ
ಚಪಳತ್ವಂ ಸ್ತ್ರೀಗೆನುತ್ತುಂ ಮನದೊಳೆ ದಯೆಯಿಂ ಕೃಷ್ಣನಂಗುಷ್ಠಮಂ ಮೆ
ಟ್ಟಿ ಪತಾಕಾಹಸ್ತದಿಂದಂ ನೆಗಪೆ ಮುಖಮನಾಕುಬ್ಜೆ ಸೌಮ್ಯಾಂಗಿಯಾದಳ್ ೨೩

ವ॥ ಅಲ್ಲಿಂ ಬಱಿಯಂ

ಕಂ॥ ಬೆಳಗಿದುದಲ್ಲಿಯ ಗಣಿಕಾ
ವಳಿಗಳ ಕಣ್ಬೆಳ್ಪ ಚಂದ್ರಿಕಾಚ್ಛಲದಿನೆನಲ್
ಬೆಳಗಿದುದು ವಿಮಲಚಂದ್ರಿಕೆ
ಬಲಕೃಷ್ಣರ್ ಸೂಳೆಗೇರಿವುಗುವವಸರದೊಳ್ ೨೪

ಬಿನದದಿನಂತಲ್ಲಿಯ ವರ
ವನಿತೆಯರಂ ಕೂಡೆ ನೋಡಿಯುಂ ನುಡಿಯಿಸಿಯುಂ
ನನೆಗಣೆಗೆಡೆಮಾಡಿಯುಮಿಂ
ತು ನಾಡೆಯುಂ ಪೊಱ್ತುಗಳೆದು ತದನಂತರದೊಳ್ ೨೫

ಮುರರಿಪುರಾಮರ್ ಸುಟಿದರ್
ಕರಿಶಿಕ್ಷಕರಶ್ವಶಿಕ್ಷಕರ ಜೋದರ ಮ
ಲ್ಲರ ಮಾವಂತರ ಮಂದುರಿ
ಗರ ನೆಗಱ್ದ ವಾಸವಾರಿಗಳ ಕೇರಿಗಳೊಳ್ ೨೬

ಕರಿಕಳಭಯುಗಮುರಣ್ಯಾಂ
ತರಮೊಳತಿಸ್ವೈರವೃತ್ತಿಯಿಂ ಚರಿಯಿಸುವಂ
ತಿರೆ ಮಧುರಾಪುರದೊಳ್ ಕೃ
ಷ್ಣರಾಮರುಚ್ಛೃಂಖಲಸ್ವಭಾವದೆ ಸುಟಿದರ್ ೨೭

---

[1] ಕಮಲಾಕರಮೊಳ್ (ಕಗ) [2] ಸಿರಿಗಂಪುಗಳಣ್ಪು (ಕಗ)

ವ|| ಅಂತು ಪೊಱಲಂ ಪೊಡೆ ತೊಱಲ್ದು ಯಾಮಿನೀಯಾಮತ್ರಯ ವಿರಾಮ ಸಮಯದೊಳ್ ಭೋಜರಾಜನ ರಾಜಮಂದಿರೋಪಕಂಠಪ್ರದೇಶಮನೆಯ್ದೆ ವಂದು

ಉ|| ಸಾಹಸಿಕಂ ಮುರಾರಿ ಪುಗುತಂದನಂತಯುತಂ ಧನುರ್ಮಹೋ
ತ್ಸಾಹಸಿರೀಕ್ಷಣೋತ್ಸುಕತೆಯಿಂ ಪರಿಘೂರ್ಣಿತ ಗೀತವಾದ್ಯಸಂ
ದೋಹಮನುನ್ನತಧ್ವಜಸಮೂಹಮ[1]ನಪ್ರಮಿತಾಂಗರಕ್ಷಕ[1]
ವ್ಯೂಹಮನುಗ್ರಯಾನಗಜವಾಹಮನಗ್ಗದಶಸ್ತ್ರಗೇಹಮಂ ೨೮

ವ|| ಅಂತು ಬಂದು ದೌವಾರಿಕಂ ನಿವಾರಿಪುದಂ ಕಂಡೋರ್ವ ಮಹಾಪ್ರತೀಹಾರನೀ ಗೋಪಾಲಬಾಲಕರಿನಪ್ಪುದೇಂ, ಇವರ್ ಪೋಗಿ ಅಱ್ತಿಯಿಂ ನೋಡುಗೆಂದೊಡಗೊಂಡೊಯ್ದು ಶಸ್ತ್ರಶಾಲೆಯುಂ ಪುಗಿಸಿ ಪೂಜಿಸಿರ್ದಾ ವಿವಿಧಾಸ್ತ್ರಂಗಳೊಳಿಮ್ಮರಸಂ ಕಂಸದೇವನೀಶಕ್ತಿಯುಂ ಶಕ್ರನನೀತೋಮರದಿಂ ಧೂಮಕೇತುವನೀಕೋದಂಡದಿಂ ದಂಡಧರನನೀಕೃಪಾಣದಿಂ ಕೌಣಪನನೀ ಪಾಶದಿಂ ಜಲೇಶನನೀಬಾಣದಿಂದೇಣವಾಹನನನೀ ಪರಶುವಿಂ ಗಿರಿಶಬಂಧುವನೀಶೂಲದಿಂ ನೀಲಲೋಹಿತನಂ ಗೆಲ್ದನೆಂದು ಬೇಱೆವೇಱೆ ಪೆಸರ್ವೆಸರೊಳ್ ತೋಱೆ

ಮ||ಸ್ರ|| ಅಮರೇಂದ್ರೋತ್ತುಂಗ ಮಾತಂಗದ ಬಿದುವಿನ ಮುಕ್ತಾವಳಿಯಿಂದಾದ ಮಂಜೂ
ಷಮಿದೀ ಮಂಜೂಷದೊಳ್ ಪೂಜಿಸಿ ದಿವಿಜಕುಜೋತ್ಫುಲ್ಲಪುಷ್ಪೌಘದಿಂ ಶೇ
ಷಮಹಾನಿರ್ಮೋಕದಿಂದಂ ಗವಸಣಿಸಿ ಸಮಂತಿರ್ಪುದೊಂದುಗ್ರಕೋದಂ
ಡಮದಾರ್ಗಂ ತೋಱಲುಂ ನೋಡಲುಮರಿದತುಳಂ ದುರ್ಧರಂ ದುಷ್ಪ್ರ
ಮೇಯಂ ೨೯

ಸೆಡೆಸಂ ನಾಗೇಂದ್ರನತ್ತಲ್ ಕೆೞಗಡೆ ಪೊಡೆವಳ್ ಧಾತ್ರಿ ಮೇಲಿತ್ತಲತ್ತಲ್
ನಡುವಿಂದ್ರಂ ವಹ್ನಿ ಧರ್ಮಂ ನಿರುತಿ ಜಲಧಿಪಂ ವಾಯು ವಿತ್ತೇಶನೀಶಂ
ನಡುಕಂಗೊಳ್ವಂ ಸುರುಳ್ವಂ ಸುಗಿವನಗಿವನುಳ್ಳೞ್ಕುವಂ ಬೞ್ಕುವಂ ಪಾ
ವಡರ್ದಂತಿರ್ಪಂ ಬೆಮರ್ವಂ ಜಯಿವೊಡೆದ ರವಕ್ಕದ್ಭುತಂ ಕಂಸಚಾಪಂ ೩೦

ಚಂ|| ಇದಱೊಳೆ ಗೆಲ್ದನೆಮ್ಮರಸನಿಂದ್ರನ[2]ನೆಂದೆನೆ ಕೇಳ್ದು[2]ಪೇಂದ್ರನು
ರ್ಬಿದ ಮುಳಿಸಿಂದೆ ಮಂದಸಿನ ಮುಚ್ಚುಳನುಂಗುಟದಿಂದ ಮೀಂಟಿ ಪೋ
ಗೊಡೆದೆಡಗೈಯೊಳೆತ್ತಿ ಧನುವಂ [3]ಪೆಡೆಯೇಱಿಸಿ ನೀಡ್ಚಿ ಕೋಟಿಯು
ಗ್ಗಡೊಳೆಱೆಯುಲ್ಕೆ[3] ತದ್ಬಲಕೆ ಸಾಲನೆ ತದ್ಧನು ಭಗ್ನಮಪ್ಪುದುಂ ೩೧

[1] ನಾಪ್ರಮಿತಾಂಗರಕ್ಷಣ (ಕಗ) ನಪ್ರಮಿತಾಂಗರಕ್ಷಣ (ಖ) ನಾಪ್ರಮಿತಾಂಗರಕ್ಷಕ (ಮೊಅ) [2] ನೆಂಬುದ ಕೇಳ್ದು (ಕಖಗ) ನೆಂಬುದುಗೇಳ್ದು (ಮೊಅ) [3] ನಿಮಿರ್ದೇಱಿಸಿ ನೀಡ್ಚಿ ಬಾಹುಯುಗ್ಮದೆ ತೆಗೆಯಲ್ಕೆ (ಕಖಗ)

ಮ॥ಸ್ರ॥ ದನುಜಾನೀಕಕ್ಕೆ ಕಾಂಡಪ್ರಳಯಘನರವಂ ಕ್ರುದ್ಧ ಕಾಲಾಂತಕಕ್ಷ್ವೇ
ಡನಿನಾದಂ ಮೃತ್ಯುದೇವೀಕಹಕಹಹಸನಧ್ವಾನಮೆಂಬನ್ನೆಗಂ ಕೃ
ಷ್ಣನಿನಾ ಕೋದಂಡಭಂಗಧ್ವನಿ ನೆಗೞ್ದುದು ಶಯ್ಯಾತಳಾಗ್ರೋಚ್ಚಲತ್ಕಂ
ಸನಿಶಾಟಂ ನಿರ್ಭರಾಸ್ಫಾಲಿತ ಕುಲಗಿರಿಕೂಟಂ ಸ್ಫುಟದ್ದಿಕ್ಕವಾಟಂ ೬೨

ಮ॥ ಕಿಸುರಂ ಮಾರ್ಪೊಡೆ ಬರ್ಕೆ ಕಾಪಿನವರೆಂದಬ್ಜಾಕ್ಷನಂತಂತೆ ನಾ
ಲ್ದೆಸೆಯಂ ನೋೞ್ಪುದುಮಂತೆ ಮುನ್ನಮೆ ತದುಗ್ರಧ್ವಾನದಿಂದಂಗರ
ಕ್ಷಸಮೂಹಂ ದೆಸೆಗೆಟ್ಟು ಯಾನಗಜವಾಜಿಶ್ರೇಣಿ ಬೆಂಗೊಟ್ಟು ಪೋ
ಯ್ತು ಸುಹೃದ್ವೀರರೊಳೆಲ್ಲಿ ಮಾರ್ಪೊಡೆವರಾ ಪ್ರಸ್ತಾವದೊಳ್ ಕೃಷ್ಣನಂ ೬೩

ವ॥ ಅನ್ನೆಗಮತ್ತಲ್

ಮ॥ ಸಮಮುಲ್ತಗ್ಗದ ಶಾರ್ಙ್ಗಮುಗ್ಗದ ಪಿನಾಕಂ ಬಲ್ಪಿನಿಂದೆಂಬ ಚಾ
ಪಮನೀಬಾಲಕನೆಂತು ಮೆಯ್ಸೆಡೆಯದೆಂತಲ್ಲಾಡದೆಂತಕ್ಕದ
ಶ್ರಮದಿಂ ಖಂಡಿಸಿದಂ ಮಹಾದ್ಭುತಮಿದೆಂತಪ್ಪಣ್ಮೆನೆಂತಪ್ಪದ
ರ್ಪಮಿದೆಂತಪ್ಪಳವೆಂದು ಕಂಸನತಿಚಿಂತಾಕ್ರಾಂತನಾಗಿರ್ಪುದುಂ ೬೪

ಕಂ॥ ಪೊಡೆಮಟ್ಟು ಮಹಾಮಾತ್ಯಂ
ನುಡಿದಂ ಕೇಳಾಳ್ದ ನಿನ್ನಪಗೆಯಂ ಬಗೆದುಂ
ತಡೆಯದೆ ತೀರ್ಚುಗುಮಿಭದೊಳ್
ಕಡುಗಲಿ ತಾನೆನಿಪ ಕುವಲಯಾಪೀಡೇಭಂ ೬೫

ವ॥ ಆದೆಂತೆಂದೊಡೆ ವಿಂಧ್ಯಭೂಭೃದಾಯಾಮದೊಳಂ ಮಹಾವರಾಹಪರಿಣಾಹದೊಳಂ ಮೇರುಭೂಧರೋತ್ಸೇಧದೊಳಂ ಐರಾವತಪ್ರಭಾವದೊಳಂ ಕ್ಷಯಾಶುಶುಕ್ಷಣಿಕ್ಷೇಪದೊಳಂ ಪ್ರಳಯಜಲಧರಧ್ವಾನದೊಳಂ ಸಂಹಾರಭೈರವಾರ್ಭಟಿಯೊಳಂ ತಾರ್ಕ್ಷ್ಯವಿಕ್ಷೇಪದೊಳಂ ಸಿಂಹಲಂಘನದೊಳಂ ಪವನವೇಗದೊಳಮಗುರ್ವುಮದ್ಭುತಮುಮೆನಿಸಿ

ಚಂ॥ ಅದು ಪಱಿಯಿತ್ತೆ ಮುಟ್ಟಿದುದು ಮುಟ್ಟಿತೆ ಪೊಯ್ದುದು ಪೊಯ್ದುದೇ ಪೊರ
ಳ್ಚಿದುದು ಪೊರಳ್ಚಿತೇ ನಖರದಿಂದಿಱಿಯಿತ್ತಿಱಿಯಿತ್ತೆ ಪೋ ಕಟ
ಲ್ಚಿದುದು ಕಟಲ್ಚಿತೇ ಪದದಿನಿಟ್ಟೊರಸಿತ್ತೊರಸಿತ್ತೆ ಕೊಂದುದೆಂ
ಬುದನಱಿ ವೈರಿಯಂ ದನುಜ ಕೇವಳಮಲ್ತು ಮದೀಯಸಿಂಧುರಂ ೬೬

ಚಂ|| ಬವರಮನಪ್ಪುಕೆಯ್ದು ಪಗೆ ಕಣ್ಬೊಲದೊಳ್ ನಿಲೆ ಕಂಡು ಕಾಯ್ದು ವೇ
ದನ ಮುಳಿಸಟ್ಟೆ ಮುಟ್ಟುವ ಜನಂ ಕಿಡೆ ಪೊಯ್ವ ಬಲಂ ಪೊರಳ್ಚಿ ಕ
ಟ್ಟುವ ಕಡುಪೊತ್ತುವುರ್ಬು ಮೊಗಮಿಕ್ಕುವ ರೌದ್ರತೆ ಕೊಂದುಕೋಡೊಳಿ
ತ್ತುವ ಚಲಮೊಪ್ಪೆ ಭಾಸಿಸುಗುಮೆನ್ನ ಮದದ್ವಿರದಂ ಸುರದ್ವಿಷಾ ೩೭

ವ|| ಎಂದು ಬಿನ್ನಪಂಗೆಯ್ದು ಮನದ ವಿಷಾದಮಂ ಕಳೆದ ನಿಶಾಟಂಗತ್ಯಂತ ಸಂತುಷ್ಟಿಯಿಂದಂಗಚಿತ್ರಮನಿತ್ತು ಎಲೆ ಮಹಾಮಾತ್ಯ ಶತಪತ್ರ ಮಿತ್ರೋದಯಸಮಯದೊಳ್ ಕುವಲಯಾಪೀಡಗಜಾರೂಢನಾಗಿ ಮಲ್ಲರಂಗದ್ವಾರದೊಳ್ ನಿಂದು ನೀನಾ ಕುಹಕ ಬಾಲಕರಂ ಕಾಲಮುಖದ್ವಾರಮಂ ಪುಗಿಸು ಪೋಗಾ ಮಹಾಸಾಮಜೇಂದ್ರದೊಳಂ ಮಾಱಾಂತು ಮೀಱಿ ಬಂದನಪ್ಪೊಡವಂದಿರಂ ಮಲ್ಲಯುದ್ಧದಿಂ ಮುಱಿದು ಕೊಲಿಸುವೆನೆಂದನಂತರಂ ಗೃಹಮಹತ್ತರನಂ ಕರೆದು ಮಲ್ಲರಂಗಪ್ರದೇಶಮಂ ಮಂಗಳದ್ರವ್ಯಪರಿಕರಂಗಳಿಂದಲಂಕರಿಸುವುದೆಂದು ಬೆಸಸುವುದುಂ

ಚಂ|| ತ್ರಿದಶವಿರೋಧಿಗೂರ್ಧ್ವಗತಿದೋಱುವವೋಲ್ ಮಣಿರಮ್ಯಹರ್ಮ್ಯಕೂ
ಟದೊಳೆಸೆದತ್ತು ಚೀನವಸನಧ್ವಜಸಂತತಿ ತದ್ಧ್ವಜಪ್ರಹಾ
ರದೆ ನೊರೆವಿಂಡದೊಂದು ಗಗನಾಪಗೆಯಿಂ ಪಿಡಿಲ್ದತ್ತದಸ್ತ್ರಶೈ
ಲದ ಶಿಖರಕ್ಕೆನಲ್ಕೆ ವಿಧುವಸ್ತ್ರನಗೇಂದ್ರಮನಾಗಳೆಯ್ದಿದಂ ೩೮

ಮ|| ಇದಮೋಘಂ ಪೊಱಗಿರ್ಪ ಚಂದ್ರಿಕೆ ವಿತಾನವ್ಯಾಜದಿಂ ಪೊಕ್ಕುದೀ
ಸದನಾಭ್ಯಂತರಮಂ ಮಹಾದ್ಭುತಮಿದೆಂಬೊಂದಂದದಿಂದತ್ತ ಪೋ
ದುದು ಚಂದ್ರಾತಪಮಿತ್ತ ಪಾಂಡುರವಿತಾನಶ್ರೇಣಿಯುಂ ಮಲ್ಲರಂ
ಗದ ಸುತ್ತುಂ ನೆಲಸಿತ್ತು ತೋರ್ಪ ಪಱಿಗಳ್ ಜಿಲ್ಪಾದುವಾಜೀಗದೊಳ್ ೩೯

ಕಂ|| ಸುರವೈರಿಯ ವಧದಿನದೊಳ್
ಧರೆಗುದಿರ್ದುವು ತಾರಕಂಗಳೆನೆ ಪೂವಲಿ ಭಾ
ಸುರಮಾಯ್ತು ಮಲ್ಲರಂಗದೊ
ಳಿರದುಡುಗಿದುವಭ್ರರಂಗದೊಳ್ ತಾರಗೆಗಳ್ ೪೦

ದನುಸುತವಿನಾಶಸೂಚನ
ವೆನಲಿರುಳೊಗೆದಿಂದ್ರಧನುವೆ ಪೋಗದೆ ನಿಂದ
ತ್ತೆನೆ ಪಂಚರತ್ನಮಯಮಂ
ದನಮಾಲಿಕೆ ಮಲ್ಲಗಳದ ಬಾಗಿಲೊಳೆಸೆಗುಂ ೪೧

ವ|| ಆ ಸಮಯದೊಳ್

ಕಂ|| ಕರಶೀಕರಪರಿಕರಮಂ
ಕರಿರಾಜಂ ತಾಳ್ದುಮಂತೆ ಧರಿಯಿಸಿ ಮುಕ್ತಾ
ಭರಣಪರಂಪರೆಯಂ ಭೋ
ಜರಾಜನಾ ಮಲ್ಲರಂಗದೆಡೆಯೊಳ್ ನಿಂದಂ ೪೨

ವ|| ಅಂತು ನಿಂದು

ಕಂ|| ಪರಿದೆಯ್ದುಲುಮಡರ್ದೇಱಲು
ಮರಿದೆನೆ ನೀಟಱ್ದೊಂದು ಕಂಬದಗ್ರದೊಳಿರ್ದಾ
ಕರುಮೂಡಮನೇಱಿ ನಿಶಾ
ಚರನಿರ್ದಂ ಧವಳಲೋಲಚಾಮರಯುಗಳಂ ೪೩

ಮ|| ಮಣಿಕಾಂಚೀಮಣಿ ಪಾರಿಹಾರ್ಯಮಣಿ ಮಂಜೀರಸ್ವನಂ ಪೊಣ್ಮಲೀ
ಕ್ಷಣಕಾಂತಿ ಸ್ಮಿತಕಾಂತಿ ಮಂಗಳವಿಭೂಷಾಕಾಂತಿ ತಳ್ಪೊಯ್ಯೆ ತತ್
ಕ್ಷಣಮಂತಾಕ್ಷಣದಾವನೀಕ್ಷಣಸುಖಂ ಕೈಗಣ್ಮೆ ನಿಶ್ರೇಣಿಯಿಂ
ಗಣಿಕಾಶ್ರೇಣಿಯುಮೇಱಿ ನಿಂದುದು ತಮಂಗಶ್ರೇಣಿಯಂ ಲೀಲೆಯಿಂ ೪೪

ಮೃಗಭೂಕುಂಕುಮಚಂದನದ್ರವವಿಲೇಪಂ ನೂತನಾನರ್ಘ್ಯರ
ತ್ನಗಣಾಲಂಕರಣಂ ವಿಚಿತ್ರವಸನಂ ಚೆಲ್ವಾಗೆ ದೇವೇಂದ್ರಲೀ
ಲೆಗಳಿಂ ಕ್ಷತ್ರಿಯಪುತ್ರಮಂಡಳಿಕದಂಡಾಧೀಶಸಾಮಂತಕೋ
ಟಿಗಳಂದೇಱಿ ತಮಂಗಕೋಟಿಗಳ ಕೂಟವ್ರಾತದೊಳ್ ರಂಜಿಕುಂ ೪೫

ವ|| ಅನಂತರಂ

ಮ||ಸ್ರ|| ಇಳೆಯಂ ಪಾತಾಳಮೂಲಕ್ಕಿೞಿಪುವ ಕಡಲಂ ಪೀರ್ವ [1]ಗೋತ್ರಾದ್ರಿಯುಂ[1] ಕೀ
ೞ್ವಿಳವಿಂ ದಂಷ್ಟ್ರಾಕರಾಳಭ್ರುಕುಟಿಕುಟಿಲರುಜ್ಜೃಂಭಿತತಾಮ್ರನೇತ್ರರ್
ಜಳವಾಹಶ್ಯಾಮದೇಹರ್ ಸಮುಚಿತಯತಿತೂರ್ಯಸ್ವನರ್ ಬಂದು ರಂಗ
ಸ್ಥಳದೊಳ್ ನಿಂದರ್ ಭುಜಾಸ್ಫಾಲನರುಚಿಮಿಗೆ ಚಾಣೂರಮುಖ್ಯಾದಿಮಲ್ಲರ್ ೪೬

ವ|| ಆಗಳ್

ಮ||ಸ್ರ|| ಮಣಿಮನ್ನಕ್ಷತ್ರಮಾಲಾರುಚಿನಿಚಯಮುರುಚ್ಛಾಪದಿಂ ಪ್ರಸ್ಫುರದ್ಬೃಂ
ಹಣವಜ್ರಧ್ವಾನದಿಂದಂಕುಶಕಿರಣಶಟಿಜ್ಜಾಲದಿಂ ದಾನಧಾರಾ
ರುಣಧಾರಾವರ್ಷದಿಂ ಕಾರ್ಮುಗಿಲೆ ಗಜದ ರೂಪಾದುದೆಂಬಂತಿಭೇಂದ್ರಂ
ರಣರಂಗದ್ವಾರದೊಳ್ ನಿಂದುದು ಮದಭರದೊಳ್ ಬಳ್ಕಿ ತತ್‌ಕ್ಷೋಣಿಚಕ್ರಂ ೪೭

[1] ಗೋತ್ರಾಳಿಯುಂ (ಖ)

ವ॥ ಅನ್ನೆಗವಿತ್ತಲ್

ಚಂ॥ ಅಮರವಿರೋಧಿಯಂ ಮಡಿಪಲಾಂ ಬರವೇೞ್ಪುದೊ ಕೃಷ್ಣ ಪೇೞ್ ತ್ವದ
ಪ್ರಮಿತತರಪ್ರಹಾರನದೆ ಸಾಲ್ಗು ಮೊ ನೀಂ ಬೆಸಸೆಂದು ಯಕ್ಷಕ
ರ್ದಮರಸಚರ್ಚೆಯಿಂ ಕಪಿಶಮಾದ ಸುದರ್ಶನಮೆಂಬ ಚಕ್ರರ
ತ್ನಮೆ ತಲೆದೋಱುವಂತುದಯದೊಳ್ ಬಗೆಗೊಂಡುದು ಭಾನುಮಂಡಲಂ ೪೮

ವ॥ ಆಗಳೇಕಕುಂಡಲಸತ್ತಲಾ ಭಾನುಮಂಡಲಮುಮನಿತ್ತಲೀ ಕುವಲಯಾ
ಪೀಡವೇತಂಡಮುಮನೊಡನೊಡನೆ ಕಂಡು

ಕಂ॥ ಈ ಭಾನುಬಿಂಬಮಂ ಲೀ
ಲಾಭಸ್ತ್ರಿಕೆಯೆಂದು ಪೊಯ್ವವೊಲ್ ನಿಳ್ಕಿಪ ಹ
ಸ್ತಾಭೋಗದಿನೆಸೆದತ್ತಚ
ಲಾಭಂ ತಾನೆನಿಪ ಕುವಲಯಾಪೀಡೇಭಂ ೪೯

ಮ॥ ಶತಪತ್ರಾಂಬಕ ನೋಡು ರೌದ್ರರಸಕುಂಭಂ ಕುಂಭಮುಜ್ಜೃಂಭಿತಾ
ಪ್ರತಿಮಾನಂ ಪ್ರತಿಮಾನಮುಗ್ರಕರವಾಲಂ ವಾಲಮುದ್ಯತ್ಸದಾ
ಗತಿವೇಗಂ ಗತಿವೇಗಮೆಂದೆನಿಸಿ ನಾಗಾರಿಚ್ಛದಾಕಾರದಿಂ
ಶ್ರುತಿಗಳ್ ವಿಶ್ರುತಿ ಮಾಱಿ ಬೀಱುವಪುದೀ ಸ್ತಂಬೇರಮಂ ಬೀರಮಂ ೫೦

ವ॥ ಎಂದು ನಿಜಾನುಜಂಗೆ ತೋಱಿ ಸಗರ್ವಾವಲೋಕನನಾ ಕುವಲಯಾಪೀಡ
ಗಜಮಂ ಕಂಡು ಗಜಾಸುರನಂ ಕಂಡ ಖಂಡಪರಶುವಿನಂತುದ್ಭಟಾರಭಟಿಯಿಂದಾರ್ದು
ಭೈಭೈಕಾರದೆಂಪಾದ್ವಿರದದಿದಿರಂ ನಡೆಯೆ

ಕಂ॥ ದಿತಿಜಾರಿಯ ಭೈಕೃತದೊಡ
ನೆ ತಗುಳ್ದುಣ್ಮಿದುದು [1]ಕೆರಳ್ದ ಭೇಂದ್ರದ[1] ಗಳಬೃಂ
ಹಿತಮುಂ ಮದಧಾರಾರ್ಷಾ
ತ್ಕೃತಮುಂ ಮದಗಂಧವಿಚಲದಳಿಝಂಕೃತಮುಂ ೫೧

ವ॥ ಆ ಪ್ರಸ್ತಾವದೊಳ್

ಮ॥ಸ್ರ॥ ಅಱಿಯಟ್ಟಿತ್ತಟ್ಟಿ ಮುಟ್ಟಿತ್ತಡಿಸಿ ಪಿಡಿದುದಿಕ್ಕಿತ್ತು ಮೆಟ್ಟಿತ್ತದೌಂಕಿ
ತ್ತೆಱಗಿತ್ತೆತ್ತಿತ್ತಿಭಂ ಕೃಷ್ಣನನೆನುತಮರರ್ ಬೆರ್ಚೆ ಗೋಪಾಲಕರ್ ಬೆ
ಳ್ಕುಱೆ ದೈತ್ಯರ್ ಪೊಂಗೆ ಕೃಷ್ಣಂ ರಿಪುಕರಿಗಿನಿಸಂ ಗೆಲ್ಲವೀವಂತೆ ಪೋರ್ದಂ
ಕಿಱುದಾನುಂ ಬೇಗದಿಂದಚ್ಯುತನ ತೆಱದಿನಾವಂ ವಿನೋದ್ಪೈಕಶೀಲಂ ೫೨

[1] ಕಳರ್ದಿಭೇಂದ್ರದ (ಕಗ)

ಕಂ॥ ಸ್ತಂಬೇರಮದೊಳ್ ಪೊಣರ್ದಂ
ಕೊಂಬಿನ ವಾಲಧಿಯ ಕರದ ಪರಪೆಣ್ಪತ್ತೆಂ
ಬೆಂಬ ಪಥಕ್ಕೆಡೆಗುಡುತುಮ
ನಂ ಒಂಚಿಸುತುಂ ಸಮಾನಬಲನೆನೆ ಕೃಷ್ಣಂ ೫೩

ವ॥ ಅಂತು ಪೊಣರ್ದು

ಮ॥ ಹರಿ ಸೋಲ್ತಂ ಕರಿಗೆಂಬಿನಂ ಬವರದಿಂ ಗೆಲ್ವಂತೆ ಪೋರ್ದಾನೆಗಂ
ಹರಿಗಂ ನೋಡೆ ಸಮಾನವೆಂಬಿನೆಗಮುಂತೊಂದೊಪ್ಪದಿಂ ಪೋರ್ದನಂ
ತರನೋಪೋ ಹರಿ ಗೆಲ್ದನೀ ಗಜಮನೆಂದಿಂದ್ರಾದಿಗಳ್ ಕೀರ್ತಿಸು
ತ್ತಿರೆ ಮೇಲ್ವೊಯ್ತನೊಳಂದು ತೋಱಿ ಮೆಱೆದಂ ಕೃಷ್ಣಂ ಬಲಾಟೋಪಮಂ ೫೪

ವ॥ ಅಲ್ಲಿಂ ಬೞಿಯಂ

ಮ॥ಸ್ರ॥ ರದನಾಗ್ರದ್ವಂದ್ವಮಂ ಕೈದುಡುಕಿ ಪಿಡಿದುರೋಭಾಗಮಂ ಪಾದದಿಂ ಪೋ
ಗೊದೆಯುತ್ತುಂ ಕೋಟ್ಕಿಳಂ ಚಿಕ್ಕನೆ ಕಿೞ್ತ ರದನದ್ವಂದ್ವಮೆಂಬೀ ಗದಾದಂ
ಡದಿನುರ್ಚಿಡಾಡಿದಂ ಪೋಗವಸಣಿಗೆಯನೀ ಕೃಷ್ಣನೆಂಬಂತುರುಳ್ದಿ
ರ್ದುದನುಗ್ರೇಭೇಂದ್ರಮಂ ತದ್ರದನಯುಗಳದಿಂ ಮೋದಿ ಕೊಂದಂ ಮುಕುಂದಂ ೫೫

ವ॥ ಆಗಳಾ ಗಜದ ಪೋರ್ಕುೞಿಯಿನವಯವದೊಳಲ್ಲಲ್ಲಿಗಳವಟ್ಟ ರದನವಿಘಟ್ಟನ ರೇಖಾನಿಕಾಯಮುಂ ಮೇಳಂಗೊಂಡ ಕುಂಭಸ್ಥಲದ ಸಾಂದ್ರಸಿಂದೂರರೇಣುಪ್ರಸರಮುಂ ಪಗಿಲ್ತಿರ್ದ ಕಲಿಲಮದಸಲಿಲಮುಂ ಸಿಂಪಿಸಿರ್ದ ದಂತೋತ್ಪಾಟನೋಚ್ಛಲದರುಣಬಿಂದು ಸಂದೋಹಮುಂ ವಿರಳಮಾದ ಸಿರಿಗಂದದಣ್ಪಂ ನಸುಮಱೆಯಾದ ಪೂದುಡುಗೆಯುಂ ಬೇಱೊಂದು ಚೆಲ್ವನಪ್ಪೈಸಿ ವೀರರಸಕ್ಕಾಗರಮಾಗೆ ತಾನುಮಗ್ರಜನುಂ ರದನದಂಡಮಂ ಭುಜಾದಂಡದೊಳಮರೆ ಪಿಡಿದು ನಡೆಗೊಂಡು

ಮ॥ ಪ್ರತಿಮಲ್ಲರ್ ಗಿರಿಕಲ್ಪನೆಂದಿತರರೆಲ್ಲರ್ ಬಾಲನೆಂದಂಗನಾ
ತತಿ ಪುಷ್ಪಾಯುಧನೆಂದು ಗೋಪನಿವಹಂ ಸಾಮಾನ್ಯನೆಂದಾಕುಲಾ
ಕೃತಿ ಕಂಸಂ ಲಯಕಾಲನೆಂದು ದಿವಿಜರ್ ವಿಶ್ವಾತ್ಮನೆಂದೀಕ್ಷಿಸಲ್
ದಿತಿಜಾರಾತಿ ವಿಚಿತ್ರಮೂರ್ತಿ ಪುಗುತಂದಂ ಮಲ್ಲರಂಗಾಗ್ರಮಂ ೫೬

ವ॥ ಅಂತು ಪೊಕ್ಕು ಸಕಲಜ್ಞಂ ಗಜೋನ್ಮೀಲನದಿಂ ನಿರೀಕ್ಷಿಸಿ

ಮ॥ ನೆರೆದುಚ್ಚಸ್ಥಳದೊಳ್ ಜನಂಗಳಿರೆ ನೀಚಸ್ಥಾನದೊಳ್ ಭೀತಿಯಿಂ
ಕೊರಗಿರ್ದಾ ವಸುದೇವದೇವಕಿಗಳಂ ಕಂಡಬ್ಜನೇತ್ರಂ ನಿಜಾಂ
ತರದೊಳ್ ಪೂಣ್ದನವೊಂದನೀ ರಿಪುವನುಚ್ಚಸ್ಥಾನದಿಂದಿಕ್ಕುವೆಂ
ಧರೆಗಿಂದೀಗಳ್ ಮಾೞ್ಪೆನುನ್ನತಿಯನೀತಾತಂಗಮಾ ಮಾತೆಗಂ ೫೭

ವ॥ ಆಗಳಾ ವಿಜಯತೇಜೋವಿಭವಸುಭಗರಪ್ಪ ನಿಜತನೂಭವರೊಳ್ ದೇವಕೀ ದೇವಿಗಪೂರ್ವದರ್ಶನಮಾಗೆ

ಮ॥ ಪರಿದಾಲಿಂಗಿಸುವೆತ್ತಿಕೊಳ್ವ ಬಗೆ ಪುಟ್ಟಲ್ ಪುಟ್ಟಿದೌತ್ಸುಕ್ಯದಿಂ
ತೊರೆವನ್ನಂ ಕುಚಯುಗ್ಮದಿಂದೆ ಸುತರಂ ಪೆತ್ತಂದದಿಂ ಪೆತ್ತಳಾ
ದರನುಂ ಕಾಣ್ಬುದುಮಂದಪತ್ಯರನಶೇಷಸ್ತುತ್ಯರಂ ಸೇವ್ಯಸ
ತ್ಯರನಸ್ತಾಖಿಲದೈತ್ಯರಂ ಯದುಕುಲಾಬ್ಜಾದಿತ್ಯರಂ ನಿತ್ಯರಂ ೫೮

ವ॥ ಅನ್ನೆಗಂ ಮಲ್ಲರಂಗಕ್ಕವತರಿಸಿ ನಿಂದು ವಸುದೇವನಂದನರ್ ಕರುಮಾಡದ ಮೇಲಿರ್ದಾ ಭೋಜರಾಜನನುತ್ತಾನಿತಾನನಾಂಭೋಜರ್ ಉಪಾಲಂಭಸಂಭಾಷಣಸ್ಮಿತ ಚತುರರುಮಾಗಿ ನೋಡಿ

ಕಂ॥ ಗರುಡಂಗವೆಯ್ದಲರಿದೆನೆ
ಕರುಮಾಡವಿದುದ್ಧಮಾದುದೇಕಸ್ತಂಭೋ
ಪರಿನಿರ್ಮಿತಮಿದ[1]ನೆಮ್ಮ
ನ್ನರ[1] ದಿಟ್ಟಿಗಳೆಯ್ದವೆಂತು ಬಣ್ಣಿಪೆವರಸಾ ೫೯

ಉ॥ ಪೂತನೆ ನಂಜನೂಡೆ ಶಕಟಂ ಪರಿದೊತ್ತೆ ಖರಂ ಖುರಾಗ್ರದಿಂ
ಘಾತಿಸೆ ಪುಂಗವಂ ಮಲೆದು ಮಾರ್ಕೊಳೆ ಕೇಶಿ ಕಡಂಗಿ ನುಂಗೆ ಮು
ನ್ನಾತೆಜದಿಂದೆ ಪಿಂಗಿದುವು ನಿನ್ನ ಪ್ರಸಾದದೆ ಕಂಸ ನಿನ್ನ ಜಾ
ಮಾತೃಗಳೆಂದೊಡಾವ ದುರಿತಂಗಳುಮೆಮ್ಮೊಳೆ [2]ಪೊರ್ದಲಂಜುಗುಂ[2] ೬೦

ಆರೊಡನಕ್ಕೆ ಪೋರ್ದು ಭವದೀಯಗಜಂ [3]ಹತಮಾದುದಿಂದು[3] ಚಿಂ
ತಾರಮನೇಕದರ್ಕದಜ ತೋಲೊಳಮೆಲ್ವಿನೊಳಪ್ಪುದಿಲ್ಲ ತ
ತ್ಸಾರಥಸಂಗಳೀಯೆರಡೆ ದಂತಮಿಸಂ ಪಿಡಿ ಕಂಸ ನಿನ್ನ ಭಂ
ಡಾರದೊಳಿಕ್ಕೆಸೆಂದು ಬಿಸುಟರ್ ನಿಜಹಸ್ತದ ದಂತಯುಗ್ಮಮಂ ೬೧

---

1 ನೆಮ್ಮನರ (ಖ) 2 ಪೊರ್ದಮಂಜುಗುಂ (ಕಖಗ) 3 ಹತಮಾದುದೀಗ (ಕಗ)

ವ॥ ಅದಂ ಕಂಡು ಕಟ್ಟೇವಮುಂ ಕಡುಮುಳಿಸುಮೊಡವಳೆಯೆ ಕಂಗನೆ ಕನಲ್ದ ಕಂಸನಿಂಗಿತಮನಱಿದು ಪೂರ್ವಸೂಚನಾಕ್ರಮದಿನೆಟ್ಟಿ ಚಾಣೂರಮುಷ್ಟಿಕರ್ ಕೃಷ್ಣ ರಾಮರೊಳ್ ಪೊಣರಲೆಂದು ಭುಜಾಸ್ಫಾಲನಂಗೆಯ್ದುದುಮಾ ನಿನಾದದೊಡನೆ

ಮ॥ಸ್ರ॥ ಉರಗರ್ ಜೀರೇಱಿ ಪಾತಾಳದೊಳಖಿಳದಿಶಾಚಕ್ರಮುಂ ಗೆಲ್ಲವಾಱು
ತ್ತಿರೆ [1]ಪೊಯ್ದುತ್ತಬ್ಧಿಯಂಭೋರವ[1]ನೊಗೆಯೆ ಪಳಂಚಿತ್ತು ನಕ್ಷತ್ರಮಾರ್ಗಾಂ
ತರಮಂ ಬೆಂಡೇಱಿನಂ ಪೋಗೊಡೆದುದು ದಿವಮಂ ಸ್ಫಾರಫೂತ್ಕಾರಶಂಕಾ
ಭರಲೋಕಂ ರಾಮಕೃಷ್ಣಪ್ರಬಳತರಭುಜಾಸ್ಫಾಲನಾಭೀಳನಾದಂ ೬೨

ವ॥ ಅಂತು ಭುಜಾಸ್ಫಾಲನಂಗೆಯ್ದು ಲಲಿತನಲ್ಗನಾವಷ್ಟಂಭದಿಂ ಮುಷ್ಟಿಕ ನೊಳ್ ಮುಸಲಪಾಣಿಯುಂ, ಚಾಣೂರನೊಳ್ ಚಕ್ರಪಾಣಿಯುಂ ಪೊಣರೆ

ಚಂ॥ ಬಳವಳವಣ್ಮಿ ಕಾಯ್ದೊವಜೆ ಬಿನ್ನಣವೆಂಬಿವು ಪೊಟ್ಟಿಡಲ್ಲಿ ಕೈ
ಕೊಳೆ ವನವಹ್ನಿಯಿಂ ಬಿದಿರ ಗಂಟೊಡೆವಂತೆ ಛಟಚ್ಛಟಸ್ವನಂ
ಒಳೆದುದು ಯುದ್ಧದೊಳ್ ಘುಮುಘುಮುಧ್ವನಿ ಪೊಣ್ಮಿದುದುಣ್ಮಿತಾ ಸಭಾ
ಕಳಕಳನಾದಮಾದುದುಲಿವಾ ಪ್ರತಿಹಾರರುಘೇಯುಘೋರವಂ ೬೩

ಮ॥ಸ್ರ॥ ಧರೆಯುಂ ಪೊತ್ತಿರ್ದ ಶೇಷಂ ಸುಗಿಯೆ ಭಯದಿನೋರೋರ್ವರಂ ತಾಗುವೋರೊ
ರ್ವರನಾಟಂದೊತ್ತುವೋರೋರ್ವರನುರವಣೆಯಿಂದಿಕ್ಕುವೋರೋರ್ವರಂ ಡೊ
ಕ್ಕರಿಸುತ್ತೋರೋರ್ವರಂ ಚಾಳಿಸುವ ಪದದೊಳಾ ವೇಗವಾ ಕೋಪವಾ ಮ
ಚ್ಚರವಾ ಬಲ್ಪಾಪೊಡವೃರ್ವಿಗೆಯಣಕಮಗುರ್ವದ್ಭುತಂ ದುರ್ನಿವಾರಂ ೬೪

ವ॥ ಅಲ್ಲಿ

ಮ॥ ಪೊಣರ್ದೆಕ್ಕೆಕ್ಕೆಯಿನಿಕ್ಕುವಿಕ್ಕಿ ಜವದಿಂದಾರ್ದೇಱುತುಂ ಘರ್ಮವಾಃ
ಕಣಮಂ ರಂಗದ ಧೂಳಿಯಿಂ ತೊಡೆದು ಮತ್ತಂ ಪೋರ್ವ ಪೋರ್ದಾರ್ದು ಬಿ
ನ್ನಣಮಂ ಕೊಳ್ವ ಕೊಳಲ್ಕೆ ತಪ್ಪಿದುದು ಮಾಣೆಂಬೇಱಿಗ್ಗಯಿಂ ತಂದುದೀ
ಕ್ಷಣ ಕೌತೂಹಲಮಂ ಸಭಾವಳಿಗೆ ಯುದ್ಧಂ ಕೃಷ್ಣಚಾಣೂರರಾ ೬೫

ಸ್ರ॥ ಒಂದೊಂದಾಶ್ಚರ್ಯಮಂ ಮಾನುಷಬಲದೊಳೆ ತೋರ್ಪಟ್ಟಿಯಿಂ ಕಣ್ಗೆಕೆಂಪಂ
ತಂದಂಗಕ್ಕೆಯ್ದೆ ಘರ್ಮಾಂಬುವನೊಡರಿಸಿ ಕೊಂಡಾಡಿ ಚಾಣೂರನೊಳ್ ಪೋ
ರ್ದಂ ದೈತ್ಯಧ್ವಂಸಿಯೆಂತುಂ ತ್ರಿಜಗದುದಯನಾಶಂಗಳಾತ್ಮೀಯಶಕ್ತಿ
ಸ್ಪಂದಾಸ್ಪಂದಗಳೆಂಬಚ್ಯುತನ ಭುಜಬಲಕ್ಕಂತದೊಂದಾವ ಲೆಕ್ಕಂ ೬೬

---

1 ಪೊಯ್ದುತ್ತಬ್ಧಿಭಂಭಾರವ (ಕ)

ಮ॥ ಉಪಮಾತೀತಮೆನಲ್ ಜವಕ್ಕೆ ಜವಮಣ್ಮುಂಗಣ್ಮು ಬಲ್ಪಿಂಗೆ ಬ
ಲ್ಪು ಪೊಡರ್ಪಿಂಗೆ ಪೊಡರ್ಪು ರೌದ್ರತೆಗೆ ರೌದ್ರತ್ವಂ ಮಿಗಿಲ್ ಕಾಣಲಾ
ದಪುದೀ ಕೃಷ್ಣನೊಳಿಂ ಗೆಲಲ್ಕಱಿಯನೀ ಚಾಣೂರನೆಂದಿತ್ತ ಬಾ
ಜಿಪುದಂ ಮಾಣ್ದಿರೆ ಶಂಖತೂರ್ಯಮೆಸೆದತ್ತತ್ತಿಂದ್ರತೂರ್ಯಸ್ವನಂ ೬೭

ವ॥ ಅನ್ನೆಗಂ

ಕಂ॥ ತವದ ನಿಜಕೋಪದಿಂ ಚಳ
ಕವಿನ್ನಣಂಗೊಂಡು ತಕ್ಕಿನೊಳ್ ಬಲನಂದಾ
ರ್ದಮನ ನವರಂಧ್ರದಿಂ ರ
ಕ್ತಮೊಗೆಯೆ ಡೊಕ್ಕರಿಸಿ ಕೊಂದನಾ ಮುಷ್ಟಿಕನಂ ೬೮

ವ॥ ಅನಂತರಂ

ಮ॥ ಕಡುಪಂ ಪಟ್ಟಿಸಮೆಂಬ ಬಿನ್ನಣದೆ ಕೃಷ್ಣಂ ಗೆಲ್ದು ಪಿಂಗಾಲ್ಗಳಂ
ಪಿಡಿದಾರ್ದೆತ್ತಿ ನಿಶಾಟನಂ ತಿರಿಪೆ ತದ್ಭ್ರಾಮ್ಯನ್ನಿಶಾಟಾಸ್ಯದಿಂ
ಪೊಡರ್ದಸ್ರಾಂಬುಮಲಾತಚಕ್ರಮೆನೆ ವೃತ್ತಾಕಾರದಿಂದುಣ್ಮುತುಂ
ಪಡೆದತ್ತಾಗಸಮೆಣ್ಗೆ ಪೊನ್ನ ಕಟಿಸೂತ್ರಶ್ರೀಯನಾ ಬೇಗದೊಳ್ ೬೯

ವ॥ ಅಂತು ಚಾಣೂರನಂ ನೆಗಪಿ ನೂಱುಸೂಳ್ವರಂ ತಿಱ್ರನೆ ತಿರಿಪಿ ಸೊಪ್ಪು ಸೊವಡಾಗೆ ಕಳದೊಳಪ್ಪಳಿಸಿ ಕೊಂದಿಕ್ಕಿ ತನಗೆ ಮಾರ್ಮಲೆವ ಮಲ್ಲರಿಲ್ಲದಿರೆ

ಕಂ॥ ಸುಲಲಿತ ವಲ್ಗನದಿಂ ಕಮ
ಳಲೋಚನಂ ಸುೞಿದು ರಂಗದೊಳ್ [1]ಗೋಪರುಮಂ[1]
ನಲಿವತ್ತಲೆ ಚಾಳಿಪ ವಿಜ
ಯಲಕ್ಷ್ಮಿ ಕಂಸಂಗಸಹ್ಯಮಾದತ್ತಾಗಳ್ ೭೦

ತಿಳಿದು ನಿಜಸತಿಯ ಮನಮುಂ
ಬಳಾಧಿಕರ್ ಪಲಬರೆಟ್ದು ತೋಸಲಕಾದ್ಯರ್
ಕಳಭಕ್ಕೆ ಯೂಥಪತಿಗಳ
ಬಳಗಂ ಕವಿವಂತೆ ಮುಸುಱಿದರ್ ಮುರಹರನಂ ೭೧

ವ॥ ಆಗಳಾ ಕಂಸಕೃತವಿಕೃತಿಯಿಂ ಪ್ರಕೃತಿಕ್ಷೋಭಮಾಗೆ

---

[1] ಗೋಕುಲಮುಂ (ಕಖಗ)

ಕಂ॥ ಒರ್ವನೊಳಧಿಕಬಲರ್ ಸಾ
ಸಿರ್ವರ್ ಪೊಣರ್ದಪರಿದಕ್ರಮಂ ಹಾಹಾಯೆಂ
ದುರ್ವಿಜಮಿತ್ತ್ರಲತ್ತ ಸು
ಪರ್ವರ್ ಪುಯ್ಯಲ್ಚೆ ನೆಗೆದುದಾಕುಳನಿನದಂ ೭೨

ವ॥ ಅನ್ನೆಗಂ

ಚಂ॥ ಜನನೊಡವುಟ್ಟು ಮಾರಿಯೊಡನಾಡಿ ಲಯಾಗ್ನಿಯ ನಂಟು ಕಾಲಮೃ
ತ್ಯುವ ಗುರು ಕಾಳಕೂಟದೆಣೆ ಸಿಂಗದ ಸಂಗತಿಯುಂ ಯುಗಾಂತಭೈ
ರವನ ಪರಿಗ್ರಹಂ ಸಿಡಿಲ ಸಂಗಡಮಿಾಶನ ಜೆಂಕೆಗಣ್ಣ ಬಾಂ
ಧವನೆನೆ ಶೌರಿ ಮರ್ದಿಸಿದನಪ್ರತಿಮಲ್ಲರೆನಿಪ್ಪ ಮಲ್ಲರಂ ೭೩

ಮ॥ಸ್ರ॥ ಗರುಡಂ [1]ವ್ಯಾಲಸ್ಫುಟಾಸ್ಫಾಲನಸಮಯದೊಳೆಂತೆಂತು[1] ಸಿಂಹಂ ಮಹಾಸಿಂ
ಧುರಶುಂಭತ್ಕುಂಭನಿರ್ಭೇದನಸಮಯದೊಳೆಂತೆಂತು ವಜ್ರಂ ಕುಳೋರ್ವೀ
ಧರಪಕ್ಷಾನೀಕವಿಚ್ಛೇದನಸಮಯದೊಳೆಂತೆಂತು ಕಂಸಾರಿ ಕಂಸಾ
ಸುರದೇಹಾಸ್ಫಾಳನಾಡಂಬರಸಮಯದೊಳಂತಂತಗುರ್ವಾಗಿ ನಿಂದಂ ೭೪

ವ॥ ಆ ಪ್ರಸ್ತಾವದೊಳ್

ಮ॥ಸ್ರ॥ ತೆಗೆದೀಂಟಲ್ ವಾರ್ಧಿ ಸುಂಗಲ್ ದಿಗಿಭಸಮಿತಿ ತುತ್ತಲ್ ವಿರಿಂಚಾಂಡಭಾಂಡಂ
ಮಿಗಿಲಲ್ತೀತಂಗೆನಲ್ ದಾನವರಿಪು ಮಸಕಂಗೊಂಡನಿಂ ಪೋರ್ವನೆಂಬೀ
ಬಗೆಯಿಂ ಪೆಣ್ಣಾನೆಯುಂ ಪಲ್ಲಣಿಸು ಕುದುರೆಯುಂ ಪೂಡು ತೇರಂ ಭಟರ್ ಕೈ
ದುಗಳಂ ಕೈಕೊಳ್ಳಿಮೆಂಬೀ ಭಟರ ಕಳಕಳಂ ಕೇಳಲಾದತ್ತದೆತ್ತಂ ೭೫

ವ॥ ಅನ್ನೆಗಂ

ಮ॥ಸ್ರ॥ ಪ್ರಕಟಂ ಸಿಂಹಸ್ಫುರಲ್ಲಂಘನಮೆಸೆಯೆ ತಮಂಗಕ್ಕೆ ಧೀಂಕಿಟ್ಟು ಕೃಷ್ಣಂ
ಮಕುಟಾಗ್ರಾಸ್ಫಾಲನಂಗೆಯ್ದೆಲೆಲೆ ರವಿಯನಾ ರಾಹುವೀಂಟಿತ್ತೆನಲ್ ಕೌ
ತುಕಮಾಯ್ತೆಂದಭ್ರದೊಳ್ ಬೊಬ್ಬಿಱಿಯೆ ದಿವಿಜರಾ ಮಾಡದಿಂ ಕಂಸನಂ ಮ
ಲ್ಲಕಳಕ್ಕೆತ್ತಿಕ್ಕಿ ತಾಂ ಮೇಲೆಱಗಿದನೆಱಗಲ್ ಸ್ವರ್ಗದಿಂ ಪುಷ್ಪವರ್ಷಂ ೭೬

ಕಂ॥ ಜಗದಾಧಾರಕದದಟಿಂ
ಧಿಗಿಲೆನೆ ಮೇಲೇಱಿ ತುಱಿದು ರಾಕ್ಷಸನಸುವಂ
ತೆಗೆದು ತೆಗೆದೆೞೆದು ಬೞಿಯುಂ
ತೆಗೆದಂ ಶ್ರೀಕೃಷ್ಣನವನ ಮೇಗಣ ಮುಳಿಸಂ ೭೭

[1] ವ್ಯಾಲಾಹಿನಾಶಕ್ಕೆಱಗುವತೆಱನೆಂತಂತು (ಕಗ)

ಖಳಸಂ ತುಟಿಬಿವೆಡೆಯೊಳ್ ಗೋ
ಪಳರಾಯನ ತೊಡರ ಹಾಪೆ ತೊಡರ್ವೆರಸಂಘ್ರಿ
ಸ್ಥಳದಿನುರುಳ್ವಂತಿರೆ ನಿ
[1]ರ್ಗಳಿತಾಂತ್ರನುರುಳ್ದು[1] ಕಂಸನೆಸೆದಂ ಕಳದೊಳ್ ೭೮

ವ|| ಆ ಪ್ರಸ್ತಾವದೊಳ್

ಮ|| ಪವನವ್ಯೋಮವಸುಂಧರಾಸಲಿಲತೇಜೋಲೀಲೆ ವ್ಯವೆರ್ಚಲು
ತ್ಸವಮಾದತ್ತು ಸಮಸ್ತಭೂತಳದೊಳಾಗಳ್ ಭೂತಸರ್ವಸ್ವಮಂ
ಕವರ್ದಂಗೀಕರಿಸಿರ್ದ ಕಂಸನನುಜಂ ಪಂಚತ್ವಮಂ ಪೊರ್ದಲಿಂ
ತವು ತಂತಮ್ಮ ವಿಭಾಗಮಂ ಮಗುಳ್ ಕೈಕೊಂಡಿರ್ದುವೆಂಬನ್ನೆಗಂ ೭೯

ವ|| ಆ ಮಹೋತ್ಸವದೊಳ್

ಮ|| ಶರವಿದ್ಯಾಬಲದಿಂದೆ ಕೊಂಡುಕೊನೆವಾ ಯುದ್ಧಂಗಳಂ ಮೆಚ್ಚಿನಾಂ
ಪಿರಿದುಂ ಮೆಚ್ಚುವೆನಿಂತುಟೊಂದು ನಿಮಿಷಂ ಧೀಂಕಿಟ್ಟು ಹರ್ಮ್ಯಾಗ್ರದಿಂ
ಧರೆಗಾರ್ದಿಕ್ಕಿ ವಿರೋಧಿಯಂ ಮಡಿಪಿದೊಂದಂ ಚೆಲ್ವನೆಂದಾಡಿದಂ
ಪರಮಾನಂದವಿನೋದದಿಂ ಸ್ಮಿತಹಟನ್ನಾನಾರದಂ ನಾರದಂ ೮೦

ವ|| ಅನ್ನೆಗಂ ಶತಮುಖಪ್ರಮುಖನಿಖಿಲದೇವತಾಸಂತಾನಮಂತರ್ಧಾನದೊಳ್ ನಿಂದು ದಾನವಾಂತಕನ ಮೊಗಮಂ ನೋಡಿ

ಕಂ|| ಮುಂ ದೈತ್ಯಕೋಪಹುತವಹ
ನಿಂದಂ ಕಾಯ್ದುರಿವ ಭುವನಮಂ ವಿಜಯಯಶ
ಶ್ಚಂದದರಸದಿಂದಂ ತೊಳೆ
ದಿಂದು ಮುರಧ್ವಂಸಿ ನೀಂ ಕುಳಿರ್ಕೊಳಿಸಿದೈ ೮೧

ಗಡಿಗೆಟ್ಟಜಾಂಡಕೋಟಿಯು
ನೆಡೆಯುಡುಗದೆ ನುಂಗಿಯುಗುಳ್ವ ನಿನಗೀಪಗೆಯಂ
ಮಡಿಪುವುದು ಪಿರಿದೆ ಕೇಶವ
ಕಡಲಂ ಪೀರ್ವಗಮರಿದೆ ಕುಡಿತೆಯ ಸಲಿಲಂ ೮೨

---

[1] ಗಳಿತಾಸುವುರುಳ್ದು (ಖಗ)

ಕಮಲೋದ್ಭವ ವಾಗ್ವಿಲಸ
ತ್ಕ್ರಮಮಂ ಮಿಾಱಿಂದುದು ವೇದವೇದಾಂಗರಹ
ಸ್ಯಮನದಟಲೆದುದೆನಲ್ ಕಂ
ಸಮಥನ ಬಣ್ಣಿಸುವರಳವೆ ನಿನ್ನ ಮಹತ್ವಂ ೮೩

ವ|| ಎಂದವರಸಮುದಯಮಂ ಪುಷ್ಪದೊಳಂ ವಾಕ್ಪುಷ್ಪದೊಳಮರ್ಚಿಸಿ ಪೋಗೆ

ಉ|| ಆನತರಪ್ಪರಂಬುಜಭವಾದಿಗಳುಂ ತನಗೆಲ್ಲಿಱಿಂದೆ ತಾ
ನಾನತನಾರ್ಗಮಲ್ಲವಧಿಕರ್ ತನಗಿಲ್ಲದೆ ಪೆಂಪಿನಿಂದಮೆಂ
ಬಾ ನಳಿನಾಕ್ಷನಂದು ವಸುದೇವನ ದೇವಕಿಯಂಘ್ರಿಗಳ್ಗೆ ಬಂ
ದಾನತನಾದನಂದನುಚಿತಂ ಗುರುಸನ್ನತಿ ಮರ್ತ್ಯವೇಷದೊಳ್ ೮೪

ವ|| ಆಗಳಾ ವಸುದೇವನುಂ ದೇವಕಿಯುಮತ್ಯಂತ ಸಂತೋಷಮನಪ್ಪುಕೆಯ್ದು

ಮ|| ಮನದೊಳ್ ತೆಕ್ಕನೆ ತೀವಿದೊಂದು ಪರಮಸ್ನೇಹಾಮೃತಂ ಕಣ್ಗಳಿಂ
ದೆನಸುಂ ಪೊಣ್ಮಿದುದೆಂಬಿನಂ ಸುರಿವಿನಂ ಹರ್ಷಾಶ್ರು ಪಾದಾನತಾ
ಸ್ಯನನಿಂಬಿಂ ತೆಗೆದಪ್ಪಿಕೊಂಡೊಗೆದ ರೋಮಾಂಚಂಗಳೊತ್ತೊತ್ತಿನಿಂ
ತನುಗಳ್ ಪಿಂಗಿದುವೆಂಬಿನಂ ಕೆಲಕೆ ಸಾರ್ದಿಂತೆಂದರಾನಂದದಿಂ ೮೫

ಕಂ|| ಉದಯಿಸಿ ದಿವ್ಯಾಕೃತಿಯಿಂ
ಮೊದಲೊಳ್ ನೀನೆಮಗೆ ನುಡಿದ ತೆಱದಿಂದಡಿಗಿ
ಕ್ಕಿದೆ ಕಂಸನನೆಮ್ಮಂ ನೆಗ
ಪಿದೆ ಚಿಂತಾವಾರ್ಧಿಯೊಳಗೆ ಮುಳುಗಿರ್ದವರಂ ೮೬

ಪುಟ್ಟುವುದು ಜಗಂ ನಿನ್ನಿಂ
ಪುಟ್ಟುವೆ ನೀನಾವನಿಂ ಸ್ವಯಂಪ್ರಭು ಪಿರಿದುಂ
ಪುಟ್ಟುವೊಡಂಶಾಂಶದೆ ನೀಂ
ಪುಟ್ಟಿ ಜಗದ್ರಕ್ಷಣಕ್ಷಯಕ್ಷನುನಪ್ಪೈ ೮೭

ನಿಜಗರ್ಭದೇಕದೇಶದೊ
ಳಜಾಂಡಶತಮಿರ್ಪ ವಿಷ್ಣು ನೀನಸ್ಮದ್ಗ
ರ್ಭಜನೆಂತಾದೆಯಿದಂ ಭ್ರಾಂ
ತಿಜಾಲನುಂ ಬೀಸಿದೈ ಧರಿತ್ರಿಗಮೆಮಗಂ ೮೮

ಮಲ್ಲಿಕಾಮಾಲೆ||

ಈ ತ್ರಿಲೋಕದ ಸೃಷ್ಟಿವರ್ತನಸಂಕ್ಷಯಂ ನಿಜಕಲ್ಪನಾ
ಮಾತ್ರಸೂತ್ರಮಿದೆಂದು ಬಲ್ಲೆವನಾದಿಮಧ್ಯವಿರಾಮನನ್ನೈ
ಸ್ತೋತ್ರಪಾತ್ರರೆ ನಾಂ ನೃಕೀಟರದಾವುದೇದೊರೆಯಾದೊಡಂ
ಪುತ್ರನೆಂದಪುದೆಮ್ಮ ನಾಲಗೆ ನಿನ್ನನೆಂತದಹರ್ನಿಶಂ ೮೯

ಚಂ|| ತರತಮಮಾಗಿ ಯೋಗಿತತಿ ಯೋಗವಿಭೇದದೆ ನಿಟ್ಟಿಪಾ ಶಿವಂ
ಪರಮಶಿವಂ ಸದಾಶಿವನೆನಿಪ್ಪಗುಣಂ ಗುಣಿಯಾಗಿ ನೀನಜಂ
ಹರಿ ಹರನೆಂಬ ಮೂರ್ತಿಗಳನಾಂತ ಮಹಾತ್ಮನೆ ಮರ್ತ್ಯಮೂರ್ತಿಯಂ
ಧರಿಯಿಸಿ ದೇವಕೀಸುತನೆನಿಪ್ಪುದು ನಿನ್ನ ವಿನೋದಮಾಗದೇ ೯೦

ಕಂ|| ಪ್ರಾಕೃತಮನುಷ್ಯಶಿಶುಗೆ
ತ್ರೀ ಕಂಸನ ಭಯದೆ ನಿನ್ನನೊಲ್ದಿರಿಸಿದೆವಾ
ಗೋಕುಲದೊಳ್ ಮಾಯಾಮೋ
ಹಾಕುಳದಿಂದಱಿದೆವಿಲ್ಲ ನಿನ್ನಯ ತೆಱನಂ ೯೧

ಕ್ಷಿತಿಯಂ ರಕ್ಷಿಸಲಂಶಾ
ಕೃತಿಯಿಂದುದಯಿಸಿದ ನಿನ್ನೊಳೆಮಗಿಂ ಲಕ್ಷ್ಮೀ
ಪತಿ ಭಕ್ತಿ ಪುಟ್ಟಿದಪ್ಪುದು
ಸುತನೆಂಬ ಮಮತ್ವಮಾದುದಿಲ್ಲವಮೋಘಂ ೯೨

ವ|| ಎಂದನೂನಜ್ಞಾನಸಂಪನ್ನರಾಗಿ ನುಡಿದ ಮಾತಾಪಿತೃಗಳಂ ಮಗುೞ್ದು ಕೃಷ್ಣಂ ವೈಷ್ಣವಮಾಯೆಯಿಂ ಮೋಹಿಸಿ ರೌಹಿಣೇಯ ಸಮನ್ವಿತಂ ಕರಕಮಲಂಗಳಂ ಮುಗಿದು

ಉ|| ಕೇಳೆಲೆ ತಾತ ಕೇಳ್ ಜನನಿ ಕಂಸನ ಕಾರಣದಿಂದಗಲ್ದು ಗೋ
ಪಾಲಯವಾಸರಾದೆಮಗೆ ನಿಮ್ಮ ಪದಾರ್ಚನೆಗೆಯ್ಯದಿನ್ನೆಗಂ
ಕಾಲಮಿದಿಂತು ಪೋಯ್ತು ಪಿತೃಮಾತೃಗುರುದ್ವಿಜದೇವಪೂಜೆಯಿಂ
ಕಾಲಮಿಡೆಯ್ದೆ ಸಲ್ಲದನ ಬಾೞ್ಕೆ ನಿರರ್ಥಕಮಲ್ತೆ ಲೋಕದೊಳ್ ೯೩

ವ|| ಎಂದು ಸಂತಸಂಬಡಿಸಿ ಯದುಕುಲಪ್ರವೃದ್ಧಜನಂಗಳಂ ಯಥಾಯೋಗ್ಯಮಾಗಿ [1]ಸಂಭಾವಿಸುತಿರ್ದ ಪ್ರಸ್ತಾವದೊಳ್[1]

---

1 ಸಂಭಾಷಿಸುತ್ತಿರ್ದನಾಪ್ರಸ್ತಾವದೊಳ್ (ಕಖ)

ಮ॥ಸ್ರ॥ ಮಱಿದಿರ್ದೆಪ್ಪೃಣ್ಣನಂ ಸ್ಪರ್ಧಿಸಿದ ಕುಟಿಲನೆತ್ತೆತ್ತಲೆಂದೆಯ್ದೆ ವಂದ
ಳ್ಕಿಱಿ ಕಚ್ಚಾವಾಲಮಂ ಕೈದುಡುಕಿ ಪಿಡಿದನಂ ನೋಡದಂತಿರ್ದ ಪಾಂಗಿಂ
ಪೊಱಕೈಯೊಳ್ ಪೋದಿ ಕಂಸಾನುಜನನಧಿಕನಂ ಕೊಂದು ಮಾರ್ಕೊಂಡರೆಂಬಂ
ತುಱಿದತ್ತಲ್ ಗೋಷ್ಠಿಗೆಯ್ವಚ್ಯುತನ ಬಿನದಮಂತೊಂದಗುರ್ವೇನನೆಂಬೆಂ ೯೪

ವ॥ ಅನ್ನೆಗಂ

ಕಂ॥ ಸುರಲಟಹಪಟಹರವಮಂ
ಬರದೊಳ್ ನರ್ತಿಸಲೆ ನಾರದಂ ದೆಸೆಗಳೊಳು
ಣ್ಮಿರಲುಣ್ಮಿದುದಿತ್ತಲ್ ಮ
ಲ್ಲರಂಗದೊಳ್ ಕಂಸನಂಗನಾಕ್ರಂದರವಂ ೯೫

ಚಂ॥ ತರುಣಿಯರಂದು ಕಂಸನ ವಿಯೋಗದ ಶೋಕದೆ ಬಿಟ್ಟು ಧಾತ್ರಿಯೊಳ್
ಪೊರಳೆ ಪೊದಟ್ದ ಮೆಯ್ಯ ರಜವಶ್ರುಜಲೌಘದೆ ನಾಂದು ಕರ್ದಮಂ
ಬೊರೆದವೊಲಾಗ[1]ಲಂದುಮೆಸೆದಿರ್ದರೆಲರ್[1]ಪೊಡೆದಭ್ರಕಾಲದೊಳ್
ಧರೆಯೊಳುರುಳ್ದ ಕರ್ದಮದೊಳಟ್ದ ಲತಾನಿಕುರುಂಬಮೆಂಬಿನಂ ೯೬

ವ॥ ಆ ಪೆಂಡವಾಸದೆಳವೆಂಡಿರೊಳಗ್ರಮಹಿಷಿಯರೆನಿಸಿದ ಅಸ್ತಿಪ್ರಾಸ್ತಿಯರೆಂಬ ಜರಾಸಂಧಸುತೆಯರ್ ಕಂಸನ ಕಳೇವರಮಂ ತೞ್ಕೈಸಿಕೊಂಡು ಮುಂಡಾಡಿ

ಕಂ॥ ಪರಿಭವರಜದೊಳ್ ಪಗೆಯಂ
ಪೊರಳಿಸಲುಂ ಪುಷ್ಪಧೂಳಿಯೊಳ್ ವಿರಹಿಣಿಯಂ
ಪೊರಳಿಸಲುಂ ತಕ್ಕುದು ನೀಂ
ಪೊರಳಲ್ ತಕ್ಕುದೆ ಮದೀಶ ಭೂಪಾಂಸುವಿನೊಳ್ ೯೭

ಮ॥ ಮೃದುಶೃಂಗಾರಮನಪ್ಪುಕೆಯ್ದ ಮೃದುಭಾವಂ ನಿನ್ನೊಳಿಂಬಾಗೆ ನೀಂ
ಮೃದುಶಯ್ಯಾ[2]ತಳದಲ್ಲಿರಲ್ಲಿ[2] ಮಿಸುಪೆಮ್ಮಾ ತೋಳೊಳೆಮ್ಮಾ ನಿತಂ
ಬದೊಳಮ್ಮಾ ಕುಚಮಧ್ಯದೊಳ್ ಪೊರಳುತಿರ್ಪೀ ನಿನ್ನ ದಿವ್ಯಾಂಗಮೊ
ರ್ಮೊದಲೊಳ್ ಕರ್ಕಶಭೂಮಿಯೊಳ್ ಪೊರಳೆ ಕಂಡಾವೆಂತು ಸೈರಿಪ್ಪೆವೋ ೯೮

ಕಂ॥ ಎತ್ತಿ ನಡೆವಮರರಂ ಬೆಂ
ಬತ್ತುವ ಸಮಯದೊಳಮಿಲ್ಲದೀವಿಧಿ ಹಾ ದೈ
ತ್ಯೋತ್ತಮ ಬಗೆಯದ ಬರಸಿಡಿ
ಲೆತ್ತಣಿನೈದಿದುದೊ ನಿನಗಿದಘಟಿತಘಟಿತಂ ೯೯

---

[1] ಅಂತುಮೆಸೆದಿರ್ದರವರ್ (ಕಖಗ) [2] ತಳದಲ್ಲಿನಲ್ಲ (ಕಗ)

[1]ಪೊಱಮಟ್ಟರಿಬಲದೊಳ್[1] ತ
ಳ್ತಿಱಿಯದೆ ಕರುಮಾಡದಲ್ಲಿ ಲೀಲೆಯಿನಿರ್ದ
ನ್ಮೃಱಿತಯನನದೇಕೆ ಸೊಡಗೊರ್ಂ
ಪಱಿಸುತ್ತುಂ ಬಂದು ಕೊಂದೆಯಕಟ ವಿಧಾತ್ರಾ ೧೦೦

ವೈರಿವಧೋಪಾಯಾಬ್ಧಿಯ
ಪಾರಮನಕಟೆಯ್ದಲೀಯದೆಡೆಯೊಳ್ ಕೊಂದೈ
ಹಾ ರಾಕ್ಷಸನಂ ನೀಂ ನಡು
ನೀರೊಳ್ ಪಱುಗೋಲನಿಂತು ಕೊಯ್ವುದೆ ವಿಧಿಯೇ ೧೦೧

ನಾನಾವಿಧದಿಂ [2]ಪಿಡಿದಾ
ವೇ[2]ನೆಂದೊಡಮುಱಿದೆಯಿಲ್ಲ ಮಱಿದೊಱಗಿದೆಯೋ
ನೀನೆಮಗೆ ಮುಳಿದು ನುಡಿಯೆಯೊ
ಜಾನಿಸುತಿರ್ದಪೆಯೊ ಮದ್ಗುಣಂಗಳನರಸಾ ೧೦೨

ಚಂ|| [3]ಮನದೊಲವೀಪ್ಸೆಯುಂ ಪಡೆಯಲೊಂದಿ[3]ರುಳೊಂದಿನಿಸೊಂದೆ ಮಂಚದೊಳ್
[4]ಮುನಿದನಿತೊಂದು[4] ನಿನ್ನ ಮುನಿಸಾಕ್ಷಣದಿಂ ತನುಸೋಂಕುವೆಮ್ಮ ಸೋಂ
ಕಿನೆ ಸಲೆ ಪೋಪುದಿನ್ನೆಮಗನ್ಯಸಲಕ್ಷ್ಯನದೃಶ್ಯನಾಗಿ ನೀ
ನೆನಸುಮಗಲ್ದ ಬಲ್ಮೆಳಿಸು ನಲ್ಲನೆ ಕಾಲ್ವಿಡಿಯಲ್ಕೆ ಮಾಣ್ಗುಮೇ ೧೦೩

ಉ|| ಭಾವವಭಿನ್ನವಿಚ್ಛಿ ಪೆಱತಲ್ತು ಸುಖಂ ಸಮಮೆಂಬ ನಲ್ಮೆಯಿಂ
ಜೀವಮದೊಂದೆ ನಲ್ಲರೊಳೊಡಲ್ಗಳೆ ಬೇಱಿತನುತಿರ್ಪವಾದೊಡಿಂ
ದಾವೆಡೆ ನಿನ್ನ ಜೀವಮೆನೆ ಜೀವಿಸುತಿರ್ದಪೆವಿನ್ನುನೀಂ ಪೃಥ
ಗ್ಜೀವರೆ ನಲ್ಲರೆಂದಱಿದೊಡಕ್ಕಟ ಧಾತ್ರನೆ ಮಾಟವಿಂತುಟೇ ೧೦೪

ವ|| ಎಂದನೇಕಪ್ರಕಾರದಿಂ ಬಾಯಬಿಱಿದು ಪಳವಿಸುವ ಕಂಸಕಾಂತೆಯರ ಪ್ರಳಾಪಮಂ ಕೇಳ್ದು ಕಾರುಣ್ಯದಿಂದಕ್ರೂರಾದ್ಯರಂ ಕರೆದು ನಿಶಾಟಕಾಂತೆಯರುಮಂ ಸಂತೈಸಿ ಕಂಸಕಂಸಾನುಜಾದಿ ಮದ್ಬಾಹುನಿಹತರ್ಗೆ ಯಥೋಚಿತಾಚಾರಮಂ ನೆಗಳ್ವುದೆಂದು ಬೆಸಸಿ

---

[1] ಪೊಱಮಟ್ಟು ದಿವಿಜರೊಳ್ (ಖ) [2] ಪಳವಿಸಲೇ (ಕಗ) [3] ಮನದೊಲವಿಂದೆ ಪಂದಿರೊಳಗೊಂದಿ (ಕಗ) [4] ಮುನಿದಿನಿಸೊಂದು (ಕಗ)

ಚಂ॥ ನಿಗಡನಿರುದ್ಧನಂ ತನಯಶೋಕವಿಲಾಪಿಯನುಗ್ರಸೇನನಂ
ನಗಧರನೊಲ್ದು ಸಂತವಿಸೆ ಯಾದವರಾಜ್ಯಮನೀತನೀಲಿಚ್ಛೊಳಲ್
ಬಗೆದು ಮದೀಯಸೂನುಗಳನಿಕ್ಕಿದನೆಂದವಿವೇಕಿಯಾ ಮುರಾ
ರಿಗೆ ಕೊಡಲೆಂದು ರಾಜ್ಯಪದಮಂ ನುಡಿದಂ ಭಯದಿಂದಮಾಹುಕಂ ೧೦೫

ಮ॥ ಕೊನೆವುರ್ವಿಂ ನಸುಜರ್ವಿ ಪದ್ಮಭವಚಂದ್ರೇಂದ್ರಾರ್ಕಮುಖ್ಯಾವೃತಾ
ಶನರ್ಗಂತಪ್ಪ ಪದಂಗಳಂ ಕುಡುವತಕ್ಕೈಶ್ವರ್ಯನಾ ರಾಜ್ಯಮಂ
ಮನದೊಳ್ ಭಾವಿಸದುಗ್ರಸೇನನನೆ ಬಂಧೋನ್ಮುಕ್ತನಂ ಮಾಡಿ ತ
ತ್ತನಯಶ್ರೀಸ್ಥಿತನಾಗೆ [1]ಮಾಡಲೊಸೆದಂ[1] ಶ್ರೀದೇವಕೀನಂದನಂ ೧೦೬

ಇದು ಸಮಸ್ತಕಮಲಭವಾಂಡಮಾಲಾಘಟೀಘಟಿತಾರಘಟ್ಟಘಟನಾಸ್ವತಂತ್ರ
ನಿಜಸ್ವರೂಪನಿರೂಪಣಚಕಿತಸಕಲಾಮ್ನಾಯತಂತ್ರಲಕ್ಷ್ಮೀಕಾಂತ
ಶ್ರೀಪಾದಭಕ್ತಿಯುಕ್ತಸುಕವೀಂದ್ರರುದ್ರಪ್ರಣೀತ ಶ್ರೀಜಗ
ನ್ನಾಥವಿಜಯಮಹಾಪ್ರಬಂಧದೊಳ್ ರಜಕಾಸುರಪ್ರ
ಹರಣ ಧನುರ್ಭಂಗ ಕುವಲಯಾಪೀಡನಿಷ್ಪೀಡನ
ಚಾಣೂರಮುಷ್ಟಿಕ ತೋಸಲಕಾದಿಮಲ್ಲ
ಮಥನ ಕಂಸಧ್ವಂಸವರ್ಣನಂ
ಷಷ್ಠಾಶ್ವಾಸಂ

[1] ಮಾಡಲೆಸದಂ (ಕಖಗ)

ಸಪ್ತಮಾಶ್ವಾಸಂ

ಕಂ॥ ಶ್ರೀಮತ್ಸಿಂಹಾಸನ ಸಿತ
ಚಾಮರಧವಳಾತಪತ್ರಭೇರೀಚಿಹ್ನೋ
ದ್ದಾಮ ಯದುರಾಜ್ಯಸವನವ
ನಾ ಮುರಹರನುಗ್ರಸೇನನೃಪತಿಗೆ ನೆಗಟ್ದಂ ೧

ವ॥ ವನಿತಾಸಂಕುಳಮಿಂಬುಕೆಯ್ಯೆ ನಿಜತೇಜಂ ದಿಗ್ಜಯಂಗೆಯ್ಯೆ ಭೃ
ತ್ಯನಿಕಾಯಂ ಬೆಸಕೆಯ್ಯೆ ಸಜ್ಜನಚಯಂ ಸಂಕೀರ್ತನಂಗೆಯ್ಯೆ ವೈ
ರಿನೃಪರ್ ಪೇಟ್ದುದುಗೆಯ್ಯೆ ವಿಶ್ವಜನವಾಜ್ಞಾರಕ್ಷಣಂಗೆಯ್ಯೆ ಕೃ
ಷ್ಣನ ಕಾರುಣ್ಯಮನಪ್ಪುಕೆಯ್ದರಸುಗೆಯ್ದಂ ಲೀಲೆಯಿಂದಾಹುಕಂ ೨

ವ॥ ಅಂತು ಸಿಂಹಾಸನಾಸೀನನಾಗಿರ್ದ ಯದುಸಿಂಹನಂ ಪುರುಷಸಿಂಹನಾಜ್ಞಾಪನಂಗೆಯ್ದು

ಕಂ॥ [1]ಭೂಪರ್ಗಣಿದಮೆ[1] ನೀನಾ
ಜ್ಞಾಪಿಸು ಮದ್ಬಾಹುಬಲದಿನಮರರನೆಂದಾ
ಟೋಪದಿನಾಮಂತ್ರಿಸೆ ನಿಜ
ರೂಪದೆ [2]ಬೆಸನೇನೆನುತ್ತೆ[2] ಪವನಂ ಬಂದಂ ೩

ವ॥ ಅಂತು ಬಂದಭಿಮುಖದೊಳಿರ್ದೇಣವಾಹನನಂ ಮನಂಗೊಂಡು—ಎಲೆ ವಾಯುದೇವ ದೇವೇಂದ್ರನಲ್ಲಿಗೆ ಪೋಗಿ ನೀನಿಂತೆಂದು ಪೇಟ್ವುದು—ಎಂತೆನೆ

ಚಂ॥ ಬಿಡುವುದು ಗರ್ವಮಂ ಪಿಡಿವುದಾರ್ಜವಮಂ ಸಭೆಯಂ ಸುಧರ್ಮೆಯಂ
ಕುಡುವುದು ಜಿಷ್ಣು ವಿಷ್ಣುಭುಜಪಾಲಿತಯಾದವರ್ಗಿಂ ಮದಾಜ್ಞೆಯಿಂ
ನಡೆವುದು ದೇವಕೀಸುತನನುಜ್ಞೆಯೊಳಾಹುಕನೆನ್ನನಟ್ಟಿದಂ
ನುಡಿದಿದನಿಂತು ನೀನಱಿಪು ವಜ್ರಧರಂಗೆ ಕುರಂಗವಾಹನಾ ೪

---

[1] ಭೂಪರ್ಗಧಿಕನೆ (ಗ) [2] ನೀಂ ಬೆಸಸೆನುತ್ತೆ (ಗ)

ವ॥ ಎಂಬುದುಮಂತೆಗೆಯ್ವೆನೆಂದು ಪೋಗಿ ಪುರುಹೂತಂಗೆ ಮಾತರಿಶ್ವನಾ ಮಾತಂ ಸವಿಸ್ತರಂ ಪೇೞ್ದು ಪೌಲೋಮೀವರಂ ಗೋವರ್ಧನ ಗಿರೀಂದ್ರಧರನ ಸಾಮರ್ಥ್ಯಮಂ ನೆನೆದು ಮನದೊಳಳ್ಕಿ

ಚಂ॥ ಉದಯಿಸೆ ಭಾನು ಭಾನುಮಣಿಯೊಳ್ ಕಡುಗಾಯ್ಪೊಗೆವಂದದಿಂದಮಾ
ಸ್ಪದವತಿತಿಣ್ಣಮಾಗೆ ದೊರೆಕೊಂಡುದು ಗಂಡಗುಣಂ ಯದುಪ್ರತಾ
ನದೊಳದಱಿಂ ಪೊಡರ್ಪು ನಿಜವಲ್ಲದ ಯಾದವರ್ಗಂಜೆನಂಜೆನಂ
ಜಿದಪೆನಧೋಕ್ಷಜಂಗೆ ಮೆಳೆಗಂಜದೊಡಂ ಪುಲಿಗಂಜುವಂತೆವೋಲ್ ೫

ಕಂ॥ ಕಂಸವಧಂಗೆಯ್ದು ಮುರ
ಧ್ವಂಸಿಗೆ ಪೂಜಾರ್ಥವೆಂದು ಮಾರುತ ಕೊಟ್ಟೆಂ
ನೀಂ ಸಭೆಯಂ ಕೊಂಡುಯ್ವುದಿ
ದಂ ಸಲಿಸಿದೆನೆಂದು ವಜ್ರಿ ನುಡಿವುದುಮಾಗಳ್ ೬

ಮ॥ ವನಜಾಕ್ಷಾಜ್ಞೆಯೊಳಿಂದ್ರರಾಜಪದವೆತ್ತಿಂದಪ್ಪುದಿಂದುಗ್ರಸೇ
ನನೃಪಂಗೆಂಬಿನೆಗಂ ಜಗನ್ನಯನನುಂ ಕಣ್ಣುಳ್ಕುವಂತಾತ್ತ ರ
ತ್ನನಿಕಾಯದ್ಯುತಿ ಪೊಣ್ಮೆ ಕಾಮವಿಪುಳಂ ಕಾಮಪ್ರದಂ ಕಾಮಗಾ
ಮಿ ನಭೋಮಾರ್ಗದೆ ಬಂದುದಿಂದ್ರನ ಸಭಾಹರ್ಮ್ಯಂ ಸುಧರ್ಮಾಹ್ವಯಂ ೭

ವ॥ ಅಂತು ಬಂದ ದಿವ್ಯಸಭೆಯಂ ಯದುಪುಂಗವಂ ದೇವಕೀತನೂಭವರ ಭುಜಾಶ್ರಯದ ಬಲದಿನುಪಭೋಗಿಸುತ್ತುಂ ಸುಖದಿನಿರೆ

ಮ॥ಸ್ರ॥ ಅನಿತುಂ ವಿದ್ಯಾಪ್ರಪಂಚಂ ತನಗೆ ವಿದಿತಮಾಗಿರ್ದೊಡಂ ಶ್ರೀಮುಕುಂದಂ
ಮನುಜಗಾಚಾರ್ಯಶಿಷ್ಯಕ್ರಮಮನಱಿಪುವೊಂದಟ್ಟಿಯಿಂ ರೋಹಿಣೀನಂ
ದನಯುಕ್ತಂ ಪೋಗಿ ಕಾಶೀಕ್ಷಿತಿಯೊಳೆಸೆವವಂತೀಪುರಾವಾಸಿ [1]ಸಾಂದೀ
ಪನಿಯೊಳ್[1] ಶಿಷ್ಯತ್ವಮಂ ಪೊರ್ದಿದ ನೆವದೆ ಕಲಾಪ್ರೌಢಿಯಂ ತಾಳ್ದಿನಿಂದಂ ೮

ಕಂ॥ [2]ಸಾಂದೀಪನಿಯ ಸುವಿದ್ಯೆ[2] ಮು
ಕುಂದನ ಸಂಗತಿಯೊಳತಿವಿಕಾಸಮನೊಳಕೊಂ
ಡಂದೆಸೆದುದು ಪೂಗೊಳದರ
ವಿಂದಿನಿ ದಿನಕರನ ಸಂಗದಿಂ ವಿಕಸಿಪವೋಲ್ ೯

---

[1] ಸಾಂದೀಪನೊಳಂ (ಖಗ) [2] ಸಾಂದೀಪನೆಸೆವ ವಿದ್ಯೆ (ಖಗ)

ಗುರುವಿನ ವಿದ್ಯೆ ನಿತಾಂತಂ
ಪುರುಷೋತ್ತಮನನಂತರಂಗದೊಳ್ ಕೋಟಿವಿಧಂ
ಸ್ಫುರಯಿಸಿದುದಭ್ರಶಶಿಕಳೆ
ತರಂಗಿತಾರ್ಣವದೊಳೆಸೆವವೋಲ್ ಬಹುವಿಧದಿಂ ೧೦

ಜಳಜಿನಿ ದಿನಕರನಿಂದು
ತ್ಪಳಿನಿ ಸುಧಾಕರನಿನಾಮ್ರವಲ್ಲರಿ ಮಧುವಿಂ
ಬೆಳಪಂತೆ ಕೃಷ್ಣನಿಂದಂ
ಬೆಳಗಿದುವೆನಿತೊಳವು ರಾಜವಿದ್ಯೆಗಳನಿತುಂ ೧೧

ಕೌಮುದಿಯಿಂ ವಿಧು ವಿಧುವಿಂ
ಕೌಮುದಿಯೆಸೆವಂತೆ ಸಕಲವಿದ್ಯೆಗಳಿಂದಂ
ತಾಮರಸೇಕ್ಷಣನೆಸೆದಂ
ತಾಮರಸೇಕ್ಷಣನಿನೆಸದುವಾ ವಿದ್ಯೆಗಳುಂ ೧೨

ಉ॥ ಅಂತಱುವತ್ತುನಾಲ್ಕುದಿನದೊಳ್ ವಿದಿತಾಖಿಲವಿದ್ಯರಾದ ಕಂ
ಸಾಂತಕರೌಹಿಣೇಯರತಿಮಾನುಷಕರ್ಮಮನಂತರಂಗದೊಳ್
ಚಿಂತಿಸಿ ಚಂದ್ರಸೂರ್ಯರೆ ಮನುಷ್ಯಕುಮಾರಕರಾಗಿ ಬಂದರೇ
ನುಂ ತೊದಳಿಲ್ಲೆನುತ್ತಮವರನಾ ಗುರು ವಿಸ್ಮಿತನಾಗಿ ನೋಡಿದಂ ೧೩

ಕಂ॥ ಧರೆಗಾಚಾರಮನಱಿಪಲ್
ಗುರುವಿಂ ಕೃತವಿದ್ಯನಾದ ಕೃಷ್ಣಂ ಗುರುವಂ
ಗುರುದಕ್ಷಿಣೆಯಂ ಬೇಡೆನೆ
ಗುರುವುಂ ಬೇಡಲ್ಕೆ ಬಗೆದನೊಂದಘಟಿತಮಂ ೧೪

ವ॥ ಎಲೆ ಕೇಳಮಾನುಷಪ್ರಭಾವಮುಂ, ಪ್ರಭಾಸಲವಣಾರ್ಣವದೊಳ್

ಮ॥ ವಿಗತಾಸುತ್ವಮನೆಯ್ದಿದಂ ಸುರರುಮಂ ಸೌಭಾಗ್ಯದಿಂ ಭಾಗ್ಯದಿಂ
ಮಿಗುವಸ್ಮತ್ಸುತನಿಂದೆ ತಂದು ಕುಡು ಭೂಯೋವತ್ಸನಂ ವತ್ಸನಂ
ನೆಗೞ್ದಾ ಸೌಮ್ಯನನೆಂದಜಾಂಡಘಟಮಾಲಾಚಕ್ರಿಯೊಳ್ ಚಕ್ರಿಯೊಳ್
ಮಗನಂ ಬೇಡಿದನೊಲ್ದು ನಿಲ್ಲ ಗುರು ವಿದ್ಯಾವಿತ್ತಮಂ ವಿತ್ತಮಂ ೧೫

ವ॥ ಎಂಬುದುಂ ಗುರುಪುತ್ರಾಹರಣಪ್ರತಿಜ್ಞಾರೂಢನಾಗಿ ಮಕರಾಕರಮನೆಯ್ದಿ

ಶಾ|| ಡಿಂಡೀರಾವಳಿಶಂಖಸಲ್ಲರಿಯಿನೂರ್ಮಿಸ್ತೋಮಮುದ್ಯತ್ಪಯ
ಶ್ಯಂಡಾಲೌಘದಿನುಗ್ರನಕ್ರಕುಲಮಾವರ್ತಂಗಳಿಂ ವಿದ್ರುಮಂ
ಚಂಡೌರ್ವಾನಲದೀಪ್ತಿಯಿಂ ದ್ವಿಗುಣಿಸುತ್ತಿರ್ಪಾ ಮಹಾಂಭೋಧಿಯಂ
ಕಂಡುತ್ಕ್ಷೋಪದಿನೊಂದು ಬೆಂಜಿಯುನೆ ಕಂಡಂತಾದನಬ್ಜೋದರಂ ೧೬

ಚಂ|| ತುಳುಕುವೊಡೆಯ್ದೆ ದೊರ್ಕಡಿತೆಗಂ ತಿಗೆದೀಂಟುವೊಡಾಗದೊಂದು ಮು
ಕ್ಕುಳಿಗೆನೆ ಸಾಲ್ವುದಿಲ್ಲ ಪುಗಲುಂ ಕರದಿಂದೆ ಕಲಂಕಿ ನೋಡಲುಂ
ಜಳನಿಧಿಯೆಂಬ ಕೋಪದೆ ನಿರೀಕ್ಷಿಸಿ ಲೋಚನರಾಗದಿಂದನು
ಗ್ಗಳಿಸಿದನಬ್ಧಿ ತೀರವನವಿದ್ರುಮರಾಗಮನಬ್ಜಲೋಚನಂ ೧೭

ವ|| ಅಂತಾಕ್ಷೇಪದಿಂ ನಿರೀಕ್ಷಿಸಿ

ಮ|| ಜೊರೆಗೆಟ್ಟೆಂದೊಳಕೊಂಡೆಯಿನ್ನುಗುಳುಗುಳ್ ನೀಂ ವಾಹಿನೀನಾಥ ಮ
ದ್ಗುರು[1]ಸಾಂದೀಪನಿ[1] ಪುತ್ರನಂ ತಡೆಯದೆಂದಾಟೋಪದಿಂ ಪೊಕ್ಕು ಸಾ
ಗರಮಂ ಕೂಡೆ ತಿರಳ್ಚಿದಂ ತೊಳಸಿದಂ ತುಳ್ಕಾಡಿದಂ ತೂಱಿದಂ
ತೆರೆಯೇಱಲ್ ಕಡಲ್ ಕೆಸರ್ಮಸಗಲಂತಾ ದೇವಕೀನಂದನಂ ೧೮

ವ|| ಆಗಳಾ ಸರಿನ್ನಾಥಂ ಸಾರ್ಘ್ಯಹಸ್ತನಾಗಿ ಜಗನ್ನಾಥನಂ ಶರಣ್ಬೊಕ್ಕು [2]ಸಾಂದೀಪನಿತನಯನ[2]ನೆನ್ನೊಳಿರ್ಪ ಪಂಚಜನನೆಂಬ ನಕ್ತಂಚರಂ ನುಂಗಿದನೆಂದು ಬಿನ್ನವಿಸೆ ಕೃಷ್ಣಂ ಸಿಂಹನಾದಂಗೆಯ್ದು ಪೊಱಮಡೆಂದು ಗಜಱಿ ಗರ್ಜಿಸೆ

ಕಂ|| ಏಕಾರ್ಣವಮಾಗೆ ಜಗಂ
ವೈಕುಂಠನ ಕಿವಿಯ ಕೊಗ್ಗಿಯಿಂದಂದೊಗೆತಂ
ದಾ ಕೈಟಭನಿವನೆನೆ ನೀ
ರಾಕರದೊಳ್ ನೆಗಟ್ದನತಿಬಳಂ ಪಂಚಜನಂ ೧೯

ಏನುದಧಿಗುಂಟೆ ಪೆಱತೌ
ರ್ವಾನಳನೀ ಕ್ರೂರದಾನವೇಂದ್ರನ ಕೋಪೋ
ಗ್ರಾನಳನೆ ಜಳಧಿಗಾಯ್ತೌ
ರ್ವಾನಳನೆನಿಸಿದುದು ಪಂಚಜನನುತ್ಕ್ಷೋಪಂ ೨೦

---

1 ಸಾಂದೀಪನ (ಖಗ) 2 ಸಾಂದೀಪನತನಯನ (ಖಗ)

ಮ॥ ಇಳೆಯೊಳ್ ಮುನ್ನಮೆ ಪುಟ್ಟಿದಾ ದನುಜರಿಂತೀ ಧೈರ್ಯಮಿಾ ಶೌರ್ಯಮಿಾ
ಬಳಮಿಾ ಸಾಹಸಮಿಾ ಭುಜಾಸ್ಫುರಣಮಿಾ ಸಂರಂಭಮಿಾ ಕ್ಷೋಭಮಿಾ
ಚಳಮಿಾ ವಿಕ್ರಮಮಿಾ ಮಹಾರಭಸಮಿಾ ರೌದ್ರತ್ವಮಿಾ ವೀರಮಾ
ರಳವಲ್ಲೆಂಬಿನಮಂತು ಪಂಚಜನನುಗ್ರಾಟೋಪಮಂ ತಾಳ್ದಿದಂ ೨೧

ಕ್ಷಿತಿ ಕಂಪಂಗೊಳೆ ಕೃಷ್ಣ ಪಂಚಜನಯುದ್ಧಂ ನಾಡೆಯುಂ ಜೇಗಮ
ದ್ಭುತಮಾದತ್ತಿತರೇತರಕ್ಷುಭಿತನೇತ್ರಾಳೋಕಮನ್ಯೋನ್ಯ ಹ
ಸ್ತತಳಾಘಾತಪರಸ್ಪರಪ್ರಮಥನಂ ಕಣ್ಗುರ್ಬಿಸಲ್ ಪುಂಗವಾ
ಯಿತ ಸಿಂಹಾಯಿತ ಕುಂಜರಾಯಿತ ನಿಯುದ್ಧಂ ತಾನಿದೆಂಬನ್ನೆಗಂ ೨೨

ಕಂ॥ ತ್ರಿಜಗದ್ವೀರಾಗ್ರಣಿಯುಂ
ಭುಜಯುದ್ಧದಿನಿಕ್ಕಿ ಪಂಚಜನನಂ ತತ್ಪಂ
ಚಜನಾಸ್ಥಿಜನಿತಮಂ ಪಾಂ
ಚಜನ್ಯಶಂಖಮನುಪೇಂದ್ರನೀಟಿಕೊಂಡೊಲವಿಂ ೨೩

ಮ॥ಸ್ರ॥ಎಸೆವನ್ನಂ ಕಾರ್ಮುಗಿಲ್ ಚಂದ್ರನನುಗುಳ್ವವೊಲಾತ್ಮಾಸ್ಯದೊಳ್ ಪಾಂಚಜನ್ಯಂ
ಬಿಸಜಾಕ್ಷಂ ಶಂಖಮಂ ಪೂರಿಸೆ ಕುಲಗಿರಿಕುಂಜಂಗಳೊಳ್ ಘೂರ್ಣಿಸುತ್ತಿ
ರ್ದ್ದೆಸೆಯೊಳ್ ತಳ್ಪಾಯ್ದುದಾಕಾಶದೊಳೊದವಿತು ದತ್ತಾಸುರೋನ್ಮಾದಮುದ್ಯ
ಕ್ತಸುರವ್ರಾತಪ್ರಮೋದಂ ಕೃತಜಗದಘವಿಚ್ಛೇದಮಾ ಶಂಖನಾದಂ ೨೪

ವ॥ ಅಂತು ಶಂಖಮಂ ಪೂರಿಸಿ ಯಮನ ಸಂಯಮನೀಪುರಕ್ಕೆ ಪರಿಯಿಟ್ಟು

ಮ॥ ಕುಡು ಸಾಂದೀಪನಿ ಪುತ್ರನಂ ಯಮ ಕುಡಲ್ಕೇಂ ತೀರದೇ ಯುದ್ಧಮಂ
ಕುಡು ಮೇಣೀಗಳದರ್ಕಮಳ್ಕಿ ಭಯದಿಂ ಪಾತಾಳಮಂ ಪೊಕ್ಕೊಡಂ
ಕಡಲಂ ಪೊಕ್ಕೊಡಮಂತರಿಕ್ಷತಳಮಂ ನೀಂ ಪೊಕ್ಕೊಡಂ ನಿನ್ನ ಪೊ
ಕ್ಕೆಡೆಯಂ ಪೊಕ್ಕಿನಬಿಂಬಮಂ ಪುಗಿಪೆನಿಂದಾಂ ನಿನ್ನನಾರ್ ಕಾವೊಡಂ ೨೫

ವ॥ ಎಂದು ಕೈಟಭಾಂತಕನಾಸ್ಫೋಟಿಸೆ ಕಲ್ಪಾಂತಸಮಯ ಸಂರಂಭಮನಪ್ಪು
ಕೆಯ್ದುಮೇಕಾಂಗದಿಂ ಯುದ್ಧಕೇಳಿಗೆ ಬಂದ ಕಾಳಿಂದೀಸೋದರನಂ ದಾಮೋದರಂ
ನೋಡಿ

ಚಂ॥ ಬರಿಸಮರೇಂದ್ರನಂ ಬರಿಸು ಪಾವಕನಂ ಬರಿಸಾತ್ಮಸೈನ್ಯಮಂ
ಬರಿಸು ನಿಶಾಟನಂ ಬರಿಸು ವಾರ್ಧಿಪನಂ ಬರಿಸಗ್ನಿಮಿತ್ರನಂ
ಬರಿಸು ಕುಬೇರನಂ ಬರಿಸು ರುದ್ರನನಿಂತಿವರೆಲ್ಲರುಂ ನೆರಂ
ಬರೆ ನಿನಗಾಂತು ನಿಲ್ ನಿನಗೆ ತೋರ್ಪೆನೆನ್ನ ಭುಜಪ್ರತಾಪಮಂ ೨೬

ವ|| ಎನೆ ವನಜಮಿತ್ರಪುತ್ರಂ ದರಹಸಿತವದನಾರವಿಂದನಾಗಿ

ಕಂ|| ನರ ನೀಂ ಲೆಕ್ಕವೆ ಶಕ್ರಾ
ದ್ಯರುಮಂ ಪರಿದಟ್ಟಿ ಮುಟ್ಟುವಾ ಕಾಲನೆನಾಂ
ನೆರವೆನಗೇವುದೊ ಕಾಲಂ
ನೆರಮಂ ಪಾರ್ದೆಡೆಗಳೊಳವೆ ನೀಂ ಕೇಳ್ದಱಿಯಾ ೨೭

ತ್ರಿಣಯನಶೌರ್ಯಂ ತಾಂ ಘೋ
ಷಣೆವಡೆವುದೆ ಲೋಕಲಯದೊಳೆನ್ನಂ ಪೋಲ್ತಿ
ರ್ದನಿತಱಿತೂಳೆನೆ ಸಾಕ್ಷಾತ್ಕಾ
ಲನೆನಾಂ ಮತ್ತೆನಗೆ ಮರ್ತ್ಯ ನೀನಿದಿರಾಂಪೈ ೨೮

ವ|| ಎಂದಾಟೋಪದಿಂ ಮುಟ್ಟೆವರ್ಪುದುಂ

ಚಂ|| ಅಳವಿಗೆ ಸಾರ್ದನೇ ಬೆರಗುವಾರ್ದನೆ ಮೆಯ್ವಳಿಯಿಂದೆ ಪೋರ್ದನೇ
ತಿಳಿವೊಡದಿಲ್ಲ ಕಂಡಳತೆಗೆಯ್ದಿದನೆಯ್ದಿದ ಬೇಗದಿಂದವು
ಪ್ಪಳಿಸಿದನೆತ್ತಿಕೊಂಡು ಧರೆಗಿಕ್ಕಿದನಾಸ್ಯದಿನುಣ್ಮೆ ನೆತ್ತರು
ಚ್ಚಳಿಸಿನಮಾರ್ದು ಡೊಕ್ಕರಿಸಿದಂ ನೆಗಟ್ದಿಂತಕನಂ ಮುರಾಂತಕಂ ೨೯

ವ|| ಅಂತಿಕ್ಕಿ ಡೊಕ್ಕರಂಗೊಂಡುರಸ್ಸ್ಥಳೋಪರಿವಿಷ್ಟರನಾಗಿರ್ದ ಕೃಷ್ಣನಂ ದಕ್ಷಿಣ
ದಿಕ್ಪಾಲಕಂ ನಿರೀಕ್ಷಿಸಿ

ಹರಿಣಿ ||
ಅಱಿದೆನಱಿದೆಂ ನಿನ್ನಂ ಚಾಣೂರಮುಷ್ಟಿಕಮಲ್ಲರಂ
[1]ಮುಱಿದುಪರಿಗಂ[1] ಧೀಂಕಿಟ್ಟಾ ಕಂಸನಂ ನೆಲಕಿಕ್ಕಿ ಮೇ
ಲೆಱಗಿ ತುಳಿದುಂ ಮತ್ತಂ ಭಾರಾಪಹಾರನಿಮಿತ್ತದಿಂ
ದಱಿಸಿ ಖಳರಂ ಕೊಂದಿಕ್ಕಲ್ಕಿರ್ದ ಕೃಷ್ಣನೆ ನೀಂ ದಿಟಂ ೩೦

ಕಂ|| ಕರುಣಿಪುದೆನಗಿತ್ತಪೆನಾಂ
ಗುರುಪುತ್ರನನೆಂದು ಯಾತನಾಸಂಸ್ಥಿತನಂ
ತ್ವರಿತಂ ಕುಡೆ ಪೂರ್ವಕ್ರಮು
ಶರೀರಿಯಂ ಸುತನನುಯ್ದು ಹರಿ ಗುರುಗಿತ್ತಂ ೩೧

ವ|| ಅಂತವಂತೀಪುರವಾಸಿಯಪ್ಪ ಗುರುವಿಂಗಭಿಮತಾರ್ಥಮನಿತ್ತು

---
1 ಮುರಿದ ಪರಿಗಂ (ಕಖಗ)

ಚಂ॥ ಸ್ಫುರಯಿಸುವಸ್ತ್ರಶಾಸ್ತ್ರಕಳೆಯಿಂದುದಿತೋದಿತತೇಜನುತ್ತರೋ
ತ್ತರಬಳನುನ್ನತೋನ್ನತಪರಾಕ್ರಮನಾಗಿ ನಿಜಾಗ್ರಜಾನ್ವಿತಂ
ಮುರರಿಪು ಬಂದು ಪೊಕ್ಕು ಮಧುರಾಪುರಮಂ ಪುರಕಾಮಿನೀಪರಂ
ಪರೆಯ ಮನಂಗಳಂ ಪುಗುತೆ ಪೊಕ್ಕನುದಾರತರೇಂದ್ರಗೇಹಮಂ ೩೨

ಕಂ॥ ಮುಸೃಣೋಕ್ತಿಯಿನವನತಿಯಿಂ
ಪ್ರಸನ್ನ ವೀಕ್ಷಣದಿನಿರ್ವರ್ಗಿದುಚಿತಮೆನಲ್ ಮ
ನ್ನಿಸುತುಂ ಯದುಕುಲಮಂ ಮ
ನ್ನಿಸುತಿರ್ದಂ [1]ಮನುಜಭಾವಮಂ[1] ದನುಜಹರಂ ೩೩

ವ॥ ಅನ್ನೆಗಮಿತ್ತಲ್

ಶಾ॥ ವ್ಯಸ್ತಾಲಂಕೃತಿಕರ್ಣೆಯರ್ ಪ್ರವಿಗಳದ್ಬಾಷ್ಪಾಂಬುಲೋಲಾಕ್ಷಿಯರ್
ಸ್ರಸ್ತಾನೀಳಕಚೌಘೆಯರ್ ಪ್ರಚುರಹಾಹಾನಿಸ್ವನಾಕ್ರಾಂತೆಯರ್
[2]ಹಸ್ತೋಗ್ರೋದ್ಘಟಿತೋದಿತೋದರಿ[2]ಯರತ್ಯಂತಾರ್ತಿಯರ್ ಕಂಡರಂ
ದಸ್ತಿಪ್ರಾಸ್ತಿಯರೆಂಬ ಕಂಸಸತಿಯರ್ ವಿಖ್ಯಾತನಂ ತಾತನಂ ೩೪

ವ॥ ಆಗಳಾ ಪ್ರಿಯತನೂಜೆಯರ ನವ್ಯವೈಧವ್ಯಮಂ ಕಂಡು ತದ್ವೃತ್ತಾಂತಮಂ ತಿಳಿದು ಮಗಧೇಶ್ವರಂ ಜರಾಸಂಧನತಿಕ್ರೋಧಮಂ ಕೈಕೊಂಡು

ಮ॥ ತಿಱಿಕಲ್ಲಾಡುವೆನೋ ಕುಲಾದ್ರಿಚಯಮಂ ವಾರಾಸಿಯಂ ತಾಯ್ಮಟ
ಲ್ದೆಱೆವಂತೀಂಟುವೆನೋ ಕಳಲ್ಚುವೆನೊ ಚಂದ್ರಾದಿತ್ಯರಂ ಶಕ್ರನಂ
ಸೆಱೆಗೆಯ್ದಾಳ್ವೆನೊ ಕೀಳ್ವೆನೋ ದಿಗಿಭದಂತವ್ರಾತಮಂ ಮೇರುವಂ
ಪೆಱತೇನೂದಿಯೆ ಚೆಂಡುವಾಱುಸುವೆನೋ ಬ್ರಹ್ಮಾಂಡಮಂ ಪೋಟ್ವೆನೋ ೩೫

ಹರಿಯೊಳ್ ಬೇಡವಿರೋಧಮೆಂಬವರ ಮಾತಂ ಮೀಱುವೆಂ ಮೀಱುವೆಂ
ಧುರದೊಳ್ ರಾವಣನಂಧಕಾಸುರನ ಕೂರ್ಪಂ ತೋಱುವೆಂ ತೋಱುವೆಂ
ಪರಸ್ಪೈನ್ಯಾಮಿಷಮಂ ಪಿಶಾಚನಿವಹಕ್ಕಾಂ ಬೀಱುವೆಂ ಬೀಱುವೆಂ
ಸುರರ್ಗಾಂ ಬೀರಮನೆನ್ನ ಚಾಪರವದಿಂದಂ ಸಾಱುವೆಂ ಸಾಱುವೆಂ ೩೬

---

[1] ಮನುಜಭಾವದಿಂ (ಕಗ) [2] ಹಸ್ತಾಗ್ರಸ್ಫುಟಿತೋದಿತೋದರಿ (ಕಖ) ಹಸ್ತೋಗ್ರಸ್ಫುಟಿತೋದಿತೋದರಿ (ಗ)

ಧುರದೊಳ್ ಬಂದಿದಿರೊಡ್ಡೆ ಕಂಸಹರನೊಡ್ಡಂ ತುತ್ತುವೆಂ ತುತ್ತುವೆಂ
ಮುರವಿಧ್ವಂಸಕನಂಜಿ ಮೆಯ್ಸೆಡೆಯೆ ಬೆನ್ನಂ ಪತ್ತುವೆಂ ಪತ್ತುವೆಂ
ಹರಿ ಮೇಣ್ ಪೊಕ್ಕಿರೆ ಕೋಂಟೆಯುಂ ಮಧುರೆಯುಂ ಪೋ ಮುತ್ತುವೆಂ ಮುತ್ತುವೆಂ
ಪರಭೂಚಕ್ರಮನೆನ್ನ ತೇಜದುರಿಯಿಂದಂ ಸುತ್ತುವೆಂ ಸುತ್ತುವೆಂ ೩೭

ನರನಾಥರ್ ಬೆಸಕೆಯ್ವ ಪೆಂಡಿರೆಳಸಿರ್ಪ ರೂಢಿಯುಂ ಗಾಡಿಯುಂ
ಧರೆಯೆಲ್ಲಂ ತಣಿವನ್ನಮುಂ ಮನದೆ ಕೊಳ್ವೀ ಚಾಗಮುಂ ಭೋಗಮುಂ
ಸುರರಟ್ಟಾಡುವ ಮೇರುವಕ್ಕುಳಿಸುವೆನ್ನೀ ಶೌರ್ಯಮುಂ ಧೈರ್ಯಮುಂ
ಹರಿಯೊಳ್ ಕಾದಿ ಕೃತಾರ್ಥಮಕ್ಕುಮಿದು ಲೋಕಸ್ತುತ್ಯಮುಂ ಕೃತ್ಯಮುಂ ೩೮

ವ|| ಎಂದು ನಿಶ್ಚೈಸಿ ಮಗಧರಾಜಂ ಪ್ರಸ್ಥಾನಭೇರಿಯುಂ ಪೊಯ್ಸೆಂದು ಸೇನಾಗ್ರಣಿಗೆ ಬೆಸಸಿದಾಗಳ್

ಮ||ಸ್ರ|| ಗಗನಕ್ಕಂಭೋಧಿ ತುಳ್ಕಾಡಿದುದವನಿಗೆ ತಾರಾಳಿ ಸೂಸಿತ್ತು ದಿಕ್ಪಾ
ಲಗಣಕ್ಕಾಶಂಕೆ ಪುಟ್ಟಿತ್ತಿದು ಮಗಧನ ಭೇರೀರವಂ ಕೆಟ್ಟೆವಾತಂ
ಗಗಿದಾವಾವಾಳ್ವೆಸಂಗೆಯ್ದಪೆವೆನೆ [1]ಮಹಿಪರ್[1] ಪೊಣ್ಮಿತುಚ್ಛೃಂಖಲಂ ಗೋ
ತ್ರಗಿರಿಚ್ಛಾತ್ರಾನುವಾದಾಧ್ಯಯನಗುರು ಜರಾಸಂಧಭೇರೀನಿನಾದಂ ೩೯

ವ|| ಅಂತು ಗಂಭೀರನಾದಂ ನೆಗೞೆ

ಚಂ|| ಎಣಿಕೆಗಳುಂಬಮಿಾ ಬಳಮದೊಂದು ವಿಚಿತ್ರಮದೊಂದಗುರ್ವದೊಂ
ದಣಕಮದೊಂದತರ್ಕ್ಯಮೆನೆ ರೌದ್ರರಸಂ ಮಿಗೆ ಪಣ್ಣಿದಾನೆ ಪ
ಲ್ಲಣಿಸಿದ ವಾಜಿ ಪೂಡಿದ ರಥಂ ವಿವಿಧಾಯುಧವಾಂತ ಪತ್ತಿ ಸಂ
ದಣಿಸಿರೆ ಬಂದುದಂದು ಚತುರಂಗಬಲಂ ಮಗಧಕ್ಷಿತೀಶನಾ ೪೦

ವ|| ಅನಂತರಂ

ಮ|| ಬಳವತ್ಸೈನ್ಯಪದೋತ್ಥಪಾಂಸುಚಯದಿಂ ಸೇನಾಮಹಾಭಾರದಿಂ
ಬಳಕೋಳಾಹಳದಿಂ ವಿಯಚ್ಚರಗಣಂ ಶೇಷಂ ದಿಶಾಪಾಲಕರ್
ಪೊಲಗೆಟ್ಟೋಡೆಯುಳುರ್ಕೆಗೆಟ್ಟು ಕಿವಿ ಶಬ್ದಂಗೆಟ್ಟು ನಿಲ್ವನ್ನೆಗಂ
ತಳರ್ದಂ ಸಾಹಸಕೀರ್ತನಾಚತುರನಾನಾಮಾಗಧಂ ಮಾಗಧಂ ೪೧

1 ಮಹಿಮರ್ (ಗ)

ಮ॥ಸ್ರ॥ ಘನಜಾತಾವಿಕ್ರಮಂ ಮುನ್ನಮೆ ತನಗೆ ನಿಜಂ ಮಿತ್ರೆ ಚೇದೀಶ ದುರ್ಯೋ
ಧನ ಮಾದ್ರಾಂಗಾಧಿರಾಜಪ್ರಭೃತಿನೃಪವರರ್ ಕೂಡಿದರ್ ತಮ್ಮೊಳೀ ವೀ
ರನೊಳಿನ್ನಾರಾಂಪರಿನ್ನಾರ್ ಚಲದೆ ಮಲೆವರಿನ್ನಾರ್ ಭರಂಗೆಯ್ವರಿನ್ನಾರ್
ಮೊನೆಯೊಳ್ ಮಾರ್ಕೊಳ್ವರೆಂಬೊಂದೆಸಕಮೆಸೆಯೆ ಬಂದಂ ಜರಾಸಂಧ
ಭೂಪಂ ೪೨

ಘನವೀಧೀಸಿಂಧು ಪೊಣ್ದಂಬರತಳದೊಳಪೂರ್ವಾಪನೀಚಕ್ರಮಾಗಿ
ರ್ಪಿನೆಗಂ ವಾರಾಸಿಗಳ್ ಪೊಣ್ದೆಳೆಯೊಳಭಿನವದ್ವೀಪರೂಪಂಗಳಾಗಿ
ರ್ಪಿನೆಗಂ ಬ್ರಹ್ಮಾಂಡಭಾಂಡಂ ನಿಜಬಹುಳತೆಯಿಂ ಮೃತ್ತಿಕಾಭಾಂಡದಂತಿ
ರ್ಪಿನೆಗಂ ಪರ್ಬಿತ್ತದೆತ್ತಂ ಮಗಧನೃಪಬಲೋದ್ಭೂತಧೂಳೀಪ್ರತಾನಂ ೪೩

ವ॥ ಅಂತು ಭುವನಕ್ಷೋಭಮಾಗೆ ನಡೆತಂದು ಮಧುರಾಪುರಮನೆಯ್ದೆವರ್ಪ
ಸಮಯದೊಳ್

ಉ॥ ಇದು ಸಪ್ತಾಂಬುಧಿಘೋಷಮೊಂದೆಡೆಗೆನಂದಂತಾಯ್ತಿನಿಪ್ಪನ್ನೈನ್ಯೈ
ನ್ಯದ ಘೋಷಂ ಕಿವಿಗೆಯ್ದೆ ಮಾಗಧನ ಸೇನಾಘೋಷಮೆಂದಚ್ಯುತಂ
ಕದನೋತ್ಸಾಹದೆ ಸೂಟಿಸೂಟಿಡರೆ ಮುಯ್ವಂ ನೋಡುತಂ ಬಾಹುಕಾಂ
ಡದ ಕಂಡೂತಿಗಳಂ ತೆರಳ್ಚಲಿಡೆಯಾಯ್ತೆಂದಂದು ಮೆಯ್ವೆರ್ಚಿದಂ ೪೪

ವ॥ ಅಂತು ಕಂಸಾಂತಕಂ ಸಮರಸಂರಂಭದಿನಿರೆ ಯಾದವರ್ ತಮ್ಮೊಳಾಳೋ
ಚನಂಗೆಯ್ದು ಮಾಗಧನತಿಬಲಾಧಿಕಂ ನಮಗೆ ಕೋಂಟೆಯೊಳಿರ್ದು ಕಾದುವುದು ಕಜ್ಜ
ಮೆಂದು ನಿಶ್ಚೈಸಿ ಪುರದ ಗೋಪುರಾಟ್ಟಾಳಕಂಗಳೊಳಲ್ಲಲ್ಲಿಗೆ ಪೆಸರ್[1]ನಾಯಕರಂ ಸಮ
ಕಟ್ಟಿ[1]ನಿಲ್ವುದುಂ ಜರಾಸಂಧಂ ಮುಟ್ಟೆವಂದು ಕಾಳಿಂದೀಸಿಂಧುತೀರದೊಳ್ ಸಕಲರಾಜ
ಲೋಕಪರಿವೃತನಾಗಿ ಕುಳ್ಳಿರ್ದು

ಮ॥ ಅವನೀಕಂಪನಮಬ್ಧಿ[2]ಶೋಷಣ[2]ಮುರಗ್ಯೋನ್ಮೂಲನಂ ಭೂಮಿಭೃ
ನ್ನಿವಹಕ್ಷೇಪಣಮಿಂದ್ವಿನಸ್ಖಲನಮಭ್ರಾಳೋಡನಂ ತಾರಕಾ
ಚ್ಯವನಂ ಪದ್ಮಭವಾಂಡನಿರ್ದಳನಮಾಯ್ತುಸ್ಮದ್ಬಲಾಟೋಪದಿಂ
ನಮಗಿನ್ನುಂ ಪೊಣಲಳ್ಕದೆಂದು ಮಗಧೇಶಂ ಕ್ರೋಧಮಂ ತಾಳ್ದಿದಂ ೪೫

ವ॥ ಆಗಳತಿಕ್ರೋಧಮಂ ತಳೆದು ಮಗಧರಾಜಂ ಚೇದಿರಾಜನಂ ನಿರೀಕ್ಷಿಸೆ

ಮ॥ ನರನಾಥಾಗ್ರಣಿ ನೀಂ ಮೊಗಕ್ಕೆ ಮುಳಿಸಂ ತರ್ಪನ್ನಮೇನುಂಟೆ ಸಂ
ಗರಮೆಮ್ಮಮ್ಮನೆ ದೇವ ನೀಂ ಬೆಸಸಿದರ್ಕಾವಾವೆ ಹೋ ಸಾಲ್ವೆವೆಂ
ದು ರಣಕ್ರೋಧವಿಜೃಂಭಿತಾಂಬಕರಿಳೇಶರ್ ಗರ್ಜಿಸಲ್ ಭೂರಿವೀ
ರರಸಾಂಭೋಧಿಯೆ ಗರ್ಜಿಪಂತೆವೊಲಗುರ್ವಾಯ್ತಾ ಸಭಾಮಂಡಲಂ ೪೬

[1] ನಾಯಕರೆಂದು ಸಮುಕಟ್ಟಿ (ಕಗ) [2] ಘೋಷಣ (ಕ)

ವ|| ಅಂತನೇಕಪ್ರಕಾರವೀರಾಳಾಪಗಂಭೀರಭೂರಿಘೋಷಣಮುಂ, ನಿಟಿಲತಟತರಂಗಿತತ್ರಿಪಥಾಕಾರತರತ್ತರಂಗಸಂಘಾತಮುಂ, ಉತ್ಕಟವಿಕಟಬದ್ಧಭ್ರುಕುಟಿಜನಿತತಮಸ್ತಮಾಳವೇಳಾವನಮುಂ, ಉಜ್ಜೃಂಭಿತಾತಾಮ್ರಲೋಚನಾರುಣಕಿರಣತರಳಪ್ರವಾಳಪಟಲಮುಂ, ಅಂತರಂಗಜ್ವಳಿತಕೋಪಾನಳೌರ್ವಾನಳಮುಂ, ಅನ್ಯೋನ್ಯಸಂಘಟ್ಟನೋಚ್ಚಳಿತಕಟಕಕೇಯೂರಹಾರಾದ್ಯಾಭರಣಮುಕ್ತಾಫಲಪ್ರಕರಶೀಕರಮುಮೆನಿಸಿ ಘೂರ್ಣಿಸುವ ಅಸಂಖ್ಯಾತನೃಪವೀರರಸಾರ್ಣವಕ್ಕೆ ಭಟಕೋಟಿನಿಗ್ರಹಾನುಗ್ರಹಮೆಂಬ ಚಂಡ[1]ಪವನನಿಸತಿಕ್ಷೋಭಮಂ ಪಡೆದು[1] ವಿಚಿತ್ರಯಂತ್ರಬದ್ಧಾಂಗಾರಕುದ್ದಾಲಪರಶುಕ್ಷಾರಪ್ರಕಂಟಕನಿಶ್ರೇಣಿಮುಖ್ಯಾನೇಕದುರ್ಗಸಾಧನಪರಿಕರಂಗಳ್ವೆರಸುನಡೆದು, ಭೋರ್ಗರೆವ ಲಗ್ಗೆವಱಿಗಳ್ವೊಳಗೆ ಸುತ್ತಿ ಮುತ್ತಿ, ಪರಿಖಾಚಕ್ರಮನತಿಕ್ರಮಿಸೆ ಅಟ್ಟಾಳ ಪ್ರಾಕಾರತಳದೊಳಿರ್ದ ಯದುಸೈನ್ಯಸುಭಟರಿಸುವಿಱುವ ಬೀಸುವ ಯಂತ್ರಮುಕ್ತಕರಮುಕ್ತಮುಕ್ತಾಮುಕ್ತಂಗಳೆಂಬ ವಿವಿಧೋಪಾಯ ಶಸ್ತ್ರಂಗಳೊಳಂ ಬಿಡುವ ಘಟಸರ್ಪಕೋಟಿಗಳೊಳಂ ಚಿಮ್ಮುವ ಜಂತ್ರದುರಿಯೆಣ್ಣೆಯೊಳಂ ಚೆಲ್ಲುವ ತಪ್ತವಾಳುಕಜಾಲದೊಳಂ ಸೂಸುವ ಕಾದ ಸಜ್ಜರಸದೊಳಂ ಸಿಂಪಿಸುವ ಕರಗಿದ ಮಯಣದೊಳಂ ಕೆದಱುವ ಕೆಂಡಗಳೊಳಂ, ಮಡಿದು ಕೆಡೆವ ವೀರರ ಪೆಣದ ಬಣಂಬೆಯಂ ಮೆಟ್ಟಿ, ನರವಿದ್ಧಕೋಟಾವಳಯಮೆನಿಸಿ, ಕೋಟೆಯ ತಳದಿನಗ್ರಂಬರಮೆಡದರ್ದು, ಯದುವೀರರೊಳ್ ಕೇಶಾಕೇಶಿಯುದ್ಧದಿಂ ತಳ್ತಿಱಿದೊಳಪುಗುವ ಮಗಧಸೈನ್ಯಮಂ ಕಂಡು ಪುಂಡರೀಕಾಕ್ಷಂ ರೌಹಿಣೇಯಂಬೆರಸು ವಿಜಯವರೂಥಾರೂಢನಾಗಿ ಅಗುಱಿಯನುರ್ಚಿ ಪೊಱಮಡುವಾಗಳ್

ಉ|| ವಾರಿಧಿ [2]ಮೇರೆಯೊಳ್[2] ಪ್ರಳಯದೊಳ್ ತಳರ್ವಂತೆವೊಲಾಗಳಾ ಪುರ
ದ್ವಾರಚತುಷ್ಕದೊಳ್ ಯದುಬಲಂ ತಳರ್ದತ್ತು ಮದೇಭಘೋರಘಂ
ಟಾರವಮಶ್ವಹೇಷಿತರವಂ ಭಟಸಿಂಹರವಂ ವರೂಥಚೀ
ತ್ಕಾರರವಂ ಪದಿರ್ಮಡಿಸೆ ಕಾಹಳದುಂದುಭಿಶಂಖನಾದದಿಂ ೪೭

ಕಂ|| ಯದುಮಗಧಸೈನ್ಯಯುಗದೊಳ್
ಕದನಂ ಮಸೆದೊಡೆ ಮರುಳ್ಗಳಡದಿಂಬುತ್ತಾ
ಹದೆ ಪಲ್ಲಂ ಮಸೆದುವು ನಾ
ರದನುಗುರಂ ಮಸೆದು ನೋಡುತಿರ್ದಂ ನಭದೊಳ್ ೪೮

ವ|| ಅನ್ನೆಗಂ

ಕಂ|| ನಿಜನಿಜವಿಭವಂ ಜನಿಯಿಸೆ
ನಿಜನಿಜವಾಹನಮನೇಱಿ ಪುರಹರ ಪಂಕೇ
ಜಜ ಪುರುಹೂತಾದ್ಯಮರರ್
ನಿಜನಿಜಕಾಂತಾಸಮೇತರಿರ್ದರ್ ನಭದೊಳ್ ೪೯

---

1 ಪವನನತಿಕ್ಷೋಭಮಂ ತಳೆದು (ಕಖಗ) 2 ಮೇರೆಯಂ (ಕಗ)

ವ॥ ಅನ್ನೆಗಂ

ಚಂ॥ ಗುಣರುತಿ ಹೇಷಿತಂ ಪ್ರಚುರಚೀತ್ಕೃತಿ ಹೂಂಕೃತಿ ಗರ್ಜಬೃಂಹಿತೋ
ಲ್ಬಣರವಮುಣ್ಮೆ ಬಿಲ್ಪಡೆಗೆ ಬಿಲ್ಪಡೆ ವಾಜಿಗೆ ವಾಜಿ ತೇರ್ಗೆ ತೇ
ರಣಿಗಣಿ ಕುಂತವಾಹಿನಿಗೆ ಕುಂತದ ವಾಹಿನಿ ವಾರಣಕ್ಕೆ ವಾ
ರಣವಿದಿರೊಡ್ಡನೊಡ್ಡಿದುದು ಯಾದವಮಾಗಧಸೈನ್ಯದಾಜಿಯೊಳ್ ೫೦

ಕಂ॥ ಶಬ್ದಾದ್ವೈತಂ ಜಗಮೆನೆ
ಲಬ್ಧರವೋದಾರಮಾದ ವಾದಿತ್ರಮಹಾ
ಶಬ್ದದೆ ಭೂಮಿವ್ಯೋಮಕ
ಕುಬ್ಧಳನಮೊಡರ್ಚೆ ತಾಗಿದತ್ತುಭಯಬಲಂ ೫೧

ಚಂ॥ ಭರದಿನೆರಬ್ಬಲಂಗಳ ಪದಾತಿ ಪದಾತಿಯೊಳಶ್ವಮಶ್ವದೊಳ್
ಕರಿ ಕರಿಯೊಳ್ ರಥಂ ರಥದೊಳಾರ್ದು ಪಳಂಚೆ ನಭಂ ದಿಶಾತಟಂ
ಧರೆ ಕಡುಗೆಂಪದಾಯ್ತೊಗೆವ ಶೋಣಿತದಿಂದೆ ಜಗಂ ಮಹಾವನಾಂ
ತರಮೆ ಪೊದಟ್ದು ರೌದ್ರರಸಸೇಚನದಿಂ ತಳಿರ್ತೇಱುತೆಂಬಿನಂ ೫೨

ಕಂ॥ ಬಿಗಿದ ಡೊಣೆ ತೆಗೆದ ಪದವಿಲ್
ಪುಗುವಡಿ ನಿಟ್ಟಿಸುವ ದಿಟ್ಟಿ ತೊಟ್ಟ ಸರಲ್ ದಿ
ಟ್ಟಿಗೆ ವರೆ ಸಾರ್ದಿದಿರಂ ಕಡು
ಪುಗಿಡಿಸಿ ಕೆದಱುದರೆ ಕಣೆಗಳಂ ಸುಭಟರ್ಕಳ್ ೫೩

ಕಣೆಯಿಂ ಸಮೆದುದೊ ಧಾರಿಣಿ
ಕಣೆಯಿಂ ಕೇರ್ಗಟ್ಟಿತೋ ದಿಶಾವಳಿ ಕಣೆಯಿಂ
ಪೆಣೆದುದೊ ಗಗನಾಂಗಣಮೆನೆ
ಕಣೆಗಳನಿರ್ವಲದ ಬಿಲ್ಲ ವೀರರ್ ಕಱತದರ್ ೫೪

ಮುಳಿಸಿಂದಿಸಲೊಡವಾಱುವ
ಶಿಳೀಮುಖಂಗಳೆ ಶಿಳೀಮುಖಂ ಕಂಜಾತಂ
ಗಳೆ ಕಂಜಾತಮೆನಲ್ ಪೂ
ಗೊಳಸಂ ಪೋಲ್ತುದು ನಭಂ ಧನುರ್ಧರ[1]ಧುರದೊಳ್[1] ೫೫

[1] ನಭದೊಳ್ (ಗ)

ಕುಂತದೆ ಕುತ್ತೀಡಾಡಿ ನ
ಭೋಂತಕ್ಕೊಗೆದಿರ್ದ ಸುಭಟತತಿ ಖಚರಬಲ
ಭ್ರಾಂತಿಯನಿನಿಸಂ ಜನಿಯಿಸೆ
ಕುಂತಧರರ್ ಕಾದಿ ಮೆಱೆದರದ್ಭುತರಸಮಂ ೫೬

ಮ॥ಸ್ರ॥[1]ಕರುಳೊಕ್ಕೊಕ್ಕರ್ಪಿಯೊಳ್[1] ಕುಪ್ಪಳಿಸೆ ನೆಣದಳಿರ್ ಸೂಸೆ ಬಂಬಲ್ಮಿದುಳ್ ಪಾ
ಯ್ಮುರೆ ನೆತ್ತರ್ ಸುರ್ರೆನುತ್ತುಂ ನಿಮಿರೆ ಕೆದಱಿ ಖಂಡಂ ಕೊರಲ್ ಸೆಕ್ಕೆವೋಗು
ತ್ತಿರೆ ತೋಳ್ ಬೇಱಾಗೆ ಕಾಲ್ ಖಂಡಿಸೆ ನಡು ಕಡಿವೋಗಲ್ಕೆ ಜೀರೇಱಿ
ಮೂರ್ಧಂ
ಕರವಾಳೊಳ್ ಬಾಳ್ವಳಂಚುತ್ತುರಿಯನುಗುೞಿ ಕಾದಿತ್ತು ಖಡ್ಗಿಪ್ರತಾನಂ ೫೭

ಕಂ॥ ಬಳೆದುದು ಕೆಂದೂಳಿ ಖುರಾ
ವಳಿಯಿನೆನಲ್ ನೆಗೆದ ತಮ್ಮ ರಜಮಂಬರದೊಳ್
ಬೆಳಗುವ ಕಿಸುಸಂಜೆಮುಗಿಲ್
[2]ಪೊಳೆವಾಳ್ ಮಿಂಚೆನಿಸೆ[2] ಕಾದಿದರ್ ಘೋಟಿಯಾಯ್ಲರ್ ೫೮

ಚಂ॥ ತವದ ಪೊಡರ್ಪಿನಿಂದಿಸುವ ಕೂರ್ಗಣೆ ಕುತ್ತುವ ಕೊಂತಮೆತ್ತಿ ಮೋ
ದುವ ಗದೆ ಪೊಯ್ವ ಬಾಳ್ ಬಿಡುವ ಕರ್ಕಡೆ ತೂಗುವ ವಜ್ರಮುಷ್ಟಿ ಬೀ
ಸುವ ಸಬಳಂ ವಿಚಿತ್ರಮೆನೆ ತಳ್ತಿಱಿದರ್ [3]ಮನೆಯಲ್ಲಿ[3] ಕಲ್ತ ಪಾ
ರ್ಥಿವಕುಲವಿದ್ಯೆಯಂ ಮೊನೆಯೊಳಂ ನೆಱೆ [4]ತೋರ್ಪುರುಸಾಸವಾಸಿಗಳ್[4] ೫೯

ಮ॥ಸ್ರ॥ ಕರದೊಳ್ ಕೂರಂಕುಸಂಗಳ್ ಪೊಳೆಯೆ ಪರಿಯಿಪಾಧೋರಣನರ್ ತೀರ್ಪ
ಕಾತೋ
ಮರನಾರಾಚಂಗಳಿಂದಾರ್ದಿಸುವತಿಬಳಜೋದರ್ ವಿಯಚ್ಚಕ್ರದೊಳ್ ಸಂ
ಚರಿಪುಚ್ಚೈಃಕೇತನಂಗಳ್ ತೊಳಪ ಗುಳಮುಮಿಂಬಾಗೆ ಕಣ್ಗೊಂಡುದೆತ್ತಂ
ಪರಿಯುತ್ತುಂ ಭೌಮವ್ಯೂಹಾಯಸಪಥವಿಧಮಂ ತೋಱುತುಂ ದಂತಿಸೈನ್ಯಂ ೬೦

ಕಂ॥ ಮಸ್ತಕದಿಂ ಮುತ್ತುಗಳುಂ
ಮಸ್ತಿಷ್ಕಮುಮುದಿರೆ ಕೋಟ್ಕಳಿಂ ಕಿಡಿಯುಂ ಶ
ಳ್ಕಸ್ತೋಮಮುಮುಚ್ಚಳಿಸೆ ಮ
ದಸ್ತಂಬೇರಮಘಟಾಳಿ ಪೋರ್ದುದು ರಣದೊಳ್ ೬೧

---

[1] ಕರುಳೊಕ್ಕುಕ್ಕುರ್ವಿಯೊಳ್ (ಕಗ) [2] ಪೊಳೆವೆಳಮಿಂಚೆನಿಸೆ (ಕಗ) ಪೊಳೆವೆಳೆ ಮಿಂಚೆನಿಸೆ (ಖ) [3] ಮೊನೆಯಲ್ಲಿ (ಕಗ) [4] ತೋರ್ಪ ರಸಾಸವಾರಿಗಳ್ (ಕ) ತೋರ್ಪ ರಸಾಸವಾರಿಗಳ್ (ಖ)

ಪೊಂಗಾಲಿ ಮಿಱುಗೆ ಪಱಿಯಿಗೆ
ಬಾಂಗೆ ಪೆಡಂಮುಗುಳೆ ಸೂತರೆಸಗುತ್ತಿರೆ ವಾ
ಹಂಗಳತಿಜವದೆ ಪಱಿಯೆ ರ
ಥಂಗಳ್ ಪಱಿದುವು ಬಳಾಬ್ಧಿನಕ್ರಾಕೃತಿಯೊಳ್ ೬೨

ಜೀರ್ಗರೆಯೆ ತೆಗೆದು ಬಿಲ್ಲಂ
ಭೋರ್ಗರೆದು [1]ವರೂಥಿಯೂಥ[1]ಮಿಸಲನ್ಯೋನ್ಯಂ
ಕೂರ್ಗಣೆ ನಟ್ಟುವು ನೇರ್ದುವು
[2]ನೇರ್ಗೋಲ್ ಪಱಿದುವು[2] ಪಳಂಚಿದುವು ದಿಕ್ತಟಮಂ ೬೩

ವ|| ಅಂತತಿಭಯಂಕರಮಾದ ಸಂಕುಲಯುದ್ಧದೊಳುಗ್ರಸೇನವಾಹಿನಿ ಸಮುದ್ರದೊಳ್ ಬೆರಸಿದ ವಾಹಿನಿಯಂತೆ ಮಗಧಸೇನಾಸಮುದ್ರದೊಳಟ್ಟಾಡುತ್ತುಮಿರಲದಂ ಕಂಡು ಸಂಕರ್ಷಣನಮರ್ಷಣನಾಗಿ [3]ನಿಜಪೂರ್ವ[3] ದಿವ್ಯಾಯುಧಂಗಳಂ ಮನದೊಳ್ ನೆನೆದಂತರಿಕ್ಷತಳಮಂ ನಿರೀಕ್ಷಿಸೆ

ಕಂ|| ನಹುಷನಗಸ್ತ್ಯನ ಶಾಪದೆ
ಮಹೋಗ್ರಫಣಿಯಾಗಿ ಬಿಟ್ಟುದಂ ನೆನೆಯಿಸೆ ಬಂ
ದು ಹಲಂ ದಿವದಿಂ ಬಲಭ
ದ್ರಹಸ್ತದೊಳ್ ನಿಂದುದತಿಭಯಂಕರರೂಪಿಂ ೬೪

ಪಗಲುಳ್ಕಂ ಬಿೞ್ದಪುದೀ
ಮಗಧಂಗೆನೆ ರಕ್ತಮಾಲ್ಯಭೂಷಿತಮುಸಲಂ
ಗಗನದಿನೆೞ್ತಂದರಿಸೇ
ನೆಗಳೞ್ಕುೞೆ ನೆಲಸಿದತ್ತನಂತನ ಕರದೊಳ್ ೬೫

ವ|| ಆಗಳ್

ಕಂ|| ಪಱಿಪಱಿದು ನೇಗಿಲಿಂದಂ
ಬರೆ [4]ತೆಗೆತೆಗೆದಲ್ಲಿ[4] ಮುಟ್ಟೆ ಮುಸಲದೆ ಪೊಯ್ಪೊ
ಯ್ದರಿಬಲಮನಿಕ್ಕಿದಂ ಹಲಿ
ಸುರನಿವಹಂ ನೋಡಿ ಭಾಪುಭಾಪೆಂಬಿನೆಗಂ ೬೬

[1] ವರೂಥಯೂಥ (ಕಖಗ) [2] ನಟ್ಟುವು ನೇರ್ಗೋಲ್ಪಱಿದುವು (ಕಗ) [3] ನಿಜವಿದ್ಯಾ (ಕಗ) [4] ತೆಗೆತೆಗೆದಟ್ಟೆ (ಕಖ)

ಎತ್ತ ದವಾನಳನಟ್ಟುಱಿದು
ದತ್ತಲೆ ಪೇರಡವಿ ತವುವ ತೆಱದಿಂ ಬಲನಂ
ದೆತ್ತೆತ್ತಮೊಗದೆ ಕಾದಿದ
ನತ್ತತ್ತಲೆ ಮಗಧಸೇನೆ ಮಡಿದುದನಂತಂ ೬೭

ತುರಗದೆ ತುರಗಮನಿಟ್ಟುಂ
ನರರಿಂದಂ ನರರನಿಟ್ಟು ಪೊಡೆದುಂ ಕರಿಯಿಂ
ಕರಿಯುಂ ರಥದಿಂ ರಥಮುಂ
ಭರದಿಂದಪ್ಪಳಿಸಿ ಮೋದಿದಂ ಬಲಭದ್ರಂ ೬೮

ಚಂ॥ ಉಗಿಬಗಿಮಾಡಿ ದಂತಿಘಟೆಯುಂ ಹಲಪಾಣಿ ಹಲಪ್ರಹಾರದಿಂ
ನೆಗೆವ ತದೀಯಮಸ್ತಕದ ಮೌಕ್ತಿಕರಾಜಿಯನಿತ್ತನಾಜಿಯೊಳ್
ಗಗನತಳಕ್ಕೆ ತಾರಗೆಗಳಂ ಜಳರಾಶಿಗೆ ರತ್ನರಾಶಿಯುಂ
ದಿಗಿಭಗಣಕ್ಕೆ ಶೀಕರಮನುರ್ವಿಗೆ ಪುಷ್ಪಚಯೋಪಹಾರಮಂ ೬೯

ಕಂ॥ ಭಟರಶ್ವಮನಶ್ವಂ ಗಜ
ಘಟೆಯಂ ಗಜಘಟೆ ತೆರಳ್ದ ರಥಮಂ ರಥಮು
ತ್ಕಟಭಯದಿಂದೋಡಿ ದಿಶಾ
ತಟಮಂ ಮುಱುಕಿಗೊಳೆ ಹಲಾಯುಧಂ [1]ಮರ್ದಿಸಿದಂ[1] ೭೦

ವ॥ ಅಂತು ಬಲಹಲಪ್ರಹಾರದಿಂ ಭಯ[2]ಚಕಿತಮಾಗಿ[2] ಬೆಂಗೊಟ್ಟು ಪೋಪ ನಿಜ ಸೈನ್ಯಮಂ ಕೂಡಿಕೊಂಡು ಸರ್ವಾಂಗಸನ್ನಾಹರುಂ ಪರಿಚೋದಿತಸ್ಯಂದನರುಂ ಪ್ರಣಿಧಿತ್ರಯ ಪ್ರೇರಿತಭದ್ರಗಜರುಂ ಅತಿಜವಕ್ಷಿಪ್ತಜಾತ್ಯಶ್ವರುಮಾರೋಪಿತಚಾಪರುಮುತ್ತಾನಿತಾಂಕುಶರು[3]ಮುದ್ಧೃತ[3] ಗದಾದಂಡರುಮುತ್ಖಾತಖಡ್ಗರುಮುಜ್ಜೃಂಭಿತಾತಾಮ್ರನೇತ್ರರುಂ ವಿಚಿತ್ರವಾದಿತ್ರರುಮಾಗಿ ಮಾಗಧಪ್ರಮುಖನಿಖಿಲನರಪಾಲಕರ್ ನೊಂಕೆ ಸಂಕರ್ಷಣಂಗೆ ಸಮರಮತಿಭರವಾದುದಂ ಕಂಡು ಭುಜಕಂಡುಮಂ ತೆರಳ್ಚುವುದರ್ಕಿದುವೆ ಪದನೆಂದು ಕದನೋದ್ಯುಕ್ತನಾಗಿ ನಕ್ತಂಚರಾಂತಕಂ ತನ್ನ ದಿವ್ಯಾಯುಧಂಗಳಂ ಸ್ಮರಿಸೆ

ಮ॥ಸ್ರ॥ ಪ್ರತಿಬಿಂಬಾಭಾಸಮಂ ವ್ಯೋಮದೊಳೆ ನಿಲಿಸಿ ಸಾಕ್ಷಾದ್ದಿನಾಧೀಶಬಿಂಬಂ
ಕ್ಷಿತಿಗೆಟ್ಟಿಂದತ್ತೆನಲ್ ಭಾಸುರಕಿರಣಸಟಾಟೋಪದಿಂ ಭಾನುಬಿಂಬ
ದ್ಯುತಿಯಂ ಬೀಱುತ್ತುಮಾಕಾಶದಿನಿೞಿದು ಮುರಾರಾತಿಹಸ್ತಾಗ್ರದೊಳ್ ಸಂ
ಗತಿವೆತ್ತಿರ್ದತ್ತು ಚಕ್ರಂ ಬೆದಱೆ ಪುಗೆ ದಿಶಾಚಕ್ರಮಂ ವೈರಿಚಕ್ರಂ ೭೧

---

[1] ತಳ್ತಿಱಿದಂ (ಕಗ) [2] ಚಕಿತರಾಗಿ (ಕಖಗ) [3] ಉದ್ವೃತ್ತ (ಕಖ)

ಕಂ॥ ಚೋದ್ಯಂ ನಿರಭ್ರನಭದಿಂ
ವಿದ್ಯಲ್ಲತೆ ಫಟಿಲನಿಱಿದುದೆನೆ ಖಡ್ಗಂ ಚಂ
ಚದ್ದ್ಯುತಿಯಿಂ ಭುವನಾಂತರ
ಮುದ್ದ್ಯೋತಿಸೆ ಬಂದು ನಿಂದುದಚ್ಯುತಕರದೊಳ್ ೭೨

ರಿಪುಧೂಮಕೇತು ನೆಗೆಟ್ಟಿ
ರ್ದಪುದೆನೆ ತಾಂ ಮೊದಲೆ ಬಂದು [1]ನಿಂದುದು ಗದೆ[1] ತಾ
ರ್ಕ್ಷ್ಯಪತಾಕನ ಕರದೊಳ್ ವೈ
ರಿಪತಾಕಿನಿ ಕಂಡು [2]ಮನ[2]ದೊಳುಳ್ಳಳ್ಕುವಿನಂ ೭೩

ಚಂ॥ ನೆಗೆದುದಕಾಲದೊಳ್ ರಿಪುಹರಂ ಸುರಕಾರ್ಮುಕಮಿಂತಿದಭ್ರದೊಳ್
ನೆಗೆದಿರದಿತ್ತಲೀಬರುತುಮಿರ್ದುದೆ ಬಂದುದಿದೊಂದು ಕೌತುಕಂ
ನಗಧರಹಸ್ತದೊಳ್ ನೆಲಸಿದತ್ತೆನೆ ಚಿತ್ರಮಣಿಪ್ರಭಾವಿಳಂ
ಗಗನದಿನಂದು ಬಂದು ನೆಲಸಿರ್ದುದು ಶಾರ್ಙ್ಗಮುಪೇಂದ್ರಹಸ್ತದೊಳ್ ೭೪

ಕಂ॥ ಬಾಣಾಸನಮಿರೆ ಕರದೊಳ್
ಚಾಣೂರಾಂತಕನ ಬೆನ್ನೊಳಂ ವಕ್ಷದೊಳಂ
ಕಾಣಲ್ಬಂದತ್ತಕ್ಷಯ
ಬಾಣಧಿಯುಂ ವಜ್ರಕವಚಮುಂ ತತ್ಕ್ಷಣದೊಳ್ ೭೫

ಮ॥ ಪೊಣರ್ದೀ ಮಾರ್ಪಡೆ ಪಕ್ಷಿಚಂಚುಗೊಳಗಾಯ್ತನ್ನನ್ಯಸೈನ್ಯಂ ಮರು
ಳ್ಗಣಿಸಾಯ್ತಾ ರಿಪುಸೇನೆಯಂತಕನ ವಕ್ತ್ರಕ್ಕೆಯ್ದಿತೀ ದ್ವಿಡ್ಬಲಂ
ರಣರಂಗಕ್ಕುಪಹಾರಮಾಯ್ತೆನೆ ಮಹಾಸಂಗ್ರಾಮಕೇಳೀವಿಜೃಂ
ಭಣದಿಂದೇಱಿಸಿದಂ ಮುರಾರಿ ಯಮದಂಡೋಚ್ಚಂಡಕೋದಂಡಮಂ ೭೬

ಮುಳಿಸಿಂದೇಱಿಸಿ ನೀವಿ ಜೇವೊಡೆಯೆ ದೈತ್ಯಾರಾತಿ ಬಿಲ್ಲಂ ರಸಾ
ತಳಮಂ ತಾಗಿ ಸಿಡಿಲ್ದು ಮುಟ್ಟೆ ದಿವಮಂ ಬಂದುರ್ವಿಯಂ ಭೋಂಕನ
ಪ್ಪಳಿಸಿತ್ತೆಂಬಿನಮುಣ್ಮೆ ತಟ್ಟುಱೆ ಭುಜಂಗರ್ ಬೆರ್ಚೆ ದೇವರ್ ಭಯಂ
ಗೊಳೆ ಮರ್ತ್ಯರ್ ಪ್ರತಿಜಾತನಾಗಗೃಹನಾಕಜ್ಯಾರವಂ ಜ್ಯಾರವಂ ೭೭

ವ॥ ಅಂತು ಜಗತ್ತ್ರಯಂ ಜಾತಶಂಕಾಕುಳಿತಮಾಗೆ ನೀವಿ ಜೇವೊಡೆದು [3]ಬದ್ಧ ಕರಾಂಗುಲಿತಳ[3] ತ್ರಾಣಮುಮಾಗಿ ಸವ್ಯಾಪಸವ್ಯಮತಿವೇಗದಿಂ ತೀವಿ ತೆಗೆದಿಸಲೊಡಂ

[1] ಕಾಮೋದಕಿ (ಕಗ) [2] ನಭ (ಕಗ) [3] ಬದ್ಧತಳಾಂಗುಳಿತಳ (ಕಖಗ)

ಚಂ|| ಮಗಧ[1]ನೃಪಾದಿ[1] ಭೂಭುಜರ್ಗೆ ಪಲ್ಮೊಱೆವಂತಿರೆ [2]ಭೂರಿಟಂಕೃತಂ[2]
ನೆಗಱೆ ಪೊದಟ್ಟ ಬೆಳ್ಸವಿಸಿಲ್ ರಣದೇವತೆಯಟ್ಟಹಾಸದಂ
ತೊಗೆಯೆ ವಿರೋಧಿಸೇನೆಗಿದು ಸೂಸುವ ಜೀವನಮೂಲ್ಯನಿಷ್ಕರಾ
ಜಿಗಳೆನೆ ವಿಸ್ಫುಲಿಂಗಮಲಗಿಂ ಕೆದಱುತ್ತಿರೆ ಪಾಯ್ದುವಂಬುಗಳ್ ೭೮

ಶಾ|| ಅಂಬಂಬಂ ಬಿಡೆ ಕಾಱುತಿರ್ಪ ತೆಱನಾಯ್ತಂಬಂಬನೀಂಬಂತುಟಾ
ಯ್ತಂಬಂಬಂ ಕರೆವಂದಮಾಯ್ತು ಬಗೆವಂದಂತಲ್ತು ಮೇಣೀತನೆ
[3]ಚ್ಚಂಬೊಂದೊಂದೆ ಸಹಸ್ರರೂಪಮನೆ[3] ಕೈಗೊಂಡಿರ್ದುವೋರಂದದಿಂ
ದೆಂಬನ್ನಂ [4]ಲಘುಚಿತ್ರವೇಧಿ[4] ಕರೆದಂ ಕೃಷ್ಣಂ ಶರಾಸಾರಮಂ ೭೯

ಚಂ|| ಪುದಿಯೆ ಘನಾಧ್ವಮಂ ಸರಲ ಪಂಜರದಿಂ ಹರಿ ಗಾಳಿಯೆತ್ತವೋ
ದುದು ದೆಸೆಯೆತ್ತವೋದುದು ದಿವಾಕರಮಂಡಲಮೆತ್ತಡಂಗಿ ಪೋ
ದುದು ನಭಮೆತ್ತವೋದು[5]ದೆನಿಸಲ್ ನಡೆಗೆಟ್ಟುದು[5] ಗಾಳಿ ರೂಪುಗೆ
ಟ್ಟುದು ದೆಸೆ ತೋರ್ಕೆಗೆಟ್ಟುದಿನಮಂಡಲಮಾಕೃತಿಗೆಟ್ಟುದಾಗಸಂ ೮೦

ಕಂ|| ತರ್ಕೈಸಿ ಸುರಿವ ತೆಱದಿಂ
ದುರ್ಕಂಬುಗಳೆಱಗಿ ರೋಮರೋಮಕ್ಕೆ ನೆಳಲ್
ನೆಕ್ಕು ಚಳಿಲ್ ಚಕ್ಕುದೊಗಲ್
ದೊಕ್ಕನೆ ನಾಂಟಿದುವರಾತಿಭಟರವಯವಮಂ ೮೧

ನಗಧರನ ನಿಶಿತನಾರಾ
ಚಗಣಂ ನಡೆ ಪಾಯ್ವ ರಿಪುಭಟಾರುಣಜಲಧಾ
ರೆಗಳಂ ಜವನಿಟ್ಟೆಱವ
ಟ್ಟಿಗೆಯೆನೆ ಪೂತನೆಯರಾಂತು ಕುಡಿದರ್ ಧುರದೊಳ್ ೮೨

ಚಂ|| ತೆಗೆಸೆಱೆದಬ್ಜನಾಭನಿಸೆ ತೋಮರಮುರ್ಚಿ [6]ಸುರುಳ್ದುರುಳ್ದ[6] ದಂ
ತಿಗಳ ಶರೀರದೊಳ್ ಸುಱಿದು ಕೆತ್ತುವ ಪುಙ್ಖಳ ಬಾಯ್ಗೞಿಂದೆ [7]ಮೆ
ಲ್ಪೊಗೆವ[7]ರುಣಾಂಬುಧಾರೆಗಳಗುರ್ವಿಸುತಿರ್ದುವು ದಿಟ್ಟಿಗೊಟ್ಟಿದಾ
ವಿಗೆಯ ಘಟಂಗಳಾನಸದಿಸುಣ್ಮುವ ಕೇಸುರಿಯೊಂದು ಮಾಱ್ಕೆಯಿಂ ೮೩

---

[1] ನೃಪಾಲ (ಕಗ) [2] ಭೂರಿಭಂಕೃತಂ (ಕಖಗ) [3] ಅಂಬಂದೊಂದೆ ಸಹಸ್ರರೂಪಮೆನೆ (ಖಗ) [4] ಲಘುಚಿತ್ರವೇದಿ (ಕಖಗ) [5] ಎನಿಸಲ್ಕೆಡೆಗೆಟ್ಟುದು (ಮೊಅ) [6] ಸುರುಳ್ದುವೈರಿ (ಕಗ) [7] ಮೇಗೊಗೆವ (ಮೊಅ)

ಪೆಣದ ಬಣಂಬೆ ಕೋಟಿಕ್ಕುದುಳ ಕೋಟಿಕ್ಕಸರೆಲ್ವಿನ ಪರ್ವತಂ ಕರು
ಳ್ಪಿಣಿಲ ಪೊದಱ್ಕಿ ರುಂಡಪಡಕಿಲ್ ಸರದುರ್ಬು ಕಪಾಲದೋಳಿ ಬಾ
ಳ್ಗಿಣಪೆಡೆ ಖಂಡದಿಂಡೆ ಬಿಸುನೆತ್ತರ ಪೆರ್ಮೊಸಲರ್ಬಿಸಲ್ಕೆ ಮಾ
ರ್ಗಣಗಣಘಾತದಿಂ ತವಿಸಿದಂ ದಿತಿಜಾರಿ ವಿರೋಧಿಸೈನ್ಯಮಂ ೮೪

ವ|| ಅಂತು ಗೋಪಮಾರ್ತಂಡನ ಕಾಂಡಂಗಳಹಿಮಕರಕಿರಣದಂತೆ ಅರಾತಿಬಲಮೆಂಬ ತಿಮಿರಪಟಲಮಂ ತೆರಳೆ ತೂಳ್ದಿಯುಂ, ದನುಜಬಳಜಲಧಿಬಾಡಬಾನಲನ ಬಾಣಂಗಳೌರ್ವಶಿಖಿಯಂತೆ ತುರಂಗಮದಟ ತರಂಗಿತಾರ್ಣವಮನಟ್ಟಿಕ್ಕಾಡಿಸೆಯುಂ, ಇಂದ್ರಾವರಜನ ಶರಂಗಳ್ [1]ವಜ್ರ್ಯಶನಿಗಳಂತೆ[1] ದಂತಿಘಟೆಗಳೆಂಬ ಪರ್ವತಂಗಳಂ ನುಚ್ಚುನೂಱಾಗೆ ಮಾಡೆಯುಂ, ದೈತ್ಯಕುಲಸಂಹಾರಭೈರವನ ಕೂರಂಬುಗಳ್ ಭೂತಗಣಂಗಳಂತೆ ಪೊಂದೇರ್ಗಳೆಂಬ ಮಾಂಸಕಬಳಂಗಳಂ ನುಂಗಿ ನೊಣೆಯೆಯುಂ ಇಂತು ಕೋದಂಡಚತುರ್ಭುಜನ ಕೋದಂಡಪರಿಘಾತದಿಂ ದಂಡಧರಮುಖಕುಹರಕ್ಕೋಸರಿಸುವ ನಿಜಚಾತುರ್ಬಲಮಂ ಕಂಡು ಜರಾಸಂಧಂ ಕಡುಮುಳಿದು ನಿಜೋಭಯಪಾರ್ಶ್ವದೊಳಿರ್ದ ರಾಜಭಟ ಕೋಟಿಯೊಳತಿವೀರರೆನಿಸಿದ ಮಾದ್ರರಾಜಾಂಗರಾಜಚೇದಿರಾಜಕುರುರಾಜರ್ಕಳಂ ನೋಡಿ ನಿಮ್ಮ ಭುಜಬಲಾವಷ್ಟಂಭಮಂ ಪೇೞಿಮ್ಬಾಡೀ ಧರೆಯಂ ಪೊಸೆದು ಮುಕ್ಕಲುಂ, ಕುಳನಗಮನಗೆಯೆತ್ತಿ ಕಳೆಯಲುಂ ಕಡಲನೆಡೆಗಿಡಿಸಲುಂ, ನಾಕಲೋಕಮಂ ನೆಲಕ್ಕಿೞಿಪಲುಂ ಸಿಡಿಲಂ ತುಡುಕಿ ಪಿಡಿಯಲುಂ, ಹಾಲಾಹಲಮಂ ಗುಳಿಗೆಯಿಕ್ಕಲುಂ, ಉರಿಲಿಂಗಮನಾಲಿಂಗಿಸಲುಂ, ಯುಗಾಂತಹುತವಹನಂ ಸಂದೆವೊಯ್ಯಲುಂ, ಧೂರ್ಜಟಿಯ ನಿಟಿಲಲೋಚನಮಂ ಕರಪುಟದಿಂ ಮುಚ್ಚಲುಂ ನೆಱೆವ ನಿಮ್ಮಿದಿರೊಳೊರ್ವ ಗೋಪಕುಟಿಲಂ ಗಂಡಗರ್ವಮಂ ಮೆಱೆದಪನೆಂದು ಮೂದಲಿಸಿ ನುಡಿಯೆ

ಚಂ|| ಅತಿರಥನೆಂಬ ಗೋಸಣೆಯ ಮದ್ರಮಹೀತಳನಾಥನೆಂಬ ವಿ
ಶ್ರುತಿಯ ಮಹಾಸ್ತ್ರ ಶಸ್ತ್ರವಿದನೆಂಬ ನೆಗೞ್ತೆಯ ಶಲ್ಯನೆಯ್ದಿದಂ
ದಿತಿಜವಿರೋಧಿಯಂ ನಿಜಶರಾಸನಟಂಕೃತನಾದವೆಯ್ದೆ ದಿ
ಗ್ವಿತತಿಯನಭ್ರಮಂಡಲಮನೆಯ್ದೆ ರಥೋತ್ಥಮಹಾಮಹೀರಜಂ ೮೫

ಉ|| ಎಕ್ಕತುಳಕ್ಕೆವಂದು ಶರಮಂ ಶರದಿಂ ಕಡಿದಿಕ್ಕುತುಂ ಮಹಾ
ಸ್ತ್ರಕ್ಕೆ ಮಹಾಸ್ತ್ರಮಂ ತುಡುತುಮೊಟ್ಟಜೆಗೊಟ್ಟಜೆದೋಱುತುಂ ವರೂ
ಥಕ್ಕೆ ವರೂಥಮಂ ನೆಣಸಿ ಚೋದಿಸುತುಂ ನೆರೆದಾಂತ ಶಲ್ಯನಂ
ಚಕ್ಕನೆ ಮುತ್ತು ನೋಡಿ ಬಗೆದಂದು ನಿಮೇಷದೆ ಗೆಲ್ವುಪಾಯಮಂ ೮೬

---

[1] ವಜ್ರಾಶನಿಗಳೆಂಬಂತೆ (ಕಖ)

ಕಂ|| ಜೃಂಭಾಸ್ತ್ರದಿಂ ಮುಕುಂದಂ
ಸ್ತಂಭಿಸಿ ರಥಮಂ ರಥಾಶ್ವಮಂ ಸಾರಥಿಯಂ
ಸ್ತಂಭಿಸಿದಂ ಶಲ್ಯನ ದೋ
ಸ್ಸ್ತಂಭಮನಿನಿಸಿಱಿಯಲಱಿಯದಿರ್ಪಿನಮಾಗಳ್ ೮೭

ಚಂ|| ಜಲರುಹಮಿತ್ರಪುತ್ರನೆನಿಪುನ್ನತಿಯುಂ ಸಹಜಾತದಿವ್ಯಕುಂ
ಡಲಕವಚಪ್ರಭಾವದಿನಜಯ್ಯನೆನಿಪ್ಪ ನೆಗೞ್ತೆಯುಂ ನೃಪ
ಪ್ರಲಯಕೃತಾಂತನಿಂ ಪರಶುರಾಮನಿನಸ್ತ್ರವಿದಗ್ಧನಾದ ದೋ
ರ್ವಲಮುಮನಿಂದು ಸಾರ್ಥಕಮಿವಂಗೆನೆ ಶಾರ್ಙ್ಗಗೆ ಕರ್ಣನೆಯ್ದಿದಂ ೮೮

ಕಂ|| ಚಿತ್ರಗತಿಯಿಂದೆ ರಥಮತಿ
ಮಾತ್ರಜವಂ ಬೆರಸು ಪರಿಯೆ ಶರವರ್ಷದೆ ಲೋ
ಕತ್ರಯಮಂ ಪೂೞ್ವವೊಲಿನ
ಪುತ್ರಂ ದುರ್ಲಕ್ಷ್ಯವೇಗನಿಸುವವಸರದೊಳ್ ೮೯

ರಥಹಯಮಂ ನಾಲ್ಕಂಬಿಂ
ರಥಮಂ ಮೂಱಸ್ತ್ರದಿಂದೆರಟ್ಕಣೆಯಿಂ ಸಾ
ರಥಿಯಂ ಕೆಡೆಯಲ್ಕೆಚ್ಚಂ
ರಥಾಂಗಧರನೊಂದೆ ಶರದಿನಿನಜನ ಧನುವಂ ೯೦

ಮ|| ಪ್ರಿಯಮಿತ್ರಂ ರವಿಸೂನು ಸೋಲ್ತೊಡಳಲುಂ ಕಟ್ಟೇವಮುಂ ಮುಟ್ಟಿ ತ
ನ್ನಯ ತೇರಿಂದೆ ನೆಲಕ್ಕೆ ಪಾಯ್ದು ಕುರುಲಕ್ಷ್ಮೀವಲ್ಲಭಂ ವಿಕ್ರಮೋ
ದಯಸದ್ಮಂ ಮಧುಪಿಂಗಳಾಕ್ಷನಭಯಂ ಸಾರ್ತಂದನುದ್ಯದ್ಭುಜ
ದ್ವಯದಂಡಾಗ್ರಿಮತೋರಣಾಯಿತಗದಂ ದುರ್ಯೋಧನಂ ಕೃಷ್ಣನಂ ೯೧

ಮ||ಸ್ರ|| ಗದೆಗೊಂಡೆಯ್ತರ್ಪ ದುರ್ಯೋಧನನ ಮಸಕಮಂ ಕಂಡು ಕಂಸಾರಿ ತಾನುಂ
ಗದೆಗೊಂಡಾಯೆಂದು ತಾಗಲ್ ಪದಹತಿಗೆ ನೆಲಂ ಬಳ್ಕೆ ವಾರಾಶಿಗಳ್ ತು
ಳ್ಕೆ ದಿಶಾದಂತಿವ್ರಜಂ ಘೀಳಿಡೆ ಪೊಣರ್ದು ಕುರುಶ್ರೇಷ್ಠನೊಳ್ ಕಾದುವಾ ಯು
ದ್ಧದಗುರ್ವಂ ಪೂವಿನೊಳ್ [1]ಪೊಕ್ಕಳಿ[1] ನೆಗೞ್ದವೊಲಾಯ್ತಾ ಮುರಧ್ವಂಸಿಗಾಗಳ್ ೯೨

ಗದೆಯಂ ತೂಗುತ್ತೆ ಸಾರ್ವೊಟ್ಟಜೆ ತಿರಿಪಿ ಗದಾದಂಡದಿಂ ಪೊಯ್ವ ಕೋಪಂ
ಗದೆಯಿಂದಂ ಪೊಯ್ಯುಗ್ಗಳಂ [2]ಬಂಚಿಪ ನೆವವೆಸೆಯಲ್[2] ಚಂಚಲತ್ಕರ್ಣಪೂರಾಂ
ಗದ ಹಾರಾಪೀಡರೋರೊರ್ವರ್ವನಿತಳದೊಳೋರೊರ್ವರ್ ವಿದ್ಯಾಧರಾಕಾ
ರದಿನಂತರ್ಧಾನದೊಳ್ ತಾಗಿದರತುಳಬಳರ್ ಕೃಷ್ಣದುರ್ಯೋಧನರ್ಕಳ್ ೯೩

---

[1] ಪೊಕ್ಕಳಿ (ಕಗ) [2] ಬಂಚಿಪನೆರವೆಸೆಯಲ್ (ಕಗ) ಬಂಜಿಪನೆವವೆಸೆಯಲ್ (ಖ)

ಕಂ॥ ದಶಕಂಠವೈರಿಯೊಳ್ ಪೊಣ
ರ್ದು ಶೀರ್ಣತನುವಾಗಿ ಸೆಡೆದು ಧೃತರಾಷ್ಟ್ರಸುತಂ
ಪ್ರಶಮಿತಪರಾಕ್ರಮನುಮಂ ಗಂ
ಡಶೈಲದೊಳ್ ಪೊಣರ್ದರಣ್ಯಗಜದಂತಾದಂ ೯೪

ವ॥ ತದನಂತರಂ

ಉ॥ ಪುಟ್ಟೆ ಸಮಸ್ತಧಾತ್ರಿಗೆ ಭಯಂ ನಿಟಿಲಾಕ್ಷಚತುರ್ಭುಜಾನ್ವಿತಂ
ಪುಟ್ಟಿದಗುರ್ವು ರಾವಣನ ರೌದ್ರತೆವೆತ್ತವತಾರ[1]ವೀತನೊಂ
ದೊಟ್ಟಜೆ[1] ಲೋಕಪಾಲಕರನಾಟಲೆದಿರ್ಪ ಪೊಡರ್ಪಿನಿಂದೊಡಂ
ಬಟ್ಟುದು ನೋಡಿಮಿತನೊಳೆನಲ್ ಶಿಶುಪಾಲನಿದಿರ್ಚೆ ಸಾರ್ಚಿದಂ ೯೫

ಕಂ॥ ತೇರಂ ಪರಿಯಿಸಿ ಬಿಲ್ಗೊಂ
ಡೀ ರಣಮಂ ಕೊಂಡು ಕೊನೆಯಲೊಲ್ಲೆಂ ಕ್ಷಣದಿಂ
ವೈರಿಯನಿಕ್ಕುವೆನೆನುತುಂ
ಕೂರಸಿಗೊಂಡೊದಱೆ ಚೈದ್ಯನೆಯ್ದಿದನಾಗಳ್ ೯೬

ನಂದಕಮಂ ದಿವಿಜಗಣಾ
ನಂದಕಮಂ ಕೊಂಡು ಚೇದಿಪತಿಯೊಳ್ ಪೊಣರ್ದಂ
ಮಂದರಧರನಾಹವದೊಳ್
ಮಂದರಧರರಾದರಹಿತರೆಂದೆಂಬಿನೆಗಂ ೯೭

ಚಂ॥ ಅಳವಿಗೆ ಸಾರ್ವ ಸಾರ್ವ ತೆಱಪಂ ಸಡೆನೋಡುವ ನೋಡಿ ಪೊಯ್ವ ಪೊ
ಯ್ಗುಳನೆಡೆಯೊಳ್ ನಿವಾರಿಪ ನಿವಾರಿಸಿ ಕುತ್ತುವ ಖಡ್ಗವಿದ್ಯೆ ತ
ನ್ನೊಳೆ ನೆಲಸಿತ್ತೆನಲ್ [2]ಕೊನೆದು[2] ಕಾಳೆಗದಿಂ ಶಿಶುಪಾಲದೈತ್ಯನೊಳ್
ಬಲಿರಿಪು ಕಾದಿದಂ ಮುಳಿದು ತಾಗುವಿನಂ ಹರಿಗುಂಟೆ ಕಾಳೆಗಂ ೯೮

ಕಂ॥ ಮದಗಜದ ರದನಮಂ ಸಿಂ
ಗದ ದಾಡೆಯನುಗ್ರಫಣಿಯ ಪಲ್ಲಂ ಮುಱೆವಂ
ದದೆ ಮುಱೆಯೆ ಪೊಯ್ದು ನಿಜಖ
ಡ್ಗದೆ ತತ್ಖಡ್ಗಮನುಪೇಂದ್ರನಾಂತಂ ಜಯಮಂ ೯೯

---

[1] ಈತನೆಂಬೊಟ್ಟಜೆ (ಕ) [2] ಕೊನರ್ದು (ಖಗ)

ಅರಿವಧವುನನಾಗತವುಂ
ಸ್ಮರಿಯಿಸೆ ಕೈಗಾದು ಕಾದಿದಂ ಶಿಶುಪಾಲಾ
ದ್ಯರೊಳಂದಚ್ಯುತನಿಂತುಂ
ಹರಿಗಂ ವಿಟ್ಟಿಗವಿದಿರ್ಚಿ ಜೀವಿಪರೊಳರೇ ೧೦೦

ವ॥ ಆಗಳ್ ಭಗ್ನಖಡ್ಗನಾಗಿ ಮತ್ತಂ ಕಡುಪುಗೆಯ್ವ ಶಿಶುಪಾಲನಂ ಮಗಧನರ ಪಾಲಂ ಕಂಡು

ಕಂ॥ ಉಡಿಯೆ ನಿಜಾಸಿ ನಿಯುದ್ಧ
ಕ್ಕೊಡರಿಸಲುಂ ಮತ್ತೆ ಕೈದುಗೊಳಲುಂ ಬೇಡಿಂ
ಪಡುನೇಸಱಾದುದಿಂದಿನ
ಕಡುಪಂ ಕೃಷ್ಣಂಗೆ ನಾಳೆ ತೋರ್ಪುದು ಚೈದ್ಯಾ ೧೦೧

ಉ॥ ಆಂ ಪಿರಿಯಂ ಸಮಸ್ತಬಲದಿಂ ನೃಪಕೋಟಿಗೆ ಚೈದ್ಯರಾಜನೆ
ನ್ನಿಂ ಪಿರಿಯಂ ಮನೋಬಲಭುಜಾಬಲಶಸ್ತ್ರಬಲಂಗಳಿಂದಮಾ
ಪೆಂಪಿನ ಚೈದ್ಯನಂ ಕ್ಷಣದೆ ಗೆಲ್ದನಧೋಕ್ಷಜನೀ ಮುಕುಂದನಾ
ರ್ಗಂ ಪಿರಿಯಂ ಬಲೋದಯದಿನೆಂದು ಮನಂ ಸೆಡೆದಳ್ಕಿ ಮಾಗಧಂ ೧೦೨

ಕಂ॥ ಪಗೆ [1]ಪಳಸಿ[1] ಕಿಡದು ನಾಳೆಯೆ
ಮುಗುಳ್ದಂ ಮೇಲೆತ್ತಿ ಬಂದು ಮಾಣ್ಬಂ ಕಂಸಾ
ರಿಗೆ ತಕ್ಕುದನೆಂದೀಗಳ್
ಪೊಗಸುಂ ಪೋಯ್ತೆಂದು ನೆವದೆ ರಣದಿಂ ತಳರ್ದಂ ೧೦೩

ವಿಶಸನಭೀತಿಯಿನೋಡುವ
ವಸುಧೇಶರನಾತ್ಮಭೂರಿಭಾಂಕೃತರವದಿಂ
ಮುಸೆವೆಳಗಿಂ ನಗುತಿರ್ಪಂ
ತೆಸೆದುವು ಬೆನ್ನಟ್ಟುತಿರ್ದ ಕೃಷ್ಣಶರಂಗಳ್ ೧೦೪

ಸಂಗರಧರಿತ್ರಿ ನಾಡೆ ಮು
ನಂಗೊಳಿಸಿದುದಂದು ಜವನ ಪೆರ್ಬೆಣವೆಳೆ ಭೂ
ತಂಗಳ ಕೊಟ್ಟಾರಂ ವಿಹ
ಗಂಗಳ ಬೆಳಗೆಯ್ಯೆನಲ್ಕೆ ಬಿದ್ದರಿಬಲದಿಂ ೧೦೫

---

1 ಪಳಸಿ (ಕ)

ಮ॥ಸ್ರ॥ ಮಸಕಂಗೊಂಡಟ್ಟಿಗಳ್ ನರ್ತಿಸೆ ಸಮರಮಹೀರಂಗದೊಳ್ ನಾರದಂ ನ
ರ್ತಿಸೆ ರೋದೋರಂಗದೊಳ್ ಸಂಗರಜಯವಧುವಾತ್ಮೀಯ ದೋರ್ಯುಗ್ಮ
ದೊಳ್ ನ
ರ್ತಿಸೆ ಗೆಲ್ಲಂಗೊಂಡು ತಮ್ಮೊಳ್ ಪೊಣರ್ದಗಿದು ತೆರಳ್ದೋಡುವಾ ಭೂಪರಂ ಸಂ
ತಸದಿಂ ನೋಡುತ್ತುಮಿರ್ದಂ ಪ್ರಹಸಿತವದನಂ ಗೋಪಮಾರ್ತಂಡದೇವಂ ೧೦೬

ಇದು ಸಮಸ್ತಕಮಲಭವಾಂಡಮಾಲಾಘಟೀಘಟಿತಾರಘಟ್ಟಘಟನಾ ಸ್ವತಂತ್ರ
ನಿಜಸ್ವರೂಪನಿರೂಪಣ ಚಕಿತಸಕಲಾಮ್ನಾಯತಂತ್ರಲಕ್ಷ್ಮೀಕಾಂತ ಶ್ರೀಪಾದ
ಭಕ್ತಿಯುಕ್ತಸುಕವೀಂದ್ರರುದ್ರಪ್ರಣೀತ ಶ್ರೀಜಗನ್ನಾಥವಿಜಯ ಮಹಾ
ಪ್ರಬಂಧದೊಳ್ ಉಗ್ರಸೇನಾಭಿಷೇಕ ಪಾಕಶಾಸನಸಭಾಕರ್ಷಣ
ಗುರುಪುತ್ರಾಹರಣ ಮಕರಾಕರಾಲೋಡನ ಪಾಂಚಜನ್ಯ
ಲಾಂಛನ ನಂದಕಸುದರ್ಶನಶಾರ್ಙ್ಗಕೌಮೋದಕೀಸಮಾ
ಗಮನ ಜರಾಸಂಧಯುದ್ಧವರ್ಣನಂ
ಸಪ್ತಮಾಶ್ವಾಸಂ

ಅಷ್ಟಮಾಶ್ವಾಸಂ

ಕಂ॥ ಶ್ರೀವತ್ಸಲಾಂಛನಂ ಬಲ
ದೇವಸಹಾಯಂ ಜಯಾನಕಧ್ವನಿಮುದಿತ
ಕ್ಷ್ಮಾವಳಯಜನಂ ವೀರರ
ಸಾವೃತಮುಖ[1]ಕಮಲಮೆಸೆಯೆ[1] ಪೊಟಲಂ ಪೊಕ್ಕಂ ೧

ಚಂ॥ ಅವಿರಳವಾಸ್ಯದಿಂ ಪರಕೆ ಪೊಣ್ಮುವಿನಂ ವನಿತಾಕದಂಬಮಿ
ಕ್ಕುವ ಧವಳಾಕ್ಷತಂ ಕುಡುವ ಚಂದನಕರ್ದಮಮೀವ ದೂರ್ವೆ ಸೂ
ಸುವ ಸಿತಸರ್ಷಪಂ ತಳಿವ ಲಾಜಕಮೆತ್ತುವ ಪುಷ್ಪಮಾಲೆ ನೀ
ಡುವ ನವಮಾತುಳುಂಗಫಲಮೆಂಬಿವನಚ್ಯುತನೊಲ್ದು ತಾಳ್ದಿದಂ ೨

ವ॥ ಅಂತು ಮಂಗಲಾಚಾರಪರಂಪರೆ ವಿರಾಜಿಸೆ ರಾಜಮಂದಿರಮಂ ಪೊಕ್ಕು ಸುಖದಿನಿರೆ ಕತಿಪಯದಿನಂಗಳ್ಗೆ

ಮ॥ಸ್ರ॥ ಮೊನೆಯೊಳ್ ಬೆಂಗೊಟ್ಟು ಮುಂ [2]ಪೋದಟಲೊಳ್[2] ಮಗುಟ್ದಂ ತ್ರಿಂಶದ ಕ್ಷೌಹಿಣೀವಾ
ಹಿನಿಯುಂ ಲೋಕಕ್ಕಕಾಂಡಪ್ರಳಯಮೆನೆ ಮಹಾಕಂಪಮುಪ್ಪನ್ನವಾ ಮು
ನ್ನಿನ ಧಾತ್ರೀನಾಥರಾ ಮುನ್ನಿನ ಭುಜಬಲಮಾ ಮುನ್ನಿನಾಟೋಪಮಾ ಮು
ನ್ನಿನಗುರ್ವಾ ಮುನ್ನಿನಾಡಂಬರಮೆಸೆಯೆ ಜರಾಸಂಧನೆಟ್ಟಿಂದು ನಿಂದಂ ೩

ವ॥ ಅಂತ ಜರಾಸಂಧನಾಪ್ರಕಾರದಿಂ ಪದಿನೆಂಟುಸೂಟಿತ್ತಿಬರೆ ಮುರಾಂತಕ ನನಿತುಸೂಟಿತೊಳಂ ಪೂರ್ವಸಮರಕ್ರಮದೊಳೇಕಾಂಗದಿಂ ಜಯೋತ್ತರಮಾಗೆ ಕಾದಿ ಮಧುರೆಯಂ ಪೊಕ್ಕು ಬಲವದ್ವಿಪಕ್ಷ ತ್ರಿಂಶದಕ್ಷೌಹಿಣೀಬಲ ಪುನಃಪುನರಾಗಮನಸಂಗಟ್ಟ ದಿಂ[3]ದಳ್ಳಮಿಳ್ಳೆ[3]ಯಾದ ಯಾದವ ದೇಶದ ಜನಕ್ಲೇಶಮಂ ಸ್ವಕೀಯಕಾರುಣ್ಯವಚನದಿನಾಜಿಃ ಸುತ್ತಿರ್ಪಿನಮದೊಂದು ಸಮಯದೊಳೊರ್ವ ಗುಪ್ತಚರನತಿಸಂಭ್ರಮತ್ವರಿತಗತಿಯಿಂ ಬಂದಾಸ್ಥಾನಮಂ ಪೊಕ್ಕು ಸಭಾಳಸ್ಥಳೀಕುಟ್ಮಳಿತಕರಾರವಿಂದನಾಗಿ ನಿಂದಿರ್ದು

---

1 ಕಮಲನೆಸೆಯೆ (ಕಗ) 2 ಪೋದಂದಳಲೊಳೆ (ಖ) 3 ದಳವಿಳೆ (ಖ)

ಮ॥ ಸುರದೈತ್ಯಾಹವದೊಂದುಸ್ಸೈನ್ಯವಿನಿತಿಲ್ಲೀ ತ್ರಿಂಶದಕ್ಷೌಹಿಣೀ
ಭರದಿಂ ಬಳ್ಕುವ ಭೂಮಿಯಂ ತಳೆವೊಡಿರ್ವರ್ ಕೂರ್ಮರಿರ್ವರ್ ಫಣೀ
ಶ್ವರರೀರೆಂಟುದಿಶಾಗಜಂಗಳಿರಡೇಟುಂ ಗೋತ್ರಶೈಲಂಗಳಾ
ಗಿರವೇಟ್ಕುಂ ದಿಟವೆಂಬಿನಂ ತಳೆದರ್ಜ ಮತ್ತಂ ಮಾಗಧಂ ಬಂದಪಂ ೪

ವ॥ ಎಂದು ಬಿನ್ನಪಂಗೆಯ್ದ ಚರನ ವಚನಮಂ ಕೇಳ್ದುಗ್ರಸೇನ ವಸುದೇವ ವೈಷ್ಣ್ಯಂಧಕ ಪ್ರಭೃತಿ ಯದುಕುಲವೃದ್ಧರುಮನುದ್ಧವಾಕ್ರೂರ ಸಾತ್ಯಕಿಪ್ರಮುಖ ಬುದ್ಧಿವೃದ್ಧರುಮಂ ಸರೋಜಾಕ್ಷಂ ನಿರೀಕ್ಷಿಸಿ

ಉ॥ ಮಾನವನಾಟಕಪ್ರಕಟನಂ ನುಡಿದಂ ಪಗೆ ಮತ್ತೆ ಬಂದಪಂ
ತಾನಿದಿರೆತ್ತಿ ಮುಂ ಪಲವು ಸೂಟ್ ಬರೆ ಕೆಟ್ಟುಟಿದೀ ಸ್ವದೇಶಮಿ
ನ್ನಾ ನರಪಾಲಸೈನ್ಯಪರಿಪೀಡೆಗೆ ಸೈರಿಸಲಾರದಿಂದಿದ
ಕೇನನುಪಾಯಮಂ ನೆಗಟ್ವಮೆಂದೊಡೆ ಪೇಟ್ದಪೆನಾನುಪಾಯಮಂ ೫

ಕಂ॥ ಪಗೆಯುಮುಸೂಯೆಯುಮೆಮ್ಮೊಳ್
ಮಗಧಂಗಾಮೀ ಸ್ವದೇಶದಿಂ ಪರದೇಶೋ
ರ್ವಿಗೆ ಪೋದೊಡೆಮ್ಮ ಬಟಿಯನೆ
ಮಗಧಂ ಗಟಿತವಟಿಯ ಪಾವಿನಂತಿರೆ ಬರ್ಕುಂ ೬

ಮ॥ಸ್ರ॥ ರಿಪುವೆಮ್ಮಿರ್ದನ್ಯದೇಶಕ್ಕೆಡಱ ನಡೆದೊಡೀ ನಮ್ಮ ದೇಶಕ್ಕಮಾ ನ
ಮ್ಮ ಪುರಕ್ಕಂ ಕ್ಷೇಮಮಕ್ಕುಂ ಧುರದೊಳವನನಾವತ್ತಲೇಕಾಂಗದಿಂ ಗೆ
ಲ್ದಪೆವಾವಾ ತ್ರಿಂಶದಕ್ಷೌಹಿಣಿಯನುರುಪಿ ಬಾಣಾಗ್ನಿಯಿಂ ಮತ್ತೆ ಮೇಲೆ
ತ್ತಿ ಪೊಡರ್ಪಿಂ ಬಾರದಂತಾಗಿಪೆವಿದೆ ವಿಗತಾಪಾಯಮಪ್ಪೊಂದುಪಾಯಂ ೭

ವ॥ ಎಂದು ನಿಶ್ಚಯಿಸಿ ವಸುದೇವನಂದನರ್ ಗೃಹೀತನಿಜನಿಜಾಯುಧರಾಗಿ ಬಂಧುಜನಪುರಜನಪರಿಜನಂಗಳಾಶೀರ್ವಾದನಾದಮೊದವೆ ಪೊಟಲಂ ಪೊಱಮಟ್ಟೇಕಾಂಗದಿಂ ದಕ್ಷಿಣದಿಗ್ವಿಭಾಗಾಭಿಮುಖರಾಗಿ

ಕಂ॥ ಜನಪದಮುಮನವನೀಶ್ವರ
ಜನಪದಮುಮನಖಿಲನದನದೀತೀರ್ಥಸರೋ
ಜನಿಪಂಡಮುಮಂ ತತ್ಪಾ
ವನನಗನಿವಹಮುಮನೀಕ್ಷಿಸುತ್ತೆ ಬರುತ್ತುಂ ೮

ವ॥ ಅಂತು ನಡೆಯೆ ಕಟ್ಟೆದಿರೊಳ್

ಕಂ|| ವಸುಧಾಂಗನೆ ಮೇಲ್ಕೊಂಡಳೊ
ಪೊಸಪಸುರ್ವಟ್ಟೆಯ ವಿಳಾಸದಿಂದೆಸೆವ ದುಕೂ
ಲಸಿಚಯಕಮನೆನೆ ತನ್ನದಿ
ಯೆಸೆದುದದೊಂದುಭಯತಟವನಾಚ್ಛಾಂಬುಗಳಿಂ ೯

ವ|| ಆ ಖಟ್ವಾಂಗಿಯೆಂಬ ತರಂಗಿಣಿಯ ತೀರಮನಿನಿತಾನುಮೆಯ್ದೆ ವರ್ಪಲ್ಲಿ

ಕಂ|| ಜಳಧರಪಟಲದ ಪೊರೆವೊರೆ
ಯೊಳುಣ್ಮುವುದಿತಾರ್ಕತೇಜವೆನೆ ವನತರುಸಂ
ಕುಳದೆಡೆಯೆಡೆಯೊಳ್ ತೇಜೋ
ವಳಯಂ ತೋಱುತ್ತಮೊಂದು ದೂರಾಂತರದೊಳ್ ೧೦

ವ|| ಅದಂ ನೋಡುತ್ತುಮೆಯ್ದೆ ನಂದರವಿಂದಲೋಚನಂ ನಿಜಾವತಾರರೂಪನಂ ನಿರುಪಮತಪಸ್ತೇಜೋಭಿಯುಕ್ತಜಟಾಕಲಾಪನಂ ಪುಣ್ಯಪ್ರಭಾವಾಭಿರಾಮನಂ ಜಮದಗ್ನಿರಾಮನಂ ಕಂಡು ಬಲಭದ್ರರಾಮನ ಮೊಗಮಂ ನೋಡಿ; ಈ ಮಹಾಪುರುಷಂ ಕುಭೃತ್ಪಕ್ಷವಿಚ್ಛೇದನನಾಗಿಯುಂ ವಜ್ರಧರನಲ್ತು, ಸಪ್ತಾರ್ಚಿಯಾಗಿಯುಂ ಹುತವಹನಲ್ತು, ಸಮವರ್ತಿಯಾಗಿಯುಂ ದಕ್ಷಿಣದಿಕ್ಪಾಲಕನಲ್ತು, ಪೂರ್ವದೇವನಾಗಿಯುಂ ನೈಋತನಲ್ತು, ವನನಿವಾಸಿಯಾಗಿಯುಂ ವರುಣನಲ್ತು, ಪವಮಾನನಾಗಿಯುಂ ಕುರಂಗವಾಹನನಲ್ತು, ಮನುಷ್ಯಧರ್ಮನಾಗಿಯುಂ ಧನಾಧ್ಯಕ್ಷನಲ್ತು, ಕಾಮಧ್ವಂಸಿಯಾಗಿಯುಂ ತ್ರಿಲೋಚನನಲ್ತು, ಚತುರಾಸ್ಯನಾಗಿಯುಂ ಹಿರಣ್ಯಗರ್ಭನಲ್ತು, ತೀವ್ರತೇಜನಾಗಿಯುಂ ಮಾರ್ತಂಡನಲ್ತು ದ್ವಿಜರಾಜನಾಗಿಯುಂ ನಕ್ಷತ್ರಪತಿಯಲ್ತು, ಕ್ರೌಂಚಾರಾತಿಯಾಗಿಯುಂ ಷಣ್ಮುಖನಲ್ತು, ಪರಶುಧರನಾಗಿಯುಂ ದ್ವಿರದಾಸ್ಯನಲ್ತು ಎಂದು [1]ವಕ್ರೋಕ್ತಿಯಿಂ[1] ತೋಱುತ್ತುಮತ್ಯಾಸನ್ನನಾದ ಸಮಯದೊಳ್

ಕಂ|| ಏಕತ್ವಮನಱಿಪುವವೋ
ಲಾ ಕೇಶವ ಪರಶುರಾಮರಾಲಿಂಗಿಸಿ ಭಿ
ನ್ನಾಕೃತಿಗಳ್ ಕಾರ್ಯಾರ್ಥಂ
ಲೋಕಕ್ಕೆನೆ ಬೇಱೆವೇಱೆ ಕುಳ್ಳಿರ್ದಾಗಳ್ ೧೧

ಮಿಸುಪ ರದನಾಂಶುಜಾಳಂ
ಪಸರಿಸಿ ವಾಕ್ಛ್ರೀಯ ಧವಳಚಾಮರವೆಂಬಂ
ತೆಸೆದಿರ್ಪಿನೆಗಂ ಜಮದ
ಗ್ನಿಸೂನು ವಸುದೇವಸೂನುಗಂದಿಂತೆಂದಂ ೧೨

1 ವಕ್ರೋಕ್ತಿಯುಂ (ಖ)

ಅಱಿದೆಂ ತ್ವದೀಯಚರಿತದ
ತೆಱನಂ ಮಾನುಷವಿಡಂಬಮಂ ಮೆಱೆವದೆಸೆ ನೀಂ
ಪೆಱತಾದುದಕ್ಕುಪಾಯದ
ತೆಱನಿಚ್ಛಾಮಾತ್ರದಿಂದೆ ಮುಡಿಪೈ ಪಗೆಯಂ ೧೩

ಈ ದೆಸೆಯೊಳ್ ಗೋಮಂತಮ
ಹಾದುರ್ಗನಗೇಂದ್ರಮಿರ್ಪುದದನಾತ್ಮಶ್ರೀ
ಪಾದರಮಣೀಯಮಪ್ಪಂ
ತಾದರಿಪುದದರ್ಕೆ ಪೇೞ್ದಪೆಂ ಕಾರಣಮಂ ೧೪

ಪಸರಿಸುತೆ ತನ್ನ ಕಂಪಂ
ದೆಸೆವೆಣ್ಗಳ ಸುಯ್ಲ ಕಂಪನಂಡಲೆಯುತ್ತುಂ
ಕುಸುಮಿತಕದಂಬಭೂರುಹ
ಮೆಸೆವುದು ಸಾರ್ವರ್ತುಕಂ ತದಗ್ರಸ್ಥಳದೊಳ್ ೧೫

ಅದಱತೊಳಗುನ್ಮದಕಾರಿಣಿ
ಮದಿರಾಹ್ವಯದೇವಿಯಿರ್ಪಳಾ ದೇವಿ ಮನೋ
ಮುದದಿಂದನಂತನೊಳ್ ಕೂ
ಡಿದಪಳ್ ಯೌವನಮುದಂ ಪದಿರ್ಮಡಿಸುವಿನಂ ೧೬

ವ|| ಅದಲ್ಲದೆಯುಂ

ಕಂ|| ತಾಲಧ್ವಜಂಗೆ ದಿವ್ಯ ವಿ
ನೀಲಾಂಬರಮೇಕಕುಂಡಲಂ ಬಂದಪುದಾ
ಶೈಲಾಗ್ರದೊಳಂತವಱಿಂ
ನೀಲಾಂಬರನೇಕಕುಂಡಲಂ ತಾನಕ್ಕುಂ ೧೭

ಆ ಕುಧರದಲ್ಲಿ ನಿನಗಂ
ಶ್ರೀಕೇಶವ ದಿವ್ಯಮಕರಕುಂಡಲಕೋಟೀ
ರಾಕಲ್ಪಮುಂ ಖಗೇಶ್ವರ
ನಾಕಾಶದೆ ಬಂದು ತುಡಿಸಿ ಪೋಕುಮಮೋಘಂ ೧೮

ತನ್ನಂಶಾಂಶದ ಶೋಭೆಯಿ
ನೆನ್ನರನಿಂದ್ರಾದಿಸುರರುಮಂ ರಂಜಿಸುವಾ
ನಿನ್ನ ಸಿರಿಕಾಂತೆ ನಿಮಿಷದೆ
ನಿನ್ನೊಳ್ ನೆರೆಗುಂ ಯದೃಚ್ಛೆಯಿಂದಾ ನಗದೊಳ್ ೧೯

ಪ್ರತ್ಯರ್ಥಿಮಗಧನೆಟ್ಟಿರ
ಲತ್ಯದ್ಭುತಸಮರಮಕ್ಕುಮಾಗೆ ಚತುರ್ವಿಂ
ಶತ್ಯಕ್ಷೌಹಿಣಿ ತದಗೋ
ಪತ್ಯಕದೊಳ್ ಲಯಮೆನೆಯ್ದುಗುಂ ನಿಮ್ಮಿಂದಂ ೨೦

ವ॥ ಅಂತು ಸಕಲರಾಜಲೋಕಮನೇಕಾಂಗದಿಂ ಗೆಲ್ದು ಪಶ್ಚಿಮಮುಖರಾಗಿ ನಡೆವಲ್ಲಿ

ಕಂ॥ ಕರವೀರಪುರವರೇಶನ
ನುರುವಿಕ್ರಮನಂ ಸೃಗಾಲನಂ ನೀಂ ಧುರದೊಳ್
ಪರಿಮರ್ದಿಸೆ ನಿನಗಚ್ಯುತ
ದೊರೆಕೊಂಡಪುದವನ ಸೂರ್ಯದತ್ತ ವರೂಥಂ ೨೧

ವ॥ ಎಂದು ಪರಶುರಾಮನಾಗಾಮಿಕಾರ್ಯಮನಱಪಿ ಕಳುಪಲಾ ಪ್ರದೇಶದಿಂ ತಳರ್ದು ನಡೆಗೊಂಡು ಸಕಳಕೇಳೀನಿಳಯಮೆನಿಪ [1]ನೀಳಾಚಳ[1] ಮಹಾದುರ್ಗಮಂ ಕಂಡು

ಚಂ॥ ಖರಕಿರಣಂಗೆ ಕೇಳಿವನಲೀಲೆಯನಾಗಿಸುವಂಘ್ರಿಪೋತ್ಕರಂ
ಸುರನದಿಗೇಱಯಂ ಸಮೆವ ಕೂಟತಟಂ ದಿಗಿಭವ್ರಜಕ್ಕೆ ಸೆ
ಜ್ಜರದ ಬೆಡಂಗನೀವ ಕಟಕಂ ತನಗೊಪ್ಪಿರೆ ಮೇರುವಂ ತಿರ
ಸ್ಕರಿಸಿದುದಿಂತಿದಾ ಪರಶುರಾಮನೆ ಪೇಳ್ದ ನಗೇಂದ್ರಮಾಗದೇ ೨೨

ವ॥ ಎಂದು ಮನದೆಕೊಂಡು

ಕಂ॥ ಪದಪದ್ಧತಿಯಿಂ ಸ್ಥಳಕಮ
ಳದ ಚೆಲ್ವಂ ಪಡೆದ ಕೃಷ್ಣಬಳರಸಿತಸಿತಾಂ
ಬುದಯುಗಳದಂತಳಂಕರಿ
ಸಿದರಾ ಗೋಮಂತಶೈಲಶಿಖರಸ್ಥಳಮಂ ೨೩

ವ॥ ಆ ಶೈಲದ ಚೂಳಿಕೆಯೊಳನೇಕವಿಧಾನೋಕಹಂಗಳನಾಳೋಕಿಸುತ್ತುಂ ಪೊಱ್ತುಗಳೆವಲ್ಲಿ

---
1 ಕೀಳನೀಳಾಚಳ (ಖಗ)

ಕಂ॥ ಎನಗೆ ನಭಂ ದಿಕ್ತಟಮಿ
ನ್ನೆನಿತಂತರವೆಂದು ನಿಳ್ಕಿ ನೋಡುವ ಗಿರಿರಾ
ಜನ ತೋಳ್ದುಱುಗಲೆನಲ್ ನೀ
ಳ್ದನೇಕಶಾಖೆಗಳನೆಸೆದುದೊಂದು ಕದಂಬಂ ೨೪

ಮದಗಂಧ[1]ಮನೋಹರೆ ಸಂ
ಮದಕಾರಿಣಿ ಯೌವನಪ್ರವರ್ಧಿನಿ[1] ಕಾಂತಿ
ಪ್ರದೆ ಸುಖದಾಯಿನಿಯೆನಿಸಿದ
ಮದಿರಾವಧುವಿರ್ದಳಾ ಕದಂಬದ್ರುಮದೊಳ್ ೨೫

ಪುಳಕಸ್ವೇದಾಂಬುಗಳೊಗೆ
ಯೆ ಲೋಚನಂ ಕೆಂಪುವೀಱೆ ಪಾಂಡಿಮಮಧರ
ಕ್ಕಳವಡೆ ರಾಮಂ ಮದಿರಾ
ವಿಳಾಸಿನೀಸಂಗದಿಂದೆ ಸುಖಮಂ ಪಡೆದಂ ೨೬

ವ॥ ಆಕ್ಷಣದೊಳಂತರಿಕ್ಷತಳದೊಳೀಕ್ಷಣಗೋಚರಮಾಗಿ

ಕಂ॥ ತಮದ ನೆಲೆಯೆನಿಸುವೀ ವಿಪಿ
ನಮನೆ ಶರಣ್ಬುಗಲೆ ಬರ್ಪ ತಮಮಿಂತಿದು ತ
ತ್ರಮಮಂ ಬೆಂಕೊಳ್ವಿನಬಿಂ
ಬ[2]ಮಿದೆನಿಸಿದುದಸಿತವಸನಮುಂ[2] ಕುಂಡಲಮುಂ ೨೭

ವ॥ ಅಂತು ಬಂದ ನೀಲವಸನದೊಳಮೇಕಕುಂಡಲದೊಳಂ ಸಂಕರ್ಷಣನಲಂಕೃತನಾಗೆ ತದನಂತರಂ

ಮ॥ ಇದು ಹೇಮಾದ್ರಿಯಿನುನ್ನತಂ [3]ಸುವಿಪುಲಂ[3] ಸುಸ್ಥಾನಮೆಂದೀ ನಗೇಂ
ದ್ರದೊಳಿರ್ಪೊಂದೊಲವಿಂದೆ ಬಂದಪುದಲೇ ಜ್ಯೋತಿರ್ಗಣಂ ಚಿತ್ರವ
ರ್ಣದ ಮೇಘಂ ಪುದುವಾೞ್ಕೆಯಿಂ ಬರಲೆನಲ್ ಬಂದತ್ತು ನಾಗಾರಿ ಹ
ಸ್ತದೊಳುದ್ಭಾಸಿತದಿವ್ಯಕುಂಡಲಕಿರೀಟಾಕಲ್ಪಮಾಕಾಶದಿಂ ೨೮

ವ॥ ಆಗಳಾ ಮಕರಕುಂಡಲಕಿರೀಟಂಗಳಂ ವಿಹಗರಾಜಂ ರಾಜೀವಲೋಚನಂಗೆ ತುಡಿಸಿ ಪೋಪುದುಂ

---

1 ಮನೋಹರಿ ಸಂಮದಕಾರಿ ಮನಃಪ್ರಮೋದವರ್ಧಿನಿ (ಕಗ) 2 ಮೆನಿಸಿದತ್ತಸಿತವಸನಮುಂ (ಕಗ) 3 ಸುವಿಮಲಂ (ಖ)

ಕಂ॥ ಜಲಜಾಸನೆ ಜಲರುಹಕರೆ
ಜಲದಾಧ್ವದೆ ಬಂದು ಲಕ್ಷ್ಮಿ ಕಾಂತಿಚ್ಛಲದಿಂ
ಜಲಜಾಕ್ಷನೊಡನೆ ನೆರೆದಳ್
ಜಲದರಮೋದಾರಮೆಸೆಯೆ ಸುರಪಟಹರವಂ ೨೯

ವ॥ ಅಂತು ಪರುಶುರಾಮನೆಂದಂತೆ ನಿಜಸಮಗ್ರವೈಷ್ಣವಪ್ರಭಾವಮಂ ತಳೆದು ಕೈಟಭಾಂತಕಂ ಗೋಮಂತಕೂಟಸ್ಥಲದೊಳಿರ್ಪನ್ನೆಗಂ

ಕಂ॥ ಕ್ಷಿತಿ ಚಾತುರ್ವಳವಿದ್ಧ
ಕ್ಷಿತಿ ಗಗನಂ ಕೇತುವಿದ್ಧಗಗನಂ ದಿಕ್ಸಂ
ತತಿ ಧೂಳಿವಿದ್ಧದಿಕ್ಸಂ
ತತಿಯೆನೆ ಬೞಿಸಂದು ಬಂದು ಮಗಧನೃಪೇಂದ್ರಂ ೩೦

ನಿರಧಿಷ್ಠಾನಂ [1]ದಿವಮೆಂ
ಬರಂತಧಿಷ್ಠಾನಮಲ್ಲವೇ ನಗಮಿದು[1] ತ
ತ್ಸುರಸದನಕ್ಕೆಂದಾ ಭೂ
ಧರತಟದೊಳ್ ನಿಂದು ನೋಡಿ ನೃಪಕೋಟಿಗಳಂ ೩೧

ಮ॥ಸ್ರ॥ ಪ್ರತಿಕಾರೋಪಾಯಮೇನಿಲ್ಲಿಗೆ ನುಡಿಯಿಮೆನಲ್ ಕರ್ಣದುರ್ಯೋಧನಾದಿ
ಕ್ಷಿತಿಪರ್ ತಂತಮ್ಮುಪಾಯಂಗಳನುಸಿರ್ವುದುಮುತ್ತಾನಿತಾಸ್ಯಂ ಸಮುತ್ತ್ರಂ
ಭಿತಬಾಹಾದಂಡನಾಂದೋಳಿತಕರಯುಗಳಂ ಮಾಣಿಮೆಂದೆಂದು ಮಾರ್ಕೊಂ
ಡತಿಮಾತ್ರೋಪಾಯಮಂ ತಾನಱುಪುವ ಬಗೆಯಿಂ ಚೈದ್ಯನಿಂತೆಂದನಾಗಳ್ ೩೨

ಇದನೊಂದಂ ಮಾಡೆ ಬೇಡಿಂ ಪೞಪೞವು ಮತಂ ವಾಹನಾರೂಢರೆಂದ
ನ್ನದೆ ಬಂದಂತೆಯ್ದಿ ಬೇಗಂ ಗಿರಿಯನುರುಮುದಂ ತ್ರಿಂಶದಕ್ಷೌಹಿಣೀಸೈ
ನ್ಯದ ವೀರರ್ ಕೂಡೆ ಕಾಂತಾರದ ತರುತತಿಯಂ ಕಿೞ್ತು ತಂದೊಟ್ಟುಗೀ ಶೈ
ಲದ ಸುತ್ತುಂ ಮತ್ತದಂ ನಾಮುರಿಪಲದಱೊಳಬ್ಬಾಡುಗುಂ ರಾಮಕೃಷ್ಣರ್ ೩೩

ವ॥ ಎಂದು ಶಿಶುಪಾಲಂ ಪೇೞಲದಕ್ಕೊಡಂಬಟ್ಟು

ಕಂ॥ ಲೋಕಮನರಣ್ಯಮೆನಿಸಲ
ನೋಕಹನಿಕುರುಂಬಮಂ ನಿಜಾನೇಕಭಟಾ
ನೀಕದೆ ತರಿಸಿ ನರೇಶ್ವರ
ರಾ ಕುಧರದ ಸುತ್ತಲೊಟ್ಟಿ ಸುಡುವುದುಮಾಗಳ್ ೩೪

1 ದಿವಮೆಂಬರಂತಧಿಷ್ಠಾನಮಲ್ಲದೆನಗಿಂತಿದು (ಕಖಗ)

ಮ॥ಸ್ರ॥ ಪೊಸತೊಂದಾಯಿತ್ತಿದೇಂ ಕಾರಿರುಳೆನೆ ಶಿಖೆಗಳ್ ಸಂಜೆಗೆಂಪಂ ಸ್ಫುಲಿಂಗ
ಪ್ರಸರಂ ತಾರಾಳಿಯಂ ಕರ್ಬೊಗೆ ತನುದೊದಸಂ ಪೋಲ್ತುಗುರ್ವಾಗಲಂದೆ
ಣ್ದೆಸೆವೆಣ್ಗಳ್ ತೊಟ್ಟ ಕರ್ಣೋತ್ಪಲಸಲದರ್ವು ಸಪ್ತಾಬ್ಧಿ ವೇಳಾಲತಾಂಗಂ
ಬಿಸುಪೇಱುತ್ತಿರ್ಭೃಗಂಗಾಬ್ಧಿನಿ ಮುಗಿದುದದೇಂ ರೌದ್ರಮೋ ಶೈಲದಾಹಂ ೩೫

ವ॥ ಆಗಳಾ ಶೈಲರಾಜನ ಶೃಂಗಾರರಸಮೆ ಕುದಿದಬ್ಬಾಡುವಂತಬ್ಬಾಡುವ ನಿರ್ಝರ ಜಲಂಗಳುಮಂ, ಆ ಮಹೀಧರೇಂದ್ರನ ಮಂಡನ ಮಹಾರತ್ನಂಗಳೆ ಸಿಡಿಲ್ವಂತೆ ಸಿಡಿಲ್ದೊಡೆದುಸೂಸುವ ಹೇಮರತ್ನಂಗಳುಮಂ, ಆ ಭೂಭೃತ್ಪ್ರಭುವಿನ ಭಯಾತಿಶಯ ಯುತೋತ್ತರೀಯಪಟಲಮೆ ಪಾಱುವಂತೆ ಚೂಳಿಕಾವಳಯದಿಂ ಮೆಯ್ದೆಗೆದು ಪೋಪ ಮೇಘಜಾಲಂಗಳುಮಂ ಆ ಮಹಾಚಲಪತಿಯ ರಮಣೀಯಜಂಗಮಾವತಾರಮೂರ್ತಿಗಳ ಮುಂಗೊಳ್ವಾಯದಿಂ ಪರಿದು ಕೆಡೆದುವೆಂಬಂತೆ ದೆಸೆದೆಸೆಗೆ ಪರಿದು ಕೋಡನೂಱು ಕೆಡೆವನೇಕದ್ವಿಪಸಂಕುಳಂಗಳುಮಂ ಆ ನಗೇಶ್ವರನ ನಿಡುಸುಯ್ಯೆಲರ್ಗಳೆ ಪೊಱಮಟ್ಟು ವೆಂಬಂತೆ ಗುಹಾಮುಖದಿಂ ಪೊಱಮಟ್ಟು ಜೀವಮಂ ಬಿಡುವ ಜರದಜಗರಂಗಳುಮಂ, ಆ ಶಿಲೋಚ್ಚಯಚಕ್ರವರ್ತಿಯ ವಿಕ್ರಮಾವಷ್ಟಂಭಪ್ರಭಾವರೌದ್ರಂಗಳೆ ರೂಪಧರಂಗಳಾಗಿ ನೆಗೆದು ಲಯಮನೆಯ್ದಿದುವೆಂಬಂತೆ ಅಂಬರಕ್ಕುಚ್ಚಳಿಸಿ ಬೀೞ್ವ ಶರಭ ಶಾರ್ದೂಲ ಭೇರುಂಡಾದಿಗಳುಮಂ, ನೋಡಿ ಕಂಡೇಕಕುಂಡಲಂಗೆ ಗಿರೀಶನೊಳ್ ಕಾರುಣ್ಯಮುಂ ಜರಾಸಂಧ ಸೈನ್ಯದೊಳ್ ಕೋಪಾನುಬಂಧಮುಮೊಡನೊಡನೆ ಪೆರ್ಚಿದುದನಱಿದು ದನುಜಾಂತಕಂ ವಿಕಸಿತಮುಖಾರವಿಂದನಾಗಿ ಆಂ ಪರ್ವತಕ್ಕಮೇನಾನುಮೊಂದುಪಾಯದಿಂ ಶಾಂತಿಯಂ ಪಡೆದು ಬಂದು ಕಾದಿದಪ್ಪೆನನ್ನೆಗಂ ನೀವೀ ಶಿಖರದಿಂ ಮಗಧ ಸೇನಾಸಾಗರಕ್ಕೆ ಪಾಯ್ದು ಕಾದುತ್ತುಮಿರಿವೆಂದು ಪೇೞ್ದ

ಕಂ॥ ಪಿರಿದುಮನಲಾಧಿದೇವತೆ
ಪರನರವಧಕೆಂದು ಬೆಸಲೆಯಾದಳೊ ಪೇೞೀ
ಪುರುಷನನೆನೆ ತೇಜೋಮಯ
ನುರಿವಗದಿಂ ಪಾಯ್ದನನ್ಯಸೇನೆಗನಂತಂ ೩೬

ಫಣಿಲೋಕದಿಂದೆ [1]ಪೊಱಮಡ
ಲಣಿಯೆರಲದ್ರೀಂದ್ರದಿಂದೆ ಪೊಱಮಟ್ಟಮಿದೊಂ
ದಣಕಂ[1] ಲಯೋಗ್ರಸಂಕ
ರ್ಷಣನೆನೆ ಸಂಕರ್ಷಣಂ ಭಯಂಕರನಾದಂ ೩೭

ವ॥ ಅಂತುಮಲ್ಲದೆ

[1] ಪೊಱಮಡದಣಿಯುರಮದ್ರೀಂದ್ರದಿಂದೆ ಪೊಱಮಟ್ಟನಿದೊಂದಣಕಂ (ಮೊಅ)

ಉ|| ಪೇೞುವನೆಂದವೆಂತೊ ಬಲಭದ್ರನೊ ರುದ್ರನೊ ನೀಲವಸ್ತ್ರನೋ
ನೀಳಘನಾವೃತಾಚಲನೊ ಲಾಂಗಲಪಾಣಿಯೊ ದಂಡಪಾಣಿಯೋ
ತಾಳಪತಾಕನೋ ಪ್ರಳಯಧೂಮಪತಾಕನೊ ತಾನೆನಲ್ ಮಹಾ
ಭೀಳತೆವೆತ್ತು ತೋಱಿದನರಾತಿನೃಪಾಳಿಗೆ ಕಾಮಪಾಲಕಂ ೩೮

ಕಂ|| ಧುರದೊಳ್ ರಾಮಂ ವಿಸಟಂ
ಬರಿದು ಜರಾಸಂಧನೃಪಚತುರ್ವಲಮಕರಾ
ಕರಮಂ ಕದಡಿದನತಿಭೀ
ಕರಮಕರಂ ಕದಡುವಂತೆ ಮಕರಾಕರಮಂ ೩೯

ತೇರ್ವೈಸಿ ಪಾಯ್ದು ಪಿಡಿದತಿ
ವೀರರ ಹಯದಿಂದೆ ಹಯಮನಾಳಿಂದಾಳಂ
ವಾರಣದಿಂ ವಾರಣಮಂ
ತೇರಿಂ ತೇರಂ ಹಲಾಯುಧಂ ಮರ್ದಿಸಿದಂ ೪೦

[1]ಕೆಲವಂ ಚರಣಾಹತಿಯಿಂ
ಕೆಲವಂ[1] ಮುಷ್ಟಿಪ್ರಹಾರದಿಂ ಗಜಘಟೆಯಂ
ಕೆಲವಂ ಬಲಭದ್ರಂ ಲಾಂ
ಗಲದಿಂ ಬರೆತೆಗೆದು ಮುಸಲದಿಂ ಕೆಡೆವೊಯ್ದಂ ೪೧

ದೆಸೆಯಾನೆ ಮುನ್ನವೊಳವೆಂ
ಬಸದುಕ್ತಿಯದಿರ್ಕೆ ಪಿಡಿದು ಪೇರಾನೆಗಳಂ
ದೆಸೆದೆಸೆಗೀಡಾಡೆ ಬಲಂ
ದೆಸೆಯಾನೆಗಳಾದುವವಱುಕೊಳೆಂಟುಗಜಂಗಳ್ ೪೨

ಹಲದಿಂದರಿಕರಿಕುಂಭ
ಸ್ಥಲಮಂ ಬಳಸುಗಿಯೆ ನೆಗೆದು ಸೂಸಿದ ಮುಕ್ತಾ
ಫಲಮನೊಳಕೊಂಡು ಮುಕ್ತಾ
ಫಲಜನ್ಮಸ್ಥಾನವಾದುದಂಭೋನಿಧಿಯುಂ ೪೩

---

1 ಕೆಲರಂ ಚರಣಾಹತಿಯಿಂ ಕೆಲರಂ (ಕಗ)

ಅಸುಹೃತ್ಕರಿಯುಂ ಹಲಿ ದಳಿ
ಯಿಸಲಂದುಚ್ಚಳಿಸಿ ಪುದಿದ ನೆತ್ತರ ಕೆಂಪಾ
ಗಸದೊಳ್ ತೋಱುವುದಿನ್ನುಂ
ಕಿಸುಸಂಜೆಯ ನೆವದೆ ದಿವದ ರಾತ್ರಿಯ ಪುಗಿಲೊಳ್ ೪೪

ತಾಳಧ್ವಜನಿಱಿದೆಡೆಯೊಳ್
ಲೀಳೆಯಿನಂದಾಯ್ದು ಕೋದು ತೊಟ್ಟಿರ್ದ ಶಿರೋ
ಮಾಳೆಯೆ ದಲ್ ಮಾರಿಯ ಮಾ
ಕಾಳಿಯ ಚಂಡಿಕೆಯ ಕೊರಲ ಮಾಲೆಗಳೆಲ್ಲಂ ೪೫

ಎಣಿಕೆಗೆ ಪನ್ನೆರಡಕ್ಷೌ
ಹಿಣಿಯುಂ ತವೆ ತಿಂದು ತೇಗುವಂದೆವೊಲಿವಾ
ರಣವೌಕ್ತಿಕದಿಂದುದಿತೋ
ಲ್ಬಣಾಸ್ಯವೇನೆಸೆದುದೋ ಹಲಂ ಹಲಧರನಾ ೪೬

ವ|| ಅನ್ನೆಗಂ

ಮ||ಸ್ರ|| ಚರಣಾಂಗುಷ್ಠಾಗ್ರದಿಂದಂ [1]ಕಿಳನಿಲನು[1]ನಹೀಂದ್ರಾಲಯಕ್ಕೊತ್ತೆ ವಿಶ್ವಂ
ಭರೆ ಬಿಣ್ಪಿಂ ಮಧ್ಯಭಾಗಂ ನಳಿದು ಮುಗಿಯೆ ತಳ್ಪೊಯ್ದು ವಾರಾಸಿಯಿಂ ತ
ದ್ಗಿರಿವಹ್ನಿಜ್ವಾಲೆಯುಂ ನಂದಿಸಿ ಬಱಿಕ ಜರಾಸಂಧ[2]ಸೇನಾಸಮೂಹಾಂ
ತರಮಂ[2] ಕಾಲಾಗ್ನಿರುದ್ರಂ ಪುಗುವ ತೆಱದೆ ದೈತ್ಯಾಂತಕಂ ಬಂದು ಪೊಕ್ಕಂ ೪೭

ಉ|| ಪೊಕ್ಕು ಮುರಾರಿ ಮಾರ್ಪಡೆಯೊಳಿರ್ಪುದುಮಾ ರಿಪುಸೈನ್ಯಜೀವನಂ
ಪೊಕ್ಕುದು ಕಾಲವಕ್ತ್ರಮನರಾತಿಬಲಾರುಣತೋಯಸಿಂಧುಗಳ್
ಪೊಕ್ಕುವು ವಾರ್ಧಿಯಂ ರಿಪುಚಮೂಪಶಿರಂ ಪಿಶಿತಾಶಿಕುಕ್ಷಿಯೊಳ್
ಪೊಕ್ಕುವೆನುತ್ತುಮಂಬರದೊಳೀಕ್ಷಿಸುತಿರ್ದುದು ದೇವಸಂಕುಳಂ ೪೮

ವ|| ಅಗಳ್

ಶ|| ಆವಂ ಕೋಟಿಯುಗಾನುಷಂಗಖಗವಾಹತ್ವಂಗಳಿಂ ಪೋಲ್ವನೀ
ದೇವಂಗೆನ್ನವೊಲಾ ಮಹತ್ವಮೆನಗಂ ದ್ವಿಟ್ಸೇನೆಗಂ ಮಾಱ್ಕಮಿಾ
ಜೀವಾಕೃಷ್ಟಿಯನೀತನೆಂದು ಧನು ಲಜ್ಜಾನಮ್ರವಾಯ್ತೆಂಬಿನಂ
ಶ್ರೀವತ್ಸಾಂಕನಜೇಯನೇಱಿಸಿದನುಗ್ರಾಟೋಪಮಂ ಚಾಪಮಂ ೪೯

[1] ಕಿಳನಿಲನ (ಮೊಅ) [2] ಸೇನಾಸಮುದ್ರಾಂತರಮಂ (ಖ)

ವ|| ಅಂತೇಱಿಸಿ ಭುಜಬಲಾಟೋಪಾಖರ್ವಗರ್ವದಿಂ ಮೌರ್ವೀಲತಾಸ್ಫಾಲನಂಗೆಯ್ಯೆ

ಮ||ಸ್ರ|| ಕುಳಭೂಭೃತ್ಸಂಧಿಬಂಧಂ ಕಳಲೆ ಕದಡೆ ವಾರಾಶಿಗಳ್ ದೇವತಾಸಂ
ಕುಳವತ್ಯಾಶಂಕೆಯಿಂ ಕೈಕೊಳಲದಿರೆ ಮಹೀಮಂಡಲಂ ವ್ಯೋಮಗಂಗಾ
ಸಳಿಳಂ ತುಳ್ಕಾಡೆ ಚಂಡದ್ಯುತಿರಥತುರಗಂ ಬೆರ್ಚೆ ಪೊಣ್ಮಿತ್ತ್ರರಾತಿ
ಪ್ರಳಯಪ್ರಧ್ವಾನಧೀರಂ ಮುರಮಥನಧನುರ್ಜ್ಯಾಲತಾಘೋರಘೋಷಂ ೫೦

ಗಗನಂ ಬಾಣಾತ್ಮಕಂ ಮಾರ್ಪಡೆ ಪೆಣಮಯಮಾದತ್ತಿದೆಂತೀತನಂಬಂ
[1]ತೆಗೆವಂದಂ ಪೂಡುವಂದಂ[1] ಬಿಡುವುದಱಿಯಲಾಯ್ತಿಲ್ಲ ಕರ್ಣಾಗ್ರದೊಳ್ ಪೊ
ರ್ದುಗೆವೆತ್ತಾ ಮುಷ್ಟಿಯುಂ ಮಂಡಳಿಸಿದ ಧನುವುಂ ದಿಟ್ಟಿಪಾಲೋಕಮುಂ ನೆ
ಟ್ಟಗೆ ತೋಱುತ್ತಿರ್ದುವೆಂಬಂತಗಧರನಿಸುತಿರ್ದಂ ಸುದುರ್ಲಕ್ಷ್ಯವೇಗಂ ೫೧

ಕಂ|| ಶರಶರವರ್ಷಮನತ್ಯು
ದ್ಧುರಧುರದೊಳ್ ಕೃಷ್ಣಕೃಷ್ಣಮೇಘಂ ಕಱೆಯಲ್
ಪರಬಲಜೀವನಜೀವನ
ವರೆಯಾಗುತ್ತಿರ್ದುದಂತದೇನಚ್ಚರಿಯೊ ೫೨

ನಾಂಟಿದುವರಿಭಟರಂಗಮ
ನೀಂಟಿದುವಸ್ರವನಡರ್ತು ಮೀಂಟಿದುವೆಲ್ವಂ
ಪೀಂಟಿದುವಗ್ಗಳವೆಸರಂ
ಡಾಂಟಿದುವಾವೆಡೆಯುಮಸುರಹರನ ಶರಂಗಳ್ ೫೩

ಯಾದವಕುಲನಿಸೆ ತಿಂತಿಣಿ
ಯಾದವನೀಪಾಲಬಲದ ಹಯಸಂತತಿಯುಂ
ಸಾದಿಗಳಂ ರಣರೌದ್ರರ
ಸಾದಿಗಳಂ ತುಱುಗಿ ನಟ್ಟುವಸ್ತ್ರಾವಳಿಗಳ್ ೫೪

ಮ|| ಲಘುವೇಗತ್ವದಿನರ್ಧಚಂದ್ರಶರದಿಂದೆಚ್ಚಾಡೆ ಕೃಷ್ಣಂ ಮದೇ
ಭಘಟಾಕೋಟಿಗಳೆತ್ತಿ ಬರ್ಪ ಕರದಂಡಂಗಳ್ ವಿಖಂಡಂಗಳಾ
ಗಿ ಘನಧ್ವಾಂತಮನೆಯ್ದೆ ಪಾಱೆ ಪುದಿದಿರ್ದಾಕಾಶವಾರಾಶಿಘೋ
ರಘನೋರ್ಮಿಪ್ರಕರಂಬೊಲೇನಿನಿಸುಬೇಗಂ ಕಣ್ಗೆ ಗುರ್ವಾದುದೋ ೫೫

1 ತೆಗೆವಂಬಂ ಪೂಡುವಂಬಂ (ಕಖಗ)

ಉ॥ ತಂಡದೆ ಪೊಯ್ದು ಕೋಟಿಪರಿಸಂಖ್ಯೆಯ ಕೈಟಭಸೂದನಾಸ್ತ್ರದಿಂ
ಖಂಡಿಸಿ ಪಾಱುದಸ್ತ್ರಬಲಯೋದ್ಧೃಶಿರಂ ಶತಕೋಟಿಗಳ್ ಮನಂ
ಗೊಂಡುಮದೊಂದುಬೇಗಮಸುರಾರಿಜಯೋತ್ಸವದೊಳ್ ಸುರರ್ ನಭೋ
ಮಂಡಲದಲ್ಲಿ ಕಟ್ಟಿದ ಫಲಾವಳಿಗಳ್ ದಿಟಮಿಂತಿವೆಂಬಿನಂ ೫೬

ಮ॥ ವಿಶಿಖಾಸಾರಮುಪೇಂದ್ರಚಾಪಘನದಿಂ ಸೂಸಿತ್ತದೆತ್ತಂ ವರೂ
ಥಶತಂ ಭಿನ್ನಶರೀರಮಾಗೆ ಶರಮಲ್ತುಲ್ಕಾಗಣಂ ಬಾಣಮ
ಲ್ತಶನಿಶ್ರೇಣಿ ಪತತ್ರಿಯಲ್ತುರಗಜಾಲಂ ಪತ್ರಿಯಲ್ತುಗ್ರವ
ಹ್ನಿಶಿಖಾಸಂತತಿ ಕಾಂಡಮಲ್ತು ಯಮದಂಡವ್ರಾತಮೆಂಬನ್ನೆಗಂ ೫೭

ವ॥ ಅಂತು ಶರವರ್ಷಮಂ ಕಱೆಯುತ್ತುಮಿರ್ದದೊಂದಭಿನವಾರ್ಭಟೆಯನಪ್ಪು
ಕೆಯ್ದು

ಚಂ॥ ಬಲರಿಪು ಕಾಲಚಕ್ರದ ವೊಲೊರ್ವನೆ ಮೂರ್ಪಡೆಯುಂ ಸ್ವಕೀಯಮಂ
ಡಲಗತಿಯಿಂದ ಸುತ್ತಿದನಿತಲ್ಲದೆ ಮುಂತಣ ಪಿಂತಣಿರ್ಕೆಲಂ
ಗಳ ಭಟರ್ಗೆಲ್ಲಮೆಲ್ಲೆಡೆಯೊಳಂ ನೆರೆದಾಂತುದುಮಲ್ಲದಾ ಮಹಾ
ಬಲದನಿಬರ್ಗಮಂತನಿಬರಾಗಿಯೆ ತೋಱಿದನಾಜಿರಂಗದೊಳ್ ೫೮

ವ॥ ಅಂತುಮಲ್ಲದೆ

ಕಂ॥ ಆನೆನಿತು ಕೊಂಡು ಪೋರ್ವೆಂ
ಸೇನೆಯನಿಂದಿಕ್ಕುವೆಂ ಕ್ಷಣಾರ್ಧದಿನೆಂದಾ
ದಾನವರಿಪು ದಿವಿಜಜಯ
ಧ್ವಾನಂ ಮಿಗೆ ಮೋಹನಾಸ್ತ್ರಮಂ ತೊಟ್ಟೆಚ್ಚಂ ೫೯

ಮ॥ಸ್ರ॥ ಧುರದೊಳ್ ತಾನೆಚ್ಚ ಸಮ್ಮೋಹನಶರವಹಿತಾಷ್ಟಾದಶಾಕ್ಷೌಹಿಣೀವೀ
ರರುಮಂ ಪ್ರತ್ಯೇಕಮೋರಂತಳಱಿ ಸುೞಿಯೆ ಮೋಹಾಂಧಕರ್ ತಮ್ಮೊಳೋರೊ
ರ್ವರನೊರ್ವರ್ ಕೃಷ್ಣನೆಂದಾಂತಿಱಿದು ಪಡಲಿಡುತ್ತಿರ್ದುದಂ ನೋಡುತಿರ್ದಂ
ಸರಲಂ ತೂಗುತ್ತೆ ಕೃಷ್ಣಂ ನಿಜಧನುತಟವಿನ್ಯಸ್ತಹಸ್ತಂ ಸ್ಮಿತಾಸ್ಯಂ ೬೦

ವ॥ ಅಂತು ತಮ್ಮೊಳೆ ತಳ್ತಿಱಿದರಿಸೈನ್ಯದೊಳ್ [1]ಪದಿನೆಂಟಕ್ಷೌಹಿಣೀಬಲವ
ಶೇಷಮಾಗೆ[1]

[1] ಪನ್ನೆರಡಕ್ಷೌಹಿಣೀಬಲಾವಶೇಷಮಾಗೆ (ಕಖಗ)

ಚಂ॥ ವಸುಧೆಯ ವಾರಿದಾಧ್ವದೆಡೆಯೊಳ್ ಕಣೆಗಳ್ತಲೆ ಕೊರ್ವಿ ನಿಂದಗು
ರ್ವಿಸೆ ಘನಮಾರ್ಗದೊಳ್ ಸರಲ ಸಂತತಿ ಪಂದರವಿಕ್ಕಿದಂತೆ ಸಂ
ಧಿಸಿ ನಿಲೆ ದಿಕ್ತಟಾಂತರದೊಳುಗ್ರಧನುರ್ಗುಣಟಂಕೃತಂ ವಿಜೃಂ
ಭಿಸೆ ಮಗಧಾದ್ಯನೇಕನೃಪರೊರ್ವೊಯೆ ತಾಗಿದರಂದು ಶಾಙ್ಗ್ರಯಂ ೬೧

ಕಂ॥ ಇದು ನೆಲನಿದು ದೆಸೆಯಿದು ನಭ
ಮಿದು ತಾನಿವರನ್ಯರೆಂಬ ಬಗೆಗಿಡೆ ನೃಪವ್ರಂ
ದದ ಕಱಿವಿಷುಗಳನಿಷುಜಾ
ಲದಿನೊಡನೊಡನೆಚ್ಚು ಕಡಿದು ತದನಂತರದೊಳ್ ೬೨

ಮ॥ಸ್ರ॥ ಎನಗಂ ಬಿಲ್ಬಲ್ಮೆ ದೋರ್ವುದ್ಧತರನಿವರ್ಗಳಂ ಚೈದ್ಯ ಮಾದ್ರೇಶದುರ್ಯೋ
ಧನ ರಾಧೇಯ ತ್ರಿಗರ್ತಾಧಿಪ ಮಗಧನೃಪಾಲಾದ್ಯರಂ ಕೊಲ್ವೆನೆಂದಾ
ವನಜಾಕ್ಷಂ ವೈಷ್ಣವಾಸ್ತ್ರಂದುಡೆ ಸುರರಗಿದರ್ ಸ್ಥಾಣುವಲ್ಲಾಡಿದಂ ಮೇ
ದಿನಿ ಕಂಪಂಗೊಂಡುದಂಭೋನಿಧಿ ಕದಡಿದುದೇನುಗ್ರಮೋ ವೈಷ್ಣವಾಸ್ತ್ರಂ ೬೩

ವ॥ ಆಗಳನಿಲಪಥದೊಳೊಂದಶರೀರವಾಕ್ಯಮಿಂತೆಂದುದು:—ಎಲೆ ಮುಕುಂದಾ ನೀನೀ ಜರಾಸಂಧಪ್ರಭೃತಿನರಪಾಲರೊಳಾವಂಗಾವನಂ ಮೃತ್ಯುವಾಗಿ ಕಲ್ಪಿಸಿದೆ ಮುನ್ನಾ ಕ್ರಮದೆ ಭೀಮಾರ್ಜುನಾದಿವೀರನೃಪರೆ ನಿಮಿತ್ತಮಾತ್ರಮಾಗೆ ಕತಿಪಯಕ್ಷಿತಿಪಾಲರಂ ನಿರ್ಮೂಲಿಪುದು; ನಿನ್ನಂಶಾಂಶದವತಾರಮೂರ್ತಿಯಿಂ [1]ಲೋಕಲುಂಟಾಕರ[1]ನಾವ ಪದದೊಳ್ ಮಡಿಯಿಸಲ್ವೇಡಿರ್ದಪುದನರವರನಂತಂತೆ ಮಡಿಯಿಪುದು; ಒಂದೆ ಸಮಯದೊಳಿಂದೆ ಸಕಲದುರ್ವಿಳಸಿತಕ್ಷತ್ರಿಯರಂ ಸಂಹಾರಂಮಾಡೆ ಮುಂದೆ ನೆಗಟ್ವಿ ಭಾರತಯುದ್ಧಂ ಕಿಡುಗುಂ; ಉಡುಗುಡುಗು ವೈಷ್ಣವಾಸ್ತ್ರಮಂ—ಎನೆ ಭುವನವ್ಯಾಪಾರನಾ ಮಹಾಸ್ತ್ರಮನುಪಸಂಹರಿಸಿ ಮತ್ತಂ ಸಮರವಿಜಯಚಿಹ್ನಮಂ ಪ್ರಕಟಿಸಲ್ ಬಗೆದು

ಚಂ॥ ಪಱಿಯೆ ಕಿರೀಟಕೋಟಿಯನಿಸಲ್ ನೆಱೆದಂಗಿವರೀ ಶಿರಂಗಳಂ
ಪಱಿಯಿಸಲೊಲ್ವೊಡೇನರಿದೆ ಶಾಙ್ಗ್ರಗೆನಲ್ ಹರಿ ಬಾಣಕೋಟಿಯಿಂ
ಪಱಿಯಿಸೆ ರಾಜಕೋಟಿಮಕುಟಂಗಳನಂತವು ಪಾಱಿ ಪೋಗಿ ಬಾಂ
ದೊಱೆಯ ವಿಚಿತ್ರವಾರಿರುಹಕೋಟಿವೊಲಿರ್ದುವದೊಂದು ಬೇಗದೊಳ್ ೬೪

ವ॥ ಅಂತು ಮಕುಟಭಂಗದೊಡನೆ ಮನೋಭಂಗಮಾಗೆ ಮಗಧಪ್ರಮುಖನಿಖಿಲ ನೃಪಾಲಕರ್ ಬೆಂಗೊಟ್ಟು ಪೋಪುದುಂ ಗಗನತಳದಿಂ ಭೂತಳದ ಮೇಲೆ ಕಱಿವನೇಕ ನೂತನಾನರ್ಘ್ಯಮಣಿಮಕುಟವೃಷ್ಟಿಯಿಂ ತನ್ನ ಮೇಲೆ ಕಱಿವ ಇಂದ್ರನ ವಿಚಿತ್ರಕುಸುಮ

[1] ಲೋಕಕಂಟಕರ (ಖ)

ಮಾಲಾವೃಷ್ಟಿಭ್ರಮರವೃಂದಕ್ಕೆ ಗಂಧಾನುಮೇಯಮಾಗೆ ವಸುದೇವನಂದನರ್ ವಿಜಯ
ಲೀಲೆಯುಂ ಕೈಕೊಂಡು ನಿಂದಾಗಳಾ ಮಹಾಹವನಭೋವಳಯಮಂ ಕಣ್ದೀವಿ ನೋಡಿ

ಉ॥ ಆಡಿದುವಿಂದರಾತಿಭಟರೆಟ್ಟಿಗಳಾಜಿಯೊಳಿನ್ನ ಕಾರ್ಯದ
ಜ್ಚಾಡಿದುದಿಂದು ಕೂಡಿದುದು ವೈರಿಬಲಾರುಣಸಿಂಧು ವಾರ್ಧಿಯಂ
ಕೂಡಿದುದೆನ್ನ ಪೇಕ್ಷೆ ಪಸಿವೋಡಿದುದಿಂದರಿಸೈನ್ಯದಿಂ ಜನಂ
ಗೋಡಿದುದೆನ್ನ ಕಣ್ಬಸಿವೆನುತ್ತೊಸೆದಾಡಿದನಂದು ನಾರದಂ ೬೫

ವ॥ ಅನ್ನೆಗಂ ಕೇಶಿಸೂದನಪ್ರಲಂಬಾಂತಕರಲ್ಲಿಂ ತಳರ್ದು ಕರವೀರಪುರಾಭಿಮುಖ
ರಾಗಿ ಬರುತ್ತಿರಲಂತದಂ ತತ್ಪುರನರೇಶ್ವರಂ ಸೃಗಾಲನರಪಾಲಂ ಕೇಳ್ದು ಪ್ರಳಯಕಾಲಜಲ
ಧರದಂತೆ ಗಜಱಿ ಗರ್ಜಿಸಿ

ಕಂ॥ ಗಣನೆಗೆ ಮೂವತ್ತಕ್ಷೌ
ಹಿಣಿಸೈನ್ಯಂ ಮಗಧನೃಪತಿಗಾದೊಡಮವನೊಳ್
ಪೊಣರಲ್ ಬರ್ಕುಂ ಬರ್ಕುಮೆ
ಪೊಣರಲ್ ರವಿದತ್ತದಿವ್ಯರಥಮುಳ್ಳೆನ್ನೊಳ್ ೬೬

ಸೇನಾಬಲದಿಂ ಪೊಣರ್ದಾ
ಭೂನಾಥರ ಮೊಗ್ಗು ಸಲ್ಲದೆನ್ನೊಳ್ ಕೃಷ್ಣಂ
ಗಾನೇಕಾಂಗದೆ ಗೆಲ್ದಪೆ
ನೀ ನೀರಜಮಿತ್ರದತ್ತರಥದಿನಮೋಘಂ ೬೭

ಪೋಗೆಲವೊ ದೂತ ಕೃಷ್ಣನ
ನೀಗಳೆ ಮೇಲೆತ್ತಿ ಬರಿಸು ಬಂದಪೆನಾನುಂ
ಬೇಗದಿನೆಂದಟ್ಟಿದ ಚರ
ನಾಗಳೆ ಬಂದೊದಱಿದಂ ಮುರಾಂತಕನಿದಿರೊಳ್ ೬೮

ಮ॥ಸ್ರ॥ ಅದಟಿಂ ಮುಂ ಗೆಲ್ದುದಂ ನೀಂ ನೆನೆನೆನೆದು ಭುಜಾಗರ್ವದಿಂ ಪೆರ್ಚದಿರ್ ಪೆ
ರ್ಚದಿರಿನ್ನೀ [1]ಗರ್ವದುರ್ವಂ ಬಿಡುಬಿಡು ನಿನಗಿಂ ಸಲ್ಲದಿಂ[1] ಸಲ್ಲದಿಂ ಸ
ಲ್ಲದು ಯುದ್ಧಕ್ರೀಡೆಗಣ್ಮಿನ್ಮಲೆ ನಡೆ ನಡೆ ಕಂಸಾರಿ ಸೈತಾಗು ಸೈತಾ
ಗಿದಿರಾಂತೀಬಂದನೀಬಂದನೆ ಸಮರಧರಿತ್ರೀಕರಾಳಂ ಸೃಗಾಲಂ ೬೯

---

[1] ಗರ್ವಮಂ ಸೀಂ ಬಿಡು ಬಿಡು ನಿನಗೀಬಾರುಷಂ (ಪೊಅ)

ಕಂ॥ ಎಂದು [1]ಚರನೊದಱಿ ರಥಮುಂ[1]
ಬಂದುದು ಹಯಖುರಮುಖಂಗಳಿಂ ನಭಮಂ ಸೀ
ಳ್ವಂದದೆ ದಿಕ್ತಟಮಂ ಶರ
ವೃಂದದೆ ತೀವುತೆ [2]ಸೃಗಾಲರಥಿ ಬರ್ಪನೆಗಂ[2] ೭೦

ಈ ರಥದ ರಥಿಯ ಪರಿ ಸಾ
ಧಾರಣಮಲ್ಲೆಂದು ಶಾರ್ಙ್ಗಿ ಕಳಿಪಿದ ಮಹಾಸ್ತ್ರ
ಸಾರಕ್ಕಲಕ್ಷ್ಯಮಾಗೆ ಜ
ವಾರಭಟಿಯಿನಾಂತುವಾ ವರೂಥಹಯಂಗಳ್ ೭೧

ವಿವಿಧಗತಿಜವದಿನಭ್ರದೊ
ಳವನಿಯೊಳೆಣ್ದೆಸೆಯೊಳೆತ್ತಲುಂ ತೋಱುತ್ತುಂ
ಭುವನಂ ಕೂಡೆ ರಥಾದ್ವೈ
ತಮಾದುದೆನೆ ಪರಿದುದಾ ಸೃಗಾಲವರೂಥಂ ೭೨

ವ॥ ಆ ದಿವ್ಯರಥದ ಚಿತ್ರಗತಿವೇಗಮತಿಚಮತ್ಕಾರಮಾಗೆ ಚಾಣೂರಾಂತಕಂ ನಿಜಾಂತರಂಗದೊಳ್

ಚಂ॥ ತಳೆದಪುದಾಜಿಕೇಳಿಗೆ ರಥಂ ಬಹುಮೂರ್ತಿಗಳಂ ರಥಂ ರಥಂ
ಗಳನುಗುಳ್ದಪ್ಪುದೆಣ್ದೆಸೆ ರಥಂಗಳನಿಂದಪುದೆತ್ತಲುಂ ಧರಾ
ತಳಮೆ ರಥಂಗಳಂ ಬೆಸಲೆಯಾಯ್ತೆನಲೊಂದೆ ಸಹಸ್ರಕೋಟಿಮೋಲ್
ಬಳಸಿದುದಿಂತಿದಾ ಪರಶುರಾಮನೆ ಪೇಳ್ದ ರಥಂ ನಿರಾಕುಳಂ ೭೩

ಕಂ॥ ಈ ರಥದ ಪರಿವ ಜವದಿಂ
ವೈರಿ ಸುದುರ್ಲಕ್ಷ್ಯನೆನಗಮಾಂ ಕಳಿಪಿದಸ್ತ್ರ
ಸಾರಂ ನಿಷ್ಫಲಮರಿಸಂ
ಹಾರಮದೆಂತಕ್ಕುಮೆಂದು ಹರಿ ಚಿಂತಿಸಿದಂ ೭೪

ಮ॥ ಹರಿಯುಂ ಬ್ರಹ್ಮನುಮೆಯ್ದಿದರಾ ರಥದ ಮೇಲಿರ್ದಂದು ತನ್ನೊಳ್ ದಿಟ
ಕ್ಕೆ ರಣಕ್ರೀಡೆಗೆನಿಪ್ಪುದಂ ಮಱೆದು ಕಟ್ಟಣ್ಮಿಂ ಸೃಗಾಲಂ ರಥಾಂ
ತರದಿಂ ತೊಟ್ಟನೆ ಪಾಯ್ದು ಕಟ್ಟಿದಲಗಂ ಕಿೞ್ತೆಯ್ದೆ ಕೃಷ್ಣಾಸಿಯಿಂ
ಧರೆಯೊಳ್ ಬಿೞ್ದನದಂತೆ ಬುದ್ಧಿ ಕಿಡುಗುಂ ಕೇಡೆಯ್ದುವಂದಾರೊಳಂ ೭೫

---

[1] ಚರನೊದಱುವಿನೆಗಂ (ಮೊಅ) [2] ಸೃಗಾಲರಥವಾಕ್ಷಣದೊಳ್ (ಮೊಅ)

ವ|| ಅಂತಾ ಸೃಗಾಲಸಂ ಸೃಗಾಲ ಕೌಲೇಯಕ ಕಾಕ ಗೃಧ್ರಸಮಾಜಕ್ಕೆ ಭಾಜನೆಂಮಾಡಿ ಬೞಿಕ್ಕಮಾ ದಿವ್ಯರಥದ ಸಮೀಪಕ್ಕೆ ವಂದು, ಅನಂತದ್ಯುಮಣಿಪ್ರಕಾಶನದೞ ಮಣಿರಚನಾವಿಶೇಷಮುಮಂ, ಕುಶೇಶಯದಳವಿಶಾಲಾಕ್ಷನದೞಕ್ಷ ವಿಸ್ತಾರಮುಮಂ, ಧೃತಸುದರ್ಶನಚಕ್ರನದೞ ಚಕ್ರಪರಿಕ್ರಮಮುಮಂ, ವಿನಿರ್ಮೂಲಿತಕಾಲನೇಮಿಯದೞ ನೇಮಿವಳಯವಿಳಾಸಮುಮಂ, ದಕ್ಷಿಣೇತರಕರತಳೋದ್ಧಾರಿತಗೋವರ್ಧನಾಭೀಳಕುತ್ಕೀಲನದೞ ಕೀಲಭಂಗಿಯುಮಂ, ದೈತ್ಯಕುಲಕದಳೀವನಮತ್ತವಾರಣನದೞ ಮತ್ತವಾರಣಸ್ಥಿತಿಯುಮಂ, ರೂಪಾಧರೀಕೃತಶೃಂಗಾರಜನ್ಮ ಜಯಂತ ನಳಕೂಬರನದೞ ನಳಕೂಬರವಿಭೂತಿಯುಮಂ,ಇಚ್ಛಾಮಾತ್ರವ್ಯವಸ್ಥಿತಸಮಸ್ತಯುಗನದೞ ಯುಗಶೋಭೆಯುಮಂ, ಯಾತುಧಾನಸಂತಾನ ಧೂಮಕೇತುವದೞ ಕೇತುದಂಡೋನ್ನತಿಯುಮಂ, ತನುಕಾಂತಿವಿಜಿತಸಜಳಬಳಾಹಕನದೞ ಬಳಾಹಕನೆಂಬ ವಾಹಮುಮಂ, ಪರಿಕಲಿತಕೌಸ್ತುಭವಿಭೂಷಾಲಂಕೃತಸುಗ್ರೀವನದೞ ಸುಗ್ರೀವನೆಂಬ ವಾಜಿಯುಮಂ, ಪಾಂಚಜನ್ಯನಿನದಶ್ರವಣಮಾತ್ರವಿತ್ರಾಸಿತ ಶತ್ರುಸೈನ್ಯನದೞ ಶತ್ರುಸೈನ್ಯನೆಂಬಶ್ವಮುಮಂ, ಅವಾರ್ಯಸಂಹೃತಾಸುಹೃದ್ಬಲಾಂಗನಾಬಾಷ್ಪಮೇಘಪುಷ್ಪನದೞ ಮೇಘಪುಷ್ಪನೆಂಬ ತುರಗಮುಮಂ, ನಿಜಾಗ್ರಜಂಗೆ ತೋಱಿ ನಾಡೆಯುಂ ಮೆಚ್ಚಿ ಬಿಚ್ಚಳಿಸಿ ರೌಹಿಣೇಯಸನಾಥನಾ ವರೂಥಮನಲಂಕರಿಸಿ ಕರವೀರಪುರಕ್ಕೆ ನಡೆದು ಸೃಗಾಲತನಯನಂ ತದ್ರಾಜ್ಯದೊಳ್ ನಿಲಿಸಿ ಮಗುೞ್ದು ಬಂದು ಮಧುರಾಪುರದ ಪೊೞವೊೞಲನೆಯ್ದಿದಲ್ಲಿ

ಉ|| ಆರುಮನಾತ್ಮವಿಭ್ರಮವದಿರ್ಪುವಿನಂ ನಡೆತಂದು ಮಂಗಳ
ಶ್ರೀರಮಣೀಸಖೀಜನಮೊಸಲ್ಕಿದಿರ್ಗೊಂಡು ನಿಜೇಕ್ಷಣಾಮೃತಾ
ಸಾರದೆ ಬೆಳ್ಪನಿರ್ಪಡಿಸಿ ನಿರ್ಮಲಮುಕ್ತಕಮೌಕ್ತಿಕಾಕ್ಷತಾ
ಸಾರಮನಂದು ಸೂಸಿದುದುಪೇಂದ್ರನ ಮೇಲೆ ಪುರಾಂಗನಾಜನಂ ೭೬

ವ|| ಅಂತು ಪೌರನಾರೀಜನದ ಸೂಸುವ ಸೇಸೆಗಳನಾಂತುಕೊಂಡುತ್ಸವಾನೀಕನಿಕಾಯಗೇಯಪ್ರಘೋಷಮೆಸೆಯೆ ಪೊೞಲಂ ಪೊಕ್ಕು ಪಂಚರತ್ನಮಯತೋರಣದ್ವಾರಸಮಾಜವಿರಾಜಮಾನಮಪ್ಪ ರಾಜಮಾರ್ಗದೊಳಗೆ ನಡೆತಂದು ಅನೇಕಮಂಗಳ ಪರಿಕರಂಗಳಿಂ ಕರಂ ಸೊಗಯಿಸುವರಮನೆಯಂ ಪ್ರವೇಶವಿಲಾಸದಿಂದಲಂಕರಿಸಿ ವಸುದೇವೋಗ್ರಸೇನಾದಿಗಳ್ಗೆ ತಾಂ ಪೋಗಿ ಬಂದ ಕಾರ್ಯವೃತ್ತಾಂತಮಂ ಕಾಮಪಾಲಂ ಪೇೞ್ದು ನಿತ್ಯಲೀಲೆಯಿಂ ಕೆಲವುದಿವಸಮಂ [1]ಕಳಿಪುತ್ತು[1]ಮನುದಿನಂ ಚರರ ಬಿನ್ನಪದಿಂ ದೇಶವಾರ್ತೆಗಳನಾಲಿಸುತ್ತಿರ್ಪನ್ನೆಗಮೊಂದು ಸಮಯದೊಳೊರ್ವಂ ವಿಖ್ಯಾತ ದೂತನೋಲಗಸಾಲೆಯಂ ಪೊಕ್ಕು ಪುರುಷೋತ್ತಮಂಗನತೋತ್ತಮಾಂಗನಾಗಿ ಪೊಡೆಮಟ್ಟು

---

1 ಕೞಿಪುತ್ತು (ಖ)

ಮ॥ ಧರೆಯೊಳ್ ರಾಜ್ಯವಿಶೂನ್ಯರಿರ್ಕೆ ಬರಲಿಂ ಸಿಂಹಾಸನಸ್ಥರ್ ಸ್ವಯಂ
ವರಮುಸ್ಮತ್ಸುತೆಗೆಂದು ಕುಂಡಿನಪುರೇಶಂ ಭೀಷ್ಮಕಂ ಸಾರಿಸಲ್
ನೆರೆದೀಗಳ್ ಮಗಧಾದಿಗಳ್ ಮಣಿಮಯಶ್ರೀಮನ್ಮಹಾಮಂಡಪಾಂ
ತರ ಸಿಂಹಾಸನಕೋಟಿಯೊಳ್ ವಿಭವದಿಂ ಬಂದಿರ್ದಪರ್ ಭೂಭುಜರ್ ೭೭

ವ॥ ಎಂದು ಬಿನ್ನವಿಸೆ ಸಕಲಜ್ಞಂ ತನ್ನೊಳಸುಮಾನಿಸಿ

*ಕಂ॥ ಆನಂಶಾಂಶದೆ ಪುಟ್ಟಿರೆ
ತಾನುಂ ತನ್ನಂಶದಿಂದೆ ಭೀಷ್ಮಕಸುತೆಯೆಂ
ಬೀ ನೆವದೆ ಲಕ್ಷ್ಮಿ ಪುಟ್ಟಿದ
ಳಾನಿರೆ ತತ್ಕನ್ಯೆಗಾರಿದಿರ್ಗಡ ಭೂಪರ್ ೭೮

ವ॥ ಅಂತುಮಲ್ಲದೆಯಾಧೂರ್ತನೆನ್ನನೆ [2]ಕುಱಿತು[3] ರಾಜ್ಯಾರ್ಹರಲ್ಲದವರ್ ಬರವೇಡ ಸಿಂಹಾಸನಸ್ಥರೆ ಬರ್ಪುದೆಂದು ಸಾಱಿಸಿ ಭೀಷ್ಮಕಂ ನೆರಪಿದಾ ದರ್ಪಿಷ್ಠದುಷ್ಟ ಸಭೆಯಂ ತಾರ್ಕ್ಷ್ಯಪಕ್ಷಪವನನಿಂದಲ್ಲಕಲ್ಲೋಲಮುಪ್ಪಂತು ಮಾಡುವೆನಾ ಸಭಾಜನಂ ನೋಡೆ ದಿವಿಜ ರಾಜನಿಂದೆನಗೆ ರಾಜರಾಜಾಭಿಷೇಕಮಂ ಮೆಱೆಯಿಸುವೆನಲ್ಲಿಗೀಗಳೆ ಪರಿಯಿಡುವೆನೆಂದು ತನ್ನೊಳ್ ನಿಶ್ಚಯಿಸಿ

ಉ॥ ನೀವಿರಿಮೆಂದು ಪೇಱ್ದು ಪುರರಕ್ಷೆಗೆ ಲಾಂಗಲಿಯುಂ ಸಮಸ್ತಸೇ
ನಾವಳಿಯುಂ ಬರಲ್ ಬೆಸಸಿ ಸೈನ್ಯಬಲಾಹಕ ಮೇಘಪುಷ್ಪ ಸು
ಗ್ರೀವಹಯುಂಗಳಿಂದೆಸೆವ ದಾರುಕಚೋದಿತಮುಪ್ಪ ತೇರನಿಂ
ದೀವರನಾಭನೇಱೆ ತಳರ್ದಂ ಮಧುರಾಪುರದಿಂದಧೋಕ್ಷಜಂ ೭೯

ವ॥ ಅಂತು ನಡೆಗೊಂಡು ಕುಂಡಿನೀಪುರಾಭಿಮುಖನಾಗಿ ಪೋಗುತ್ತುಮಾತ್ಮಗತದೊಳ್ ಗರುತ್ಮನನಾಮಂತ್ರಣಂಗೆಯ್ಯೆ

ಮ॥ಸ್ರ॥ ಇದು ಚಿತ್ರಂ ತೇನತೇನಂ ನೆಗೆದುದು ಬಹುವರ್ಣಾಂಬುದಾನೀಕಮಾಕಾ
ಶದೊಳೆಂಬಂತಾತ್ಮಪಕ್ಷಪ್ರಬಳಶಬಳಿಮಚ್ಛಾಯೆ ಜೆಲ್ವಾಗೆ ಸಂರಂ
ಭದೆ ಬಂದಂ ಪಕ್ಷಿರಾಜಂ [2]ಪ್ಲುತ[2] ಭರಮುರುದುತ್ಥಾಬ್ಧಿವೀಚೀಸಮಾಜಂ
ಛದನಚ್ಛನ್ನಾರ್ಕತೇಜಂ ವಿಜಿತದಿವಿಜರಾಜಂ ಸುಪರ್ಣೀತನೂಜಂ ೮೦

* ಆನಿರುತಿರೆ ತ್ರಿಜಗದ್ವಿಭು। ಮಾನಿನಿ ಪೆಱಳಲ್ಲ ಲಕ್ಷ್ಮಿ ಲಕ್ಷ್ಮೀಶನೆನಾಂ॥
ಏನಿದನಱಿಯರೆ ಮಿಕ್ಕಿನ। ಭೂನಾಥರ್ ಬಱಿದೆ ಬಯಸಲೇಂ ರುಕ್ಮಿಣಿಯಂ॥ (ಖಗ)

1 ಕೊರ್ತು (ಕ) 2 ಕೃತ (ಕಗ)

ವ॥ ಅಂತು ಬಂದು ವಿನಯವಿನಮಿತಮೂರ್ಧನುಂ ಬದ್ಧಾಂಜಲಿಯುಮಾಗಿ ಮುಂದೆ ನಿಂದಿರ್ದ ದಂದಶೂಕಪ್ರಮಾಥಿಯಂ ಯಥೋಚಿತ ಸ್ನಿಗ್ಧಮಧುರಾಳಾಪದಿಂ ಸಂಭಾಷಿಸಿ ದೇವಕೀನಂದನಂ ಸ್ಯಂದನಮಂ ಕಿಱಿದು ನಡೆಯಿಸೆ ಕೆಲಗೆಲದೊಳಂಬರಗತಿಯಿಂ ಬರುತ್ತುಂ ಪನ್ನಗಾರಾತಿ ತನ್ನ ಮನದೊಳ್ ಬಗೆದು ನೋಡಿ

ಉ॥ ವಾಹನಮುಂಟು ದಿವ್ಯರಥಮಾಂ ನೆರವಾಹವಕೇಳಿಗೆಂಬೊಡಿ
ಲ್ಲಾಹವಮೆನ್ನನೇಕೆ ಬರವೇಳ್ದಿನೆನಲ್ ತಿಳಿದೆಂ ಸ್ವಚಿಹ್ನಮಂ
ದ್ರೋಹಿಜನಕ್ಕೆ ತೋಱೆ ಮೆಱೆವಂದದಿನೀ ವಿಭು ಮರ್ತ್ಯನೆಂಬುದಂ
ಮೋಹಿಸುತಿರ್ದಡೊಂದೆ ಪದದೊಳ್ ಮೆಱೆವಂ ಸಹಜಪ್ರಭಾವಮಂ ೮೧

ವ॥ ಎಂದು

ಕಂ॥ [1]ವಿನಮಿತಗಾತ್ರಂ[1] ಕೃಷ್ಣನ
ಮನಮಂಱಿದಾ ದ್ರೋಹಿ ಸಭೆಗೆ ನಿಜಪಕ್ಷಸಮೀ
ರನನಿನಿಸೊದವಿಸೆ ಸಿಂಹಾ
ಸನದಿಂ ತಲೆಯೂಱೆ ಕೆಡೆದರತಿಬಳಭೂಪರ್ ೮೨

ಮಕುಟಂಗಳನವನಿಯೊಳೂ
ಱೆ ಕೆಡೆದ ತೆಱನಚ್ಯುತಾಂಘ್ರಿಗಳ್ಗನತಿಯಂ
ಪ್ರಕಟಿಪ ತೆಱನಾದನಿತಱೊ
ಳಕುಟಿಲಮನರಾದರಹಿತರೊಂದೆ ಮುಹೂರ್ತಂ ೮೩

ವ॥ ಅಗಳಪರೆಂತಾನುಂ ಸಂತೈಸಿ ಪದುಳಿಸಿ ಮಗುೞ್ದು ಕುಳ್ಳಿರೆ ಮಗಧಪತಿ ಜರಾಸಂಧಂ ಶಿಶುಪಾಲ ಸಾಲ್ವ ದಂತವಕ್ತ್ರಾದಿಗಳ ಮೊಗಮಂ ನೋಡಿ

ಚಂ॥ ಕುಳಗಿರಿಯಂ ತೆರಳ್ಚಲರಿದಲ್ತು ತೆರಳ್ಚಲಶಕ್ಯಮೆಮ್ಮನೆಂ
ಬಳವಿನ ನಮ್ಮುಮಂ ಕೆಡಪಿದತ್ತಿದು ತಾರ್ಕ್ಷ್ಯನ ಪಕ್ಷಸಂಭವಾ
ನಿಳನಱಿದೆಂ ಖಗೇಂದ್ರನೊಡಮಂದಪನಾದೊಡೆ ದೇವಕೀಸುತಂ
ಜಳಶಯನಾವತಾರತನುವೆಂಬುದು ನಿಶ್ಚಯಮಾಯ್ತು ನಮ್ಮೊಳಂ ೮೪

ಕಂ॥ ಸುರರನದಟಲೆದು ವೇದವ
ನುರವಣೆಯಿಂದುಯ್ದು ಶರಧಿಯಿಂ ಪೊಕ್ಕ ತಮಾ
ಸುರನಂ ಮತ್ಸ್ಯಾಕೃತಿಯಿಂ
ದೆರೆಗೊಂಡಾ ವಿಷ್ಣು ವೀತನೆಂಬುದನಱಿದೆಂ ೮೫

---

[1] ವಿನತಾಪುತ್ರಂ (ಕಖಗ)

ಧರಿಯಿಸಿ ಮಂದರಮಂ ಕೂ
ರ್ಮರೂಪದಿಂ ಜಲಧಿಮಥನದೊಳ್ ಪುಟ್ಟಿದುಮಂ
ಸುರರ್ಗಿತ್ತಾ ವಸ್ತುಗಳೊಳ್
ಸಿರಿಯಂ ಕೌಸ್ತುಭಮುಮಾಂತನೀತನೆ ದಿಟದಿಂ ೮೬

ಒಂದಳಿನಿಕಮಳ ಮುಕುಳದೊ
ಳೊಂದಿದ ತೆಱನಾಗೆ ಕೋಡೊಳೆತ್ತಿದ ನೆಲನಂ
ತಂದು ಹಿರಣ್ಯಾಕ್ಷನುಮಂ
ಕೊಂದಾದಿವರಾಹನೀತನಪ್ಪುದಮೋಘಂ ೮೭

ಕರಕಮಳನಾಳಮೆನೆ ನಿಜ
ಕರದೊಳ್ ಕರುಳಿರೆ ನೃಸಿಂಹರೂಪದಿನಂದಾ
ದೊರೆಯ ಹಿರಣ್ಯಕಶಿಪುವಿನ
ಕರುಳಂ ತೆಗೆದಾತನೀತನಾಗಲೆವೇಟ್ಕುಂ ೮೮

ಧರೆಯಂ ವಾಮನರೂಪದಿ
ನೆರೆದು ಬಱಿಕ್ಕಂ ತ್ರಿವಿಕ್ರಮವ್ಯಾಜದಿನು
ರ್ವರೆಯಂ ಕೊಂಡು ಬಲೀಂದ್ರನ
ನುರುಳ್ಚಿ ಕಟ್ಟಿದ ಮುಕುಂದನೇಂ ಕೇವಲಮೇ ೮೯

ಕಡಿದು ಸಹಸ್ರಾರ್ಜುನಭುಜ
ದಡವಿಯನೆಡೆಯುಡುಗದೇಕವಿಂಶತಿವಾರಂ
ಪೊಡವಿಯೊಳುಳ್ಳವನಿಪರಂ
ಕಡಿದೊಟ್ಟಿದ ಪರಶುರಾಮ ಗಿರಿಧರನಱಿಂದೆಂ ೯೦

ಶರಹತಿಯಿಂ ಮಕುಟೋಜ್ಜ್ವಲ
ಶಿರಂಗಳುಚ್ಚಳಿಸೆ ವಿಳಯರವಿಗಳ್ ಪಲವಂ
ಬರದೊಳ್ ನೆಗೆದಂತಿರೆ ದಶ
ಶಿರನಂ ಮರ್ದಿಸಿದ ರಾಮನಕ್ಕುಂ ಕೃಷ್ಣಂ ೯೧

ವ|| ಎನೆ ಜರಾಸಂಧನಂ ಸಾಲ್ವಂ ನಿರೀಕ್ಷಿಸಿ

ಮ॥ ಜಗವೇಕಾರ್ಣವಮಾಗಲೊರ್ವನುಱದಾ ನಾರಾಯಣಂ ತನ್ನ ಕ
ರ್ಣಗುಹಾಸಂಭವಕೈಟಭಾಸುರಮಧುಕ್ರವ್ಯಾದರಂ ಮರ್ದಿಸಲ್
ನೆಗೞ್ದಾದ್ದೈತ್ಯರುದಗ್ರವಿಗ್ರಹದ ಮೇದೋರಾಶಿಯಿಂ ಭೂಮಿಯಾ
ಗಿ ಗಡಂ ಮೇದಿನಿಯಾದುದೇವೊಗೞ್ದಪೆಂ ಸಾಮರ್ಥ್ಯಮಂ ಶಾರ್ಙ್ಗಿಯಾ ೯೨

ಮನುಜರ್ ಚಿಂತಿಸಿ ನೋಡೆ ನೋಡೆ ದಿವಿಜರ್ ಬೆನ್ನೀಯೆ ಬೆನ್ನೀಯೆ [1]ಕೊ
ರ್ಮನಿದೇಸೇನೆನೆ[1] ಮರ್ತ್ಯಲೋಕಸುರ[2]ಲೋಕವ್ಯಾಳಲೋಕಂಗಳಂ[2]
ಮುನಿದೀಱಿಕೊಂಡ ನಿಶಾಟನಂ ಕೃತಯುಗಪ್ರಾರಂಭದೊಳ್ ಕೊಂದನೀ
ತನೆ ನೋಡಗ್ಗದ ಕಾಲನೇಮಿಯನದೇಂ ದೈತ್ಯಾರಿ ಸಾಮಾನ್ಯನೇ ೯೩

ವ॥ ಎಂಬುದುಂ ಸಾಲ್ವಲ ನಿನ್ನ ನುಡಿ ಸಾಲ್ವುದೆಂದು ದಂತವಕ್ರಂ ಜರಾಸಂಧಂ
ಗಭಿಮುಖನಾಗಿ

ಮ॥ ನೆನೆದಾತಂ ನೆನೆಯಂ ಭವಾದಿಸುಖಮಂ ತನ್ನಂದಮಂ ಕಂಡ ಮ
ರ್ತ್ಯನಣಂ ಕಾಣನವಿದ್ಯೆಯಂ ನಿಜಪಯಸ್ಸಂಸೇವೆಯಂ ಮಾಡಿದಂ
ಜನನೀಸ್ತನ್ಯದ ಸೇವೆಯೊಳ್ ತೊಡರನೆಂಬಾ ಜಾಹ್ನವೀಸಿಂಧುವೀ
ತನ ಕಾಲ್ಗರ್ಚಿನ ನೀರೆನಲ್ ಹರಿಯ ಪೆಂಪಂ ನೀನದೇಂ ಬಣ್ಣಿಪೈ ೯೪

ಶಾ॥ ಮುಂ ಗರ್ವೋದ್ಧತರಂ ಹಿರಣ್ಯಕಹಿರಣ್ಯಾಕ್ಷಾದಿದೈತ್ಯೇಂದ್ರರಂ
ತಾಂ ಗೆಲ್ದಾ ದಶಕಂಠವೈರಿಗಿತರರ್ [3]ಮಾಱಾಂಪರಾರಾನೆದಿಂ
ಬಂಗಾಡಾವರಿದೆಂಬವೋಲ್[3] ಪೊಸೆದು ಮುಕ್ಕಲ್ ಸಾಲನೇ ಶಾರ್ಙ್ಗನ
ಮ್ಮಂ ಗಂಡಾಳ್ತನಮೇವುದಾಶ್ರಯಿಸುಮಂ ಶ್ರೀಪಾದಮಂ ಕೃಷ್ಣನಾ ೯೫

ವ॥ ಎನೆ ತದನಂತರಂ ಮಗಧನರಪಾಲನಂ ಶಿಶುಪಾಲನಾಲೋಕನಂಗೆಯ್ದು

ಮ॥ [4]ಕತ್ತೆಯಂತಿರ್ಕೆಮ[4] ನಿನ್ನಿನಿಂದಿನ ಮಹಾಸಂಗ್ರಾಮದೊಳ್ ಕಾಣೆಮೇ
ದಿತಿಜಾರಾತಿಯ ಬಾಹುಸಾಹಸದಗುರ್ವಂ ತ್ರಿಂಶದಕ್ಷೌಹಿಣೀ
ಪೃತನಾಸಂಯುತನೆತ್ತಿ ಮುಂ ಮಧುರೆಯಂ ಮತ್ತಂತೆ ಗೋಮಂತಪ
ರ್ವತಮಂ ಮುತ್ತೆ ತದೀಯಬಾಣಶಿಖಿಯಿಂದಾ ಸೈನ್ಯಮೞ್ಕಾಡದೇ ೯೬

ಅರವಿಂದೋದರನೀ ಜಗತ್ತ್ರಯಮನಿಚ್ಛಾಮಾತ್ರದಿಂ ಪುಟ್ಟಿಸಲ್
ಪೊರೆಯಲ್ ಸಂಹರಿಸಲ್ ಸಮರ್ಥನದನಾನುಂ ಬಲ್ಲೆನಂತಾದೊಡಂ
ಪುರುಷಂ ವೈರಮನೆತ್ತಿಕೊಂಡ ಬೞಿಕಂ ಭೂಪಾಲ ಕೇಳಾಗದೇ
ದೊರೆಯಂಗಾದೊಡಮಂಜಲಂತೆ ನೆಗೞ್ಗಂ ತದ್ದುರ್ಯಶೋಡಿಂಡಿಮಂ ೯೭

---

[1] ಚೊಮ್ಮಿದೇಸೇಸೆನೆ (ಕಖಗ) [2] ಲೋಕಂ ನಾಗಲೋಕಂಗಳಂ (ಕಖಗ) [3] ಮಾಱಾಂಪರಾರಾನೆದಿಂಬಂಗಂಡಾವಳಿಯೆಂಬವೊಲ್ (ಕ) [4] ಕತ್ತೆಯಂತಿರ್ಕದು (ಖಗ)

ವ॥ ಎನೆ ಮತ್ತಂತೆ ಸಹಜವಿರೋಧಾನುಬಂಧದಿಂ ಜರಾಸಂಧಾದಿ ದುಷ್ಟಚತುಷ್ಟಯರ್ ಚಲಮನೊಳಕೊಂಡಿರ್ದರ್. ಅನ್ನೆಗಮತ್ತಲ್ ಪುರುಷೋತ್ತಮಂ ಕುಂಡಿನೀ ಪುರಕ್ಕನತಿದೂರಮೆನಿಪ ವಿದರ್ಭರಾಜಧಾನಿಯುಂ ಮುಟ್ಟೆವರ್ಪುದುಮಿದಿರ್ಗೊಂಡು ಪೋಗಿ ನಿಜನಿವಾಸದೊಳುತ್ತುಂಗಸಿಂಹಾಸನದ ಮೇಲೆ ಕುಳ್ಳಿರಿಸಿ ವಿದರ್ಭನತಿಹರ್ಷಸಂದರ್ಭನಾಗಿ ದೇವ ಶಿವೀ ಸ್ವಯಂವರಕ್ಕೆ ಪೋದಲ್ಲಿ ಮೂರ್ಧಾಭಿಷಿಕ್ತನಲ್ಲೆಂದು ನಿಮಗೆ ಸಿಂಹಾಸನಸ್ಥರ ಸಮೀಪದೊಳ್ ನಿಜಾಸನಮನಿಕ್ಕುವಂತಾಗದಂತಾಂ ನಿಮಗೆನ್ನ ರಾಜ್ಯಮಂ ಕೊಟ್ಟಭಿಷೇಕಮಂ ಮಾಡಿದಪೆನೆಂದು ನುಡಿದಾಗಳ್ ಉಪೇಂದ್ರನ ಮನೋಭಿಸಂಧಿಯಿಂದತ್ತಲಾ ಮಹೇಂದ್ರನಾ ಪ್ರಪಂಚಮಂ ತಿಳಿದು

ಮ॥ ರವಿಚಂದ್ರೇಂದ್ರವಿರಿಂಚಿಮುಖ್ಯಪದಮುಂ ತದ್ಭ್ರೂಲತಾಸ್ಪಂದಸಂ
ಭವಮಾ ವಿಷ್ಣುಗೆ ವಿಶ್ವಲೋಕವಿಭುಗೊರ್ವಂ ಭೂಪನಾತ್ಮೀಯಭೂ
ಲವಮಂ ಕೊಟ್ಟಭಿಷೇಕಮಂ ನೆಗೞ್ವನೆಂದಂ ಮರ್ತ್ಯವೇಷಂಗೆ ಬಾಂ
ಧವಮಂ ತೋಱಲೆ ಬಲ್ಲನೇಕಜಂಗುಮಜ್ಞಂ ವಿಷ್ಣುಸಾಮರ್ಥ್ಯಮಂ ೯೮

ಅವತಾರೋಚಿತಮಾಗೆ ಕಂಸಮಥನಂಗೀ ರಾಜರಾಜಾಭಿಷೇ
ಕಮನಾಂ ಮಾಡುವನೇಕರಾಜ್ಯಪದದೊಳ್ ತಾನಿರ್ಕೆ ಮೇಣ್ ಮಿತ್ರಪಾಂ
ಡವರಾಜ್ಯಂ ನೆಗೞ್ವಂತು ತನ್ನ ಪದಮಂ ಪ್ರಚ್ಛನ್ನಮಂ ಮಾಡಿ ಪಾ
ರ್ಥಿವಸಾಧಾರಣಮಾಗಿ [1]ವರ್ತಿಸುಗದುಂ[1] ತನ್ನಿಚ್ಛೆ ಸರ್ವೇಶನಾ ೯೯

ಕಂ॥ ಅನಿಯುತಪದಂ ಸ್ವಯಂಪ್ರಭು
ವಿನ ಮಾರ್ಗಮದಂ ವಿಚಾರಿಸುತ್ತಿರಲೇಕಿಂ
ವನರುಹನಾಭಂಗಭಿಷೇ
ಚನೋತ್ಸವಂ ನೆಗೞ್ಗೆ ರಿಪುನೃಪರ್ ನೋೞ್ಪಿನೆಗಂ ೧೦೦

ನೆರೆದ ಜರಾಸಂಧಾದ್ಯರ
ಪರಿಷದ್ಭವನಕ್ಕೆ ಪೋಗು ಚಿತ್ರಾಂಗದ ನೀಂ
ಬರವೇೞಖಿಳಜಗತ್ಪ್ರಭು
ಹರಿಯ ಮಹೋತ್ಸವಮನೀಕ್ಷಿಸಲ್ಕಾ ನೃಪರಂ ೧೦೧

ವ॥ ಎಂದು ಪುರಂದರಂ ಬೆಸಸೆ ಗಂಧರ್ವರಾಜನೆನಿಸಿದ ಚಿತ್ರಾಂಗದಂ ಚಿತ್ರಮಣಿಭೂಷಣಂಗಳ್ ಚಿತ್ರಪಟಮಂ ಕೆದಱಿದಂತೆ ಪಸರಿಸೆ ನಭೋಂತರದಿಂದಾ ಸಭಾಂತರಕ್ಕವತರಿಸಿ

1 ವರ್ತಿಸುದುಂ (ಖ)

ಕಂ॥ ಸುರವರನಿಂದ್ರನುಪೇಂದ್ರಂ
ಗೆ ರಾಜರಾಜಾಭಿಷೇಕಮಂ ಮಾಡಿದಪಂ
ನರನಾಥರ್ ಬಂದು ವಿದ
ರ್ಭರಾಜಪುರದಲ್ಲಿ ನೋಟ್ಟಿ ತನ್ಮಂಗಳಮಂ ೧೦೨

ವನಜಾಕ್ಷಮಹೋತ್ಸವದ
ರ್ಶನದಿಂದಕ್ಕುಂ ಕುಟುಂಬಗೋತ್ರಪುನರ್ದ
ರ್ಶನಮಿಲ್ಲದೊಡಿಂದೆ ಸುದ
ರ್ಶನದಿಂ ನಿಮಗೂರ್ಧ್ವಲೋಕದರ್ಶನಮಕ್ಕುಂ ೧೦೩

ಅಗಧರನ ಪದಾಬ್ಜಕ್ಕೆಱ
ಗುಗೆ ನೃಪರೆಱಗದೊಡೆ ಶಾರ್ಙ್ಗಗುಣಮುಕ್ತಪತ
ತ್ರಿಗಳೆಱಗುಗುಮೆಱಗೆ [1]ಪತ
ತ್ರಿಗಳೇ[1] ನಿಮ್ಮಯ ಕಳೇವರಪ್ರತತಿಗಳೊಳ್ ೧೦೪

ಪಾದಾಶ್ರಿತರಾದರ ತಲೆ
ಗಾದುದು ಪಗೆಗೊಂಡ ನೃಪರ [2]ತಲೆಗಾದುದು[2] ಕೌ
ಮೋದಕಿ ನೀಮದಱಿಂ ಹರಿ
ಪಾದಾಶ್ರಿತರಾಗಿ[3]ಮೊಲ್ಲದೊಡೆ[3] ಪಗೆಗೊಳ್ಳಿಂ ೧೦೫

ನಂದಕಧಾರಾಜಲಮದು
ಬಂದು ಶರಣ್ಬೊಕ್ಕ ನೃಪತಿಗಮೃತಂ ಮುಳಿಸಿಂ
ನಿಂದ ವಿರೋಧಿಗೆ ವಿಷಮದ
ಱಿಂದೆ [4]ಜಲಕ್ಕಾದು[4]ವಮೃತವಿಷನಾಮಂಗಳ್ ೧೦೬

ಪೌರವವರವಮದು ವೃದು ಕಂ
ಠೀರವರವನಲ್ಪವೆನಿಪ ಹರಿಶಂಖಮಹಾ
ಭೈರವರವಮದು ಕಿವಿವುಗೆ
ಘೋರವರವನೊದವೆ ರಿಪುಬಲಂ ಕೆಡೆದಿರದೇ ೧೦೭

ವ॥ ಎಂದು ನುಡಿದ ವಕ್ರಭಣಿತಿಗಳಾಶ್ಚರ್ಯಮಂ ಪುಟ್ಟಿಸೆ

---

1 ಪತತ್ರಿಗಳೀ (ಕ) 2 ತಲೆಗೊಂಡುದು (ಗ) 3 ಮಲ್ಲದೊಡೆ (ಖ) 4 ಜಗಕ್ಕಾದು (ಕಗ)

ಮ॥ ತಲೆಯಂ ತೂಗಿ ಬೆರಲ್ಗಳಂ ಮಿಡಿದು ದೈತ್ಯಾರಾತಿಸಾಮರ್ಥ್ಯಮಂ
ಪಲರುಂ ಭೂಪರುಮಾಲಿಪಂತು ನುಡಿದಿಂದ್ರಾದೇಶಮಂ ತತ್ಸಭಾ
ವಲಯಂ ಭಾವಿಸಿ ನೋೞ್ಪಿನಂ ಮಗಧಚೇತೋಭಂಗದಿಂ ಲೋಲಕಂ
ಡಲಚಂಚತ್ಕಟಕಾಂಗದಂ ನೆಗೆದನಾಕಾಶಕ್ಕೆ ಚಿತ್ರಾಂಗದಂ ೧೦೮

ವ॥ ಆಗಳ್

ಉ॥ ನಿಂದರರಾತಿಗಳ್ ಮಗಧನುಂ ಶಿಶುಪಾಲಕ ಸಾಲ್ವ [1]ಸಾತ್ವತೀ[1]
ನಂದನ ದಂತವಕ್ರರುಱದಗ್ಗದ [2]ಭೂಭುಜರೆಲ್ಲರೆಟ್ದಿರಾ[2]
ನಂದದೆ ರತ್ನಹಾರಮಕುಟಾಂಗದಕಂಕಣಕುಂಡಲಂಗಳೊಂ
ದೊಂದನವುಂಕಿ ಮಾಱಿತೂರಸಿ ಬೀಱೆ ಝಣಜ್ಝಣಿತಪ್ರಣಾದಮಂ ೧೦೯

ವ॥ ಅಂತಾ ಸ್ವಯಂವರಶಾಲೆಯಿಂ ತಳರ್ದನೇಕದೇಶದ್ವೀಪಾಧಿಪಭೂಪಾಲರ್ ಬಂದು ವಿದರ್ಭನಗರಮಂ ಪೊಕ್ಕು ದೇವಕೀನಂದನನಿರ್ದಾ ರಾಜಮಂದಿರಾಂಗಣದೊಳ್ ದೂರೋತ್ಸಾರಿತರಾಜಚಿಹ್ನರಾಗಿ ನೆರೆದು ನಿಲ್ವುದುಮಾ ಪ್ರಸ್ತಾವದೊಳ್

ಮ॥ಸ್ರ॥ ಅಮಳಂ ಹಂಸಾನ್ವಿತಂ ಬಾಂದೊರೆಯ ಪುಳಿನವೆಟ್ಟಿರ್ಪವೋಲ್ ದೇವಕಾಂತಾ
ಚಮರೀಜಾಂದೋಳಲೀಲಂ ಗಗನತಳದಿನಿಂದ್ರಾಜ್ಞೆಯಿಂದಂದುಪೇಂದ್ರಂ
ಗೆ ಮಹಾಸಿಂಹಾಸನಂ ಬಂದುದು ದಿವಿಜಜಯಧ್ವಾನಮುಂ ಕಿನ್ನರೀಗೇ
ಯಮುಮುಸ್ವಪ್ನಾನಕಧ್ವಾನಮುಮೊಸೆಯೆ ವಿದರ್ಭಾಧಿಪಂ ರಾಗಿಪನ್ನಂ ೧೧೦

ವ॥ ಆ ಮಹಾಸಿಂಹಪೀಠದ ಮುಂದೆ

ಮ॥ ಸ್ಫುರಿತಸ್ವರ್ಣವಿಚಿತ್ರರತ್ನಮಯಶಾಖಾಪಲ್ಲವೋತ್ಫುಲ್ಲಷ
ಟ್ಚರಣಾಲಂಕೃತಮೆಂಬ ಕಲ್ಪತರುವೃಂದಾರಾಮಮೀಬಂದುದು
ರ್ವರೆಗೆಂಬಂತೆ ವಿಚಿತ್ರವಸ್ತುರಚನಾ ಕಿರ್ಮ್ಮೀರಿತಂ ಬಂದುದಂ
ಬರದಿಂ ಭೋಂಕನೆ ವಿಶ್ವಕರ್ಮರಚಿತಂ ದಿವ್ಯಂ ಮಹಾಮಂಟಪಂ ೧೧೧

ವ॥ ಆ ಸಮಯದೊಳ್

ಕಂ॥ ಮಂದರಮಥನಂಗಾದವು
ದಿಂದೇ ರಾಜ್ಯಾಭಿಷೇಕಮೆಂದಳಕೇಶಂ
ಮುಂದಱಿದಟ್ಟಿದೊಡಂದೆ
ಯ್ತಂದುವು ವರಕನಕಕಳಶಮುಂ ನವನಿಧಿಯುಂ ೧೧೨

---

[1] ಸಾತ್ವಕೀ (ಕಖ) ಸಾತ್ಯಕೀ (ಗ) [2] ಭೂಭುಜರಿರ್ದರಾ (ಖಗ)

ವ॥ ಆಗಳ್

ಚಂ॥ ಸುರಗಿರಿಕೂಟಕುಂಜವಿವಿಧೌಷಧಿಗಳ್ ಸುರಸಿಂಧುವಾರಿನಿ
ರ್ಭರನವರತ್ನಕುಂಭತತಿಗಳ್ ಸುರಸಂದನವಾಮಲೂರುಬಂ
ಧುರವರಮೃತ್ತಿಕಾತತಿಗಳುಂ ಸುರರಾಜನದೊಂದುಪೇಳಿಕ್ಕೆಯಿಂ
ಸುರಪಥದಿಂದೆ ಬಂದುವಭಿಷೇಕಮಹೋತ್ಸವದೊಳ್ ಮುಕುಂದನಾ ೧೧೩

ಮ॥ಸ್ರ॥ ಧರೆಯೆಲ್ಲಂ ಸಾನುರಾಗಂ ಘನಘುಸೃಣಪಯಸ್ಸಿಕ್ತಿಯಿಂ ದಿಕ್ಸಮೂಹಾಂ-
ತರಮೆಲ್ಲಂ ಸಪ್ರಮೋದಧ್ವನಿ ವಿವಿಧಮಹಾತೂರ್ಯನಿರ್ಘೋಷದಿಂದಂ
ಬರಮೆಲ್ಲಂ ಸಾಟ್ಟಹಾಸಂ ದುಗುಲದ ಗುಡಿಯಿಂ ಭೂಪರೆಲ್ಲಂ ಸಹರ್ಷರ್
ಪರಮೌಚಿತ್ಯಂಗಳಿಂದೇವೊಗಟಿಪ್ಪನನುಪಮಂ ತದ್ವಿಭೂತಿಪ್ರಪಂಚಂ ೧೧೪

ವ॥ ಅನ್ನೆಗಂ ಶುಭಮುಹೂರ್ತದೊಳ್ ಸಮಸ್ತಮಂಗಳಾಶ್ರಯಂ ಪುರುಷೋತ್ತಮನನೇಕರಾಜಲೋಕ[1]ರತ್ನಕೋಟೀರಂಗಳೆ[1] ಪಾದಪೀಠಂಗಳಾಗೆ ಮಹೋತ್ತುಂಗಸಿಂಹಾಸನದ ಮೇಲೆ ಕುಳ್ಳಿರ್ಪುದುಂ

ಕಂ॥ ಪ್ರಭೆಯಿಂ ನಯನಭ್ರಮೆಯಾ
ಸಭೆಗಾಗಿರೆ ಬಂದು ತಾನೆ ಕೃಷ್ಣಂಗಮರ
ಪ್ರಭು ಪೂರ್ಣಕಳಶಮಂ ಪಿಡಿ
ದಭಿಷೇಕಂಗೆಯ್ದು ಪರಸಿ ಪೋದಂ ಮುದದಿಂ ೧೧೫

ಮ॥ಸ್ರ॥ ಪೊಗಟುತ್ತಿರ್ಪೊಂದು ವಂದಿವ್ರಜದುಲಿ ಪಟಹಧ್ವಾನಮಂ ಮೀಱಿ ಬೇಟ್ಪ
ರ್ಗೆಗೆ ಸೂಸುತಿರ್ಪ ಜೆಂಬೊಂಗಳ ರುಚಿಪಟವಾಸಸ್ಫುರತ್ಪಾಂಸುವಂ ಕೈ
ಮಿಗೆ ನಾನಾರಾಜಚಿಹ್ನಾವಳಿ ದೊರೆಯೆನೆ ಸಾಮ್ರಾಜ್ಯಲಕ್ಷ್ಮೀವಿಭೂಷಾ
ಳಿಗಳಂ ಪೋಲ್ತೊಪ್ಪೆ [2]ಕೃಷ್ಣಂಗೆಸೆದುದಸದಳಂ[2] ರಾಜರಾಜಾಭಿಷೇಕಂ ೧೧೬

ಇದು ಸಮಸ್ತ ಕಮಲಭವಾಂಡ ಮಾಲಾಘಟೀ ಘಟಿತಾರಘಟ್ಟಘಟನಾ ಸ್ವತಂತ್ರ
ನಿಜಸ್ವರೂಪನಿರೂಪಣಚಕಿತ ಸಕಲಾಮ್ನಾಯತಂತ್ರ ಲಕ್ಷ್ಮೀಕಾಂತಶ್ರೀಪಾದ
ಭಕ್ತಿಯುಕ್ತಸುಕವೀಂದ್ರರುದ್ರ ಪ್ರಣೀತ ಶ್ರೀಜಗನ್ನಾಥವಿಜಯ ಮಹಾಪ್ರಬಂಧ
ದೊಳ್ ಪರಶುರಾಮದರ್ಶನ ಗೋಮಂತದುರ್ಗಾರೋಹಣ ತದೀಯದುರ್ಗ
ದಾಹೋಪಶಮನ ವಿಪಕ್ಷಾಕ್ಷೌಹಿಣೀಚತುರ್ವಿಂಶತಿನಾಶನ ಜರಾಸಂಧ
ಪ್ರಮುಖಮುಕುಟಭಂಗ ಸೃಗಾಲವಧದಿವ್ಯರಥೋಪಲಬ್ಧಿ
ದರ್ಪಿಷ್ಠ ನೃಪಸಭೋಚ್ಚಾಟನ ರಾಜರಾಜಾ
ಭಿಷೇಕವರ್ಣನಂ ಅಷ್ಟಮಾಶ್ವಾಸಂ

---

1 ರತ್ನಕಿರೀಟಕೋಟಿರಂಗಳೆ (ಕಗ) 2 ಕೃಷ್ಣಂಗೆಸೆದುದು ಸದಳಂ (ಖ)

ನವಮಾಶ್ವಾಸಂ

ಕಂ|| ಶ್ರೀವರನ ಸಿಂಹಪೀಠಮ
ನಾವರಿಸಿದುವೆಱಪ ನೃಪರ ಮಣಿಮಕುಟಮಯೂ
ಖಾವಳಿಗಳುದಯಶೈಲಮ
ನಾವರಿಸಿದ ತರುಣತರಣಿಕಿರಣಾವಳಿವೊಲ್ ೧

ವಿಪುಳಭುಜರ್ [1]ಸಿಂಹಳ ಡಹ
ಳ ಪಾಂಡ್ಯ ಪಲ್ಲವ ಕಳಿಂಗ ಖಸರೆಂಬಱುವರ್[1]
ನೃಪತಿಗಳಾಱುಂ ಧವಳಾ
ತಪತ್ರಮಂ ತಳ್ತು ಕಂಸವೈರಿಗೆ ಪಿಡಿದರ್ ೨

ಎರಡುಂ[2]ಪಕ್ಕದೊಳಿರ್ದಾ
ದರದಿಂ[2] ಪಾಂಚಾಲ ಜೋಳರೆಂಬಪಹಸಿತಾ
ಮರರಿರ್ವರಿಕ್ಕಿದರ್ ತಾ
ಮರಸದಳಾಕ್ಷಂಗೆ ಧವಳಚಾಮರಯುಗಮಂ ೩

ಚಾರುಮಣಿವೇತ್ರಲತೆವಿಡಿ
ದಾ ರಾವಣದರ್ಪವಿದಳನೋಲಗದೊಳ್ ದೌ
ವಾರಿಕರಾಗಿರ್ದರ್ ಡೊ
ಕ್ಕಾರಂ ಹಂಮೀರನೆಂಬ ಭೂಭುಜರಿರ್ವರ್ ೪

ಮಕುಟಧರರ್ ಮಳಯನೃಪಾ
ಲಕ ಮಾಳವನಹಿಪರೆಂಬವೀರರ್ ತಾಂಬೂ
ಲಕರಂಡಧರಶ್ರೀಪಾ
ದುಕಧರರಾಗಿರ್ದರಚ್ಯುತಂಗೋಲಗದೊಳ್ ೫

---

1 ಸಿಂಹಳ ಪಾಂಡ್ಯ ಪಲ್ಲವ ಕಳಿಂಗ ಬರ್ಬ ಖಸರೆಂಬಱುವರ್ (ಕ) 2 ಪಕ್ಕದೊಳಿರ್ದಾದರದಿಂ (ಕಗ)

ವ॥ ಅಂತನೇಕಭೂಕಾಂತರೋರೊರ್ವರೊಂದೊಂದುತೆಱದ ಸದ್ಭಾವಮಂ ಮೆಱೆಯೆ ವಾಸವವಿಲಾಸದೋಲಗದೊಳಿರ್ದ ಜನಾರ್ದನಂ ತನ್ನಭಿಮುಖದೊಳಿರ್ದ ಭೀಷ್ಮಕನ ಮೊಗಮಂ ನೋಡಿ

ಮ॥ ಭವದೀಯಾತ್ಮಜೆಗೇಂ ಸ್ವಯಂವರಮೆ ಭೂಪರ್ ಬಂದುದುಂ ತನ್ನಿಮಿ
ತ್ತಮೆ ಯುಕ್ತಂ ನಿಮಗಜ್ಞರೆತ್ತಲಱುವರ್ ಮೇಲಪ್ಪುದಂ ದೈವಯೋ
ಗಮನಾ ಮಾತಿನೊಳೇನೊ ನಿಮ್ಮ ಮನದುತ್ಸಾಹಕ್ಕಣಂ ತಕ್ಕುದಾ
ಸಮಕಟ್ಟಾಬಿಯಮಾವಿಭೂತಿ ಸಧನರ್ಗೇಗೆಯ್ದೊಡಂ ತೀಱದೇ ೬

ವ॥ ಎನೆ ಕೇಳ್ದು

ಕಂ॥ ಭಯದೂರರನೀ ನೃಪರುಂ
ಸ್ವಯಂವರಕ್ಕಾರೊ ಕರೆದರಾ ಸಮಕಟ್ಟಾ
ಬಿಯಮಾವಿಭೂತಿಯೆಂತೆ
ನ್ನಯ ಗೇಹದೊಳಾಯ್ತು ದಿಟದಿನಾನಿದನಱಿಯೆಂ ೭

ವ॥ ಎಂದು ಭೀಷ್ಮಕಂ ಪುಸಿಯೆ ಬಿಸರುಹಾಕ್ಷನಾಕ್ಷೇಪಗರ್ಭನಿರ್ಭರೋಪಹಸನಸ್ಫುರದಧರಕಾಂತಿದಂತಪ್ರಭಾಶಬಲಿತಸಭಾಂತರಾಳನಿಂತೆಂದಂ:- ಆ ನಿಜಪ್ರಿಯತನೂಜೆಗೆ ನೀಂ ಸ್ವಯಂವರಮಂ ಮಾಟಿಪ್ಪೆನೆಂದು ಜಗದೊಳೆಯ್ದೆ ಸಾರಿಸಿ ನೆರಪಿದ ಕ್ಷತ್ರಿಯರ ಮೇಳಾಪಕಮುಮಂ ತನ್ಮಹೋತ್ಸವಕೆಂದು ಕಾಂಚನಪಂಚರತ್ನಮಯಂಗಳಾಗೆ ಮಾಡಿಸಿದ ಸುಧಾಧವಳಿತಂಗಳಪ್ಪುಪ್ಪರಿಗೆಗಳುಮಂ ಸಮುತ್ತುಂಗಂಗಳೆನಿಸುವ ತಮಂಗಂಗಳುಮಂ ಆ ರಮ್ಯಂಗಳೆನಿಸುವ ಹರ್ಮ್ಯಂಗಳುಮಂ ಆ ಚಿತ್ರಂಗಳೆನಿಸುವ ಚಿತ್ರಶಾಲೆಗಳುಮಂ ಆ ಜಗನ್ಮಂಗಲಂಗಳೆನಿಸುವ ಮಂಡಪಂಗಳುಮಂ ನೀಮದೆಂತು ಪೇೞಲಱಿವಿರಂತುಟಲ್ಲದೆಯುಂ

ಮ॥ ಕಲಹಂಮಾಡುವವೀ ಸ್ವಯಂವರಕೆ ಕೃಷ್ಣಂ ಬಂದೊಡೆಂದೀಗಳೆ
ಮ್ಮೊಳೆ ಕಾದಲ್ ತಱಿಸಂದುದಂ ದಿಟಕೆ ನೀಮೇಂ ಬಲ್ಲಿರೇ [1]ನೋಡಿಮಾ[1]
ಮುಳಿಸಿಂ ಕೈದುವನಾಂತ ಪತ್ತಿಗಳನಾ ಪಣ್ಣಿರ್ದ ಮತ್ತದ್ವಿಪಂ
ಗಳನಾ ಪಲ್ಲಣಿಸಿರ್ದ ವಾಜಿಗಳನಾ ಪೂಡಿರ್ದ ಪೊಂದೇರ್ಗಳಂ ೮

ವ॥ ಎಂಬುದುಂ ಭೀಷ್ಮಕಂ ದೇವರವಧಾರಿಸಿಮಿದಱ ವೃತ್ತಾಂತಮಂ ತಿಳಿದೆನೀಗಳೆಂತೆಂದೊಡೆ ಮದೀಯನಂದನಂ ರುಕ್ಮಿಯೆಂಬಂ ಸ್ವಭಾವಸುಭಗಾಕಾರದಿನಹಂಕಾರಿಯುಂ [2]ಯೌವನೋದಯಸಂಪತ್ತಿಯಿನುನ್ಮತ್ತನುಂ[2] ಯುವರಾಜಪದವಿಯಿಂ ಮಹಿಮಾಸ್ಪದನುಂ

---

[1] ನೋಡಿಮಂ (ಕಖಗ) [2] ಸಂಪತ್ತಿಯಿನುನ್ನತನುಂ (ಕಗ)

ನಿಖಿಲವಿದ್ಯಾಗರ್ವದಿಂ ಖರ್ವೀಕೃತಸರ್ವಲೋಕನುಂ ಅನೇಕದಿವ್ಯಾಯುಧನಿಕಾಯದಿಂದಜಯ್ಯನುಂ ಅಪ್ರತಿಹತಭುಜಪ್ರತಾಪದಿಂದಪ್ರತಿಮನುಂ ಅವಿಕಳಮಂತ್ರಶಕ್ತಿಯಿಂ ಸ್ವತಂತ್ರನುಮಾಗಿ ತನ್ನ ತಂಗೆಯಪ್ಪ ರುಕ್ಮಿಣೀದೇವಿಗೆ ಸ್ವಯಂವರವಂ ಮಾಟ್ಪೆನೆಂದು ಜರಾಸಂಧಪ್ರಭೃತಿನರಪಾಲರಂ ಬರಿಸಿ ತನ್ನಿಮಿತ್ತಮಾಸವಕಟ್ಟಾಬಿಯುಮಾ ವಿಭೂತಿಯುಮನಾತನೆ ಮಾಡಿಸಿದನಂತುಮಲ್ಲದೆಯುಂ

ಮ|| ಮುರವಿಧ್ವಂಸಕ ಕೇಳ ಕೈದುವಿಡಿದಾಳ್ ಪಣ್ಣಿರ್ದಿಭಂ ಪೂಡಿ ನಿಂ
ದ ರಥಂ ಪಲ್ಲಣಿಸಿರ್ದ ವಾಜಿ ವಿಭವಾರ್ಥಂ ತಾನವಂ ರುಕ್ಮಿ ನ
ಚ್ಚಿರನಂತಾ ಕಲಿ ನಚ್ಚುವಂ ಪ್ರಬಳಬಾಹಾದಂಡವುಂ ಜ್ಯಾರವೋ
ದ್ಧುರಕೋದಂಡಮನೂರುಪೀಡಿತವಿಶಾಲಸ್ಕಂಧವೇತಂಡಮಂ ೯

ವ|| ಎಂದು ಕುಟಿಲಹೃದಯಂ ತನ್ನ ಮಗನ ವಿಕ್ರಾಂತಮಂ ತೋಱಿ ನುಡಿಯೆ

ಕಂ|| ಕರಿವಿಘಟನಪಟು ಕೇಸರಿ
ಕುರಂಗಚೇಷ್ಟೆಯನವಜ್ಞೆಗೆಯ್ವವೊಲುಗ್ರಾ
ಸುರಮರ್ದನನಾ ರುಕ್ಮಿ
ಸ್ಫುರಣೆಗೆ ನಸುನಕ್ಕು ಭೀಷ್ಮಕಂಗಿಂತೆಂದಂ ೧೦

ಮ|| ಜಗಮಂ ರಕ್ಷಿಸಲೆಂದು ಕೃಷ್ಣವೆಸರಿಂ ಪುಟ್ಟಿರ್ದ ನಾರಾಯಣಂ
ಬಗೆವಂದಾಂ ಭವದೀಯನಂದನೆ ಮದರ್ಥಂ ರುಕ್ಮಿಣೀನಾಮದಿಂ
ದೊಗೆದಾ ಲಕ್ಷ್ಮಿಯೆನಲ್ಕೆಯಾನೆ ಒಡೆಯಂ ನಾರಾಯಣಂಗುಂಟು ಪೊ
ರ್ದುಗೆ ನೀವಾಕೆಯನೀ ಸ್ವಯಂವರದೊಳನ್ಯರ್ಗೀಯಲೇಂ ಬರ್ಕುಮೇ ೧೧

ವ|| ಎಂದು ಪುರುಷಸಿಂಹಂ ಸಿಂಹಪೀಠದಿಂದೆಟ್ಟು ನಿಂದಿರ್ಪುದುಂ

ಮ|| ಅನಿತುಂ ಗಂಧಗಜೇಂದ್ರಕೋಟಿಗನಿತುಂ ಜಾತ್ಯಶ್ವಸಂತಾನಕ
ಕ್ಕನಿತುಂ ದಿವ್ಯವರೂಥವಾಜಿಗನಿತುಂ ವಾರಾಂಗನಾಸಂಕುಲ
ಕ್ಕನಿತುಂ ಭಾಸುರಕೋಶರಾಜಿಗಧಿನಾಥಂ ಶ್ರೀಜಗನ್ನಾಥನೆಂ
ದು ನೃಪಾಲರ್ ವನಮಾಲಿಗೋಲಗಿಸಿದರ್ ತಂತಮ್ಮ ಸರ್ವಸ್ವಮಂ ೧೨

ವ|| ಆ ವಸ್ತುವಾಹನಂಗಳಂ ಬೇಱೆವೇಱೆ ನೋಡಿ ಕೈಕೊಂಡು ತಾಂಬೂಲದಾನಾದಿಸನ್ಮಾನಂಗಳಿಂ ಭೂನಾಥರಂ ಬೀಳ್ಕೊಳಿಸಿ ದಿವ್ಯವರೂಥಮನೇಱಿ ಮಧುರಾಪುರಾಭಿಮುಖನಾಗಿ

ಮ॥ ವಿಲುಠಚ್ಚಾಮರಸಂಕುಲಂ ನಿಜಯಶಃಕ್ಷೀರಾಬ್ಧಿಕಲ್ಲೋಲಮಂ
ಗೆಲೆ ನಾನಾತಪವಾರಣಧ್ವಜಸಮಾಜಂ ಜಂಗಮೋದ್ಯಾನಮಂ
ಗೆಲೆ ಸೇನೋತ್ಥಿತಸಾಂದ್ರಧೂಳಿ ವಿಜಯಶ್ರೀವಶ್ಯಚೂರ್ಣೌಘಮಂ
ಗೆಲೆ ಗೆಲ್ದಿಂದ್ರಮಹಾವಿಳಾಸಮನುಪೇಂದ್ರಂ ಬಂದನಾನಂದದಿಂ ೧೩

ವ॥ ಅನ್ನೆಗಮತ್ತ ಶಿಶುಪಾಲ ಸಾಲ್ವದಂತವಕ್ರರುಮೆಂಬ ದೈತ್ಯಾವತಾರವೀರರೊಳ್ ಜರಾಸಂಧನಾಳೋಚನತತ್ಪರನಾಗಿ

ಕಂ॥ ಜಯಮುಕ್ಕೆ ಭಂಗಮುಕ್ಕಾ
ಜಿಯೊಳುಚಿತಂ ಸ್ತ್ರೀನಿಮಿತ್ತದಿಂ ನೆರೆದ ಸಭಾ
ಲಯದಲ್ಲಿ ಭಂಗಮಂ ಕ್ಷ
ತ್ರಿಯಸಂಘಕ್ಕಿಂತು ಮಾಡಿ ಪೋಕುಮೆ ಕೃಷ್ಣಂ ೧೪

ಅವನ ಭುಜದರ್ಪಮಂ ಕಿಡಿ
ಸುವನಿರ್ದಪನಲ್ತೆ ಕಾಲಯವನಂ ಯದುಪಾ
ರ್ಥಿವಸುಭಟಮೇಘವಿಘಟನ
ಪವನಂ ರಣರಂಗವಿಜಯಲಕ್ಷ್ಮೀಭವನಂ ೧೫

ವ॥ ಅದೆಂತೆಂದೊಡೆ

ಮ॥ ಯದುನಾಶಕ್ಷಮಪುತ್ರನಂ ಪಡೆವೆನೆಂದೋರಂತಯಶ್ಚೂರ್ಣಭ
ಕ್ಷ್ಯದಿನಾರಾಧಿಸಿ ರುದ್ರನಿಂ ಪಡೆದನಷ್ಟಾವಕ್ರನಿಷ್ಟಾರ್ಥಮಂ
ಪದೆಪಿಂದಂ ಯವನಂಗೆ ತತ್ಫಲಮನೀಯಲ್ ಯಾದವತ್ರಾಸಿ ಪು
ಟ್ಟಿದನಂತಾ ಯವನಂಗೆ ಕಾಲಯವನಂ ದುರ್ವಾರದೋರ್ವಿಕ್ರಮಂ ೧೬

ಕಡಲಂ ಪೀರಲುಮುರ್ವಿಯಂ ತಿಱುಪಲುಂ ಚಂದ್ರಾರ್ಕರಂ ಮೀಂಟಲುಂ
ಸಿಡಿಲಂ ನುಂಗಲುಮದ್ರಿಜೇಶನುರಿಗಣ್ಣಂ ಮುಚ್ಚಲುಂ ಮೇರುವಂ
ಪೊಡೆಸೆಂಡಾಡಲುಮಾರ್ಪ ಕಾಲಯವನಂಗೇನಾರ್ಪನೇ ಯುದ್ಧದೊಳ್
ತೊಡರಲ್ ಚಕ್ರಿ ದಿಶಾಗಜಕ್ಕೆ ಕಳಭಂ ಕೈಯಿಕ್ಕಲೇನಾರ್ಕುಮೇ ೧೭

ಕಂ॥ ದೂತರನಟ್ಟಿದೊಡೇಱಿದ
ಮಾತಂಗಕ್ಷೋಹಿಣೀತ್ರಯೋದಶನಾಥಂ
ಗೀತೆಱದಿಂ ತತ್ಸಮವಿ
ಖ್ಯಾತನೆ ನೀಂ ಪೋಗಿ ಪೇೞಿ ಕಜ್ಜಮದಕ್ಕುಂ ೧೮

ವ|| ಎಂಬುದುಂ ಸೌಭಪುರವರಾಧೀಶ್ವರಂ ಸಾಲ್ವಲನಾ ಮುಹೂರ್ತದೊಳೆ ಪೋಗಿ ನಿಜಸಾಮರ್ಥ್ಯಯೋಗ್ಯಾತಿಥ್ಯಸಂಸ್ಕಾರದಿಂ ಸಂತುಷ್ಟನಾಗಿ ಕುಳ್ಳಿರ್ದು ತನ್ನ ಬಂದ ವೃತ್ತಾಂತಮಂ ಕಾಲಯವನಂಗೆ ಸವಿಸ್ತರಂ ಪೇಱೆ

ವನೆಮಯೂರವೃತ್ತಂ

ಕಾಲಯವನಂ ಪಡೆವೆನೆಂದು ಯದುವಂಶ
ಕ್ಕಾಲಯವನಂಬುಧಿಶಯಂ ಪುಗುಗುಮಿಂ ನಾ
ಕಾಲಯವನಂಚಿತನೃದಂಗಕಹಳಾಢ
ಕ್ಕಾಲಯವನಂಜದಿರಿಮೆಂದು ಪೊಱಮಟ್ಟಂ ೧೯

ವ|| ಅನ್ನೆಗಮತ್ತ ಶಿಶುಪಾಲ ಸಾಲ್ವಲ ದಂತವಕ್ರಜರಾಸಂಧಾದಿಗಳುತ್ಸವದಿನಿರ ಲಾಗಳೊರ್ವಂ ಗುಪ್ತವಾರ್ತಿಕನಾ ವಾರ್ತೆಯಂ ತಂದುಪೇಂದ್ರಂಗೆ ಬಿನ್ನಪಂಗೆಯ್ಯೆ ಮಧು ರಾಪುರಕ್ಕನತಿದೂರದೊಳ್ ನಿಂದು

ಕಂ|| ಈ ತ್ರಿಜಗಂಗಳನಿಚ್ಛಾ
ಮಾತ್ರದೆ ಪುಟ್ಟಿಸುವ ಕಿಡಿಪ ದೇವನುಪೇಂದ್ರಂ
ಧಾತ್ರಿಗೆ ನಿಜಮಾನುಷಚಾ
ರಿತ್ರಂ ನೆಗಟ್ವಂತು ಬಗೆದನೊಂದುದ್ಯಮಮಂ ೨೦

ವ|| ಅಂತು ಬಗೆದು ತನ್ನ ಕೆಲದೊಳಿರ್ದ ಪನ್ನಗಾರಾತಿಯನತಿಪ್ರೀತಿಯಿಂ ನೋಡಿ

ಕಂ|| ಸ್ತ್ರೀರತ್ನಾರ್ಥಂ ನೃಪತಿಸ
ಭಾರತ್ನಾಕರಮನಾಂ ಕಲಂಕಿದೆನದಱಿಂ
ವೈರಂ ನೆಲೆವೆರ್ಚುಗುಮರಿ
ವೀರರೊಳಂ ಸ್ತ್ರೀಜವೈರಮೇಂ ಕೇವಲಮೇ ೨೧

ಉ|| ಒಂದೆಸೆ ದಂತವಕ್ರದನುಜೇಂದ್ರನದೊಂದೆಸೆ ಮಾಗಧೇಶನಂ
ತೊಂದೆಸೆ ಸಾಭವಲ್ಲಭನದೊಂದೆಸೆ ಚೈದ್ಯನುಮಿಂತು ನೋಡೆ ನಾ
ಲ್ಕುಂದೆಸೆಯುಂ ವಿರೋಧಿಮಯಮಿನ್ನೆಮಗಂ ಮಧುರಾಪುರಾಶ್ರಯಂ
ನಿಂದಿತಮಿತ್ತ ಕಾಲಯವನಂ ಗಡ ಬಂದಪನಾಜಿದುರ್ಜಯಂ ೨೨

ಕಂ|| ರಿಪುಬಲದುರ್ಭೇದನಮತಿ
ವಿಪುಲಂ ಕ್ರೀಡೋಪಯೋಗ್ಯಮೆಂಬೆಡೆಯುಮನೀ
ಕ್ಷಿಪುದೊಂದು ಪೊೞಲುಮಂ ನಡೆ
ಯಿಪುದೀಗಳೆ ನಮ್ಮ ಕಟಕಮಂ ಖಗರಾಜಾ ೨೩

ವ|| ಎಂಬುದುಂ ಕರತಳಾಮಳಕೀಭೂತಭೂತಳಂ ವೈನತೇಯನಿಂತೆಂದಂ

ಕಂ|| ಜಳನಿಧಿ ಪರಿಖೆಯು ತೆಱದಿಂ
ಬಳಸಿರೆ ಬಹುಗಹನಶೈಲಸುಭಗಂ ಕ್ರೀಡಾ
ಚಳನಂದನಶೋಭಿ ಕುಶ
ಸ್ಥಳಮಿರ್ದಪುದತಿವಿಶಾಲಮದನಾಂ ಬಲ್ಲೆಂ ೨೪

ಆ ಸ್ಥಳದೊಳಿನ್ನೆಗಂ ದೇ
ವಸ್ಥಪತಿ ನಿಜಾಜ್ಞೆಯಿಂದೆ ನಿರ್ಮಿಸುಗುಂ ರ
ತ್ನಸ್ಥಗಿತಮೆನಲ್ ಪುರಮಂ
ಪ್ರಸ್ಥಾನಂಗೆಯ್ಗೆ ತಡೆಯದಲ್ಲಿಗೆ ಕಟಕಂ ೨೫

ವ|| ಎಂದು ವಿನತಾನಂದನಂ ನುಡಿಯೆ ಪೊಡೆಯಲನಾಜ್ಞೆಯಿಂದಾಗಳುಗ್ರಸೇನ ವಸುದೇವಾದಿಯಾದವಪ್ರಧಾನಪುರುಷರ್ ಸಮಸ್ತಹಸ್ತ್ಯಶ್ವರಥಪದಾತಿಬಲಂಬೆರಸು ಮಧುರಾಪುರೀನಿವಾಸಿಗಳಂ ಮುಂದಿಟ್ಟೊಡಗೊಂಡು ಪೊಱಮಡೆ

ಮ||ಸ್ರ|| ಇಳೆಯೆಲ್ಲಂ ಚಾತುರಂಗಪ್ರಬಲಬಲಪದಾಚ್ಛಾದಿ ರೋದೋಂತಮೆಲ್ಲಂ
ಚಳನಾನಾವೈಜಯಂತೀಪಟಲಪಟಪಿನದ್ಧಂ ದಿಶಾಚಕ್ರಮೆಲ್ಲಂ
ಜಳಧಿಧ್ವಾನೋಚ್ಚಕೋಳಾಹಳರವಬಧಿರೀಭೂತಮೆಂಬಂತಗುರ್ವಂ
ತಳೆದತ್ತಿತ್ತುತ್ತಮೆತ್ತಂ ನಡೆದುದು ಕಟಕಂ ರಾಮತಾರ್ಕ್ಷ್ಯಾಭಿಗುಪ್ತಂ ೨೬

ವ|| ಅನ್ನೆಗಮತ್ತ ಮಧುರಾಪುರದ ಪೊಱವೊೞಲೊಳ್

ಕಂ|| ಪೀತಾಂಬರನಿರ್ದಂ ಸಮ
ರಾತಿಥಿ ಬರ್ಕೆಂದು ಸಾಱುವಂತೆ ಧನುರ್ಜ್ಯಾ
ಘಾತರವಾವೃತಸಕಲದಿ
ಶಾತಟನಾತ್ಮೀಯಭುಜಬಲೈಕಸಹಾಯಂ ೨೭

ವ|| ಆಗಳ್

ಮ॥ ಅನಿಮೇಷಾದ್ರಿಯನಬ್ಧಿಯಂ ಭಗಣಮಂ ಚಂದ್ರಾರ್ಕರಂ ವ್ಯೋಮವಾ
ಹಿನಿಯಂ ಕಾಣದೆ ಪದ್ಮಜಂ ವಿಕಳಚಿತ್ತಂ ಮತ್ತಮಂ ಪುಟ್ಟಿಸಲ್
ಮನಮಂ ತರ್ಪಿನೆಗಂ ಜಗದ್ವಿವರದೊಳ್ ಸೇನಾರಜಂ ಕೊರ್ವಿ ಪ
ರ್ವಿನಗುರ್ವಂ ಪಡೆವಂತೆ ಕಾಲಯವನಂ ಬಂದಂ ಬಳಾಟೋಪದಿಂ ೨೮

ವ॥ ಆಸಮಯದೊಳ್

ಕಂ॥ ಜ್ಯಾತತರುತಿ ಮಿಗೆ ಬಳಧೂ
ಳೀತತಿಯಂ ಗಱಿಯ ಗಾಳಿ ತೂಳ್ದಿನಮಿಷುಸಂ
ಘಾತದಿನಿಸುತಂ ಕೃಷ್ಣನ
ರಾತಿಯ ಬಗೆಗಟ್ಟೆ ತಿಂಬ ಜವನಂತಿರ್ದಂ ೨೯

ವ॥ ಅಂತಿರ್ದ ದನುಜಕುಳವಿಳಯಕಾಲನಂ ಕಾಲಯವನಂ ನೋಡಿ

ಮ॥ಸ್ರ॥ ಅವಿಧೇಯಂ ಕ್ಷತ್ರಲೋಕಂ ನೆರೆದು ಪೊಣರ್ದೊಡಾ ತ್ರಿಂಶದಕ್ಷೌಹಿಣೀಸೈ
ನ್ಯವನೋರೊರ್ವೊಂದೆಮೆಯ್ಯಿಂ ತವಿಸಿ ತವದಧೋಃಕಂಡುವಿಂದೀತನಿಂದೆ
ಮ್ಮುಮನಿಂತೇಕಾಂಗದಿಂದಂ ಗೆಲಲೊಡರಿಪನೀ ತೇಜದಿಂ ದರ್ಪದಿಂ ಸೌ
ಷ್ಠವದಿಂ ಶಸ್ತ್ರಾಸ್ತ್ರವಿಜ್ಞಾನದ ಯದುಕುಲನೊಳ್ ಗೆಲ್ಲವೇಕಾಗದಿರ್ಕುಂ ೩೦

ವ॥ ಎಂದು ಮನದೊಳೆ ಮೆಚ್ಚಿ ಬಿಚ್ಚಳಿಸಿ ತನ್ನ ಸೈನ್ಯಮಂ ಕೈವೀಸೆ

ಉ॥ ಪಕ್ಕರೆಯಿಕ್ಕಿದಶ್ವತತಿ ಪಣ್ಣಿದ ದಂತಿಘಟಾಳಿ ಸನ್ನಣಂ
ಜೊಕ್ಕ ಪದಾತಿ ಹೇತಿ ರಥ ಸೂತ ಹಯಾನ್ವಿತವಾದ ತೇರ್ಗಳೆ
ಕ್ಕೆಕ್ಕೆಯಿನೆಯ್ದೆ ವರ್ಪರಿಬಲಾಬ್ಧಿಯನಚ್ಯುತನೊಂದೆ ಮುಷ್ಟಿಯೊಳ್
ಲಕ್ಕಸರಲ್ಗಳಂ ತುಡುತುಮೆಚ್ಚು ತಱಿಂಬಿದನಸ್ತ್ರವೇಳೆಯಿಂ ೩೧

ವ॥ ಅನಂತರಂ

ಕಂ॥ ಅನಿತಾಳನನಿತುಕುದುರೆಯ
ನನಿತಾನೆಯುನನಿತುತೇರನೊರ್ವೊದಲೊಂದಂ
ಬಿನ ಕೊನೆಯಿಂ ತವಿಸುವೆನೆಂ
ದನಲಾಸ್ತ್ರಮನಸುರವೈರಿ ತೊಟ್ಟಾರ್ದೆಚ್ಚಂ ೩೨

ಮ॥ [1]ಪಡಿಮಾತ್ರೇನಿದು[1] ಕೃಷ್ಣನಾಜ್ಞೆಯೊಳೆ ವಿದ್ವಿಟ್ಸೇನೆಯಂ ಸುಟ್ಟು ಪೂ
ಣ್ಬೊಡೆ ಮಾಣ್ಗುಂ ಪೆಱತಾದೊಡೀ ತ್ರಿಜಗಮಂ ನಿಶ್ಶೇಷಮುಪ್ಪಿನ್ನೆಗಂ
ಸುಡುಗುಂ [2]ತಾನಿದಿಱಿತೞಾಳ್[2] ಲಯಾಗ್ನಿ ನೆಲಸಿತ್ತೆಂಬಂತು ತತ್ಸಾಯಕಂ
ಕಿಡಿಯುಂ ಕೇಸುರಿ ಸೂಸೆ ಬಂದೞಿದುರ್ದ ಕೊಂದತ್ತಾ ಚತುಸ್ಸೈನ್ಯಮಂ ೩೩

ಕಂ॥ ವೈಕುಂಠಶರಾಗ್ನಿಶಿಖಾ
ನೀಕದೆ ಭಸ್ಮಾವಶೇಷಮಾಗಿ ವಿಪಕ್ಷಾ
ನೀಕಂ ಚತುರಂಗವ್ಯೂ
ಹಾಕಾರದೆ ರಂಗವಲಿವೊಲಿರ್ದುದು ರಣದೊಳ್ ೩೪

ಪಡೆಯೆನಿತನಿತಱ ಬಲ್ಪಂ
ಪೊಡಪ್ರ್ಪುಮಿಾತನೊಳೆ ನೆಲಸಿದತ್ತೆನೆ ಸೈನ್ಯಂ
ಮಡಿವುದುಮದೊಂದಗುರ್ವಿಂ
ಗೆಡೆಗೊಂಡಿಸುತಿರ್ದನತಿಬಳಂ ಯವನಸುತಂ ೩೫

ಜ್ಯಾತತಘೋಷಂ ಪುದಿಯೆ ದಿ
ಶಾತಟಮಂ ಕಾಲಯವನನಿಸೆ ತಚ್ಚರನಿ
ರ್ಘಾತಂ ಪಡೆದುದು ಹರಿಗಂ
ಕೌತುಕಮಂ ಹರವರೋದ್ಭವಂ [3]ಕೇವಲಮೇ[3] ೩೬

ಕಾಳಾಹಿ ಕಾಳದಂಡಂ
ಕಾಳಾಗ್ನಿಜ್ವಾಲೆಯೆನಿಪ ಕಾಳಾಯಸಬಾ
ಣಾಳಿಗಳಿಂ ದಾನವಕುಲ
ಕಾಳಯಮಂ ಕಾಳಯವನನಂ ಪೂಣ್ದೆಚ್ಚಂ ೩೭

ಮ॥ ಧನು ಶಾರ್ಙ್ಗಂ ದನುಜಾರಿ ಪೂಣ್ದಿಸುವನಂತುಂ ನಾಂಟದಸ್ತ್ರೌಘವಾ
ತನ ಮೆಯ್ಯಿಂ ಕಿಡಿ ಸೂಸೆ ತಾಗಿ ಸಿಡಿದುಂ ಪಿಂಮೆಟ್ಟಿಯುಂ ಪಿಕ್ಕಿ ಪಿಂ
ತನೆ ಬಂದುಂ ತಿಱುವಾಯೆ ಪೊರ್ದಿಯುಮಗುರ್ವಾದತ್ತ್ರಯಶ್ಶೂರ್ಣಸೇ
ವನೆಗೆಯ್ದಾ ಫಲದಿಂದೆ ಪೆತ್ತ ತನಯಂಗಸ್ತ್ರೌಘಮೇನಾರ್ಕುಮೇ ೩೮

ವ॥ ಆಗಳದರ್ಕೆ ವಿಸ್ಮಿತಸ್ವಾಂತನಾಗಿ

---

[1] ಪಡೆಮಾತೇನಿದು (ಕಖಗ) [2] ತಾನಿದಱಿತೞಾಳ್ (ಕಗ) [3] ಕೇವಲನೇ (ಮೊಅ)

ಕಂ|| ಕಡೆಯೆ ರಥಾಶ್ವಂ ಸಾರಥಿ
ಮಡಿಯೆ ರಥಂ ಕೞಲೆ ಮುಱಿಯೆ ಕನಕಧ್ವಜಮಿ
ರ್ಕಡಿಯಾಗೆ [1]ಪಗೆಯ[1] ಚಾಪಂ
ಕಡುಕೆಯ್ದು ಮುರಾರಿ ಬಾಣದಶಕದಿನೆಚ್ಚಂ ೩೯

ವ|| ಅಂತು ವಿರಥನಂ ಮಾಡೆ ಬಾಹುಕದನಮನೊಡರ್ಚಲೆಂದು [2]ನಿಟ್ಟಾಸುರಂಗೊಂಡು[2] ಮುಟ್ಟಿಬರ್ಪನಂ ಕಂಡು

ಕಂ|| ಯದುಕುಲದುರ್ಜಯನಪ್ಪಂ
ತದೊಂದುವರಮುಂ ತ್ರಿಣೇತ್ರರೂಪದೆ ತಾನಿ
ತ್ತುದನಱಿದು ಪಗೆಗೆ ವಧಮಂ
[3]ಯದುವಂಶ್ಯಂ ಪೆಱತುಪಾಯದಿಂ[3] ಚಿಂತಿಸಿದಂ ೪೦

ಹರವರಮಂ ಮನ್ನಿಸಲೆಂ
ದರಿಯುಂ ಪೆಱನಿಂದೆ ಕೊಲಲೊಡರ್ಚಿದನುಂತುಂ
ಹರಿ ರಿಪುವಧದೊಳ್ ಪಾರ್ಗ್ಗುಮೆ
ಬೆರಗಂ ತ್ರೈಲೋಕ್ಯಹರಣಭರಣಸಮಗ್ರಂ ೪೧

ಕದನಮನಿತ್ತಪೆನಿಲ್ಲೆಂ
ದೊದಱುತ್ತುಂ ಪರಿವ ಕೃಷ್ಣನಂ ತತ್ಖಳನೆ
ಯ್ದಿದನಿಲ್ಲಂ ಕರ್ಮ್ಮಿ ಸಂಸಾ
ರದ ಪಾರಮನೆಂತುಮೆಯ್ದಲಾಱದ ತೆಱದಿಂ ೪೨

ವಿಕ್ರಮದಿಂ ನೆಗೞ್ದುದಱಿಂ
ವಿಕ್ರಮದಿಂ ಪಾಱಿದಪ್ಪೆ ನೀನೆಂದು ಖಳಂ
ವಿಕ್ರಮದಿಂ ಹರಿ ಹರಿಯೆ ಪ
ವಿಕ್ರಮದಿಂ ಗರ್ಜಿಸುತ್ತೆ ಬೞಿಯನೆ ಪರಿದಂ ೪೩

ಮುನಿಗಳ್ ದಿವ್ಯಜ್ಞಾನಿಗ
ಳನಘರ್ ಮನದಿಂದಮೆಯ್ದಲಾಱದ ಪರಮಾ
ತ್ಮನನಾ ದುಶ್ಚರಿತಂ ನಿಜ
ತನುವಿಂ ಪರಿದೆಯ್ದಲೆಂತುಮೇನಾರ್ತಪನೇ ೪೪

---

1 ಕಡಿಯೆ (ಕಗ) 2 ನಿಟ್ಟಾರಿಗೊಂಡು (ಕ) ನಿಟ್ಟಾಲಿಗೊಂಡು (ಗ) 3 ಯದುವಂಶಂ ಪೆಱತುಪಾಯಮಂ (ಕಖಗ)

ವ॥ ಅಂತು ಪೋಗಿ ಕಾಲಯವನಂಗೆ ಕಾಲಯಮನ ವದನದ್ವಾರವೆನಿಸಿದ ಗುಹಾದ್ವಾರವಂ ಪೊಕ್ಕಾಗಳದಱೊಳಗಣ ಮಣಿಮಾಡದೋವರಿಯ ಮಂಚದೊಳ್

ಕಂ॥ ಒಱಗಿರ್ದಂ ನಿದ್ರೆಯಿನೆ
ಬ್ಬಿಱಿಸಿದರಂ ಕೋಪಶಿಖಿಯಿನುರುಪುವ ವರದಿಂ
ನೆಱೆದು ಕೃತಯುಗದೊಳಸುರರೊ
ಳಿಱಿದ ಪರಿಶ್ರಮದೆ ರಾಜಮುನಿ ಮುಚುಕುಂದಂ ೪೫

ವ॥ ಆ ನಿದ್ರಾಮುದ್ರಿತನೇತ್ರನೆಬ್ಬಿಱದಂತಚ್ಯುತಂ ಮೆಲ್ಲನೆ ಕೆಲಕೆ ಸಾರ್ದು ನಿಲ್ವುದುಂ, ಪ್ರಾಪ್ತಕಾಲಂ ಕಾಲಯವನಂ ಮುಟ್ಟೆವಂದು ಪಟ್ಟಿರ್ದ ಮುಚುಕುಂದನಂ ಮುಕುಂದನೆಗೆತ್ತೊದೆಯೆ ತತ್ಪ್ರಬೋಧಿತನಾ ವಿರೋಧಿಯಂ ಕ್ರೋಧಹುತಾಶನಂಗಾಹುತಿ ಮಾಡಿ ಮುಱಿದು ನೋಡಿ ಸಮಕ್ಷದೊಳ್ ನಿಂದ ಪುಂಡರೀಕಾಕ್ಷನಂ ಕಂಡು ನೀನಾರ್ಗೆಂದು ಬೆಸಗೊಳೆ ಶಶಿವಂಶಜಾತನೆಂ ವಸುದೇವಪ್ರಸೂತನೆನೆಂದು ಪೇೞೆ

ಕಂ॥ ಸ್ಮರಿಯಿಸಿದಂ ಮುಚುಕುಂದಂ
ಚಿರೋಕ್ತಮಂ ಮನದೊಳಿರ್ಪತೆಂಟನೆಯ ದ್ವಾ
ಪರದಂತ್ಯದಲ್ಲಿ ಧರೆಯೊಳ್
ಹರಿ ಪುಟ್ಟುಗುಮೆಂಬ ವೃದ್ಧವರ್ಗದ ನುಡಿಯಂ ೪೬

ವ॥ ಅಂತು ನೆನೆದು ತನುವಿನೊಳ್ ಹರ್ಷಪುಳಕಮುಂ ನಯನದೊಳಾನಂದ ಬಾಷ್ಪಜಲಮುಂ ನೆಗೆಯಲೊಗೆದ ನಿರ್ಭರಭಕ್ತಿಯಿಂ ಗೋವರ್ಧನೋದ್ಧಾರಂಗೆ ಬದ್ಧಾಂಜಲಿಯಾಗಿ

ಮ॥ ಪುರುಹೂತಂಗೆ ಸಹಾಯನಾಗಿ ಕಡುಕೆಯ್ದಾಂ ಕಾದುವಂದಾ ಸುರಾ
ಸುರರ್ಗಂ ದುಸ್ಸಹಮೆನ್ನ ತೇಜಮೆನಗಂ ನಿನ್ನೊಂದು ತೇಜಂ ಪಯೋ
ಧರಗಂಭೀರರವೋಕ್ತಿ ಪಾದತಳಪೀಠಾಕಂಪಿತ ಕ್ಷ್ಮಾತಲಂ
ಪಿರಿದುಂ ದುಸ್ಸಹಮಾಗುತಿರ್ಪುದದಱಿಂ ನೀನೇ ಸರೋಜೇಕ್ಷಣಂ ೪೭

ಕಂ॥ ನೀಂ ಶರಧಿತಲ್ಪನೈ ಶಶಿ
ವಂಶದೊಳುದಯಿಸಿದೆ ಮರ್ತ್ಯಲೋಕಹಿತಾರ್ಥಂ
ಸಂಶಯಮಿಲ್ಲದು ನಿನ್ನಂ
ಶಾಂಶದ ತನುವೀ ಪ್ರಭಾವಮನ್ಯರ್ಗುಂಟೇ ೪೮

ವಿವಿಧತರವರ್ಣನಿರ್ಣೀ
ತವೆನಿಸಿ ಸಂಕಲ್ಪತೂಲಿಕಾಭಿತ್ತಿಯೊಳೀ
ಭುವನತ್ರಯಮಂ ಚಿತ್ರಿಸು
ವ ವಿರಿಂಚನ ವಿದ್ಯೆಗಧಿಪ ನೀಂ ಗುರುವಲ್ತೇ ೪೯

ಮ॥ ಶತಪತ್ರಾಕ್ಷ ನಿಜಸ್ವರೂಪಮನದಾರುಂ ಬಲ್ಲರೇ ನೀಂ ಗುಣ
ವ್ಯತಿರಿಕ್ತಂ ವಿತನುತ್ವದಿಂ ಗುಣಯುತಂ ಬ್ರಹ್ಮಾದಿಸಾಂಗತ್ಯದಿಂ
ದತಿಸೂಕ್ಷ್ಮಂ ಪರಮಾತ್ಮರೂಪದಿನತಿಸ್ಥೂಲಂ ಜಗದ್ರೂಪದಿಂ
ಹೃತಕಾಲಂ ಧ್ರುವಭಾವದಿಂ ಸ್ವಗತಕಾಲಂ ನಶ್ವರವ್ಯಕ್ತಿಯಿಂ ೫೦

ಇವನೀಶಂ ಹರಿಯೆಂದು ಬೇರ್ಪಡಿಸಿ ನಿನ್ನಂ ಪೂರ್ವಸಂಸ್ಕಾರವಾ
ಸನೆಯಿಂದೆಂತುಟು ದೈವವೆಂಬರವರ್ಗಂತಂತಪ್ಪೆ ನೀನಾದೊಡೊ
ರ್ವನೆ ನಿನ್ನಿಂ ಭುವನೋದಯಸ್ಥಿತಿಲಯಂ ನೀಂ ದೇವ ಚೈತನ್ಯರೂ
ಪನಮೇಯಂ ಸದಸದ್ವಿಕಲ್ಪರಹಿತಂ ನಿತ್ಯಂ ಮುನಿಪ್ರತ್ಯಯಂ ೫೧

ಉ॥ ಒಂದೆರಡಿಲ್ಲ [1]ದೈವವೆರಡಾಯ್ತುದೆ ಮೂಱುಱನಿಂತು[1] ಮತ್ತೆ ನಾ
ಲ್ಕಂದದ ವೇದದಿಂದ್ರಿಯಮನೈದನಡಂಗಿಸಲಾಱನೇೞಪಂ
ದಿಂದೆನಗಾದುದೆಂಟನೆಯ ನಿನ್ನವತಾರಮನೀಕ್ಷಿಸಲ್ ವಿವೇ
ಕಂ ದಿಟವೊಂಬತುಂ ನಿಧಿ ಬರಲ್ ಮತಿ ಪತ್ತದು ದೃಷ್ಟಿಸೌಖ್ಯಮಂ ೫೨

ಮ॥ಸ್ರ॥ [2]ಪ್ರಿಯ ಕೀರ್ತಿಶ್ರೀ ದಶಾಶಾವಧಿಯೆನೆ[2] ನವರತ್ನೋತ್ಕರಾಷ್ಟಾಪದಪ್ರೀ
ತಿಯನೊಕ್ಕೇವೈಸಿ ಸಪ್ತವ್ಯಸನದೊಳರಿಷಡ್ವರ್ಗಮಂ ಬಿಟ್ಟು ಪಂಚೇಂ
ದ್ರಿಯಮಂ [3]ವಟ್ಟೈಸಿ[3] ಚಾತುರ್ವಿಧಕರಣಮನಂತಸ್ಸ್ಥಮಂ ತೂಳ್ದಿ ತಾಪ
ತ್ರಯಮೆನ್ನೊಳ್ ಪಿಂಗಲಾಂ [4]ದ್ವಂದ್ವಮನುೞಿದೆನಗಾದ್ವೈಕ್ಯದಿಂದೊಂದಿ[4]
ನಿಲ್ವೆಂ ೫೩

ವ॥ ಎಂದರವಿಂದನಾಭನ ದಯಾವಲೋಕನಪ್ರಸಾದದಿಂದಾದಸೂನಜ್ಞಾನದಿಂದಾ ಮುಚುಕುಂದನಾ ಮಹಾಗುಹಾದ್ವಾರದಿಂ ಪೊಱಮಟ್ಟು ಗಂಧಮಾದನನಗೇಂದ್ರೋಪಾಂತದ ಬದರಿಕಾಶ್ರಮದ ನರನಾರಾಯಣ ಸ್ಥಾನಕ್ಕೆ ಪೋದಂ. ಆಗಳಾ ನಾಗಾರಿಕೇತನಂ ದಾರುಕಾನ್ವಿತವರರಥಸ್ಥನಾಗಿ ಕುಶಸ್ಥಳಕ್ಕೆ ತಳರ್ದಂ. ಅನ್ನೆಗಮತ್ತ ಕುಂಭ

---

1 ದೈವವೆರಡಂತದೆ ಮೂಱನೆಂತು (ಕಗ) ದೈವವೆರಡಂತದೆ ಮೂಱನದೆಂತು (ಖ)
2 ಪ್ರಿಯೆಕೀರ್ತಿ ಶ್ರೀದಶಾಂಶಾವಧಿಯೆನೆ (ಕ) ಪ್ರಿಯಕೀರ್ತಿಶ್ರೀದಶಾಂಶಾವಧಿಯೆಂನೆ (ಗ)
3 ಮಟ್ಟೈಸಿ (ಕಗ) 4 ದ್ವಂದ್ವಮನುೞಿದು ನನಾಂದ್ವೈಕ್ಯದಿಂದೊಂದಿ (ಕಗ) ದ್ವಂದ್ವಮನುೞಿದು ಸಾಂದ್ವೈಕ್ಯದಿಂದೊಂದಿ (ಖ)

ಕರ್ಣಾವತಾರಂ ದಂತವಕ್ರಂ ನಿಸರ್ಗವೈರದಿಂದಸುರವೈರಿಯ ಪೆಸರ್ಗಳೆ ತನಗಸಹ್ಯಂಗಳಾಗೆ ಹರಿನಾಮಯುಕ್ತನೆಂದು ಶಕ್ರನನಾಕ್ರಮಿಸಿಯುಂ, ಪೀತಾಂಶುಕನೆಂದು ಪಾವಕನಂ ಮೂವೀದಿವಡಿಸಿಯುಂ, ಗೋಪನಂದನನೆಂದು ದಂಡಧರನನಂಡಲೆದುಂ, ನಾಗನಿಳಯನೆಂದು ನೈಋತಿಯಂ ನಿರಾಕರಿಸಿಯುಂ, ವನಮಾಲಾಸ್ಪದನೆಂದು ಯಾದಃಪತಿಯನದಿರ್ಪಿಯುಂ, ಅದ್ರಿಧರನೆಂದು ಪವಮಾನನನವಮಾನಿಸಿಯುಂ, ರಾವಣದ್ವೇಷಿಯೆಂದು ಕುಬೇರನಂ ದೂಷಿಸಿಯುಂ, ಶ್ರೀಧರನೆಂದು ಶಂಕರನಂ ಮಾಂಕರಿಸಿಯುಂ, ಧರಣೀಧರನೆಂದು ಸುರಶೈಳಮಂ ಚಾಳಿಸಿಯುಂ, ಶಂಖಚಕ್ರಾನ್ವಿತನೆಂದು ಉದಧಿಯಂ ಕಲಂಕಿಯುಂ, ಅನಂತಾಖ್ಯನೆಂದು ಭೂಮಿಯಂ ತಿಗುೞ್ದಿರುಪಿಯುಂ, ಅಬ್ಜೋದರನೆಂದು ಗಗನಮಂ ಗರವಟಿಸಿಯುಂ ಮಾಣದೆ, ಚಾಣೂರ ಸೂದನನೊಳ್ ಕಾದಲೆಂದಟ್ಟಿದ ದೂತಂ ಜೀಮೂತನಾದನೆಂಬಂ ಬರುತ್ತುಮಕೂಪಾರತೀರಂಬಿಡಿದು ನಡೆತರ್ಪ ಕಾಳಿಯ ಸರ್ಪದರ್ಪದಳನನನದಿರದಿದಿರೊಳ್ ಕಂಡು

ಕಂ॥ ಅಂಬುರುಹನಾಭ ನಿಲ್ ನಿ
ಲ್ಲಾಂ [1]ಬಂದೆಂ[1] ದಂತವಕ್ರದೂತನೆನವನಾ
ಡಂಬರಮಂ ನೆಱೆಪೇೞೆ ಮ
ನಂ ಬೆದಱುಗುಮಂತದರ್ಕೆ ಪೇೞ್ದಪೆನೊಂದಂ ೫೪

ಜವನಧಿಕಾರಂ ಮಿೞ್ತುವ
[2]ಜವಕೆ[2] ಮೊಗಂದಿರುಪೆ ಕೊಲ್ವ ಮೆಯ್ಸಿರಿ ನೆಲಸಿ
ತ್ತವನೊಂದು ಗದೆಯೊಳೆನಲಾಂ
ಪವನಾಸು ದಂತವಕ್ರನೊಳ್ ರಿಪುವೀರಂ ೫೫

ಇಂ ಬಿಸುನೆತ್ತ್ರಱನೀಂಟಲ್
ಮುಂಬಸಿಱೊಳ್ ತೀವಿದಮರರಕ್ತಮನುಗುೞ್ದಿ
ತ್ತೆಂಬಂತೆ ಬದ್ಧ[3]ಕೌಸುಂ
ಭಾಂಬರದಂಚಲದ[3] ಗದೆ ವಿಜೃಂಭಿಪುದವನಾ ೫೬

ತರಿಸಿ ಜವನದಱ ನಿರ್ಮಾ
ಲ್ಯರಕ್ತಪುಷ್ಪಮನೆ ಮುಡಿದು ಭೀಕರನಾದಂ
ಧರೆಗೆನೆ ರಕ್ತಸ್ರಗ್ವೀ
ಕರಂ ಗದಾದಂಡಮಿರ್ಪುದಸುರನ ಕೈಯೊಳ್ ೫೭

---

[1] ಬಂದಪೆ (ಕಖಗ) [2] ಬವಕೆ (ಕಗ) [3] ಕೌಸುಂಭಾಂಬರದಿಂ ತೆಗೆದ (ಕಗ)

ಎತ್ತಿ ತಿರುಪಲ್ಕೆ ತೆರಳ್ವ ವಿ
ಯತ್ತಳತಾರಕನಿಕಾಯವಿದಱೞೊಳ್ ತೊಡರ್ದಿ
ರ್ದತ್ತೆನೆ ವಜ್ರದ ಮೊಳೆಗಳ
ನೊತ್ತಮುಗುೞ್ವಿಸುವುದಾ ನಿಶಾಟನ ಗದೆಯೊಳ್ ೫೮

ಪತ್ತಿದ ನೆತ್ತಱ ಪೊಲಸಿಂ
ದೆತ್ತಂ ಮೊಱೆದೆಱೆಪ ಮಶಕಮಕ್ಷಿಕಮಂ ಸೋ
ವುತ್ತುಮನವರತಮೋಲಗಿ
ಸುತ್ತಿರ್ಪುವು ಭೂತಕೋಟಿ ದನುಜನ ಗದೆಯಂ ೫೯

ಅಸುರನ ಗದೆ ಭೂತಪಿಶಾ
ಚಸಮಿತಿಗೆಱೆಯಿಸುವ ನೆತ್ತಱಱವಟ್ಟಿಗೆ ತೆ
ತ್ತಿಸಿದೆಲ್ವಿನ ಸೊದೆವನೆಯಿ
ಕ್ಕಿಸುವಡಗಿನ ವಾರಿಸತ್ರಮಚ್ಚರಿ ರಣದೊಳ್ ೬೦

ತ್ರಿದಶೇಂದ್ರಮಕುಟಮಂ ಪೊಡೆ
ದ ದೈತ್ಯಗದೆಯಿಂ ಸಿಡಿಲ್ದ ಶಕಳಮೆ ತಾನಾ
ದುದು ಕೃಷ್ಣ ನಿನ್ನ ಗದೆಯೆನೆ
ಗದೆಯ ವಿಜೃಂಭಣೆ ಭಯಾವಹಂ ದಾನವನಾ ೬೧

ಲಯಮೆಯ್ದಿ ಯದುಬಲಂ ಪ
ಕ್ಕಿಯ ಗೋಸನೆಗುಡುಕು ಜವನ ಕೈಬೋನಂ ಮಾ
ರಿಯ ಬುತ್ತಿ ಮರುಳ್ಗಳ ಕ
ಜ್ಜಯಮೆನಿಸದೆ ಗದೆಗೆ ನೀಡೆ ದನುಜಂ ಕರಮಂ ೬೨

ನೆಗಪಿದೊಡೆ ನೆತ್ತಿಯಿಂದಸು
ನೆಗೆಗುಂ ತೂಗಿದೊಡೆ ಪಗೆಯ ದೇಹಂ ತೂಗಾ
ಡುಗುಮಸುರಂ ಗದೆಯಂ ತಿ
ಱ್ರಿಗೆ ತಿರುಪಿದೊಡೊಡನೆ ತಿರುಗುಗುಂ ಭೂಚಕ್ರಂ ೬೩

ಚಂ|| ರಯದೊಳಗಿಂದು[1]ಬಿಂಬವನುದಿರ್ಚುವ[1] ಸಾಗರಮಂ ತುಳುಂಕುವ
ದ್ರಿಯನಗೆಯೆತ್ತು ಪುರ್ವಿಯನಡಂಗಿಪ ಭಂಗಿಯೊಳಿಲ್ಲ ಭೇದವಾ
ಕ್ಷಯಪವನಂಗಮಾತನ ಗದಾಪವನಂಗಮದೊಂದೆ ರಕ್ತಚ
ರ್ಚೆಯ ಪೊಲಸುಂಟೆ ದೈತ್ಯನಗದಾನಿಳನಲ್ಲದೊಡಾಕ್ಷಯಾನಿಳಂ ೬೪

[1] ಬಿಂಬವನದಿರ್ಚುವ (ಕಗ)

[1]ಸಮುದ[1] ಮಹಾವಿಜೃಂಭಣದೆ ಪೆರ್ಚಿದನಪ್ಪೊಡೆ ತೊಟ್ಟನಬ್ಜಜಾಂ
ಡಮನೊಡೆದಾಸ್ಯಮುಂ ಭುಜಮುಮಂಘ್ರಿಗಳುಂ ಪೊಱಮಟ್ಟಿರಲ್ಕೆ ವ
ಕ್ಷಮನವಲಂಬಿಸಿರ್ದ ಕಮಳಪ್ರಭವಾಂಡಮದೊಂದು ಚರ್ಮವ
ರ್ಮಮನಿಱೆಕೆಯ್ದುದೇವೊಗೞ್ವನದ್ಭುತಮಾಕೃತಿ ದಂತವಕ್ರನಾ ೬೫

ವ॥ ಎಂದು ಜೀಮೂತಂ ತನಗನ್ವರ್ಥನಾಮಮೆನೆ ಗಜಱೆ ಗರ್ಜಿಸೆ ಲೀಲೆಯಿಂ ದಾಲಿಸಿ

ಕಂ॥ ತನ್ನ ರಣರಾಗಭರಮಂ
ತನ್ನ ರಣೋಚ್ಚಂಡಜಯಯಶಃಪಾಂಡಿಮಮಂ
ತನ್ನಧರದಂತರುಚಿಗಳ್
ಕನ್ನಡಿಸೆ ಸರೋಷಹರ್ಷನಾದಂ ಕೃಷ್ಣಂ ೬೬

ವ॥ ಅನ್ನೆಗಂ

ಚಂ॥ ಪಡೆಯ ನಿಮಿರ್ಕೆಗೀ ಧರಣಿ ಸಾಲದು ಕೇತುಗಳೇೞ್ಗೆಗಂ ನಭಂ
ಕಡುಕಿಱಿದಾನಕಧ್ವನಿಯ ಪರ್ಬುಗೆಗೀ ಕಮಲೋದ್ಭವಾಂಡವಿ
ಟ್ಟಿಡೆಯೆನೆ ದಂತವಕ್ರದನುಜಂ ನಡೆತಂದಸಹಾಯಶೌರ್ಯದಿಂ
ಪೊಡರ್ವ ಮುರಾರಿಯಂ ಪ್ರಳಯಭೈರವನೆಂದು ಬಿಗುರ್ತು ನೋಡಿದಂ ೬೭

ವ॥ ಅಂತು ಮುರಾಂತಕನಂ ನಿರೀಕ್ಷಿಸಿ ರಾಕ್ಷಸೇಶ್ವರಂ ತಾನುಮೇಕಾಂಗವೀರನ ಪ್ಪಹಂಕಾರದಿಂದಿಂತೆಂದಂ

ಕಂ॥ ನೀನೊರ್ವನೆ ಪೊಣರ್ವೆ ಗಡಾಂ
ಸೇನಾನ್ವಿತನಾಗಿ ಕಾದುವಲ್ಲಿವರಂ ನೀಂ
ಗಾನವೆ ಪೇೞೆನ್ನೀ ಗದೆ
ತಾನೊಂದೆ ಗೆಲಲ್ಕೆ ಸಾಲದೇ ಹರಿ ನಿನ್ನಂ ೬೮

ವ॥ ಎಂದು ಗಂಡಮಚ್ಚರದಿಂ ದುರ್ಮುಖಂ ಪರಾಭವಿಸಿ

ಮ॥ಸ್ರ॥ ಪೊಱಮಟ್ಟತ್ತಬ್ಧಿಯಿಂ ಬಾಡಬಶಿಖಿಯೆನೆ ಕಾಂತಾರಸಂತಾನದಿಂದಂ
ಪೊಱಮಟ್ಟತ್ತುಗ್ರದಾವಾನಳನೆನೆ ಸಜಳಾಂಭೋದಸಂದೋಹದಿಂದಂ
ಪೊಱಮಟ್ಟತ್ತೊಂದು ವಜ್ರಜ್ವಲನಮೆನೆ ನಿಜವ್ಯೂಹದಿಂ ದೀಪ್ತದೇಹಂ
ಪೊಱಮಟ್ಟತ್ತಿಂದನಾಗಳ್ ನಿಜಭುಜಗದೆಯಂ ತೂಗುತುಂ ದಂತವಕ್ರಂ ೬೯

[1] ಸಮುರ (ಖ)

ಕಂ॥ ತುಂಗಭುಜೋದ್ಧೃತಗದೆಗಳ್
ಶೃಂಗಂಗಳಪಾಂಗನಿಱಿಸಲುದಯಾಸ್ತನಗೇಂ
ದ್ರಂಗಳ್ ತಮ್ಮೊಳ್ ಪೊಣರ್ದುವು
ಸಂಗತಮೆನೆ ಕೃಷ್ಣದಂತವಕ್ರರ್ ಪೊಣರ್ದರ್ ೭೦

ಇನಿಸಿನಿಸು ತಿರುಪಿ ಗದೆಗಳ
ನಿನಿಸಿನಿಸುಂ ಮುಟ್ಟಿ ಮುಟ್ಟಿ ಪೊಣರ್ದಿನಿಸಿನಿಸಂ
ಮನದೊಳಗಂ ಸೂಸದೆ ತೂಂ
ಕಿ ನೋಡಿದರ್ ದಿಟ್ಟಗಲಿಗಳೊರ್ವರನೊರ್ವರ್ ೭೧

ಪದಚಾರಿಗೆ ಪದಚಾರಿಯು
ನೊದವಿಸುತುಂ ಗಜಱಿತ ಗಜಱಿತುಂ ಗದೆಯುಂ ಬೀ
ಸಿದೊಡೊಡನೆ ಬೀಸುತುಂ ಕೃ
ಷ್ಣದಾನವರ್ ಪೊಕ್ಕು ಪೊಯ್ದರೊರ್ವರನೊರ್ವರ್ ೭೨

ಪುಗೆ ಪೊಕ್ಕಡಿಗಡಿಯುಂ ಜಂ
ಘೆಗೆ ಜಂಘೆಯನೂರುಗೂರುವಂ ಕಟಿಗೆ ಕಟೀ
ಯುಗಮನುರಕ್ಕುರವುಂ ನೆ
ತ್ತಿಗೆ ನೆತ್ತಿಯನೆತ್ತಿ [1]ಪೊಯ್ದು[1]ರೊರ್ವರನೊರ್ವರ್ ೭೩

ಬಳ್ಕೆ ನೆಲಂ ಪದಭರದಿಂ
ತುಳ್ಕೆ ಪಯೋರಾಶಿ ಗದೆಯು ಗಾಳಿಯು ಕೋಳಿಂ
ಶಳ್ಕಂಗಳ್ ಗದೆಯಿಂ ನೆಗೆ
ದುಳ್ಕಂಗಳನಿಱಿಸೆ ಕಾದಿದರ್ ಕಡುಗಲಿಗಳ್ ೭೪

ವ॥ [2]ಅಧಮುಂ ಮುಧ್ಯಮುಮೂರ್ಧ್ವಮೆಂಬ[2] ಭುವನಂಗಳ್ ಪೊಯ್ದ ಬಾಹಾಗದಾ
ಯುಧವಿಕ್ಷೇಪವಿಜೃಂಭಣಭ್ರಮಣದಿಂ ಪ್ರಕ್ಷೋಭಿಸಲ್ ಯುದ್ಧಕೇ
ಳಿಧುರೀಣರ್ ದನುಜಾರಿಯುಂ ದನುಜನುಂ ಸೂಱಿಪ್ಪೊಯ್ಗಳಿಂ ಧೊಟ್ಟುಧಿ
ಟ್ಟು ಧೊಗಲ್ ಧೊಪ್ಪು ಛಟಲ್ ಭುಗಿಲ್ಗರೆವಿನಂ ಪೊಯ್ದರ್ ಗದಾದಂಡದಿಂ
೭೫

---

1 ಪಾಯ್ದ (ಕ) 2 ಅಧಮುಂ ಮಧ್ಯಮುಪೂರ್ಧ್ವಮೆಂಬ (ಕ) ಅಧಮುಂ ಮಧ್ಯಮು
ಮೂರ್ಧ್ವಮೆಂಬ (ಗ)

ಕಂ|| ಚಲವಂ ಚಲಮುಣ್ಮಿಣ್ಮಿಂ
ಬಲಮಂ ಬಲಮೋಜೆಯೋಜೆಯಿಂ ಧೃತಿ ಧೃತಿಯಂ
ನಿಲವಂ ನಿಲವಳವಳಪಂ
ಗೆಲೆ ಗೆಲಲರಿದಾಯ್ತು ತಮ್ಮೊಳೊರ್ವರನೊರ್ವರ್ ೭೬

ಮ||ಸ್ರ|| ವಸುಧಾಚಕ್ರಂ ಪದಾಕ್ರಾಂತಿಯಿನದಿರೆ ಭುಜಾಕ್ರಾಂತಿಯಿಂ ದಿಗ್ಗಜಂಗಳ್
ದೆಸೆಯಿಂ ಪಿಂಮೆಟ್ಟೆ ವೃಂದಾರಕಸಮಿತಿ ಗದಾಕ್ರಾಂತಿಯಿಂ ದೂರದಿಂದೀ
ಕ್ಷಿಸೆ ಯುದ್ಧಂ ದಂತವಕ್ರಾಚ್ಯುತಜನಿತಮಗುರ್ವಾದು[1]ದಾಕ್ಷಿಪ್ತ[1] ಶೈಲ
ಪ್ರಸರಂ ಪ್ರೋಜ್ಜೃಂಭಿತಾಶಾಮುಖಮತಿಮಥಿತಾಂಭೋದರೋದೋಂತರಾಳಂ
೭೭

ಕಂ|| ಸಂಗಡಿಸಿ ಗದೆಯ ಘಟ್ಟನ
ದಿಂ ಗದೆಯ ಬಹುಪ್ರಹಾರದಿಂ ಪುಟ್ಟಿದ ಕಿ
ಚ್ಚಿಂ ಗಾಳಿಯುಮುಮರವಿಮಾ
ನಂಗಳನಡರ್ದತ್ತು ಭೀಮಮಾ ಸಂಗ್ರಾಮಂ ೭೮

ಚಂ|| ಸರದಿಯ ಬಾಡಬಂ ನಭದಿರಮ್ಮದಮಿಾಶನ ಲೋಚನಾಗ್ನಿ ಸಂ
ಹರಣದೊಳಟ್ಟಿ ಕೊಲ್ವ ದಹನಂ ನೆಗೆದೀ ಶಿಖಿಯಿಂ ಸಿಡಿಲ್ದು ಮೆ
ಯ್ಗರೆದ ಶಿಖಾಲಮಂಗಳೆನೆ ತಮ್ಮ ಗದಾಪರಿಘಟ್ಟನಾಗ್ನಿ ಬಾಂ
ಬರಮೊಗೆದತ್ತದೇಂ ಪಿರಿದೊ ಯುದ್ಧಮಧೋಕ್ಷಜದಂತವಕ್ರರಾ ೭೯

ಕಂ|| [2]ಅನಿಳಾನಳಾಂಬು[2] ಗಗನಾ
ವನಿಭೂತಾತ್ಮಕಮಜಾಂಡತತಿ ನಿಜತನುರೋ
ಮನಿವಿಷ್ಟವೆನಿಪ ಕೃಷ್ಣಂ
ಬಿನದದೆ ಸಮಸತ್ತ್ವನಂತೆ ಕಾದಿದನವನೊಳ್ ೮೦

ಅರಿಯಂ ಕೈಗಾವೊಡೆ ಪೊ
ತ್ತಿರಮಕ್ಕುಂ ಕೊಲ್ವ ಬಗೆ ಬರಲ್ ನಿಮಿಷದಿನೇ
ದೊರೆಯನುಮಂ ಕೊಲ್ಗುಮೆನಲ್
ಹರಿ ಕೊಂದಂ ಗದೆಯೊಳೆಜಗಿ ಪೊಯ್ದಾ ರಿಪುವಂ ೮೧

---

[1] ದಕ್ಷಿಪ್ತ (ಕಖಗ) [2] ಅನಿಲಾನಲಾರ್ಕ (ಕಖಗ)

ಪಾಯೆ ಭುಗಿಲೆಂದು ಮೂಗಿಂ
ಬಾಯಿಂ ಬಿಸುನೆತ್ತರಾಜಿಯೊಳ್ ಕೆಡೆದಾ ಡೈ
ತೇಯಂ ನೆನೆಯಿಸಿದಂ ಶ
ಕ್ರಾಯುಧನಿಹತಾಗ್ರಧಾತುನಿರ್ಝರಗಿರಿಯಂ ೮೨

ಮ॥ಸ್ರ॥ಮೊಗದಿಂ ಕಣ್ಣಿಂದೆ ಮೂಗಿಂದೊದವಿರೆ ರುಧಿರಂ ನೆತ್ತಿಯಿಂ ಕೋಳ್ಮಿದುಳ್ ಸೂ
ಸೆ ಗದಾದಂಡಪ್ರಹಾರಪ್ರಬಳಭುಜಬಲಾಟೋಪದಿಂದಂದು ಕೊಂದಂ
ನೆಗೆಟ್ದಿರ್ದಾ ದಂತವಕ್ರಾಸುರನನಸುರಸೇನಾಸುರಾಕಾರಕೋಪಾ
ಗ್ನಿಗಳ ಜ್ವಾಲಾಕಲಾಪೋಲ್ಬಣರಣರಸರಕ್ತಾಕ್ಷನಂಭೋರುಹಾಕ್ಷಂ ೮೩

ವ॥ ಅಂತು ದಂತವಕ್ರನಂ ಕೃತಾಂತವಕ್ತ್ರಮಂ ಪುಗಿಸಿ ತದ್ಬಲೋದ್ಭೂತಕ್ಷೋಭ
ಮಂ ಕಂಡು ವಿಶ್ವರೂಪನಾರೋಪಿತಚಾಪನಾಗಿ ಸವ್ಯಾಪಸವ್ಯಕ್ರಮದಿನತಿವೇಗದಿಂದೆಚ್ಚು

ಕಂ॥ ಕಾದಲುಮೋಡಲುಮರಿದೆನ
ಲಾ ದನುಜನ ಬಲಮನಸ್ತ್ರಪಂಜರದಿಂ ಸಂ
ಛಾದಿಸಿ ಬಟಿಕಭಯಮನಿ
ತ್ತಾದರಿಸಲ್ ತನಗದಾಯ್ತು ಪರಿವಾರಬಲಂ ೮೪

ವ॥ ಆಸನುಯದೊಳಪೂರ್ವ ಚತುರ್ವಲಲಕ್ಷ್ಮಿಯಿಂದೆಸೆವ ಕೌಮೋದಕೀ
ಲಕ್ಷ್ಮನಲ್ಲಿಗೆ ವಿಹಂಗರಾಜಂ ಬಂದು ತದ್ವಿಭೂತಿವೃತ್ತಾಂತಮಂ ಆತ್ಮಗತದೊಳ್ ತಿಳಿದು ವಿಕಸಿತಾನನಂ ಮುಕುಳಿತಾಂಜಲಿಯಾಗಿ ಕಂಜನಾಭಂಗೆ ತಾಂ ಪೋಗಿ ಬಂದ ವೃತ್ತಾಂತಮಂ ಪೇಟಲೆಂದಿಂತೆಂದಂ :—ಆನುಂ ಪ್ರಲಂಬಪ್ರಸೂದನನುಂ ಯಾದವಪರಿಸ್ಪಂದಮುಮಂ ಮುಂದಿಟ್ಟೊಡಗೊಂಡು ಪೋದೆವು. ಅನ್ನೆಗಂ ಮುನ್ನಮೆ ನಿಮ್ಮಾಜ್ಞೆಯಿಂದಾ ವಿಶ್ವಕರ್ಮಂ ನಿಜಕರ್ಮತತ್ತ್ವವೀ ನಗರ[1]ನಿರ್ಮಾಣದಿಂ[1] ಸಫಲಮಾದುದೆನೆ ಪೊಟಲನಳವಡೆ ಮಾಡಿ ಕೋಟಾಚಕ್ರಚತುರ್ದ್ವಾರಶೋಭೆಯಂ ಮಾಡಿ ಪ್ರತಿಗೃಹ[2]ಸಾದೃಶ್ಯಂ ದ್ವಾರಪಙ್ಕ್ತಿಯಿಂ[2] ತನ್ನ ಬಗೆಗೆ ಸೊಗಯಿಸಿದ ಕಾರಣದಿಂ ದ್ವಾರವತಿಯುಮೆಂಬ ಪೆಸರನಿಟ್ಟುಪೋದಂ ಅಲ್ಲಿ ನಮ್ಮ ಬೀಡಿನ ಸಮಸ್ತಜನಂಗಳ್ ತಮತಮಗೆ ಯೋಗ್ಯಮೆನಿಸಿದ ಮನೆಗಳಂ ಪೊಕ್ಕು ನಿಜನಿಜವ್ಯಾಪಾರದಿಂ ಸುಖದಿನಿರ್ದರ್. ಆ ಪೊಟಲ ಚೆಲ್ವದೆಂತೆನೆ

ಉ॥ ವಾರಿಧಿ ತನ್ನಗಳ್ ತನಗೆ ರೈವತಶೈಲಮುಪಾಂತಶೈಲಮಂ
ಭೋರುಹಲೋಚನಂ ತ್ರಿಭುವನಪ್ರಭು ತನ್ನಧಿನಾಥನೆಂದೊಡಿ
ನ್ನಾರಭಿವರ್ಣಿಸಲ್ ನೆಱೆವರೆಂಬಿನಮಿರ್ದುದುದಗ್ರಗೋಪುರಂ
ದ್ವಾರವತೀಪುರಂ ಜಿತಸುರೇಂದ್ರಪುರಂ ವಸುಧಾಂಘ್ರಿನೂಪುರಂ ೮೫

[1] ನಿರ್ಮಾಪಣದಿಂ (ಕಖಗ) [2] ಸಾದೃಶ್ಯದ್ವಾರಪಙ್ಕ್ತಿಯುಂ (ಕಗ)

ವ॥ ಆ ಪುರದ ಪೊಱವೊೞಲೊಳ್

ಮ॥ ಬಳಸಿರ್ದದ್ರಿಯ ಕಲ್ಗಳೆಲ್ಲಮವು ಪೊನ್ನುಂ ರನ್ನಮುಂ ಪೂಗೊಳಂ
ಗಳ ನೀರೆಲ್ಲಮನೇಕಸಿದ್ಧರಸಮುಂ ಪೀಯೂಷಮುಂ ಕೆಯ್ವೊಲಂ
ಗಳ ಸಸ್ಯಾವಳಿಯೆಲ್ಲಮೊಳ್ಗೞವೆಯುಂ ಪುಂಡ್ರೇಕ್ಷುವುಂ ನಂದನಂ
ಗಳ ಧಾತ್ರೀರುಹಜಾತಮೆಲ್ಲಮಮರೋರ್ವೀಜಾತಮುಂ ಚೂತಮುಂ ೮೬

ಚಂ॥ ನೆಗೞೆ ಕಳಸ್ವನಂ ಕಳಮದಿಂ ಕಳಮಕ್ಕೆ ವನಾಳಿಯಿಂ ವನಾ
ಳಿಗೆ ಕೊಳದಿಂ ಕೊಳಕ್ಕೆ ಕೃತಕಾಚಲದಿಂ ಕೃತಕಾಚಲಕ್ಕೆ ಪಿಂ
ಡಗಲದೆ ಪಾಱುತಿರ್ಪುವಿದಿರುಂ ಬೞಿಯುಂ ಶುಕಭೃಂಗಹಂಸಕೋ
ಕಿಗಳನುರಕ್ತಪಾಂಥಜನದಳ್ಕೆರ್ದೆ ಪವ್ವನೆ ಪಾಱುತಿರ್ಪಿನಂ ೮೭

ಮ॥ ನಳಿನೀತೀರಲತಾಗೃಹಂಗಳ ನೆೞಲ್ ನೇರ್ಪಟ್ಟಿರಲ್ ಪಟ್ಟು ಕಾ
ಲ್ಗಳನಿಂಬಿಂ ಪರಿಕಾಲೊಳಟ್ಟುತಿಮುದಂ ಕೈಸಾರೆ ಕೈಸಾರೆಯೊಳ್
ಬಳೆದಿಮ್ಮಾವಿನ ಬಾಳೆಯಾಳೆಗಳ ಪಣ್ಣಂ ಪಣ್ಣನೋರೊರ್ವರ್ಗೆ ಮೆ
ಲ್ದೆಳನೀರಿಂಟೆ ಪಥಾರ್ತರಿರ್ಪರಳಿಕೀರಧ್ವಾನದುದ್ಯಾನದೊಳ್ ೮೮

ಮಿಸುಪಂಗಂ ಬೆಮರೇಱೆ ನೀಳ್ದ ನಗೆಗಣ್ ಕೆಂಪೇಱೆ ಬಿಂಬಾಧರಂ
ನಸುಬೆಳ್ಪೇಱೆ ಪೊದೞ್ದ ಕಾಮರಸದಿಂ ರಾಗಾಬ್ಧಿ ನೀರೇಱೆ ವ
ಕ್ತ್ರಸರೋಜಂ ಪೊಳಪೇಱೆ ಸುಯ್ ನಿವಿಱೆ ಚಿತ್ತಂ ಕೂಡೆ ತಣ್ಪೇಱೆ ಸಂ
ತಸದಿಂ ನಂದನದಲ್ಲಿ ದಂಪತಿ ಮನೋಜಕ್ರೀಡೆಯಂ ಮಾಡುಗುಂ ೮೯

ಚಂ॥ ಮದನಸುಖಶ್ರಮಂ ತೊಲಗೆ ತಣ್ಣೆಲರಿಂದೆ ಬೞಿಕ್ಕೆ ಪೂಗಸ
ಜ್ಜೆದೊಳೊಲಿದುಯ್ಯಲಾಡುವಲರ್ಗೊಂಬಿನೊಳಾಯ್ದಲರ್ಗೊಯ್ವ ಚೂತಗೇ
ಹದೊಳಲರ್ವಚ್ಚಮಂ ತುಡುವ ಪೂಗೊಳದೊಳ್ ಜಲಕೇಳಿಯಿಂದಮಿ
ರ್ಪಿದಱೊಳೆ ನಾಡೆ ಪೊೞ್ತುಗೞೆಗುಂ ಬನದೊಳ್ ಪುರವಾರಕಾಂತೆಯರ್ ೯೦

ಮ॥ಸ್ರ॥ ಅಳಿಮಾಲಾಕೇಶಮಂ ಮೆಲ್ಲನೆ ಬರೆತೆಗೆದಬ್ಜಾನನಾಮೋದಮಂ ಪೀ
ರ್ದು ಲತಾಂಗಾಲಿಂಗಮಂ ಸಂಗಳಿಸಿ ಕೃತಕಶೈಲೇಂದ್ರಶುಂಭನ್ನಿತಂಬ
ಸ್ಥಳದೊಳ್ ತನ್ನಿರ್ಝರಾಂಬುಸ್ಮರರಸಮೊಸರ್ವಂತೆ ತೇಱಿ ನಿಚ್ಚಂ ವನಶ್ರೀ
ಗೊಲಮಂ ಮಾಡುತ್ತುಮಿರ್ಕುಂ ಚತುರವಿಟನವೋಲ್ ದಕ್ಷಿಣಾಶಾಸಮೀರಂ ೯೧

ಚಂ॥ ತೊಳಗುವ ರತ್ನಕೂಟತಟದೊಳ್ ಸುಱಿದಾಡುವ ಸೋಗೆ ಸೋಗೆಯಂ
ಕಳರವದಿಂದವಾಡಿಸುವ ದಂಪತಿ [1]ದಂಪತಿಯುಪ್ಪು[1] ಜೊಂಪವುಂ
ಜಳಲವದಿಂದೆ ಸಿಂಪಿಸುತುಮಿರ್ಪ ಸುಧಾಕರಕಾಂತ ನಿರ್ಝರಾವಳಿ
ಬಗೆಗೊಪ್ಪೆ ಮಾಱ್ಪುದು ಃಕಸುತ್ಕೃತಿಯಂ ಕೃತಕಾದ್ರಿಸಂಕುಳಂ ೯೨

ಉ॥ ಆಗಳುಮುಳ್ಳಲರ್ದಲರ್ವ ಪೂಗಳ ಕಂಪಿನ ಸೊಂಪಿನೆಟ್ಟಿರ
ಕ್ಕಾಗರವಾದ ಪುಷ್ಪಲತೆ ಪೂಗಿಡು ಪೂಮರಸೆಂಬಿವಂ ಮನೋ
ರಾಗದಿನಾಗಳುಂ ಮುಸುಱಿ ನಿಂದಳಿಮಾಲೆಯ ಗೀತನಿಸ್ವನಾ
ಭೋಗದೆ ಪುಷ್ಪವಾಟಿ ಬಗೆಗೊಳ್ವುದನಂಗನ ಗೀತಶಾಲೆವೋಲ್ ೯೩

ವ॥ ಅಂತು ಸೊಗಯಿಸುವ ಪೊಱವೊಱಲಿಂದೊಳಗೆ

ಮ॥ ನುಸುಳಲ್ಬಾರದು ಸಪ್ತಸಪ್ತಿಯ ವರೂಥಕ್ಕೆಂದುಮೆಂಬಂತೆ ಕಾ
ಳಸಗೊಂಡಾಗಸದೊಳ್ ನಿಜಸ್ಥಗಿತರತ್ನದ್ಯೋತವಿಸ್ತಾರದಿಂ
ದೆಸೆಯಂ ಚಿತ್ರಿಸುತಂ ವಿಶಾಲತರಶಾಳಂ ವಿಸ್ತೃತಾಟ್ಟಾಳಮು
ದ್ಧಸಮೀಚೀನಪಟಧ್ವಜಂ ಕನಕಕೋಟಾಮಂಡಲಂ ರಂಜಿಕುಂ ೯೪

ಮ॥ಸ್ರ॥ ಅದಱತೞೊಳ್ ಚಂಡಾಂಶುಬಿಂಬಂ ತೊಡರ್ದು ಮಿಡುಕದಿರ್ದಪ್ಪುದೆಂಬಂತಿ
ರಾತ್ಮಾ
ಗ್ರದೊಳೊಪ್ಪಂಬೆತ್ತ ಜೆಂಬೊಂಗಳಸದೆಳವಿಸಿಲ್ ಸಂತತಂ ವ್ಯೋಮಗಂಗಾ
ಬ್ಜದ ಪೆರ್ಚಂ ಮಾಡೆ ಕೂಟಧ್ವಜದ ದುಗುಲದಿಂ ಸಂಚರತ್ಖೇಚರೀಲೋ
ಲದುಕೂಲಭ್ರಾಂತಿಯಂ ಪುಟ್ಟಿಸುತುಮೆಸೆವುದಭ್ರಂಕಷದ್ವಾರಹರ್ಮ್ಯಂ ೯೫

ನಿಳಯಕ್ಕೋರೊಂದುಕೇಳೀವನಮುಮಮೃತಕಾಸಾರಮುಂ ವಾಟಮುಂ ತ
ನ್ನಿಳಯಂಗಳ್ ಮಾಡಮುಂ ಮಂಟಪಮುಮುಪರಿಯುಂ ತನ್ನಿವಾಸಂಗಳೊಳ್
ಗೋ
ಕುಳಮುಂ ಧಾನ್ಯಂಗಳುಂ ತೀವಿದನವನಿಧಿಯುಂ ತದ್ಗೃಹಸ್ಥರ್ ಕಳಾಪೇ
ಶಳರುಂ ಗಂಭೀರರುಂ ಭೋಗಿಗಳುಮೆನೆ ಪುರಶ್ರೀಕರಂ ರಂಜಿಸಿರ್ಕುಂ ೯೬

ಚಂ॥ ಘನತರಮಾದ ಕತ್ತುರಿಯ ನೀರ್ದಳಿಪಂ ಪುದಿದಿರ್ದ ತೋರಮು
ತ್ತಿನ ಕಡೆ ತಳ್ತ ಹೇಮಮಯಪುಷ್ಪದ ಪೂವಲಿ ನೀಲಚೀನಕೇ
ತನತತಿ ಮಾಲೆಗೊಂಡ ಮಣಿದೋರಣಮೆಂಬಿವು ಬೀದಿಬೀದಿಯೊಳ್
ಮನೆಮನೆಯೊಳ್ ವಿರಾಜಿಸೆ ವಿರಾಜಿಸುತಿರ್ದುದು ತತ್ಪುರಾಂತರಂ ೯೭

---

1 ದಮ್ಪತಿಯುಪ್ಪೆ (ಮೊಅ)

ಮ॥ ಘನಕಾಳಾಗರುಧೂಪಧೂಮಮಳಿನವ್ಯೋಮಂ ತ್ರಿಸಂಧ್ಯಾನಕ
ಧ್ವನಿಶಬ್ದಾತ್ಮಕದಿಕ್ತಟಂ ಶಿಖರಮಾಣಿಕ್ಯಾತಪೋಜ್ಜೃಂಭಿತ
ದ್ಯುನದೀವಾರಿಜಮೊಪ್ಪುತಿರ್ಪುದು ಸುರಾಗಾರೋತ್ಕರಂ ನರ್ತಕೀ
ಜನತೋಲ್ಲಾಸಿತಕೇಕರಂ ವಿವಿಧಲೀಲೋದ್ಯಾನಶೋಭಾಕರಂ ೯೮

ಚಂ॥ ಅವಿರಳಮಾದ ಕೇಳಿವನಕೇಳಿ ಸರೋವರಶೋಭೆಯಿಂ ಸುಧಾ
ಧವಳಿತರಮ್ಯಹರ್ಮ್ಯನಿಕುರುಂಬಕದಿಂ ವರವಾರಕಾಮಿನೀ
ವಿವಿಧವಿಡಂಬದಿಂ ಸೊಗಯಿಕುಂ ವಿಟವೃಂದವಿಹಾರಿಗಳ್ ಮನೋ
ಭವಜಯಕಾರಿಗಳ್ ಹೃದಯಹಾರಿಗಳಲ್ಲಿಯ ಸೂಳೆಗೇರಿಗಳ್ ೯೯

ಕಂ॥ ಕಳೆ ಕರ್ಪೂರದ ಕಸವಂ
ತಳಿ ಕತ್ತುರಿನೀರನಿಕ್ಕು ಮುತ್ತಿನ ಕಡೆಯಂ
ಬೆಳಗು ಮಣಿದೀಪಮಂ ಪೊಗೆ
ಗೊಳಿಸಗರುವನೆಂಬರಲ್ಲಿ ಸೂಳೆವಳರ್ಕಳ್ ೧೦೦

ಚಂ॥ ಪೊಸತೆನಿಪೊಂದು ಪಕ್ವಫಲಮೆಂದರುಣಾಧರಮಂ ಕರ್ದುಂಕಲೋ
ದಿಸುತಿರಲೌಡುಗರ್ಚಿ ಭರದಿಂ ನಿಲೆ ತತ್ಫಲಮೆತ್ತವೋದುದೆಂ
ದಸಿಯಳ ಹಸ್ತದಿಂದಿೞಿದು ತನ್ಮಣಿಕುಟ್ಟಿಮದೊಳ್ ತೊಳಲ್ದು ವೀ
ಕ್ಷಿಸುವತಿಮುಗ್ಧರಾಜಶುಕಮೊಪ್ಪುಗುಮಾ ಗಣಿಕಾಗೃಹಂಗಳೊಳ್ ೧೦೧

ಮುನಿದುಱಿದಿರ್ದು ಪೋಪುಱಿದು ಪೋದೊಡೆ ಪಿಂದನೆ ಬರ್ಪ ಬಂದು ಕ
ಣ್ಬನಿ ಕರೆಗಣ್ಮೆ ಕಾಲ್ವಿಡಿವ ಕಾಲ್ವಿಡಿದೋಪನನೋಪಳುಯ್ದ ನಂ
ದನತರುಮಧ್ಯಕೇಳಿಗೃಹಮಂ ಪುಗುತಿರ್ಪ ವಿಚಿತ್ರಚಿತ್ರದಿಂ
ಜನಿಯಿಪುವಾ ಸುಧಾಗೃಹದ ಭಿತ್ತಿಗಳುರ್ವಿಗಪೂರ್ವಭಿತ್ತಿಯಂ ೧೦೨

ಕಂ॥ ಟಂಕೃತಿ ಮಿಗೆ ಜೇವೊಡೆಯು
ತ್ತುಂ ಕರ್ಬಿನ ಬಿಲ್ಲನರಲ ಸರಲಂ ತೂಗು
ತ್ತುಂ ಕರಮೆಸೆದಲ್ಲಿ ತೊಳ
ಲ್ವಂ ಕಡುಬಿಲ್ಗಾಱನತನುವೆಂಬ ತಳಾಱಂ ೧೦೩

ಚಂ॥ ಸುದತಿಯುರಲ್ಕೆಱಂದಿರುಳೊಳಿಕ್ಕಿದ ಚಂದನಪಂಕದಣ್ಪು ಸೂ
ಡಿದ ಪೊಸಜಾದಿ ತೊಟ್ಟ ನವಮೌಕ್ತಿಕಮಂಡನಮೊಪ್ಪೆ ನೇತ್ರಕೌ
ಮುದಿಯೊಳಮಾಸ್ಯಚಂದ್ರಮನೊಳಂ ಬೆಳಗುತ್ತಿರೆ ಶುಕ್ಲಪಕ್ಷಮ
ಲ್ಲದೆ ಸಲೆ ಕೃಷ್ಣಪಕ್ಷಪರಿವರ್ತನಮಿಲ್ಲೆನಿಕುಂ ಪುರಾಂತದೊಳ್ ೧೦೪

ಪುರದೊಳಗಲ್ಲಿಗಲ್ಲಿಗೆರಡುಂ ತೆಱದಿಂದೆಸೆವೊಳ್ಪಿನಿಂದವಂ
ಬರಚರಕಾಮಿನೀತತಿಗೆ ಚಂದನದಣ್ಪಿನ ಸೊಂಪನೀಯುತಂ
ಸಿರಿಗೆ ನಿವಾಸಮಾದ ಸಿರಿಯಂಗಡಿಗಳ್ ಕರವೊಪ್ಪಿ ತೋರ್ಪುವಾ
ಪುರವರಲಕ್ಷ್ಮಿ ತೊಟ್ಟ ಪೊಸಮುತ್ತಿನ ಹಾರದ [1]ವೊತ್ತದಂದದಿಂ[1] ೧೦೫

ಕಂ|| ಅಗಣಿತಧನಂಗಳಿಂದಂ
ನಗುತಿರ್ಕುಂ ಮೇರುನಗಮನೆನೆ ನೆಗೞ್ದಳಕಾ
ನಗರೀಶಂ ಬರ್ಕುಮೆ ತ
ನ್ನಗರದ ಕಡೆಪಟ್ಟ ಪರದರೊರೆಗಂ ದೊರೆಗಂ ೧೦೬

ದೆಸೆಗಳ್ ನಿಜಾಂಶುವಿಂ ರಂ
ಜಿಸುತಿರೆ ಪುಂಜಿಸಿದ ಪೊನ್ನ ಪುಂಜಿಕೆಯಿಂದಂ
ಕೊಸಗಿನ ಮರದುಱುಗಲರ
ಲ್ದೆಸೆವಂತೆಸೆದಿರ್ಪುದಲ್ಲಿ ಬಜ್ಜರವಸರಂ ೧೦೭

ಅಜರಾಮರತ್ವಮಂ ಪೌ
ರಜನಂಗಳ್ಗೀವ ತನ್ನ ವಿವಿಧೌಷಧಿ ನಾ
ಕಜನಗದ ಮಹೌಷಧಿಗಳೆ
ನಿಜಸೃಷ್ಟಿಯೊ[2]ಳೆನಿಪುವಲ್ಲಿ[2] ಗಂದಿಗವಸರಂ ೧೦೮

ಉ|| ಭೀಕರಬಾಡಬಾಗ್ನಿಯ ದವಾಗ್ನಿಯ ತೀವ್ರತೆಗಳ್ಕಿ ಬಂದು ನಿ
ರ್ವ್ಯಾಕುಳಮಿಾಗಳಿಲ್ಲಿ ನೆಲಸಿತ್ತ ಜಳಾತ್ಮಕರೂಪಮಾಗಿ ರ
ತ್ನಾಕರಸಂಕುಳಂ ಶಿಖರಿನಾಮವಿವರ್ಜಿತಮಾಗಿ ರೋಹಣಾ
ನೀಕ[3]ಮೆನಲ್ಕೆ[3] ರನ್ನವಸರಂ ಬಗೆಗಚ್ಚರಿಯಂ ನಿಮಿರ್ಚುಗುಂ ೧೦೯

ಮ|| ಸಲೆದೋಷಾಕರನಂ ಕಳಂಕಯುತನಂ ತಾಳ್ದಿರ್ಪುದೀ ವ್ಯೋಮಮಂ
ಡಳಮೆಂದಂತದನೊಲ್ಲದಪ್ರತಿಮವಾರಸ್ತ್ರೀಜನಾಸ್ಯೇಂದುಸಂ
ಕುಳಮಂ ತಾಳ್ದಿದುದಿಂತಿದೆಂದು ಪುರದೊಳ್ ಬಂದಿರ್ದ ತಾರಾಗಣಂ
ಗಳಿವೆಂಬಂತಿರೆ ಕಂಚುಗಾಱವಸರಂ ಮಾಳ್ಕುಂ ಮನೋರಾಗಮಂ ೧೧೦

ಕಂ|| ಸುರತರು ಕುಡುಮಂಬರದೊಳ್
ಪರಿಪಾಟಿಚ್ಛಾಯೆ ನೆಯ್ಗೆ ನೂಲಿಂ ರಂಗಿಂ
ದೊರೆಕೊಳ್ಳದೆನಿಪ ದಿವ್ಯಾಂ
ಬರಂಗಳಿಂದೆಸೆವುವಲ್ಲಿ ದೂಸಿಗವಸರಂ ೧೧೧

[1] ಮುತ್ತಿನಂದದಿಂ (ಗ) [2] ಳೆಸೆದುವಲ್ಲಿ (ಕಖಗ) [3] ಮಿರಲ್ಕೆ (ಕಖಗ)

ಉ॥ ಒಳ್ನಡು ಬಳ್ಕೆ ಪೆರ್ಮೊಲೆ ವಿಜೃಂಭಿಸೆ ಕಂಕಣಕಿಂಕಿಣೀರವಂ
ಗಳ್ನಸು ಪೊಣ್ಮೆ ಹಾರಲತೆ ನರ್ತಿಸೆ ಸುಯ್ ನೆಲೆವೆರ್ಚೆ ಕುಂತಳಂ
ಗಳ್ನಿಮಿರ್ದಾಡೆ ಘರ್ಮಜಲಮುಣ್ಮೆ ವಿರಾಜಿಸುತಿರ್ಪರಲ್ಲಿ ತೋ
ಳ್ಗಳ್ನಲಿದೊಪ್ಪೆ ನೀಳ್ದಡುಗಿ ಘಟ್ಟಿಸುಗುಟ್ಟಿನ ಘಟ್ಟಿವಳ್ತಿಯರ್ ೧೧೨

ಮ॥ ಬಗೆಗೊಳ್ವಿಸ್ಮಯಲೋಕಮಾತ್ರದೊಳೆ ಪೂಣ್ದೀ ಲೋಕಮಂ ಗೆಲ್ದ ಕಂ
ತುಗೆ ಪೂಜಾರ್ಥಮಿದೆಂದು ಸುಯ್ಗೞಗುವುನ್ಮತ್ತಾಳಿಯಿಂ ಬೀರದೇ
ಱ್ಗಗಳಂ ಪಾಡಿಸುತುಂ ಜಯಧ್ವಜಮನೆತ್ತಿರ್ಪಂತಿರ್ದ ಮಾ
ಲೆಗಳುಂ ತೋಳ್ಗಳುಮೊಪ್ಪೆ ಕಣ್ಗೊಳಿಸುತಿರ್ಕುಂ ಪುಷ್ಪಲಾವೀಜನಂ ೧೧೩

ಕಂ॥ ಮಸೃಣಮುದಾಳಿಸ್ವನಮು
ತ್ಕುಸುಮಿತವನರಾಜಿಯಂತೆ ವಿಪ್ರಜನಾಳೀ
ವಿಸರದ್ವೇದಸ್ವರದಿಂ
ಡೆಸೆದಿರ್ಕುಂ ಬ್ರಹ್ಮಪುರಿಯ ಸೌಧಸಮೂಹಂ ೧೧೪

ಮ॥ ಅವನೀದೇವಸಮಾಜಮೋದುವುದನಾದಂ ಕೇಳ್ದು ಕೇಳ್ದೋದುತಿ
ರ್ಪುವು ವೇದಂಗಳನೋದೆ ತಪ್ಪುವಿಡಿದಂತೇವಾಸಿಗಳ್ಗೋದುಮೇ
ಱ್ಪುವು ತಮ್ಮೋದಿನ ಬಲ್ಮೆಯಿಂ ದ್ವಿಜವರರ್ಗಾನಂದಮಂ ಮಾಡುತಿ
ರ್ಪುವು ಕೇಳೀಶುಕಸಾರಿಕಾತತಿಗಳುರ್ವೀದೇವಸದ್ಮಂಗಳೊಳ್ ೧೧೫

ಚಂ॥ ಚಮರ ಪೊದಱ್ಕ ಸಂಪದದ ಬೊಂಬುಳಿ ಸತ್ಯದ ಬಿತ್ತರಂ ವಿವೇ
ಕದ ನೆರವೀವ ಮೈಮೆ ದಯೆಯುನ್ನತಿ ಧರ್ಮದ ಪೆರ್ಮೆ ಸಜ್ಜನ
ತ್ವದ ವಿಪುಲತ್ವಮಾರ್ಪಿನ ಪೊಡರ್ಪು ವಿಳಾಸದ ದೇಸೆ ಕೂಡೆ ಭೋ
ಗದ ಕಣಿಯಾಯ್ತು [1]ತಾಂ[1] ತನಗೆ ಪೌರಜನಂ ಸ್ಥಿರಸೌಖ್ಯಭಾಜನಂ ೧೧೬

ವ॥ ಆ ಪುರದ ರಮ್ಯಪ್ರದೇಶದೊಳ್

ಕಂ॥ ಜಲಧರತತಿಯಂ ನಿಜಮೇ
ಖಲೆಯೊಳ್ ತಳೆದಿರ್ದ ಮೇರುವೆನೆ ಕನಕಮಯಂ
ವಿಲುಳಿತ ಪರಿಖಾಲಹರೀ
ವಲಯಿತಮರಮನೆಯ ಕೋಂಟೆ ಸೊಗಯಿಸುತಿರ್ಕುಂ ೧೧೭

---

1 ತಂ (ಕಖಗ)

ಸತತಂ ಪೊಂಗಳಸೆದ ದೀ
ಧಿತಿಯುನ್ನತಿಗಳ್ಕಿ ಬಳ್ಕಿ ಕೆಲಸಾರ್ದರ್ ದಿವಾ
ಪತಿ ದಕ್ಷಿಣಗತ್ಯುತ್ತರ
ಗತಿಯಾದಂ ಪೊಗಲ್ವಿರಳವೆ ಬಾಗಿಲ್ವಾಡಂ ೧೧೮

ವ|| ಅಲ್ಲಿಂದೊಳಗೆ

ಕಂ|| ಮಂದರದಳನತ್ರಾಸದೆ
ಬಂದಿರ್ದುವು ಧವಳಮೇಘವೃತಕುಲಗಿರಿಗಳ್
ಮಂದರಧರನಿರ್ಪೆಡೆಗೆಂ
ಬಂದದೆ ಸೊಗಯಿಪುವು ಸೌಧಶಾಲೆಯ ಕರಿಗಳ್ ೧೧೯

ರವಿರಥತುರಗಮನುಚ್ಚೈ
ಶ್ರವಮುಂ ಪರಿಪಾಟಿಯಲ್ಲಮಿವಱತೊಳ್ ರೋಮ
ಚ್ಛವಿಗಮೆನಲ್ ಕಣ್ಗೆಸೆದಿ
ರ್ಪುವು ಪಳುಕಿನ [1]ಮಂದುರಂಗಳೊಳ್[1] ತುರಗಂಗಳ್ ೧೨೦

ಸೊದೆವೆಳಗಿನ ಬೆಳ್ದಿಂಗಳ
[2]ಸೊದವಿಸುಗುಂ[2] ಸೆಜ್ಜೆಯೋಲಗದ ಶಾಸ್ತ್ರಾಗಾ
ರದ ಕೊಟ್ಟಾರದ ಭಂಡಾ
ರದ [3]ಬಾಸಣ[3]ದನ್ನವಾಸದುಪ್ಪರಿಗೆಗಳುಂ ೧೨೧

ಮ|| ಸ್ಮರರಾಜಂ ವನಪಾಲನಾಗೆ ರತಿಲಾವಣ್ಯಪ್ರವಾಹೋತ್ಕರಂ
ಪರಿನೀರಾಗೆ ನಿರಂತರಂ ಋತುಗಳಾಱುಂ ಕಾಪಿನಾಳಾಗೆ ಚೈ
ತ್ರರಥೋದ್ಯಾನದ ಚೆಲ್ವನೊತ್ತರಿಸಿ ಕೇಳೀಶೈಲ ಕೇಳೀಸರೋ
ವರ ಕೇಳೀಗೃಹಮೆಂಬಿವಂ ತಳೆದು ಕೇಳೀನಂದನಂ ರಂಜಿಕುಂ ೧೨೨

ಕಂ|| ಪುದಿದುದ್ಯಾನದೊಳಂತವು
ರದ ಬೆಳ್ಳಿಯ ಬಳ್ಳಿಮಾಡಮೆಸೆದುವು ಪಲವೊ
ರ್ಮೊದಲಲೆವ ಪಾವನನಿಂದು
ರ್ಬಿದ ವಾರ್ಧಿಯೊಳೊಗೆದ ಫೇನಪಿಂಡಂಗಳವೋಲ್ ೧೨೩

---

[1] ಮಂಡಪಂಗಳೊಳ್ (ಕಗ) [2] ಒದವಿಸುತಿರೆ (ಕಖಗ) [3] ಬಾಣಸ (ಖಗ)

ಆ ಮಾಡಂಗಳ ನಡುವು
ಡ್ಡಾಮಂ ಕರುಮಾಡವೊಪ್ಪುಗುಂ ಧವಳಾಭ್ರ
ಸ್ತೋಮಂ ಬಳಸಿರೆ ನಡುವಭಿ
ರಾಮತೆಯಿಂ ಹೇಮದಚಳವೊಪ್ಪುವ ತೆಱದಿಂ ೧೨೪

ನೀಲದ ಕೇರ್ಗಳ್ ನವಮು
ಕ್ತಾಲಂಬೂಷದ ನೆೞಲ್ಗಳಂ ತಳೆದಿರ್ದೇಂ
ಲೀಲೆಯನಾಂತುವೊ ಪೂತ ತ
ಮಾಲಲತಾಜಾಲದಂತೆ ಹರ್ಮ್ಯಾಂತರದೊಳ್ ೧೨೫

*ಪಿಂಗಳ ಸುವರ್ಣಲಂಬೂ
ಷಂಗಳ ಮಾರ್ಪೊಳೆವು ತಳ್ತ ಪಜ್ಜೆಯ ಕಂಭಂ
ಭಂಗಿವಡೆದಿರ್ದುವಲ್ಲಿ ಬೆ
ಡಂಗಿಂ ಕುಟ್ಮಳಿತಮಾದ ಚಂಪಕಲತೆವೋಲ್ ೧೨೬

*ಅದಱ ವಿಚಿತ್ರಮಣಿಸ್ತಂ
ಭದ ಹಿಮಕರಕಾಂತಪುತ್ರಿಕಾತತಿ ನಿಜಕಾಂ
ತಿದುಕೂಲದಿಂದಲಂಕರಿ
ಪುದುಪಾಂತದ ನೀಲಪುತ್ರಿಕಾಸಮುದಯಮಂ ೧೨೭

*ಪಳುಕಿನ ಕುಟ್ಟಿಮದೊಳ್ ಮಾ
ರ್ತೊಳಗುವ ಹರಿನೀಲಮಣಿಯ ಸೂಸಕದ ನೆೞ
ಲ್ಗಳನಸಿತಾಹಿಗಳೆಂದೊಸೆ
ದೆಳಸುವ ದೀಹದ ನವಿಲ್ಗಳೊಪ್ಪುಗುಮವಱತೊಳ್ ೧೨೮

ವರವನಿತಾಜನದಲತೆಗೆ
ವೊರೆದಡಿವಜ್ಜೆಗಳನಾಂತು ಪಜ್ಜಳಿಸುವುದುಂ
ಮರಕತರಂಗಮುಮಂ ತಾ
ವರೆಗೊಳನೆಂದಲ್ಲಿ ಸುೞ್ವ ಹಂಸೆಗಳೆಸೆಗುಂ ೧೨೯

ಸೊಗಯಿಪ ಚೌಕದ ಬಿಡುಮು
ತ್ತುಗಳೊಳ್ ಪೂವಲಿಯ ಮಲ್ಲಿಕಾಮುಕುಳಶ್ರೀ
ಣಿಗಳಂ ಭಾವಿಸಲಱಿಯದೆ
ಮೊಗಸುತ್ತಿಹುವಗರುಧೂಪಧೂಮುಕ್ಕಳಿಗಳ್ ೧೩೦

---

* ಈ ಗುರುತುಳ್ಳ ೪ ಪದ್ಯಗಳು (ಖ) ಪುಸ್ತಕದಲ್ಲಿಲ್ಲ

ಶರ್ವಾಣೀಶಗೃಹಕ್ಕೆ ಸು
ಪರ್ವೇಂದ್ರಗೃಹಕ್ಕೆ ಮೀಱಿಯದಾತ್ಮೀಯಕಳಾ
ಸರ್ವಜ್ಞತೆಯಂ ಮೆಱೆದಂ
ಗೀರ್ವಾಣಸ್ಥಪತಿ ನಿಮ್ಮ ಗೃಹವಿರಚನೆಯಿಂ ೧೩೧

*ಮ॥ ಅಹಿರಾಜಂ ದ್ವಿಸಹಸ್ರಜಿಹ್ವನಜಂಯುಂ ವ್ಯಾವರ್ಣಿಸಲ್ ಬಲ್ಲನೇ
ಮಹಿಯೊಳ್ ಮಾನವನೊಂದೆ ನಾಲಗೆಯೊಳಂ ತದ್ಭೂಭುಜಾಗಾರಮಂ
ಬಹುವಿಸ್ತಾರಮನಿಂದ್ರಪುಷ್ಪಕವಿಮಾನಾಕಾರಮಂ ತನ್ಮಹಾ
ಮಹಿಮಾಧಾರಮನತ್ಯುದಾರಮನಿಳಾಜೇತಶ್ಚಮತ್ಕಾರಮಂ ೧೩೨

ವ॥ ಎಂದು ಪುರಮನಭಿವರ್ಣಿಸಿ ಸುಪರ್ಣಂ ಬೀೞ್ಕೊಂಡು ಪೋಪುದುಂ

ಮ॥ ಉರುಚಾತುರ್ವಲಚಕ್ರದಿಂ ವಿವಿಧಶಸ್ತ್ರಾಸ್ತ್ರಪ್ರಭಾಚಕ್ರದಿಂ
ದ್ವಿರದಸ್ಯಂದನಕೇತುಚಕ್ರದಿನಿಳಾಚಕ್ರಂ ದಿಶಾಚಕ್ರಮಂ
ಬರಚಕ್ರಂ ನೆಱೆತೀವೆ ಮೇರುವ ಗುಹಾಚಕ್ರಕ್ಕೆ ವಾದಿತ್ರಚ
ಕ್ರರವಂ ಮಾರ್ದನಿವೀಱೆ ಚಕ್ರಧರನೆಟ್ಟಿಂದಂ ಮಹೋತ್ಸಾಹದಿಂ ೧೩೩

ವ॥ ಅಂತು ಬಂದು ಸಕಲಶುಭಮುಹೂರ್ತದೊಳ್ ಪುರಪ್ರವೇಶಮಂ ಮಾಡಿ

ಮ॥ಸ್ರ॥ ಗರುಡಂ ಪೇೞ್ದಂದದಿಂದೊಪ್ಪುವ ನಿಜಪುರಮಂ ಕೂಡೆನೋಡುತ್ತುಮೆತ್ತಂ
ತರಳಾಪಾಂಗಾಂಶುಜಾಳಂ ದ್ವಿಗುಣಿಸೆ ನಗರಸ್ತ್ರೀಜನಂ ಸೂಸುವಾಪಾಂ
ಡುರಶೇಷಾನೀಕಮಂ ಕೈಕೊಳತುಮತುಳಗೀತಾನಕಧ್ವಾನಮುಣ್ಮು
ತ್ತಿರೆ ಪೊಕ್ಕಂ ವಾಸವಾವಾಸವನಿೞಿಪ ನಿಜಾವಾಸಮಂ ವಾಸುದೇವಂ ೧೩೪

ಇದು ಸಮಸ್ತಕಮಲಭವಾಂಡಮಾಲಾಘಟಿತಾರಘಟ್ಟಘಟನಾ
ಸ್ವತಂತ್ರನಿಜಸ್ವರೂಪನಿರೂಪಣಚಕಿತಸಕಲಾಮ್ನಾಯತಂತ್ರ
ಲಕ್ಷ್ಮೀಕಾಂತಶ್ರೀಪಾದಭಕ್ತಿಯುಕ್ತ ಸುಕವೀಂದ್ರರುದ್ರ
ಪ್ರಣೀತ ಶ್ರೀಜಗನ್ನಾಥವಿಜಯಮಹಾಪ್ರಬಂಧದೊಳ್
ಕಾಲಯವನದಹನ ದಂತವಕ್ರವಿಕ್ರಮಾಡಂಬರ
ತತ್ಸಂಹರಣ ದ್ವಾರಕಾನಗರನಿರ್ಮಾಪಣ
ತತ್ಪುರಪ್ರವೇಶವರ್ಣನಂ
ನವಮಾಶ್ವಾಸಂ
ಸಂಪೂರ್ಣಂ

---

* ಈ ಪದ್ಯವು (ಖಗ) ಪುಸ್ತಕಗಳಲ್ಲಿಲ್ಲ

ದಶಮಾಶ್ವಾಸಂ

ಕಂ॥ ಶ್ರೀಪಾದಕಲ್ಪಪಾದಪ
ಮಾಪನ್ನಾಶ್ರಿತಸುಖಪ್ರದಂ ಭುಜಭುಜಗಂ
ವೈಪಕ್ಷಜೀವಪವಮಾ
ನಾಪಹಮೆನೆ ಕೃಷ್ಣನಿರ್ದನಾ ದ್ವಾರಕೆಯೊಳ್ ೧

ವ॥ ತದನಂತರಂ

ಕಂ॥ ದೇವಜ್ಯೇಷ್ಠನ ಬೆಸದಿಂ
ರೈವತಕಂ ತಂದು ತನ್ನ ಮಗಳಂ ಕುಡಲಾ
ರೇವತಿಯೊಳ್ ಬಲರಾಮಂ
ವೈವಾಹೋತ್ಸವದೆ ನೆರೆದು ಸುಖದಿಂದಿರ್ದಂ ೨

ವ॥ ಅನಂತರಮೊಂದುಸಮಯದೊಳ್

ಮ॥ ಮದಿರಾಪಾಂಗವಧೂವಿಳಾಸರಸತೋಯಂ ಚಂಚಲಚ್ಚಾಮರೋ
ನ್ಮದಹಂಸಂ ಪ್ರತಿಹಾರಸಾರಸರವಂ ನಾನಾಮಹೀಪಾಲಮೌ
ಳಿದಳತ್ಕೋಕನದಂ ಸಭಾಂಬುರುಹಷಂಡಂ ರುಕ್ಮಿಣೀಲಕ್ಷ್ಮಿಗಾ
ಸ್ಪದಮಪ್ಪಂತೆವೊಲೊಪ್ಪುವೋಲಗದೊಳಿರ್ದಂ ಯಾದವಾಧೀಶ್ವರಂ ೩

ವ॥ ಆಗಳ್

ಮ॥ಸ್ರ॥ ಬಿಸಿಲಂ ಬೆಳ್ದಿಂಗಳೊಟ್ಟೈಸಿದುದೊ ಪಗಲೊಳಂ ಚೋದ್ಯಮೆಂಬಂತು ಜೆಲ್ವಾ
ಗಸದಿಂ ತಳ್ಪೊಯ್ವುದುಂ ಕಂಡಿದು ಖಚರಮಕೂಲಾಂಬರದ್ಯೋತಮೋ ವ್ಯೋ
ಮಸರಿಡ್ಡಿಂಡೀರಪಿಂಡಪ್ರಭೆಯೊ ದಿಗಿಭದಂತಾವಳೀಚ್ಛಾಯೆಯೋ ಭಾ
ವಿಸಲೆಂದಾವೇಗದೊಳ್ ವಿಸ್ಮಯರಸವಿಸರಸ್ಯಂದಿಯಾದಂ ಮುಕುಂದಂ ೪

ಕಂ॥ ಕಣ್ಣಳ್ಕೆಯುಮಾಶ್ಚರ್ಯವಿ
ಷಣ್ಣರದೆಂತಾನುಮರೆಬರೀಕ್ಷಿಸೆ ನಭದೊಳ್
ತಿಣ್ಣಮೆನಲ್ [1]ಪಸರಿಸಿದ
ಕ್ಷುಣ್ಣ[1] ಪ್ರಭೆಯೊಳಗೆ ಪೊಳೆದುದೊಂದಾಕಾರಂ ೫

ವ॥ ಅನ್ನೆಗಂ

ಉ॥ ಶಾರದಪಾಂಡುಮೇಘಮೆ ತಟಲ್ಲತೆಯಂ ಭಗಣಂಗಳಂ ಸ್ಫುರ
ತ್ತಾರಕರಾಜಮಂಡಲಮನಾಂತಿಱಿಸಂತಿರೆ ಪೊನ್ನ ಮುಂಜೆ ಮು
ಕ್ತಾರುಚಿರಾಕ್ಷಮಾಲೆ ಶಶಿಕಾಂತಕಮಂಡಲು ತನ್ನ ಪಾಂಡುರಾ
ಕಾರದೊಳೊಪ್ಪೆ ನಾರದನದೇನಿಱಿತಂದನೊ ನೀರದಾಧ್ವದಿಂ ೬

ಕಂ॥ ಪೂಮರದೊಳ್ ನವಕುಸುಮರ
ಜೋಮಯವಿಚರನ್ಮದಾಳಿಮಾಲೆಗಳೆಸೆವಂ
ತಾ ಮುನಿಬೃಂದಾರಕನೊಳ್
ಹೇಮಪಿಶಂಗಸ್ಫುರಜ್ಜಟಾಳಿಗಳೆಸೆಗುಂ ೭

ಪರಿವೃದ್ಧಿವೆತ್ತು ಬೀೞ
ಲ್ವರಿದುದುರಸ್ಸ್ಥಳದೊಳೀಮುನೀಂದ್ರನ ಹೃದಯ
ಸ್ಫುರದಮಳಸತ್ವಮೆನೆ ಮುನಿ
ವರನೊಳ್ ಯಜ್ಞೋಪವೀತತತಿ ಸೊಗಯಿಸುಗುಂ ೮

ಬಂದಪುದು ಮುನಿಪನೊಡನೆಯ
ದೊಂದು ವಿಯನ್ನದಿಯ ಕಿಱುಗಡಲ್ ಕೌತುಕಮಂ
ಬಂದದೆ ದುಗುಲದ ಕೌಪೀ
ನಂ ದಂಡಾಗ್ರದೊಳದೊಂದು ಯತಿಪತಿಗೆಸೆಗುಂ ೯

ಕುಂದಧವಳಾಂಗರುಚಿ ನೆಗೆ
ತಂದು ಶುಚಿಭೂತವಾಗಿ ವೃತ್ತಾಕೃತಿಯಿಂ
ಬಂದುದು ಮುನಿಪನ ಮೇಲೆನ
ಲಂದೆಸೆದುದು ಬಿಳಿಯಬಟ್ಟಗೊಡೆ ನಾರದನಾ ೧೦

ವ॥ ಅಂತು ಸೊಗಯಿಸಿ ನಭೋಂತರದಿಂ ಸಭಾಂತರಕ್ಕವತರಿಸಿದಾಗಳ್

---

[1] ಪಸರಿಸೆ ತತ್ಕ್ಷುಣ್ಣ (ಕಖಗ)

ಕಂ॥ ನೀಲೀಪಟನುಂ ದೆಸೆವೆ
ಣ್ಗೊಳ್ಗೈಸೆ ನಿಜಾಂಗಕಾಂತಿ ಕೌಸ್ತುಭರುಚಿ ತ
ಳ್ತಾಲಿಂಗಿಸೆ ಮುನಿಯುಂ ವನ
ಮಾಲಿ ಕನತ್ಪೀತವಸನನೊಸೆದಿದಿರೆಟ್ಟಿಂ ೧೧

ವ॥ ಅಂತು ಮೃಗೇಂದ್ರಪೀಠದಿಂದಿರೇಟ್ಟುದುಂ

ಮ॥ಸ್ರ॥ ಯದುವಂಶೋತ್ಪನ್ನನಾದಂ ಜಲಧಿಶಯನನೆಂಬೊಂದಭಿಜ್ಞಾನದಿಂ ನಾ
ರದನಾ ಕೃಷ್ಣಂಗೆ ಮುನ್ನಂ ಮನದೊಳೆಱಗಿದಂ ಕೃಷ್ಣನುಂ ರುದ್ರಮುದ್ರಾ
ಸ್ಪದನೆಂದಾನಮ್ರನಾದಂ ಮುನಿಗೆ ನೆಗೞ್ದುದಂತಾ ಮುನೀಂದ್ರಂಗಮಾ ಶ್ರೀ
ಸದನಂಗಂ ಮಾನಸಂ ಕಾಯಿಕಮೆನಿಪಸಕೃತ್ತಥ್ಯಮಿಥ್ಯೋಪಚಾರಂ ೧೨

ಕಂ॥ ಪೂಜಾಸತ್ಕೃತನಾಗಿ ಸ
ರೋಜಾಸನತನಯನಿರೆ ವಿಶಿಷ್ಟಾಸನದೊಳ್
ರಾಜೀವನಯನನಿರ್ದಂ
ರಾಜಿಸೆ ನಿಜಮೂರ್ತಿ ತನ್ಮಹಾಸ್ಥಾಯಿಕೆಯೊಳ್ ೧೩

ವ॥ ಅನಂತರಂ

ಕಂ॥ ಪೂರಿಸುವ ನೆವದೆ ಮುಂ ಪೀ
ದಾರ್ ರುಚಿ ಮತ್ಪಾಂಚಜನ್ಯರಶ್ಮಿಯನತ್ಯು
ದ್ಗಾರಿಪವೊಲ್ ದಂತದ್ಯುತಿ
ರಾರಾಜಿಸಿ ಮುಖದಿನುಣ್ಮೆ ನುಡಿದಂ ಕೃಷ್ಣಂ ೧೪

ಮ॥ ಭವದೀಯಾಗಮವಿಂದು ಯಾಗಮಹದಂತೀಂದತ್ತು ಸ್ವೈಪಂ ತ್ವದಂ
ಘ್ರಿಪನೇಜಾತಪರಾಗಮಾಗಿಸಿದುದುರ್ವೀರಾಗಮುಂ ಯುಷ್ಮದೀ
ಯವಿಲೋಕಂ ಯದುಲೋಕಮುಂ ವೃಜಿನದಿಂ ಮೆಯ್ವಿಂಗಿಸಿತ್ತೀ ಸಭಾ
ಭವನಕ್ಕಿತ್ತುದು ನಿಮ್ಮ ವಾಕ್ಸುಧೆ ಸುಧಾಶ್ರೀಯಂ ರದಜ್ಯೋತ್ಸ್ನೆಯಿಂ ೧೫

ವ॥ ಎಂದುಪೇಂದ್ರಂ ಮುನೀಂದ್ರಂಗೆ ನುಡಿಯೆ

ಕಂ|| [1]ಆ ಮುನಿಪವದನಚಂದ್ರಸು
ಧಾಮಳರುಚಿ[1] ಮುಖದಿನುಣ್ಮಿದಪುದೆನೆ ದಶನೋ
ದ್ಧಾಮಧವಳಾಂಶು ಪಸರಿಸೆ
ತಾಮರಸಾಕ್ಷಂಗೆ ಮುನಿಪನಂದಿಂತೆಂದಂ ೧೬

ಮ||ಸ್ರ|| ದರಹಾಸಜ್ಯೋತ್ಸ್ನೆಯಿಂ ದರ್ಪಕವಿಶದಯಶಂ ಕೊರ್ವೆ ಲಾವಣ್ಯದಿಂದಂ
ಸ್ಮರತೇಜಂ ಪೆರ್ಚೆ ಕಣ್ಗೊಂಡವಳ ಧವಳನೇತ್ರಾಂಚಲಾಲೋಕಮಾತ್ರಂ
ನೆರವಾದತ್ತಂಗಜಂಗೀ ತ್ರಿಜಗಮುಮಿದಿರಿಲ್ಲೆಂಬಿನಂ ಪೂವಿನಂಬಂ
ತಿರುವಾಯೊಳ್ ಪೂಡಿ ಪುಷ್ಪಾಯುಧನಿರೆ ಕೆಲದೊಳ್ ಲೀಲೆಯಿಂ ಬಾಲೆಯಿ
ರ್ಪಳ್ ೧೭

ಕಂ|| ವಶವರ್ತಿಮಾಳ್ಕುಮಂಗಜ
ವಿಶಿಖದಿನೀಕ್ಷಿಸಿದ ವಿಟರನವಯವದೊಳಮಂ
ಗಶಲಾಕೆಯೊಳಂ ಪ್ರತ್ಯೇ
ಕಶೋಭೆ ಸಮುದಾಯಶೋಭೆಗಳ್ ರುಕ್ಮಿಣಿಯಾ ೧೮

ವ|| ಅಂತು ಸಕಲಲಕ್ಷಣೋಪಲಕ್ಷಿತಾವಯವಸಂಪನ್ನೆಯಪ್ಪ ಕನ್ನೆಯ ರೂಪಮ
ನಾಪಾದಮಸ್ತಕಾಗ್ರಂಬರಂ ಪೇೞ್ವೆನದೆಂತೆನೆ

ಕಂ|| ಸಲ್ಲದು ಸೆಣಸಲ್ [2]ತನಗಿನಿ
ಸಲ್ಲದು[2] ಚೆಲ್ವೆನಿಸಿ ಗೆಲ್ದು ಸತಿಯಡಿದಳಿರ್ಗಳ್
ಪಲ್ಲವಕಮನೀಯತೆಯಂ
ಪಲ್ಲವಕಮನಃಪ್ರಮೋದಮಂ ಪೆರ್ಚಿಸುಗುಂ ೧೯

ಸ್ತನಸಂಗಮಿರಲ್ ಸದ್ಯ
ಸ್ತನಸಂಗಂ ನೆಗಳ್ಗೆ ಮೆಮ್ಮೊಳಧಿಪತಿಗೆ ಕುಚ
ಕ್ಕೆನಿಸುನ್ನತಿಯೇಕೆನುತಂ
ಕಿನಿಸುವವೋಲ್ [3]ನಿಮಿರ್ದುವು ಕನ್ನೆಯಂಗುಳಿಯೆಸೆಗುಂ[3] ೨೦

ಕಾಮನ ತಿಳಿಗೊಳವೆನಿಪ ನಿ
ಕಾಮನಖದ್ಯುತಿಜಲಪ್ರವಾಹದೊಳೆಸೆವಾ
ವಾಮೆಯ ಮೇಂಗಾಲ್ ಸೊಗಯಿಸು
ವಾಮೆಯನನುಕರಿಸಿ ಮನಮನಿಟ್ಟಿಳಿಗೊಳ್ಗುಂ ೨೧

---

1 ಆಮುನಿಪನ ಮಾನಸಹಂಸಾಮಳರುಚಿ (ಕ) 2 ತಮಗಿದು ಸಲ್ಲದು (ಕ) 3 ಮಲರ್ದುವು ಕನ್ನೆಯುಂಗುಟಮೆಸೆಗುಂ (ಕಖಗ)

ಕುಂದದರಸ್ಮಿತೆಯ ಮಡಂ
ಕುಂದದ ಚೆಲ್ವಿಂ ಮನೋಜರಾಜಕ್ರೀಡಾ
ಕಂದುಕವೆನೆ ಜನದ ಮನ
ಕ್ಕಂದು ಕರಂ ಮುದಮನೊದವಿಕುಂ ಮೃದುಗತಿಯಿಂ ೨೨

ಪೊಣರದೆ ಮದನನ ದೊಣೆಗಳ
ಪೊಣರದೆನಲ್ ನಂಬಿ ಕೇಳ್ವುದಾ ಯುವತಿಶಿಖಾ
ಮಣಿಯ ಕಿಱುದೊಡೆಯನೀಕ್ಷಿಸೆ
ಮಣಿಯದರಾರ್ ಮದನನಿಸುವ ಮೋಹನಶರದಿಂ ೨೩

ರಂಭಾವಿಭವದಿನಧಿಕತ
ರಂ ಭಾವಿಸೆ ಪತಿಮನೋಮದೇಭಾಲಾನ
ಸ್ತಂಭವೆನೆ ನೋಡೆ ಸುಗತಿ
ಸ್ತಂಭನನೊಡರಿಪುವು ಬಟ್ಟದೊಡೆ ರುಕ್ಮಿಣಿಯಾ ೨೪

ಕಾಂತನ ಹೃತ್ಕೇಕಿ ದಿಟ
ಕ್ಕಾಂತನವಧಿಮುದಮನಲ್ಲಿ ನಲಿವುದಱಿಂದಂ
ಕಂತುವ ಕೃತಕಾದ್ರಿಯೆನ
ಲ್ಕಂತು ವನೇಜಾಸ್ಯೆಗೆಸೆಗುಮುನ್ನತಜಘನಂ ೨೫

ಬಾಸೆಯೆ ತನಗದು ನೆರವೆಂ
ಬಾಸೆಯೆ ಪಿರಿದದಱಿನುಡಿಯದೊಳ್ನಡುವೆಂಬೀ
ದೇಸೆಗೆ ಸಂದಂಗಜನೊಂ
ದೇಸೆ ಗೆಲಲ್ ಜಗಮನವಳ ತೆಳ್ವಸಿಱಿಸೆಗುಂ ೨೬

ನಳನಳಿಸಿ ಬಳೆದು ವಿರಹಾ
ನಳನಳುರ್ದ್ದುವಗಾ ವಿಳಾಸರಸದ ತರಂಗಾ
ವಳಿಗಳನಿಱಿಸುವ ಮಧ್ಯದ
ವಳಿಗಳನೀಕ್ಷಿಸಿದ ನೀಱರಂ ರುಕ್ಮಿಣಿಯಾ ೨೭

---

2 ಈ ಪದ್ಯವು ೨೦ನೇ ಪದ್ಯದಹಿಂದೆಯೆ ಇರುತ್ತದೆ.

ವನಿತೆಯ [1]ತೆಳ್ವಸಿಱಳತೆಯು[1]
ವನಿತೆಯ ತನುರಸತಟಾಕಕಃೞಿಯೆನೆ ಚಂದ್ರಾ
ನನೆಯ ಕುೞಿವೊರ್ಕುೞಿತಸೆದುದು
ನನೆಯ ಸರಲ್ ನಾಂಟಿ ತನ್ನನೀಕ್ಷಿಸಿದವರಂ ೨೮

ಬಾಳಕಿಗಳನಿಚಯಾಳಂ
ಬಾಳಕಿಗಾ ರೋಮರಾಜಿ ರಂಜಿಸುತಿರ್ಕುಂ
ನೀಳದ ಕಾಂಚೀಮಧ್ಯದ
ನೀಳದ ನೆಗೆದುನ್ಮುಖಪ್ರಭಾರೇಖೆಯವೋಲ್ ೨೯

ಸಮನೆನೆ ಪೊಣರ್ವಕ್ಕಿ ವಿಳಾ
ಸಮನೆನಿಸಂ ತಳದ ಘನಕುಚಂ ನಿಬಿಡತೆಯಿಂ
ರಮಣಿಗೆ ಸೊಗಯಿಸುಗುಂ ಹಾ
ರಮಣಿಗೆ ನುಸುಳಲ್ಕೆ ತೆಱಪುಗುಡದನವರತಂ ೩೦

ರತಿಕಾಂತನಸಿಯ ನುಣ್ಬೊಗ
ರತಿಕಾಂತದ್ಯುತಿಯನಾಂತು ಚೆಲ್ವಿನೊಳಧಿಕಂ
ಲತೆಯ ಮೊದಲ್ಗೆನೆ ರತಲೋ
ಲತೆಯನಿನಂಗೀವುವವಳ ತೋಳಮೊದಲ್ಗಳ್ ೩೧

ತಾಮರಸಮುಖಿಯ ನಳಿತೋಳ್
ತಾಮರಸ ಬೆಡಂಗುವೆತ್ತು ಸಿರಿಸದ ಸುಮನೋ
ದಾಮಕಮಂ ಗೆಲೆವಂದೆಸೆ
ದಾ ಮಕರಧ್ವಜನ ಪಾಶಮೆನೆ ಸೊಗಯಿಸುಗುಂ ೩೨

ತರುಣಮೃಗಾಕ್ಷಿಯ ದೊರೆವೆ
ತ್ತರುಣತಳಂ ಬಾಹುಲತೆಯ ಪಲ್ಲವಮೆನೆ ಭಾ
ಸುರತಮನಾಗಿರ್ದಿನನೊಳ್
ಸುರತಮನಿರ್ಮಾಡಿಸುಗುಂ ನಿಜಸ್ಪರ್ಶನದಿಂ ೩೩

ಕದನಮನೊಡರ್ಚೆ ಮೂಲೋ
ಕದ ನವಯೌವನರನಲೆವ ನನೆಗಣೆಗಳೆನಲ್
ಮದನಭುಜವಿಜಯಮಂ ತಾ
ಮದನಭಿವರ್ಣಿಸುವುವವಳ ಹಸ್ತಾಂಗುಳಿಗಳ್ ೩೪

---

1 ತೆಳ್ವಸಿರಳತೆಯು (ಕಗ)

ಮನನಮಂ ಸಲೆ ಸೋಲಿಪ ಕಾ
ಮನ ಮಂಗಳಶಂಖದಂತಿರೆಸೆವವಳ ಕೊರಲ್
ಜನವಾದಮೆಸೆವಿನಂ ಭಾ
ಜನವಾದತ್ತುಪಮೆಗಾಸ್ಯ ಮುಕುರದ ಪಿಡಿಯೊಳ್ ೩೫

ತವದಿಂಪಿಂ ನಲ್ಲಂಗನ್ಭ
ತವದಿಂ ಪೆಱತಲ್ಲದೆನಿಸಿ ಬಂದುಗೆಯಲರಂ
ಪವಳದ ಬಟ್ಟಂ ಗೆಲೆವ
ರ್ಪವಳಧರಂ ಮಾಣದಧರಿಕುಂ ಪಲ್ಲವಮಂ ೩೬

ರದನಾಳಿಯನಾರ್ ಬಣ್ಣಿಪ
ರದನಾಳಿಗೊಳುತ್ತುವಿರ್ದ್ದ ಮುತ್ತಿನ ಜೆಲ್ವಂ
ಪುದು ತನ್ನ ಕಾಂತಿಪತಿಗೆನಿ
ಪುದು ತನ್ನವಪಲ್ಲವೋಪಮಾನಾಧರೆಯಾ ೩೭
*
ಪಿಂಗದೆ ಲಾವಣ್ಯದ ಸೊಂ
ಪಿಂಗದೆ ತಾಂ ನಿಳಯಮೆನಿಸಿ ಯೌವನಲಕ್ಷ್ಮೀ
ಮಂಗಳಮಣಿದರ್ಪಣಯು
ಗ್ಮಂಗಳವೆಂದೆನೆ ಕಪೋಲಮಂಗನೆಗೆಸೆಗುಂ ೩೮

ರಾಜಿಪ ಮುಖಲಕ್ಷ್ಮಿಗೆ ನೀ
ರಾಜಿಪ ಮಣಿಪಾತ್ರಯುಗಳಮೆನೆ ಸೊಗಯಿಸುಗುಂ
ರಾಜೀವಮುಖಿಯ ಮಣಿರುಚಿ
ರಾಜೀವಳಿತಾವತಂಸಕರ್ಣಯುಗಂಗಳ್ ೩೯

ಸಂಪಗೆಯೊಳ್ ತನಗನುದಿವ
ಸಂ ಪಗೆ ಜೆಲ್ವಿಂದಮೆನಿಪ ನಾಸಾಮುಕುಳಂ
ಕಂಪನವಟ್ಟೈಸಿ ತುಂಬಿಗೆ
ಕಂಪನಮುಂ ವಿಟಶಿರಕ್ಕೆ ಪಡೆವುದು ಸತಿಯಾ ೪೦

* ಈ ಪದ್ಯವು (ಕ) ಪುಸ್ತಕದಲ್ಲಿ ಹೆಚ್ಚಾಗಿ ದೊರೆಯುತ್ತದೆ
ರದನಂ ಗಡಣಂಬಡೆದಾ
ರದನಂಗನ ಕೀರ್ತಿಲತೆಯ ಬಿತ್ತೆನಿಸಿರ್ದುಂ
ಪುದು ತನ್ನ ಕಾಂತಿ ಪತಿಗೆನಿ
ಪುದು ತನ್ನವಪಲ್ಲವೋಪಮಾನಾಧರೆಯಾ

ಕೈದುವನಿೞಿಕೆಯ್ದು ದಿಟ
ಕ್ಕೈದುವ[1]ನಲರಂಬ[1]ನತನು ಜಗಮಂ ಗೆಲ್ವಂ
[2]ನೈದಲೆ[2] ನೀರೇಜದ [3]ಜಿ
ನ್ನೈದಲಣಂ[3] ಸಾಲದೆನಿಸುವವಳಕ್ಷಿಗಳಿಂ ೪೧

ಕಮನೀಯಂ ಸ್ಮರಧನು ಕೊಂ
ಕಮನೀಯಂದದೊಳೆ ಪಡೆಯದೆನೆ ನಿಡುವುರ್ವಾ
ರಮಣೀಮುಖೇಂದುಬಿಂಬದ
ರಮಣೀಯಕಲಂಕಲೇಖೆವೋಲ್ ಸೊಗಯಿಸುಗುಂ ೪೨

ಸಕಳಂಕಮಾದ ಪೆಱೆಯೆನೆ
ಸಕಳಂ ಜಗಮೆಯ್ದೆ ಪೊಗೞಲಳಕದ್ಯುತಿಮೇ
ಚಕಿತಮತಿಕಾಂತಿಕಾಂತಂ
ಚಕಿತಮೃಗೇಕ್ಷಣೆಯ ಪೆಱೆನೊಸಲ್ ಸೊಗಯಿಸುಗುಂ ೪೩

ಕಮಳಕ್ಕೆಱಪಳಿಗಳೆನಲ್
ಕಮಳಕ್ಕೆ ಮುಖಾಂಬುಜಕ್ಕೆ ನಿಟಿಲಾಗ್ರಚಲ
ದ್ಭ್ರಮರಕಮತಿಶಯಮೆಸೆಗುಂ
ಭ್ರಮರಕದಂಬಾಂಶುರುಚಿರಗುರುಕಚಭರೆಯಾ ೪೪

ವೀರವನತನುಗೆ ನಿಜಮೌ
ರ್ವೀರವಮಿದೞಿಂತು ಕುಡದು ಕೋಕಿಲನಿನದಂ
ಸಾರಮಿನಿತಿಲ್ಲದಮೃತಾ
ಸಾರಮಿದೆನೆ ಕಿವಿಗೆ ಸೊಗಯಿಕುಂ ದನಿ ಸತಿಯಾ ೪೫

ದೊರೆ ಗಡ ಜೆಂಬೊನ್ನಿದಱೊಂ
ದೊರೆಗವಣಂ ಬಾರದೆನಿಸುವಾ ಪೀನಪಯೋ
ಧರೆಯ ತನುಕಾಂತಿ ಸತತಂ
ಧರೆಯುನನನ್ಯಜನ ತೇಜದಂತಂಡಲೆಗುಂ ೪೬

---

1 ನಲರಂಬಿ (ಕಖಗ) 2 ನೈದಿಲ (ಕಖಗ) 3 ಚಿನ್ನೈದಿಲ (ಖಗ)

ನಿರವಧಿಸೌಷ್ಠವದಿಂ ತ
ನ್ನಿರವಧಿಕಂ ಜೆಲ್ವುವೀಱಿ ಕಬರೀಭರದಿಂ
ಪರಭಾಗಂಬೆತ್ತಾತ್ತಕೆಯ
ಪರಭಾಗಂ ಪತಿಯ ಮನಮಮಂಸೆಱೆವಿಡಿಗುಂ ೪೭

ವಳಯದ ನೂಪುರದುಲಿ ಭೂ
ವಳಯದ ಕಿವಿಗಮರ್ದುಗಱೆಯುಲತನುಗೆ ವಿಟರೊಳ್
ಕಳಹಂ ಸಮನಿಸೆ ಜೆಲ್ವಿಂ
ಕಳಹಂಸಮನಿಱಿಪುದಲಸಗತಿ ರುಕ್ಮಿಣಿಯಾ ೪೮

ಈಕೆಯ ರೂಪಿನ ಪರಿಯಂ
ಕೋಕನದಜನಂದು ಕಂಡೊಡಂತಾ ಗೌರೀ
ಶ್ರೀಕಾಂತೆಯರಾಕೃತಿಯಂ
ಪ್ರಾಕೃತಮೆನೆ ಮಾಡನೆನಿಸಿ ರುಕ್ಮಿಣಿಯೆಸೆಗುಂ ೪೯

ಉ॥ ಆ ರಮಣೀಶಿಖಾಮಣಿಗೆ ನೀಂ ಬಗೆ ಸೋಲ್ತೊಡವಳ್ಗೆ [1]ಸೋಲ್ವನ
ನ್ಯಾರಿಗೆ[1] ಸೋಲಮಂ ಪಡೆಯವೇಳ್ಪುದದೆಂತೆನೆ ರುಕ್ಮಿ ಮಾಳ್ಪ ಕೈ
ವಾರದೆ ಚೈದ್ಯನಾ ರಮಣಿಗುಂಗುರವಿಟ್ಟು ವಿವಾಹಲಗ್ನಮಂ
ಪಾರುತುಮಿರ್ದನಿಂ ಸೆರಗುವಾರದೆ ಚಿಂತಿಸಿದರ್ಕುಪಾಯಮಂ ೫೦

ಕಂ॥ ಅನುರಾಗಮುರ್ವಿಗುರ್ವುಗೆ
ಜನಿಯಿಸುಗಾನಂದವಮರಸಮಿತಿಗೆ ಶಿಶುಪಾ
ಲನಭೀಷ್ಟಸಿದ್ಧಿ ತೊಲಗುಗೆ
ನಿನಗಕ್ಕೆ ವಿವಾಹಮಂಗಳಂ ರುಕ್ಮಿಣಿಯೊಳ್ ೫೧

ವ॥ ಎಂದು ಪರಸಿ ಸರಸಿಜಾಕ್ಷನನುಜ್ಞೆಯಿಂ ನಾರದಂ ನೀರದಪಥಕ್ಕೆ ನೆಗೆವುದುಂ

ಕಂ॥ ತಾಂ ಗಡ ಕುಡುವಂ ಶಿಶುಪಾ
ಲಂಗೆ ಗಡಂ ಪೂಣ್ದು ರುಕ್ಮಿ ರುಕ್ಮಿಣಿಯಂ ಲ
ಗ್ನಂ ಗಡ ಸಮೀಪಮಾಂ ವಿಜ
ಯಾಂಗನೆವೆರಸಿಂದೆ ತಂದಪೆಂ ರುಕ್ಮಿಣಿಯಂ ೫೨

---

[1] ಸೋಲವಿನ್ನಾರಿಗೆ (ಕಬಗ) ಸೋಲದೀ ನಾರಿಗೆ (ಮೊಅ)

ವ॥ ಎಂದು ಮನದೊಳೆ ಮಂತಣಮಿರ್ದು

ಕಂ॥ ಗೃಹರಕ್ಷೆಗೆ ಸಾತ್ಯಕಿಯಂ
ಮಹೀಧರಂ ನಿಲಿಸಿ ತಳರ್ದನಗ್ರಜಸಹಿತಂ
ಬಹಿರುದ್ಯಾನಾಲೋಕ
ಸ್ಪೃಹೆಯಿಂ ತಳರ್ವಂತು ರುಕ್ಮಿಣೀಹರಣಾರ್ಥಂ ೫೩

ವ॥ ಅಂತು ತಳರ್ದು ಪರಿಣಯೋತ್ಸವೋತ್ಸುಕನಾಗಿ ಶಿಶುಪಾಲದಾನವಂ ಬಂದಿರ್ದ ಭೀಷ್ಮಕಪುರಕ್ಕಭಿಮುಖನಾಗಿ

ಕಂ॥ ಅನಿಲಜವಂ ಗರುಡಜವಂ
ಮನೋಜವಂ ಕಿಱಿದು ತನ್ನ ಜವದಿಂದೆನೆ ಕುಂ
ಡಿನಪುರದ ಬಹಿರ್ವನಮಂ
ದನುಜಾರಿವರೂಥಮೆಯ್ದೆ ವರ್ಪವಸರದೊಳ್ ೫೪

ಚಂ॥ ಪೊದೆಯಿಸಿದತ್ತೊ ಚಿತ್ರಪಟದಿಂ ಪರಿನಿರ್ಮಿಸಿದತ್ತೊ ಪಂಚರ
ತ್ನದಿನಮರೇಂದ್ರಚಾಪನಿಕುರುಂಬಕದಿಂ ಪೆಣೆದತ್ತೊ ಚಿತ್ರಮಿಂ
ತಿದು ಬಗೆಗೆಂಬಿನಂ ತಳಿರ ಪೂವಿನ ತುಂಬಿಯ ಕಾಯ ಪಣ್ಣ ಬ
ಣ್ಣದಿನೆಸೆದತ್ತು ಕೀರಪಿಕಹಂಸನಿನಾದವಿಡಂಬನಂ ಬನಂ ೫೫

ವ॥ ಆ ಮನೋಹರೋದ್ಯಾನಮಂ ಪೊಕ್ಕು ಪಂಕಜಾಕ್ಷಂ ನಿರೀಕ್ಷಿಸುತುಂ ಬರ್ಪಲ್ಲಿ

ಕಂ॥ ಪಾವನವನದೊಳ್ ನಿರ್ಮಲ
ಜೀವನವನಜಾತಷಂಡಮಾರುತಲೀಲಾ
ಧಾವನವನಮಧ್ಯಮದೇಂ
ದೇವನ ವನಮಾಲೆಯಂ ತೆಱಂಬೊಳಯಿಸಿತೋ ೫೬

ಚಂ॥ ಲಳಿತಗತಿಕ್ರಿಯೋತ್ಸವದಿನೊಪ್ಪುವ ಪಾಂಡುರಪಕ್ಷಪಕ್ಷದಿಂ
ಕಳರುತಿವೀಱುತಿರ್ಪ ಕಳಹಂಸಕದಂಬಕಚಕ್ರಚಕ್ರದಿಂ
ಬಳದಳಿವಿಂಡು ಬಂದೆಳಸುತಿರ್ಪ ಚಳಜ್ಜಳಜಾತಜಾತದಿಂ
ವಿಳಸಿತವಾದುದಂ ನಲಿದು ನೋಡಿದನಂಬುಜಷಂಡಷಂಡಮಂ ೫೭

ವ॥ ಆ ಸರೋವರದೊಳ್

ಕಂ|| ಪರಪರಥನಳಾಂಗದ್ಯುತಿ
ಚರಚರದೂರ್ಮಿಸ್ಫುಟತ್ತಟೋಜ್ವಲಫೇನೋ
ತ್ಕರಕರದೊಳ್ [1]ತಡೆವಾಯಿರೆ[1]
ಪರಿ ಪರಿರಂಜಿಸುವುದೊಂದು ಕೊಳನಂ ಕಂಡಂ ೫೮

ಕೇಸರಸರ ಸರಜಃಪರಿ
ಧೂಸರಸರನುಂ ನಿರೀಕ್ಷಿಸಲ್ ಯದುವಂಶಾ
ಗ್ರೇಸರ ಸರಭಸನಯನಂ
ವಾಸರ ಸರಸಿರುಹದಂತಿರೊಪ್ಪಿದುದಾಗಳ್ ೫೯

ಸಾರಸರಸನದ್ಧ್ವನಿಯಿಂ
ನೀರಜರಜದಿಂ ಮದಾಳಿಗಳ ಗಳರುತಿಯಿಂ
ಸೌರಭರಭಸದಿನದು ಸಂ
ಚಾರಣರಣದೂರ್ಮಿ ಪದ್ಮವನವನಮಧ್ಯಂ ೬೦

ಮ|| ಒಸೆದೇಂ ನೋಡಿದನೋ ಮುರಾರಿ ಲಹರೀಸಂಘಾತಸಂಘಾತದಿಂ
ದೆಸೆಯೊಳ್ ಸೀರ್ಪನಿ ಸೂಸುತಿರ್ಪ ವಿಚಳತ್ಪತ್ರಾಳಿ ಪತ್ರಾಳಿಯಿಂ
ಬಿಸಜಂಗಳ್ ಮಲರ್ದೊಪ್ಪುತಿರ್ಪ ಜಗತೀಪಾನೀಯಪಾನೀಯದಿಂ
ಜಸಮಂ ತಾಳ್ದಿದ ಮಾನಸಾಬ್ಜವನಶಂಕಾಸಾರಕಾಸಾರಮಂ ೬೧

ಕಂ|| ದೇಸೆವಡೆದತ್ತು ರತ್ನಶಿ
ಳಾಸೋಪಾನದಿನಪಾರಸಾರಸರವದಿಂ
ಕಾಸಾರಮೂರ್ಮಿಜಳಕಳಿ
ಕಾ[2]ಸಾರೋಪಾಂತ[2] ಪುಷ್ಪಕಳಿಕಾಸಾರಂ ೬೨

ಕೌತುಕಮೆನೆ ಪಾಱುವುದಳಿ
ನೀತತಿ ಹಂಸಂ ರಥಾಂಗಮಾ ತಾವರೆಯಿಂ
ದಾ ತಾವರೆಗೀ ತಡಿಯಿಂ
ದಾ ತಡಿಗೀ ಪುಳಿನದಿಂದವಾ ಪುಳಿನಕ್ಕಂ ೬೩

ವ|| ಆ ಪುಂಡರೀಕಷಂಡಮಂ ಪುಂಡರೀಕಲೋಚನಂ ಕಂಡು ಮನಂಗೊಂಡು

---

[1] ತವವಾಯಿಂ (ಖ) [2] ಸಾರೋಂತರದ (ಖ) ಸಾರೋನ್ನತದ (ಗ)

ಕಂ॥ ಸರಸಿಯೊಳಪೊಕ್ಕುಪದನಖ
ಕಿರಣದಿನಿರ್ಮುಡಿಸಿ ಜಲಮನಾಸ್ಯಾಂಬುಜದಿಂ
ಪರಿಮಳವನಿತ್ತು ವಾರಿಗೆ
ಕರದೊಳ್ ಲೀಲಾಬ್ಜಮೆಸೆಯೆ ಪೊಜಮಟ್ಟಾಗಳ್ ೬೪

ಮ॥ಸ್ರ॥ ಕಲಕೀರಾಲಾಪಮುಂ ಕೋಕಿಲಕಲರವಮುಂ ಭೃಂಗಝಂಕಾರಮುಂ ಚಂ
ಚಲಕಾಂಚೀಕೂಜಿತಂ ಕಂಕಣಝಣಝಣಿತಂ ಸಿಂಜಿನೀಸಿಂಜಿತಂ ಮಾ
ರ್ಮಲೆಯುತ್ತುಂ ಕಂತುಸೇನಾಕಳಕಳರುತಿಯಿಂದೆತ್ತಲುದ್ಯಾನಮುಂ ತೀ
ವಲದಂ ಕೇಳ್ದಂಗನಾಭೂಷಣರಣಿತಮಿದೇಸೆಂದು ವಿಭ್ರಾಂತನಾದಂ ೬೫

ವ॥ ಅಂತು ವಿಸ್ಮಿತಸ್ವಾಂತನಾಗಿ ವನಮಾಲಿ ತನ್ನ ಸಮೀಪದೊಳಿರ್ದ ವನಪಾಲನಂ ಸ್ನಿಗ್ಧಮಧುರಾಲೋಕನವಾಕ್ಯಂಗಳಿಂ ಸಂಭಾಷಿಸಿ ಬೞಿಯಂ ಮತ್ತಿಂತೆಂದಂ

ಮ॥ ವಿವಿಧಾಲಂಕೃತನಿಸ್ವಸಂ ನೆಗೞ್ವನಂ ಭೃಂಗೋತ್ಕರಂ ಬೆರ್ಚಿ ಪಾ
ಱುವಿನಂ ಪುಷ್ಪಪರಾಗಮುಲ್ಲುಗುವಿನಂ ಪೂದೊಂಗಲಲ್ಲಾಡಿ ತೋ
ಱುವಿನಂ ಕಣ್ಮಲರ್ವೆಳ್ಪು ಕೆಂದಳದ ಕೆಂಪೋರೊಂದನೊಟ್ಟೈಸಿ ಪೊ
ಣ್ಮುವಿನಂ ಲೀಲೆಯಿನಾ ಪ್ರದೇಶದೊಳದಾರ್ ತನ್ವಂಗಿಯರ್ ಕ್ರೀಡಿಪರ್ ೬೬

ವ॥ ಎಂದು ಬೆಸಗೊಳ್ವುದುಂ [1]ಚಕ್ರಿಗವಕ್ರಶೀಲಂ[1] ವನಪಾಲನಿಂತೆಂದಂ. ಆ ಕುಸುಮಿತವನಾಂತರದೊಳ್ ಕತಿಪಯಪರಿಚಾರಿಕಾಸಖೀಜನಂಬೆರಸು ಭೀಷ್ಮಕರಾಜಪುತ್ರಿ ರುಕ್ಮಿಣೀದೇವಿ ಪುಷ್ಪಾಪಚಯವಿನೋದಮಂ ನೆಗೞುತಿರ್ದಪಳ್. ಆ ಮಂದಗಮನೆ ಲೀಲೆಯಿಂದೀಗಳೀ ಪೂಗೊಳಕ್ಕೆ ಬರ್ಪಳೆಂದು ಬಿನ್ನವಿಸುತಿರ್ಪನ್ನೆಗಂ

ಉ॥ ಚಾರುಲತಾವನಾಂತರದೊಳೋರಗೆಪೂಗಳನಾಯ್ದು ಕೊಯ್ದುಳಂ
ಕಾರಮನಾಲತಾಂತತತಿಯಿಂ ಸಮೆದಾಂತ ಬೆಡಂಗು ಕಣ್ಗೊಳಲ್
ವಾರವಿಳಾಸಿನೀತತಿ ಲತಾವನದಿಂ [2]ಪೊಜಮಟ್ಟುದೆಂದು[2] ಸಂ
ಚಾರಿಲತಾವನಂ ವನಲತಾವನದಿಂ ಪೊಜಮಟ್ಟುದೆಂಬಿನಂ ೬೭

ಚಂ॥ ಅಮಿತವಿಳಾಸದಿಂ ಮದನಭೂಭುಜನೋಲಗದಂಗನಾಸಮೂ
ಹಮನಿೞಿಪಂಗನಾಸಮಿತಿ ಸುತ್ತಲುಮೆಯ್ತರೆ ಬರ್ಪ ರುಕ್ಮಿಣೀ
ರಮಣಿ ವಿಲೋಚನೋತ್ಸವಮನಿತ್ತಳುಪೇಂದ್ರನೊಳಂಗಜನ್ಮಜಂ
ಗಮಲತಿಕಾವನಂಬೆರಸು ಬಂದಪಳೋ ವನದೇವಿಯೆಂಬಿನಂ ೬೮

---

[1] ಚಕ್ರಿಗೆ ವಕ್ರಶೀಲಂ (ಕಖಗ) [2] ಪೊಜಮಟ್ಟುಬಂದು (ಕಖಗ)

ವೃ|| ವನಿತಾರತ್ನದ [1]ರೂಪಮಿಾಕ್ಷಿಸಲೊಡಂ[1] ಲಾವಣ್ಯಮುಂ ಮುಂಜಲಿ
ಲ್ಲೆಸೆ ಕೃಷ್ಣೇಕ್ಷಣದೊಳ್ ತುಳುಂಕಿ ಬಱಿಯಂ ಭೃಂಗಾಳಿಕಾನೀಕದಿಂ
ವನಜಾತಾನನದಿಂ ರಥಾಂಗಕುಚದಿಂ [2]ಮಿಾನಾಕ್ಷಿಯಿಂದಿತ್ತುದಾ[2]
ವನಜಾಕ್ಷಂಗೆ ಮನೋಜಜಂಗಮಸರಶ್ರೀಯೆಂಬ ವಿಭ್ರಾಂತಿಯಂ ೬೯

ಅಲಕಂ ತುಂಬಿ ತಳಂ ತಳಿರ್ ತೊಡೆ ಮಡಲ್ ತೋಳ್ ಶಾಖೆ ಸುಯ್ಗಂಪು ಕಂ
ಪಲರ್ಗಣ್ಣೊಪ್ಪುವಲರ್ ಮುಗುಳ್ನಗೆ ಮುಗುಳ್ ಬಿಂಬಾಧರಂ ಪಣ್ಣೆನಿ
ಪ್ಪ ಲತಾಂಗೀತನುಚೂತವಲ್ಲರಿಯೊಳಂದೆಕ್ಕೆಕ್ಕೆಯಿಂ ನಾಟಕಂ
ನಲಿಯುತ್ತಿರ್ದುವು ನೇತ್ರಷಟ್ಪದಮನಃಕೀರಂಗಳಾ ಕೃಷ್ಣನಾ ೭೦

ವ|| ಅಂತು ವನರುಹಾಕ್ಷನಾ ಮನೋಹರಿಯಂ ನಿರೀಕ್ಷಿಸುತ್ತಿರ್ದು ನಿಜಾಂತರಂಗದೊಳ್

ಮ|| ಪಡೆದಂ ಪದ್ಮಜನೆಂತೊ ಭೂಷಣಕೆ ಭೂಷಾಲಕ್ಷ್ಮಿಯಂ ಜವ್ವನ
ಕ್ಕಡಕಿಲ್ಜವ್ವನಮಂ ವಿರಾಜಿಸುವ ಲಾವಣ್ಯಕ್ಕೆ ಲಾವಣ್ಯಮಂ
ಪಡೆದೀರೂಪಿನ ಕೋಮಲಾಂಗಿಯುಮೆನಲ್ ಮಚ್ಚಿತ್ತದೊಳ್ ಸೋಲಮಂ
ಪಡೆದಂ ಮಾಣ್ದಳೆ ದರ್ಪಕಂಗೆ ಪಡೆದಳ್ ದುರ್ವಾರದೋರ್ಗರ್ವಮಂ ೭೧

ಸುದತೀರತ್ನದ ರೂಪಮೆನ್ನಬಗೆಗಾದಂ ಸೋಲಮಂ [3]ತಂದು ತಂ
ದುದು ಕೂರ್ಪಂ ಭುಜದರ್ಪಮಂ ಕುಸುಮಬಾಣಕ್ಕಂ[3] ಮನೋಜಂಗಮಿಂ
ತಿದವಶ್ಯಂ ಸ್ಮರವಶ್ಯವಿದ್ಯೆಯೆ ವರ[4]ಸ್ತ್ರೀರೂಪಮಂ[4] ನಾಡೆ ಪೆ
ತ್ತುದಗುರ್ವಂ [5]ಪೆಱತಾವುದಾದೊಡೆನಗಿಂತೀ[5] ಸೋಲವೀಕಾಂತೆಯಿಂ ೭೨

ಮದಭಾರಾಲಸಲೋಲನೇತ್ರೆ ಮದನೋದ್ಯತ್ತೇಜಮಂ ಕೊರ್ವಿ ಪ
ರ್ವಿದ ಲಾವಣ್ಯದ ತೇಜದಿಂದತನುಸಾಮ್ರಾಜ್ಯಾಂಗಮಂ ಕೋಮಲಾಂ
ಗದಿನಂಗೋದ್ಭವಕೀರ್ತಿಕೌಮುದಿಯ ಬೆಳ್ಪಂ ಮೌಕ್ತಿಕಾಕಲ್ಪಕೌ
ಮುದಿಯಿಂ ತಾಂ ಗೆಲೆವಂದು ಗೆಲ್ದ ಪಳಪಾಂಗಾಲೋಕದಿಂ ಲೋಕಮಂ ೭೩

ವ|| ಎಂದಾ ಸೊಬಗರೂಪೆಯ ರೂಪಯೌವನವಿಳಾಸವಿಭ್ರಮಂಗಳಂ ಮನದೆಕೊಂಡು

---

1 ರೂಪನೀಕ್ಷಿಸಲೊಡಂ (ಕಖಗ) 2 ಮಿಾನಾಕ್ಷಿಯಿಂದಿತ್ತಳಾ (ಕಖಗ) 3 ತಂದುದಿಂತೆದೆಯಾರ್ಪಂ ಭುಜದರ್ಪಮುಂ ಸಪಸಮುಂ ಮಿಕ್ಕಂ (ಖ) ತಂದುಬಂತಿದೆಯರ್ಪಂ ಭುಜದರ್ಪಮುಂ ಕುಸುಮಬಾಣಕ್ಕಂ (ಗ) 4 ಸ್ತ್ರೀರೂಪದಿಂ (ಮೂಲ) 5 ಪೆಱತಾವುದಾದೊಡೆನಗೆಂತೀ (ಮೂಲ)

ಉ॥ ನೀಲಸರೋರುಹಾರುಣಸರೋರುಹಪಾಂಡುಸರೋರುಹಪ್ರಭಾ
ಮಾಲೆಯನೀಟ್ಟು[1]ಕೊಂಡದನೆ[1] ಬೀಱುದುದೀತನಪಾಂಗವೆಂಬಿನಂ
ಶ್ರೀಲಲನಾಧಿನಾಥನಧಿಕೋತ್ಸವದಿಂ ವಿಲಸತ್ತ್ರಿವರ್ಣಮಂ
ಲೋಲದಪಾಂಗ[2]ಮಾಲೆಯಿ[2]ನನಂಗಲತಾಂಗಿಯ ಮೇಲೆ ಸೂಸಿದಂ ೭೪

ಶಂಬರವೈರಿ ತನ್ನೆಸೆವ ದೃಷ್ಟಿಸುಧಾರಸವೃಷ್ಟಿಯೊಳ್ ತಗು
ಳ್ದಂಬಿನ ದೃಷ್ಟಿಯಂ ಕಱತವಿನಂ [3]ವನಮಾಲಿ[3] ಕಟಾಕ್ಷಮಾಲೆಯಿಂ
ದಂಬುಜನೇತ್ರೆಯಂ ಬಳಸುವಾಗಳನಂಗತರಂಗಿಣೀತರಂ
ಗಂ ಬಳಸಿರ್ದ ಪದ್ಮಿನಿಯ ಭಂಗಿಯನಾ ಲಲಿತಾಂಗಿ ತಾಳ್ದಿದಳ್ ೭೫

ಚಂ॥ ಮನಸಿಜನಂಬು ನಾಂಟಿ ತನುವಂ ಮನವೆಚ್ಚಱದಂತೆ ವಾರಿಜಾ
ಕ್ಷನೊಳಿರೆ ರುಕ್ಮಿಣೀರಮಣಿ ಚಿತ್ರದ ಲೆಪ್ಪದ ಕಲ್ಲ ಪೆಣ್ಣ ರೂ
ಪೆಸೆ ಸುರಪಟ್ಟಳಾವಳನನಂಗಶರಕ್ಕೆಡೆಮಾಡದಾವಳಂ
ನೆನೆಯಿಸಿ ಕಾಡದಾವಳಸದಿರ್ಪದು ಕೃಷ್ಣನ ರೂಪವಿಭ್ರಮಂ ೭೬

ಕಂ॥ ಅಸಿಯಳ ಲಜ್ಜಾ ಸಾಧ್ವಸ
ರಸಮಂ ಕಳೆದೊಲ್ದು ತನ್ನನೀಕ್ಷಿಸುನಂತೇಂ
ಬಸಮಾಗೆ ಮಾಡಿದುದೊ ಕ
ಣ್ಗೆಸೆವಾಕಾರಂ ಭುಜಂಗವೈರಿಧ್ವಜನಾ ೭೭

ಮ॥ಸ್ರ॥ ಸ್ಮರನಂ ಕೂರ್ಪೀಱಸಲ್ ಸಾರ್ದಲರ್ಗಣೆ ಕಡುಕೂರ್ಪೀಱರಲ್ ತನ್ನ ಕೂರ್ಪಿಂ
ತೆರದಿಂದಂ ಮಿಂಚುಮಿಂಚಂ ತುಡುಕಿ ಪಿಡಿದುದೋ ಕಾಮನಂಬಂಬನಟ್ಟಂ
ಬರಿಗೊಂಡೆಟ್ಟಿಟ್ಟಿತೋ ಕೇದಗೆಯೆಸಳೆಸಳಂ ಕರ್ಚಿ ಪಾಱುತ್ತೊ ಕೇಳ
ಚ್ಚರಿಯೆಂಬಂತಾಗೆ ನೀಳ್ದತ್ತವಳ ಧವಳನೇತ್ರತ್ರಿಭಾಗಾವಲೋಕಂ ೭೮

ಉ॥ ಬಾಲೆಯ ನೇತ್ರದಿಂದಮರ್ದಿನೊಳ್ದಿರೆಮಾಲೆ ಪೊದಟ್ಟು ನೀಳ್ದು ಬಂ
ದೀ ಲಲಿತಾಂಗನಂ ಬಳಸಿದತ್ತೆನೆ ಕೃಷ್ಣನ ಮೇಲೆ ಬಾಲೆ ಕ
ಣ್ಣೋಲದಿನಂದು ಬಿತ್ತರಿಸಿದಳ್ ನಗೆವೀಱುವ ಮುದ್ದುವೀಱುವಾ
ಲೋಲತೆವೀಱು[4]ವುಜ್ವಲತೆವೀಱುವ[4] ಮುಗ್ಧಕಟಾಕ್ಷಮಾಲೆಯಂ ೭೯

---

[1] ಕೊಂಡುವೆನೆ (ಕಖಗ) [2] ಮಾಳೆಯ (ಕಖಗ) [3] ವನಮಾಳೆ (ಕಗ) [4] ಉಜ್ವಲಿಕೆ ವೀಱುವ (ಕ) ಉಜ್ವಳಿಕೆವೀಱುವ (ಗ)

ವ|| ಆ ಸಮಯದೊಳ್

ಉ|| ಅಂಗಜಮಾರ್ಗಣೌಘಮೇೞಗಿತ್ತೊ ಮನೋಜನುದಾತ್ತಕೀರ್ತಿ ಬೆ
ಳ್ಪಿಂಗೆಡೆದತ್ತೊ ದರ್ಪಕಸುಧಾರಸವೃಷ್ಟಿ ವಿಜೃಂಭಿಸಿತ್ತೊ ಚೆ
ಲ್ವಿಂಗೆಡೆಯಾ[1]ಗೆ[1] ಚಿತ್ರಿಸಿದಳ್ ಮುದಮಂ ಮದಮುಗ್ಧಸಸ್ಮಿತೋ
ದ್ಭಂಗುರಪಕ್ಷ್ಮಸಂಚಳಸುತೀಕ್ಷ್ಣ ವಳಕ್ಷಕಟಾಕ್ಷ[2]ಮಾಲೆಯಿಂ[2] ೮೦

ವ|| ಆ ಸಮಯದೊಳ್

ಮ|| ಪದಪಿಂದೀಕೆಯ ರೂಪನೀಕ್ಷಿಸಲೊಡಂ ಕಣ್ಣೋಲವೆನ್ನೊಳ್ ಪೊದ
ಱಿರ್ದುದವಿತ್ತೆಂಬಿನಿತಲ್ಲದೆನ್ನನಮರ್ದಿಂದೋಲಾಡಿಪಂತೀಕ್ಷಿಪೀ
ಪದದೊಳ್ ತನ್ನೊಡವಂದ ಪೂಗಣೆ ನಡಲ್ ಮಚ್ಚಿತ್ತಮಂ ನಟ್ಟಪಾಂ
ಗದ ಪಾಂಗಿಂದಮೆ ಕನ್ನೆ ಕನ್ನಡಿಸಿದಳ್ ತನ್ನೊಂದಭಿಪ್ರಾಯಮಂ ೮೧

ವ|| ಎಂದರವಿಂದಲೋಚನಂ ಮನದೊಳ್ ವಿಭಾವಿಸುತ್ತಿರ್ಪನ್ನೆಗಂ

ಮ||ಸ್ರ|| ಮನಮೊಲ್ದುದ್ದಂಡದಂಡಾಬ್ಜದ ಕೊಡೆವಿಡಿದುತ್ತುಂಗವಕ್ಷೋಜೆಯರ್ ಬ
ರ್ಪಿನೆಗಂ ಪೊಂಬಾಳೆಯಿಂ ಬಾಳೆಯರನವರತಂ ಚಾಮರಂ ಬೀಸುತುಂ ಬ
ರ್ಪಿನೆಗಂ [3]ಲೀಲಾಬ್ಜದಿಂ[3] ಸುಯ್ಗೞಪಳಿಗಳನಬ್ಜಾಕ್ಷಿಯರ್ ಸೋವುತುಂ ಬ
ರ್ಪಿನೆಗಂ ಬಂದಳ್ ಲತಾಕೋಮಲೆ ಮದನಜಯಶ್ರೀಯೆ ಬರ್ಪಂದದಿಂದಂ ೮೨

ಉ|| ಸಲ್ಲಲಿತಾಂಗಿ ಭೂಷಣಮಣಿದ್ಯುತಿಯಿಂ ಧವಳೇಕ್ಷಣಾಂಶುವಿಂ
ಪಲ್ಲವಪುಷ್ಪ ಶೋಭೆಗಳನೆಯ್ದೆ ವನಾವನಿಜಕ್ಕೆ ಮಾಳ್ಪನಿ
ತ್ತಲ್ಲದೆ ಕೋಮಲಾಂಘ್ರಿರುಚಿಯಿಂ ನಖರೋಚಿಯಿನಧ್ವವಲ್ಲಿಗಂ
ಪಲ್ಲವಪುಷ್ಪ ಶೋಭೆಗಳನಾಗಿಸುತುಂ ನಡೆತಂದಳಬ್ಜೞಿಂ ೮೩

ವ|| ಅಂತು ನಡೆತಂದು

ಉ|| ಲೋಲಕಟಾಕ್ಷಮಾಲೆ ವನಮಾಲೆಗೆ ಚಂದ್ರಿಕೆವೀೞ್ತೆ ಕೈಯ ಪೂ
ಮಾಲೆಗೆ ಭೃಂಗಮಾಲೆ ಮೊರೆದೆಯ್ದೆ ಶಿರೀಷದ ಮಾಲೆಯುಂ ಪ್ರಭಾ
ಮಾಲೆಯಿನೇಱಿಸುತ್ತಿರೆ ಭುಜಂ ನಖಮಾಲೆ ಮಯೂಖಮಾಲೆಯುಂ
ಸಾಲಿಡೆ ಬಾಲೆ ಬಂದು ವನಮಾಲಿಗೆ ಮಾಲೆಯನೊಲ್ದು ಸೂಡಿದಳ್ ೮೪

---

[1] ಗಿ (ಕಗ) [2] ಮಾಲೆಯುಂ (ಕಖ) [3] ನೀಲಾಬ್ಜದಿಂ (ಕ)

ವ|| ಅಂತು ನಡೆತಂದು ತನಗೆ ರುಕ್ಮಿಣೀದೇವಿ ಮಾಲೆಯಂ ಸೂಡೆ ಪರಿಪೂರ್ಣ ಮನೋರಥನಾಗಿ ರಥಾಂಗಪಾಣಿ ನಿಜರಥಮನಾ ರಥಾಂಗೋತ್ತುಂಗಸ್ತನೆಯನೇಱಿಸಿ

ಮ|| ಉಱಿದಾನುಯ್ದಪೆನೀ ಸಮಸ್ತಗುಣಮಾಲಾರಾಮೆಯಂ ರಾಮೆಯಂ
[1]ಮಱುವಕ್ಕಂ ಪೆಱಗೆಯ್ದೆ[1]ನಿಂದು ಕುಡುವೆಂ ಸಂಗ್ರಾಮಮಂ ಗ್ರಾಮಮಂ
ಪೊಱಮಟ್ಟೆನ್ನೊಳಿದಿರ್ಚಿ ತೋಱುಗೆ ನಿಜಾಸ್ತ್ರಾದಾನಮಂ ದಾನಮಂ
ಬಱಿಕೆಯ್ಗುಂ ರಿಪುವೀರರಂ ವಿಬುಧವೃಂದಾನಂದಕಂ ನಂದಕಂ ೮೫

ವ|| ಎಂದು ವಿಧೂತನಂದಕಂ ದ್ವಾರಕಾಭಿಮುಖನಾಗಿ ಸಮರಮಂ ಪಾರ್ದು ಮೆಲ್ಲಮೆಲ್ಲನೆ ನಡೆಯುತಿರ್ಪುದುಮಿತ್ತಂ

ಮ|| ತ್ವರಿತಂ ಸೋಲಿಸಿ ಕನ್ನೆಯಂ ಮುರಹರಂ ಕೊಂಡುಯ್ದು ವಾರ್ತಾಪರಂ
ಪರೆಯಂ ಕೇಳ್ದು ವನೇಭಬೃಂಹಿತನಿನಾದಂಗೇಳ್ದ ಸಿಂಗಂ ನಗಾಂ
ತರದಿಂ ಲಂಘಿಸುವಂತೆ ವಿಷ್ಟರದಿನೆಟ್ಟಿಂ ಮೂರ್ಧರತ್ನಾಂಶುಕೇ
ಸರನುತ್ಖಾತನಿಶಾತಖಡ್ಗನಖರಂ ರಕ್ತೇಕ್ಷಣಂ ರಾಕ್ಷಸಂ ೮೬

ವ|| ಅಂತು ಶಿಶುಪಾಲಂ ಸಿಡಿಲ್ದೆಱಗಿ ತದೀಯಮಿತ್ರಂ ಭೀಷ್ಮಕರಾಜಪುತ್ರನಿಂ ತೆಂದಂ

ಉ|| ನೀಂ ನಡೆವನ್ನಮುಂಟೆ ಸಮರಂ ಶಿಶುಪಾಲ ಚತುರ್ಬಲಪ್ರಯು
ಕ್ತಂ ನಡೆದಾನೆ ಕನ್ನೆಯುಮನಾತನುಮಂ ಪಿಡಿದಪ್ಪೆನೆಂದು ದ
ರ್ಪೋನ್ನತಿಯಿಂದೆ ರುಕ್ಮಿ ಬರೆ ನೋಡಿ ದರಸ್ಮಿತನಾಗಿ ರಾಮನಂ
ಕನ್ನೆಗೆ ಕಾಪುವೇೞ್ದು ರಥದಿಂದಿೞಿದೊರ್ವನೆ ಶೌರಿ ತಾಗಿದಂ ೮೭

ವ|| ಆಗಳ್

ಚಂ|| ಮೊದಲೊಳೆ ಕಾಣಲಾಯ್ತುರಿಬಲಂ ಪಡಲಿಟ್ಟುದನಂತೆ ಕೇಳಲಾ
ದುದು ಸುರದುಂದುಭಿಧ್ವನಿಯನಲ್ಲದೆ ನಿಟ್ಟಿಸಲಾದುದಿಲ್ಲ ತಾ
ಗಿದ ಪೊಣರ್ದಿಕ್ಕಿ ಗೆಲ್ದ ಪರಿಯಂ ಮನಮೊಲ್ದೊಡೆ ಕೊಂಡು ಪೋರ್ವನ
ಲ್ಲದೊಡರಿಸೇನೆಯಂ ಕ್ಷಣದಿನಿಕ್ಕುವನಿಂತುಟೆ ಲೀಲೆ ಕೃಷ್ಣನಾ ೮೮

ವ|| ಅಂತು ಚತುರಂಗಬಲಮುೞಿಯೆ ರುಕ್ಮಂ ತನ್ನ ಭುಜಬಲಮನೆ ನಚ್ಚಿ ಬಿಚ್ಚಳಿಸಿ

---

[1] ಮಱುವಕ್ಕಂ ಪೆಱಗೆ‍ೕಯ್ದೆ (ಕಗ) ಮಱುವರ್ಕಂ ಪೆಱಗೆ‍ೕಯ್ದೆ (ಖ)

ಕಂ॥ ಲೋಳಮಣಿಕುಂಡಲಂ ರಣ
ಲೋಳನಿಳಾತಳಕೆ ಪಾಯ್ದು ರಥದಿಂದೊರೆಯಿಂ
ಬಾಳಂ ಕಿೞ್ತುಯ್ದುವಿನಂ
ಬಾಳಂ ಪಿಡಿವಡೆವ ಮಾಱ್ಕೆಯಿಂ ಪಿಡಿವೆತ್ತಂ ೮೯

ತೇರೊಳ್ ರುಕ್ಮಿಣಿ ಭುಜದೊಳ್
ವೀರಾಂಗನೆ ಪಾದಪೀಠದೊಳ್ ರುಕ್ಮಿಯಿರಲ್
ಶೌರಿಯೊಳೊಲವುಂ ನಲವುಂ
ಕಾರುಣ್ಯಮುಮೊಡನೆ ಪೆರ್ಚುತಿರ್ದುವದಳುಂಬಂ ೯೦

ವ॥ ಅಂತು ಚಾಣೂರವೈರಿ ಕಾರುಣ್ಯದಿಂ ಪ್ರಸನ್ನಚಿತ್ತನಾಗಿರಲ್ ಕನ್ಯಾಗ್ರಜನ್ಮನಂತಾಕನ್ಯಾರತ್ನಮನೊಡಂಬಟ್ಟು ಕೊಟ್ಟು ಬೀೞ್ಕೊಂಡು ಕುಂಡಿನೀಪುರಕ್ಕೆ ಪೋದಂ ಇತ್ತ ಪುರುಷೋತ್ತಮಂ ಪ್ರಳಂಬಪ್ರಸೂದನ ಚೋದಿತಸ್ಯಂದನಂ ಭೀಷ್ಮಕನಂದನೆವೆರಸು ಬಂದು ದ್ವಾರಾವತಿಯ ಪೊಱವೊೞಲನೆಯ್ತರ್ಪ ಸಮಯದೊಳ್ ತನ್ನ ಬರವಿಂಗಪ್ಪಶೋಭಾ ವಿಶಿಷ್ಟತರಮಾಗಿ ರಾಜಿಸುವ ನಿಜರಾಜಮಂದಿರಮಂ ಪುಗುವಲ್ಲಿ

ಉ॥ ಮಂಗಳಭೂಷಣಾವಳಿಯ ಬೆಳ್ಪು ಮುಗುಳ್ನಗೆವೆಳ್ಪು ಸಸ್ಮಿತಾ
ಪಾಂಗದ ಬೆಳ್ಪು ಪೊಂದಳಿಗೆ ಸೂಸಿದ ಸೇಸೆಯ ಬೆಳ್ಪು ತಳ್ತಿರಲ್
ಜಂಗಮಪುಷ್ಪವಲ್ಲರಿಗಳೆಂಬಿನೆಗಂ ನಡೆತಂದು ಯಾದವೋ
ತ್ತುಂಗನ ಮೇಲೆ ಬಿತ್ತರಿಸಿದರ್ ಧವಳಾಕ್ಷತಮಂ ಲತಾಂಗಿಯರ್ ೯೧

ಮ॥ಸ್ರ॥ ವಿಗಳದ್ಧಮ್ಮಿಲ್ಲದಿಂ ಮಲ್ಲಿಗೆಯುಗೆ ತೊಡವಿಂ ಮಂಜಗುಂಜಾರವಂ ಕೈ
ಮಿಗೆ ಬಂದಾನಂದದಿಂ ನೋೞ್ಪಬಲೆಯರ ವಿಲೋಲತ್ಕಟಾಕ್ಷಚ್ಛಟಾಶ್ರೇ
ಣಿಗಳಂ ಕೈಕೊಂಡಳುಂಬಂ [1]ತೆಱೆತಮಸಗಿದನಂಗಾಮೃತಾಂಭೋಧಿವೊಲ್[1] ತ
ನ್ನಗರಂ ಬೇಱೊಂದು ಚೆಲ್ವಂ ಕುಡೆ ನೃಪಗೃಹಮಂ ಬಂದು ಪೊಕ್ಕಂ ಮುಕುಂದಂ
೯೨

ವ॥ ಅಂತು ಪೊಕ್ಕು ಗೃಹಮಹತ್ತರನಂ ಕರೆದು ವಿವಾಹಮಂಟಪಮಂ ಮಾಡಿಸೆಂದು ಬೆಸಸುವುದುಮಾತನತಿಪ್ರಭೂತಚೇತೋರಾಗನಾಗಿ ಸಮಸ್ತವಾಸ್ತುಲಕ್ಷಣೋಪಲಕ್ಷಿತಮುಂ ಶುಭಮುಹೂರ್ತೋದಯೋತ್ತಂಭಿತಸ್ತಂಭಸ್ಥಾಪನಮುಂ ನಿಖಿಲಮಾಂಗಲ್ಯಲಕ್ಷ್ಮೀಶೃಂಗಾರಾಲಂಕರಣಪ್ರದೇಶಮುಮೆನಿಸಿ ತಳದಿನಗ್ರಂಬರಂ ತೀವಿದೆನಿತಾನುಂ ತೆಱೆದ ಪೊನ್ನ ರನ್ನದ [2]ರೂವಾರಂಗಳ್[2] ಮನಂಗೊಳೆ ವಿವಾಹಗೇಹಮಂ ಮಾಡಿಸಿದಾಗಳ್

---

[1] ತೆಱೆಮಸಗಿದನಂಗಾಮೃತಾಂಭೋಧಿಯೊಲ್ (ಕಖಗ) [2] ಸಿರಿವಾರಂಗಳ್ (ಮೊಅ)

ಉ॥ ಒಂದಿದನೇಕರತ್ನರಚನಾರುಚಿರದ್ಯುತಿ ತಳ್ತು ತನ್ಮೊಳೊಂ
ದೊಂದನವುಂಕಿರಲ್ ಬರೆದು ಬರ್ಚಿಸಿದಂತೆವೊಲಾಗೆ ಬಂದ ಮಾ
ಕಂದಮಹೀಜದಂತೆಸೆದುದುನ್ನಮಿತೋತ್ಸವಕೇತನಂ ಶುಭಾ
ನಂದಿತಲೋಕಜೀತನಮಹೀನವಿಸೂತನವಾ ನಿಕೇತನಂ ೯೩

ಚಂ॥ ಒದವಿದ ಜೆಲ್ವು ನೂರ್ಮಡಿಸೆ ನೂರ್ಮಡಿಕುಂ ಹರಿದಶ್ಮಭಿತ್ತಿಜಾ
ಳದ ಪಸುರಿಂದೆ [1]ಜಾಗದ[1] ಪಸುರ್ಪುಪಹಾರಮನೋಹರಪ್ರಸೂ
ಸದ ಕಡುವೆಳ್ಪಿನಿಂದೆ ಕಡೆಯಿಕ್ಕಿದ ಮುತ್ತಿನ ಜೆಳ್ಪು ರತ್ನದೀ
ಪದ ಬೆಳಗಿಂದೆ ಮಾಣಿಕದ ಕಂಬದ ಕೆಂಬೆಳಗಾ ನಿವಾಸದೊಳ್ ೯೪

ಕಂ॥ ಮಿಸುಗುವ ಚೌಕದ ಮುತ್ತಿನ
ಪಸೆವಾಸಿನ ಪಟ್ಟವಳಿಯ ದುಗುಲದ ರುಚಿಗಳ್
ಪಸರಿಸೆ ಪೊಂಜಗಲಿ ವಿರಾ
ಜಿಸುತಿರ್ದುದು ಗಾಂಗತುಂಗಪುಳಿನ[2]ಶ್ರೀವೋಲ್[2] ೯೫

*ಮ॥ [3]ಮಸೆವಟ್ಟು[3]ಜ್ಜ್ವಲದರ್ಪಣಂ ಪೊಸದಳಿರ್ ಪೂಮಾಲೆ ಶೇಷಾಕ್ಷತಂ
ಬಿಸಸೂತ್ರಂ ಸಿತದೂರ್ವೆ ನೂತನಯವಗ್ರೈವೇಯಕಂ ತನ್ನೊಳೊ
ಪ್ಪೆ ಸಮಸ್ತೌಷಧಿ ಪಂಚರತ್ನಸಹಿತಂ ಪೂತಾಂಬುಪೂರ್ಣಂ ವಿರಾ
ಜಿಸಿದತ್ತಂಚಿತಶಾತಕುಂಭಮಯಕುಂಭಂ ವೇದಿಕಾಮಧ್ಯದೊಳ್ ೯೬

ಉ॥ [4]ಸಾರಸುವರ್ಣವೇದಿಕೆ[4] ದುಕೂಲವಿತಾನಮಪೂರ್ವಭಂಗಿ ಭೃಂ
ಗಾರಘಟಾಳಿ ಪೂರ್ಣಕಲಶಂ ಮಣಿದೀಪಿಕೆ ಪಲ್ಲವೋಲ್ಲಸ
ತ್ತೋರಣಮುನ್ನತಧ್ವಜಮೆನಿಪ್ಪುವು ಮಂಗಳಲಕ್ಷ್ಮಿ ತೊಟ್ಟಲಂ
ಕಾರನಿಕಾಯದಂತಿರೆ ಮನೋಹರಮಾಯ್ತು ವಿವಾಹಮಂಟಪಂ ೯೭

ಮ॥ ಜವೆ ದಿವ್ಯೌಷಧಿ ಪಾರಿಜಾತಕುಸುಮಂ ಸಿದ್ಧಾರ್ಥಮಾರ್ದ್ರಾಕ್ಷತಂ
ಧವಳಾಬ್ಜಂ ಸಿತದೂರ್ವೆ ನೂತನಫಲಂ ಗೋರೋಚನಂ ಲಾಜೆ ಬ
ಣ್ಣವುರಂ ರನ್ನದ ತಣ್ಬೊಜ್ಜಡರ್ ಮಳಯಜಂ ಕಸ್ತೂರಿ ಕಾಶ್ಮೀರಮೆಂ
ಬಿವಱಿಂ ತೆಕ್ಕನೆ ತೀವಿ ಪೊಂಬರಿಯಣಂ ಜೆಲ್ವಾದುವಾ ಸದ್ಮದೊಳ್ ೯೮

ವ॥ ಆ ಮಹೋತ್ಸವದೊಳ್ ವನಮಾಲಿ ಮಜ್ಜನಶಾಲೆಗೆ ಬಿಜಯಂಗೆಯ್ದು ಮಜ್ಜನಪೀಠಮನಲಂಕರಿಸಿದಾಗಳ್

---

1 ಜಾಗರ (ಕಖಗ) 2 ಶ್ರೀಯೊಲ್ (ಕಖಗ) 3 ಮೊಸರ್ವಟ್ಟು (ಖಗ) 4 ಸುಪರ್ಣ ವೇದಿಕೆ (ಖಗ) * ಈ ಪದ್ಯ (ಕ) ಪ್ರತಿಯಲ್ಲಿಲ್ಲ.

ಚಂ॥ ಉಗುರ್ಗೊನೆಯಿಂದಮೂಗುರಿಸುವೋಜೆ ತಜಂತಜದಿಂ ಶಿರೋಜಮಂ
ನೆಗಪುವ ಭಂಗಿ ಬಿತ್ತರದಿನೆತ್ತುವ ಕೆಂದಳದೊಂದು ಲಾಘವಂ
ಸೊಗಯಿಸುತಿರ್ಪಿನಂ ಸಹಜದಿವ್ಯಸುಗಂಧನ ಕೇಶಪಾಶಮಂ
ಮೃಗಮದಗಂಧಿ ಪೂಸಿದಳುಪಾಸಿತಚಂಪಕಗಂಧತೈಲಮಂ ೯೯

ಮ॥ ಬಿಗಿದುತ್ತುಂಗಕುಚಂ ಕದಕ್ಕದಿಸೆ ಹಾರಂ ತೂಗೆ ಕಣ್ಬೆಲ್ಲಮು
ಲ್ಲುಗೆ ಪೊಸ್ನೋಲೆ ಕದಂಪನಪ್ಪಳಿಸೆ ಮಧ್ಯಂ ಬಳ್ಕೆ ಘರ್ಮಾಂಬು ಕೈ
ಮಿಗೆ ಕಣ್ಗೊಂಡು ಜಗಜ್ಜನೈಕವಿಭುವಂ ಯೋಷಿಜ್ಜನಂ ಮಜ್ಜನಂ
ಬುಗಿಸಿತ್ತಂದು ಸುಹೃಜ್ಜನಂ ವಿರಚಿಪನ್ನಂ ಮಂಗಳಾಚಾರಮಂ ೧೦೦

ವ॥ ಅನಂತರಂ ನೈಪಥ್ಯನಿಳಯಕ್ಕೆವಂದಲ್ಲಿ

ಚಂ॥ ಮನಮನಲರ್ಚುತಿರ್ಪ ನವಪುಷ್ಪಸಮೃದ್ಧಿ ವಸಂತಚೂತನಂ
ದನಮಲರ್ವಂತು ಮಾಂಗಳಿಕಸಾರಧನಂ ಧವಳಪ್ರಸಾಧನಂ
ತನಗಮರ್ದೊಪ್ಪೆ ತದ್ವಿಮಲಮೌಕ್ತಿಕಮಂಡನಕಾಂತಿಪೂರದಿಂ
ನೆನೆಯಿಸಿದಂ ಮುಕುಂದನಮೃತಾಬ್ಧಿಯೊಳಿರ್ಪ ನಿಜಾದಿಮೂರ್ತಿಯಂ ೧೦೧

ವ॥ ಆಗಳೊಂದು ಶೃಂಗಾರವೇಶ್ಮದೊಳ್ ಭೀಷ್ಮಕಸುತೆಯನಲಂಕರಿಸಲೆಂದು ನೆರೆದನೇಕವಿಧದ ವನಿತೆಯರಾಕೆಯ ಸೌಕುಮಾರ್ಯಮಂ ನಿರೀಕ್ಷಿಸಿ

ಚಂ॥ ವಿಳಸಿತಮಪ್ಪದೊಂದು ಪೊಳೆಪಂ ತಳೆದಿರ್ದುದನಿಂದುಲೇಖೆಯುಂ
ಪೊಳೆಪಿಡವೇಳ್ಪುದೇ ಸಹಜಸೌಂದರರೂಪೆಯನೀ ಮೃಣಾಳಕೋ
ಮಳೆಯುನದೇನಲಂಕರಿಸವೇಳ್ಪುದೆ ಮಂಗಳವರ್ಧನಾರ್ಥಮಿ
ಲಳನೆಯನಿಂದಲಂಕರಿಸುವಂ ವಿವಿಧಾಭರಣಪ್ರತಾನದಿಂ ೧೦೨

ವ॥ ಎಂದು ನುಡಿದು ಮತ್ತಮಪರೊಳೊರ್ವಳತಿಚಾತುರ್ಯವತಿಯಿಂತೆಂದಳ್

ಮ॥ ಲಳನಾಭೂಷಣವೀಕೆ ಭೂಷಣಕೆ ಭೂಷಾಲಕ್ಷ್ಮಿಯಂ ಮಾಳ್ಪುದೀ
ಲಳಿತಾಕಾರೆಯ ರೂಢಿವೆತ್ತವಯವಂ ತತ್ಕಾರಣಂ ಭೂಷಣಂ
ಗಳಿನೀ ಕಾಂತೆಗೆ ಶೋಭೆಯಂ ಪಡೆವ ಮಾತಂತಿರ್ಕೆ [1]ದಲ್ ಭೂಷಣಾ[1]
ವಳಿಗೀ ಕೋಮಲೆಯಂಗಸಂಗದೆ ನವಶ್ರೀಶೋಭೆಯಂ ಮಾಡುಗುಂ ೧೦೩

ವ॥ ಎಂದು ಪೊಗಟ್ಟಿ ತದನಂತರ

[1] ತದ್ಭೂಷಣಾ (ಕ)

ಕಂ॥ ಉದಯಿಸುವೆಳವೆಱತಯಂ ಪರು
ಣದಿಶಾವಧು ಸಂಜೆಗೆಂಪಿನಿಂ ರಂಜಿಪವೋಲ್
ಸುದತಿಯನದೊರ್ಬಳನುರಾ
ಗದೆ ಕುಂಕುಮದಂಗರಾಗದಿಂ ರಂಜಿಸಿದಳ್ ೧೦೪

ಘುಸೃಣರಸದಿಂದಮೆಸೆದಳ್
ಕಿಸಲಯದಿನಶೋಕಲತಿಕೆ ಕೇಸರರಜದಿಂ
ಬಿಸಜಿನಿ ಕೆಂಗವಸಣಿಗೆಯಿ
ನಸಮಾಯುಧಚಾಪಲೇಖೆಯೆಸೆವಂತಿರವಳ್ ೧೦೫

ವ॥ ಮತ್ತೊರ್ವಳಲಘುಜಘನೆ ದುಗುಲಮಂ ನಿಱಿವಿಡಿದು ತಂದುಕುಡೆ

ಕಂ॥ ಬಂಬಲ್ನಿಱಿ ಮದನನ ನನೆ
ಯಂಬಿನ ಪೊದೆಯೆನಿಸೆ ಕಣೆಯಮಳವಟ್ಟಿರೆ ಮು
ಯ್ವಂ ಬಳಸಿದ ಮೇಲುದು ಕುಚ
ಮಂ ಬಿಗಿದಿರೆ ಗುರುನಿತಂಬೆ ದುಗುಲಮನುಟ್ಟಳ್ ೧೦೬

ಗೆಲೆವಂದಮೃತಾರ್ಣವಫೇ
ನಲಕ್ಷ್ಮಿಯಂ ಮಿಸುಪ ದುಗುಲದುಳ್ಳುಡೆ ಪಿರಿದುಂ
ಲಲಿತಾಂಗಿಗೆ ಸೊಗಯಿಸಿದ
ತ್ತುಲದೊಂಗಲ್ ಕಲ್ಪಲತೆಗೆ ಸೊಗಯಿಪ ತೆಱದಿಂ ೧೦೭

ವ॥ ಮತ್ತೊರ್ವಳುಪಹಾಸಕಲಿತಕಲಭಾಷಿಣಿ

ಕಂ॥ ಒಡೆಯೆ ಪುರುಡಿಂದಮಿಾಕೆಯ
ಪದದಲತಗೆ ಕೃಷ್ಣನಂಗದೊಳ್ ಪೊರೆಗುಂ ಬೇ
ಟದ ಮುದ್ರೆಗಳಂತೆನುತುಂ
ಸುದತಿಯ ಕೇಸಡಿಯನೂಡಿದಳ್ ಜತುರಸದಿಂ ೧೦೮

ತರುಣಿಯ [1]ಪದತಳವಲತಗೆ[1]
ಪೊರೆದೆಸೆದುವು ತಮ್ಮನಚ್ಯುತಂ ಮೂರ್ಧದೊಳಾಂ
ತಿರೆ ತನ್ಮಣಿಮಕುಟದ್ಯುತಿ
ಪೊರೆದಪುದೀ ಕ್ರಮದೊಳೆಂದು ಸೂಚಿಪ ತೆಱದಿಂ ೧೦೯

---

1 ಪದತಳದಲತಗೆ (ಕಖಗ)

ವ|| ಮತ್ತೊರ್ವಳ್ ಕುಂದಮಂದಸ್ಮಿತಾಂಶುವಿಶದಾಕ್ಷರಾಳಾಪೆ

ಮ|| ಹರಿ ಪಾದಾನತನಾಗೆ ತನ್ಮಕುಟಸಂಘಟ್ಟಂಗಳಿಂದಾದ ನೂ
ಪುರದೊಂದೀಂಚರವೀ ಲತಾಂಗಿಯ ಮಹಾಸೌಭಾಗ್ಯಮಂ ಸಾಱುವಂ
ತಿರವೇಱ್ಕುಂ ದಿಟಮೆಂದು ರುಕ್ಮಿಣಿಗದೊರ್ವಳ್ ಕಟ್ಟಿದಳ್ ರತ್ನನೂ
ಪುರಮಂ ತತ್ಪದಕಾಂತಿ ನೂರ್ಮಡಿಪಿನಂ ಮಂಜೀರಿಕಾ[1]ಕಾಂತಿಯಿಂ[1] ೧೧೦

ಕಂ|| ಬಿರುವನ್ಮಣಿನೂಪುರಯುತ
ಚರಣಾಬ್ಜ ದಿನೆಸೆದಳಸಿಯಳಬ್ಜ ಪರಾಗಂ
ಬೊರೆದು ಮೊಱೆಆವಳಿಗಳಂ ತಳೆ
ದರುಣಾಬ್ಜ ದಿನೆಸೆದು [2]ತೋಱುತಿರ್ಪಬ್ಜನಿವೋಲ್[2] ೧೧೧

ವ|| ಮತ್ತೊರ್ವಳತಿ[3]ಚತುರವಚನೆ[3]

ಕಂ|| ಕಲಕಾಂಚಿಯ ಗಂಟೆಗಳೀ
ಲಲನೆಯ ಲಾವಣ್ಯನದಿಯ ಪೊಣರ್ವಕ್ಕಿಗಳೊಂ
ದುಲಿಪುವೆನಲುಲಿಗುಮೆನುತಂ
ಲಲನೆಗೆ ಕಟ್ಟಿದಳೆ ರಮಣಿ ಮಣಿಮೇಖಲೆಯಂ ೧೧೨

ಧರಿಯಿಸಿ ಮಣಿಮೇಖಲೆಯಂ
ಕರಮೆಸೆದತ್ತಲಘುಜಘನೆಯತಿಘನಜಘನಂ
ಸ್ಮರಕುಂಭಿಕುಂಭಮಾಂತುದು
ಸುರತ್ನನಕ್ಷತ್ರಮಾಲಿಕೆಯನೆಂಬಿನೆಗಂ ೧೧೩

[4]ಅಸುರಾರಿಗೆ ಸೋಲ್ತಂದ
ಯ್ದು ಸರಕ್ಕೆಡೆಗೊಟ್ಟ ಸತಿಯ ಕುಚಯುಗಮಧ್ಯಂ
ತಿಸರಕ್ಕೆಡೆಗುಡದೆಂದಾ
ಅಸಿಯಳ್ಗೆ ಸೆಮೆಕ್ಕಸರಮನಿಕ್ಕಿದಳೊರ್ವಳ್[4] ೧೧೪

---

[1] ಕಾಂತಿಯುಂ (ಖ) [2] ತೋಱುತಿರ್ಪಬ್ಜಿನಿಯೊಲ್ (ಕಗ) [3] ವಚನಚತುರೆ (ಕಗ)
[4] ಅಸುರಾರಿಗೆ ಸೋಲ್ತಂದೈದುಸರಕ್ಕೆಡೆಗೊಟ್ಟ ಸತಿಯ ಕುಚಮಧ್ಯದೊಳೆಕ್ಕಸರಂ ನುಸುಳಲ್ಪಾರದು ಬಿಸಮಂದವಿದೆನಿಸಿ ಯುವತಿಗೆಸೆದುದು ಹಾರಂ (ಕ)

ಸ್ತನಪುಳಿನದಲ್ಲಿ ಸೂಸಿದ
ತನುಲಾವಣ್ಯಾಪಗಾಪಯಃಕಣಗಣಮೆಂ
ಬಿನೆಗಂ ಕುಚದೊಳ್ ನೀಹಾ
ರನಿಜೋಜ್ವಳಹಾರಮೆಸೆಯೆ ರುಕ್ಮಿಣಿಯೆಸೆದಳ್ ೧೧೫

ಇವಳ ಭುಜಲತಿಕೆಗಳ್ಗಿವು
[1]ನವಮುಕುಳಾವಳಿ[1]ವೊಲೆಸೆಗುಮೆನುತಂ ದ್ಯುತಿವೀ
ಱುವ ಮುತ್ತಿನ ಚಳಕಿಗೆಯಂ
ಯುವತಿಯ ನಳಿತೋಳ್ಗೆ ಕಟ್ಟಿದಳ್ ಮತ್ತೊರ್ವಳ್ ೧೧೬

ಸ್ಮರಕರಿಣೀಹಸ್ತಾಗ್ರಂ
ಸುರುಚಿರಬಿಸಕಾಂಡವಲಯವೇಲ್ಲಿತವಾದಂ
ತಿರೆ [2]ನಳಿತೋಳ್ಗಳ್ ಮುತ್ತಿನ
ಸರಿಗೆಯನಾಂತೆಸೆಯೆ ಕಾಂತೆ ಬಿಂಕವನಾಂತಳ್[2] ೧೧೭

ಪೂಗಣೆ ಗಣನೆಯೊಳಿರ್ಮಡಿ
ಯಾಗಿರ್ದಪುವಭಿನವಂಗಳಿವಱೊಳ್ ಮುದ್ರಾ
ಯೋಗವಿಧಿಯೆಂದು ಬೆರಲಿಂ
ಗಾಗಳ್ ಮುದ್ರಿಕೆಯನೊರ್ವಳಿಟ್ಟಳ್ ಸತಿಯಾ ೧೧೮

ಉಡಿಸಿದ ನನೆಗಣೆಯಂತಿರೆ
ತುಡಿಸಿದ ಮುದ್ರಿಕೆಯಿನೆಸೆವ ಬೆರಲಿಂ ಬೆರಲಂ
ಮಿಡಿಯಿಸಿ ರುಕ್ಮಿಣಿ ಜಗಮಂ
ಮೃಡರಿಪು ಬೆರಲೆತ್ತಿ ನಿಲ್ಪಿನಂ ಬಗೆಗೊಂಡಳ್ ೧೧೯

ಈ ಲಲನೆಯ ಮುಖಚಂದ್ರನ
ನೋಲೈಸಲ್ಕೆಂದು ಬಂದು ಮಂಡಳಿಸಿದ ತಾ
ರಾಳಿಯವೊಲೆಸೆವುದೆನುತಂ
ಬಾಲೆಗೆ ಕಿವಿಗಿಕ್ಕೆ ಮುತ್ತಿನೋಲೆಯನೊರ್ವಳ್ ೧೨೦

---

1 ನವಮುಕ್ತಾವಳಿ (ಕಖಗ) 2 ತೋಳ್ಗಳ ಕಂಕಣ ಹರಿಣೀನೇತ್ರೆಯ ಕರಂಗಳಂ ಸೊಗಯಿಸುಗುಂ (ಕ)

ಮಂಡಳಿಸಿ ನಿಂದುವೀಕೆಯ
ಪಾಂಡುರಲೋಲಕ್ಕಟಾಕ್ಷಮಾಲಾಚ್ಛಟೆಗಳ್
ಗಂಡಸ್ಥಳದೊಳೆಸಲ್ ಬಗೆ
ಗೊಂಡುವು ಪೊಸಮುತ್ತಿನೋಲೆಗಳ್ ಶಶಿಮುಖಿಯಾ ೧೨೧

ಮದನಜಯವಶ್ಯಯಂತ್ರಮ
ನಿದೆ ಚಿತ್ರಿಸಿದಪ್ಪಳೆಂಬಿನಂ ಚಿತ್ರಿಸಿದಳ್
ಸುದತಿಯ ಕಪೋಲದೊಳ್ ಸ
ಮ್ಮದದಿಂ ಮೃಗಮದದ ಪತ್ರಭಂಗಮನೊರ್ವಳ್ ೧೨೨

ಪದನಾಮೋದಕ್ಕೆಱಗುವ
ಮದಭೃಂಗದ ಕರ್ಣಪೂರಕ್ಕೈರವದ ನೆೞಲ್
ಪುದಿದತ್ತು ಕಪೋಲದೊಳೆನೆ
ಸುದತಿಗೆ ಮೃಗಮದದ ಪತ್ರಲೇಖೆಗಳೆಸೆಗುಂ ೧೨೩

ಕೆಂದಾವರೆವಂಡುಂಡಾ
ನಂದದಿನೋಕರಿಸುವಳಿಗಳೆನಿಸುಗುಮಿವಱಿಂ
ದೊಂದಿದ ಕುರುಳೆಂದೊರ್ವಳ್
ಸಂದಿಸಿದಳ್ [1]ಚೆನ್ನ[1] ಪೂವನಬಲೆಯ ಕುರುಳೊಳ್ ೧೨೪

ಎಳವಿಸಿಲ ತಮದ ಮಱಂಗಳ್
ಕೆಳೆಗೊಂಡಿರ್ದಪುವು ಮುಗ್ಧಶಶಿಯ ಸಮೀಪ
ಸ್ಥಳದೊಳೆನೆ [2]ಚೆನ್ನ[2] ಪೂಗಳು
ಮಳಕಂಗಳ್ ನಿಟಿಲತಟದೊಳೆಸೆದುವು ಸತಿಯಾ ೧೨೫

ತಿಲಕಿಸೆ ಮದನದ್ವಿರದಂ
ತಿಲಕಮನೀಕನ್ನೆಗಿಡುವೆನೆನುತುಮದೊರ್ವಳ್
ತಿಲಕಮನಿಡೆ ಸತಿ ಶೃಂಗಾ
ರಲಕ್ಷ್ಮಿ ಕಣ್ದೆಱೆದ ತೆಱದೆ ತಿಲಕದಿನೆಸೆದಳ್ ೧೨೬

ನೆಲೆಯುಂ ಗಾಡಿಯುಮಳವಡೆ
ಲಲನೆ ಪೆಱಳ್ ದಿವ್ಯಮಾಲೆಯಂ [3]ಮುಡಿಯಿಸಿದಳ್
ಮಲೆವಾ ಜಗವೆಲ್ಲಮುಂ ಸಲೆ
ಗೆಲೆವಂದಸಮೇಷು ಪೂಣ್ದು ಮುಡಿಗಿಕ್ಕುವಿನಂ ೧೨೭

1 ಚಿನ್ನ (ಮೊಅ) 2 ಚಿನ್ನ (ಮೊಅ) 3 ಮುಡಿಯಿಸೆ ಕೋಮಳೆಗೆ (ಕಖಗ)

ವ|| ಮತ್ತೊರ್ವಳ್

ಕಂ|| ನಿನ್ನ ಮುಖಪ್ರತಿಪಕ್ಷನ
ನಾನ್ನೋಡಿದೆ ಸೆಱಗೆ ತಂದೆನಿಂದುವನೆಂಬಂ
ತುನ್ನತಕುಚೆ ತೋಱಿದಳಾ
ಜೆನ್ನೆಗೆ ಕನ್ನಡಿಯನಮಲಮಣಿಶೃಂಖಲಮಂ ೧೨೮

ಜಿತಚಂದ್ರಮಂಡಲಕ್ಕೆ
ಪ್ರತಿಮಕ್ಕೀಕೆಯ ಮೊಗಕ್ಕೆ ಕಂಡೆವಿದೊಂದಂ
ಪ್ರತಿಮಾನಮನೆನೆ ವದನ
ಪ್ರತಿಕೃತಿ ಜೆಲ್ವಾಯ್ತು ಮುಕುರದೊಳ್ ರುಕ್ಮಿಣಿಯಾ ೧೨೯

ವ|| ಅಂತು ಕೈಗೆಯ್ಸಿ ರುಕ್ಮಿಣಿಯಂ ಪರಿಣಯನಭವನದೊಳ್ ಯಥೋಚಿತಾಚಾರದಿಂದಿರಿಸಿ

ಉ|| ಕೋಮಳ ಮಾತುಳುಂಗಫಳದಿಂ ಬಲಗೈ [1]ಕಳಮಾಕ್ಷತಪ್ರ[1]ಪೂ
ರ್ಣಾಮಳಶಂಖದಿಂದಮೆಡಗೈಯೆಸೆಯುತ್ತಿರೆ ಬಂದನುತ್ಕಟ
ಪ್ರೇಮನುದಾತ್ತವೇದನುತಿ ಕೃಷ್ಣಸಭಾವಳಯಕ್ಕೆ ವಿಶ್ವವಿ
ದ್ಯಾಮಹಿತಂ ದ್ವಿಜೌಘಸಹಿತಂ ಯದುವಂಶಹಿತಂ ಪುರೋಹಿತಂ ೧೩೦

ವ|| ಅಂತು ಬಂದು ಪುರೋಹಿತನುಚ್ಚಾರಿತಸ್ವಸ್ತಿಶಬ್ದನಾಗಿ ಮಾತುಳುಂಗಫಲಮಂ ನೀಡಿ ವಿವಾಹಲಗ್ನಮಾಸನ್ನಮೆಂದು ಬಿನ್ನಪಂಗೆಯ್ವುದುಮಂಬುರುಹನಾಭಂ ಸಂಭ್ರಮದಿಂ ಪರಿಣಯನಭವನಾಭಿಮುಖನಾಗಿ

ಚಂ|| ಬಳವದಪಾರವೇದರುತಿ ಗೇಯರವಂ ಪಟಹಸ್ವನಂ ಪುರೀ
ಕಳಕಳದಿಂ ದಳಂಬಡೆದು ವಿಶ್ವಜಗಜ್ಜನಕೀರ್ತನಾರವಂ
ಗಳಿನಿನಿಸೇಱಗ್ಗಮೆತ್ತು ದಿಗಿಭಪ್ರಜಬೃಂಹಿತಭೂರಿನಾದದಿಂ
ಜಳಧಿಯನಾಂತು ಘೂರ್ಣಿಪಿನಮಾಗೃಹಮಂ ಪುಗುತಂದನಚ್ಯುತಂ ೧೩೧

ವ|| ಅಂತು ವಿವಾಹಮಂಟಪಮಂ ಪುಂಡರೀಕಾಕ್ಷಂ ಪುಗುವುದುಂ ಮಹೋತ್ಸಾಹಪರಂಪರೆ ನೆಗೞ್ತೆ ತದನಂತರಂ

[1] ಕಲಮಾಕ್ಷತಾರ್ದ್ರ (ಗ)

ಚಂ|| ತೊಲಗೆ ದುಕೂಲಕಾಂಡಪಟಮುತ್ತಮಲಗ್ನದೊಳೊರ್ವರೊರ್ವರಂ
ನಲಿದೊಲವಿಂದೆ ದಂಪತಿಗಳೀಕ್ಷಿಸೆ ನೋಟದ ಬಳ್ಳಿವಳ್ಳಿ ನೆ
ಯ್ದಿಲ[1]ಮಟಿಕವೊಲ್ ಸುಧಾರಸದ ಸೋನೆವೊಲಂಗಜಬಾಣವೃಷ್ಟಿವೊಲ್[1]
ಸಲೆ ನಿಲೆ ಪರ್ವಿ ಕೊರ್ವಿದುದು ಕೂಡೆ ವಿವಾಹಗೃಹಾಂತರಾಳದೊಳ್ ೧೩೨

ವ|| ಅಲ್ಲಿಂ ಬಟಿಯಂ

ಕಂ|| ಮೃದುಗತಿವಿಲೋಲಹಾರರ್
ಪ್ರದಕ್ಷಿಣಂ ಬಂದು ದಕ್ಷಿಣಾವರ್ತಶಿಖಾ
ಸ್ಪದನಂ ಹೋಮಾನಳನಂ
ಮದುವಕ್ಕಳ್ ಮಿಸುಪ ಲಾಜೆಯಿಂ ಪೂಜಿಸಿದರ್ ೧೩೩

ಪರಿಕಲಿಸಿ ಕಲಸೆ ಪಟವಾ
ಸರಜಂ ಸುರಿವಮಲಮೌಕ್ತಿಕಾಕ್ಷತನಿಕರಂ
ಕರಮೆಸೆದತ್ತು ಬಿಸಿಲ್ಮಟಿ
ಸುರಿವಂತೆವೊಲಾ ವಿವಾಹಸಮಯೋತ್ಸವದೊಳ್ ೧೩೪

ಲಳಿತಾವಯವದ ಜೆಲ್ವಿಂ
ತೊಳಗುವ ಲಾವಣ್ಯರಸದಿನಬಳಾವಳಿ ತ
ನ್ನಿಳಯಮಣಿಪುತ್ರಿಕಾಸಂ
ಕುಳದೊಳ್ ಯಾನಾನುಮೇಯಮಾಯ್ತಾ ಪದದೊಳ್ ೧೩೫

ಉ|| ಶೀತಕರೋದಯೋತ್ಸವದೊಳಂಬುಧಿ ಘೂರ್ಣಿಸುವಂದದಿಂ ಮುರಾ
ರಾತಿ ವಿವಾಹದುತ್ಸವದೆ ಘೂರ್ಣಿಸುತಿರ್ಪ ರಸಪ್ರಸಂಗ ಸಂ
ಗೀತನಿನಾದದಿಂ ದೆಸೆಯೊಳುಣ್ಮುವ ಮಾರ್ದನಿಗಳ್ ದಿಶಾಧಿಪ
ವ್ರಾತಮೆ ರಾಗದಿಂ ಪರಸುವಂತೆವೊಲಾದುದು ತನ್ಮುಕುಂದನಂ ೧೩೬

ವ|| ಅಂತು ವಿವಾಹಮಂಗಳಂ ಪರಿಪೂರ್ಣಮಾಗೆ ಚತುರ್ಥಮಹೋತ್ಸವಾನಂತ ರಮುಂದಿನಿರುಳೊಳ್

ಕಂ|| ದ್ಯಾವಾಪೃಥಿವೀವಲ್ಲರಿ
ಶೀವಿದುವಲರಂಬಿನಿಂದಮೆನೆ ಬೆಳ್ದಿಂಗಳ್
ಶೀವಿರೆ ಜಗಮಂ ಕೃಷ್ಣಂ
ದೇವೀಯುತನಮಳಧವಳಶಯನದೊಳೆಸೆದಂ ೧೩೭

---

1 ಮುಚುಂಕಂಗೊಳ್ ಸುಧಾರಸದ ಸೋನೆಯೊಳಂಗಜಬಾಣವೃಷ್ಟಿಯೊಳ್ (ಕಖ)

ಮ॥ ನುಡಿಸಲ್ ಕೇಳಿಶುಕಾಳಿಯೊಳ್ ನುಡಿವ ಸೋಂಕಲ್ ಪಿಂಗೆ ಸಾರ್ದಿರ್ದ ಕೌ
ಳುಡೆಯಂ ಸೋಂಕುವ ವಕ್ತ್ರಮಂ ಪಿಡಿದುನೋಡಲ್ ಪಾರ್ಶ್ವವಿದ್ಧಂಗಳಂ
ನಡೆನೋಟಿಙ್ಪೋಪಳದೊಂದುಭಾವರಸಗರ್ಭಕ್ರೀಡೆಯುಂ [1]ವ್ರೀಡೆಯುಂ[1]
ಪಡೆಸನ್ನಂ ಮುದಮಂ ಮುಕುಂದನತಿರಾಗೋದ್ರೇಕಮಂ ತಾಳ್ದಿದಂ ೧೩೮

ಬೆರಲೊಳ್ ಮುದ್ರಿಕೆಯಂ ತೊಡರ್ಚುವ ಕಪೋಲಸ್ಥಾನದೊಳ್ ಪತ್ರವ
ಲ್ಲರಿಯಂ ಚಿತ್ರಿಪ ಹಾರಮಂ ಪಿಡಿದುನೋಟ್ಪಾಸ್ಯಾಂಬುಜಸ್ವೇದಮಂ
ಕರದಿಂದಂ ತೊಡೆವೊಯ್ಯನುಳ್ಳುಡೆಗೆ ಕಾಂಚೀದಾಮಮಂ ಸಾರ್ಚುವೊ
ಳ್ಗುರುಳಂ ನೇರ್ಪಡೆ ತಿರ್ದುವೀನೆವದೆ·ಕೃಷ್ಣಂ ನಲ್ಲಳಂ ಪೊರ್ದಿದಂ ೧೩೯

ಒಲವಿಂ ನೋಡುವ ನೋಟದಿಂ ಪದೆದು ಸೋಂಕುತ್ತಿರ್ಪ ಸೋಂಕಿಂ ಮನಂ
ಗೆಲೆ ಮಾತಾಡುವ ಮಾತಿನಿಂ ಕಳೆದು ಲಜ್ಜಾಸಾಧ್ವಸೋದ್ರೇಕಮಂ
ಜಲಜಾತಾಕ್ಷನೊಳಾಕೆ ಬಿಚ್ಚತಿಕೆಯಂ ಮಾಡಲ್ ಬಱಿಕ್ಕಂ ಕಳಾ
ನಿಲಯಂ ಮಾಡಿದನೊಲ್ದು ಚುಂಬನಪರಿಷ್ವಂಗಪ್ರಪಂಚಂಗಳಂ ೧೪೦

ಕಂ॥ ನವಲಜ್ಜೆಯೆಂಬ ಕಾಂಡಪ
ಟವೊಯ್ಯನೋಸರಿಸೆ ಸೂತ್ರಧಾರಕನಪ್ಪಾ
ತ್ಮವರಂಗೆ ಪಡೆದುದತ್ಯು
ತ್ಸವಮಂ ರತನಾಟಕಪ್ರಗಲ್ಭತೆ ಸತಿಯಾ ೧೪೧

ಮಾನಿನಿಯು ಸುರತರತ್ನನಿ
ಧಾನಂ ಚಾತುರ್ಯ[2]ದೀಪವರ್ತನೆಯಿನದೆಂ[2]
ತಾನುಂ ಕೋಳ್ಕೊಯ್ತೆನಲಾ
ಮಾನಿನಿಯೊಳ್ ಚಕ್ರಿ ಸುರತಸುಖದಿಂದಿರ್ದಂ ೧೪೨

ಚಂ॥ ಅನುದಿನಮಿಂತು ಕಾಮಸುಖದಿಂದನುರಾಗಮನಿತ್ತು ರುಕ್ಮಿಣೀ
ವನಿತೆಗೆ ರಕ್ಷಣಕ್ಷಮತೆಯಿಂ ಪತಿ ಹರ್ಷಮನುಂಟುಮಾಡಿ ಮೇ
ದಿನಿಗೆ ಮಹತ್ವದಿಂ ಜಸಮನಾಗಿಸಿ ಯಾದವಸಂಕುಳಕ್ಕೆ ಪೆಂ
ಪನುಗುಣಮಾಗಿರಲ್ ಸುಖದಿನಿರ್ದನಚಿಂತ್ಯಬಲಂ [3]ಬಲಾನುಜಂ[3] ೧೪೩

---

[1] ಪ್ರೌಢಿಯುಂ (ಖ) [2] ದೀಪವರ್ತಿನಿಯಿನದೆಂ (ಕಖಗ) [3] ಬಲಾನ್ವಿತಂ (ಕ)

ಇದು ಸಮಸ್ತ ಕಮಳಭವಾಂಡ ಮಾಲಾಘಟೀಘಟಿತಾರಘಟ್ಟಘಟನಾ ಸ್ವತಂತ್ರ
ನಿಜಸ್ವರೂಪನಿರೂಪಣಚಕಿತ ಸಕಳಾಮ್ನಾಯತಂತ್ರ ಲಕ್ಷ್ಮೀಕಾಂತ
ಶ್ರೀಪಾದಭಕ್ತಿಯುಕ್ತ ಸುಕವೀಂದ್ರ ರುದ್ರಪ್ರಣೀತ
ಶ್ರೀಜಗನ್ನಾಥವಿಜಯಮಹಾಪ್ರಬಂಧದೊಳ್
ನಾರದಾಗಮನ ರುಕ್ಮಿಣೀರೂಪಪ್ರಶಂಸನ
ತದೀಯದರ್ಶನ ತದಗ್ರಜಯುದ್ಧ
ತದ್ವಿವಾಹವರ್ಣನಂ
ದಶಮಾಶ್ವಾಸಂ

ಏಕಾದಶಾಶ್ವಾಸಂ

ಕಂ|| ಶ್ರೀಕಂಠರಿಪುವಿನಸ್ತ್ರಾ
ನೀಕಂ ಬಗೆವುಗಲದೊರ್ವೆ ಸತ್ರಾಜಿತ್ಕ
ನ್ಯಾಕಾರಂ ಬಗೆವೊಕ್ಕುದು
ಲೋಕಜನಸ್ತುತಿಗಳಿಂ ಗರುತ್ಮದ್ಧ್ವಜನಾ ೧

ವ|| ಅನಿಶಂ ಪಾಠಕಪಾಠದಿಂ ಕಥಕರತ್ಯಾಳಾಪದಿಂ ವಂದಿವಂ
ದನದಿಂ ಗಾಯಕಗೇಯದಿಂ ನೆಗೞ್ದ ಸತ್ರಾಜಿತ್ಸುತಾರೂಪಯೌ
ವನಲಾವಣ್ಯವಿಲಾಸಲಕ್ಷಣಗುಣಂಗಳ್ ಮಾಡಿ ಸಮ್ಮೋಹಮಂ
ಮನಮಂ ಧೈರ್ಯಮನೀೞ್ಕೊಳಲ್ ಮುರಹರಂ ವಿಭ್ರಾಂತಿಯಂ ತಾಳ್ದಿದಂ ೨

ಕಂ|| ಸತ್ರಾಜಿನ್ನೃಪನಲ್ಲಿಗೆ
ಮೈತ್ರೀಮಿಷದಿಂದೆ ಪೋಗಿ ತನ್ನಯ ರೂಪಂ
ಗೋತ್ರಧರಂ ತೋಱಲ್ ತ
ತ್ಪುತ್ರಿಗೆ ತೋಱಿದನನಂಗನಿಷುಕೌಶಲಮಂ ೩

ಚಂ|| ಮನಸಿಜನಂಬು ನಾಂಟೆ [1]ತನುವಂ[1] ಮನಮುಂ ಮನದಾಣ್ಮನಾದ ಕೃ
ಷ್ಣನ ಬೞಿಸಂದೊಡಾ ತರುಣಿ ಚಿತ್ರದ ಲೆಪ್ಪದ ಕಲ್ಲ ಪೆಣ್ಣರೂ
ಪೆನೆ ಮರವಟ್ಟಳಾದಳನಂಗಶರಕ್ಕೆಡೆಮಾಡದಾವಳಂ
ನೆನೆಯಿಸಿ ಕಾಡದಾವಳನದಿರ್ಪದು ಕೃಷ್ಣನ ರೂಪವಿಭ್ರಮಂ ೪

ಉ|| ಆ ನೆಗೞ್ದಿಂದ್ರನಾ ಮದನನಾ ನಳಕೂಬರನಾ ಜಯಂತನು
ದ್ದಾನಿಯ ಚೆಲ್ವುವೀ ಕಮಳನೇತ್ರನಪಾಂಗಮರೀಚಿಗಪ್ಪೊಡಂ
ತಾನೆಣೆವಾರದೆಂದೆನಿಪ ಕಂಸವಿರೋಧಿಯನೊರ್ವೆ ಕಂಡೊಡಂ
ಮಾನಿನಿಯರ್ ಮನೋಜನಲರಂಬಿನ ಕೋಳ್ಗೆಡೆಯಾಗದಿರ್ಪರೇ ೫

---

1 ತನುವುಂ (ಕಗ)

ಮ॥ಸ್ರ॥ ಮನಕಾಮೋದ್ರೇಕದಿಂ ಚಿಂತಿಸುವ ಮತಿ ಮಂತಿಗ್ಲಾನಿಯಿಂದಶ್ರುವಂ ಸೂ
ಸುವ ಕಣ್ ಕಣ್ಣೀರೆ ಬಾಸಲ್ವರಿದು ಬೆಳಪ ಮೆಯ್ ಮೆಯ್ಯ ಸಂತಾಪದಿಂ ಬಾ
ಡುವ ವಕ್ತ್ರಂ ವಕ್ತ್ರಮುಂ ತಳ್ತಳಕವಳಕಸಂದೋಹಮುಂ ಮಾಣದಳ್ಳಾ
ಡುವ ಸುಯ್ ಸುಯ್ವೆಂಕೆಯಿಂದಿರ್ದಳಿದಧರಮುಮಳ್ಳಿತ್ತುದಂದೊಂದು ಚೆಲ್ವಂ ೬

ಕಂ॥ ಎಡೆಗೊಟ್ಟು ಮನಮನೋಪಂ
ಗೆಡೆಗುಡದಿನಿಸುಂ ಸುಖಕ್ಕೆ ಬೇಟದ ಬಿಣ್ಪಿಂ
ಬಿಡೆ ಜೋಲ್ವ ತೆಱದಿನಿಕ್ಕಿದ
ಳೊಡಲಂ ಬಾಲಕಿ ವಿಶಾಲತಲ್ಪಸ್ಥಲದೊಳ್ ೭

ವ॥ ಅಂತು ಶಯ್ಯೆಯೊಳ್ ಮೆಯ್ಯನೀಡಾಡಿ ಗಣನೆಗಳುಂಬಮಾದ ವೇದನೆಯನೊಳಕೊಂಡು ತನ್ನ ಮೆಲ್ಲಡಿಗಳಂ ಮೆಲ್ಲನೊತ್ತಲೆಂದಾಟಿಸುವ ಚೇಟಿಯರ ಕರಾಗ್ರಮಂ ಚರಣಾಂಗುಷ್ಠದಿಂ ಪೋಗೆ ನೂಂಕಿಯುಂ, ಪರೆದ [1]ಕುರುಳ್ಗಳಂ[1] ಸಡಿಲ್ದ ಮುಡಿಯುಮಂ ಸಾವಗಿಸಲೆಂದೆಳಸುವ ವಿಳಾಸಿನಿಯರಂ ಹೂಂಕಾರದಿಂ ನಿರಾಕರಿಸಿಯುಂ, ವೀಳಯಂಗುಡಲೆಂದು ಮೇಳೈಸುವ ತಾಂಬೂಲಕರಂಡಕವಾಹಿನಿಯರಂ ಪುರ್ವಿನಿಂ ಜರ್ವಿಯಿಂ ಹಾಸ್ಯರಸಮನೊಡರಿಸಲೆಂದನುಗೈವನೇಕ ವಾಮನಮೂಕ ಕುಬ್ಜ ಖಂಜಪ್ರಭೃತಿಪರಿಹಾಸಕರನಕ್ಷಿವಿಕ್ಷೇಪದಿಂ ಮಾಣಿಸಿಯುಂ, [2]ಇಂತಿರಲ್ವೇಡ[2] ಮಜ್ಜನಂಬುಗಲುಂ ಆರೋಗಿಸಲುಂ ವೇೞ್ಕುಮೇಟಱಿಂದು ನುಡಿವ ಧಾತ್ರಿಯರಂ ಗಜನಿಮೀಲನದಿನವಜ್ಞೆಗೆಯ್ದುಂ, ಅಸ್ಫುಟಿತಮೌನಮುದ್ರಾಪರಿಮ್ಲಾನದೀನವದನೆಯುಮವಿರಳಸರಳಸೋಷ್ಣಶ್ವಾಸ ಶೋಷಿತಾಧರೆಯುಮನವರತ ವಿಗಳದಶ್ರುಧಾರಾಪರಿಕಲಿತ ಕಪೋಲೆಯುಮಶ್ರಾಂತನಿತಾಂತಸಂತಾಪಸಂತಪ್ತತನುಲತಿಕೆಯುಮಾಗಿರ್ದ ಸತ್ಯಭಾಮೆಯುಂ ಕಂಡು ಕಾಮಲೇಖೆಯೆಂಬ ಮನದನ್ನಳಪ್ಪ ಕೆಳದಿ ಮೆಲ್ಲನಾಕೆಯ ಕೆಲಕ್ಕೆವಂದೆಲ್ಲರುಮಂ ಕಣ್ಣೆತ್ತಿ ಕಳಿಪಿ

ಉ॥ ಅಂಬುಜನೇತ್ರೆ ನಿನ್ನ ಮೊಗಮಂ ಕವಿದೀ ಕುರುಳೋಳಿ ಧೂಸರ
ತ್ವಂಬಡೆದೀ [3]ಕುಚಂ[3] ಕೊರಗಿದೀ ಕಮಳಾನನವಿರ್ದುಗುಂದಿದೀ
ಬಿಂಬಫಲಾಧರಂ ಸ್ಖಲನಮಂ ತಳೆದೀ ನುಡಿ ಬಾಡಿದೀ ಲತಾಂ
ಗಂ ಬಿಸುಪೇಱಿದೀ ಶ್ವಸಿತಮಿಂತಿವು ಪೇೞವೆ ನಿನ್ನ ಚಿಂತೆಯಂ ೮

ಮ॥ ಸ್ತನಮಂ ಚಿತ್ರಿತಪತ್ರಲೇಖೆ ನೊಸಲಂ ಬಾಲೇಯಕಂ ಲೋಲಲೋ
ಚನಮಂ ಕಾಡಿಗೆ ಕಂಠಮಂ ತರಳಹಾರಂ ಕೇಶಮಂ ಪುಷ್ಪಮಾ
ಲೆ ನಿತಂಬಸ್ಥಲಮಂ ಸುರತ್ನಕಟಿಸೂತ್ರಂ ಸಾರ್ದುವಿಲ್ಲೋಹೊ ಕಾ
ಮನ ಕಾಟಕ್ಕೊಳಗಾದೆ ನೀಂ ಪೆಱತಿದಲ್ತಂಭೋಜಪತ್ರೇಕ್ಷಣೇ ೯

---

1 ಕುರುಳ್ಗಳುಮಂ (ಖ) 2 ನೀವಿಂತಿರಲ್ವೇಡ (ಖ) 3 ಕಚಂ (ಕ)

ವ॥ ಎಂದು ಕಾಮಲೇಖೆ ಮನಮಱಿದು ಮಾತಾಡೆ

ಮ॥ ಬಗೆಯೊಳ್ ಬೆಚ್ಚವೊಲಾದ ಮಾತು ಕಿವಿಗೆಯ್ದಲ್ ವಿಾಂಬೊಣರ್ ತೋರಮು
ತ್ತುಗಳಂ ಕಾಱುವ ಮಾೞ್ಕೆಯಿಂ ತರಳನೇತ್ರದ್ವಂದ್ವದಿಂ ಬಾಷ್ಪಬಿಂ
ದುಗಳಂ ಸೂಸಿ ಲತಾಂಗಿ ಭಂಗಿವಡೆದಿರ್ದಳ್ ಬೇಂಟವೆಂಬೊಂದು ಬ
ಳ್ಳಿಗೆ ಪೊಯ್ನೀರೆಱೆವಂದದಿಂ [1]ನುಡಿದಳಿಲ್ಲೇನೊಂದುಮಂ[1] ಕಾಂತೆಯೊಳ್ ೧೦

ಚಂ॥ ಸಮಧಿಕಚಿಂತೆಯಿಂ ನುಡಿಯಲುಂ ಬಗೆಪೇೞಲುಮೊಲ್ಲದಾ ಶರ
ತ್ಸಮಯದ ಸೋಗೆಯಿರ್ಪ ತೆಱದಿಂ ಕಡುವಿನ್ನನೆ ಮೂಗುವಟ್ಟು ಖೇ
ದಮನೊಳಕೊಂಡು ನಿಂದಬಲೆಯಿರ್ದಿರವಂ ಸಖಿ ನೋಡಿ ಮತ್ತಮಾ
ಕಮಲದಳಾಯತೇಕ್ಷಣೆಗಿದಂ ನುಡಿದಳ್ ಬಗೆಗೆಲ್ವ ಬಲ್ಮೆಯಿಂ ೧೧

ಸುದತಿ ಮನೋರಥಂ ಸಖಿಗೆ ಪೇೞದೆ ಸಿದ್ಧಿಸದೆನ್ನ ನಿನ್ನ ಕೂ
ಟದ ತೆಱನಂತುಟಲ್ತು ನಿನಗಾಂ ಪೆಱತೊಂದು ನಿತಂಬಿನೀಸ್ವರೂ
ಪದ ಹೃದಯಂಬೊಲಿರ್ದೆನೆನಗಂ ಬಗೆವೇೞದೆ ನಾಣ್ಚಿ ಬಾಷ್ಪಮಂ
ಕೆದಱಲಿದೇಕೆ ಪೇೞ ನಿನಗಾದುದಿದೇಕಿನಿತೊಂದುಮುಬ್ಬೆಗಂ ೧೨

ವ॥ ಎಂಬುದುಂ ಬಾಷ್ಪಜಲನಿಮಜ್ಜಜ್ಜಲಚರಾಲೋಲನಯನೆ ಬಗೆವೇೞಲುಜ್ಜ
ಗಂಗೆಯ್ದು ಲಜ್ಜಾರಸಮನೆಂತಾನುಮಂತರಂಗದಿಂ ತೊಲಗಿಸಿ

ಉ॥ ನೀನೆ ವಿದಗ್ಧೆ ನೀನೆ ಹಿತಕಾರಿಣಿ ನೀನೆ ಮನಕ್ಕೆ ವಿಶ್ರಮ
ಸ್ಥಾನಮದಿರ್ಕೆ ಕೇಳಬಲೆ ಪೇೞ್ದಪೆನಾಂ ನಿಜರೂಪು ಯೌವನಾ
ನೂನ ವಿಲಾಸಮುತ್ತಮಗುಣಂ ಬಗೆಗೊಳ್ವನಮಿಲ್ಲಿಗಂದು ಬಂ
ದಾ ನಳಿನಾಕ್ಷನೊಂದುತೆಱನೀತೆಱದಿಂ ಪಡೆದತ್ತು ಚಿಂತೆಯಂ ೧೩

ಕಂ॥ ಕೆಳದಿ ತರವೇೞ್ಪುದೆನಗಾ
ನಳಿನಾಕ್ಷನನಲ್ಲದಂದು ಪೋದಪುದಸುವೀ
ಗಳೆ ಮದನನಿಸುವ ಪೊಸಕೆಂ
ದಳಿರ್ಗಳ ಕೆಂಗರಿಯ ನನೆಯ ಮೊನೆಯಂಬುಗಳಿಂ ೧೪

---

1 ನುಡಿದಳಿಲ್ಲೇನೆಂದುಮಾ (ಕಖಗ)

ಚಂ॥ ನೆನೆಯಿಸಿ ಕಾಡುಗುಂ ಸತತವಾತನುದಗ್ರಲಲಾಟಪಟ್ಟವಾ
ತನ ಪೃಥುವಕ್ಷವಾತನ ತನೂದರವಾತನ ಚಲ್ಲೆಗಣ್ಗಳಾ
ತನ ಬಗೆಗೊಳ್ವ ಪೆರ್ಬೊಡೆಗಳಾತನ ಸಿಂಹಕಟೀತಟಂಗಳಾ
ತನ ನಿಡುದೋಳ್ಗಳಾತನಳಕಾಳಿಗಳಾತನ ಸೀಳ್ದ ಪುರ್ವುಗಳ್ ೧೫

ವ॥ ಎಂದು ಬಗೆವೇಟ್ಟು ನೊಂದು ನುಡಿದ ಸತ್ಯಭಾಮೆಗಾ ಕಾಮಲೇಖೆಯಿಂ ತೆಂದಳ್

ಕಂ॥ ಬಯಸಿದೆ ನೀಂ ದುರ್ಲಭನಂ
ಪ್ರಿಯೆ ಬಯಕೆಗೆ ಬಡವರಿಲ್ಲೆನಿಪ್ಪವೊಲಸುರಾ
ರಿಯನಂತಾದೊಡವೇಂ ನಿ
ನ್ನಯ ರೂಪುಂ ಕುಲಮುಮೊಲಿಸುಗುಂ ಕೃಷ್ಣನುಮಂ ೧೬

ನೆರೆದಪೆ ಲತಾಂಗಿ ನೀಂ ಮುರ
ವಿರೋಧಿಯೊಳ್ ಕಲ್ಪಲತಿಕೆ ಕಲ್ಪದ್ರುಮದೊಳ್
ನೆರೆವಂತೆಂದೊಡದೆಂದಾಂ
ನೆರೆದಪೆನೆಂದಾಂತಳವಳವಸ್ಥಾಂತರಮಂ ೧೭

ಚಂ॥ ಅಳುರ್ವ ತುಷಾರವರ್ಷದೊದವಿಂದರವಿಂದಿನಿ ಕಂದಿ ಕುಂದಿ ಪಾ
ಡಟುವವೊಲಾವಗಂ ಕಱತಪ ಕಾಮಶರಾವಳಿಗಳ್ಕಿ ಬಳ್ಕಿ ಕೋ
ಮಳೆ ನಡೆತಂದು ಪೊಕ್ಕು ಬನಮಂ ಸಖಿಯರ್ ತಳಿವಾಲಿನೀರ್ಗಳಿಂ
ಕುಳಿರ್ವಲರ್ವಾಸಿನೊಳ್ ಪೊರಳುತಿರ್ದಳಗುರ್ವಿನಬೇಟದೇಟಿಗ್ಗಯಿಂ ೧೮

ಲಲನೆ ಹಿಮೋಲ್ಲಸದ್ಭವನದೊಳ್ ವನದೊಳ್ ವನದೊಳ್ ಪೊರಳ್ದು ನಿ
ಚ್ಚಲುಮಿಸೆ ಕಂತು ನಿಪ್ಪಸರದಿಂ ಸರದಿಂ ಸರದಿಂಪುದೋಱತ ಕೋ
ಗಿಲೆ ವಿಧು ಬೀಱತ ಭೀತಿಕರಮಂ ಕರಮಂ ಕರಮಂ ಕಪೋಲದೊಳ್
ನಿಲಿಸುವಳೆಯ್ದೆ ನೋವಳಧಿಪಾಂಗದಪಾಂಗದ ಪಾಂಗದಗ್ಗಳಂ ೧೯

ಉ॥ ಪಾಸುವ ಪಲ್ಲವಾಸ್ತರಣಮೊಟ್ಟುವ ಬಾಳಮೃಣಾಳಸಂಕುಳಂ
ಸೂಸುವ ಚಂದ್ರಕಾಂತಜಲಮೊತ್ತುವ ಶೀತಳಕಾಕದಂಬಕಂ
ಬೀಸುವ ಪುಷ್ಪವೀಜನವಮರ್ಚುವ ಕಪ್ಪುರವಚ್ಚವಾಗಳುಂ
ಪೂಸುವ ಚಂದನಂ ಬಿಸುಪನಾಱಸಲಾರ್ತವೆ ಸತ್ಯಭಾಮೆಯಾ ೨೦

ಉ|| ಮೇಳಿಸಿ ಪೊರ್ದಿದಾಳಿಯುರ ಪ್ಮೈ [1]ಬಿಸುಪೇೞೆ[1] ಬೆಮರ್ತುರ್ವಂಗದೊಳ್
ಬಾಳಮೃಣಾಳಿಕಾಸಮಿತಿ ಚುಯ್ಯೆನುತುಂ ನೊರೆವಿಟ್ಟುದಶ್ರುಧಾ
ರಾಳಿ ಕಪೋಲದೊಳ್ ಕುದಿದು ಬತ್ತಿದುದೊಯ್ಯನೆ ಬೀಸುತಿರ್ಪ ಪೊಂ
ಬಾೞೆಯ [2]ಚಾಮರಂಗಳುರೆ[2] ಸೀದುವು ತನ್ವಿಯ ದೇಹದಾಹದಿಂ ೨೧

ವ|| ಅಂತು ಸತ್ಯಭಾಮೆಗಗ್ಗಳಮಾದ ವಿರಹಪರಿತಾಪಮುಮಂ ಕಂಡು ಬೆಗೞ್ಗೊಂಡೀಕೆಯ ಬೇಟಮುಮಂ ಕೈಟಭಾರಾತಿಗೆಯ್ದಿಸದೊಡೆನ್ನಂ ದೋಷಮೆಯ್ದುಗುಮಿದಂ ಮೊದಲೊಳೀಕೆಯ ತಾತಂಗೆ ಪೇೞ್ದಾತನನುಮತಿಯಿನಭಿಮತಮುಮಂ ಮಾೞ್ಪೆನೆಂದು ನಡೆತಂದು ಸತ್ರಾಜಿದ್ಭೂಪನಲ್ಲಿಗೆ ಬಂದೇಕಾಂತದೊಳಿಂತೆಂದಳ್

ಕಂ|| ಅಂದೊರ್ವೆ ನಿಮ್ಮ ಮನೆಗೆ
ಬ್ಬಂದಾ ವಸುದೇವಸುತನ ರೂಪಂ ರೂಪಿ
ಟ್ಟೆಂದು ಮೊದಲಾಗಿ ನೃಪ ನಿಜ
ನಂದನೆಯುಂ ಮಾಣದಿಸುವನುದ್ಗಮಬಾಣಂ ೨೨

ಚಂ|| ತೊಲಗಿಸಿ ಭೂಷಣಪ್ರತತಿಯುಂ ಮತಿಯುಂ ಪತಿಯಂಗಶೋಭೆಯೊಳ್
ನಿಲಿಸೆ ಮನೋಭವಾಗ್ನಿ ವಿಧುವಿಂ ಮಧುವಿಂ ವಧುವಿಂಗೆ ಪೆರ್ಚೆ ತ
ಣ್ಣಲೆವ ಕೊಳಕ್ಕೆ ಮಂದಮಳಿನಂ ಪುಳಿನಂ ನಳಿನಂ ನಿಜಾರ್ತಿಯಂ
ಗೆಲೆ ಪಡೆಯಲ್ ಬೞಿಕ್ಕವಳೞಲ್ದು ಬಳಲ್ದು ತೊೞಲ್ದು ಜಾನಿಪಳ್ ೨೩

ವ|| ಅಂತುಮಲ್ಲದೆ

ಉ|| ಸೋಂಕಿದ ಗಾಳಿ ದಳ್ಳುರಿವೊಲಾದುದು ಪೊಕ್ಕ ಸರೋವರಾಂಬು ಕಾ
ಯ್ಪಿಂ ಕುದಿದತ್ತು ನಂದನವನಂ ಕರಿಕೆಟ್ಟುದು ನೋಡೆ ಸುಯ್ದು ಸು
ಯ್ವಂಕೆಯಿನೆಯ್ದೆ ಚಂದ್ರಿಕೆ ಬಿಸಿಲ್ಗೆಣೆಯಾದುದನಂಗತಾಪದಿಂ
ಪಂಕರುಹಾಕ್ಷಿ ಕಾಮಶಿಖಿ ಪೆಣ್ಬರಿಜಂ ತಳೆದಂತೆ ತೋಱಿದಳ್ ೨೪

ವ|| ಅಂತುಮಲ್ಲದೆ

ಕಂ|| ಅವಯವದ ಸಾರಸರ್ವ
ಸ್ವವನಾಹುತಿಗೆಯ್ದಳಂಗಜಾಗ್ನಿಯೊಳುಱಿದ
ತ್ರವಳೊಳಸುವೊಂದೆ ಸತಿ ಮಾ
ೞ್ಪವನಾಕುಳ ಕಾಮಶಿಖಿಗೆ ಪೂರ್ಣಾಹುತಿಯಂ ೨೫

---

1 ಬಿಸುಪೇಱಿ (ಕಗ) 2 ಚಾಮರಂಗಳರೆ (ಕಗ)

ವ॥ ಎನೆ ತತ್ಪ್ರಪಂಚಮುಂ ಕೇಳ್ದು

ಕಂ॥ ರೂಪಯಶೋದುಂದುಭಿನಿನ
ದಾಪೂರಿತಮಹಿಗೆ ಸತ್ಯಭಾಮೆಗೆ ಹರಿ ತಾ
ನೋಪನೆನೆ ನೆಗಟ್ಟಿಗ್ಗಿ ಮಿಾಕೆಗೆ
ರೂಪಯಶೋ[1]ಯೋಗ್ಯಮೆನಿಪ[1] ಸೌಭಾಗ್ಯಯಶಂ ೩೬

ಪರಮಪದನಾತನಾ ಮುರ
ಹರನನೊಡಂಬಡಿಪೊಡೆನ್ನ ನಣ್ಪಿನ ನುಡಿಯೊಳ್
ಪುರುಳಿಲ್ಲೀಕೆಯ ರೂಪೀ
ಕರುಣಮೊಡಂಬಡಿಕುಮೆಲಗೆ ನಿನ್ನಯ [2]ನುಡಿಯುಂ[2] ೩೭

ವ॥ ಅದುಕಾರಣಂ ನೀನೆ ಪೋಗಿ ನಿನ್ನ ಬಲ್ಲಂದದಿಂ ಫುಲ್ಲನಾಭನನೊಡಂಬಡಿಸು ಪೋಗು; ಈಗಳ್ ನಿಮಿತ್ತಂಗಳುಂ ಶುಭಸೂಚಕಂಗಳಾಗಿರ್ದಪುವು ಎಂದು ಕಳುಪುವುದುಂ [3]ಕಾಮಲೇಖೆ[3]

ಕಂ॥ ಪೌರವಿನಿರ್ಗತೆಯಾಗಿ ಮ
ನೋರಥಮನೆ ಕಾಣ್ಬ ತೆಱದಿನಿದಿರೊಳ್ ಕಂಡಳ್
ನಾರದನನಖಿಲತತ್ತ್ವವಿ
ಶಾರದನಂ ಕಾಂತಿಜಿತಶರನ್ನೀರದನಂ ೩೮

ವ॥ ಆಗಳಾಕೆಗೆ ಮುನೀಂದ್ರನಿಂತೆಂದಂ

ಕಂ॥ ದ್ವಾರಕೆಯ ಬಹಿರ್ವನದೊಳ್
ನಾರಾಯಣನಿರ್ಕುಮಿದಿರೊಳಭಿಮತಮಕ್ಕುಂ
ನಾರೀಜನದೊಳ್ ಬೇಟದ
ನಾರಿ ಮುಕುಂದಂಗೆ ಸತ್ಯಭಾಮೆಯೆನಿಕ್ಕುಂ ೩೯

ವ॥ ಎಂದು ಮುನೀಶನಾದೇಶಂಗೆಯ್ದು ಪೋಗೆಂದು ಕಳುಪಿದೊಸಗೆಗೆ ಮನದೊಳ್ ಗುಡಿಗಟ್ಟಿ ಬಗೆಯೊಳ್ ಬದ್ದವಣಂಬೊಯ್ದು ರಾಗರಸದೊಳ್ ಸಿಂಪಿಣಿಯಾಡಿ ನಡೆದೆಯ್ದೆ ವಂದಾ ದ್ವಾರಾವತಿಯ ಪೊಱವೊೞಲ ಬನಮಂ ಪೊಕ್ಕು

---

[1] ಯೋಗ್ಯನೆನಿಪ (ಕಗ) [2] ನುಡಿಯಿಂ (ಕಖಗ) [3] ಕಾಮಲೇಖೆ ಪುರದಿಂ ಪೊಱಮಟ್ಟು ಬರುತ್ತುಂ (ಕಗ)

ಕಂ|| ನೀಲಮಣಿರುಚಿರನಂ ವನ
ಮಾಲಿಯನಾಲೋಲಮಕರಕುಂಡಲನಂ ದ್ಯೋ
ತಾಲಂಕೃತಕೌಸ್ತುಭನಂ
[1]ಹೇಲಾಗತಿ[1] ರುಚಿರಪೀತಪಟನಂ ಕಂಡಳ್ ೩೦

ವ|| ಅಂತಿದಿರೊಳ್ ಯದೃಚ್ಛೆಯಿಂದುತ್ಸಾರಿತಪರಿವಾರನಾಗಿರ್ದ ವಾರಿಜಾಕ್ಷನ ಸಮಕ್ಷಕ್ಕೆ ವಂದು

ಕಂ|| ಏನರಸ ಸುಖಮೆ ಚೆಲ್ವಿಂ
ನೀನೊಲಿಸಿದ ಸತ್ಯಭಾಮೆಯಂ ನೆನೆವೈ ತ
ನ್ಮಾನಿನಿಯಟ್ಟಿದ ದೂತಿಯೆ
[2]ನಾನಭಿಧಾನದೊಳ್[2] ಕಾಮಲೇಖೆಯೆನೆಂಬೆಂ ೩೧

ಎಂದು ನುಡಿದವಳ ನುಡಿಗಳ್
ಕಂದರ್ಪನ ಕರ್ಬುವಿಲ್ಲ ಜೇವೊಡೆಯೊಡನೆ
ಯ್ತಂದು ಕಿವಿವುಗುವುದುಂ ಪುಗು
ತಂದುವು ನನೆಯಂಬುಗಳ್ ಮುಕುಂದನ ತನುವಂ ೩೨

ವ|| ಅಂತು ಕಂತುಶರಭರಿತಹೃದಯತೂಣೀರನಾಗಿ ಚಾಣೂರವೈರಿ

ಕಂ|| ಎಂತೆಂತು ನಿನ್ನನಟ್ಟಿದ
ಳೆಂತೆಂತೆನ್ನಂ ಪಲುಂಬಿ ಪಂಬಲಿಸುವಳೆಂ
ತೆಂತಿರ್ದಳವಳ್ ಬೇಟದಿ
ನಂತದನೆಲೆ ಕಾಮಲೇಖೆ ನುಡಿ ವಿಸ್ತರದಿಂ* ೩೩

---

1 ಲೀಲಾಗತಿ (ಖ) 2 ನಾನಭಿಧಾನಕದೆ (ಕಗ)

* ಈ ಪದ್ಯದನಂತರ (ಕಗ) ಪುಸ್ತಕಗಳಲ್ಲಿ ಈ ಎರಡು ಪದ್ಯಗಳು ಹೆಚ್ಚಾಗಿವೆ.
ಚಳದಳಕಾಳಿಗಳ್ ಪದಪಂಗೋರುಹದೊಳ್ ನಸುನೀಳ್ದು ಜೋಲ್ದು ಕು
ಪ್ಪಳಿಸೆ ವಿನಮ್ರೆಯಾಗಿ ದರಹಾಸವಿಲೋಕನದಿಂ ಪ್ರಸಾದಮಂ
ತಳೆದು ನೃಪೇಂದ್ರ ಮಂಗಳಮೆ ದೇವರ ದಕ್ಷಿಣಬಾಹುಶಾಖೆಗೆಂ
ದೆಲೆಗೆಲೆ ಕಾಮಲೇಖೆ ನಿನಗಾದನುರಾಗದಿನಲ್ತೆ ಮಂಗಳಂ
ಧರಣೀನಾಥಂಗೆ ಸತ್ರಾಜಿಗೆ ಕುಶಲಮೆ ತನ್ವಂಗಿ ಪೇಳ್ ವಾರ್ತೆಯಂ ತ
ತ್ಪುರದೊಳ್ ತಚ್ಚಕ್ರವಾಕಸ್ತನಿಗೆ ಬಿನದಮೇಂ ತತ್ಸತೀಸಂಕುಲಕ್ಕೇಂ
ಕರಣೀಯಂ ನೀನಗಲ್ದಿಂತೆನಿತು ದಿವಸಮಾ ಕನ್ನೆಯಂ ನಿನ್ನ ಬಂದೀ
ಬರವಾದಂ ಚಿತ್ರಮೆಂದಿಂಬಳವಡೆ ಬೆಸಗೊಂಡಂ ಸರೋಜಾತನೇತ್ರಂ

ವ|| ಎಂಬುದುಂ ಮಾತಿನ ನಲವಿಂದೀತನ ಮನದೊಲವಱಿಯಲಾದುದೆಂದು ಸಂತಸದಿಂದಿಂತೆಂದಳ್

ಕಂ|| ವನಿತೆಯರನಾವನುಂ ನೋ
ಡಿ [1]ನೋಡಿಸಲ್[1] ಸೋಲ್ತು ಸೋಲಿಸಲ್ ನೆಱೆಯಂ ನೀಂ
ವನಜಾಕ್ಷ ಸೊಬಗನೈರೂ
ಪಿನ ಪೊಳಪನೆ ತೋಱಿ ನೀಱೆಯಂ ಕೂರಿಸಿದೈ ೩೪

ಚಂ|| ತನು ತನಗಿಲ್ಲದಂಡಲೆವ ಗಾಳಿಯನೋವದೆ ಪಾವು ಕೊಂಡ ಚಂ
ದ್ರನನುರಿದಿರ್ದ ಮನ್ಮಥನನಾಱಿಡಿದುಂಬಿಯನೋವದೇಕೆ ಪೆ
ತ್ತನೊ ಬಿದಿಯೆಂದು ತೀಡುವೆಲರ್ಗುಜ್ಜಳಿಪಿಂದುಗೆ ಕಾಡುವಂಗಜಂ
ಗನುನಯದಿಂದೆ ಪಾಡುವಳಿಗಂತಪಳೆಂ ಬೆದಱುತ್ತುಮಿರ್ಪಳೋ ೩೫

ಯುವತಿಯ ಬಾಡಿದಂಗಲತೆ ಬತ್ತಿದ ಬಾಯ್ ಕೊರಗಿರ್ದ ವಕ್ತ್ರಮೆಂ
ಬಿವನೆಸೆವಾತ್ಮಕೋಮಲತೆಯಿಂದರುಣಚ್ಛವಿಯಿಂ ಸುಕಾಂತಿಯಿಂ
ನವಲತೆಗಂ ಪ್ರವಾಳಲತೆಗಂ ಹಿಮರೋಚಿಗಮಾಯ್ತು ಪೋಲಲೊಂ
ದವಸರಮಿಂತನರ್ಕಿವಳ ಬೇಟಮೆ ಬೆಂಬಲವಾದುದೆಂಬಿನಂ ೩೬

ಮ||ಸ್ರ|| ತನುತಾಪಂ ಚೈತ್ರನಿಂ ಚಂದ್ರನಿನತಿಶಯಮಾಗಿರ್ದುದಾ ಚೈತ್ರನಿಂ ಚಂ
ದ್ರನಿನಾಗಿರ್ದುತ್ಕಟಂ ನಂದನದಿನೊಗೆದುದಾ ಚೈತ್ರನಿಂ ಚಂದ್ರನಿಂ ನಂ
ದನದಿಂ ತಳ್ಪೊಯ್ವ ತೆಂಗಾಳಿಯಿನೊದವಿದುದಾ ಚೈತ್ರನಿಂ ಚಂದ್ರನಿಂ ನಂ
ದನದಿಂ ತೆಂಗಾಳಿಯಿಂದೈವಡಿವಳೆದವಳಾ ತಾಪಮಂ ಪೇೞ್ವೆನೇನಂ ೩೭

ಸ್ರ|| ಚಿತ್ರಂಬೊಕ್ಕಿರ್ದೆಯೆಂತೈ ಹರಿ ಕುಳಿರ್ವ ಕರಸ್ಪರ್ಶದಿಂದಿಂದು ತಾಪಂ
ಬೆತ್ತಂ ಪ್ಪೆಸೋಂಕಿ ಮಂದಾನಿಳನುರಿದನದರ್ಕಾಳಿಯರ್ ದೂರದಿಂ ಸೂ
ಸುತ್ತಿರ್ಪರ್ ತೋಯಮುಂ ಜೀಕೋಟಲಿಯೊಳೆ ಮನೋ[2]ಜಾತನೆೞ್ದೆೞ್ದು ಸಲ್ಕಾ[2]
ರ್ದೆತ್ತಂಗೋಲಿಕ್ಕುನಂ ಭಾವಿಸುವರಳವೆ ಸತ್ರಾಜಿತೀದೇಹದಾಹಂ ೩೮

ಮ|| ಎನಸುಂ ಮೈಬಿಸುಪೇಱಿ [3]ವಾಸಗೃಹಮುಂ[3] ತೀವಿತ್ತು ಸುಯ್ಗಾಳಿ ನಂ
ದನಪತ್ರಂಗಳ[4]ನಾಱಿಸಿತ್ತು[4] ವಿಗಳದ್ಬಾಷ್ಪಾಂಬುಧಾರಾಳಿ ತ
ದ್ವನಭೂಜಾವಳಿಗಾಲವಾಲಜಲಮಾಯ್ತುಬ್ಬಾಕ್ಷ ನಿನ್ನಂದಮಂ
[5]ನೆನೆಯುತ್ತುಂ ಮನಮುಂ[5] ತಱಿಂಬುತಿರೆ ಜೀವಂ ನಿಂದುದಾ ತನ್ವಿಯಾ ೩೯

---

1 ನಾಡೆಯುಂ (ಖ) 2 ಜಾತನಿರ್ದುದ್ದೈ ಸರ್ಕಾ (ಕ) ಜಾತನಿರ್ದುದ್ದೈ ಶಕ್ಕಾ (ಖ) ಜಾತನಿದ್ದುರ್ದ್ದ ಸಲ್ಕಾ(ಗ) 3 ಹೈಮಗೃಹಮುಂ(ಕಗ) 4 ನಾಡಿಸಿತ್ತು (ಕಗ) 5 ನೆನೆಯುತ್ತಿರ್ಪಮನಂ (ಕಗ)

ವ॥ ಅಂತಾ ವಿರಹವಿಹ್ವಲೆಯ ಜೀವಿತಾಶ್ರಯದೊಳ್ ಸಂದೇಹಮುಂಟಲ್ಲದೆನ್ನ ನುಡಿಯೊಳ್ ಸಂದೇಹವಿಲ್ಲವಂತು ಬಂದು ನೋಟ್ಪುದೆಂದು ತನ್ನ ಮನದೊಳೊಡಂಬಡಿಸಿದಂತೆ ನುಡಿದ ದೂತಿಯ ಮಾತಿಂಗೊಡಂಬಟ್ಟು ವಿಟವೇಷದಿಂ ಪ್ರಚ್ಛನ್ನತನುವಾಗಿ ಕಾಮಲೇಖೆಯೊಡನೆ ನಡೆಗೊಂಡು ನಿಜಕಾಮಪ್ರೇಮರಥಮನಾಹತಮತಿಜವದಿನೆಯ್ದಿ ಸಲೆಯ್ದಿ ಸತ್ಯಭಾಮೆಯಿರ್ದ ಬನಮಂ ಪೊಕ್ಕು ತದ್ವನವಿಭೂತಿಯಂ ನೋಡಿ ಪೊಟ್ಟುಗಳೆಯಲೊಲ್ಲದೆ ಚಿತ್ತವಲ್ಲಭೆಯಂ ನೋಡುವುತ್ಕಲಿಕೆಯಿಂದಾ ಕಾಂತೆಯಿರ್ದೇಕಾಂತಪ್ರದೇಶಕ್ಕೆ ಬಂದು ತತ್ಸಮೀಪದ ಜವನಿಕೆಯ ಮಱಿಯೊಳ್ ತನ್ನನಾರುಂ ಕಾಣದಂತು ತನಗಾ ಕನ್ನೆಯ ರೂಪುಗಾಣಲುಂ ಮಾತುಗೇಳಲುಂ ಬರ್ಪಂತು ಕಾಮಲೇಖೆವೆರಸು ನಿಂದು

ಉ॥ ಕೆಂದಳಿರ್ವಾಸಿನೊಳ್ ಕಡುಬೆಳರ್ತು ಕರಂ ಬಡವಾದ ತನ್ವಿ ತ
ನ್ನೊಂದಿರವಿಂದೆ ಸಂಜೆಮುಗಿಲೊಳ್ ನಸುದೋರ್ಪ ಕಲಾವಶೇಷಮ
ಪ್ಪಿಂದುವ ಲೇಖೆಯಂತೆಸೆದು ಪೆಲ್ಲೆರ್ದೆಯಂ ನಡುವಂಗಜಾಸ್ತ್ರದಿಂ
ನೊಂದು [1]ಕಟಲ್ದಟಲ್ವ[1] ಪರಿಯಂ ಹರಿ ಕಂಡೆರ್ದೆಯಾಱಿ ನೋಡಿದಂ ೪೦

[2]ಮಾಡಿ[2] ಬೆಡಂಗಿ ಕಣ್ಗೆ ಕಡುಸೋಲಮನೆನ್ನ ಮನಕ್ಕೆ ಸೋಲಮಂ
ಮಾಡುವಲಂಪಿನಿಂ ಪುಗುವವೋಲೆರ್ದೆವೊಕ್ಕೆನಗಿಂದು ಶೈತ್ಯಮಂ
ಮಾಡಿದಳೇಕೆ ಕಾಮಪರಿತಪ್ತೆ ಗಡೆಂತಿವಳಿಂದೆ ತಣ್ಪು ಕೈ
ಗೂಡಿದುದೆನ್ನ ಮೂಢತೆಯೊ ಮೇಣಿವಳಂಗಜತಪ್ತೆಯಲ್ಲಳೋ ೪೧

ವ॥ ಎಂದರವಿಂದಲೋಚನನಾ ಕನ್ನೆಯಂ ಕಂಡು ತನ್ನೆರ್ದೆಯಾಱಿದಂದಮುಮನಾ ಕನ್ನೆಯ ರೂಪುಮಂ ಬೇಟದ ಕಾಯ್ಪುಮನನುಕ್ರಮದೊಳೆ ಬಗೆಯುತ್ತಿರ್ಪಿನಮಾ ದರ್ಪಕ[3]ಪ್ರದಾರಿತ ವಿಧುರಿತಸ್ವಾಂತೆ[3] ನಿಜಾಂತರವೇದಿಸಖೀಜನಂಗಳೊಳೊರ್ವ ಚಾತುರ್ಯವತಿಯ ಮೊಗಮಂ ನೋಡಿ

ಚಂ॥ ಅನಲಸಹಾಯನಪ್ಪ ಯಮದಿಙ್ಮುಖದಿಂ ನಡೆತರ್ಪ ತೆಂಬೆಲರ್
ಮನಸಿಜವಹ್ನಿಯಂ ಬಿಡದೆ ಪೆರ್ಚಿಪುದುಂ ಕಡುನೋವನೀವುದುಂ
ವನರುಹವಕ್ತ್ರೆ ವಿಸ್ಮಯಮೆ ತಾಪಹರಂ ಜನಸೌಖ್ಯಕಾರಿ ನಂ
ದನಮೆನಗಂಗತಾಪಮುಮನೋವದೆ ನೋವುಮನೀವುದದ್ಭುತಂ ೪೨

ಕೆಳದಿಯರಟ್ಟಿಱಿಂ ತಳಿವ ಚಂದನಮಿಶ್ರಿತಚಂದ್ರಕಾಂತಶೀ
ತಳಜಳವಾಱಿಸಲ್ ನೆಱಿಯವೆಂದು ಹಿಮೋದಕಪೂರ್ಣಮಪ್ಪ ಪೂ
ಗೊಳದೊಳೆ ಪೊಕ್ಕುಮೆನ್ನ ವಿರಹಾಗ್ನಿಯನಾಱಿಸಲಾರ್ತೆನಿಲ್ಲ ನೀ
ರೊಳಮುರಿವೊಂದು ದಳ್ಳುರಿಯನಂಗನೆ ನಂದಿಸುವಂದಮಾವುದೋ ೪೩

1 ಕನಲ್ದೊನಲ್ವ (ಕಗ) 2 ಮಾಡೆ (ಕಖಗ) 3 ಪ್ರದರವಿಧುರಿತ ಸ್ವಾಂತೆ (ಕಗ) ಪ್ರದಾರಿತ ವಿದಾರಿತಸ್ವಾಂತೆ (ಖ)

ಖಳಮದನಾಸ್ತ್ರಪುಂಜದವೊಲಪ್ಪಲರ್ವಚ್ಚಮುಮಂಗಸಂಭವಾ
ನಳನವೊಲಪ್ಪ ಕೆಂದಳಿರ ಪಾಸಿಕೆಯುಂ ವಿಷನಾಮವುಳ್ಳ ಶೀ
ತಳಜಳಮುಂ ವಿಷಾಹಿಕುಲಮೊಂದಿದ ಚಂದನದಣ್ಪುಮಕ್ಕ ಕೇ
ವಳಮೆನಗಾಭಿಚಾರವಪಚಾರಮಿದೇಂ ಶಿಶಿರೋಪಚಾರಮೋ ೪೪

ಸಮನಿಸಿದುಷ್ಣರೋಚಿಯ ಮರೀಚಿಯ ನಿರ್ಭರತಾಪಮಾಱುಗುಂ
ಕುಮುದಿನಿಗಿಂದುದರ್ಶನದಿನಾಱುಗುಮೇ ಪೆಱತೊಂದು ವಸ್ತುವಿಂ
ಹಿಮಕರವಕ್ತ್ರೆ ಕೇಳೆನಗೆ ಪೆರ್ಚಿದ ಮನ್ಮಥತಾಪಮಾಱುಗುಂ
ಕಮಳದಳಾಕ್ಷದರ್ಶನದಿನಾಱುಗುಮೇ ಶಿಶಿರೋಪಚಾರದಿಂ ೪೫

ಉ|| ಅಸ್ತಮನೀಯನೀಲತನುಸೌಷ್ಠವಮಾ ನವಪೀತವಸ್ತ್ರಮಾ
ಕೌಸ್ತುಭರತ್ನಮಾ ಮಕರಕುಂಡಲಮಾ ವನಮಾಲೆ ರಂಜಿಪಾ
ವಿಸ್ತೃತವಕ್ಷಮಾ ಸುಭುಜಮಾ ಕಮಲೇಕ್ಷಣಮೀ ಸ್ಮರಾನಲಾ
ರ್ಚಿಸ್ತತಿದಗ್ಧಹೃನ್ಮುಕುರದೊಳ್ ಪೊಳೆದೊಪ್ಪುವ ಭಂಗಿ ವಿಸ್ಮಯಂ ೪೬

ಕಂ|| ಹೃದಯದ ತಾಪಮನೆನ್ನೀ
ಹೃದಯಸ್ಥಂ ಗೋಪಚಂದ್ರನಾಱಿಸನೆನೆ ಕೇಳ್
ಸುದತಿ ಕಡುದೂರದಾಕಾ
ಶದ ಚಂದ್ರಮನೆಂತುಮಾಱಿಸಲ್ ನೆಱೆದಪನೇ ೪೭

ಹೃದಯಾಗ್ನಿ ಪೆರ್ಚಿ ವನತತಿ
ಗೆ ದವಾಗ್ನಿವೊಲಾಯ್ತುದೆಂತು ಹರಿಯಿರ್ದಪನೀ
ಹೃದಯಾಗ್ನಿಯೊಳಗ್ನಿಸ್ತಂ
ಭದ [1]ವಿದ್ಯೆಯನೀಗಳಿಂತು ಕಲ್ತನೊ ಸಖಿಯೇ[1] ೪೮

ತಾನಿರ್ದ ನಿಳಯಮಿದು ಮದ
ನಾನಳನಿಂದುರಿದುದಕ್ಕ ತನ್ನಿರ್ದೆಡೆಯುಂ
ತಾನಾರಯ್ಯದನೆನ್ನನ
ದೇನಾರಯ್ದಪನೆ ಬಂದು ಕಮಲದಳಾಕ್ಷಂ ೪೯

---

[1] ವಿದ್ಯೆಯನೀಗಳಿಂತೆ ಕಲಿಪೆಱ್ಱಿಯುಂ (ಕಗ)

ಧರೆಯಂ ಪುೞುಡಿ ಮಾಡಿದ
ಹರಿ ಬರ್ಪೊಡೆ ತಡವೆ ಪುನದೊಳೊಲ್ಲದ ಬರವಿಂ
ಬರೆ ಕಿಱಿಪೆಡೆ ಪಲವಡಿಯಾ
ಗಿರೆ ತಡೆದನೊ ಬಾರದಿರ್ದು ತಡೆದನೊ ಕೆಳದೀ ೫೦

ಪ್ರಾಣೇಶನ ಬರವಿಂಗಿವು
ಮಾಣದೆ ಕೆತ್ತಿದಪುವೆಡದ ಕಣ್ಣುಂ ತೋಳುಂ
ಪ್ರಾಣೇಶನ ಬರವಿಲ್ಲಂ
ಪ್ರಾಣೇಶಂ ಬರ್ಕುಮೆನ್ನನುಯ್ಯಲಮೋಘಂ ೫೧

ವ॥ ಎಂದು [1]ದರ್ಪಕದಶಮಾವಸ್ಥಾತುರತೆಯಿಂ[1] ಪರ್ಯಾಕುಲ ಜೀವಿತೆಯಾಗಿ ಕನ್ನೆ ಮೂರ್ಛಾಪ್ರಪನ್ನೆಯಪ್ಪುದುಂ ಅದಂ ಸಖೀಜನಂಗಳ ಸಂಭ್ರಮಧ್ವನಿಯಿನಱಿದು ಗರುಡಧ್ವಜಂ ಜವನಿಕೆಯಿನೊಳಪೊಕ್ಕು ಆ ದರ್ಪಕಸರ್ಪದಷ್ಟೆಗೆ ಅವಸರೋಚಿತ ಸ್ವಕೀಯ ಸ್ನಿಗ್ಧವಚನಮೆ ಮಂತ್ರವಾಗೆ ನಿಜಕರಸ್ಪರ್ಶನಮೆ ಸಂಜೀವನಾಮೃತಸ್ಪರ್ಶನಮಾಗೆ ಮೂರ್ಛೆಯಿಂದೆಚ್ಚಱಿಸಿ

ಮ॥ಸ್ರ॥ ಪರಮಸ್ನೇಹಾಮೃತಾದ್ರೇಕ್ಷಣರುಚಿನಿಚಯಂ ಸೇಸೆ ಸಂಭಾಷಣಂ ತೂ
ರ್ಯರವಂ ಕಂದರ್ಪರಾಗೋದಯಮೆಳದಳಿರ್ವಂದಲ್ ಪೊದಟ್ದಿಂಗಶೃಂಗಾ
ರರಸಂ ಕೈನೀರ್ ಪುಳದಂ ಪೊಂಗಳಸಮೊಲವು ಮೌಹೂರ್ತಮಾಗಲ್ ತದಲ್ಪೋ
ದರಿಯೊಳ್ ವೈವಾಹಪಪ್ಪನ್ನೆಗವಭಿನವವೈವಾಹದಿಂ ಕೃಷ್ಣನಿರ್ದಂ ೫೨

ವ॥ ಅಂತಾ ಮಹೋತ್ಸವಪ್ರಪಂಚಮಂ ಕಾಮಲೇಖೆಯಿಂ ಸತ್ರಾಜಿನ್ನೃಪಂ ಕೇಳ್ದುಮತಿಹರ್ಷದಿಂ ಪುರುಷೋತ್ತಮನುಮಂ ಸತ್ಯಭಾಮೆಯುಮಂ ನಿಜನೃಪೇಂದ್ರ ಮಂದಿರಕ್ಕೊಡಗೊಂಡು ಬರಿಸಿ ನಿಖಿಳ ಮಂಗಳಾಚಾರಮಂ ನೆಗೞ್ದು

ಮ॥ ಕುಳವೃದ್ಧರ್ ನಲಿದಾಡೆ ಬಂಧುನಿವಹಂ ಕೊಂಡಾಡೆ ಸಾಮಂತಮಂ
ಡಳಿ ಹಾರೈಸೆ ಬಿಯಂ ಪೊದೞ್ದು ಜಸಮಂ ತಳ್ಕೈಸೆ ವಾದಿತ್ರಕಾ
ಹಳಗೇಯಸ್ವನಮುಣ್ಕೆ ವೇದನಿನದಂ ಕೈಗಣ್ಮೆ ವೈವಾಹಮಂ
ಗಳಮಂ ಮಾಡಿದನಲ್ಕಱಿಂದವರ್ಗೆ ಸತ್ರಾಜಿನ್ಮಹೀಪಾಲಕಂ ೫೩

ವ॥ ಅಂದಿನಿರುಳೊಳ್

---

1 ಕಂದರ್ಪಾವಸ್ಥೆಯ ತುರೀಯಾವಸ್ಥೆಯಿಂ (ಕಗ)

ಕಂ॥ ತಳೆದುಜ್ವಳತ್ವಮಂ ಪಾ
ಲೊಳೆ ತೊಳೆದಂತೊಪ್ಪಿ ಪೊಚ್ಚಪೊಸವೆಳ್ದಿಂಗಳ್
ಬೆಳಗುತ್ತಿರ್ದುದು ಬೆಳ್ದಿಂ
ಗಳ ರೂಪಿಂ ಬಿಸಿಲೆ ಬೆಳಗಿದಪುದೆಂಬಿನೆಗಂ ೫೪

ವ॥ ಆಗಳತನುರಾಗೋದ್ದೀಪನಕಾರಣಮಪ್ಪ ವಿಸ್ತಾರಸಂಸ್ತೃತ ವಿಸ್ತಾರವಾದ ಶಯನಸ್ಥಾನದೊಳ್ ದುಕೂಲಪ್ರಚ್ಛದಾಚ್ಛಾದಿತ ಮರಾಳತೂಳ ಶಯ್ಯಾತಳಮನಲಂಕರಿಸಿದಲ್ಲಿ

ಚಂ॥ ಪುಳಕನವಾಂಕುರಂ ನೆಗೞೆ ಘರ್ಮಪಯೋಲವಕುಟ್ಮಲಂ ಪುದುಂ
ಗೊಳೆ ರತಿರಾಗಪಲ್ಲವಮೊಡರ್ಚೆ ಕಟೀಕೃತಕಾದ್ರಿನಿರ್ಝರಂ
ತುಳುಕೆ ಮುಖಾಂಬುಜಂ ಮಿಱುಗೆ ಮಾಧವಸಂಗತಿ ಮಾಧವೋತ್ಸವಾ
ನಿಳ ನವಸಂಗಮಾದುದು ಮಹಾವನಲಕ್ಷ್ಮಿಗೆ ಸತ್ಯಭಾಮೆಗಂ ೫೫

ಮದನಸುಖಕ್ಕೆ ತಾನೆ ನೆಲೆ ಪೆಂಡಿರೊಳೆಂಬಿನಮಂತುಟೊಂದು ನೋ
ಟದ ತೆಱನಂತುಟೊಂದು ತನಿಸೋಂಕಿನ ಸಮ್ಮದಮಂತುಟೊಂದು ಮೇ
ಳದ ಚದುರಂತುಟೊಂದು ಪರಿರಂಭದ ಸಂಭ್ರಮಮಂತುಟೊಂದು ಕೂ
ಟದ ಪರಿ [1]ಸತ್ಯಭಾಮೆಗೊಡಗೂಡೆ[1] ಮುರಾರಿಗೆ ಕೂಡಿತುತ್ಸವಂ ೫೬

ಮ॥ ಕರಕೃಷ್ಟಾಳಕಮುತ್ಪದಾರ್ಪಿತನಖಂ ನಿಷ್ಪೀಡಿತೋಷ್ಠಂ ಸಮು
ತ್ಸರಹಸ್ತಾಹತಿ ಹೂಂಕೃತಾನ್ವಿತಪದಾಘಾತಂ ಯದೃಚ್ಛಾವಚ
ಸ್ಸ್ಫುರಣಂ ಸಭ್ರುಕುಟೀಕ್ಷಣಂ ದೃಢಪರಿಷ್ವಂಗಂ [2]ವಿಮುಕ್ತಾಂಗ[2] ಸಂ
ವರಣಂ ಕೈತವವೃತ್ತಮೇಂ ನೆಗೞ್ದುದೋ ಸಂಭೋಗಕೋಲಾಹಲಂ ೫೭

ಅವಲುಪ್ತಾಂಗವಿಲೇಪನಂ ಚ್ಯುತಲಲಾಮಂ ಪ್ರಸ್ತಮಾಲಾಳಿ ವ
ಕ್ರಮತಂಸಂ ಶ್ಲಥಮೇಖಲಂ ತ್ರುಟಿತಹಾಸಂ ಮುಕ್ತಮಂಜೀರಕಂ
ಪ್ರವಿಕೀರ್ಣಾಳಕಮಸ್ತಬಂಧ[3]ಕಬರಿಚ್ಛನ್ನಾಂಗ[3]ಮಾರಕ್ತನೇ
ತ್ರಮಗಾಧರಮಾಯ್ತು ಕಾಮಕಳಹಂ ಸತ್ರಾಜಿತೀದೇವಿಯಾ ೫೮

ಸರಸೀಜಾಕ್ಷನೊಳಿತ್ತುದಾ ಸತಿಯ ಸಂಭೋಗಂ ಸನೃತ್ಯತ್ಕುಚಂ
ಸರುಮತ್ಕಾಂಚಿ ಸಚುಂಬನಂ ಸಪರಿರಂಭಂ ಸಪ್ರಹಾರಂ ಸನಿ
ರ್ಭರವಕ್ತ್ರಶ್ವಸಿತಂ ಸಲೀಲಮತಿ ಸಸ್ನೇಹಂ ಸರೋಮೋದ್ಗಮಂ
ಸರಸಾಂಗಂ ಸನಿಮೀಲಿತಂ ಸಸಮುಪಾತಂ ಸೌಖ್ಯಸಂಪತ್ತಿಯಂ ೫೯

---

[1] ಸತ್ಯಭಾಮೆಯೊಡಗೂಡೆ (ಕಖಗ) [2] ವಿಮುಕ್ತಾಂಕ (ಕಗ) [3] ಕಚಪಸ್ನಿಗ್ಧಾಂಗ (ಖ)

ಉರದಿಂ ಪೆರ್ಮೊಲೆ ಜೆಂಗೆ ಮೂಡೆ ಬೆಮರಂಬುಂ ವಜ್ರಲೇಪಂಬೊಲಾ
ಗಿರೆ ಕೀಲ್ಗೊಟ್ಟ ಬೆಡಂಗನೀಯೆ ಪುಳಕಂ ತೋಳ್ ತಳ್ತು ಗಂಟಿಕ್ಕಿದಂ
ತಿರೆ ಮೆಯ್ ಮೆಯ್ಯೊಳಡಂಗುವಂತಮರೆ ಗಾಢಾಲಿಂಗನಂಗೆಯ್ದು ನ
ಲ್ಲರದೇನಿರ್ದರೊ ಕಾಸಿ ಬೆಚ್ಚ ತೆಱದಿಂ ಶ್ರೀಸತ್ಯಭಾಮಾಚ್ಯುತರ್ ೬೦

ವ|| ಅಂತು ಸಂತತಂ ನಿಕಾಮಪ್ರೇಮಕಾಮೋತ್ಸವಂ ನೆಗೞೆ

ಕಂ|| ವಿಭುಗಿನಿಯಳ್ ರುಕ್ಮಿಣಿ ಸ
ತ್ಯಭಾಮೆ ಜಾಂಬವತಿ ನಾಗ್ನಜಿತಿ ಲಕ್ಷ್ಮಣೆ ಮ
ದ್ರಭವೆ ಕಳಿಂದಜೆಯೆಂಟನೆ
ಯಭಿನುತಗುಣೆ ಮಿತ್ರವಿಂದೆ ಮತ್ತಂ ನೂರ್ವರ್ ೬೧

ಅಷ್ಟೋತ್ತರಶತಸತಿಯರೊ
ಳಿಷ್ಟಸುಖಂ ನೆಗೞಿಲಿರ್ದನಸುರಾರಿ ಭುಜಾ
ಕೃಷ್ಟಧನು ದುಷ್ಟನಿಗ್ರಹ
ಶಿಷ್ಟಾನುಗ್ರಹಸಮಗ್ರನೆನೆ ನಿಜಪುರದೊಳ್ ೬೨

ವ|| ಅಂತಿರ್ದೊಂದುದಿವಸಮೋಲಗಸಾಲೆಯೊಳೊಡ್ಡೋಲಗಂಗೊಟ್ಟಿರ್ದಲ್ಲಿ

ಚಂ|| ಸ್ಮರಕರಿಡಿಂಡಿಮಸ್ವನಮನೇೞಿಸೆ ಕಂಕಣಕಿಂಕಿಣೀಸ್ವನಂ
ಸರಸಲತಾತ್ರಿಭಂಗಿಯನದಿರ್ಪೆ ನಿಜಾಂಗಲತಾತ್ರಿಭಂಗಿ ಚಾ
ಮರರುಚಿಯಂ ಕಟಾಕ್ಷರುಚಿಯೇೞಿಸೆ ಚಾಮರವಿಕ್ಕಿದರ್ ಪಯೋ
ಧರವತಿಯರ್ ಸರೋಜವನದೊಳ್ [1]ಸುೞಿದಾಡುವುದಂಚೆವಿಂಡೆನಲ್[1] ೬೩

ಕಂ|| ಪರಿಕಲಿಸಿ ಕಲಸಿ ಕಪ್ಪುರ
ದ ರಜಂ ಕುಂಕುಮರಜಂ ಮೃಗೋದ್ಭವರಜಮೇಂ
ತೆರೆಗೊಂಡುವೊ ಸಿತಚಾಮರ
ಮರುದಭಿಹತಿಯಿಂದಮಾ ಸಭಾಕುಟ್ಟಿಮದೊಳ್ ೬೪

ಚಂ|| ನಿರುಪಮರೂಪಮಪ್ರತಿಮಯೌವನಮೂರ್ಜಿತವಿಭ್ರಮಂ ಮನೋ
ಹರದರಹಾಸಮುತ್ಕಟಕಟಾಕ್ಷನಿರೀಕ್ಷಣಕಾಂತಿ ಮಂಗಳಾ
ಭರಣಮೊಡರ್ಚೆ ಕಂತುಭುಜಶಕ್ತಿಯೆ ಕಾಂತೆಯರಾಗಿ ನಿಂದವೋಲ್
ಸರಸಿಜನಾಭನೋಲಗದೊಳಿರ್ದುದು ವಾರವಿಳಾಸಿನೀಜನಂ ೬೫

1 ಸುೞಿದಾಡುವುವಂಚೆಯೆಂಬವೊಲ್ (ಖ)

ಮ॥ ನೆಗೞ್ದಿಂದ್ರಾದ್ಯಮರೌಘಮೋಲಗಕೆ ವಂದೆಮ್ಮಂದದಿಂ ಭಕ್ತಿವೀ
ೞುಗುವಿಂದೀ ವಿಭುಗೆಂದು ಸೂಚಿಪವೊಲಿರ್ದರ್ ಭಕ್ತಿಸದ್ಭಾವದಿಂ
ಮೊಗಮಂ ನೋಡಿದೊಡಂತೆ ಕೈಮುಗಿಪ ಮಾತಿಂಗೊರ್ಮೆ ಜೀಯೆಂಬ ಮೆ
ಚ್ಚುಗುಡಲ್ಕೊಂಡು ಮಹಾಪ್ರಸಾದಮೆನುತಿರ್ಪುರ್ವೀಶರಾಸ್ಥಾನದೊಳ್ ೬೬

ವ॥ ಆ ಪ್ರಸ್ತಾವದೊಳ್

ಕಂ॥ ದಿನಮಣಿದೀಧಿತಿಯಂ ಮಂ
ಡನಮಣಿದೀಧಿತಿಗಳಿಱಿಸೆ ಗಗನದಿನಿೞಿತಂ
ದು ನಿಜೈರಾವತದಿಂದಿೞಿ
ದು ನಿಂದನರಮನೆಯ ಬಾಗಿಲೊಳ್ ದೇವೇಂದ್ರಂ ೬೭

ವ॥ ಆಗಳ್

ಮ॥ಸ್ರ॥ ಸರಸೋಕ್ತಿಪ್ರೌಢಿಯಿಂದಂ ನಿಲಿಸಿ ಪಡಿಯಱಂ ಬಂದು ಪೊಕ್ಕಾ ಸಭಾಭ್ಯಂ
ತರಮಂ ಭಾಳಸ್ಥಳೀಕುಟ್ಮಳಿತಕರನುಘೇ ಬಿನ್ನಪಂ ದೇವ ದೇವೇ
ಶ್ವರನೆಯ್ತಂದಿರ್ದಪಂ ಬಾಗಿಲೊಳೆನೆ ಬರವೇೞೆಂದತರ್ಕ್ಯಪ್ರಭಾವ
ಸ್ಫುರಿತಭ್ರೂಪಲ್ಲವಸ್ಪಂದನದೆ ಬೆಸಸಿದಂ ಶ್ರೀಜಗನ್ನಾಥದೇವಂ ೬೮

ವ॥ ಅನ್ನೆಗಂ ದೌವಾರಿಕನಿವೇದಿತಸ್ವಕೀಯಾಗಮನವೃತ್ತಾಂತನವಸರಂಬಡೆದುಪೇಂದ್ರಾಸ್ಥಾನದ ಭದ್ರಮಂದಿರಮನಿಂದ್ರಂ ಬಂದು ಪೊಕ್ಕು ತದೀಯಶ್ರೀಪಾದಪದ್ಮಪೀಠೋಪಕಂಠಭೂಮಿಯೊಳ್ ನಿರ್ಭರ ಭಕ್ತಿರಚಿತಪುಷ್ಪಾಂಜಲಿಯಾಗಿ

ಕಂ॥ ಪಸರಿಸಿದುದು ನಡುವಗಲೊಳ್
ಕಿಸುಸಂಜೆ ವಿಚಿತ್ರಮೆನೆ ಸುರರ್ವೆರಸಿಂದ್ರಂ
ವಸುಮತಿಯೊಳ್ ಮೆಯ್ಯಿಕ್ಕಿರೆ
ಪಸರಿಸಿದುದು ತತ್ಕಿರೀಟಮಣಿಘೃಣಿಪಟಲಂ ೬೯

ವ॥ ಅಂತು ಗೀರ್ವಾಣರುರ್ವೀತಳಾಲಿಂಗಿತಸರ್ವಾಂಗರಾಗಿ ಸಮನಂತರಮೆೞ್ದು ನಿಂದಿರ್ಪುದುಂ

ಕಂ॥ ಅಮಿತದಯಾಲೋಕನಸಂ
ಭ್ರಮವಚನದರಸ್ಮಿತಂಗಳೆಂಬಿವಱಿನನು
ಕ್ರಮದಿಂ ಸಂಭಾವಿಸಿದಂ
ಕಮಲಾಕ್ಷಂ ಶಕ್ರಮುಖ್ಯದಿಕ್ಪಾಲಕರಂ ೭೦

ಪೃಥ್ವಿ॥ಪ್ರಬದ್ಧಮಣಿವಿಷ್ಟರಂಗಳೊಳನುಕ್ರಮಂ [1]ತಪ್ಪದಂ
ತೆ[1] ಬಂದು ಮಘವಾಗ್ನಿಧರ್ಮದಿತಿಜಪ್ರಚೇತೋಮರು
ತ್ಕುಬೇರಹರರಿರ್ಪುದಂ ಸಭೆಯೊಳುಣ್ಮಿ ಪೊಣ್ಮಿತ್ತು ಜಾಂ
ಗುಬೊಲ್ಲಶುಭಬೊಲ್ಲಸಾಂಗಳಿಕಬೊಲ್ಲವೆಂಬೀ ರವಂ ೭೧

ಕಂ॥ ಅಱುಚದೆ ಪೋ ಮಾಣೆಂಬೆಡೆ
ಯುಱುಂದಿರಿವೆಂಬಿಕ್ಕು ಗದ್ದುಗೆಯನೆಂಬಿನ್ನುಂ
ಪೇಱುಸಾರೆಂಬಗ್ಗದ ಪಡಿ
ಯುಱುತ ರವಂ ನೆಗೞ್ದುದಾ ಮಹಾಸ್ಥಾಯಿಕೆಯೊಳ್ ೭೨
ಇರದೊಗೆದುದಲ್ಲಿ ಸೂೞಾ
ಯ್ತ್ತರ ಕಳಕಳವಚ್ಚಳಾಯ್ತ್ತುರುಲಿಪುಂ ನಾಗಾ
ಯ್ತ್ತರ ಗಳಗರ್ಜನೆ ಗೋೞಾ
ಯ್ತ್ತರ ಬಹುಳಧ್ವಾನಮಾ ಸಭಾಭ್ಯಂತರದೊಳ್ ೭೩

ವ॥ ಆಗಳುಪಸರೋಚಿತಜ್ಞಂ ಮಹಾಪ್ರತಿಹಾರನುತ್ತಂಭಿತಕರಾಂದೋಲನದಿಂ ಕಳಕಳಮಂ ನಿವಾರಿಸೆ ನಿಷ್ಪವನಸಮಯಜಲಧಿಯಂತೆ ಸಭಾಜಲಧಿ ನಿಶ್ಯಬ್ದಮಾಗಿರ್ಪುದುಂ ವಾಸವಭ್ರೂಸಂಜ್ಞೆಯಿಂ ವಾಚಸ್ಪತಿ ವಿಜ್ಞಾಪನೋದ್ಯುಕ್ತನಾಗಿ

ಕಂ॥ ಹರಿಯೊಳ್ ವಿಜಯಶ್ರೀಯಂ
ನೆರಪಲ್ಕೆ ದುಕೂಲಕಾಂಡಪಟಮಂ ಪಿಡಿವಂ
ತಿರಲಭಿಮುಖದೊಳ್ ಪರಿಕಲಿ
ಸಿರೆ ರದನದ್ಯುತಿಗಳೆಸೆಯೆ ಸುರಗುರು ನುಡಿದಂ ೭೪

ಮ॥ ಅಸುರಾರಾತಿಬಳಂಗಳೆಂಬ ತೃಣಮಂ ಸಾಲ್ವನ್ನೆಗಂ ಮೇದು ದು
ರ್ದಮದೈತ್ಯೇಂದ್ರರ ಜೀವವೆಂಬ ತಿಳಿನೀರಂ ತೃಪ್ತಿಪರ್ಯಂತಮೀಂ
ಟಿ ಮಹಾಂಬೋಜಭವಾಂಡವೆಂಬ ಘಟಮಾದಂ ತೀವೆ ಸತ್ಕೀರ್ತಿದು
ಗ್ಧಮನೀನಂದಕಖಡ್ಗಧೇನು ಕಱೆಯಲ್ ವೇಡಿರ್ದುದಿನ್ನಚ್ಯುತಾ ೭೫

ಉ॥ ಜ್ಯಾನವಮೇಘಧೀರರುತಿ ನಾರದಚಂದ್ರಕಿಲಾಸ್ಯವಸ್ತ್ರಸಂ
ತಾನಕವೃಷ್ಟಿದುಷ್ಟದಿವಿಜಾರಿಶರೀರವಿಮುಕ್ತ ಜೀವಜಂ
ಝಾನಿಳಮುದ್ಧತಾರಿ[2]ವನಿತಾಕ್ಷಿಜಲಪ್ಲವಮುರ್ವಿಸಲ್[2] ಸಮಂ
ತೀ ನಿಜಶಾರ್ಙ್ಗ[3]ಕಾರ್ಮುಕದ[3] ಕಾರ್ಮುಕವಾದಪುದಿಂ ಜನಾರ್ದನಾ ೭೬

---

1 ದಪ್ಪದಂತೆ (ಕ) ದಪ್ಪದಂದು (ಖ) 2 ವನಿತಾಶ್ರುಜಲಂ ನೆಱೆಪರ್ವಿಸಲ್ (ಕಗ)
3 ಕಾರ್ಮುಕದೆ (ಕಗ)

ಮ॥ ಗಗನಂ ನಾಟ್ಯನಿಕೇತನಂ ದಿವಿಜರೆಲ್ಲರ್ ನೋಟಕರ್ ದೇವ ನೀ
ನೆ ಗಡಂ ನಟ್ಟುವನಾಗೆ ಶಾತ್ರವಶಿರೋರತ್ನಪ್ರತಾನಂಗಳ
ಲ್ಲುಗೆ ಪುಷ್ಪಾಂಜಲಿಯಂತೆ ನಾರದಕಟೀತಾಳಂಗಳಿಂ ಪೆರ್ಚೆ ನಿ
ನ್ನ ಗದಾನರ್ತಕಿ ನರ್ತಿಸಲ್ ಪಡೆದಪಳ್ ರಕ್ಷಶ್ಶಿರೋರಂಗದೊಳ್ ೭೭

ಚಂ॥ ಸುರಿತರೆ ಲೋಹಿತಂ ಧರೆಗುರುಳ್ವ ನಿಶಾಟಶಿರಂಗಳಿಂದೆ ಕೇ
ಸುರಿ ಪೊಱೆಪೊಣ್ಮಿದಾವಗೆವೊಲೊಪ್ಪಿರಲತ್ತಲದೊಂದು ಮಸ್ತಕಂ
ಬೆರಸು ಘನಾಧ್ವದೊಳ್ ತಿರುಗುತುಂ ಭುಜದಂಡಹತಂ ಘಟಾನ್ವಿತಂ
ತಿರಿವ ಕುಲಾಲಚಕ್ರಮೆನಿಕುಂ ನಿಜಚಕ್ರಪದಿಂ ಮುರಾಂತಕಾ ೭೮

ವ॥ ಅದೆಂತೆನೆ

ಮ॥ ಅದು ಕಾಲಾನಲ[1]ನೊಂಪೆರಱ[1] ವಿಷವೆರಱ್ಮೃಱೀಶ್ವರಾಭೀಳಭಾ
ಳದ ಚಕ್ಷುಶ್ಶಿಖಿ ಮೂಱುನಾಲ್ಕು ಬಲವದ್ದಾವಾಗ್ನಿ ನಾಲ್ಕೈದಿರ
ಮ್ಮದವಯ್ದಾಱು ಲಯಾರ್ಕಮಂಡಲವದಾಱೇೞೌರ್ವವೇೞೆಂಟು ಪು
ಟ್ಟಿದುವೆಂಬಂತೆ ನೆಗೞ್ಚುಗುಂ ನರಕನಾಟೋಪಂ ಜಗದ್ವೇಷಮುಂ ೭೯

ಮ॥ಸ್ರ॥ ಮುನಿದಾ ಚಾಣೂರನಣ್ಮಾ ಮುರನ ಮಸಕಮಾ ಕಂಸನುರ್ವಾ ಹಿರಣ್ಯಾ
ಕ್ಷನ ಬಾಹಾಗರ್ವಮಾ ಕೈಟಭನ ರಭಸಮಾ ವೃತ್ರನಾಟೋಪಮಾ ಜಂ
ಭನ ಸೊರ್ಕಾ ಶುಂಭನುರ್ಕಾ ದಶಶಿರನಳವಾ ಘಾಕನುದ್ರೇಕಮೆಂಬಿಂ
ತಿನಿತೇಕಾಯತ್ತಮಾದಂತಿರಲದಟೆಲೆಸಂ ಲೋಕಮಂ ಭೌಮದೈತ್ಯಂ ೮೦

ವ॥ ಮತ್ತಮಾ ದೈತ್ಯೋತ್ತಮನಾತ್ಮೀಯ ಕಾರ್ಮುಕನಿರ್ಮುಕ್ತ ಸಾಯಕ ನಿಕಾಯನಿರ್ದಾರಿತೈರಾವತಹಸ್ತಿಮಸ್ತಕೋಚ್ಚಲಿತನಿಸ್ತುಲ ಸ್ಥೂಲಮುಕ್ತಾಫಲಪ್ರಕರ ವಿಕೀರ್ಯಮಾಣ ಶೇಷಾಕ್ಷತಂಗಳಿನೀ ಮಹೇಂದ್ರನ ಮಕುಟಪೀಠದೊಳ್ ನಿಜಾಜ್ಞಾದೇವತೆಯುಮಂ ಪ್ರತಿಷ್ಠಿಸಿಯುಂ, ಆ ನಿಶಾಚರಚಕ್ರವರ್ತಿ ಶಾತ್ರವಕಲತ್ರನೇತ್ರನಿರ್ಗಲದನರ್ಗಲ ದುಸ್ತರ ಬಾಷ್ಪಸಲಿಲಧಾರಾಸಾರವಿಸ್ತಾರದುಸ್ತರದೋಸ್ತರವಾರಿವಾರಿಧಾರಾಪೂರದಿಂದೀ ಪಾವಕನ ತೇಜಃಪ್ರಭಾವಮನಡಂಗಿಸಿಯುಂ, ಆ ನಿಶಾಚರಾಧಿನಾಥಂ ಸ್ವಕೀಯಸಾಂಪರಾಯಕೇಳಿಪಟಿಷ್ಠ ನಿಷ್ಠುರಭುಜಾವಷ್ಟಂಭಸಂಭ್ರಮ ಸಂಹೃತಾಹಿತಸುಭಟಸಂಖ್ಯಾವಿಜ್ಞಾಪನಚತುರಚಿತ್ರಗುಪ್ತವಚನಾಕರ್ಣನ ವ್ಯಾಪಾರದೊಳೀಯಮನನುಶಾಸಿಸಿಯುಂ, ಆ ದನುತನೂಜರಾಜರಾಜನ ಕಾಳಕಾಳರಾತ್ರಿವಚನಧುರಂಧರಾಂಧಕಾರ ಶಿತಿಪರ್ಣಾಯಿತಾಸ್ಥಾನ ನಾಕಲೋಕಭೀಕರ ಭ್ರುಕುಟೀ ಧೂಮಸಮುದಯ ಶ್ಯಾಮದಿಂದೀ ಮನುಜವಾಹನನ ದೇಹಕಾಳಿಮಮನಿರ್ಮಡಿಸಿಯುಂ, ಆ ಸುಪರ್ವಾರಿಸಾರ್ವಭೌಮಂ ಭೂಭರ್

[1] ಒಂದೆದಲ್ (ಕಗ)

ವ[1]ಸ್ಸಪರ್ಲೋಕದಿಕ್ಪಾಲ[1] ಕ್ಷಯಾಶುಶುಕ್ಷಣಿತೀಕ್ಷ್ಣಾಯಮಾನ ದುರ್ಧರಧಗಧಗತ್ಕಾರಾಟೋಪ ಶಿಖಾಕಳಾಪ ಕೋಪಹುತವಹನುಹೌರ್ವದಿಂದೀ ವರುಣನ [2]ಸಮುದ್ರಮನೀಂಟಿ[2] ಸಮಸ್ತವಸ್ತುಸಹಿತಮಮೃತಸ್ರಾವಿಯೆನಿಸಿದ ಮಹಾರುಣಚ್ಛತ್ರಮನೆೞೆದುಕೊಂಡುಂ ಆ ನಕ್ತಂಚರಮೂರ್ಧಾಭಿಷಿಕ್ತನಶೇಷಬಲಪದನಿಮಿಷಾಮಿಷ ಕಬಳನೋತ್ಥ ಮಹೋತ್ಪಾತ ಖಡ್ಗ ಜಿಹ್ವೋಪಬೃಂಹಿತ[3]ಬಂಹಿಮಪದ್ಬಾಹು[3] ಪವನಾಶನಾಧೀಶನಿಂದೀ ಪವನನಂ ನಿಶ್ಶೇಷಮೆನೆ ಪೀರ್ದು ತವಿಸಲುದ್ಯೋಗಿಸಿಯುಂ, ಆ ಯಾಮಿನೀಚರಗ್ರಾಮಣಿ ಸಂವರ್ತಸಮಯಮಹಾಭೈರವಸ್ಫಾರಹೂಂಕಾರಶಂಕಾವತ್ರಿವಿಷ್ಟಪಾತಕಂ ಧನುಷ್ಟಂಕಾರನಾದಾಕರ್ಷಣಮಂತ್ರ ಪ್ರಥಮೋಂಕಾರ ನಾದದಿಂದೀ ಕುಬೇರನೈಶ್ವರ್ಯಲಕ್ಷ್ಮಿಯನಾಕರ್ಷಣಂಗೆಯ್ದುಂ, ಆ ರಾಕ್ಷಸೇಶ್ವರಂ ಜಗದೇಕವೀರಪರಾಹಂಕಾರ ಜನಿತಶಶ್ವದೀಶ್ವರಾಭಿಧಾನಮಾತ್ಸರ್ಯ ನಿರ್ಭರಕುಲಿಶನಿಶ್ಶೇಷಭೀಷಣಘೋಷಭಾಷಾಪರಂಪರೆಯಿನೀ ಮಹೇಶನಂ ಭಿಕ್ಷಾವೃತ್ತಿಯೊಳ್ ನಿಲಿಸಲೊಡರಿಸಿಯುಂ, ಇಂತವಿಶ್ರಾಂತವಿಕ್ರಾಂತನುಮನಾಹತ ಬಾಹುಸಾಹಸನುಮಪ್ರತಿಮಪ್ರಭಾವನುಮೆನಿಸಿ

ಕಂ॥ ಸ್ತಂಬೇರಮನೆಂಟುಮನೊ
ತ್ತಂಬದೆ ದಿಗಧಿಪರೊಳೀಟ್ಟುಕೊಂಡನದಟಿಂ
ಕಂಬಕ್ಕಂ ತಳಿಗಂ ತೊಡೆ
ಗಂ ಬೀದಿಗಮೊಳಪಡರ್ ಖಳಂ ಶಿಕ್ಷಿಸಿದಂ ೮೧

ಸ್ತ್ರೀರತ್ನಶೂನ್ಯಮಮರಾ
ಗಾರಮೆನಲ್ ಸಿದ್ಧಸಾಧ್ಯವಿದ್ಯಾಧರಯ
ಕ್ಷೋರಗಸುರಕನ್ಯೆಯರುಮ
ನೀರೆಣ್ಬಾಸಿರ್ವರಂ ನಿಶಾಟಂ ತಂದಂ ೮೨

ಇದು ರುದ್ರಾದ್ರಿಗೆ ಮಿಗಿಲೆನಿ
ಸಿದ ರತ್ನಾದ್ರಿಯೆನೆ ಕಟ್ಟಿ ತಂದದಱ ಗುಹಾ
ಸದನಸಹಸ್ರಂಗಳೊಳಿರಿ
ಸಿದನಾ ಷೋಡಶಸಹಸ್ರ ಸುರಕನ್ಯೆಯರಂ ೮೩

ವ॥ ಅಂತುಮಲ್ಲದೆ

---

[1] ಸ್ವರ್ಭರ್ಯೈಕದಿಕ್ಪಾಲ (ಕಗ) ಸ್ವಾಹೈಕದೀಕ್ಷಿದೀಕ್ಷ (ಖ) [2] ಸಮಂತಮೀಂಟಿ (ಖ) [3] ಮಹಿಮವದ್ಬಾಹು (ಖ)

ಕಂ॥ ಬಳೆವದ್ಭುಜಬಲದಿಂದಿ
ರ್ಕುಳಿಗೊಂಡಂ ನರಕನದಿತಿದೇವಿಯ ಮಣಿಕುಂ
ಡಳಮಂ ದ್ಯುತಿಜಿತರವಿಸಂ
ಡಳಮಂ ನಿಜಕೀರ್ತಿಮಂಡಿತಾಖಂಡಳಮಂ ೮೪

ವ॥ ಆ ನರಕಪುರಂ ಪ್ರಾಗ್ಜ್ಯೋತಿಷಪುರಮೆಂಬುದೆಂಬುದಮಾರ್ಗಚುಂಬಿತ ಪ್ರಾಕಾರಧ್ವಜತೋರಣಸಮಾಜವಿರಾಜಿತಂ. ಅಂತಾಪುರಂ ಮೇರುನಗಕ್ಕನತಿದೂರದೊಳಿರ್ಪುದು. ಅದಱ ಪೊಱವೊಲಲಂ ಬಳಸಿ [1]ಯೋಜನಪ್ರಮಾಣದಗಲದಿಂ[1] ಸಪ್ತಮವಾತಸ್ಕಂಧಪರ್ಯಂತಂ ಮೇಲೆ ಚರಿಯಿಸುವ ಖಚರಕಿನ್ನರವಿದ್ಯಾಧರರಂ ಕಡಿಖಂಡಮಾಗೆ ಕತ್ತರಿಸಿ ಕೊಲ್ವ ಮೌರವಪಾಶಮಿರ್ಪುದು. ಅಲ್ಲಿಂದೊಳಗೆ ಚತುರ್ಗೋಪುರಪ್ರದೇಶದೊಳ್ ಬೇಱಬೇಱೆ ಚತುರಕ್ಷೌಹಿಣೀಬಲಂಬೆರಸು ಮುರ ಹಯಗ್ರೀವ ಪಂಚಜನ ನಿಶುಂಭರೆಂಬ ನಾಲ್ವರ್ ದನುಜನಾಯಕರಿರ್ಪರ್. ಅದರ್ಕೆ ತಕ್ಕುದಂ ನೆಗೞ್ದು

ಚಂ॥ ಜಯವಧು ಕೂಡೆ ಕೈನಿಱಿದು ನಾರದನಾಡೆ ಸುರಾಳಿ ನೋಡೆ ನಿ
ನ್ನಯ ಕರಚಾಪದಿಂ ಕಱೆವ ಬಾಣಕಳಾಪದಿನಾಂತ ಕೋಪದಿಂ
ಭಯುದಮೆಸಲ್ಕೆ ಧಾತ್ರಿ ಪೊಗೞಲ್ಕೆ ಜಸಂ ನಿಮಿರಲ್ಕೆ ಕೊಲ್ ವಿರೋ
ಧಿಯುಮಪರಾಧಿಯುಂ ಕುಟಿಲಯೋಧಿಯುನಾಹವದೊಳ್ ಜನಾರ್ದನಾ ೮೫

ಸುರಪನ ಲೀಲೆಯಂ ಶಿಖಿಯ ತೇಜಮನಂತಕನಾಜ್ಞೆಯಂ ಕ್ಷಪಾ
ಚರನ ಪಟುತ್ವಮಂ ವರುಣನುತ್ಸವಮಂ ಪವಮಾನನೇೞ್ಗೆಯಂ
ಹರಸಖನುನ್ನತಿಕ್ಕೆಯನುಮೇಶನ ಮೈಮೆಯನೊಲ್ದು ನೀಂ ಸಮು
ದ್ಧರಿಪುದು ದೇವ ತಂದದಿತಿದೇವಿಯ ಕುಂಡಲಮಂ [2]ಜನಾರ್ದನಾ[2] ೮೬

ವ॥ ಎಂದು [3]ವಾಚಸ್ಪತಿ ವಾಕ್ಪರಿಣತಿಯಿಂದುದಧಿ[3] ಗಂಭೀರನಾದದಿಂ ಬಿನ್ನವಿಸೆ ನರಕಾಟೋಪಮಂ ಕೇಳ್ದು ಸಕ್ರೋಧಹೃದಯನಾಗಿ

ಕಂ॥ ಹೃದಯದೊಳಂಕುರಿಸಿ ಮುಖಾ
ಗ್ರದಿಂದೆ ಕುಡಿವರಿವ ಕೋಪವಿಷಲತೆಯೆ ತಳಿ
ರ್ತುದು ಪೊತುದೆನಲ್ ತನ್ನಧ
ರದುತದೀಧಿತಿಗಳೆಸೆಯೆ ಕೃಷ್ಣಂ ನುಡಿದಂ ೮೭

[1] ಯೋಜನಪರಿಪ್ರಮಾಣದಗಲದಿಂ (ಕಗ) [2] ಗದಾಧರಾ (ಕಗ) [3] ವಾಚಸ್ಪತಿತಟಸ್ಪತಿ ಯಂತೆ (ಕಗ)

ಮ॥ಸ್ರ॥ ಸಮರಪ್ರಕ್ಷೋಭದಿಂ ಭೂಮಿಸಿತೆಗಮನ ರಕ್ತಾಂಬುವಿಂ ಕುಂಕುಮಾಲೇ
ಪಮನಿತ್ತಾಶಾಲತಾಸಂತತಿಗಮನ ಮಹಾಮಾಂಸದಿಂ ಪಲ್ಲವಪ್ರಾ
ತಮನಿತ್ತಾದಿತ್ಯಬಿಂಬಕ್ಕಮನ ತಲೆಯಿನುತ್ಫುಲ್ಲಶೋಣಾಂಬುಜಾತಾ
ರ್ಘ್ಯಮನಿತ್ತಾನಿತ್ತಪೆಂ ಕುಂಡಲಮನದಿತಿಗಿನ್ನಿಂತಿದರ್ಕೇನೊ ಗಾನಂ ೮೮

ವ॥ ಎಂದಭಯಮಂ ಕೊಟ್ಟು ದಿವಿರಾಜನಂ ಯಥಾಯೋಗ್ಯದಾನಸನ್ಮಾನದಿಂ ಬೀಳುಕೊಳಿಸಿ ಕಳಿಪಿ

ಕಂ॥ ಅನಿಮಿಷರಭಿಮತಮಂ ಮಾ
ಟ್ಟಿ ನೆಮದೆ ಷೋಡಶಸಹಸ್ರ ಸುರಕನ್ಯೆಯರಂ
ದನುಜಪುರಸ್ಥೆಯರಂ ಮದು
ವೆ ನೆರೆದಪೆಂ ನರಕವಧಮಿದಭಿಮತಮೆನಗಂ ೮೯

ವ॥ ಇಂತು ಪರಹಿತದೊಳಾತ್ಮಹಿತಮುಂ ದೊರೆಕೊಳ್ವ ಕಾರ್ಯದೊಳ್ ತಡ ಮೇವುದೀಗಳ್ ನಡೆವೆನೆಂದರವಿಂದಲೋಚನನಾಲೋಚನಂಗೆಯ್ದು ವಿಜಯಗಮನೋದ್ಯುಕ್ತನಾಗಿ ನಾಗಾರಿಯುಂ ಸ್ಮರಿಯಿಸೆ

ಮ॥ಸ್ರ॥ ಪೃಥಿವೀಚಕ್ರಂ ಪ್ರಕಂಪಾಕುಳಿತಮುದಧಿ ಸೀಮಾತಿಮಾತ್ರಂ ಘನಾಧ್ವಂ
ಮಥಿತಾಂಭೋವಾಹಮಪ್ಪಂತೊದವೆ ಬಹುಳಪಕ್ಷಾನಿಳಂ ಕೂಡೆಬಂದಂ
ಪ್ರಥಿತಾವಷ್ಟಂಭದಿಂ ರೋಹಣಶಿಖರಿಸಮುಚ್ಛಾಯನಸ್ತ್ರಾವಿಧೇಯಂ
ಪೃಥುಕಾಯಂ ದುಷ್ಪ್ರಮೇಯಂ ಸಕಲಖಗಕುಲಜ್ಯಾಯನಾ ವೈನತೇಯಂ ೯೦

ವ॥ ಅಂತು ಬಂದು ದೇವಕೀನಂದನಂಗೆ ವಿನತಾನಂದನಂ ಸಾಷ್ಟಾಂಗ ಪ್ರಣತನಾಗಿ ಕೈಗಳಂ ಮುಗಿದು

ಉ॥ ಆರ ಶರೀರಸರ್ಪಗೃಹಮಂ ಪುಗಲಿರ್ದುದು ಶಾರ್ಙ್ಗಮುಕ್ತಬಾ
ಣೋರಗಮಾರಸೃಗ್ಜಲಧಿಯೊಳ್ ನಲಿದಪ್ಪುದು ಚಕ್ರನಕ್ರಮಿಂ
ದಾರಡಗಿಂ ತಳಿರ್ತಪುದು ನಂದಕವಲ್ಲರಿ ಫುಲ್ಲನಾಭ ಪೇ
ಳಾರೊಡನಾಯ್ತು ವೀರಭಟವಿಗ್ರಹಕಂಪನಕಾರಿ ವಿಗ್ರಹಂ ೯೧

ವ॥ [1]ಎನೆ ವನಜನಾಭಂ ಗಮನಾಭಿಪ್ರಾಯಮಂ ವೈನತೇಯಂಗೆ ಬೆಸಸಿ[1]

---

1 ಎಂದ ವೈನತೇಯಂಗನೇಕ ಸಕಲಾಭಿಪ್ರಾಯಮಂ ಬೆಸಸಿ (ಕಗ)

ಸ॥ ತಳರ್ವನ್ನಂ [1]ರಿಪುಪಕ್ಷದಿಂ ಸಿರಿ[1] ವಿಪಕ್ಷೋಚ್ಚಂಡದೋರ್ದಂಡದಿಂ
ತಳರ್ವನ್ನಂ ಜಯಲಕ್ಷ್ಮಿ ಶಾತ್ರವಕಳತ್ರಶ್ರೋತ್ರಯುಗ್ಮಂಗಳಿಂ
ತಳರ್ವನ್ನಂ ಶ್ರುತಿಮಂಡನಂ ರಿಪುಚಮೂಸಂಹಾರದಿಂ ಭೂಭರಂ
ತಳರ್ವನ್ನಂ ತಳರ್ದಂ ವಿಳಾಸದೆ ಸುಪರ್ಣೀನಂದನಸ್ಯಂದನಂ ೯೨

ಇದು ಸಮಸ್ತಕಮಳಭವಾಂಡಮಾಲಾಘಟೀಘಟಿತಾರಘಟ್ಟಘಟನಾಸ್ವತಂತ್ರ
ನಿಜಸ್ವರೂಪನಿರೂಪಣಚಕಿತ ಸಕಲಾಮ್ನಾಯತಂತ್ರಲಕ್ಷ್ಮೀಕಾಂತ
ಶ್ರೀಪಾದಭಕ್ತಿಯುಕ್ತ ಸುಕವೀಂದ್ರರುದ್ರಪ್ರಣೀತ ಶ್ರೀಜಗನ್ನಾಥ
ವಿಜಯ ಮಹಾಪ್ರಬಂಧದೊಳ್ ಸತ್ಯಭಾಮಾವಿಪ್ರಲಂಭ
ತದೀಯ ವಿವಾಹಾಷ್ಟೋತ್ತರಶತಸತೀಸ್ವೀಕರಣ
ನಾಕಜೇಂದ್ರಾಗಮನ ನರಕಾಡಂಬರರ್ಣನಂ
ಏಕಾದಶಾಶ್ವಾಸಂ

[1] ರಿಪುವಕ್ಷದಿಂದಸು (ಖ) ರಿಪುವಕ್ಷದಿಂ ಸಿರಿ (ಗ)

ದ್ವಾದಶಾಶ್ವಾಸಂ

ಕಂ॥ ಶ್ರೀಕರಮೆನಿಸುವ ಚೀನಪ
ತಾಕಾವಳಿತೋರಣಾವಳೀವೃತಪುರಮಂ
ವೈಕುಂಠನೊಸೆದು ನೋಡು
ತ್ತಾಕಾಶಕ್ಕೊಗೆದನುರಗಮಥನಾರೂಢಂ ೧

ಪೀತಾಂಬರಕೌಸ್ತುಭರುಚಿ
ಪೀತಾಂಬರವಳಯನಾಗಳೆಸೆದಂ ಫಣಿಜಿ
ತ್ಕೇತನನುತ್ಪಲಕಾಂತಿನಿ
ಕೇತನನಾಲೋಲಮಕರಕುಂಡಲಯುಗಳಂ ೨

ಉ॥ ಅತ್ತ ನಿಶಾಚರೇಶ್ವರನ ವಾಮವಿಲೋಚನ ವಾಮಬಾಹುಗಳ್
ಕೆತ್ತಿದವೆತ್ತಿ ಕಟ್ಟ ಮದದಂತಿಯ ಸೋರ್ವ ಮದಂ ಕರೇಣುಗಾ
ದತ್ತು ಹಯಾಳಿ ಕಣ್ಣನಿಯನಿಕ್ಕಿದುವಂದೊರೆಯಿಂದಮುರ್ಚಿ ಬಿ
ಟ್ಟಿತ್ತಸಿಧೇನು ಸೂಸಿದುವು ಕೇಸುರಿ ಬೀಸುವ ಚಾಮರಂಗಳಿಂ ೩

ಪುಟ್ಟಿದುವಲ್ಲಿಗಲ್ಲಿಗೆ [1]ಶಿಲೀಂಧ್ರಚಯಂ[1] ಕರುಮಾಡದಲ್ಲಿ ಜೇ
ನಿಟ್ಟುದು ಬಳ್ಳಿ [2]ಮೂಡಮೊಗದೊಳ್ದುದು[2] ಮಂದಿರದೇವತಾಳಿ ಗೋ
ಳಿಟ್ಟುದು [3]ನಟ್ಟಿರುಳ್[3] ನೆಗೆದುದಿಂದ್ರನ ಬಿಲ್ ದಿವಸೋಲ್ಕಸಂಕುಳಂ
ತೊಟ್ಟನೆ ಬಿಟ್ಟುವುಣ್ಮಿದುದು ಕಾವಳ ಕೊಂಡುವು ರಕ್ತವೃಷ್ಟಿಗಳ್ ೪

ವ॥ ಅಂತನೇಕ ದುರ್ಣಯಮನಿಮಿಷದ್ವೇಷಿಪುರದೊಳಾಗೆ ಸುಪರ್ಣಕೇತು ಜೀಮೂತಪಥದಿಂದತಿವೇಗದಿಂ ಪೋಗೆವೋಗೆ

ಕಂ॥ ನರಸೇನೆಗರಿದು ಲಂಕಾ
ಪುರದ ಬಹಿರ್ಜಲಧಿ ದಾಂಟಲಿಂತಿದು ದೇವಾ
[4]ಸುರರ್ಗಮರಿದೆನಿಸಿ[4] ನರಕನ
ಪುರಮಂ ಬಳಸಿರ್ದುದೊಂದು ಮೌರವಪಾಶಂ ೫

---

1 ಶಿಕಿಪ್ರಚಯಂ (ಖ) 2 ಮಾಡಮೊಗದೊಳ್ದುದು (ಕ) 3 ಪೋದಿರುಳ್ (ಖ)
4 ಸುರರ್ಗಮರಿದೆನಿಪ (ಕಖಗ)

ವ॥ ಆ ಮೌರವಯಂತ್ರಪಾಶಮಂ ಕೇಶಿಸೂದನಂ ಸುದರ್ಶನಚಕ್ರದಿಂ ಛೇದಿಸಿ ನಡೆಯೆ ನಡೆಯೆ

ಮ॥ ಇದಸಂಖ್ಯಾತಮಿದಪ್ರತರ್ಕ್ಯಮಿದಗುರ್ವೀಸೈನ್ಯಮಂ ವ್ಯೋಮಮಿಾಂ
ದುದೊ ದಿಕ್ಚಕ್ರಮನಾರತಂ ಬೆಸಲೆಯಾಯ್ತೋ ಭೂತಳಂ ಕೂಡೆ ಪೆ
ತ್ತುದೊ ಮುನ್ನಂ ಲಯಮೆಯ್ದಿ ಪೋದ ಪಲವುಂ [1]ಲೋಕಂಗಳಿಂತೀಗ[1] ಪು
ಟ್ಟಿದುವೋ ಪೇಟಿಕನಿಸಿರ್ದುದಲ್ಲಿ ಮುರಸೈನ್ಯಂ ಪಶ್ಚಿಮದ್ವಾರದೊಳ್ ೬

ವ॥ ಅದಂ ಕಂಡು

ಮ॥ ಅಮರಾರಾತಿಬಲಕ್ಕೆ ಸೈಶಸುರಚಾಪಂ ತಾನಿದೆಂಬಂತು ವಿ
ಕ್ರಮದಿಂದೇಱಿಸಿದಂ ಮುರಾರಿ ಜನಿತಾರಿ ಸ್ತ್ರೀಮನಸ್ತಾಪಮಂ
ದಮಿತ[2]ದ್ರೋಹಿ[2] ಬಲಾವಲೇಪಮನುದಗ್ರಾಟೋಪಮಂ ಚಂಡರೂ
ಪಮನಸ್ತಾಮರವೇಪಮಂ [3]ವಿಜಯಮೃಕ್ಷಾವಾಪಮಂ[3] ಚಾಪಮಂ ೭

ವ॥ ಅಂತಧಿಜ್ಯಮಾದ ಕೋದಂಡಮಂ ಸಮಾಸ್ಫುರಿತಂ ಮಾಡೆ

ಮ॥ ಕಿವಿಯೊಳ್ ತೀವಿ ದಿಗೀಶರಾಶಯದೊಳತ್ಯಾನಂದಮಂ ತೀವಿತೀ
ರವಮಿಂ ತೀವುಗುನುಂತಕಾವಸಥಮಂ ದೈತ್ಯಾಳಿ ದೈತ್ಯಾಂಗನಾ
ನಿವಹಂ ತೀವುಗುನುಶ್ರುವಾರಿಯಿನೆನಲ್ ಮೂಲೋಕಮಂ ತೀವಿ ಸಾ
ಱುವವೋಲಾದುದು ಶಾರ್ಙ್ಗಧನ್ವನ ಧನುರ್ಮೌರ್ವೀರವಂ ಬೀರವಂ ೮

ಕಂ॥ ಆ ವಿಪುಲನಾದದೊಡನೆ ರ
ಣಾವೇಶದಿನೊಗೆದ ಮುರಚತುರ್ಬಲ ತುಮುಲೋ
ಚ್ಚಾವಚನಾದದಿನಾದಂ
ತೀವಿದ ಕುಪ್ಪಿಗೆವೊಲಾದುದಬ್ಜಭವಾಂಡಂ ೯

ವ॥ ಅನ್ನೆಗಂ

ಕಂ॥ ಸ್ಫುರಿತಮಣಿಕುಂಡಲದ್ಯುತಿ
ಭರಿತಂ ಮಂಡಳಿತಕಾರ್ಮುಕಂ ಮಂಡಲದೊಳ್
ದೊರೆಯೆನೆ ಕಿರಣಾಳಿವೊಲಂ
ಬರಮಂ ತುಂಬಿದುವು ಗೋಪಮಾರ್ತಂಡಶರಂ ೧೦

---

[1] ಲೋಕಂಗಳಿಂದಿಂತು (ಮೊಅ) [2] ದ್ರೋಹ (ಕಖಗ) [3] ಸಜಯಮೃಕ್ಷಾವಾಪಮಂ (ಕ) ಸಜಯಪಕ್ಷಾಟೋಪಮಂ (ಖ) ಸಜಯವಿರಾಳಾಪಮಂ (ಗ)

ಕೈಟಭರಿಪು ರಿಪುಸೇನೆಯ
ನಾಟಂದಿಸುತಿರೆ ಶತಂ ಸಹಸ್ರಂ ಲಕ್ಷಂ
ಕೋಟಿ ಶತಕೋಟಿ ನಾನಾ
ಕೋಟಿಯೆನಲ್ ತಱುಗಿ ಪಾಯ್ದುವಂಬಂಬರದೊಳ್ ೧೧

ಶ್ವಸನನುಮರ್ಕಪ್ರಭೆಯುಂ
ನುಸುಳದೆನಲ್ ಪಾಯ್ವ ಕಣೆಯ ಕಣಿಗಟ್ಟಿಲೆಯೊಳ್
ಮಿಸುಪ ಕಲಧೌತಪುಂಖ
ಪ್ರಸರಂ ಖದ್ಯೋತತತಿವೊಲಾದುದು ನಭದೊಳ್ ೧೨

ಕೆದಱಿದುದು ಶಿಲೀಮುಖಪಾ
ತದಿಂದೆ [1]ಶೋಣಿತಪರಾಗತತಿ[1] ಪದ್ಮವ್ಯೂ
ಹದೊಳೆನೆ ಕೃಷ್ಣಶರಾಘಾ
ತದಿನೊಗೆದುದು ದೈತ್ಯಬಲದೊಳರುಣಜಲೌಘಂ ೧೩

ಚಂ|| ಕದನವುಗುರ್ವುವೆತ್ತುದಿಷುಘಾತದಿನಳ್ಕಿದ ಬಳ್ಕಿದುಳ್ಕಿದು
ನ್ಮದ ಗಜರಾಜಿಯಿಂ ತರದೊಳಟ್ಟಿದನುಟ್ಟಿಗದೊಂದು ತೇ
ರ್ಪುದುವೊದವಿಂ ಕರುಳ್ಪಿಣಿಲೆಳಲ್ವ ಕಳಲ್ವ ಬಳಲ್ವ ವಾಜಿಬೃಂ
ದದಿನಳವುರ್ಕುಸೊರ್ಕುಱಿದುರುಳ್ವ ಪೊರಳ್ವ ನರಳ್ವ ವೀರರಿಂ ೧೪

ವ|| ಆಗಳದ್ಭುತಭುಜಾಟೋಪದಿಂ ವಿಶ್ವರೂಪನಿಸುತಿರೆ

ಉ|| ಘೋರಧನುರ್ಲತಾವಳಿ ವನಾವಳಿಯುಂ ಗೆಲೆ ಭೂರಿಗರ್ಜಿತಂ
ನೀರದಗರ್ಜಿತಂಬೊಲೊದವುತ್ತಿರೆ ವರ್ಮಮರೀಚಿ ತಿಗ್ಮರೋ
ಚೀರುಚಿಯುಂ ಪರಾಭವಿಸೆ ಕಾರ್ಮುಕನಿರ್ಗತಮಾರ್ಗಣೋತ್ಕರಂ
ಮಾರುತಮಾರ್ಗಮಂ ಪುದಿಯೆ ತಾಗಿದುದಂದಸುಹೃದ್ಧನುರ್ಬಲಂ ೧೫

ವ|| ಆಗಳ್

ಕಂ|| ಅನಿತುಂ ಭಟೌಘಮೆಚ್ಚಂ
ಬನಂಬಿನಿಂ ತಱಿದು ತದ್ಭಟಾಂಗೋಪಾಂಗಂ
ಪುನರುಕ್ತಂ ಛಿದ್ರಿತನು
ಪ್ಪಿನಮೆಚ್ಚು ಮುರಾರಿ ತವಿಸಿದಂ ಬಿಲ್ಪಡೆಯಂ ೧೬

[1] ಸೇನಾಪರಾಗರಜ (ಕಗ)

ಪಲಗೆಗಳಂ ಪೊಳೆಯಿಸಿ ಕಡಿ
ತಲೆಯಂ ಜಡಿದೆಯ್ದುವಣಿಯ ವೀರರನೆಚ್ಚಂ
ಪಲಗೆಯುಮುರಮುಂ ತೆತ್ತಿಸೆ
ತಲೆಯುಂ ಕಡಿತಲೆಯುಮೊಡನೆ ಪಱಿಯೆ ಮುಕುಂದಂ ೧೭

ಮ॥ಸ್ರ॥ ಪೊಳೆವುತ್ಪಾತಾಸಿಜಾಳಂಗಳ ಸಕಲುಷಸಾದೀಕ್ಷಣೋದಂಶುಜಾಳಂ
ಗಳ ತಳ್ಪಂ ತಾಳ್ದಿ ಚಂಚಚ್ಚಪಲಶಫರಸಂದೋಹದಿಂದಂ ಪ್ರವಾಳಾ
ವಳಿಯಿಂದಂ ತಳ್ತ ವೀಚೀಚಯಮಿದೆನಿಸಿ ಸೈನ್ಯಾಬ್ಧಿಯಿಂ ಬರ್ಪ ವಾಹಂ
ಗಳನೌರ್ವಜ್ವಾಲೆಯಂತಚ್ಯುತನ ಕಣೆಗಳಟ್ಟಾಡಿಸುತ್ತಿರ್ದುವೆತ್ತಂ ೧೮

ಮ॥ ಅವಿಧೇಯಧ್ವಜಿನೀನಿಶಾಟನಿವಹಂ ನಾಗಾಳಿಯಂ ಗಾಳಿಯಂ
ಜನದಿಂ ಗೆಲ್ವಿನಮಾರ್ದು ನೂಂಕಿ ನೆಗೆಯಲ್ ಸೇನಾರಜಂ ನಾರಜಂ
ಕವಿಯಲ್ ಬರ್ಪರಿಸೈನ್ಯದಂತಿಘಟೆಯಂ ಕೋದಂಡದಿಂ ದಂಡದಿಂ
ಜವನಾಂಪಂತೆವೊಲಾಂತು ಸಂಹರಿಸಿದಂ ಕಂಜೋದರಂ ಜೋದರಂ ೧೯

ಕಂ॥ [1]ನಡುತುಂ ಮೊಗಮುಂ ಪೇಚಕ
ದೆಡೆಯಿಂದೊಂದೊಂದೆ[1] ನಾರಚಂ ನುಸುಳ ಪಡ
ಲ್ಗೆಡೆದುದಿಭಮಾಲೆ ಜೀವಮು
ಮೊಡಲಿಂ ಬೇಱಿಲ್ಲದಂತದೊರ್ವೆಯೆ ಧುರದೊಳ್ ೨೦

ಟಂಕೃತಿ ಧನುವಿಂ ಶರದಿಂ
ಛೀಂಕೃತಿ ಚೀತ್ಕೃತಿ ರಥಾಂಗದಿಂ ಸಾರಥಿಯಿಂ
ಹೂಂಕೃತಿ ಹೇಷಿತರುತಿ ಹಯ
ದಿಂ ಕಡುಪೊದಗುವಿನಮೆಯ್ದಿದುವು ರಥನಿವಹಂ ೨೧

ಅತಿರಥ[2]ಸಹಸ್ರಮಿರಲ[3]
ಪ್ರತಿರಥನೊರ್ವನೆ ಮುಕುಂದನೆಸೆ ಪಾಯ್ದ ವಿಮು
ಪ್ರತತಿಗಳಧಿಕಂ ತಚ್ಛರ
ತತಿಯಿಂ ಗಣನೆಗೆ ಸಹಸ್ರಗುಣಮೆಂಬಿನೆಗಂ ೨೨

---

[1] ನಡುಮಂ ಮೊಗಮುಂ ಪೇಚಕದೆಡೆಯುಮನೊಂದೊಂದೆ (ಖ) [2] ಸಹಸ್ರಮೆಸಲ (ಕಗ)

ಭಲ್ಲದಿನೆಚ್ಚುರೆ ಖಂಡಿಸಿ
ಬಿಲ್ಲಂ ಪ್ರತ್ಯೇಕಮಂತೆ ಕುಂಡಲಕೋಟೀ
ರೋಲ್ಲಸಿತರಥಿಶಿರಂಗಳ
ನೆಲ್ಲವನೊರ್ವೊದಲೆ ಶಾರ್ಙ್ಗಪಾಣಿವಿನನೆಚ್ಚಂ ೨೩

ವ॥ ಆಗಳಾ ಚತುರಂಗಬಲಮಳಿವುದುಮೇಕಾಂಗದಿಂ ಮುರನಿಶಾಚರಂ ಪೊಣರೆ

ಕಂ॥ ಹರಿಯೆಚ್ಚಂ [1]ಬ್ರಹ್ಮಾಸ್ತ್ರದಿ[1]
ನುರುಳೆ ಶಿರಂ ಶರಶಿಲೀಮುಖಾಕೀರ್ಣ ವಿಯ
ತ್ತ್ರುರುವಂ ಗರ್ಜಿತವಿಜಿತ
ಸ್ವರುವಂ ಸಂಗ್ರಾಮಕೇಳಿ ಗುರುವಂ ಮುರುವಂ ೨೪

ವ॥ ಅಂತು ಗರುಡವಾಹನಂ ವಿಜಯೋತ್ಸವಮನಪ್ಪುಕೆಯ್ದಾ ಪ್ರದೇಶದಿಂ ತಳರ್ದು ದಕ್ಷಿಣದ್ವಾರಕ್ಕೆ ಪರಿಯಿಟ್ಟು

ಕಂ॥ ಅಪರಿಮಿತಸೈನ್ಯದಿಂದೊ
ಡ್ಡಿ ಪಳಂಚಿದ ದೈತ್ಯನಂ ವಿಮರ್ದಿಸಿದಂ ತ
ದ್ವಿಪುಳಬಲ[2]ರಕ್ತಸಂಘಟಿ
ತಪಂಚಜನನಾಗಿ ಪಂಚಜನನಂ[2] ಕೃಷ್ಣಂ ೨೫

ವ॥ ಅಲ್ಲಿಂ ತಳರ್ದು ಪೂರ್ವದ್ವಾರಭೂಗೋಳಮನೆಯ್ದಿ

ಕಂ॥ ಸೇನಾದುರ್ಧರನಂ ತ
ತ್ಸೇನಾನ್ವಿತನಿಕ್ಕಿದಂ ಮುಕುಂದಂ ಶಾರ್ಙ್ಗ
ಧ್ವಾನಮುಹುರ್ಮುಹುರುದ್ಗತ
ಭಾನುಹಯಗ್ರೀವನಾ ಹಯಗ್ರೀವನುಮಂ ೨೬

ವ॥ ಆ ಮಹಾಹವರಂಗದಿನುತ್ತರದ್ವಾರದ ಸುರಾರಿಯನಟ್ಟಿ ಮುಟ್ಟಿ

ಕಂ॥ ಅನಿವಾರ್ಯ ಚತುಸ್ಸೈನ್ಯನ
ನನನ್ಯಸಾಮಾನ್ಯನಂ ವಿಚಿತ್ರವಿಧಾಯೋ
ಧನಕೃತತತ್ಸೈನ್ಯ ನಿಶುಂ
ಭನಾಗಿಯೆ ನಿಶುಂಭನಂ ಮುಕುಂದಂ ಕೊಂದಂ ೨೭

1 ರಾದ್ರಾಸ್ತ್ರದಿ (ಖ) 2 ರಕ್ತಸಂಘಟ್ಟಪಂಚನದನಾಗಿ ಪಂಚನದಂ (ಖ)

ವ॥ ಅಂತು ಮುರಾಂತಕಂ ಪ್ರಾಗ್ಜ್ಯೋತಿಷಪುರ ಬಹಿರ್ಭಾಗರಕ್ಷಾನಿಯುಕ್ತ ಷೋಡಶಾಕ್ಷೌಹಿಣೀಬಲಮನಿಕ್ಕಿ ಕೋಟಾಟ್ಟಾಳಮಂ ಮುಟ್ಟಿವಂದು ಪಾಂಚಜನ್ಯ ಶಂಖಮಂ ಪೂರೈಸೆ

ಮ॥ಸ್ರ॥ ಹರಿಶಂಖಧ್ವಾನಮುಣ್ಮಿತ್ತೆಲೆಲೆ ಕರಿಗಳಂ ಪಣ್ಣವೇಟ್ ತೇರ್ಗಳಂ ಪೂ
ಡಿರವೇಟ್ಱಶ್ವಂಗಳಂ ಪಲ್ಲಣಿಸಿ ಬಱಲೆವೇಟ್ ವೀರರಂ ಕೈದುಗೊಂಡೆ
ೞ್ತಿರವೇಟ್ಱಂಬೊಂದು ಘೋಷಂ ನರಕನ ಪುರದೊಳ್ ಕೊರ್ವಿ ಪರ್ವಿತ್ತು ದೇವಾ
ಸುರದೋರ್ದಂಡಾಭಿಘಾತೋನ್ಮಥಿತಜಲಧಿನಿರ್ಘೋಷಮೆಂಬಂದದಿಂದಂ ೨೮

ವ॥ ಆಗಳಾ ಸಮರಸನ್ನಾಹಭೇರೀಶಂಖಕಾಹಳಾನಿನಾದಮಂ ಗೃಹದೇವತಾಕ್ರಂದನನಿನಾದಮಾಕ್ರಮಿಸೆಯುಂ; [1]ನಾನಾನಿಶಿತಸ್ಫುರಿತ ಹೇತಿಪ್ರಭೆಯು[1]ನುಳ್ಕಾಪಾತ ಪ್ರಭೆಗಳಭಿಭವಿಸೆಯುಂ; [2]ನರೂಥಯೂಥ[2] ಕೇತುಗಳನುದ್ದಾಮ ಧೂಮಕೇತುಗಳ್ ಧಿಕ್ಕರಿಸೆಯುಂ; ಆಯೋಧನ [3]ಕ್ರೋಧನಿಯುಕ್ತಯೋಧವೀರಸ್ಫುರನ್ನೇತ್ರ[3] ರಶ್ಮಿರಾಗೋತ್ಕರ್ಷಮಂ ರುಧಿರವರ್ಷಮೊತ್ತರಿಸೆಯುಂ; ವಿಚಿತ್ರಾತಪತ್ರ[4]ಪಿಂಛಪತ್ರ[4] ಷಂಡಮನಕಾಂಡ ಸಂಭವಶಬಲವರ್ಣಾಂಬುಧಾರಾಡಂಬರಂ ವಿಡಂಬಿಸೆಯುಂ; ಕರಿಕರ್ಣತಾಲಪವನಪರಿಮೀಲಿತಲೋಲಚಾಮರಸ್ತೋಮಪವನನಂ ಪ್ರತಿಕೂಲಚಂಡಪವನನಂಡಲೆಯೆಯುಂ; [5]ದೈತ್ಯರಾಜರಾಜನ್ಮಕುಟಮಾಣಿಕ್ಯ ಶೋಣಮಣಿಕಿರಣಸಂದೋಹಮಂ ದಿಗ್ದಾಹಮಿಱುಕೆಯ್ಯೆಯುಂ; ಪೌರನಾರೀನಿಕರಕರವಿಕೀರ್ಯಮಾಣನಿಸ್ತುಲಸ್ಥೂಲಮುಕ್ತಾಕ್ಷತಮ[5]ನಂತರಿಕ್ಷ ಪತಿತನಕ್ಷತ್ರಸಂಕುಲಂ ಮಾಂಕರಿಸೆಯುಂ; ದುರ್ವಾರಚತುರ್ಬಲಕ್ಷೋಭವಿಶೇಷಜನಿತಾಶೇಷಶಿರಃಕಂಪಮಂ ಭೂಕಂಪಮಿಱುಸೆಯುಂ; ಅಪಜಯಕ್ಕಾಗರಮಾಗಿ ದಾನವೇಶ್ವರಂ ಪೊಱಮಟ್ಟು ಪೊಱವೊಱಲೊಳೊಡ್ಡಿ ನಿಲ್ವುದುಂ

ಕಂ॥ ತುಱುಗೆ ಸರಲ್ ಕಣೆ ಕಣೆಯಂ
ಗಱಿ ಗಱಿಯಂ ಪಿಳ್ಕ ಪಿಳ್ಕನಲಗಲಗಂ ತ
ತ್ತೆಱಗುವಿನಮೆಚ್ಚು ಕೃಷ್ಣಂ
ಮೇಱಿದಂ ನಿಜಚಾಪವಿದ್ಯೆಯಂ ತತ್ಕ್ಷಣದೊಳ್ ೨೯

ಚತುರಂಗಾಕಾರವ್ಯ
ಕ್ತಿ ತಿರೋಹಿತಮಾಗೆ ತುಱುಗಿ ಕೃಷ್ಣನ ಶರಸಂ
ತತಿ ನಾಂಟೆ ಶರದ್ವೀಪಾ
ಕೃತಿಯುಂ ಪೋಲ್ತತ್ತು ದೈತ್ಯಸೇನಾಚಕ್ರಂ ೩೦

[1] ಅನಿಶಾಟಸ್ಫುರಿತಕೇಶರಪ್ರಭೆಯ (ಖ) [2] ವರೂಥಮಾತಂಗಸಮುಗ್ರೋದಗ್ರ (ಖ)
[3] ಕ್ರೋಧಯುಕ್ತಯೋಧನವಿಸ್ಫಾರನೇತ್ರ (ಖ) [4] ಪಿಂಛಚ್ಛತ್ರ (ಕಖಗ) [5] ದೈತ್ಯಫಾಲಪಟ್ಟಸ್ಥೂಲಸ್ಥೂಲಮುಕ್ತಾಫಲಾಕ್ಷತಂಗಳ (ಖ)

[1]ಎನಿತೆನಿತು[1] ಬಾಣವರ್ಷದಿ
[2]ನೆನಿತೆನಿತಂ[2] ಕೊಂದನಾಂತ ಚತುರಂಗಮನಂ
ತನಿತನಿತು ಸೈನ್ಯವೊಡನೊಡ
ನೆ ನೆಱೆದು ನಿಲೆ ವೈಷ್ಣವಾಸ್ತ್ರಮಂ ನೆನೆದಾಗಳ್ ೩೧

ಚಂ|| ಪರಬಲಜೀವಮಂ ತೆಗೆವಿನಂ ತೆಗೆದಂ ದೊಣೆಯಿಂ ಮಹಾಸ್ತ್ರಮಂ
ತಿರಿವ ಕುಲಾಲಚಕ್ರಮೆನೆ ಭೂವಳಯಂ ತಿರಿವನ್ನಮಸ್ತ್ರಮಂ
ತಿರಿಪಿದನುಗ್ರವೈರಿಗೆ ಭಯಂ ತೊಡರ್ವನ್ನೆವರಂ ತೊಡರ್ಚಿದಂ
ತಿರುವಿನೊಳಸ್ತ್ರಮಂ ಜಯವಧೂಸದನಂ ರಣರಂಗಭೈರವಂ ೩೨

ವ|| ಆ ಮಹಾಸ್ತ್ರಂ ಕಾರ್ಮುಕನಿರ್ಮುಕ್ತಮಾಗೆ

ಉ|| ಪಿಂಗದೆ ಸೋರ್ದುವಸ್ತ್ರಮುಖದಿಂ ಕಣೆಯಂಗಳ ವೃಷ್ಟಿ ಮಂಡಲಾ
ಗ್ರಂಗಳ ವೃಷ್ಟಿ ಶಕ್ತಿಗಳ ವೃಷ್ಟಿ ಶರಂಗಳ ವೃಷ್ಟಿ ಭಿಂಡಿವಾ
ಳಂಗಳ ವೃಷ್ಟಿ ಶಂಕುಗಳ ವೃಷ್ಟಿ [3]ಹಲಂಗಳ[3] ವೃಷ್ಟಿ ವಜ್ರದಂ
ಡಂಗಳ ವೃಷ್ಟಿ ಯಿಟ್ಟಿಗಳ ವೃಷ್ಟಿ ವಿರೋಧಿಚತುರ್ಬಲಂಗಳೊಳ್ ೩೩

ಕಂ|| ಪರಿಘದ ಪಾಶದ ಚಕ್ರದ
ಪರಶುವ ಪಟ್ಟಿಸದ ಶೂಲದಸಿಧೇನುವ ಮು
ದ್ಗರದ ಮುಸುಂಡಿಯ ಮುಸಲದ
ಕರಪತ್ರದ ಮಱೆಯೆ ಸುರಿದುದಸ್ತ್ರದ ಮುಖದಿಂ ೩೪

ವ|| ಅಂತು ವೈಷ್ಣವಾಸ್ತ್ರಮತಿನಿರ್ಭರದಿಂ ಚತುರ್ಬಲದೊಳೆ ಕಾದುತ್ತುಮಿರೆ ಮುಕುಂದಂ ದ್ವಂದ್ವಯುದ್ಧದಿಂ ಕಾದಲೆಂದಸುರನಾಯಕನಂ ಸಾಯಕಹಸ್ತದಿಂ ಸನ್ನೆಗೆಯ್ಯೆ

ಕಂ|| ಆರೋಪಿತಚಾಪಂ ವಿ
ಸ್ಫಾರಿತಮೌರ್ವೀಲತಂ ಪ್ರವರ್ಷಿತಬಾಣಾ
ಸಾರಂ ಚೋದಿತರಥನಸು
ರಾರಿಗೆ ಮಾರಾಂತನಾಜಿಭೀಮಂ ಭೌಮಂ ೩೫

1 ಅನಿತನಿತು (ಖ) 2 ನನಿತನಿತಂ (ಕಖಗ) 3 ಪಯಂಗಳ (ಕಗ)

ಮ॥ಸ್ರ॥ ಇಳಿಯಂ ಬಾಣಾಂಧಕಾರಂ ಪುದಿಯೆ ನಭಮನಸ್ತ್ರೋತ್ಕರಂ ತೀವೆ ದಿಙ್ಮಂ
ಡಳಮಂ ಮೌರ್ವೀಲತಾಟಂಕೃತಿ ಬಳಸೆ ಶರಾದಾನಸಂಧಾನಮೋಕ್ಷಂ
ಗಳ ವೇಗಂ ಲೋಚನಾಗೋಚರಮೆನಿಸೆ ಝಣತ್ಕಂಕಣರ್ ಸಂಚಲತ್ಸ್ಕಂ
ಡಳರುದ್ಭಾಸಾಂಗದರ್ ಮಂಡಳಿತಧನುಗಳೆಚ್ಚಾಡಿದರ್ ಕೃಷ್ಣಭೌಮರ್ ೩೬

ಕಂ॥ ಘನಘಟೆಯಂ ತನುಗಳ್ ಗ
ರ್ಜನೆಯಂ ಗಜಂ ನೆಗಳೆಂದ್ರಧನುವಂ ಧನುಗಳ್
ನೆನೆಯಿಸೆ ಕಾರ್ಗಾಲದ ಮೞೆ
ಯೆನೆ ಸುರಿದರ್ ಕೃಷ್ಣಭೌಮರಂಬಿನ ಮೞೆಯಂ ೩೭

ಅಡಿಗಡಿಗೆ ಶಾರ್ಙ್ಗಧನುವಂ
ಕಡಿದಿಕ್ಕಲ್ ಲಕ್ಷ್ಯವೇಧಿ ಪೆಱತಂ ಧನುವಂ
ಪಿಡಿಪಿಡಿದು ಭೌಮದಾನವ
ನೊಡನೊಡನೆಚ್ಚೆಚ್ಚು ಮೆಱೆದನದ್ಭುತರಸಮಂ ೩೮

ಮ॥ ಮನದಣ್ಮಂ ಮನದಣ್ಮು ಮೂಂಕರಿಸಲೇಸಿಂಗೆಸು ಮೇಲಾಗಲಂ
ಬಿನಗುರ್ವಂಬಿನಗುರ್ವನಾಟಲೆದುದರ್ಕೇಂದ್ರಾದಿಗಳ್ ಭಾಪು ಭಾ
ಪೆನುತಮ್ಮಮ್ಮೆನುತಕ್ಕುಮಕ್ಕುಮೆನುತಾದಂ ಮೆಚ್ಚೆಯುಂ ಬ್ರಹ್ಮನಂ
ದನನಾನಂದದಿನಾಡೆಯುಂ ನೆಗೞ್ದುದಂದಾ [1]ಕೃಷ್ಣಭೌಮಾಹವಂ[1] ೩೯

ಕಂ॥ ಭೌಮನೆ ಹರಿಯೊಳ್ ಪೊಣರ್ಗುಂ
ಭೌಮನೊಳೀ ಹರಿಯೆ ಪೊಣರ್ಗುಮೆನಲಸ್ತ್ರಕಳಾ
[2]ಸಾಮರ್ಥ್ಯ[2]ದೊಳಸ್ತ್ರಕಳಾ[2]
ಸಾಮರ್ಥ್ಯಂ [3]ಸೆಣಸೆ[3] ಭೌಮಹರಿಗಳ್ ಪೊಣರ್ದರ್ ೪೦

ತೋಯರುಹನಾಭನೈಂದ್ರಾ
ಗ್ನೇಯಾಂತಕಕೌಣಪಾಸ್ತ್ರತತಿಯಿಂದಿಸೆ ದೈ
ತೇಯನುಮೆಚ್ಚಂ ವಾರುಣ
ವಾಯವ್ಯ ಕುಬೇರ ರುದ್ರಮಾರ್ಗಣದಿಂದಂ ೪೧

---

1 ಭೌಮಕೃಷ್ಣಾಹವಂ (ಗ) 2 ಸಾಮರ್ಥ್ಯಂ ಶಸ್ತ್ರಕಲಾ (ಖ) 3 ನೆಗಱೆ (ಖ)

ಜ್ವಲನಶಿಖಾಳಿಯನುಳ್ಳಾ
ಪಲಿಯಂ ಕುಳಿಕಾಹಿಕುಳಮನಶನಿಪ್ರಜಮಂ
ಗೆಲೆವಂದಿರದೊಂದೊಂದಂ
ಗೆಲೆವಂದುವು ಕೃಷ್ಣಭೌಮರಂಬಂಬರದೊಳ್ ೪೨

ಆವಾವಸ್ತ್ರದಿನೆಚ್ಚುಂ
ದೇವಾರಿ ಮುರಾರಿಯಂ ಗೆಲಲ್ ನೆಱೆಯದೆ ಘಂ
ಟಾವಳಿರವಾಟ್ಟಹಾಸ
ವ್ಯಾಪೃತ[1]ಘನರುತಿಗಳಾಗೆ[1] ಶಕ್ತಿಯೊಳಿಟ್ಟಂ ೪೩

ವ॥ ಅಂತಾ ಶಕ್ತಿ ಭುವನತ್ರಯಸಂಹರಣಶಕ್ತಿಯಿಂ ವಿಸ್ಫುಲಿಂಗ ಜ್ವಾಲಾಸಹಸ್ರ ಮನುಗುಳುತ್ತುಂ ಗಗನದಿನೆಟ್ಟಿರೆ

ಕಂ॥ ಜ್ವಾಲಾ[2]ಸಟಾಳಿಗಳ್ಕೆ ನಿ
ಮೀಲಿಸಿದಿಂದ್ರನ[2] ಸಹಸ್ರ[3]ಲೋಚನನೆಸೆದು
ನ್ಮೀಲಿಸೆ[3] ಮಹಾಸ್ತ್ರದಿಂ ವನ
ಮಾಲಾಧರನೆಚ್ಚು ಶಕ್ತಿಯಂ ಖಂಡಿಸಿದಂ ೪೪

ವ॥ ತದನಂತರಂ

ಕಂ॥ ಪುಟ್ಟುವ ಗಾಳಿಯ ಬಟ್ಟೆಯನೆ
ಬಟ್ಟನೆ ಸುಟ್ಟುಗೊಳೆ ಮರುದ್ವಿಮಾನಪ್ರಕರಂ
ತಿಟ್ಟನೆ [4]ತಿರುಪಿ[4] ನಿಶಾಚರ
ನಿಟ್ಟನದೊಂದುಗ್ರಗದೆಯಿನಸುರಾಂತಕನಂ ೪೫

ಕದಡುತ್ತುಂ ಘನಪಟಲಮ
ನದಿರ್ಚುತುಂ ತಾರಕಂಗಳಂ ಬೆದಱಿಸುತುಂ
ತ್ರಿದಶೌಘಮನುಗ್ರಗ್ರಹ
ಮದೊಂದು ಬರ್ಪಂತೆ ಬಂದುದಾ ಗದೆ ನಭದಿಂ ೪೬

ಸುರಬೃಂದಕ್ಕಮರತ್ವಂ
ಸ್ಥಿರಾಹ್ವಯಂ ಧರೆಗೆ ಸಂದುದಿಂದೀ ಗದೆಯಂ
ಮುರಮಥನಂ ಭೇದಿಸಲೆನೆ
ಮುರರಿಪು ನಾನಾಸ್ತ್ರದಿಂದದಂ ಭೇದಿಸಿದಂ ೪೭

---

[1] ಘನವೀಥಿಯಾಗೆ (ಖ) [2] ಸಟಾಳಿಗಳ್ಗನ್ಮೀಲಿತವಿಂದ್ರನ (ಖ) [3] ಲೋಚನಮೆಸಲು ನ್ಮೀಲಿಸೆ (ಕಗ) [4] ತಿರಿಯೆ (ಕಗ)

ವ॥ ಅಂತು ಗದಾದಂಡಮುಂ ಪ್ರತಿಹತಮಾದುದಂ ಕಂಡು ಇನಿಸಾನುಮಂತ ರಂಗದೊಳ್ ಚಿಂತಿಸಿ ಮಹಾವರಾಹಸಂಸರ್ಗದಿಂ ಭೂಮಿದೇವತೆಗೆ ತಾನುದ್ಭವಿಸಿದಂದ ದ್ಭುತಭುಜಾವಷ್ಟಂಭನಾಗಿರ್ದ ತನ್ನಂ ನೋಡಿ ಪುತ್ರಮೋಹದಿಂ ಭೂದೇವಿ ನಿಜನಾಥನಂ ಪ್ರಾರ್ಥಿಸಿ ವರಂ ಬೇಡೆ ಸಮಸ್ತದಿವ್ಯಾಸ್ತ್ರಸಮುದಯಂ ಪ್ರತಿಹತಮಪ್ಪಂತುಟೊಂದು ಸಂಗ್ರಾಮಮಮಾದೊಡೆಲೆ ಭೌಮಾ ನೀನೀ ಮಂತ್ರದಿಂ ಶಸ್ತ್ರಾಸ್ತ್ರಮಂ ಪ್ರಯೋಗಿಸುವುದಂ ತಡಂ ಹರಿ ಹರ ಹಿರಣ್ಯಗರ್ಭಾದಿಗಳುಂ ಪ್ರತಿಹತಂ ಮಾಡಲಸಮರ್ಥರೆಂದು ತನಗಂದಾದಿ ವರಾಹನುಪದೇಶಂಗೆಯ್ದ ಮಂತ್ರಮಂ ನೆನೆವುದರ್ಕಿದುವೆ ಪದನೆಂದು ಮಂತ್ರದಿಂ ತ್ರಿಶೂಲ ಮನಭಿಮಂತ್ರಿತಂ ಮಾಡಿ ಭೌಮಂ ಭೀಮನಾದದಿಂದಾರ್ದಿಡೆ

ಮ॥ ಮೃಡಭಾಳೇಕ್ಷಣವಹ್ನಿಯಂ ಕೆದಱುತುಂ ಸೂಸುತ್ತುಮೌರ್ವಾಗ್ನಿಯಂ
ಸಿಡಿಲಂ ಕಾಱುತುಮಂತು ಕೃಷ್ಣನಿಸುಮಸ್ತ್ರಾಸಾರಮಂ ಪೀರುತುಂ
ಕಡುಪಿಂ ಬಂದುದು ತನ್ನ ಮೂಱುಮೊನೆಯಿಂ ಮೂಲೋಕಮಂ ಕಾಯಲುಂ
ಪಡೆಯಲ್ ನುಂಗಲುಮಲ್ತೆ ಸಾಲ್ದಪುದಿದೆಂಬಂತಾ ತ್ರಿಶೂಲಾಯುಧಂ ೪೮

ವ॥ ಅಂತು ತ್ರಿಶೂಲಮಾಭೀಲತೆಯಿಂನಪ್ರತಿಹತಮಾಗಿ ಮುಟ್ಟೆವರೆ ವಿದಿತ ವೃತ್ತಾಂತಮನಸುರಾಂತಕಂ ತನ್ನುಪದೇಶಂಗೆಯ್ದ ಮಂತ್ರದ ಸಾಮರ್ಥ್ಯಮಂ ತಾಂ ನೋಡಲೆಂದು ಬರ್ಪಾ ತ್ರಿಶೂಲಮಂ ವಿಶೀರ್ಣಮುಖಮಾಗೆ ನುಂಗಿ ಕಾಲಕೂಟಮಂ ನುಂಗಿದ ನೀಲಲೋಹಿತನನನುಕರಿಸಿ ನಿಲ್ವುದುಂ

ಕಂ॥ ಅಂಗುಳ್ ಮುಟ್ಟದೆ ಜಗಮುಂ
ನುಂಗುವ ಲಯಕಾಲಕಾಲನಾರಭಟಿಯುಮಿಾ
ಭಂಗಿಯೆನೆ ರಥಮನಿೞಿದು ಭ
ರಂಗೆಯ್ದಿಳೆ ನಡುಗೆ ಭೌಮನೈದುವ ಪದದೊಳ್ ೪೯

ಮ॥ ಮರುತಂ ಪಿಳ್ಕ ಖಗೇಶ್ವರಂ ಗಱಿ ಸುಪರ್ವರ್ ¹ಪರ್ವಸಂಘ¹ ಫಣಾ
ಧರರಾಜಂ ಕಣೆ ಹವ್ಯವಾಹನಲಗಾದಿತ್ಯಂ ಪ್ರಕಾಶಂ ಮಸಂ
ಧರೆ ಬಿಣ್ಪಾದ ಸಮಸ್ತ²ಶಕ್ತಿಮಯದಿಂ² ಬ್ರಹ್ಮಾಸ್ತ್ರದಿಂದಂಬುಜೋ
ದರನೆಚ್ಚಂ ಪಱಿವಂತು ಭೌಮಶಿರಮಂ ಮೌಳಿಪ್ರಭಾಸ್ಫಾರಮಂ ೫೦

ವ॥ ಅಂತು ವಿಜಯೋತ್ಸವಮನಪ್ಪುಕೆಯ್ದು

¹ ಪುಂಖಮಂತಾ (ಕಗ) ² ಶಕ್ತಿಯಮರ್ದ (ಖ)

ಮ॥ಸ್ರ॥ ಕುಸುಮಾಸಾರಂ ಸುರೋದ್ಯಾನದಿನೆಱಗೆ ವಿಯದ್ವಾಹಿನೀಶೀಕರಸ್ಯಂ
ದಿ ಸಮೀರಂ ತೀಡೆ ದೇವಾನಕಘನರವದಿಂದಾ ಕುಭೃತ್ಕೂಟದೊಳ್ ನ
ರ್ತಿಸೆ ವೀರಶ್ರೀಮಯೂರಾಂಗನೆ ಜಿತರಣದೊಳ್ ಭೂತವೇತಾಳಕೇಳೀ
ರಸತುಷ್ಟಂ ಕೃಷ್ಣನಿರ್ದಂ ನೆಲಸೆ ನಿಜಧನುಃಕೋಟಿಯೊಳ್ ವಾಮಹಸ್ತಂ ೫೧

ವ॥ ಅನ್ನೆಗಂ ಭೌಮಾನ್ವಯಾಗತಪ್ರಧಾನಪುರುಷಂ ಬಂದು ಪುರುಷೋತ್ತಮನಂ ಪ್ರಾಗ್ಜ್ಯೋತಿಷಪುರಕ್ಕೊಡಗೊಂಡು ಪೋಗಿ ದೇವಾಂಬಿಕೆಯ ದಿವ್ಯಕುಂಡಲಮಂ ಕೊಟ್ಟು ಮತ್ತಂ

ಮ॥ ಬಳಿವಿಧ್ವಂಸಿಗೆ ಕೊಟ್ಟನಾಹವರಸಪ್ರಸ್ಯಂದನಸ್ಯಂದನಂ
ಗಳನಂಗಚ್ಛವಿಸತ್ವರೂಪಶುಭಚೇಷ್ಟಾವಾಹವಾಹಂಗಳಂ
ಜಳದಶ್ಯಾಮಸದಾನಗಂಡರದನಿರ್ಭಿನ್ನಾಗನಾಗಂಗಳಂ
ವಿಳಸದ್ರತ್ನಗಣಪ್ರಭಾಪರಿಕರವ್ಯಾಕೋಶಕೋಶಂಗಳಂ ೫೨

ವ॥ ಆ ಮನೋಹರಪದಾರ್ಥಸಾರ್ಥಂಗಳಂ ದ್ವಾರಾವತಿಗೆ ಕಳಿಪಿ ರೋಹಣಗಿರಿ [1]ಗುಹಾಪವರಕಂಗಳೊಳ್[1] ನರಕಂ ಸೆಱಗೆಯ್ದ ಷೋಡಶಸಹಸ್ರದಿವ್ಯಕನ್ಯೆಯರಿರ್ದಲ್ಲಿಗಾಸನ್ನವರ್ತಿಯಾಗಿ

ಕಂ॥ ಷೋಡಶಸಹಸ್ರಶಶಿಗಳ್
ಮೂಡಿದ ನಭಮೆನೆ ಗುಹಾಗ್ರಗತಮುಖತತಿಯಿಂ
ಕೂಡಿ ಮಣಿಶೈಲಮೆಸೆದಿರೆ
ನೋಡಿದರಚ್ಯುತನನಖಿಲಸುರಕನ್ಯಕೆಯರ್ ೫೩

ವ॥ ಅಂತು ಗುಹಾಂತರ್ನಿಗೂಢಕೋಮಲಾಂಗಿಯರೇಕಾಂಗಸಾಹಸಖ್ಯಾತಿಗನುರೂಪಮಾದ ತನ್ನ ರೂಪಸೌಂದರ್ಯಮಂ ನೋಡಿ [2]ಸಾಧ್ವಸಾವೇಗವೇಪಥು[2] ಸ್ವೇದಪುಳಕಿತೆಯರಾದುದಂ ತದೀಯವದನವಿಭ್ರಮದಿನಱದು ಮದನಮೌಹೂರ್ತಿಕನಿತ್ತ ಲಗ್ನದೊಳ್ ಸುರಸಮಾಜಂ ಬಾಜಿಸುವ ಬದ್ದವಣಂಗಳೊಳಂ ಕಲ್ಪಪಾದಪದ ಪೂಮಱಯ ಸೇಸೆಯೊಳಂ ಮದುವೆನೆಱದು ರೋಹಣನಿವಾಸಿನಿಯರನೊಡಗೊಂಡು ಪೋಗಲುಜ್ಜುಗಂಗೆಯ್ದು

ಕಂ॥ ರೋಹಣಶೈಲಂಬೆರಸಾ
ರೋಹಣಮಂ ಮಾಡೆ ಗರುಡನಂ ಹರಿ ಗರುಡಂ
ವೈಹಾಯಸಗತಿಚತುರಂ
ವೈಹಾಯಸಪಥದಿನೈದಿದಂ ಸುರಪುರಮಂ ೫೪

---

1 ಗುಹಾಭ್ಯಂತರದೊಳ್ (ಖ) 2 ಸಾಧ್ವಸವೇಗಪೃಥು (ಕಗ)

ಶತಮುಖನಿನಚ್ಯುತಂ ಸ
ತ್ಯತಿಯುಂ ತಳೆದದಿತಿಗಿತ್ತು ಕುಂಡಲಮುಂ ಸ
ನ್ನತನಾಗುತ್ತಿರಲೆಂದಳ್
ನತನಾಗದಿರೆಮಗೆ ನೀಂ ಜಗದ್ಗುರುವಲ್ತೇ ೫೫

ಚಂ|| ಅಱಿಪಿ ನಿಜಾದಿಮಧ್ಯನಿಧನೇತರವೃತ್ತಿಯನೊರ್ವ ಮತ್ತದಂ
ಮಱಿಯಿಸಿ ದೇವಕೀತನಯನೆಂತೆನಿಸಿರ್ದ ಪಯೋಧಿಶರ್ಗೆ ನೀ
ನೆಱಗಿ ಸಮಾನರೆಂದು [1]ಕೆಲರೊಲ್ಲದರಂ ಶರವರ್ಷದಿಂದಮಂ[1]
ದೆಱಗಿಸಿ ಧರ್ಮಜಾದ್ಯರನೆ ಮೋಹಿಪುದೆಮ್ಮನದೇಕೆ ಮೋಹಿಪೈ ೫೬

ಕಂ|| ಪರಮಾಣುಸಮಂ ಸ್ಥೂಲಂ
ಪುರಾಣನಜರಂ ಸಮೀಪಗಂ ದೂರಸ್ಥಂ
ನಿರವಯವಂ ಸಾಕಾರಂ
ಹರಿ ನೀನೇಂ ಪೊಗೞ್ವರಳವೆ ನಿನ್ನ ಮಹತ್ವಂ ೫೭

ಮುಕ್ತಪದಗ್ರಹಣ ಚಕ್ರವಾಳಗದ್ಯಂ ||

ಜಯಸಕಳ ಕಳಂಕವಿಗತಪ್ರಭಾವ, ಭಾವೈಕಗಮ್ಯಮಾನ, ಮಾನಸಾದಿಪ್ರವರ್ತನಾಧಾರ, ಧಾರಣಾದಿಯೋಗಮಾರ್ಗಪ್ರತ್ಯಕ್ಷ, ಅಕ್ಷಯಾಕಾರ, ಕಾರಕಪದವೀಧುರಂಧರ, ಧರಾದಿಪ್ರಪಂಚನಿಲಯ ಲಯೋತ್ಪತ್ತಿರಹಿತ, ಹಿತೋಪದೇಶಾರ್ಥಕೃತಚತುರ್ವೇದ, ವೇದನಾಪ್ರಮೋದಯಮೀಂದ್ರಹೃದಯಾವಾಸ, ವಾಸರೇಶಪ್ರಮುಖನಿಖಿಲಕಾಲಚಕ್ರ, ಚಕ್ರಪ್ರವರ್ತನಾನುಶಾಸನ, ಸನಕಸನಂದನಸನತ್ಕುಮಾರನಾರದಪ್ರಭೃತಿತತ್ತ್ವನಿಷ್ಠಾಪರವಿಬೋಧದೃಷ್ಟಿಗೋಚರ, ಚರಾಚರಪ್ರಕೃತಿಮಿಶ್ರಿತಗುಣತ್ರಯ, ತ್ರಯೀತರ್ಕಪ್ರವಚನಾತರ್ಕ್ಯಮಹಿಮ; ಹಿಮಾಹಿಮ ವ್ಯತಿರಿಕ್ತಪರಂಜ್ಯೋತಿಸ್ವರೂಪ, ರೂಪರಸಗಂಧಸ್ಪರ್ಶಶಬ್ದಸ್ವಭಾವ, ಭಾವಸುಖಾನುಭವಪನಸಮರ್ಥ ಅರ್ಥಪ್ರಕಾಶತತ್ಪರ, ಪರಾಪರಬ್ರಹ್ಮನಿಶ್ಚಿತಚಿದಾಕಾರ, ಕಾರಣಸ್ವೀಕೃತಲೀಲಾಸಂಹನನ, ಹನನಜನನಾವನಕರಣ ತ್ರಿಮೂರ್ತಿಸಂಧಾರಣ, ರಣಪರಾಜಿತಸರ್ವಗೀರ್ವಾಣರಕ್ಷಾರ್ಥಸಂಧಾರಿತದಶಾವತಾರ, ತಾರಾಧೀಶಮಂಡಲಾಭಿಮಾನಾಪಹ ಸಿತಪಾಂಚಜನ್ಯ ಜನ್ಯವಿಜಯಭಾಮಿನೀಭ್ರೂಲತಾಯಿತಶಾರ್ಙ್ಗಚಾಪ, ಚಾಪಳನಿಶಾಟಚಪೇಟಕೋದ್ದಂಡಕಾಲದಂಡಾಯಮಾನಘನಗದಾದಂಡ, ದಂಡಧರದರ್ಪಿತ ದಿತಿತನುಜಸಂವರ್ತ ಸಮಯಮಾರ್ತಂಡಬಿಂಬಾಡಂಬರ ವಿಭಾಸಮಾನ ಸುದರ್ಶನಚಕ್ರ, ಚಕ್ರವರ್ತಿಪದವೀಮದಾತಿವರ್ತಿ ಕಾರ್ತವೀರ್ಯ ಭುಜಸಹಸ್ರವಲ್ಲೀವನಲವಿತ್ರ, ವಿತ್ರಾಸಿತತ್ರಿದಶಬಲಬಲೀಂದ್ರ ಬಂಧನಕರ, ಕರನಖಮುಖವಿದಾರಿತಾಸುರವರೇಣ್ಯ

1 ಕೆಲರೊಳ್ ಸಮವರ್ಜನೆಂಬ ಭಾವದಿಂ (ಕಗ)

ಹಿರಣ್ಯಕಶಿಪು ವಿಪುಲವಕ್ಷೋರಂಗ, ರಂಗತ್ತರಂಗಮಕರಾಕರಬೃಹಜ್ಜಲನಿಧಿನಿಮಜ್ಜದ್ವೇದಪುಸ್ತಕಸ್ತೇನ ದರ್ದುರಮತವರ್ದೋದ್ವೃತ್ತಮತಭಂಜನ, ಜನಕ್ಷೋಭದಕ್ಷ ಹಿರಣ್ಯಾಕ್ಷವಿನಾಶ, ನಾಶವಿದೂರಿತಾಮೃತಾಶ ನಾಶಕರ ಲಂಕೇಶ್ವರ ವಿನಾಶಪ್ರಧಾನ, ದಾನವವಿಪ್ರಾಕಾರ ಕೊಟಕೈಟಭ ಕಬಂಧ ನಟನಲೀಲಾವಲೋಕ, ಲೋಕಾಶ್ಚರ್ಯಶೌರ್ಯ ಬಾಲಕೇಳೀ ಚಾಳಿತ ಕಾಳೀಯಮಹಾಪನ್ನಗ, ನಗವೈರಿವರ್ಷಿತವಾರಿಧಾರಾನಿವಾರಣೋದ್ಧಾರಿತ ಗೋವರ್ಧನಾಭೀಲ ಕುತ್ತೀಲ, ಕೀಲಾಲಸಲಿಲಪೂರೋದ್ಗಾರಿತಕುವಲಯಾಪೀಡ ಪೀಡನಾಪಾತಿತ ಪೂತನಾಪಘನ ಘನದೃಢೋರುಢೊಕ್ಕರಣಪಾತನೋನ್ಮೂಲಿತನಿಯುದ್ಧಪ್ರಸಿದ್ಧ ಚಾಣೂರಮುಷ್ಟಿಕಾಸುರ, ಸುರಸೈನ್ಯವಳಯ ಗಳಾಪಾಶ ಕೇಶಿಧೇನುಕನಿಧನೋಚ್ಛೃಂಖಲ, ಖಲಕುಲೋತ್ತಂಸಕಂಸಾಸುರ ಪ್ರಧ್ವಂಸಪ್ರವೀಣ, ವೀಣಾವೇಣುವಾದನ ಚತುರ, ಚತುರತಾಮಯ ಗೋಪೀಜನಮನೋರಮಣ, ರಮಣೀಯಪೀತವಾಸ, ವಾಸವಾರ್ಚಿತ ಚರಣಕಮಲ, ಕಮಲಾಂಗನಾವರ, ವರಕೌಸ್ತುಭಾಲಂಕೃತ, ಕೃತಜಗತ್ತ್ರಯಾನಂದ, ನಂದಗೋಪಮನಃಕುಮುದಶರಚ್ಚಂದ್ರ, ಚಂದ್ರಕಾಪೀಡ ರೂಢಗೋಪಾಲ ಶ್ರೀಭಗವದ್ವಾಸುದೇವ ನಮಸ್ತೇ ನಮಸ್ತೇ

ವ॥ ಎಂದದಿತಿದೇವಿ ಸ್ತುತಿಗೆಯ್ದು ಕಳಿಪೆ ವಿಹಂಗಪತಿಪತಾಕನಾಕಾಶದಿಂ ದ್ವಾರಾವತಿಗವತರಿಸಿದಾಗಳ್

ಚಂ॥ ಪ್ರತಿಗೃಹಕುಂಕುಮಚ್ಛಟೆಗಳಿಂ ಪ್ರತಿಮಂದಿರರಂಗವಲ್ಲಿಯಿಂ
ಪ್ರತಿನಿಲಯಪ್ರರೂಢಮಣಿತೋರಣದಿಂ ಪ್ರತಿಸದ್ಮವಾದ್ಯದಿಂ
ಪ್ರತಿಭವನೋತ್ಸವಧ್ವಜದಿನಾ ಪೊಬಿಲೊಪ್ಪಿರೆ ಸೂಸುವಂಗನಾ
ತತಿಗಳ ಸೇಸೆಯಂ ತಳೆದು ಪೊಕ್ಕನುಪೇಂದ್ರನಿಳೇಂದ್ರಗೇಹಮಂ ೫೮

ಕಂ॥ ಸುರಗಿರಿಕೂಟದೊಳಾ ಮಣಿ
ಗಿರಿಯಂ ನಿಲಿಸೆಂದು ಕಳಿಪಿ ಖಗವರನಂ ಶ್ರೀ
ವರನಿರ್ದನೊಸೆದು ಸಾಷ್ಟೋ
ತ್ತರಶತಷೋಡಶಸಹಸ್ರ ಕಾಂತಾಸಹಿತಂ ೫೯

ವ॥ ಅಂತು ಸುಖದಿನಿರ್ಪನ್ನೆಗಂ

ಮ॥ ಹರಿಗಂ ರುಕ್ಮಿಣಿಗಂ ತನೂಜನೊಗೆದಂ ಪ್ರದ್ಯುಮ್ನದೇವಂ ರತೀ
ಶ್ವರನುನ್ಮೂಲಿತಶಂಬರಂ ಸಕಲಲೋಕೋತ್ಪತ್ತಿಬೀಜಂ ಸುಧಾ
ಕರಮಿತ್ರಂ ಮಕರಾಂಕನಿಕ್ಷುಧನು ಪುಷ್ಪಾಸ್ತ್ರಂ ವಸಂತಪ್ರಿಯಂ
ವಿರಹಿವ್ರಾತಭಯಂಕರಂ ವಿಟವಿಟೀಶೃಂಗಾರಸಾರೋದಯಂ ೬೦

ವ|| ಆ ಕುಮಾರನಗ್ರಜನ್ಮನಾಗೆ ಜನಿಸಿದನೇಕಕುಮಾರಸಹಸ್ರದಿಂ ಯದುರಾಜ್ಯಪತಿಪ್ರಾಜ್ಯನಪ್ಪಿನಮೊಂದು ಸಮಯದೊಳ್

ಉ|| ಅನ್ವಿತಮಾಗೆ ತೂರ್ಯರವದಿಂ ನಭಮಟ್ಟವುಪಾಯನಕ್ಕೆ ದಿ
ಗ್ದೇವತೆ ಮೇರೆಯಾಗೆ ಕುಡುವಶ್ವಗಜಾಳಿಪದಾರ್ಥಮರ್ಥಿ ಸಾ
ರ್ಥಾವಧಿಯಾಗೆ ವಿಶ್ವವಿಭು ಕೃಷ್ಣನಿನಾದುದು ರುಕ್ಮಿಣೀಮಹಾ
ದೇವಿಗೆ ಪುಣ್ಯಕವ್ರತದ ನೋಂಪಿ ಧರಿತ್ರಿಗೆ ರಾಗಮಪ್ಪಿನಂ ೬೧

ವ|| ಆ ಮಹೋತ್ಸವದೊಳ್

ಮ|| ಕೆದಱಿರ್ದುತ್ತಮಪುಷ್ಪಮೊಕ್ಕಘುಸೃಣಂ ಚೆಲ್ಲಿರ್ದ ಕಸ್ತೂರಿ ಸೂ
ಸಿದ [1]ಪೋತಾಶ್ರಿಯಕರ್ಪುರಂ[1] ನೆಗೆದ ಧೂಪೋದ್ದಾಮಧೂಮಂ ವಧೂ
ವದನಾಂಭೋರುಹಗಂಧಮಂ ಕದಡುವುದ್ಯಚ್ಚಾಮರೌಘಾನಿಲಂ
ಮುದಮಂ ಮಾಡೆ [2]ಸರಾಜಲೋಕಸಭೆ ಚೆಲ್ವಾಗಿರ್ದುದಬ್ಜಾಕ್ಷನಾ[2] ೬೨

ವ|| ಅಂತೊಡ್ಡೋಲಗಂಗೊಟ್ಟು ರುಕ್ಮಿಣೀಮಹಾದೇವಿ ತನ್ನರ್ಧಾಸನದೊಳಿರೆ ವಿಲಾಸದಿಂದಿರ್ದ ಸಮಯದೊಳ್

ಮ||ಸ್ರ|| ಪಡಿನೋಡಲ್ ಸಂಸೆಗಂ ಬೆಳ್ಮುಗಿಲತಿಧವಳಂ ಹಂಸೆಗಂ ಬೆಳ್ಮುಗಿಲ್ಗಂ
ಮೃಡಹಾಸಂ ವಿಶ್ವಲೋಕಸ್ತುತಮತಿಧವಳಂ ಹಂಸೆಗಂ ಬೆಳ್ಮುಗಿಲ್ಗಂ
ಮೃಡಹಾಸಕ್ಕಂ ಸುಧಾ[3]ವಾರಿಧಿಯತಿಧವಳಂ[3] ಹಂಸೆಗಂ ಬೆಳ್ಮುಗಿಲ್ಗಂ
ಮೃಡಹಾಸಕ್ಕಂ ಸುಧಾವಾರ್ಧಿಗಮತಿಧವಳಂ ತಾನೆನಲ್ ಯೋಗಿ ಬಂದಂ ೬೩

ವ|| ಅಂತು ನಾರದಂ ಬರೆ ಸಂಭ್ರಮದಿನಿದಿರೆೞ್ದು

ಮ|| ಕಮಲಾಕ್ಷಂ ಮುನಿಪಂಗೆ ಮಾಡಿ ನಯದಿಂದಾತಿಥ್ಯಪೂಜಾವಿಧಾ
ನಮನುಚ್ಚಾಸನದಲ್ಲಿ ಕುಳ್ಳಿರಿಸಿ ತಾನುಂ ರುಕ್ಮಿಣೀಯುಕ್ತನಾ
ಗಿ ಮೃಗೇಂದ್ರಾಸನದಲ್ಲಿ ಕುಳ್ಳಿರಲದೊಂದಂ ಪಾರಿಜಾತಪ್ರಸೂ
ನಮನಿತ್ತಂ ಧೃತದಿವ್ಯಗಂಧಮನಪೂರ್ವಾಕಾರಮಂ ನಾರದಂ ೬೪

ವ|| ಅದಂ ಪಿಡಿದು

---

[1] ಪೋತಾಶ್ರಯಕರ್ಪುರಂ (ಕಖಗ) [2] ಸರೋಜನಾಭಸಭೆ ಚೆಲ್ವಾಗಿರ್ದುದೊಡ್ಡೋಲಗಂ (ಕಗ) [3] ವಾರ್ಧಿಯುಮತಿಧವಳಂ (ಕಖಗ)

ಚಂ॥ ಬನದೊಳಗುಳ್ಳ[1]ಪೂಗಳವೊಲಲ್ಲ[1]ವಿದಚ್ಚರಿ ಬೇಱೊಂದು ಕಂ
ಪಿನ ಕಣಿ ಬೇಱೊಂದು ಮಕರಂದದಗುಂದಲೆ ಬೇಱೊಂದು ಚೆ
ಲ್ವಿನನಿಧಿಯೆಂದು ಕೃಷ್ಣನುಮಮಾನುಷಪುಷ್ಪಮನೊಲ್ದು ನೋಡಿ ತ
ನ್ನಿನಿಯಳೆನಿಪ್ಪ ರುಕ್ಮಿಣಿಯ ವಕ್ತ್ರಮುಮಂ ದಯೆಯಿಂದೆ ನೋಡಿದಂ ೬೫

ವ॥ ಅಂತು ನೋಡಿ ನಿಜಾಗ್ರಮಹಿಷಿಗಾ ಪಾರಿಜಾತದ ಪುಷ್ಪಮಂ ದಯೆಗೆಯ್ಯೆ

ಚಂ॥ ಅಳವಡೆ ಪಾರಿಜಾತದಲರಂ ಮುಡಿಯೊಳ್ ತಳೆದಿರ್ದ ನಲ್ಲಳಾ
ಗಳಿನ ವಿಳಾಸಮಾಗಳಿನ ವಿಭ್ರಮಮಾಗಳಿನಂಗಭಾವಮಾ
ಗಳಿನ ವಿಡಂಬಮಾಗಳಿನ ದೇಸೆ ಮುರಾರಿಗನಂಗರಾಗಮಂ
ಬಳೆಯಿಸೆ ಪೆಂಡಿರೊಳ್ ಬಳೆಯಿಸಿತ್ತೆನಸುಂ ಪ್ರಣಯಪ್ರಕೋಪಮಂ ೬೬

ವ॥ ಆಗಳಾ ಪ್ರಪಂಚಮಂ ಸೌಭಾಗ್ಯನಿಧಿಯೆನಿಸಿದ ಸತ್ಯಭಾಮೆಯ ಕೆಳದಿಯೊರ್ವಳತಿವಿಸ್ಮಯಸ್ಮೇರಲೋಚನೆಯಾಗಿ ನೋಡುತ್ತಿರಲಾಕೆಯ ಮನದ ಮಾತ್ಸರ್ಯದ ಚೇಷ್ಟೆಯಂ ಕಲಹತೃಷ್ಣಕಂ ನಾರದನಱಿದು

ಕಂ॥ ಇದನೆ ತಲೆದೊಡವು ಮಾಡಿಯೆ
ಪದಪದ್ಮಕ್ಕೆಱಗಿಪಳ್ ಶಚೀವಧುನಂತಾ
ತ್ರಿದಶೇಂದ್ರನನೆನೆ ಭುವನದೊ
ಳಿದೆ ದಲ್ ಸೌಭಾಗ್ಯಕಾರಣಂ ಪೆಱತುಂಟೇ ೬೭

ಚಂ॥ ಇದು ಕೃತಕಾದ್ರಿಯುಪ್ಪುದು ಪನಾಳಿಯುಪ್ಪುದು ಪದ್ಮಷಂಡಮು
ಪ್ಪುದು ತಳಿರುಯ್ಯಲಪ್ಪುದು ಲತಾಗೃಹಮುಪ್ಪುದು ರತ್ನದೀಪವ
ಪ್ಪುದು ಮಧುಮಾಸವಪ್ಪುದು ಸಮುಜ್ವಲಚಂದ್ರಿಕೆಯುಪ್ಪುದಿಂತಿದಾ
ಗದ ತೆಱನಿಲ್ಲಿದೊಂದು ಕುಸುಮಂ ಕುಡುತಿರ್ಕುಮಭೀಷ್ಟಸಿದ್ಧಿಯಂ ೬೮

ಕಂ॥ ಪುಟ್ಟಿ ವಿಳಾಸಂ ಮುಡಿಗಳ
ವಟ್ಟಿತ್ತೀಕುಸುಮಮಿಾಕೆಯೊಳ್ ಸವತಿಯರಾರ್
[2]ಪಟ್ಟಾಂತರವೆನಲಿಂ[2] ಪೊಱ
ಮಟ್ಟುದು ಸೌಭಾಗ್ಯಜಯಯಶಂ ರುಕ್ಮಿಣಿಯಾ ೬೯

---

[1] ಪೂವುಗಳೊಳಲ್ಲ (ಕಗ) ಪೂಗಳೊಳಗೆಲ್ಲ (ಜೊಅ) [2] ಪಟ್ಟಾಂತರವೆನಲೇಂ (ಖ)

ತಲೆದೊಡವಾಯ್ತು ಮರದ್ರುಮ
ದಲರೀ ರುಕ್ಮಿಣಿಗೆ ಸತ್ಯಭಾಮೆಯ ಸೊಬಗಿಂ
ಸಲಲರಿಯದೆಂದು ಸಂತತ
ಮುಲಿಗುಂ ಸೌಭಾಗ್ಯಡಿಂಡಿಮಂ ರುಕ್ಮಿಣಿಯಾ ೨೦

ಅಬಲೆಯರೊಳ್ ಮುಯ್ಯಾಂಪಳ್
ಸೊಬಗಿಂಗಾ ಸತ್ಯಭಾಮೆ ಬೇಡಿಂ ತನಗಾ
[1]ಸೊಬಗೀಯಲರಂ[1] ಮುಡಿದಿರೆ
ಸೊಬಗೇಕಚ್ಛತ್ರಮಾಯ್ತು ಭೀಷ್ಮಕಸುತೆಯಾ ೨೧

ಬಳಿರಿಪುವಿನ್ನೀಕೆಯ ಪದ
ತಳಸಂಗದ ಸುಖಮನವಳ [2]ಮುಖಸಂಗದೊಳಂ[2]
ತಳೆಗುಮೆ ರುಕ್ಮಿಣಿಯುಂಗುಟ
ದೊಳುಳ್ಳ ಸೊಬಗುಂಟೆ ಸತ್ಯಭಾಮೆಯ ನೊಸಲೊಳ್ ೨೨

ಅಭಿಭವಮೆಯ್ದಿದ ತನಗಿಂ
ಸ್ವಭಾವಸೌಭಾಗ್ಯಪಟುಯೆ ಬೇಡಿದೊಡಂ ದು
ರ್ಲಭಮಕ್ಕುಂ ಪಡೆಗುಮೆ ಸ
ತ್ಯಭಾಮೆ ಸೌಭಾಗ್ಯಭಿಕ್ಷೆಯಂ ರುಕ್ಮಿಣಿಯೊಳ್ ೨೩

ತಡವೇಂ ಪೂಣ್ಕೆಗೆ ದಿವ್ಯಂ
ಬಿಡಿವೆಂ [3]ರುಕ್ಮಿಣಿಯೊಳಲ್ಲದಿಂ[3] ಹರಿ ಮುಱಿದುಂ
ಗಡ ಸತ್ಯಭಾಮೆಗೆಱಗಂ
[4]ಮುಡಿಗಿಕ್ಕಿದ[4]ನಾರ್ಪರೆತ್ತಿಕೊಳ್ಳಂ ಸಭೆಯೊಳ್ ೨೪

ವ|| ಎಂದು ನಾರದಂ ಪಾರಿಜಾತಪ್ರಸೂನಸಾಮರ್ಥ್ಯವರ್ಣನ ವ್ಯಾಜದಿಂ [5]ಸಪತ್ನೀವ್ಯಾಕೋಪಜನನಯತ್ನತತ್ಪರನಾಗಿ[5] ನುಡಿಯೆ ತದ್ವೃತ್ತಾಂತಮಂ ವಾರ್ತಾಪರಂಪರೆಯಿನಱಿದು

---

[1] ಸೊಬಗೆಯುರಲರಂ (ಗ) [2] ಮುಖಸಂಗದೊಳೇಂ (ಕಗ) [3] ರುಕ್ಮಿಣಿಯೊಳಲ್ಲದೇಂ (ಕಖಗ) [4] ಮುಡಿಗಿಕ್ಕಿದೆ (ಕಖಗ) [5] ಸಪತ್ನೀವ್ಯಾಜ ತತ್ಪರನಾಗಿ (ಕಗ) ಸಪತ್ನೀವ್ಯಾಜಯತ್ನ ತತ್ಪರನಾಗಿ (ಖ)

ಮ॥ ಬಗೆವಂದೀ ಸೊಬಗೀ ಮಹಾತ್ಮ್ಯಗುಚಿತಂ ಪ್ರದ್ಯುಮ್ನನಂತಪ್ಪ ಪೆ
ರ್ಮಗನಂ ಪೆತ್ತ ಮಹತ್ವದಗ್ರಮಹಿಷೀಸಂಪತ್ತಿಯಂ ತಾಳ್ದಿದೀ
ಕೆಗೆ ಲಕ್ಷ್ಮೀವನಿತಾವತಾರೆಗೆನುತಂ ಮಿಕ್ಕಂಗನಾವೃಂದವೀ
ರ್ಷ್ಯೆಗಳಂ ಮಾಣ್ದಿರೆ ಸತ್ಯಭಾಮೆ ತಳೆದಳ್ ಸೌಭಾಗ್ಯಮಾತ್ಸರ್ಯಮಂ ೭೫

ವ॥ ಅಂತತಿಪ್ರಣಯಪ್ರಕೋಪಮಂ ತಳೆದು

ಕಂ॥ ಸಾರಿಕೆಯ ಕೀರದಂಚೆಯ
ಪಾರಾವತದಿಂಚರಂಗಳಿಲ್ಲದ ಕೋಪಾ
ಗಾರಮನಾ ವಧು ಪೊಕ್ಕಳ್
ತೋರಣಮಲ್ಲಾಡೆ ನಿಮಿರ್ದ ಸುಯ್ಯೆಲರಿಂದಂ ೭೬

ಉ॥ ಪ್ರೀತಿಯನೀವ ಸೆಂದುರದ ವಸ್ತ್ರಮನೊಲ್ಲದದೊಂದು ವಸ್ತ್ರಮಂ
ಶ್ವೇತಮನುಟ್ಟಳುಟ್ಟಿರೆ ತದಂಬರದಿಂ ಪ್ರಿಯಕೋಪಚಿಹ್ನದಿಂ
ದಾ ತರಳಾಕ್ಷಿಗಾಗಳೆನಸುಂ ನಲವೋಡಿದುದಂತುಟಲ್ತೆ ಬಾ
ಲಾತಪದಿಂದಮಪ್ಪ ನಲವಬ್ಜನಿಗಪ್ಪುದೆ ಚಂದ್ರಕಾಂತಿಯಿಂ ೭೭

ಕಂ॥ ತನಗೀರ್ಷ್ಯೆಯಿಂ ಶಿರೋವೇ
ದನೆ ಜನಿಯಿಸೆ ನಿಟಿಲಪಟ್ಟದೊಳ್ ತಿರ್ಯಕ್ಟಂ
ದನತಿಲಕಾಯಿತಮಂ ಮಾ
ನಿನಿ ರುಚಿರದುಕೂಲಪಟ್ಟಮಂ ನಿಯಮಿಸಿದಳ್ ೭೮

ಕಲುಷಕಷಾಯೇಕ್ಷಣರುಚಿ
ಲಲಾಟಪಟದೊಳ್ ಪೊರಳ್ದು ಪುದಿದತ್ತೆನೆ ಕೋ
ಮಲೆ ತದ್ದುಕೂಲಪಟ್ಟದ
ಕೆಲಗೆಲದೊಳ್ ತೊಡೆದಳರುಣಚಂದನರಸಮಂ ೭೯

ವ॥ ಅಂತು ಕೋಪಚಿಹ್ನಪ್ರಸಾಧನಮೆ ತನಗೆ ಬೇಱೊಂದು ಚೆಲ್ವನವಟ್ಟಿಸೆ ಚಿಂತಾರಸತರಂಗಿತಾಂತರಂಗೆಯಾಗಿರ್ಪಿನಮಿತ್ತಂ ಪುರುಷೋತ್ತಮಂ ತನ್ನೊಳೆ ವಿಚಾರಿಸಿ

ಕಂ॥ ಕೆಳದಿ ಪರಿದೆಯ್ದೆ ಪೋದಳ್
ತಿಳಿದೀವಾರ್ತೆಯನೆ ಪೇಟ್ವಳಿದನಂತಾ ಕೋ
ಮಳೆ ಸತ್ಯಭಾಮೆ ಕೇಳ್ದಿಂ
ತಳೆಗುಂ ಪ್ರಣಯಪ್ರಕೋಪಮಂ ನಿಶ್ಚಯದಿಂ ೮೦

ವ॥ ಎಂದು ರುಕ್ಮಿಣಿಯು ಸಭಾಸ್ಥಾನದಿಂದೇನಾನುಮೊಂದು ನೆವದಿಂ ತಳರ್ದು ನಾರದನ ಸಮೀಪದೊಳ್ ಸಂಭಾಷಣಾರ್ಥಂ ಪ್ರದ್ಯುಮ್ನನಂ ನಿಲಿಸಿ ತಾಂಬೂಲಕರಂಡಕ ವಾಹಿನೀವಾಮಪ್ರಕೋಷ್ಠಾವಲಂಬಿತ ಹಸ್ತನಾಗಿ ಚರಣಕಮಲನ್ಯಸನಲೀಲೆಯಿಂ ಬಂದು ಸತ್ಯಭಾಮಾದೇವಿಯರಮನೆಯ ಬಾಗಿಲೊಳ್ ನಿಂದು ಆ ಸುಭಗರೂಪೆ ಕೋಪಾಗಾರಮಂ ಪೊಕ್ಕಿರ್ದುದಂ ಕಂಡು ತತ್ಸಮೀಪಕ್ಕೆ ಬರಲಂಜಿ ಕಂಜನಾಭಂ ರೂಪುಗರೆದು ಕೋಪ ಕುಟಿಲೆಯಾಗಿರ್ದಳಂ ನೋಟ್ಪಲ್ಲಿ

ಮ॥ಸ್ರ॥ ಪರಮಕ್ರೋಧಾಧಿದೇವಾರ್ಚನಮೆನೆ ಪರಿದೊಟ್ಟುತ್ತೆ ಲೀಲಾಬ್ಜಪತ್ರೋ
ತ್ಕರಮಂ ಚಿಂತಾಲತಾವೃದ್ಧಿಯನೊಡರಿಸಲೋರಂತೆ ನೀರ್ವೊಯ್ವ ಪಾಂಗಿಂ
ಸುರಿಯುತ್ತುಂ ಬಾಷ್ಪಧಾರಾಜಲಪರಿಕರಮಂ ಸ್ನೇಹಶಾಸ್ತ್ರಕ್ಕೆ ಟೀಕಂ
ಬರೆಯುತ್ತಿರ್ಪಂದದಿಂದುಂಗುಟದೆ ಬರೆಯುತುಂ ಭೂಮಿಯಂ ಭಾಮೆಯಿರ್ದಳ್ ೮೧

ವ॥ ಅಂತಳವಿಗಳಿದ ವೇದನೆಯನೊಳಕೊಂಡು ಸಖೀಜನದೊಳಂ ನುಡಿಯದೆ ನಿದಾಘಸಮಯಾತಪತಪ್ತಲತೆಯಂತೆ ಬಂಬಲಂಬಾಡಿರ್ದವಸರದೊಳೊರ್ವ ಪರಿಚಾರಿಕೆ ಚಂದ್ರಕಾಂತಚಷಕದೊಳ್ ತೀವಿದ ಚಂದನರಸಮಂ ನೀಡೆ

ಕಂ॥ ಸಿರಿಗಂಪನಬಲೆ ಹೃದಯದೊ
ಳೊರಸುತ್ತುಂ ನೋವನಿದುವೆ ಪಡೆದಪುದೆಂದಾ
ಸಿರಿಕಂಡದ ಶುಕ್ತಿಕೆಯಂ
ಧರಣಿಯೊಳಪ್ಪಳಿಸಿ ಕಣ್ಣನೀರಂ ಸುರಿದಳ್ ೮೨

ವ॥ ಅಂತು ಕನಲ್ದೊನಲ್ದು ಶಯ್ಯಾತಳದೊಳ್ ಮೆಯ್ಯನೀಡಾಡಿ ಮೇಲುದಿನ ಸೆಱಗಂ ಮುಖಕ್ಕೆ ತೆಗೆದು ಕಾಲ್ಗಳಂ ಸಂಕೋಚಿಸಿ ನಿಱಿಯೊಳಡಂಗಿಸಿ ಪವಡಿಸಿರ್ಪುದುಂ ಪೊರ್ದಲವಸರಂಬಡೆದು

ಕಂ॥ ಬಂದು ಮೃದುಯಾನದಿಂದಾಂ
ಬಂದುದನೀದೇವಿಗಱಪಬೇಡೆಂದು ಸಖೀ
ವೃಂದಕ್ಕೆ ಪೇಟ್ದು ಸಂಜ್ಞೆಯಿ
ನಂದು ಮನೋರಮೆಯ ಕೋಪಗೃಹಮಂ ಪೊಕ್ಕಂ ೮೩

ವ॥ ಅಲ್ಲಿ ಮೆಲ್ಲಡಿಸಜ್ಜೆಯಿಂ ಸೊಪ್ಪುಳಾಗದಂತು ನಡೆತಂದು ತನ್ಮನೋಹರಿಯ ಪಿಂತೆ ಕುಳ್ಳಿರ್ದು ಬಿಜ್ಜಣಿಗೆಯಂ ಕಳೆದುಕೊಂಡು ಪಂಕರುಹನಾಭಂ ಕಿಂಕರಭಾವದಿನೊಯ್ಯನೊಯ್ಯನೆ ಬೀಸುತ್ತುಮಿರೆ ವಾಸವ ತರುಪ್ರಸೂನಾವಾಸಿತವಾದ ವಾಸವಾನುಜಕರ ಕಮಲ[1]ಗಂಧಮಂಡಲೆದು ನಿದ್ರೆಯುಮನೆಟ್ಟಿಱಿಸೆ[1] ನಲ್ಲಳೆಟ್ದು

[1] ಗಂಧಮಂಡಲೆಯೆ ನಿದ್ರೆಯಿಂದೆಜ್ಜತ್ತು (ಕಗ)

ಕಂ॥ ವನಪುಷ್ಪ[1]ಗಂಧವಲ್ತ
ಲ್ತನುಪಮ[1]ಮಿಾಗಂಧವೆಂದು ಮುರಿದೀಕ್ಷಿಸಿ ಕೃ
ಷ್ಣನ ಮೇಲೆ ಕೋಪದಿಂ ಲೋ
ಚನಾಂಬುಗಳ್ ಸೂಸೆ ಸೂಸಿದಳ್ ಕೇಕರಮಂ ೮೪

ಪ್ರಿಯೆ [2]ಮುನಿದೀಕ್ಷಿಪುದುಂ[2] ಭೀ
ತಿಯಿನಾಕೆಯ ಪಿಂತೆ ಪೊಕ್ಕಡಂಗುವ ನಿಜಚೇ
ಷ್ಟೆಯಿನಿರ್ಮಡಿಸಿದನಂತಾ
ಪ್ರಿಯೆಯ ಮಹಾಪ್ರಣಯಕೋಪಮಂ ಕಮಳಾಕ್ಷಂ ೮೫

ಕೋಪೋನ್ಮೀಲಿತದೃಷ್ಟಿಯಿ
ನಾ ಪಂಕಜಪತ್ರನೇತ್ರೆ ಮುರಿದೀಕ್ಷಿಸುತಿ
ರ್ದಾಪಾಂಗು ಪಡೆದುದೆನಸುಂ
ಶ್ರೀಪುರುಷೋತ್ತಮನೊಳತನುರಾಗೋದಯಮಂ ೮೬

ವ॥ ಸಮಸಂದೊಲ್ಮೆಗೆ ಮುಂ ಪ್ರಸನ್ನವತಿಯಾಗಿರ್ದಂದಿನಾ ರೂಪವಿ
ಭ್ರಮಮಮಾ ಸಾಧ್ವಸಭಾವಮಾ ರತಿಕಳಾಚಾತುರ್ಯಮಾ ವಾಕ್ಯವ
ಕ್ರಿಮಮಾ ಹಾಸ[3]ವಿಳಾಸವನ್ನೆಗಮದಿಂ[3] ಮಾಣ್ದಿರ್ಕೆ [4]ಕೃಷ್ಣಂಗದೊಂ
ದು[4] ಮುದಂಬೆತ್ತುದು ಸತ್ಯಭಾಮೆಯ ಮಹಾಕ್ಷೇಪಾಕ್ಷಿವಿಕ್ಷೇಪಣಂ ೮೭

ವ॥ ಆಗಳ್ ನಿಜಾಪರಾಧ್‌ಭೀತಿಯಂ ರಾಗರಸಂ ಕರ್ಚಿಕಳೆಯೆ[5] ಕಮಲಲೋಚನನಾ ಚಪಲಲೋಚನೆಯಂ ನೋಡಿ

ಕಂ॥ ಪಾರಾವತವುಲಿಯದ ಶುಕ
ಶಾರಿಕೆಗಳ್ ಮಧುರವಿರುತಿವೀಱದ ಕೋಪಾ
ಗಾರಮನೊರ್ವೆಯೆ ಪೊಕ್ಕೀ
ಕಾರಣವೇನೆನಗೆ ತಿಳಿಯೆ ಪೇೞೆಂದುಮುಖೀ ೮೮

ಸಿಂದೂರವಸನಮಂ ಕಳೆ
ದೊಂದು ಸಿತಾಂಬರಮನುಟ್ಟು ನಿರ್ಮಳನಿರ್ಮೋ
ಕಂದಳದ ನಾಗಕನ್ಯಕೆ
ಯಂದಮನಭಿನಯಿಸಿದಂದಮೇಂ ಲಲಿತಾಂಗೀ ೮೯

---

1 ಗಂಧವಲ್ತತ್ಯನುಪಮ (ಕಗ) 2 ಮುರಿದೀಕ್ಷಿಪುದುಂ (ಕಗ) 3 ವಿಳಾಸದಿಂ ನೆಗಟ್ದುದಿಂ (ಖ) 4 ಕೃಷ್ಣಂಗದೊರ್ಮೆ (ಖ) 5 ಭೀತಿಯಿಂ ರಾಗರಸಂ ಪೆರ್ಚಿ ಕಳೆಯೆ (ಕ) ಭೀತಿಯಿಂ ರಾಗರಸಂ ಪೆರ್ಚಿ ಕಳೆಯೇಱಿ (ಗ)

ತರುಣಿ ಕಳಂಕಮನಂತಃ
ಕರಣದೊಳಾಂತಮಳವೃತ್ತಿಯಂ ಕೂಡೆ ಬಹಿ
ಷ್ಕರಿಪಂತೆ ಮಹಾರಜನಾಂ
ಬರಮಂ ಕಳೆದೇಕೆ ಧವಳಪಟಮಂ ಪೊದೆದೌ ೯೦

ಹೃದಯದ ತಾಪದಿನುರ್ಕುವ
ವದನದ ಲಾವಣ್ಯರಸದ ನೊರೆಯೆನೆ ನೊಸಲ
ಲ್ಲಿ ದುಕೂಲಪಟ್ಟಮಂ ಕ
ಟ್ಟಿದಭಿಪ್ರಾಯಮನಮೋಘಮಱಿಪುವುದಬಲೇ ೯೧

ಅಲೆವ ನಿಡುಸುಯ್ಗಳಿಂ ಮುಖ
ನಲಿನರಜಸ್ಸಂಕುಳಂ ತೆರಳ್ದೊಬ್ಬುಳಿಯಿಂ
ಕೆಲಸಾರ್ದಂತಿರಲೇಕೆಗೆ
ಲಲಾಟದೊಳ್ ತೊಡೆದೆ ರಕ್ತಚಂದನರಸಮಂ ೯೨

ವ॥ ಎಂದರವಿಂದಲೋಚನಂ ನುಡಿಯೆ

ಕಂ॥ ನೀನಱಿದುಮಱಿಯದಂತಿರ
ದೇನೆಂದಪೆ ಕೃಷ್ಣ ನಿನ್ನ ಮಾಯೆಯನಂತಾ
ದಾನವರ್ಗೆ ಮೆಱೆವುದಲ್ಲದೆ
ಮಾನಿನಿಗೆನಗಿಂತು ಮೆಱೆದು ಕೊಱಚಾಡುವುದೇ ೯೩

ವ॥ ಎಂದು

ಕಂ॥ ಕಾಂತೆ ಮನಃಖೇದದಿನೋ
ರಂತುಗೆ ಕಣ್ಬನಿಯನಂತವಂ ಕುಡಿತೆಗಳಿಂ
ದಾಂತು [1]ಸುಖಮೂರ್ತಿ[1] ತನ್ನುರ
ಮಂ [2]ತೊಡೆದಂತೊಂದು[2] ಸುಖಮನಾಂತಂ ಕೃಷ್ಣಂ ೯೪

ವ॥ ಅದಂ ಕಂಡು

[1] ಶುಭಮೂರ್ತಿ (ಬ) [2] ತೊಡೆವುದೊಂದು (ಗ)

ಕಂ॥ ಉಪಚಾರದಿಂದಮೇನಂ
ದಪುದೆನಗೀಕೃತಕವೃತ್ತಿಯಿಂ ನಚ್ಚುವರಾ
ರುಪಚಾರ[1]ಕುಪಿತೆಗೆನಗಿ[1]
ನ್ನುಪಚಾರಂ ವ್ಯಥೆಯನೀಗುಮೀಗುಮೆ ಸುಖಮಂ ೯೫

ಪೂತನೆಯಂ ಕೊಂದಾ ಸ್ತ್ರೀ
ಘಾತುಕ[2]ವೃತ್ತಿಯುಮನೆನ್ನೊಳೇಂ[2] ತೋಱಿದಪ್ಪೈ
ಪೂತನೆಯ ತೆಱದೆ ನಿನಗಾ
ನೇತಱ ಪೊಲ್ಲಮೆಯನರಸ ಬಗೆದೆಂ ಬಗೆಯೊಳ್ ೯೬

ಮಾನನಿಧಿಯೆಂದು ಮನ್ನಿಪೆ
ನೀನೆನ್ನಂ ಮುನ್ನಮಾದುದಿಂದಪಮಾನಂ
ಮಾನಿನಿಗೆ ಮಾನಭಂಗಂ
ತಾನಿದು ಮರಣಕ್ಕಮಧಿಕಮೆಂಬುದನಱಿಯಾ ೯೭

ವ॥ ಎಂದು ನುಡಿದ ನಲ್ಲಳ ನುಡಿಗಳಂ ಕೇಳ್ದು

ಕಂ॥ ಪಂಕರುಹವದನೆ ಮನದಾ
ಶಂಕೆಯಿದೇಂ ಸ್ನೇಹಮೆಂಬುದೆರಡಿಲ್ಲೆನ್ನೊಳ್
ನೀಂ ಕೇಳ ಸತ್ಯಭಾಮೆಯ
ಕಿಂಕರನೀ ಕೃಷ್ಣನೆಂಬ ಲೋಕದ ನುಡಿಯಂ ೯೮

ನಿನ್ನೊಲವನರ್ಘ್ಯಮದಱಿಂ
ದೆನ್ನ ಸುಖಂ ನೆಗೞ್ದುದದಱಿನಾತ್ಮಸುಖಾರ್ಥಂ
[3]ನಿನ್ನನೆ ಮನ್ನಿಸುವೇ ನಾಂ[3]
ನಿನ್ನಿಂ ಪ್ರಿಯವಸ್ತುವೆನಗೆ ಪೆಱತೊಂದುಂಟೇ ೯೯

ವ॥ ಎಂದು ವನಜಲೋಚನಂ ತನ್ನ ಮನದೊಲವಂ ತೋಱಿ ನುಡಿಯೆಯುಮಾ ನುಡಿಗಳ್ಗೆ ಕಿಡಿಕಿಡಿಯಾಗಿ

ಕಂ॥ ಕ್ರಿಯಮಪ್ಪ ವಸ್ತುವಂ ನೀಂ
ದಯೆಯಿಂ ಕುಡೆ ಪಡೆದಳಾವಳಾಕೆಯೆ ದಿಟದಿಂ
ಪ್ರಿಯೆ ನಿನಗಾಂ ವಾಙ್ಮಾತ್ರ
ಪ್ರಿಯೆಯಿನ್ನೀನೆನಗಿದೇಕೆ ಚದುರಂ ಮೆಱೆವೈ ೧೦೦

1 ಕುಪಿತೆಯಾಂ ನಿ (ಕ) ಕುಪಿತೆಯಾಗಿ (ಗ) 2 ವೃತ್ತಿಯನದೆನ್ನೊಳಂ (ಕಗ) 3 ನಿನ್ನಂ ಮನ್ನಿಸುವವನೆಂ (ಕಗ)

ಮ॥ ನೆವದಿಂ ಸೋಂಕುವ ನೋಲ್ಪುದೋಱುವ ಛಲಚ್ಚಾತುರ್ಯದಿಂದೆನ್ನೊಳಾ
ನವಲಜ್ಜಾಸತಿ ಪಿಂಗೆ ಪಿಂಗಿದುದು ಕನ್ಯಾಭಾವಮೆಂದಂದಿನಿಂ
ದುವರಂ ನೀಂ ದಯೆಗೆಯ್ಯೆ ದೇವ ಸಲೆ ಸಂದತ್ತೆನ್ನ ಸೌಭಾಗ್ಯಗ
ರ್ವವದಿಂದನ್ಯೆಯೊಳಾಗೆ ಸ್ವೈರಿಸುವೆನೆಂತಾಂ ಕಂಸವಿಧ್ವಂಸಕಾ ೧೦೧

ಕಂ॥ ನೀನವಮಾನಿಸಿತಲ್ಲದೆ
ತಾನಾ ರುಕ್ಮಿಣಿಯ ಮುಂದೆ ನಾರದನೆನ್ನಂ
ನಾನಾವಿಧದಿಂ ಪಱಿದನ
ದೇನುಚಿತಮೊ ಮುನಿಗದೇಕೆ ರಾಗದ್ವೇಷಂ ೧೦೨

ಮ॥ ನೆರೆದಾಸ್ಥಾನದೊಳಿರ್ದ ರುಕ್ಮಿಣಿಯ ಮುಂದೆನ್ನೊಂದು ಸೌಭಾಗ್ಯಮಂ
ಪರಿಹಾಸಂಗೆಯುತಿರ್ಪ ನಾರದನ ಮಾತಂ ಪ್ರೀತಿಯಿಂ ಕೇಳ್ದಳಾ
ವರ ನೀಂ ಸೋಪಡಿಯುಂತಿರೀಗ ನುಡಿವರ್ ಮಿಥ್ಯೋಕ್ತಿಯಂ ಕೂರ್ಪನ
ಲ್ಲರದೇಂ ಪೆಂಡಿರನಲ್ಲಿ ಲೋಗರಪಹಾಸ್ಯಂಗೆಯ್ವುದಂ ಕೇಳ್ವರೇ ೧೦೩

ಕಂ॥ ಪರಿಭವಮಂ[1]ಕಾಣದಳೆಂ[1]
ಪರಿಭವಮಂ ಕಂಡೆನೀ ಶರೀರದೊಳಸು ತಾ
ನಿರೆಯುಂ ದ್ವಿತೀಯಜನ್ಮಂ
ದೊರೆಕೊಂಡುದು ಪುಣ್ಯಹೀನೆಗೆನಗಿದು ಪಿರಿದೇ ೧೦೪

ಅಱಿಯೆಂ ಮುಗ್ಧೆಯೆನಾನೆಡ
ವಱಿಯದು ನಿನ್ನೊಲ್ಮೆಯೆಂದು ನಚ್ಚುವೆನಿದನಿಂ
ದಱಿದೆಂ ಪ್ರಿಯ ನಿನ್ನಯ ಮನ
ದೆಱಕಂ ಸ್ಥಿರಮಲ್ಲಮೆಂಬುದಂ ಕಮಲಾಕ್ಷಾ ೧೦೫

ಮ॥ಸ್ರ॥ ಪ್ರಿಯೆ ಸತ್ಯಂ ಸತ್ಯಭಾಮಾಸತಿ ಸತಿಯರೊಳೀಯಚ್ಯುತಂಗೆಂದು ನಿಚ್ಚಂ
ಪ್ರಿಯದಿಂದಂ ನೋಡುವರ್ ಮನ್ನಿಸಿ ನಡೆಸುವರೆಮ್ಮತ್ತೆವಿರ್ ದೇವಕೀದೇ
ವಿಯರಿನ್ನುಂ [2]ನಾಡೆ[2] ಕೊಂಡಾಡುವುದು ಪರಿಜನಂ ಧಾತ್ರಿ ಕೈಕೊಳ್ವುದಿಂದ
ಪ್ರಿಯೆಯಾಗಿರ್ದೆನ್ನನಿನ್ನಾರ್ ಬಗೆದಪರೆನಗಿನ್ನೇಕೆ ಸಂಸಾರಬಂಧಂ ೧೦೬

ಚಂ॥ ವನಜಲಕೇಳಿ [3]ಮುಖ್ಯಜನ[3]ಕೇಳಿಯೊಳಗ್ಗದ ನಿನ್ನ ರುಕ್ಮಿಣೀ
ವನಿತೆ ಸುವರ್ಣಪೀಠಗತೆಯಾಗಿರೆ ನಿನ್ನೆಸೆವಂಕಪೀಠದೊಳ್
ಮನಮೊಸೆದಿರ್ದ ನೋಟ್ಪವಳೆ ನಿನ್ನಪಮಾನದೆ ಪಿಂಗಿ ನೋಡಲಾ
ರ್ಪೆನೆ ನಿಲಲಾರ್ಪೆನುಗ್ರತಪದೊಳ್ ಬಿಡಲಾರ್ಪೆನಧೀಶ ಜೀವಮಂ ೧೦೭

---

1 ಕಾಣದವಾಂ (ಖ) 2 ಕೊಂಡು (ಮೂಅ) 3 ಮುಖ್ಯ ನಿಜ (ಕಖಗ)

ಅಭಿನವವಸ್ತುವಂ ಪ್ರಿಯೆಗೆ ರುಕ್ಮಿಣಿಗಿತ್ತು ವೃಥೋಕ್ತಿಯಿಂದೆಲೇ
ವಿಭು ತಿಳಿಪಲ್ಕೆ ಬೇಡ ಪೆಱಿಸಾಱೆನಗೀ[1]ಭವನಿಂತು[1] ಪೋದುದೀ
ಯಭಿಭವದಿಂದಮಿನ್ನೆನಗೆ ಬಾಳ್ಕೆಯೆ ಪೇೞಿ ಭವಾಂತರಕ್ಕೆ ವ
ಲ್ಲಭೆ [2]ನಿನಗಪ್ಪೆನಕ್ಕೆನಗೆ[2] ನೀಂ ದಯೆಗೆಯ್ಯ ತಪಕ್ಕನುಜ್ಞೆಯಂ ೧೦೮

ವ॥ ಎಂದು ನುಡಿದು ಬಾಷ್ಪಜಲವಿಲುಳಿತಲೋಚನೆಯುಮುಷ್ಣಶ್ವಾಸಪವನ ಶೋಷಿತ ಪಲ್ಲವಾಧರೆಯುಮತಿಶಯಸ್ವಾಂತಖೇದಸಂತಪ್ತ ಗಾತ್ರೆಯುಮಾಗಿರ್ದ ಸತ್ರಾಜಿತೀದೇವಿಯಂ ದೇವಕೀನಂದನಂ ಕಾರುಣ್ಯದೃಷ್ಟಿಯಿಂ ನಿರೀಕ್ಷಿಸಿ

ಮ॥ ರಮಣೀ ನೀಂ ಮುನಿದಂದಮಂ ತಿಳಿದೆನೀಗಳ್ ಪಾರಿಜಾತ ಪ್ರಸೂ
ನಮನಾ ರುಕ್ಮಿಣಿಗಿತ್ತೆ[3]ನೆಂಬುದೊಲವಂತಾ[3] ಪುಷ್ಪಮೊಂದೇನಪೂ
ರ್ವಮೆ ದೇವೇಂದ್ರನ ನಂದನಕ್ಕೆ ಪರಿಯಿಟ್ಟಾನಾವಗಂ ಪಾರಿಜಾ
ತನುಹೀಜಾತಮನೀಟ್ಟು ತಂದು ನಿನಗೀವೆಂ ಕೇಳ್ ಪ್ರತಿಜ್ಞೋಕ್ತಿಯಂ ೧೦೯

ಮ॥ಸ್ರ॥ ಎನೆ ಕೇಳ್ದಾ ಸತ್ಯಭಾಮಾಸತಿ ತೊಲಗಿಸಿ ಹೃತ್ಕೋಪಮಂ ಸುಪ್ರಸನ್ನಾ
ನನೆಯಾಗಿರ್ದಲ್ಲಿ ತುಳ್ಕಾಡುವ ನಗೆ ನೆಗೞುತ್ತಿರ್ಪ ರಾಗಂ ಪುದುಂಗೊ
ಳ್ವ ನಯಂ ಕೈಕೊಳ್ವ ಬಿಂಕಂ ಪಸರಿಸುವ ಬೆಡಂಗಪ್ಪುಕೆಯ್ವೊಂದು ಕೆಯ್ತಂ
ತನಗಂತೊಂದಟ್ಕಿಱಿಂ ಪುಟ್ಟಿಸುವಿನವೆಸೆದಂ ಶ್ರೀಜಗನ್ನಾಥದೇವಂ ೧೧೦

ಇದು ಸಮಸ್ತ ಕಮಲಭವಾಂಡಮಾಲಾಘಟೀಘಟಿತಾರಘಟ್ಟಘಟನಾಸ್ವತಂತ್ರ
ನಿಜಸ್ವರೂಪ ನಿರೂಪಣಚಕಿತ ಸಕಲಾಮ್ನಾಯತಂತ್ರ ಲಕ್ಷ್ಮೀಕಾಂತ
ಶ್ರೀಪಾದಭಕ್ತಿಯುಕ್ತ ಸುಕವೀಂದ್ರರುದ್ರಪ್ರಣೀತ ಶ್ರೀಜಗನ್ನಾಥವಿಜಯ
ಮಹಾಪ್ರಬಂಧದೊಳ್ ನರಕಾಸುರವಧ ಷೋಡಶಸಹಸ್ರದಿವ್ಯ
ಕಾಂತಾಸ್ವೀಕರಣ ವಿಬುಧಜನನೀಕುಂಡಲಪ್ರದಾನ
ರುಕ್ಮಿಣೀಪುಣ್ಯಕವ್ರತ ಪ್ರದ್ಯುಮ್ನಾದಿ ಸಹಸ್ರ
ಕುಮಾರೋತ್ಪತ್ತಿ ನಾರದದತ್ತ ಪಾರಿಜಾತ
ಪುಷ್ಪನಿಮಿತ್ತ ಸತ್ಯಭಾಮಾ
ಪ್ರಣಯಕಲಹವರ್ಣನಂ
ದ್ವಾದಶಾಶ್ವಾಸಂ

---

1 ಭವವಿಂತೆ (ಕಗ) 2 ನಿನಗಪ್ಪೆನಕ್ಕೆಮಗೆ (ಕಗ) 3 ನಿಂದೆ ಒಲವಿಂದಾ (ಕಗ) ನೆಂದೆ ಒಲವಿಂದಾ (ಮೊಅ)

ತ್ರಯೋದಶಾಶ್ವಾಸಂ

ಕಂ॥ ಶ್ರೀರಮಣನಿಂತು ತಿಳಿಪಿ ಮ
ನೋರಮೆಯಂ ಸತ್ಯಭಾಮೆಯಂ ತತ್ಕೋಪಾ
ಗಾರದೆ ತಳರ್ದು ವಿನೋದಾ
ಗಾರಮನಾ ರಮಣಿವೆರಸು ಮುದದಿಂ ಪೊಕ್ಕಂ ೧

ವ॥ ಆಗಳಾ ವಿನೋದನಿಳಯದಿಂ ನೈಪಥ್ಯಸದನಕ್ಕೆ ಪಸದನಂಗೆಯ್ಯಲೆಂದು [1]ಸತ್ಯಭಾಮೆ ಪೋಗೆ[1] ಪಂಕರುಹನಾಭಂ

ಮ॥ ಮುನಿದಿರ್ದೋಪಳ ಕೆಯ್ತವಂ ತಿಳಿಪಿದೀವೃತ್ತಾಂತಮಂ ಬ್ರಹ್ಮಪು
ತ್ರನನಾಮಂತ್ರಿಸಿ ಪೇೞ್ವೆನೆಂಬ ಪದದೊಳ್ ಚಿತ್ತಜ್ಞನಾ ನಾರದಂ
ಮುನಿಪಂ ಬಂದು ವಿಶಿಷ್ಟವಿಷ್ಟರದೊಳಿಂಬಿಂ ಕುಳ್ಳಿರಲ್ಕಂಜಿವಾ
ಸನಸಷ್ಟಂಭಿಸಿ ತಾಂ ಪ್ರಿಯಾಗಮನಮಂ ಪಾರುತ್ತುಮಿರ್ಪನ್ನೆಗಂ ೨

ಮ॥ಸ್ರ॥ ಕುಡುವುರ್ವಿಂ ಕರ್ಬುವಿಲ್ಲಂ ಪರಪುವ ಕಡೆಗಣ್ಣಿಂ ಮನೋಜಾಸ್ತ್ರಮಂ ಸಾ
ಲಿಡುವುದ್ಯನ್ಮೇಖಲಾಕೂಜಿತದಿನತನುಕೋದಂಡಟಂಕಾರಮಂ ಕ
ನ್ನಡಿಪಂಘ್ರಿನ್ಯಾಸದಿಂ ತಾವರೆಗೆಡಱುವ ಮಂದಸ್ಮಿತೋದ್ಯೋತದಿಂದಿಂ
ಗಡಲಂ ಬೇಱೂಂದನುತ್ಪಾದಿಸುವ ತೆಱದಿನಾನಂದದಿಂ ದೇವಿ ಬಂದಳ್ ೩

ವ॥ ಅಂತು ಕೈಗೆಯ್ದು ಬರುತ್ತುಂ ಪುರುಷೋತ್ತಮನ ಕೆಲದೊಳಿರ್ದ ನಾರದನಂ ಕಂಡು

ಚಂ॥ ಮುನಿಯಿಸುವೆಂ ಸಪತ್ನಿಯರನೆಂದಮರದ್ರುಮದೊಂದುಪುಷ್ಪಮಂ
ಮುನಿ [2]ಪರಿಗಿತ್ತನಂತದುವೆ[2] ರುಕ್ಮಿಣಿಗಾಗಿರೆ ಮನ್ಯುಯುಕ್ತೆಯಾ
ದೆನಗೆ ಮುರಾರಿ ತತ್ಕುಜಮನಾವಗಮಿತ್ತಪನೆಂದು ಪೂಣ್ದ ಸಂ
ತೆನಗೆ ಮನೋರಥಂ ಸಮನಿಪಲ್ಲಿಗೆ ನಾರದನಲ್ತೆ ಕಾರಣಂ ೪

---

1 ಸತ್ಯಭಾಮೆಯುಂ ಕಳಿಪಿ (ಖ) 2 ಪರಿಗಿತ್ತೊಂದಂತದುವೆ (ಕಗ)

ವ॥ ಎಂಬ ಮನದುಕ್ತಿಯಿಂ ನಿರತಿಶಯಭಕ್ತಿ ನೆಗೞ್ತೆ ಪೊಡೆವಟ್ಟು ಮುನಿಯು ಪರಕೆಯುಂ ಕೈಕೊಂಡು. ಪಂಕರುಹಾಕ್ಷನಂಕಮಂ ಸೋಂಕಿ ತತ್ಪರ್ಯಂಕದೊಳ್ ಕುಳ್ಳಿರ್ದುಂ ಮುನೀಂದ್ರನುಪೇಂದ್ರನ ಮುಖಾರವಿಂದಮಂ ನೋಡಿ

ಮ॥ ಪ್ರತಿಮಾಸಂ ಹರಪೂಜೆಯಂ ದಿವಿಜರಾಜಂ ಮಾಳ್ಪನಾ ಪೂಜೆಯಂ
ಶಿತಿಕಂಠಂ ಮನವೊಲ್ದು ಕೈಕೊಳುತುಮಿರ್ಪಂ [1]ತನ್ಮಹೋತ್ಸಾಹಮಿಂ
ದೆ[1] ತದುತ್ಸಾಹಮನೀಕ್ಷಿಸಲ್ಕೆ ನಿಮಗೆ ನೀಮುಂ ಬರ್ಪುದೆಂದಾ ಶಚೀ
ಪತಿ ಕೊಟ್ಟೊಂದು ನಿಮಂತ್ರಣಪ್ರಸವಮಿಂದಾಂ ತಂದ ಪುಷ್ಪಂ ವಿಭೂ ೫

ವ॥ ಅದುಕಾರಣದಿನಿಂದಿನಿರುಳೊಳಾ ಮಹೇಶ್ವರಪೂಜಾಮಹೋತ್ಸವಮಂ ನೋಡಲ್ವೇೞ್ಕುಮೆಂದು ಪೋಗಿಪಂದಪೆನೆನಗನುಜ್ಞೆಯಂ [2]ಕುಡಿಮೆಂಬ ನೆಪದೆ ಮಾತುದೆಗೆಯೆ[2] ಪೀತಾಂಬರಧರಂ ಕೇಳಲೆ ಮುನೀಂದ್ರ ನೀವಿಂದೆಮಗೆ ತಂದುಕೊಟ್ಟಾಮಂತ್ರಣ ಪಾರಿಜಾತಕುಸುಮಮಂ ರುಕ್ಮಿಣೀದೇವಿಗಿತ್ತೊಡಾದೇವಿ ತತ್ಕುಸುಮಮಂ ಶಿರಶ್ಶೇಖರಮಂ ಮಾಡಿರ್ದ ಸಮಯದೊಳೆ ನೀವೇನೆಂದು ನುಡಿದಿರ್, ಆ ಮಾತುಗಳೊಳಗಾಗಿ ತತ್ಪ್ರಪಂಚಮಂ ನಿಜಪ್ರಿಯಸಖಿಯ ಪೇೞ್ಕೆಯಿಂ ಕೇಳ್ದೀ ಸತ್ಯಭಾಮೆ ನಿಕಾಮ ಪ್ರಣಯಕುಪಿತೆಯಾಗಿರ್ಪುದನಱಿದು ಬಂದೀ ದೇವಿಯುಂ ತಿಳಿಪಿದೆನೆಂದಾ ವೃತ್ತಾಂತಮಂ ಪೇೞ್ವ ಬಗೆಯಂ ತಂದು

ಚಂ॥ ಪುಸಿಡಿಸಿ ನಲ್ಲಳಿರ್ದಿರವನಾ ಸತಿ ಕೋಪಗೃಹಕ್ಕೆವಂದು ಸಂ
ದುರದ ಸುವಸ್ತ್ರಮಂ ಕಳೆದು ಪಾಂಡುರವಸ್ತ್ರಮನುಟ್ಟುದಂ ತದಂ
ಬುರುಹದಳಾಯತೇಕ್ಷಣೆ ದುಕೂಲದ ಪಟ್ಟಮನಾತ್ಮಭಾಳದೊಳ್
ಧರಿಯಿಸಿ ರಕ್ತಚಂದನಮನಿರ್ಕೆಲದೊಳ್ ತೊಡೆದಿರ್ದ ಕೆಯ್ತಮಂ ೬

ಕೆಳದಿಯರಟ್ಟಿಱಿಂ ನುಡಿಸೆ ಮೌನದೊಳಿರ್ಪುದನಂಗತಾಪದಿಂ
ಮಳಯಜಪಂಕಮಂ ಹೃದಯದೊಳ್ [3]ತೊಡೆಯುತ್ತಿರೆ ನೋಡಿ ನೋವದ[3]
ಗ್ಗಳಿಸಿದುದೆಂದು ಚಂದನದ ಶುಕ್ತಿಕೆಯಂ ನೆಲದಲ್ಲಿ ಧೊಪ್ಪನ
ಪ್ಪಳಿಸಿದುದಂ [4]ವಿನೋದದ[4] ಕರಾಂಬುಜಮಂ ಪಱಿದೊಟ್ಟುತಿರ್ಪುದಂ ೭

ಕಂ॥ [5]ಆನಪರಾಧಿಯುಮಾಗಿ[5]
ರ್ಪೆನೆಂದೀ ಪ್ರಿಯೆಯ ಪೊರೆಗೆ ಪೋದಪೆನೆನುತಂ
ನಾನಾವಿಧ[6]ದುಬ್ಬೆಗದಿಂ
ತಾನಿನಿಸಂಜಿರ್ದು ದೂರದಿಂ ನೋಡಿದುದಂ[6] ೮

---

1 ತನ್ಮಹೋತ್ಸಾಹದಿಂದೆ (ಖ) 2 ಕುಡುವುದೆನಲದೇಮಾತಂತೆಗೆಯ್ವುದೆಂದು (ಖ) ತೊಡೆಯುತ್ತಿರೆ ನೋವದಾಗಳ (ಕಗ) 4 ವಿನೋದದೆ (ಕಖಗ) 5 ಆನಪರಾಧಿಯೆನಾಗಿ (ಕಗ) 6 ಉಬ್ಬೆಗಮಂ ತಾನಿನಿಸಂ ಬಿರ್ದು ದೂರದಿಂದೀಕ್ಷಿಪುದುಂ (ಕಗ)

ಚಂ॥ ಯುವತಿ [1]ದುಕೂಲದಂಚಲಮನಾನನದೊಳ್[1] ಮಱೆಸಗಾಡಿ ಪಾಸಿನೊಳ್
ಸವಡಿಸಿದಂದಮಂ ಮುದದೆ ತಾನದನೀಕ್ಷಿಸಿ ಪೊರ್ದಲಿಂತಿದೊಂ
ದವಸರಮೆಂದು ಮೆಲ್ಲನಿನಿಸಂ ನಡೆತಂದು ಸಖೀಜನಕ್ಕೆ ಬಿ
ನ್ನವಿಸದಿ[2]ರಸ್ಮದಾಗಮಮನೀಕೆಗೆನುತ್ತುಮೆ[2] ಸನ್ನೆಗೆಯ್ದುದಂ ೯

ಕಂ॥ ಬಳಿಕನುಡಿವಜ್ಜೆಯಿಂ ಸೊ
ಪ್ಪುಳಾಗದಂತೊಯ್ಯನೊಯ್ಯನೆಟ್ಟಿಂದಾ ಕೋ
ಮಳೆಯ ನಿಜಕೋಪಮಂದಿರ
ದೊಳಪೊಕ್ಕಾ ಪ್ರಿಯೆಯ ಪಿಂದೆ ತನ್ನಿರ್ದಿರವಂ ೧೦

ಚಂ॥ ಮುದದಿನದೊಂದು [3]ಬಿಜ್ಜಣಿಗೆಯಂ[3] ಪ್ರಿಯೆಗೊಯ್ಯನೆ ತಾನೆ ಬೀಸುತಿ
ರ್ದುದನಮರದ್ರುಮಪ್ರಸವಸಂಗದೆ ವಾಸಿತಮಾದ ತನ್ನ ಹ
ಸ್ತದ ನವಗಂಧಮುಂಡಲೆಯೆ ಮಾನಿನಿ ನಿದ್ರೆಯಿನೆಟ್ಟಿದೊಂದು ತೀ
ಡಿದಪುದಪೂರ್ವಗಂಧಮೆನುತುಂ ತರಳೀಕೃತನೇತ್ರೆಯಾದುದಂ ೧೧

ಕಂ॥ ಇನಿಯಳ್ ಮುರಿದೀಕ್ಷಿಸಿ ಭೋಂ
ಕನೆ ತನ್ನಂ ಕಂಡುದಂ ಭಯಂ ಮಿಗೆ ತಾನಾ
ಘನಕುಚೆಯ ಪಿಂದಡಂಗಿದ
ಬಿನದದೆ [4]ತತ್ಸತಿಗೆ ಕೋಪಮಂ ಪೆರ್ಚಿಸಿತಂ[4] ೧೨

ಮುನಿಸಿಂದುನ್ಮೀಲಿತಲೋ
ಚನೆ [5]ನೋಟ್ಟುದುಮಾಕೆ[5] ನೋಟ್ಟಪಾಂಗದ ಪಾಂಗಿಂ
ತನಗಗ್ಗಳಿಸಿದ ರಾಗದೆ
ಮನದಂಜಿಕೆ ಪೋಗಿ ನುಡಿದ ಚತುರೋಕ್ತಿಗಳಂ ೧೩

ಇಂತಿಂತು ನುಡಿದೆನಾ ಪ್ರಿಯೆ
ಗಿಂತಿಂತೀದೇವಿ [6]ನುಡಿದಳೆನಗೆಂಬುದನಿಂ
ತಿಂತು ಮುನಿಗೊಂದುಗುಂದದೆ[6]
ಸಂತಸದಿಂ ಪೇೞ್ದ ಶೌರಿ ಮತ್ತಿಂತೆಂದಂ ೧೪

---

[1] ದುಕೂಲದಂಚಲದಿನಾನನಮಂ (ಮೊಅ) [2] ಅಸ್ಮದಾಗಮಮಕಾರ್ಯಮೆನುತ್ತುಮೆ (ಖ) [3] ಬಿಜ್ಜಣಿಗೆಯಿಂ (ಖ) [4] ತತ್ಪ್ರಿಯೆಗೆ ತಾಪಮುದು ಪೆರ್ಚಿದುದಂ (ಖ) [5] ನೋಟ್ಟುದನಾಕೆ (ಕಗ) [6] ನುಡಿದಳೆಂಬುದನಂದೆಂತಂತುಮಗುಂದದೆ ಮುನಿಸಿಂತೊಳ್ (ಕ) ನುಡಿದಳೆಂಬುದನಂದಂತಂ ತುಂಗುಂದದೆ ಮುನಿಯೊಳ್ (ಗ)

ಚಂ॥ ಸವತಿಗೆ ಕೊಟ್ಟಪೂರ್ವಮುನಿಪುತ್ತ್ರಮವಸ್ತುವನೆನ್ನನೇಕೆ ಮಾ
ಧವ ಬಳಿಮಾತಿನಿಂ ತಿಳಿಪುಪ್ಪೈ ಕುಡೆ ತೀಱಿದ ವಸ್ತುವಿರ್ಕೆ ನೀ
ನೆಮಗೆ ತಪಕ್ಕನುಜ್ಞೆಗುಡಿಮೆಂದ ಲತಾಂಗಿಗೆ ತಂದು ಪಾರಿಜಾ
ತವನದನಾವಗಂ ಕುಡುವೆನೆಂದಿದನಾಂ ನುಡಿದೆಂ ಪ್ರತಿಜ್ಞೆಯಂ ೧೫

ವ॥ ಎನೆ ಮುನೀಶ್ವರಂ ಕೇಳ್ದು

ಮ॥ ಕಲಹಂ ಪುಟ್ಟಿತೆಲೇ ಮಹೇಂದ್ರನೊಳುಪೇಂದ್ರಂ[1]ಗೆನ್ನ ಮಾತಿಂ[1] ವಧೂ
ಕಲಹಂ ಸಾರ್ಥಕಮಾಯ್ತು ಭಾಪು ಕಲಹಾಲೋಕಾರ್ಥಿಯೆಂದಿಂತು ತ
ನ್ನೊಳೆ ತನ್ನಂ ಪೊಗಟ್ದಚ್ಯುತಂಗೆ [2]ಚಲಮುಪ್ಪಂತೆಂದನೇಂ ದೇವ ಪೂ
ಣ್ದುಳವಂತಕ್ಕುಮೆ[2] ಪಾರಿಜಾತಹರಣಂ ನೋಟ್ಪಂದು ಸಾಮಾನ್ಯಮೇ ೧೬

ವ॥ ಅದೆಂತೆನೆ

ಮ॥ ಸುರರುಂ ದಾನವರುಂ ಪಯೋಧಿಮಥನಂಗೆಯ್ವಂದು ತದ್ದಿವ್ಯಭೂ
ಮಿರುಹಂ ಪುಟ್ಟಿದುದಂತದರ್ಕಧಿಪನಾದಂ ಶಕ್ರನಾಶಕ್ರನಾ
ತರುವಂ ಪ್ರೀತಿವಿಶೇಷದಿಂ ಶಚಿಗೆ ಕೊಟ್ಟಂ ಭಾವಿಸಲ್ ಪೆಂಡಿರಾ
ದರಿಸುತ್ತಿರ್ಪ ಪದಾರ್ಥಮಂ ಸುಭಟರನ್ಯರ್ಗೀಯಲೇಂ ಬಲ್ಲರೇ ೧೭

ವ॥ ಎಂದು ಮುನೀಂದ್ರಬೃಂದಾರಕಂ ನುಡಿಯಲಿಂದ್ರಾವರಜಂ ಕೇಳ್ದು

ಕಂ॥ ತಾನಿಂದ್ರಂ ನಿಜನಾಮದೊ
ಳಾನಿಂದ್ರಾವರಜನೆಂದೊಡಗ್ರಜನಿಂದ್ರಂ
ತಾನೆನಗನುಜಂಗಭಿಮತ
ದಾನವನಿತ್ತೆನ್ನ ಪೂಣ್ಕೆಯಂ ಸಲಿಸದಿರಂ ೧೮

ನೀವೀ ಮಾತಂ ಪೇೞ್ದೊಡೆ
ದೇವೇಂದ್ರಂ ಪಾರಿಜಾತಮಂ ಸಂತಸದಿಂ
ದೀವಲ್ಲಿಗೆ ಸಂದೆಯಮೇ
ನಾವನುಮಿಷ್ಟತೆಗೆ ತುಷ್ಟಿವಡದವನೊಳನೇ ೧೯

ವ॥ ಎನೆ ವನರುಹಾಸನತನಯನಿಂತೆಂದಂ

---

1 ಎನ್ನಗೆಯ್ದೀ (ಖ) 2 ಚಲಮುಪ್ಪಂತೆಂದನಿಂ ನೀನೆ ಪೊಣ್ಮಲದೇಂ ತಕ್ಕುಮೆ (ಖ)

ಉ॥ ದೇವಿಯಱ್ತಿಯಂ ಸಲಿಸಲಿಲ್ಲದ ವಸ್ತುವನಾಗುಮಾಡಿ ನೀ
ವೀವೊಲವಿಂದೆ ಪೂಣ್ದಿರೆನೆ ಮುಂ ತನಗುಳ್ಳ ಪದಾರ್ಥಮಂ ಶಚೀ
ದೇವಿಗೆ ನಿಚ್ಚಮಱ್ತಿಯನೊಡರ್ಚುವುದಂ ನಗವೈರಿ ಪಾರಿಜಾ
ತಾವನಿಜಾತಮಂ ನಿಮಗೆ ಕೊಟ್ಟಪನೆಂಬುದಿದಲ್ತೆ ವಿಸ್ಮಯಂ ೨೦

ವ॥ ಅಂತುಮಲ್ಲದೆಯುಮೊಂದುಸಮಯದೊಳ್ ಇಂದುಲೇಖಾಶೇಖರಂ ಗಿರೀಂದ್ರ ಕನ್ಯಾಸಮನ್ವಿತನಾಗಿ ಸುೞಿವಲ್ಲಿ ಸಂಕ್ರಂದನನಂದನವನಮಧ್ಯದೊಳನೇಕ ನಾಕಿಭಟರ ಕಾಪಿನಿಂ ಮೆಪ್ಪುವೆತ್ತ ನಿಜಸೌರಭದೊಳಪೂರ್ವಾಕಾರದೊಳತಿಮನೋಹರಮಾದ ಪಾರಿಜಾತಮನಗಜಾತೆ ಕಂಡು, ಕೌತುಕಂಬಟ್ಟು ಎಲೆ ದೇವಾ ಜಗತ್ತ್ರಯವಲ್ಲಭಾ ನಿಮಗೆ ವಲ್ಲಭೆಯಾಗಿರ್ದೆನಗಮಿಲ್ಲದಭೂತಪೂರ್ವಮಪ್ಪ ಪಾರಿಜಾತಮೆಂತಾ ಶಚಿಗೆ ದೊರಕೊಂಡುದು. ಎನಗೀ ಮಹೀರುಹಮನಿತ್ತು ಮನದಱ್ತಿಯಂ ಸಲಿಸವೇೞ್ಪುದೆಂದಾಗ್ರಹಂ ಮಾಡಲಾ ಚಂಡಿಯು ಮನಂಗೊಂಡಾಗ್ರಹಮನೆಂತಾನುಂ ಸಂತೈಸಿ ಕಳೆದಂ. ಅಂತುಮಾ ತ್ರಿಪುರಹರಂ ಮೊದಲಾಗಿ ಶಚೀಪತಿಯು ಪಾರಿಜಾತಮಂ ಕಳೆದುಕೊಂಡನಿಲ್ಲೆಂದು ಪೇೞ್ವುದುಮದಂ ಪುರುಷತ್ರಯಾತ್ಮಕಂ ಕೇಳ್ದು

ಮ॥ ಅಗಜೇಶಂಗೆ ಜಗತ್ತ್ರಯಪ್ರಭುಗದೇಗಾನಂ ಸುರೋರ್ವೀಜಮಂ
ನಗಜಾವಲ್ಲಭೆಗೀಯೆನೆಂದು ಮೊದಲೊಳ್ ಶಕ್ರಂಗೆ ತಾಂ ಕೊಟ್ಟುದಂ
ಮಗುೞ್ದುಂ ಕೊಳ್ವುದು ಪೆರ್ಮೆಗಾವುಚಿತಮೆಂಬೀ [1]ಮಾೞ್ಕೆಯಿಂದಂ[1] ಮನಂ
ದೆಗೆದಂ ಪೋಪೆಱತಲ್ತು ನೀನುಮಱಿಯೈ ಕೇಳ್ದೀಶಸಾಮರ್ಥ್ಯಮಂ ೨೧

ವ॥ ಎಂದು ತತ್ಕಥಾಪ್ರಪಂಚಮಂ ಮಾಣ್ದು ಸಮನಂತರಂ ವಿರಿಂಚ ಸಂಭವಂಗಂ ಭೋಜನಯನನಿಂತೆಂದಂ

ಕಂ॥ ಕೊಂಡಾ ಭೌಮನನದಿತಿಗೆ
ತಂದಾ ಕುಂಡಲಮನಿತ್ತುದರ್ಕೆನಗೊಲವಿಂ
ದಂದೀವ ಮೆಚ್ಚ ನಗರಿಪು
ವಿಂದೀಗುಂ ಪಾರಿಜಾತಕುಜಮನಮೋಘಂ ೨೨

ವ॥ ಎಂದು ದೇವಕೀನಂದನಂ ನುಡಿಯೆ ವಿರಿಂಚನಂದನಂ ಕೇಳ್ದು ದೇವ ನೀಮಪ್ಪುದುಚಿತವಚನಮಂ ನುಡಿದಿರ್ ಈಮಾತಂ ಪುರುಹೂತಂಗೆ ಪೇೞ್ವಡೆ

1 ಪೆರ್ಮೆಯಿಂದಂ (ಕಗ)

ಕಂ॥ ಎನ್ನಾಜ್ಞೆಗೆನ್ನಪದವಿಗ
ಮೆನ್ನರ್ಬೆಸಕೆಯ್ಯರಿಂತಿದೇವಿರಿದೆನಗೆಂ
ದೆನ್ನದೆ ನೀಂ ಗೆಯ್ದೊಳ್ಪಿಂ
ಮನ್ನಿಸಿ ಸುರಚಕ್ರಿ ಮೆಚ್ಚುಗುಡಲಱಿದಪನೇ ೨೩

ಮನುಜಂ ಕೃಷ್ಣಂ ದೇವೇಂ
ದ್ರನೆನಾನಂತರಮುದಾವುದೆನ್ನೊಳ್ ತನಗೆಂ
ದನವಧಿಗರ್ವದೆ ಕುಡಲಱಿ
ಪನೆ ನಿಮಗಾ ವಜ್ರಿ ಪಾರಿಜಾತದ್ರುಮಮುಂ ೨೪

ಚಂ॥ ಅನಲನ ತೇಜದಿಂ ಯಮನ ಸಾಹಸದಿಂ ದನುಪುತ್ರನಣ್ಮಿನಿಂ
ವನನಿಧಿನಾಥನುದ್ಧತಿಕೆಯಿಂ ಪವಮಾನನ ಶಕ್ತಿಯಿಂ ಕುಬೇ
ರನ ಬಲದಿಂ ಮಹೇಶನ ಮಹತ್ವದಿನಾರ್ಗಮಸಾಧ್ಯಮೆಂಬ ಬ
ಲ್ಪಿನೊಳಗಪ್ಪೈರಿ ನಿಮ್ಮ ವಿನಯೋಕ್ತಿಗೆ ತಾಂ [1]ನಗದೇಕೆ ಮಾಣ್ಬನೈ[1] ೨೫

ಮ॥ ಪಿಡಿವೆಂ ವಜ್ರಮನೆಂಬುದಗ್ರದಿವಿಜೇಭಾರೂಢನಾಗಿರ್ಪನೆಂ
[2]ಬೆಡಮಂಕಂ ಬಲಮಂಕಮೆಂಬೆಡೆಗಳೊಳ್ ನಾಕಿವ್ರಜಂ[2] ಬರ್ಪುದೆಂ
ಬೊಡನೇಕಾದಶರುದ್ರರಷ್ಟವಸುಗಳ್ ಪನ್ನಿರ್ವರಾದಿತ್ಯರುಂ
ನಡೆವರ್ ಸಂಗರಕೇಳಿಗೆಂಬೆಸಕದಿಂದುದ್ವೃತ್ತನಾವೃತ್ರಹಂ ೨೬

ವ॥ ಅದುಕಾರಣದಿಂ

ಕಂ॥ ಕುಡಲಱಿಯಂ ನಿಮಗೆಂತುಂ
ಬಿಡೌಜನಾ ಪಾರಿಜಾತಕುಜಮಂ ನೀವಿಂ
ತೆಡಮಱಿಯದೆ ಪೂಣ್ದಿರ್ ಗಡ
ಬಿಡಿಮಿನ್ನಬ್ಜಾಕ್ಷ ನಿಮ್ಮ ಮನದಾಗ್ರಹಮಂ ೨೭

ವ॥ ಎಂದು ನಾರದಂ ನುಡಿಯೆ

ಮ॥ಸ್ರ॥ ಪರಶೌರ್ಯೋತ್ಕರ್ಷಮುಂ ಮಾಟ್ಪೆಣಕದ ನುಡಿಗಳ್ ಕರ್ಣಮಂ ತಾಗೆ ಕೋಪ
ಸ್ಫುರಿತಭ್ರೂಕೋಟಿಯುಂ ಕಂಪಿಸುವಧರಮುಮುತ್ಫುಲ್ಲನಾಸಾಗ್ರಮುಂ ನಿ
ರ್ಭರಘರ್ಮಕ್ಲಿನ್ನಗಂಡಸ್ಥಳಮುಮರುಣನೇತ್ರಾಬ್ಜಮುಂ ಕಣ್ಗಗುರ್ವಾ
ಗಿರೆ ದೈತೇಯಾಂತಕಂ ಸಂಹೃತಿಸಮಯಮಹೋಗ್ರಾಂತಕಾಕಾರನಾದಂ ೨೮

[1] ಕುಡದೇಕೆ ಮಾಣ್ಬನೊ (ಗ) [2] ಎಡವಕ್ಕಂ ಬಲವಕ್ಕಮೆಂಬೆಡೆಗಳೊಳ್ ನಾರೀವ್ರಜಂ
(ಖ)

ವ॥ ಅಂತು ಶೌರಿ ವೀರಾವೇಶದಿಂದತಿಕ್ಷೋಭನುಂ ತಳೆದು, ಎಲೆ ನಾರದ ಕೇಳೆ ಮಗೆ ದೇವತೆಗಳೊಳ್ ಕಲಹನನುಚಿತವೆಂದು ಸದ್ಭಾವದಿಂ ನುಡಿದೆ[1]ನಂತಲ್ಲದೊಡೆ[1]

ಕಂ॥ ಕುಡದೆಂದು ಪಾರಿಜಾತವು
ನೆಡೆಗುಡದಿನ್ನಾ ಶಚೀಕುಚಕ್ರೀಡೆಗೆ ತಾ
ನೆಡೆಗೊಳ್ಗುಂ ಕೌಮೋದಕಿ
ಬಿಡೌಜನತಿವಿಪುಳಮೆನಿಪ ವಕ್ಷಸ್ಥಳಮಂ ೨೯

ಈಯದೊಡೆ ಪಾರಿಜಾತವು
ನೀಯದವೋಘಂ ಸಿತಾತಪತ್ರಪ್ರಕರ
ಚ್ಛಾಯೆಯನಸ್ತ್ರಪ್ರಕರ
ಚ್ಛಾಯೆಯನೀಗುಂ ನಿಳಿಂಪಚಕ್ರಿಗೆ ಶಾರ್ಙ್ಗಂ ೩೦

ತ್ರಿದಶಪತಿ ಪಾರಿಜಾತ
ಪ್ರದನಾಗದೊಡಾಧಿಪತ್ಯಸವನಮದಿನ್ನಾ
ಗದು ತನ್ನಗಾರಿ[2]ಗಾಗಿ
ಪ್ಪುದು ಧಾರಾಖಡ್ಗಸವನಮುಂ[2] ಮತ್ಪಡ್ಗಂ ೩೧

ಭೂರುಹಮಿದು ದಿವ್ಯಂ ಬಿಡ
ಬಾರದೆನಲ್ ದೇವರಾಜ್ಯಕಂಠಿಕೆ ತನಗಿಂ
ಬಾರದು ಬರ್ಕುಂ ತನ್ನಗ
ವೈರಿಯ ಕಂಠಕ್ಕೆ ಮತ್ಸುದರ್ಶನಚಕ್ರಂ ೩೨

ವ॥ ಎಂದು ನುಡಿದು, ಆ ದೇವಚಕ್ರವರ್ತಿ ವಿಕ್ರಮಾಕ್ರಾಂತಬಳ ನಮುಚಿ ಪಾಕ ಜಂಭ ಶಂಬರಾದಿ ನಿಳಿಂಪಾರಿಜಾತನೆಂಬಖರ್ವಗರ್ವದಿಂ ಪಾರಿಜಾತಮಂ ತರಲೀಯನೆಂಬು ದುಮುಜ್ಜಿಗದಿಂ ಸತ್ಯಭಾಮೆಗಾಂ ಮಾಡಿದ ಪ್ರತಿಜ್ಞೆಯಂ ಮಾಣ್ದೆನಪ್ಪೊಡೆ, ಈಮಹೀ ಮಂಡಲಂ ರಸಾತಳಕ್ಕಿೞಿಯದೆಯುಂ ಕುಲಶಿಖರಿಗಳ್ ನೆಲೆಯಿಂ ತಳರದೆಯುಂ ಸಮು ದ್ರಂಗಳ್ ಸೀಮೋಲ್ಲಂಘನೆಂಗೆಯ್ಯದೆಯುಂ ದಿಗ್ಗಜಂಗಳ್ ನಿಜಸ್ಥಾನಮಂ ಬಿಟ್ಟೋಡದೆ ಯುಂ ಚಂದ್ರಸೂರ್ಯಮಂಡಲಂಗಳ್ ಕಾಲಚಕ್ರನಿರ್ವರ್ತನದೊಳ್ ಅಪವರ್ತಿಸದೆಯುಂ ಎಂತು ಪ್ರಯುಕ್ತಂಗಳಾಗಿರ್ದಪುವು ? ಎನ್ನ ವಚನವವ್ಯವಸ್ಥಿತಮಾದಂದೀ ಲೋಕವ್ಯವ ಸ್ಥೆಯುಂ ಕೆಟ್ಟುಪೋಕುಂ. ಅದುಕಾರಣದಿಂ ಮದೀಯ ಪಾರಿಜಾತ ಹರಣಪ್ರತಿಜ್ಞೆಯು ನೆಂತಾದೊಡಂ ಸಲ್ವಂತೆ ಮಾಡಿದಪ್ಪೆಂ. ಈ ವೃತ್ತಾಂತಮಂ ನೀವೆ ಪೋಗಿ ಪೇೞ್

---

[1] ಅಂತುಮಲ್ಲದೆಯುಂ (ಕಗ) [2] ಗಾಗಿಪುದಿದು ಧಾರಾರಕ್ತಸವನಮಂ (ಖ)

ನೆಗೞ್ತೆವಡೆದೇಕಾದಶರುದ್ರರುಂ ದ್ವಾದಶಾದಿತ್ಯರುಂ ಅಷ್ಟವಸುಗಳುಂ ಅಷ್ಟಲೋಕಪಾಲಕರುಂ ಗರುಡ ಗಂಧರ್ವ ಸಿದ್ಧ ವಿದ್ಯಾಧರೋರಗ ಯಕ್ಷ ರಾಕ್ಷಸ ಕಿನ್ನರ ಕಿಂಪುರುಷಾದಿ ಸಮಸ್ತ ಮರುದ್ಗಣಂ ಬೆರಸೈರಾವತಗಜಸ್ಕಂಧಾರೂಢನುಂ ಸ್ಕಂಧಾರೂಢನುಂ ವಜ್ರಾಯುಧ ಕಲಿತಕರತಳನುಮಾಗಿ ನಾಳಿನದಿವಸಂ ದಿವಸೇಂದ್ರೋದಯ ಸಮಯದೊಳ್ ಆ ಮಹೇಂದ್ರನಂ ಸಂಗ್ರಾಮಕ್ಕೆ ಬರವೇೞ್ಕುಂ ಆವೆಮ್ಮ ಗರುಡನನೇಱಿಕೊಂಡೇಕಾಂಗದಿಂ ಬಂದಪೆವೆಂದಾ ನಾರದನನೆ ದಿವಿಜರಾಜಂಗೆ ದೂದಟ್ಟ

ಕಂ॥ ಸಮರೋತ್ಸವಲಬ್ಧಿಯಿನುಪ
ಶಮಿಸೆ ನಿಜಕ್ರೋಧನತುಳಲೀಲೆಯಿನಿರ್ದಂ
ಕಮಲಾಕ್ಷಂ ಕೆಲದೊಳ್ ತ
ನ್ನ ಮನೋರಮೆ ಸತ್ಯಭಾಮೆಯಿರ್ಪಿನಮಾಗಳ್ ೩೩

ಮ॥ ನೆಗೞ್ತ್ತಿರ್ದುದನಾಕುಳಂ ಮದನರಾಗಂ ಚಕ್ರಿಗಂ ಸತ್ಯಭಾ
ಮೆಗಮಿಾ ವಲ್ಲಭರ್ಗಂ ವಿಧೂತ್ಸವದೊಳತ್ಯುತ್ಸಾಹದಿಂ ಕೂಡುಗಾಂ
ಪಗಲಂ ತೀರ್ಚುವೆನೆಂದತಿತ್ವರಿತದಿಂ ಪೋಪಂತೆ ಮಾರ್ತಂಡನ
ಸ್ತಗಿರೀಂದ್ರಕ್ಕಿೞಿದಂ ಮುಕುಂದವಸನದ್ಯೋತಾಹೃತಾತ್ಮಪ್ರಭಂ ೩೪

ವ॥ ಅನಂತರಂ

ಕಂ॥ ಮೃಗಮದಲಲಾಮದಿಂದಂ
ಬಗೆಗೊಳಿಸುತ್ತಿರ್ಪ ಸತ್ಯಭಾಮೆಯ ವದನೇಂ
ದುಗೆ ದೊರೆಯೆಂಬಿನಮುದಯಿಸಿ
ಮೃಗಧರಬಿಂಬಂ ವಿರಾಜಿಸಿತ್ತಂಬರದೊಳ್ ೩೫

ವ॥ ಆ ವಿಮಲಕುಮುದಿನೀಮಿತ್ರ ಮರೀಚಿ ಸುಧಾಧವಳಿತಮಾದ ರಾತ್ರಿಯೊಳ್ ಮಧುಸೂದನಂ ಸತ್ಯಭಾಮೆಯು ಸೂೞ್ಗನಂದು ಸುರತಾಮೃತಾರ್ಣವದೊಳೋಲಾಡಿ ಸುಖಸುಪ್ತಿಯಿಂದಿರ್ಪಿನಂ

ಚಂ॥ ಸುರರ್ಗೆ ಹಿತಾರ್ಥಮೆಂದಸುರರೊಳ್ ಹರಿ ಕಾದುವುದಲ್ತು ವಿಸ್ಮಯಂ
[1]ಸುರರೊಳೆ ಕಾದುವಂದ[1]ಮಿದು ವಿಸ್ಮಯಮಾನಿದನಿಂದು ನೋೞ್ಪೆನೆಂ
ದಿರದನುರಾಗದಿಂದುದಯಿಪಂತುದಯಾದ್ರಿಯನೊಯ್ಯನೇಱಿದಂ
ಸರಸಿಜಬಂಧುವೇಱಿ ವಿಜಯಾಂಗನೆ ಕೃಷ್ಣನ ಬಾಹುಮೀಠಮಂ ೩೬

---

1 ಸುರರೊಡಗಾದುವಂದ (ಕಗ)

ವ|| ಆ ಸಮಯದೊಳಗಣ್ಯಪುಣ್ಯ ಪಾಠಕರ ಮಂಗಳಸ್ತವನಕಳಕಳಮನಾಲಿಸು ತ್ತುಪ್ಪವಡಿಸಿ ನಿರ್ವರ್ತಿತ ನಿತ್ಯನಿಯಮನುಮಂಗೀಕೃತ ಮಂಗಳಾಭರಣನುಂ ವಿತರಣ ವಿಶೇಷತೋಷಿತವಂದಿಸ್ಪಂದನುಮಾಗಿ ಪುಂಡರೀಕಾಕ್ಷಂ ತಾರ್ಕ್ಷ್ಯನಂ ಸ್ಮರಿಸೆ

ಮ|| ನಿಜಪಕ್ಷಾನಿಳನಿಂ ತೆರಳ್ದುರೆ ಮೇಘಾನೀಕಮಾಕಾಶಸಿಂ
ಧುಜಳಂ ತುಳ್ಕೆ ರವೀಂದುಗಳ್ ಬಿದಱೆ ಪಾರಾವಾರದೊಳ್ ವೀಚಿಕಾ
ವ್ರಜಮುಜ್ಜೃಂಭಿಸೆ ಭೂತಳಂ ನಡುಗೆ ಶೈಲಶ್ರೇಣಿ [1]ಬೇಱೇಱು[1] ವಿ
ಶ್ವ[2]ಜಗತ್[2] ಕ್ಷೋಭಕರಸ್ವಭಾವಗತಿಯಿಂ ಬಂದಂ ವಿಹಂಗಾಧಿಪಂ ೩೭

ವ|| ಅಂತು ಬಂದು ದೇವಕೀನಂದನಂಗೆ ವಿನತಾನಂದನಂ ವಿನಯವಿನಮಿತೋತ್ತ ಮಾಂಗನಾಗಿ ಕೈಗಳಂ ಮುಗಿದು

ಮ||ಸ್ರ|| ತವೆ ದಿಕ್ಛುಂಡಾಲಮಂ ತುತ್ತುವ ದಶದಿಶೆಯಂ ಸುತ್ತುವಾಕಾಶಮಂ ಮು
ತ್ತುವ ಚಂದ್ರಾದಿತ್ಯರಂ ಮೀಂಟುವ ಕಡಲನಳುರ್ತೀಂಟುವಿಂದ್ರಾದ್ಯರಂ ಸೀಂ
ಟುವ ಯಕ್ಷಾಧೀಶನಂ ಕಟ್ಟುವ ಜವನೆರ್ದೆಯಂ ಮೆಟ್ಟುವೀಶಂಗೆ [3]ಬೂತ[3]
ಟ್ಟುವಗುರ್ವಂ ತೋಱಿದಪ್ಪೆಂ ಬೆಸಸುಬೆಸಸಿದೇನೆಂಬುದುಂ ಕೃಷ್ಣನೆಂದಂ ೩೮

ಕಂ|| ಅನುಪಮಮತರ್ಕ್ಯಮಗಣಿತ
ಮನಿವಾರಿತಮಲ್ತೆ ನಿನ್ನ ಸಾಹಸಗರ್ವಂ
ವಿನತಾಪ್ರಿಯನಂದನ ನೀಂ
ಮುನಿದಂದಾವುದುಮಸಾಧ್ಯಮಲ್ತಿದನಱಿವೆಂ ೩೯

ಸೆಱೆಯಿರ್ದ ನಿನ್ನ ಜನನಿಯ
ಸೆಱೆಯಂ ಬಿಡಿಸಲ್ ಮಹೇಂದ್ರನೊಳ್ ನೀಂ ಮುಂ ತ
ಳ್ತಿಱಿದಮರ್ದಂ ತಂದೆಯೆನಲ್
ನೆಱೆ ಬಣ್ಣಿಪರಾರೊ ನಿನ್ನ ವಿಕ್ರಮಗುಣಮಂ ೪೦

ವ|| ಎಂದಸುರಸೂದನಂ ಸಪ್ರಸಾದವಚನದಿಂ ನುಡಿಯೆ ಗರುಡಂ ಕೇಳ್ದು

ಕಂ|| ದೇವರ ಸಾಮರ್ಥ್ಯದಿನೆ
ನ್ನೀ ವಿಕ್ರಮಮೆಸೆವುದರ್ಕತೇಜದಿನರ್ಕ
ಗ್ರಾವದ [4]ಕಾಯ್ಪೆಸೆವಂತಿರೆ[4]
ಭಾವಿಪೊಡೇನುಂಟೆ ಬೇಱೆ ವಿಕ್ರಮಮೆನ್ನೊಳ್ ೪೧

---

[1] ಬೀಱೆಬೀಱೆ (ಕಖಗ) [2] ಜನ (ಖ) [3] ಮೊತ (ಖ) [4] ಕಾಂಪ್ಪೆಱುವವೊಲ್ (ಕಗ)

ವ|| ಎನೆ ವೈನತೇಯನ ವಿನಯಭಾಷಿತಕ್ಕೆ ಮೆಚ್ಚಿ ಸಂತಸಮನಪ್ಪುಕೆಯ್ದು

ಕಂ|| ಹರಿದರ್ಪಮನಪಹರಿಸಲ್
ಹರಿಪೀಠದೆ ಹರಿಶತಪ್ರಭಂ ತಳೆದುರ್ಣ ಮನೋ
ಹರಿವೆರಸು ಹರಿ ಹರಿನ್ಮುಖ
ಭರಿತಾನಕನಿನದದೇಱಿದಂ ಖಗಪತಿಯಂ ೪೨

ಈದೇವಿಯ ಭೂಷಣ ರ
ತ್ನೋದಿತರುಚಿ ಬಳಸೆ ಪಂಚರತ್ನಪ್ರಭನಿಂ
ದಾದಂ ಗರುಡನೆನಲ್ ಪ
ದ್ಮೋದರನೊಡನೇಱಿ ದೇವಿ ಗರುಡನೊಳೆಸೆದಳ್ ೪೩

ಪ್ರಭವಿಸಿದುದು ಭಾನುಗೆ ಚಿ
ತ್ರಭಾನುವೆಸರೀಗಳೆನಿಸಿ ಪೀತಾಂಬರಕೌ
ಸ್ತುಭಶಂಖ[1]ಚಕ್ರದೇಹ[1]
ಪ್ರಭೆಗಳ್ ತಳ್ವೊಯ್ಯೆ ನಭದೊಳೆಸೆದಂ ಕೃಷ್ಣಂ ೪೪

ಆನಕವೀಚಿರವಂ ಧ್ವಜ
ಮೀನಂ ಶೇಷಾಕ್ಷತಾಂಬುಕಣ[2]ಮೆಸೆವ ಧರಾಂ
ಭೋನಿಧಿಯಿಂ[2] ಖಗರಾಜಂ
ವ್ಯೋನಾಕಂ ನಾಕದತ್ತಲೊಗೆದಂತೊಗೆದಂ ೪೫

ವ|| ಅಂತು ಖಗನಾಥಂ ಗಗನ[3]ವೀಥಿಯೊಳತಿಕ್ರಮಿತ[3] ಪವನಸ್ಕಂಧನಾಗಿ ಪೋಪಲ್ಲಿ

ಮ||ಸ್ರ|| ಅಡಕಿಲ್ಗೊಂಡೂರ್ಧ್ವಲೋಕಪ್ರತತಿ ವಿಪುಲದೇವಾಲಯಂ ಚಂದ್ರಸೂರ್ಯರ್
ಸೊಡರ್ಗಳ್ ತಾರಾಳಿ ಪುಷ್ಪಂ ಸುರನದಿ ವಸುಧಾರಾಪ್ಲವಂ ದ್ವೀಪಮೇೞುಂ
ಕಡಲೇೞುಂ ವೃತ್ತಪೀಠಂ ಕನಕಗಿರಿ ಮಹಾಲಿಂಗಮೆಂಬಂತು ಚೆಲ್ವಂ
ಪಡೆದತ್ತೀ ವಿಶ್ವಮಸ್ಮಜ್ಜಠರಕಮಲಭೂಕಲ್ಪಿತಂ ಸತ್ಯಭಾಮೇ ೪೬

ವ|| ಎಂದು ಪೇೞುತ್ತುಮತಿವೇಗದಿಂ ಪೋಗಿ ವಸುದೇವನಂದನಂ ದೇವೇಂದ್ರನ ನಂದನಮನೆಯ್ದಿ ಪೊಕ್ಕು

1 ಚಕ್ರಗದೆಯ (ಖ). 2 ಮೊಗೆವಪರಾಂಭೋನಿಧಿಯಿಂ (ಕಗ) ಮೊಗೆವ ಸುಧಾಂಭೋನಿಧಿಯೆನೆ (ಖ) ಮೊಗೆವ ಸುದಾಂಭೋನಿಧಿಯಿಂ (ಮೊಅ) 3 ವೀಥಿಯಿಂದತಿಕ್ರಮಿತ (ಕಗ)

ಚಂ|| ತ್ರಿದಶಕುಜಾತನ್ಮೈದಱಿಕೂಳಮಿಂತಿದೆ ಪಲ್ಲವದಿಂ ಬೆಡಂಗಿನಿಂ
ತಿದೆ ನವಪುಷ್ಪದಿಂ [1]ಸೊಬಗಿನಿಂತಿದೆ[1] ಸೌರಭದಿಂ ಮನೋಜ್ಞವಾ
ಯ್ತಿದಱ ವಿಲಾಸವೀ ತರುಚತುಷ್ಕದೊ[2]ಳಾವುದೊ[2] ಪಾರಿಜಾತವಿಂ
ತಿದೆ ಪೆಱತಲ್ಲವೆಂದಱುಪಿ [3]ತೋಱುದನಾ[3] ಪ್ರಿಯೆಗಾ ಮಹೀಜಮಂ ೪೭

ವ|| ಅಂತು ತೋಱಿ [4]ಸಂತಮಿರದೆ[4]

ಮ|| ಕೆಲರಂ ಚಕ್ರವಿಘಾತದಿಂ ಕೆಲರನುತ್ಕೌಮೋದಕೀಘಾತದಿಂ
ಕೆಲರಂ ಶಾರ್ಙ್ಗವಿಮುಕ್ತ ಬಾಣಹತಿಯಿಂ ಕೊಂದಿಕ್ಕಿ ಕಾದಿರ್ದ ದೋ
ರ್ಬಲಗರ್ವೋದ್ಧತರಂ ಮುರಾರಿ ವಿಜಯಶ್ರೀ ನೋಟ್ಪವೋಲ್ ಸತ್ಯಭಾ
ಮೆ ಲತಾಕೋಮಲೆ ನೋಟ್ಪಿನಂ ಕಳೆದುಕೊಂಡಂ ಪಾರಿಜಾತದ್ರುಮಂ ೪೮

ವ|| ಅಂತು ಪಾರಿಜಾತದ್ರುಮಮಂ ಕಳೆದುಕೊಂಡುಮಾಖಂಡಲಂಗೆ ಭಂಗಮಂ ಕುಡದೆ ಪೋಗಲೊಲ್ಲೆನೆಂದು ಸಮರಾಮಂತ್ರಣಾರ್ಥಂ ಪಾಂಚಜನ್ಯಶಂಖಮಂ ಪೂರೈಸೆ

ಮ|| ನೆರಮಂ ಪೇೞುರಗೇಂದ್ರ ನಿನ್ನುರಗರಂ ದಿಕ್ಪಾಲಕಶ್ರೇಣಿ ನೀಂ
ನೆರವಾಗೇಂ ಪಡಿವಾತೆಲೇ ರವಿಯೆಲೇ ಮಾದೇವೆಲೇ ಬೊಮ್ಮ ಕೇ
ಳ್ದಿರೆ ನೀಮುಂ ನೆರವಾಗಿಮಾ ಕುಲಿಶಿಗೆಂತುಂ ಗೆಲ್ವನೇಕಾಂಗದಿಂ
ಮುರವಿಧ್ವಂಸಕನೆಂದು ಸಾಱುವವೊಲಾಯ್ತಾ ಪಾಂಚಜನ್ಯಸ್ವನಂ ೪೯

ವ|| ಅನ್ನೆಗಂ ಪನ್ನಗಾರಿವಾಹನ ಬಾಹು ನಿಹತಶೇಷಾನಿಮಿಷವನಪಾಲಕರ್ ಪೌಲೋಮಿಯ ಸಮೀಪಕ್ಕೆ ಪೋಗಿ

ಮ|| ತನಗೇಕಗ್ಗದ ಪಾರಿಜಾತಮಹಿಜಂ ಪೌಲೋಮಿಗಾಂ ವೀರಕಾ
ಮಿನಿಯಿಂ ರೂಪಿನೊಳಗ್ಗಳಂ ಸೊಬಗನಿಂ ಮೇಲೀಕುಜಂ ಯೋಗ್ಯವಿ
ನ್ನೆನಗೆಂಬಂದದೆ ಸತ್ಯಭಾಮೆ ಪತಿಯಂ ದೈತ್ಯಾರಿಯಂ ತಂದು ದೇ
ವಿ ನಿಜೋದ್ಯಾನದ ಪಾರಿಜಾತತರುವಂ ಕೈಕೊಂಡಳುತ್ಸಾಹದಿಂ ೫೦

ವ|| ಎಂದು ಬಿನ್ನವಿಸಲತಿಕುತೂಹಲಾಕುಲಿತೆಯಾಗಿ

ಮ||ಸ್ರ|| ಸ್ತನಕಂಪತ್ತ್ರುಟ್ಯದೇಕಾವಳಿ ಗತಿಜವನಿರ್ಮುಕ್ತಮಂಜೀರಮಾಂದೋ
ಲನಭಾರವ್ಯಸ್ತ[5] ಕರ್ಣೋತ್ಪಲಮವಿರಳಘರ್ಮಾಂಬುಧೌತಾಂಗರಾಗಂ
ಘನಸೋಷ್ಣಶ್ವಾಸಲೋಲಾಳಕಮದ್ಧೃಥಕಚಸ್ರಸ್ತಮಾಲ್ಯಂ ಭಯಂ ಮಾ
ಟ್ಪಿನೆಗಂ ಪೌಲೋಮಿ ಬಂದಳ್ ಕುಲಿಶಿಗಪಜಯಶ್ರೀಯೆ ಬರ್ಪಂದದಿಂದಂ ೫೧

---

1 ಸುಭಗಮಿಂತಿದೆ (ಕಗ) 2 ಳೀಕ್ಷಿಸೆ (ಕಗ) 3 ತೋಱಿ ನಿಜ (ಕಗ) 4 ಮತ್ತಮಿರದೆ (ಕಗ) 5 ಭಾರಧ್ವಸ್ತ (ಕಗ)

ವ॥ ಅಂತು ಬಂದು ಸಭಾಂತರಾಳದೊಳಿರ್ದ ನಿಜಕಾಂತಸಂತಿಕಮಂ ಪೊರ್ದಿ

ಚಂ॥ ಎನಗತಿಖೇದನಪ್ಪಿನೆಗವಿಂದು ಪದಾರ್ಥವಿಹೀನವಾಯ್ತು ನಂ
ದನವುಮುರೌಘವಿಂದಫಲವಾಂಛಿತವಾದುದಸಾರವಾದುದಿಂ
ದನಿಮಿಷಲೋಕವಿಂದು ನಿಜಕೀರ್ತಿ ಮಲೀಮಸವಾಯ್ತೆಲೇ ಸುಧಾ
ಶನಪತಿ ಪಾರಿಜಾತಹರಣಂ ಮುರವೈರಿಯಿನಾದ ದೂಸಱಂ ೫೨

ವ॥ ಎಂಬುದುಂ ಶಚೀನಾಥನಾತ್ಮಗತದೊಳ್ ಬಗೆದು ನೋಡಿ ನಾರದಂ ಕದನ ದೂತನಾಗಿ ಬಂದಱಿಸಿದ ಕಾರ್ಯಪ್ರಪಂಚವೀಗಳ್ ಪಾಂಚಜನ್ಯರವದೊಳಂ ಶಚಿಯ ಪುಣ್ಯಲೋಕಂ ವಿದಿತಮಾದುದೆಂದು ಕದನೋದ್ಯೋಗದಿಂ ಕುಪಿತಚಿತ್ತನಾಗಿ ಬೃಹಸ್ಪತಿಯ ಮೊಗಮಂ ನೋಡೆ

ಮ॥ ಕಲಹಕ್ರೀಡೆಗೆ ಬಂದನಾವನಱಿಪ್ಪೆ ತ್ರೈಲೋಕ್ಯಸೃಷ್ಟಿಸ್ಥಿತಿ
ಪ್ರಲಯೈಕಕ್ಷಮನಾ ಮಹಾವಿಭುಗೆ ಲೀಲಾಮಾತ್ರಮೀ ದೇವಮಂ
ಡಲಮಂ ಗೆಲ್ವುದಿದರ್ಕೆ ದೇವ ಕಲಹಂ ಬೇಡುತ್ತಮಾಂಗಸ್ಥಿತಾಂ
ಜಲಿಯಾಗೀಗಳೆ ಪೋಗಿ ನೀನೆ ಕುಡು ಕೃಷ್ಣಂಗಾ ಮರುದ್ಭೂಜಮಂ ೫೩

ವ॥ ಎಂದು ಸುರಪುರೋಹಿತನಾಗಾಮಿಕಾರ್ಯಮಂ ಪೇೞಲಾ ಯೋಧನ ಪುನ ಸ್ಸಂಧಾನವಿಶಾರದಂ ನಾರದನಿಂತೆಂದಂ

ಮ॥ ದಿವಿಜಾಧೀಶನನೊಂದೆ ಮೆಯ್ಯೊಳೆ ಮುಕುಂದಂ ಗೆಲ್ವನೆಂಬುಕ್ತಿಯು
ಕ್ತವೆ ವಾಚಸ್ಪತಿ ನೀಂ ಬಳಾಬಳವಿಚಾರಂಗೆಯ್ಯದೇನೆಂಬೆ ವಾ
ಸವನೊಳ್ ಬೆಂಬಲವಪ್ಪ ವೀರರಸುರರ್ [1]ತಾಮಲ್ಲರೇ[1] ಶಕ್ರನೇ
ಱುವುದೈರಾವತಮಲ್ಲವೇ ಕುಲಿಶಿಗಸ್ತ್ರಂ ವಜ್ರಮೇನಲ್ಲವೇ ೫೪

ವ॥ ಅಂತುಮಲ್ಲದೆ

ಮ॥ ತ್ರಿದಶಾಧೀಶ್ವರಸಂಪದಂ ಸಫಲಮೀ ಪೌಲೋಮಿಯಿಂ ಪಾರಿಜಾ
ತದಿನೀ ದಿವ್ಯಪದಾರ್ಥಯುಗ್ಮದೊಳಗಿಂದೊಂದಂ ಮುಕುಂದಂಗೆ ಬ
ಲ್ಲಿದನೆಂದೀವುದೆ ಪಾರಿಜಾತಮನಿದೇಂ ಪೌಲೋಮಿಯಂ ನಾಳೆ ಬ
ಲ್ಲಿದರಾರಾನುಮಪೇಕ್ಷೆಗೆಯ್ಯಲವರ್ಗೀಯಲ್ವೇೞ್ಕುಮೆಂಬಂದಮೋ ೫೫

ವ॥ ಎಂದು ನುಡಿದ ನಾರದನ ನುಡಿಗನುಗುಣಮಾಗಿ ವಿಬುಧ ಮಂತ್ರಿಯಂ ಮಾರ್ಕೊಂಡು

[1] ತಾಮಲ್ಲವೇ (ಖ)

ಮ॥ಸ್ರ॥ [1]ಬಗೆವಂದೀ[1] ಪಂದೆಗಜ್ಜಂಗಳನೆಱಪುವ ನಿನ್ನುಕ್ತಿಯಿಂತಿರ್ಕೆ ದೈತ್ಯಾ
ರಿ ಗಡಂ ಮಾಱಾಂತು [2]ಬಂದಂ[2] ಗಡ ಸುರಕುಜಮಂ ಸತ್ಯೆಗಿತ್ತಂ ಗಡಂ ಕಾ
ದಿ ಗಡಂ ಗೆಲ್ದಂ [3]ಗಡೆಮ್ಮಂ ಗಡಮೆಗೆ ಗಡಂ ನೀಂ ಗಡಂ[3] ಬುದ್ಧಿವೇೞ್ದ
ಪ್ಪೆ ಗಡಂ ದೇವೇಜ್ಯ [4]ನಲ್ಲಿಂ[4] ಯದುಕುಲಕುಟಿಲಂಗಾನಲಾವಾವೆ [5]ಸಾಲ್ವಂ[5] ೫೬

ವ॥ ಎಂದು ನುಡಿದು

ಮ॥ಸ್ರ॥ ನೆರೆದಾಶಾಧೀಶರಲ್ಲಲ್ಲಿಗೆ ಕೆಳದರ್ಗ ಸಿಡಿಲ್ದೇೞುತಿರ್ಪಲ್ಲಿ ತತ್ಸಂ
ಗರಕೇಳೀಲೋಲದಿಕ್ಪಾಲಕರ ಕಟಕಕೋಟೀರಕೇಯೂರಹಾರೋ
ತ್ಕರದಿಂದನ್ಯೋನ್ಯಸಂಘಟ್ಟದೊಳೆ ಸಿಡಿದ ಮಾಣಿಕ್ಯಸಂದೋಹವಾ ವೀ
ರರ ಕೋಪೋಗ್ರಾನಲಜ್ವಾಲೆಯ ಕಿಡಿಯೆ ಸಿಡಿಲ್ವಂತಗುರ್ವಾದುದೆತ್ತಂ ೫೭

ಕಂ॥ ಆಳೆಟ್ಟಿದ್ದ ಗಜೇಂದ್ರಾಶಾ
ಪಾಳರ ಕಣ್ಮಲರ ಕೆಂಪು ಪರ್ವಿದುದಾ ದಿ
ಕ್ಪಾಳರ ವೀರರಸಾಬ್ಧಿಯ
ವೇಳಾವಿದ್ರುಮದ ಕೆಂಪಿದೆನೆ [6]ತತ್ಸಭೆಯಂ[6] ೫೮

ವ॥ ಆ ಸಭಾಕ್ಷೋಭ[7]ಸಮಯದೊಳಾಹವಕ್ಷುಭಿತನಾಗಿ[7] ಸುರಪತಿ ಗುರೂಕ್ತಿಯಿಂ ಸಂದಿಗ್ಧಸಮರೋದ್ಯೋಗನಾಗಿರ್ದುದನಱಿದು ನಾರದಂ ಶಚೀವದನಮಂ ನೋಡಿ

ಉ॥ ಪ್ರಾಕೃತಮರ್ತ್ಯನಾದ ಹರಿ ಪೂಣ್ದು ಗಡಂ ನಿಜಕಾಂತೆಗಿತ್ತನೀ
ನಾಕಮಹೀಜಮಂ ಪಿರಿದುಮಾತನ ಶೌರ್ಯಮಿದಲ್ತು ವೈರಿಮೆ ವೆ
ತ್ತಾಕೆಯ ತೋಳ ಸೋಂಕಿನ ಗುಣಂ ಗತಭಾಗ್ಯೆಯ ನಿನ್ನ ತೋಳ ಸೋಂ
ಕೀ ಕುಲಿಶಾಸ್ತ್ರನಿಂ ತೊಲಗಿಸಿತ್ತು ನಿಸರ್ಗದ ಶೌರ್ಯಮಂ ಶಚೀ ೫೯

ವ॥ ಎಂದು [8]ಮುಟ್ಟೆ[8]ಮೂದಲಿಸೆ ಕಟ್ಟೇವದಿಂ ಶಚೀದೇವಿ ದೇವರಾಜನಿದಿರೊಳ್ ನಿಂದು

ಮ॥ಸ್ರ॥ ಅನಿಮೇಷಾನೋಕಹಂ ಪೋದುದನಱಿದು ಗಡಿನ್ನುಂ ನಿಳಿಂಪೇಭಪೂರ್ವಾ
ಸನದೊಳ್ [9]ಕಾಲ್ಗೆಯ್ದಿನ್ನುಂ[9] ನಿಜಕುಲಿಶಮಹಾಸ್ತ್ರಕ್ಕೆ ಕೈನೀಡದಿನ್ನುಂ
ಮುನಿಸಿಂ ಮೇಲೆತ್ತದಿನ್ನುಂ ದನುಜರಿಪುವಿನೊಳ್ ಕಾದದೇಕಿರ್ಪೆ ಸಂಕ್ರಂ
ದನ ನೀಂ ಪೌಲೋಮಿಯಪ್ಪೆನ್ನಧಿಪನೆನಿಸಿ ಬನ್ನಕ್ಕೆ ಮುಯ್ಯಾಂತು ನಿಲ್ವೈ ೬೦

1 ಬಗೆಗೆಂದುಂ (ಕಗ) 2 ಪೂಣ್ದಂ (ಖ) 3 ಗಡಂ ನೀಂ ಗಡಮೆನಗೆ ಗಡೀಗಳ್ ಗಡಂ (ಕಗ) 4 ನಿಲ್ಲೀ (ಕಗ) 5 ಸಾಲ್ವೆಂ (ಕಗ) ಸೋಲ್ವೆಂ (ಖ) 6 ತತ್ಸಭೆಯೊಳ್ (ಖ) 7 ಸಮಯದೊಳ ಪಕ್ಷೋಭಿತನಾಗಿ (ಖ) 8 ಮುಟ್ಟೆ (ಖ) 9 ಕಾಲ್ಗಾಯದಿನ್ನುಂ (ಕ) ಕಾಲ್ಗೊಯ್ವಿನ್ನುಂ (ಖ) ಕಾಲ್ಗೊಯದಿನ್ನುಂ (ಮೊಳ)

ವ॥ ಎನೆ ಕುಲಿಶಧರ[1]ನಾಂಗಿರಸನತ್ತಲವಲೋಕಸಂಗೆಯ್ದು[1]

ಚಂ॥ ದಿವಿಜಮಹೀಜಮಂ ಮನುಜನುಯ್ದೊಡೆ ಸೈರಿಪೆ ಪುಟ್ಟುಗುಂ ಪರಾ
ಭವಮುದಱಿಂದಮಾ ಮುನಿಪನೀ ಸುರರೀ ಶಚಿದೇವಿಯೆಂದ ಕ
ಜ್ಜವೆ ಬಗೆವೊಕ್ಕುದಿನ್ನೆಮಗೆ ಸಾಮದ ಭೇದದುಪಪ್ರದಾನದೊಂ
ದವಸರಮಲ್ತು ದಂಡಮೆ ದಲುದ್ಯಮಮಿಂ [2]ಪೆಱಪಿಂಗಿರಂಗಿರಾ[2] ೬೧

ವ॥ ಎಂದು ರಣರಸಾಡಂಬರಮನಳವಡಿಸಿದಾಗಳ್

ಮ॥ ಅಸಮಕ್ರೋಧಕೃಶಾನು ಪೆರ್ಚೆ ಮನದಿಂ ಸರ್ವಾಂಗಮಂ ಕೊಡೆ ಭೇ
ದಿಸಿ ಪೊಣ್ಮಿರ್ದುದು ತಚ್ಛಿಖಾಶಕಲದುರ್ಬೆಂಬಂತೆ ಕೆಂಪೇಱಿದ
ಕ್ಷಿಸಹಸ್ರಂ [3]ರುಧಿರೋಕ್ಷಿತಾಕ್ಷತ[3] ಸಹಸ್ರಾಕಾರದಿಂ ತನ್ನೊಳು
ರ್ವಿಸೆ ಯುದ್ಧಾಪಜಯಕ್ಕೆ ಪಕ್ಕುಗುಡುವಂತಿರ್ದಂ ಸಹಸ್ರಾಂಬಕಂ ೬೨

ವ॥ ಆ ಪ್ರಸ್ತಾವದೊಳ್

ಮ॥ಸ್ರ॥ ವಿಲುಠದ್ಘಂಟಾಪಟಿಷ್ಠಧ್ವನಿಬಧಿರಿತದಿಙ್ಮಂಡಲಂ ಕರ್ಣತಾಳಾ
ನಿಲಲೋಲದ್ವೀಚಿಮಾಲಾಂಬರಸರಿದುದಕಂ ಪುಷ್ಕರೋಚ್ಚಾಟನ ವ್ಯಾ
ಕುಲಿತಬ್ರಹ್ಮಾಸನಾಂಭೋರುಹಮತಿವಿತತಾಯೋಗರತ್ನಪ್ರಭಾಪಿಂ
ಗಲಿತಸ್ವರ್ಗಾಂತರಾಳಂ ಹಿಮಗಿರಿಧವಳಂ ಬಂದುದಿಂದ್ರದ್ವಿಪೇಂದ್ರಂ ೬೩

ವ॥ ಅನಂತರಂ

ಚಂ॥ ದ್ವಿರದಮನಿಂದ್ರನೇಱೆ ಶಿಖಿ ಮೇಷಮನೇಱಿದನೇಱಿದಂ ಯಮಂ
ಪುರುಷಲುಲಾಯಮಂ ನಿರುತಿ ಮರ್ತ್ಯನನೇಱಿದನೇಱಿದಂ ಜಲಾ
ಕರಪತಿ ನಕ್ರಮಂ ಪವನನೇಣನನೇಱಿದನೇಱಿದಂ ಸುಧಾ
ಕರಧರಬಂಧು ಪುಷ್ಪಕಮನೇಱಿದನಿಂದುಧರಂ ವೃಷೇಂದ್ರನಂ ೬೪

ಮ॥ಸ್ರ॥ ದೊರೆಯಾದರ್ ಭೋಗದಿಂದಿಂದ್ರನೊಳೆನೆ ಕೃತಕೃತ್ಯರ್ ವಿರಿಂಚಾದಿದೇವರ್
ಚರಿತಾರ್ಥರ್ ಕಾರ್ತವೀರ್ಯಪ್ರಭೃತಿನೃಪರೆನಲ್ ಮೊಗ್ಗೆ ಸಾಕ್ಷಾತ್ಸುರಾಧೀ
ಶ್ವರಭೋಗಂ ನೋಡೆನಲ್ ಘೂರ್ಣಿಸೆ ಬಹುಕಹಳಾಶಂಖಭೇರೀರವಂ ತ
ಳ್ತಿರೆ ನಾನಾಛತ್ರಷಂಡಂ ಬಳಸಿಬರೆ ಮರುತ್ಸೇನೆ ಬಂದಂ ಮಹೇಂದ್ರಂ ೬೫

---

1 ಅಂಗೀರಸನತ್ತಲಾಲೋಚನಸಂಗೆಯ್ದು (ಕಗ) 2 ಪೆಱತಿಲ್ಲ ನಿಶ್ಚಯಂ (ಖ) 3 ರುಧಿರಾ ಕ್ಷತಕ್ಷಕ (ಕ) ಸಮರಕ್ಷತಾಕ್ಷತ (ಖ) ರುಧಿರಾಚ್ಯುತಕ್ಷಕ (ಗ)

ವ॥ ಅಂತು ಬಂದು ಸಂಗ್ರಾಮರಂಗದೊಳೊಡ್ಡಿ ದೊಡ್ಡಣದ ಸುರಸೈನ್ಯನಿಕರಮಂ ಬೇಱಬೇಱೆ ಪೆಸರ್ವೆಸರೊಳ್ ಸತ್ಯಭಾಮೆಗೆ ತೋಱಲೆಂದು ಸರೋಜನಾಭನಿಂತೆಂದಂ

ಮ॥ಸ್ರ॥ ವಿಶದಶ್ವೇತಾತಪತ್ರಾವಳಿ ವಿಳಸಿತನಾಗಿರ್ಪ ಕೋಟೀರರತ್ನಾಂ
ಶುಶಿಖಾಕಿಮ್ಮೀರಿತೋದ್ಯಚ್ಚಮರಜಪವನಾಂದೋಲ[1]ತಾಟಂಕ[1]ನಾಗಿ
ರ್ಪ ಶಚೀಸಂಯುಕ್ತನಾಗಿರ್ಪಿಭಮನಣೆದು ಬಿಟ್ಟಿಕ್ಕಲೆಂದಿರ್ಪ ವಜ್ರಾಂ
ಕುಶಮಂ ನಾನಾಪ್ರಕಾರಂ ಪೊಳೆಯೆ ಪೊಳಯಿಸುತ್ತಿರ್ಪನಂ ದೇವರಾಜಂ ೬೬

ಮ॥ ಜಗಮಿರ್ಪೇಱಿ[2]ಮದೊಂದುಪುಲ್ಲು ಡಿಸಿಲಂತಳ್ಕಾಡೆ[2] ಕಲ್ಪಾಂತದೊಳ್
ನೆಗೆವೊಂದಗ್ನಿಯೊಳಿಂತಿದೊಂದೆಸಕಮಿಲ್ಲೆಂಬನ್ನೆಗಂ ಪೇಮಮೌ
ಳಿಗಭಸ್ತಿಚ್ಛಲದಿಂ ದೃಢಭ್ರುಕುಟಿರೇಖಾವ್ಯಾಜದಿಂ ಜ್ವಾಲೆಯುಂ
ಪೊಗೆಯುಂ ತಳ್ತಿರೆಗೆವೀ ಶಿಖಾಸ್ತ್ರಕರನೀ ಮೇಷಸ್ಥಿತಂ ಪಾವಕಂ ೬೭

ಮ॥ಸ್ರ॥ ಭ್ರುಕುಟೀಬದ್ಧಾಂಧಕಾರಂ ನಿಜತನುರುಚಿಯಂ ಗೆಲ್ವ ನೇತ್ರಾರುಣಾಂಶು
ಪ್ರಕರಂ ಮಾಣಿಕ್ಯಮೌಳಿದ್ಯುತಿಗೆ ಮಲಿನ ದಂಷ್ಟ್ರಾಸ್ಫುಲಿಂಗೋತ್ಕರಂ ಕೋ
ಪಕೃಶಾನೂಳ್ಕಾಳಿಯಂ ತೂಳ್ದುವ ಮಹಿಷಮನೇಱರ್ಪ ದಂಡಾಯುಧಂಗೊಂ
ಡಕರಾಳಸ್ವಾಂತನುಜ್ಜೃಂಭಿತರಣರಭಸಭ್ರಾಂತನೀತಂ ಕೃತಾಂತಂ ೬೮

ಕುಡುಮಿಂಚೆಂಬಂತು ದಂಷ್ಟ್ರಾವಳಿ ಪೊಳೆಯೆ ಸಿಡಿಲ್ಗೆಂಡಮೆಂಬಂತು ಕಣ್ಗಳ್
ಕಡುಗೆಂಪಂ ತಾಳ್ದೆ ಸಂವರ್ತನಜಲಧರಮೆಂಬಂತು ರೂಪೊಂದಗುರ್ವಂ
ಕುಡೆ ರೌದ್ರಂಬೆತ್ತು ಕಾಯ್ಪೇಱುವ ಸಮರರಸೋದ್ರೇಕದಿಂ ಮುದ್ಗರಾಸ್ತ್ರಂ
ಬಿಡಿದುಗ್ರಾಟೋಪಮಂ ಬೀಱುವ ನರರಥದೊಳ್ ತೋಱುವೀತಂ ನಿಶಾಟಂ ೬೯

ವಿಪುಳಕ್ರೋಧಾನಳೌರ್ವಂ ಭ್ರುಕುಟಿತಿಮಿರವೇಳಾತಮಾಲಂ ಲಲಾಟ
ತ್ರಿಪತಾಕಾವೀಚಿ ರಕ್ತೇಕ್ಷಣರುಚಿಪಟಳೀವಿದ್ರುಮಂ ಸಿರ್ಗಳತ್ಸ್ವೇ
ದಪಯಃಪೂರಂ ವಿಭೂಷಾಮಲಮಣಿಗಣನಾಗಿರ್ದ ತನ್ನೊಳ್ ಸಮುದ್ರಾ
ಧಿಪತಿತ್ವಂ ಸಂದ ಪಾಶಾನ್ವಿತನುರುಮಕರಾರೂಢನೀತಂ ಪ್ರಚೇತಂ ೭೦

ಚಂ॥ ಗಿರಿಕುಲಮಂ ತೆರಳ್ದುಱೆ ಪಾರಿಸುವಬ್ಧಿಯನೊಂದನೊಂದಱತೂಳ್
ಚೆರಸುವ ಧಾರಿಣೀವಲಯಮಂ ಕವಿದಿಕ್ಕುವ ತನ್ನ ಲೋಕಸಂ
ಹರಣದ ವೇಗದಿಂದೆಸೆಯೆ [3]ಚಿತ್ರ[3]ವಿಭೂಷಣನೇತ್ರರಾಗದಿಂ
[4]ಕರತಮವೆತ್ತಿ ಪಲ್ಲವಿಸುವೀ[4] ಮೃಗವಾಹನಿವಂ ಪ್ರಭಂಜನಂ ೭೧

---

[1] ಮಾಲಾಂಕ (ಖ) [2] ಮಸೋಂದೆ ಪುಲ್ಗಿ ದಿ ಸಿಡಿಲ್ದಳ್ಕಾಡೆ (ಖ) [3] ರತ್ನ (ಕಗ) [4] ಕರ ತಲಹೇತಿಪಲ್ಲವಕುಜಂ (ಕಗ)

ರಣರಸಮುಣ್ಮಿದತ್ತು ಕದಪಿಂ ರಣರಾಗಮೆ ಸೂಸಿದತ್ತು ವೀ
ಕ್ಷಣದಿನೆನಲ್ ರಣಪ್ರತಿಘದಿಂ ಕದಪಿಂದೊಗೆತರ್ಪ ಘರ್ಮವಾಃ
ಕಣತತಿ ನೇತ್ರದಿಂ ನೆಗೆವ ರಾಗಮುಗುರ್ವಿಸುವೀ [1]ವಿಳಾಸ ಭೂ
ಷಣ[1]ಮೆನಿಸಿರ್ದ ಪುಷ್ಪಕವಿಮಾನಮನೇಱಿದಪಂ ಧನೇಶ್ವರಂ ೭೨

ಉ|| ದೀಪ್ರತಪಂ ತೃತೀಯನಯನಾರ್ಚಿ ಕಿರೀಟಭುಜಂಗಭೋಗರ
ತ್ನಪ್ರಕರಾರ್ಚಿಯಂತೆ ನಿಟಿಲತ್ರಿಪತಾಕೆ ಕಪತ್ರಿಶೂಲಹೇ
ತಿಪ್ರತಿಬಿಂಬದಂತೆ ತನುದೀಧಿತಿ ರೌದ್ರರಸಾಂಬುರಾಶಿಫೇ
ನಪ್ರಭೆಯಂತೆ ಗುರ್ವಿಸುವ ಶಾಕ್ವರವಾಹನನೀತನೀಶ್ವರಂ ೭೩

ಮ|| ಇನರಾಶಾಧಿಪರೀ ದಿಶಾಧಿಪರೆ ಸೇನಾನಾಯಕರ್ ದೇವದಾ
ನವವಿದ್ಯಾಧರಸಿದ್ಧ ಸಾಧ್ಯಫಣಭೃದ್ಗಂಧರ್ವಯಕ್ಷಾದಿ ವೀ
ರವರರ್ ನೋಡಿಪರಿತ್ತಲೀನೆರೆದು ನಿಂದರ್ ದ್ವಾದಶಾದಿತ್ಯರಿಂ
ತಿವರೇಕಾದಶರುದ್ರರಷ್ಟವಸುಗಳ್ ಮತ್ತಿತ್ತಲೀತೋರ್ಪವರ್ ೭೪

ವ|| ಎಂದು ತೋಱಿ ನಿಜಭುಜಾವಷ್ಟಂಭಮಂ ತೋಱಲೆಂದು ಶಾರ್ಙ್ಗಶರಾಸ
ನಮನೇಱಿಸಿ ನೀವಿ ಜೇವೊಡೆಯೆ

ಮ||ಸ್ರ|| ಪವಿನಿ[2]ರ್ಘೋಷೋಪಮಾನಂ[2] ಪ್ರಳಯಘನಘಟಾಗರ್ಜನಾಭಂ ಮಹಾಭೈ
ರವದುರ್ವಾರಾಟ್ಟಹಾಸಪ್ರತಿನಿಧಿ ಯಮಬಾಹಾಪರಿಸ್ಫಾಲನಪ್ರ
ಖ್ಯವೆನಲ್ ಧೂತಾಹಿಲೋಕಂ ಭ್ರಮದವನಿತಲಂ ಪ್ರೋಚ್ಚಲದ್ವಾರ್ಧಿನಿರ್ಭಿ
ನ್ನವಿರಿಂಚಾಂಡಂ ಪೊದಟ್ಟಿತ್ತಸುರರಿಪುಧನುರ್ದಂಡಚಂಡಪ್ರಣಾದಂ ೭೫

ವ|| ತದನಂತರಂ

ಕಂ|| ಬಲಿರಿಪು ಬಾಣಾವಳಿಯಂ
ಬಲವೈರಿಯ ಬಲದ ಮೇಲೆ ಕಱೆದಂ ಗಗನ
ಸ್ಥಲಿ ಮಸೆವಿಸಿಲಿಂ ಕಣೆಗ
ಟ್ತಿಲೆಯಿಂ ಕೆಂಗರಿಯ ಸಂಜೆಯಿಂ ತೀವುವಿನಂ ೭೬

ಉ|| ಮಾಲೆಗೊಳುತ್ತುಮೊತ್ತರಿಸಿ ಪಾಯ್ವ ಸರಲ್ಗಳಿನುಣ್ಮಿ [3]ವಿಸ್ಫುಲಿಂ
ಗಾಲಿ ಬರಲ್[3] ಸರಲ್ಮೞೆ ಸಿಡಿಲ್ಮೞೆಯುಂ ಗೆಲೆವೆಂದುದೆಂಬಿನಂ
ಶೈಲಧರಂ ಕಱುತ್ತು ಕಱೆಯುತ್ತಿರೆ ಮಾರ್ಗಣವೃಷ್ಟಿಯಂ ಲಯ
ಜ್ವಾಲಶಿಖಾಳಿಯಂತೆ ವಿಶಿಖಾಳಿಗಳುರ್ಚಿದುವಿಂದ್ರಸೇನೆಯಂ ೭೭

[1] ಗಳಾ ವಿಭೂಷಣ (ಕ) ಗಳಾವಿಭೀಷಣಂ (ಗ) [2] ನಿಶ್ಶೇಷೋಪಮಾನಂ (ಖ)
[3] ವಿಸ್ಫುಲಿಂಗಾಳಿಸರಲ್ (ಕಗ) ವಿಸ್ಫುಲಿಂಗಾವಳಿಯಿಂ (ಖ)

ವ|| ಅಂತು ದಾನವಾಂತಕನೆನಿಸುವವರೋಘನಿಶಿತಸಾಯಕಸಂಹತಿಯ ಸಂಹೃತಿ ತ್ರಾಸದಿಂ ವಾಸವಂ ನಿಜಜನನೀಗರ್ಭಾವಾಸಮಂ ಪುಗುವನೆಂಬಂತೆ ಸುಗಿಯೆಯುಂ, ಜಾತವೇದನಪಜಯಜಾತವೇದನನಾಗಿ ಮುಯ್ದೆಗೆಯೆಯುಂ, ಕೀನಾಶಂ ತ್ರಿಲೋಕೀನಾಶ [1]ವಿಂದಕ್ಕುಮೆಂದು[1] ಶಂಕಿಸೆಯುಂ, ದಾನವನದಟಿನುಱುದಾನವನತನಾಗಿ ಬರ್ದುಂಕುವೆ ನೆಂದು ಚಿಂತಿಸೆಯುಂ, [2]ಪ್ರಚೇತಂ ನಿರತಿಶಯಾತಂಕಂ ಪ್ರಚೇತನನಾಗಿ[2] ಸರಿಯೆಯುಂ, ಪವ ಮಾನನಿಂತಪ್ಪವಮಾನಮಾದುದೆಂದು ಮೊಗಂಮುಱುಂಯೆಯುಂ, ಧನದನೀ ಮಹಾ ಯೋಧನದ ಬಾಧೆಗೊಳಗಾದೆನೆಂದೋಡಿ ಪೋಗೆಯುಂ,[3] ಭವನಿಂತಪ್ಪ ಪರಿಭವಂ ದೊರೆ ಕೊಂಡುದೆಂದು ಬೆಱಗಾಗೆಯುಂ, [3]ಅಷ್ಟವಸುಗಳೀ ಸೋಲವತಿಕಷ್ಟವಸುಗಳಂ ಬಿಡುವೆಂ ದೊಳಸಾರೆಯುಂ, ದ್ವಾದಶಭಾನುಗಳ್ ವಿಗತಭಾನುಗಳಾಗಿ ಪೆಱಸಾರೆಯುಂ, ಏಕಾದಶ ಸ್ಥಾಣುಗಳ್ ನಿಂದ ನೆಲೆಯಿಂ ಸ್ಥಾಣುಗಳಂತೆ ಮಿಡುಕದಿರೆಯುಂ, ವಿದ್ಯಾಧರರ [4]ಶಸ್ತ್ರ ವಿದ್ಯಾಧರರಾಗಿ[4] ಶರಣ್ಬುಗಲ್ ಬಗೆದಿರೆಯುಂ, ಸಿದ್ಧರ್ ಸಮರಕೇಳಿಗಪ್ರಸಿದ್ಧರೆನಿಸಿ ಮುಸಂ ದೆಗೆಯೆಯುಂ, ಸಾಧ್ಯರ್ ಹೇಲಾಸಾಧ್ಯರೆನಿಸಿ ಬೆಂಗೊಟ್ಟೋಡೆಯುಂ, ಯಕ್ಷರ್ ಭಗ್ನದಂ ಷ್ಟ್ರಹರ್ಯಕ್ಷರೆನಿಸಿ ಪೊಡಪುಡುಗೆಯುಂ, ಪನ್ನಗರ್ ವಿಧೃತವಿಪನ್ನಗರೆನಿಸಿ ನಡುಗೆಯುಂ, ಗಂಧರ್ವರ ಸಮರಕೇಳಿಗಂಧರ್ವಗೆಗಿಡುವ ತೆಱದಿನುಮ್ಮಳಿಸೆಯುಂ, ವಿಯಚ್ಚರರ್ ನೋಟ್ಪ ನೆರವಿಯಚ್ಚರಿಯಿಂ ಮಿಗೆ ನಗುವಂತು ತಲ್ಲಣಿಸೆಯುಂ, ಕಿಂಪುರುಷರಾವ ಭುಜಬಲದ [5]ಸೊರ್ಕಿಂ[5] ಪುರುಷಸಿಂಹನೊಳ್ ಪೊಣರ್ವೆಮೆಂದು ಬಟ್ಟಿಱಿತಯುಂ, ಕಿನ್ನರರೀ ಕಿನ್ನರ ಕಾಂತಕನೊಳ್ ಸೆಣಸಲೆಂದಟ್ಟುಱಿತಯುಂ, ಅನೇಕಪರಾಜಿಗಳನೇಕಪರಾಜಯಮುಮನೊಳ ಕೊಂಡು ಸುರುಳೆಯುಂ, ವಾಹಸಮಿತಿ ಸಂಸಕ್ತರಕ್ತಪ್ರವಾಹ ಸಮಿತಿಯಾಗಿ ಪೊರಳೆಯುಂ, ಸ್ಯಂದನಂಗಳ್ ಭಯರಸಪ್ರಸ್ಯಂದನಂಗಳಾಗಿ ಸಾಲಿಡೆಯುಂ, ಪದಾತಂ ಮಹಾಪದಾತಂ ಕಮನಾಂತು ಪಡಲಿಡೆಯುಂ, ಅದಂ ನಾರದಂ ಕಂಡು ನೀರದಮಾರ್ಗಮಂಡಲದಿ ನಾಖಂಡಲನಭಿಮುಖಕ್ಕೆ ಬಂದು

ಮ||ಸ್ರ|| ವಿಭವಾರ್ಥಂ ಸ್ವೈಸ್ಯಮಂ ಪಾಲಿಸುವುದು ಸಮರಕ್ಕೇಂ ನೆರಂಬಾರ್ವುದೇ ವೀ
ರಭಟಂ ನೀಂ ಸೇನೆ ಬೆಂಗೊಟ್ಟೊಡೆ ಪೆಱದೆಗೆಯಲ್ ನಿನ್ನ ಶೌರ್ಯಪ್ರಭಾವ
ಕ್ಕಭಿಭಾವಂ ಪುರ್ದುಗುಂ ನಿಶ್ಚಯಮುಮದನಱಿದೀ ನಿನ್ನ ವೇದಂಡಕೋದಂ
ಡಭುಜಾದಂಡಂಗಳಿಂದೊರ್ವನೆ ಗಿರಿಧರನೊಳ್ ಕಾದು ನೀಂ ವಜ್ರಪಾಣೀ ೭೮

ವ|| ಎಂಬುದುಂ ದ್ವಂದ್ವಯುದ್ಧಕ್ಕೆ ಬಗೆದಂದು ನಮುಚಿ ವಿದ್ರಾವಣಂ ರಾವ ಣಾಂತಕನ ಮೇಲ್ಮೈರಾವಣಮಂ ಸಾರ್ಚಿ ನಿಂದ ಪದದೊಳ್ ಸತ್ಯಭಾಮೆ ಸೋಪಹಾಸ ವಚನದಿಂ ಶಚಿಗಿಂತೆಂದಳ್

[1] ಮಿಂದಕ್ಕುಮೆಂದು (ಕಗ) [2] ಪ್ರಚೇತನಂ ನಿರತಿಶಯಾತಂಕಂ ಪಪ್ರಚೇತನನಾಗಿ (ಕಗ) [3] ಶೂಲಧರನೀ ಕಾಳಗದ ಲೀಲೆಗವ ಲೀಲೆಯೊಮು ಬೆಱಗುವಡೆಯೆಯು ೦ (ಖ) [4] ಅಸ್ತ್ರವಿದ್ಯಾಧರ ರಾಗಿ (ಗ) [5] ಸೋಂಕಿಂ (ಕಖ)

ಕಂ॥ ಕುಲಗೋತ್ರವೈರಿಯುಂ ಬಲ
ದಲನನುಮೆಂದಮರಪತಿಯನೊಲ್ಲದೆ ಪೋದರ್
ಕುಲಗೋತ್ರವೀರಭಟರುಂ
ಬಲನಾಥರುಮುಂತುಮಮರರೇನೋಡುವರೇ ೭೯

ನಿನಗುಳ್ಳುದಂ ನಿಳಿಂಪಾ
ವನಿಜಮನೆನಗಿತ್ತೆ ನೀನಿದಲ್ತು ವಿಚಿತ್ರಂ
ತನಗಿಲ್ಲದ ಪರಿಭವಮಂ
ದನುಜಾರಿ ಬಲಾರಿಗಿತ್ತನೆನಗಿದು ಚಿತ್ರಂ ೮೦

ವ॥ ಎನೆ ಕೇಳ್ದು ಕಟ್ಟೇವಮುಂ ನೋವುಮಳವಿಗೞಿಯೆ ಶಚಿಯಿಂತೆಂದಳ್

ಕಂ॥ ರಥಚರಣಪಾಣಿ ಬಲಮಂ
ಮಥಿಯಿಸೆ ಜಂಭಾರಿಗಾಯ್ತು ಗೀರ್ವಾಣಹತಿ
ವ್ಯಥೆ [1]ನೀಂ ಗೀರ್ವಾಣಹತಿ[1]
ವ್ಯಥೆಯಂ ಮತ್ತೇಕೆ ತಂಗಿ ಪಡೆದಪೆಯೆನಗಂ ೮೧

ಮ॥ ದಿವಿಜರ್ ಸೋಲೆ ಸುರದ್ರುಮಂ ನಿನಗೆ ಸಾರ್ದತ್ತೆಂದು ಬೇೞ್ಕೊಂದು ರೂ
ಪವಿಲಾಸಂ ಪೆೞ್ತೊಂದು ದೇಸಿ ಪೊಸತೊಂದುನ್ಮಾದಮಾಗಿರ್ಪ ದ
ರ್ಪವಿದೇಂ ಪಿಂಗಿತೆ ಯುದ್ಧವಿಂದ್ರತರು [2]ಕೈಸಾರ್ದತ್ತೆ[2] ಮೇಣ್ ಕಾಣಲ
ಕ್ಕುಮುಪೇಂದ್ರೇಂದ್ರರೊಳೀಗಳಿಕ್ಕತುಳದಿಂದಂ ಗೆಲ್ಲಸೋಲಂಗಳಂ ೮೨

ವ॥ ಎನಲತಿಚತುರೆ ಸತ್ಯಭಾಮೆಯಿಂತೆಂದಳ್

ಉ॥ [3]ಭಂಗಮೊಡರ್ಚೆ[3] ನಿನ್ನ ವಚನಂ ನಿನಗಕ್ಕ ವಿರೋಧಿಯಾದುದೇ
ಕಾಂಗದೆ ಕಾದೆ ನೋಡುವೆವುಪೇಂದ್ರಮಹೇಂದ್ರರೊಳಪ್ಪ ಗೆಲ್ಲಸೋ
ಲಂಗಳ[4]ನೆಂಬೆಯೋಜೆಯಿ[4]ನುಪೇಂದ್ರನೊಳಾದುದು ಗೆಲ್ಲವಿಂದ್ರನೊಳ್
ಸಂಗಳಿಸಿತ್ತು [5]ಸೋಲವಱಿದಂತುಟೆ[5] ಕಾಳೆಗಮೀ ಮಹೇಂದ್ರನಾ ೮೩

ವ॥ ಎನೆ ತದೀಯ ಚತುರೋಕ್ತಿಗತಿಕುಪಿತೆಯಾಗಿ

---

[1] ಯಿಾಗೀರ್ವಾಣಾರ್ದಿ (ಕಗ) [2] ಕೈಸಾರ್ದಲ್ಲಿ (ಖ) [3] ಭಂಗಮೊಡರ್ಚೆ (ಕಗ) [4] ನೆಂಬ ಯಾದಯಿ (ಕಗ) [5] ಸೋಲದರಿವಂತುಟೆ (ಕಗ)

ಮ॥ಸ್ರ॥ ಸಿಡಿಲೆಸ್ನೋಪಂಗೆ ಶಸ್ತ್ರಂ ಮರದ ಗದೆ ಗಡಂ ನಿನ್ನ ಕಾಂತಂಗೆ ಕಾಯ್ಪಿಂ
ಗೆಡೆಗೊಂಡೈರಾವತೇಭಂ ಮದಧಿಪತಿಗೆ ವಾಹಂ ತ್ವದೀಶಂಗೆ ಗೃಧ್ರಂ
ಗಡ ದೇವೇಂದ್ರತ್ವ[1]ಮೀ ಮತ್ಪತಿಗೆ[1] ಪದವಿ ಗೋಪಾಲಕತ್ವಂ ಗಡಂ ನಿ
ನ್ನೊಡೆಯಂಗಿನ್ನೇತಜಃಖೊಳ್ ಮತ್ಪತಿಗೆ ದೊರೆ ಭವದ್ವಲ್ಲಭಂ ಸತ್ಯಭಾಮೇ ೮೪

ವ॥ ಎಂದು ಪೌಲೋಮಿ ನುಡಿಯಲಾ ನುಡಿಯನನುಕ್ರಮದಿಂ ನಿರಾಕರಿಸ
ಲೆಂದು

ಕಂ॥ ಅಸುರಯುಮದಂಡವೆನಲು
ಮಿಸುವ ಮಹಾಗದೆಯನಿಱಿಸಿ ವಜ್ರಮನಭಿವ
ರ್ಣಿಸಿದಪೆ ಕೇವಣದೊಳ್ ಕೀ
ಲಿಸಲಲ್ಲದೆ ವಜ್ರಮಂತದೇನಾಯುಧಮೇ ೮೫

ನಾಗಾಂತಕನೀ ಗರುಡಂ
ನಾಗನದೈರಾವತಂ ಪರಾಜಿತಮಂತಾ
ನಾಗೇಂದ್ರನದಂ [2]ಬಣ್ಣಿಸಿ[2]
ನಾಗಾರಿಯನಕಟ ಗೃಧ್ರನೆಂದೇಱುಪುದೇ ೮೬

ಮ॥ ನುಡಿದಿರ್ ನಿಂದಿಸಿ ಗೋಪನೆಂದು ಹರಿಯಂ ಗೋಪತ್ವಮುಂಟೆಂತದೆಂ
ದೊಡೆ ಗೋವಾಚಕಮಪ್ಪ ನಾಕಮಹಿಮುಖ್ಯಾನೇಕವಸ್ತೂತ್ಕರ
ಕ್ಕೊಡೆಯಂ ಮತ್ಪ್ರಿಯನಿಂತು ನಿಮ್ಮ ನುಡಿ ನಿಂದಾಸ್ತೋತ್ರಮಾಯ್ತಕ್ಕ ಕೇ
ಳ್ವೊಡೆ ಮತ್ಕಾಂತಕೃತಪ್ರಸಾದಮೆ ವಲಂ ತ್ವತ್ಕಾಂತನಿಂದ್ರತ್ವಮುಂ ೮೭

ವ॥ ಎಂದು ಸತ್ರಾಜಿತ್ತನೂಜೆ ನುಡಿಯೆ ಪೌಲೋಮಿ ಕನಲ್ದು

ಕಂ॥ ಒಂದು ನಿಟಿಲಾಕ್ಷಿ ಮಿಗಿಲುಂ
ಟೆಂದು ಹರಂ ತಾಳ್ದಿದಂ ಸ್ವಯಂಪ್ರಭುತೆಯನೆಂ
ದೆಂದು ಸಹಸ್ರವಿಲೋಚನ
ದಿಂದೆಸೆವಿಂದ್ರಂ [3]ಹರಿ[3]ಪ್ರಸಾದಸ್ಪೃಹನೇ ೮೮

ವ॥ ಎನೆ ಸತ್ರಾಜಿತಿ ಮುಗುಳ್ನಗೆನಕ್ಕು

1 ಮಸ್ಮತ್ಪತಿಗೆ (ಮೊಅ) 2 ಬಣ್ಣಿಸಿ (ಶ) 3 ಪರ (ಖ)

ಮ॥ ಉಸಿರಲ್ಬೇಡಿದನಕ್ಕ ಕೇಳ್ದಱುವೆನಿಂದ್ರಂಗೆಮ್ಮ ಭಾವಂಗೆ ನೇ
ತ್ರಸಹಸ್ರಂ ದೊರೆಕೊಂಡ ದುಸ್ಸ್ಥಿತಿಯುಮಾ ಹಾಸ್ಯೋಕ್ತಿಯುಂತಿರ್ಕೆ ರಂ
ಜಿಸುಗುಂ ಕಣ್ ಪಲವೆಂಬೊಡೀಯುಪಮವಂ ಹೀನಾಧಿಕಂ ಲೇಸೆ ಮಾ
ಣ ಸದಾಳಾಪಮನಣ್ಮಿ ಕಾದುಗೆ ಸಹಸ್ರಾಕ್ಷಂ ಸರೋಜಾಕ್ಷನೊಳ್ ೮೯

ವ॥ ಎಂದು ನುಡಿಯೆ ತತ್ಸಂವಾದದೊಳ್ ಸತ್ಯಭಾಮೆಯಿಂ ಶಚೀದೇವಿಗಾದ ವಾಕ್ಪರಾಜಯಮುಮಂ ವಸುದೇವಸುತನಿಂ ತನಗಾದ ರಣಪರಾಜಯಮುಮಂ ತನಗತಿ[1]ಕ್ಷೋಭಮಂ ಪಡೆಯೆ[1]

ಮ॥ ಗುಣಟಂಕಾರನಿನಾದವಾತ್ಮಗಳ ಹೂಂಕಾರಸ್ವನಂ ಲೋಲಕಂ
ಕಣಝಂಕಾರರವಂ ವಿಮುಕ್ತತರಭೀಂಕಾರಸ್ವರಂ ಕೇಳಲಾ
ಯ್ತಣಕಂ ನೋಡಿರೆ ಕಾಣಬಾರದಿವಸಸ್ತ್ರಾದಾನಸಂಧಾನಮೋ
ಕ್ಷಣವೇಗಂಗಳೆನಲ್ ಬಲಾರಿ ಕಱೆದಂ ಬಾಣೋತ್ಕರಾಸಾರಮಂ ೯೦

ಕಂ॥ ಪೀತಾಂಬರಧರನಂ ಪುರು
ಹೂತಶಿಲೀಮುಖನಿಕಾಯಮೆಱಗಿದುದಿನಿಸುಂ
ಪೂತ ನವಕರ್ಣಿಕಾರಕು
ಜಾತದೊಳೆಱಗುವ ಶಿಲೀಮುಖಾಳಿಯ ತೆಱದಿಂ ೯೧

ಹರಿಯುಂ ಪ್ರತಾಪನಿಧಿಯುಂ
ಶರಸಂಕುಲವೆಱಗಿಯುಂ ನಿರರ್ಥಕವಾದ
ತ್ತುರಿವರಿವ ದಾನಶಿಖಿಯೊಳ್
ಪರಿತಂದೆಱಗುವ ಪತಂಗವಿತತಿಯ ತೆಱದಿಂ ೯೨

ವ॥ ಆ ಸಮಯದೊಳ್

ಕಂ॥ ಪೊಲಗಿಡೆ ಸಹಸ್ರನೇತ್ರಂ
ಸಲೆ ನಿಲೆ ಕಣೆ ಕಣೆಯನೊರಸಿ ಗಱಿ ಗಱಿಯುಂ ತೆ
ಕ್ಕಲಗಲಗನೊರಸಿ ಪಾಯ್ತರೆ
ಜಲಜಾಕ್ಷಂ ಲಕ್ಕಲೆಕ್ಕದಿಷುಗಳನೆಚ್ಚಂ ೯೩

ವ॥ ಅಂತು ವಿಷ್ಣುಜಿಷ್ಣುಗಳ್ ಪರಸ್ಪರಂ ಶರವರ್ಷಮಂ ಕಱೆಯೆ

[1] ಕ್ಷೋಭಮಾಗೆ (ಕಗ)

ಕಂ॥ ಒಂದೊಂದಂ ಮಾರ್ತಾಗಿದು
ವೊಂದೊಂದಂ ಮೊನೆಯ ಕಿಚ್ಚಿನಿಂದುರುಪಿದುವೊಂ
ದೊಂದಂ ಕಡಿದಿಕ್ಕಿದುವೊಂ
ದೊಂದಂ [1]ಪಿಳ್ಕಿಂಡೆ[1] ಸೀಳ್ದುವಂಬಂಬರದೊಳ್ ೯೪

ಮ॥ ನರನೀವಜ್ರಿಯ ಸೂನುವಾದ[2]ನಿತಱಂ[2] ಬಿಲ್ಬಲ್ಮೆಯಿಂ ಲೋಕದೊಳ್
ಪಿರಿಯಂ ತಾನೆನೆ ವಜ್ರಿಗಾವನೊ ಸಮಂ ಬಿಲ್ಬಲ್ಮೆಯಿಂದೆಂಬಿನಂ
ಶರದಿಂದಂ ಶರಮಂ ನಿವಾರಿಸಿ ಮಹಾಸ್ತ್ರಕ್ಕೆಚ್ಚು ದಿವ್ಯಾಸ್ತ್ರಮಂ
ಹರಿಶೌರ್ಯಂ ಹರಿ ತೋಱಿದಂ ಹರಿಯ ಸಾಮರ್ಥ್ಯಕ್ಕೆ ಸಾಮರ್ಥ್ಯಮಂ ೯೫

ಅರಿದಲ್ತಂದಿನ ರಾವಣಪ್ರಮುಖದೈತ್ಯಾಧೀಶರಂ ಗೆಲ್ದುದೀ
ಸುರಚಕ್ರೇಶನನಾಂತು ಗೆಲ್ವುದರಿದೆಂದಾಗಳ್ ಜಯಪ್ರಾಪ್ತಿಯೊಳ್
ಹರಿಗಂ ಸಂಶಯಬುದ್ಧಿಯಾದುದೆನೆ ಬೇಱತ್ತೆ ವೀಕ್ಷಿಸಲ್ ಬೇಱತ್ತೆ ಬಿ
ತ್ತರಿಸಲ್ ಬೇಱಭಿವರ್ಣಿಸಲ್ ಪವಣೆ ಬಾಹಾವಿಕ್ರಮಂ ಶಕ್ರನಾ ೯೬

ವ॥ ಆಗಳಾ ಸುಪರ್ವರಾಜಂ ಸುಪರ್ವಮೆನಿಸಿದ ಪರ್ವತಾಸ್ತ್ರಮಂ ತೊಟ್ಟು ತೊಟ್ಟನಿಸೆ

ಕಂ॥ ತಂಡದಿನಲಗಿನ ಮೊನೆಯೊಳ್
ಖಂಡಿತಮದ್ರಿಗಳನುಗುಳ್ವ ಪರ್ವತಶರಮಂ
ಖಂಡಿಸಿದನಕಾಂಡತಟಿ
ತ್ಕಾಂಡಾಭಪವಿಪ್ರಕಾಂಡಕಾಂಡದೆ ಕೃಷ್ಣಂ ೯೭

ವ॥ ತದನಂತರಂ

ಕಂ॥ ಶಿಖಿಯುಂ ಧೂಮಮುಮಲಗಿನ
ಮುಖದೊಳ್ ಪೊಱಮಡುವಿನಂ ಶತಕ್ರತು ತೊಟ್ಟಂ
ಶಿಖಿಬರ್ಹವಸನಯುತನಂ
ಶಿಖಿನಾಮ[3]ಗ್ರಹಸಮುಗ್ರಮಂ[3] ಶಿಖಿಶರಮಂ ೯೮

ವ॥ ಆ ಮಹಾಮಾರ್ಗಣಕ್ಕೆ

---

[1] ಪಿಳ್ಕಿಂಗೆ (ಖ) [2] ನಿದಱಂ (ಖ) [3] ಗ್ರಸನನೋಗ್ರಮಂ (ಕಗ) ಗ್ರಸನಸೋಗ್ರಮಂ (ಮೊಲ)

ತಾರಾಚಳನಂ ಜನಿಯಿಸೆ
ತಾರಾಚಳದೊಡನೆ ರೋಹಣಂ ಪೋರ್ದುದೆನಲ್
ವಾರಣದೊಡನೆ ಖಗಪ್ರಭು
ವಾರಣದೊಳ್ ಪೋರ್ದು ಚಿತ್ರವಿಧದಿಂ ಪೊಣರ್ದಂ ೧೧೦

ಮ॥ಸ್ರ॥ ಅತಿವಾತಾಘಾತದಿಂ ಬೆಳ್ಮುಗಿಲೆ ನೆಲಕೆ ಬಿದ್ದತ್ತೆನಲ್ ತಾರ್ಕ್ಷ್ಯಪಕ್ಷಾ
ಹತಿಯಿಂದೈರಾವತಂ ತೊಟ್ಟನೆ [1]ತೊಳೆ ದಿವದಿಂ[1] ಪಾರಿಯಾತ್ರಾದ್ರಿಯೊಳ್ ಬೀ
ಟಿತ್ತು ತದೀಯಾನುಪ್ರಯಾತಂ ಗರುಡನೆಱಗಲಂತಲ್ಲಿ ಸಂಗ್ರಾಮಭಂಗಾ
ನ್ವಿತನಾಗಿರ್ದಿಂದ್ರನಂ ನೋಡುತೆ ರಣದೊಳುಪೇಂದ್ರಂ ಸಕಾರುಣ್ಯನಾದಂ ೧೧೧

ಇದು ಸಮಸ್ತಕಮಳಭವಾಂಡಮಾಲಾಘಟೀಘಟಿತಾರಘಟ್ಟಘಟನಾಸ್ವತಂತ್ರ
ನಿಜಸ್ವರೂಪ ನಿರೂಪಣಚಕಿತ ಸಕಲಾಮ್ನಾಯತಂತ್ರಲಕ್ಷ್ಮೀಕಾಂತ
ಶ್ರೀಪಾದಭಕ್ತಿಯುಕ್ತ ಸುಕವೀಂದ್ರರುದ್ರಪ್ರಣೀತ ಶ್ರೀಜಗನ್ನಾಥ
ವಿಜಯಮಹಾಪ್ರಬಂಧದೊಳ್ ಪಾರಿಜಾತಾಹರಣ ಸತ್ಯ
ಭಾಮಾಪೌಲೋಮೀಸೋಪಹಾಸವಚನ
ಸುರೇಶ್ವರಾಪಜಯವರ್ಣನಂ
ತ್ರಯೋದಶಾಶ್ವಾಸಂ

1 ಕೊಟಿತದಿವದಿಂ (ಕಗ)

ಚತುರ್ದಶಾಶ್ವಾಸಂ

ಕಂ॥ ಶ್ರೀದಸಖಂ ಪುರರಿಪು ಬಿ
ಲ್ವೋದಕಪತಿನಾಮನಲ್ಲಿ ಸನ್ನಿದನಾಗಿ
ರ್ದಾ ದೇವೇಂದ್ರನ ಪರಿಭವ
ಖೇದವನಾಱಿಸಿ ಬೞಿಕ್ಕುಪೇಂದ್ರಂಗೆಂದಂ ೧

ನೆಱಪಲ್ ಪೂಣ್ಕೆಯನಮರರೊ
ಳಱುವುದಿದೇಗಣಿದಮಮರಹಿತನಚ್ಯುತ ನೀ
ನಿಱುವುದನುಚಿತವದರ್ಕಾ
ನಱುಪುವೆನೊಂದಮರಹಿತಮನೆನ್ನಭಿಮತಮಂ ೨

ವ॥ ಅಂತದಾವುದೆನೆ, ಕೃತಯುಗಾಂತರಾಳದೊಳ್ ಮಯವಿದ್ಯುನ್ಮಾಲಿ ತಾರಕಾಕ್ಷ ದಾನವರ್ ದುರಾಸದಮುಮಂತರಿಕ್ಷಚಾರಿಯುಂ ಸಂಚಾರವೇಗ ದುರ್ಲಕ್ಷ್ಯಮುಮೆನಿಸಿದಾ ತ್ರಿಪುರಮಂ ಜಗನ್ಮಯರಥಾರೂಢನಾಗಿ ನಾಗರಾಜಜ್ಯಾಲತಾರೋಪಿತ ಮೇರುಚಾಪದಿಂ ಪಾಶುಪತಾಸ್ತ್ರಮಂ ಪ್ರಯೋಗಿಸಿ ನಿಟಲೇಕ್ಷಣಾಶುಶುಕ್ಷಣಿಯಿಂದಮಂ[1]ದಾನುರುಪೆ[1]ದಗ್ಧಶೇಷದಾನವರ್ ಬೞಿಕ್ಕೆ ನಿರ್ಬಂಧದಿಂ ದಿವ್ಯಸಹಸ್ರವರ್ಷಮುಗ್ರೋಗ್ರತಪಮಂ ಮಾಡಿ ತಾವೆನಗಸಾಧ್ಯರುಂ ಮುನ್ನಿನಿಂ ದ್ವಿಗುಣ ಸಾಹಸರುಂ ದ್ವಿಗುಣಸೈನ್ಯರುಂ ದ್ವಿಗುಣದೋರ್ವಳಚತುರ್ವಳರುಮಪ್ಪಂತು ಪಿತಾಮಹನಿಂ ಮಹಾವರಂಗಳಂ ಪಡೆದು ಮುನ್ನಂತರಿಕ್ಷಚರ ತ್ರಿಪುರವಾಸಿಗಳೀಗಳ್ ಭೂವಿವರಗತಷಟ್ಪುರನಿವಾಸಿಗಳಾಗಿರ್ದರ್. ಅವಂದಿರಂ ನಿಕುಂಭದಾನವೇಶ್ವರಪುರಸ್ಸರಂ ಕ್ಷಯಮನೈದಿಸಿ ಯಮಪುರಮಂ ಪುಗುವಂತೆಮಾಡಿ ಷಟ್ಪುರವನಮೋಘಬಾಣೌಘವಹ್ನಿಯಿಂದುರುಪಿ ನಿನ್ನದೊಂದಭಿನವವಿಜಯಕೀರ್ತಿಯಂ ಕೈಕೊಳ್ವುದೆಂದು ಕಾಳಕೂಟಧರಂ ಪೇೞೆ ಮಾನವಜನ್ಮನಾಟಕಧರಂ ಕೈಟಭಾಂತಕನಂತೆಗೆಯ್ವೆನೆಂದಾ ಬಿಲ್ವೋದಕೇಶ್ವರಂಗೆ ಪೊಡವಟ್ಟಾ ಪ್ರದೇಶದಿಂ ತಳರ್ದು ಗರುಡವಾಹನಂ ಶರದಂಬುವಾಹಸುಭಗನಭೋವೀಧಿಯಿಂ ದ್ವಾರಾವತಿಗೆಟ್ಟಿಂದು

---

[1] ಅನುರುಪಿದ (ಕಗ)

ಮ||ಸ್ರ|| ತಳಿಯುತ್ತುಂ [1]ಪೌರನಾರೀಜನದ ವಿಮಲ[1] ಶೇಷಾಕ್ಷತಾನೀಕಮಂ ಕೈ
ಕೊಳುತುಂ ಬಂಧುಪ್ರಜಾಶೀರ್ವಚನನಿಚಯಮಂ ಕೇಳುತುಂ ತೂರ್ಯಘೋಷಂ
ಗಳನೊಲ್ದಾಲೋಕಿಸುತ್ತುಂ ಪುರದ ಸಿರಿಯನಂತಃಪುರಸ್ತ್ರೀಯರಂ ಮಂ
ಗಳವಸ್ತುಸ್ತೋಮದಿಂ ರಂಜಿಸುವರಮನೆಯಂ ಪೊಕ್ಕನುತ್ಸಾಹದಿಂದಂ ೩

ವ|| ಅಂತು ಪೊಕ್ಕು ಸುಖಸಂಕಥಾವಿನೋದದಿಂದಿರೆ ಶರತ್ಸಮಯಾನಂತರಂ

ಚಂ|| [2]ಅಣಿಮುರವಾಡಿ ಮೂಡಗಡಲೊಳ್[2] ತೆರೆಮಾಲೆಯನೆತ್ತಿ ದೇವವಾ
ರಣಕರಶೀಕರೋತ್ಕರಮನಾಂತು ಶಚೀರಮಣಾಭಿಷೇಕವಾಃ
ಕಣನಿಕುರುಂಬಮಂ ತಳಿದು ಬಂದೆಸಗಿತ್ತತಿಶೈತ್ಯಕಾರಣಂ
ಪ್ರಣಯ[3]ವಿಮುಕ್ತ[3] ವಲ್ಲಭವಿದಾರಣವಿಂದ್ರದಿಶಾಸಮೀರಣಂ ೪

ಹಿಮಮನಲರ್ಚಿ ತೀಡೆ ಪವನಂ ವನಮಾಲೆಗೆ ಪೋಯ್ತು ವಿಭ್ರಮಂ
ಭ್ರಮರನಿಷೇವ್ಯಮಾಯ್ತು ಕುಮುದಂ ಮುದಮಂ ಪಡೆದತ್ತು ಪಣ್ತ ಕ
ರ್ಬಮೃತರಸಾವಿಳಂ ವಿಳಯಮೆಯ್ದಿದುದಬ್ಜವನಾ ನಾಳಿಕೇ
ರಮನವಳಂಬಿಸಿರ್ದುವು [4]ಫಲಂ[4] ರಸಪೂರಿತಮಾಗಿ ಮಾಗಿಯೊಳ್ ೫

ಉ|| ಬಿಟ್ಟು ಸರೋಜಮಂ ಕುವಲಯಕ್ಕಡಿಯಿಟ್ಟುದು ತುಂಬಿ ಜಾತಿ ಕಂ
ಪಿಟ್ಟುದು ದಿಕ್ತಟಂಗಳನಶೇಷನದೀನದನಿರ್ಝರಾಂಬು ರೂ
ಪಿಟ್ಟುದು ಚಂದ್ರಕಾಂತಹಿಮವಾರಿಗೆ ಚಿಂತಿಸಿ ಜಕ್ಕವಕ್ಕಿ ಸಾ
ಲಿಟ್ಟುದು ಕಣ್ಣನೀರನೆನೆ ಮಾಗಿ ಬರಲ್ ಮೊದಲಿಟ್ಟುದೆಂಬಿನಂ ೬

ಚಂ|| [5]ಜಲಜಲನೊಟ್ಟುಕಿರ್ದುದು[5] ನದೀತತಿ ಲೋಧ್ರಲತಾಂತಸೌರಭ
ಕ್ಕಲವರಿಸಿತ್ತು ಮತ್ತಮಧುಪಾಳಿ ರತಿಪ್ರಿಯನಂ ಪ್ರಿಯಂಗು ತ
ನ್ನಲರ್ಗಣೆಯಿಂ ಜಗತ್ತ್ರಯಮುಮಂ ಗೆಲಿಸಿತ್ತೆಳೆವೆಣ್ಣ ಮೆಯ್ಯಕೋ
ಮಲನಖರೇಖೆಯಂತಿರೆರೆಗೆಯ್ದ ಳೊಳಾದುವು ಕೂಡೆ ಬೀಡೆಗಳ್ ೭

ಕಂ|| ಹಿಮವರ್ಷಬಿಂದುಗಳ್ ಸಂ
ಕ್ರಮಿಸಿರೆ ವನತರುನಿಕಾಯದೊಳ್ ನವಮುಕುಳೌ
ಘಮನಾಂತ [6]ಸುರಭಿಜಾತಂ[6]
ಭ್ರಮರಾಳಿಗೆ ಪರಿಮಳಾನುಮಿತಮಾಯ್ತೆತ್ತಂ ೮

---

[1] ವಾರನಾರೀಜನದ ತಳಿವ (ಖ) [2] ಅಣಿಯರವಾಗಿ ಮೂಡಗಡಲಿಂ (ಖ) [3] ವಿಯುಕ್ತ (ಖ) [4] ರಸಂ (ಗ) [5] ಜಲಜಲನುರ್ಕುತಿರ್ದುದು (ಕಖಗ) [6] ಸುರಭಿವಾತಂ (ಕಗ) ಸುರಭಿವ್ರಾತಂ (ಖ)

ಚಂ॥ ತಳೆದ ಸುವರ್ಣಭೂಷಣದ [1]ಪೂಸಿದ ಕುಂಕುಮದಿಟ್ಟ[1] ರೋಚನಾ
ತಿಳಕದ ರಾಗದಿಂ ಮದನರಾಗಮೆ ಮೂರ್ತಿಯನಾಂತವೊಲ್ ಮನಂ
ಗೊಳಿಪೆಳವೆಂಡಿರಂಗಣದ ಹೇಮವಿತರ್ದಿಯೊಳಿರ್ದು ಕಾದರಂ
ದೆಳವಿಸಿಲಂ ಮನಂಬಯಸಿ ಕಾಯೆ ವಿಟಪ್ರಕರಕ್ಕೆ ಮನ್ಮಥಂ ೯

ತಳರ್ದು ಕುಳಾಯದಿಂ ಬಿದಿರ್ದೆಱಂಕೆಯ ನೀರ್ವನಿಯಂ ತೆರಳ್ದ ತು
ಪ್ಪುಳನೊನೆದಂಟೆ ಚಂಚುಪುಟದಿಂ ಬಿಸಿಲತ್ತಿದಿರಾಗಿ ನಿಂದು ಕ
ಣ್ಗಳನರೆಮುಚ್ಚಿ ತೋದ ಗಱಯಂ ನಸುಜೋಲಿಸಿ ಪಕ್ಕಿಗಳ್ ಮರಂ
ಗಳ ತುದಿಗೋಡ ಮೇಲೆ ದನಿಗೆಯ್ಯುತುಮಿರ್ದುವು [2]ಮುಂಬಗಲ್ವರಲ್[2] ೧೦

ಕಂ॥ ಪಲ್ಗಿರಿದು ಪುರ್ಬನುರ್ಬಿ ಬೆ
ರಲ್ಗೊನೆಯಿಂ ತುರಿಸಿ ಬಱಯ ಸೀರ್ದುಪ್ಪುಟಿ ಬಂ
ಬಲ್ಗಳನುಗುರಿಂ ಪಿಕ್ಕಿ ಬಿ
ಸಿಲ್ಗಾದುದದೊಂದು ಮರದ ಕೋಡೊಳ್ ಕೋಡಂ ೧೧

ಪೊಱಮಟ್ಟು ತೊಱತಯ ನಡುವಣ
ಕುಱುವಂಗಳ ಕೆಲದೊಳಿರ್ದು ಕಾದುವು ಬಿಸಿಲಂ
ಮಱಗಳ್ ಪಕ್ಕಂಬಿಡದೆಡೆ
ಗಿಱದಿರೆ ಕುಂಭೀರಕಮಕರಕರ್ಕಟಕಂಗಳ್ ೧೨

ಮ॥ಸ್ರ॥ ಎಸೆವಿಂದ್ರಾಶಾಸಮೀರಂ ತೊಲಗಿಸೆ ಕೆಲಸಾರ್ದಂತಿರತ್ಯಂತಶೀತ
ಪ್ರಸರಕ್ಕಳ್ಳಿಕ್ಕಿ ಮೇಣಗ್ನಿಯ ದೆಸೆಗೆಳಸಿರ್ದಂತಿರಾಶ್ಚರ್ಯಮಂ ಪು
ಟ್ಟಿಸುತುಂ ತೆಂಕಣ್ಗೆ ಸಾರ್ದರ್ಕನ ಬಿಸುಗದಿರ್ಗಳ್ ಮಾಗಿಯೊಳ್ ತಣ್ಪನಾಳ್ದಲ್
ಬಿಸಿಲಂ ಬೆಳ್ದಿಂಗಳೆಂದೀಕ್ಷಿಸುವುದು ತರಳೋತ್ತಾನತಾರಂ ಚಕೋರಂ ೧೩

ಮ॥ ಇದಿರೊಳ್ ನಿಂದೆಡೆಗಾಲೊಳಿಟ್ಟು ಮಱಯಂ ನಿಶ್ಚೇಷ್ಟೆಯಿಂ ಮೇಪುಗೊ
ಳ್ಳದೆ ಕಣ್ಮುಚ್ಚಿ ಹಿಮಾನಿಯಿಂ ನಡುಗುತಿರ್ಪಾ ಪುಲ್ಲೆಯಂ ಕಂಡಿಸಲ್
ಪದನೆಂದೇಟಿಲೊಡರ್ಚಿಯುಂ ನಿಜವಪುಸ್ಸಂಕೋಚದಿಂ ಬಿರ್ಚಲಾ
ಱದೆ ಪಟ್ಟಿರ್ದುದು ಕೂಡೆ ಬೇಡವಡೆ ದೇಹಸ್ತಂಭವಾದಂದದಿಂ ೧೪

---

[1] ಸೂಸಿದ ಕುಂಕುಮವಿಟ್ಟ (ಕ) ಪೂಸಿದ ಕುಂಕುಮವಿಟ್ಟ (ಖಗ) [2] ಮುಂಬಗಲ್ವರಂ (ಕ)

ಕಂ|| ಮಱಿಗಳನಿಱುಂಕಿ ನೋಹದಿ
ನೆಱೆತಂಕೆಯಿಂ ಗೂಡುಗೊಂಡು ಗೂಡಿನೊಳಿರದೇ
ನೊಱಗಿರ್ದುದೊ ಕೂಗದೆ ಕ
ಣ್ದೆಱೆಯದೆ ಕುಕ್ಕುಟಕುಟುಂಬಿನೀನಿಕುರುಂಬಂ ೧೫

ಬೆಳೆದುದು ಹಿಮವರ್ಷದೆ [1]ರಾ
ತ್ರಿಳತೆಯೆನಲ್[1] ಬಳೆದುವಿರುಳ್ಗಳೊಳ್ ಸುರತಂಗಳ್
ಬಳೆದುವು ದಂಪತಿಶತದೊಳ್
ಬಳೆವಿನೆಗಂ ಮದನನಾಜ್ಞೆಯುಂ ಭುಜಬಲಮುಂ ೧೬

ಚಂ|| ಒದವೆ ರಸಂ ಮನಾಮಳಕಸಂತತಿ ಕೋಮಳವಾದುದೆತ್ತಲುಂ
ಬದರಫಲಾಳಿ [2]ಪಣ್ತುಧರವಾದುದು[2] ಕಂಜವನಾಳಿ ನಂಜು ಮು
ಟ್ಟಿದ ತೆಱನಾದುದುತ್ಪಲಕದಂಬಕ[3]ವಂಬಕ ಹರ್ಷ[3]ಕಾರಿಯಾ
ದುದು ಹಿಮಕಾಲಮೀಗ ಶಿಶಿರಾಗಮವಾದ ಬೆಡಂಗಿದೆಂಬಿನಂ ೧೭

ರವಿರುಚಿಯಂ ಹಿಮಾಂಶುರುಚಿಯೆಂದು ಚಕೋರಚಯಂಗಳೀಂಟುತಿ
ರ್ಪುವು ಬಡಬಾಗ್ನಿಯಂ ಪವಳವೆಂದಿರದಂಬುಚರಂಗಳೊಂದಿ ನಿ
ಲ್ಪುವು ಹರಭಾಳಲೋಚನಮನಂಗಜನೀಕ್ಷಿಸಿ ರಕ್ತಚಂದನ
ದ್ರವದ ಲಲಾಮವೆಂದಿೞಿಪನೇವೊಗೞ್ವಂ ಶಿಶಿರಪ್ರಭಾವಮಂ ೧೮

ಇನಿಸುಗುರ್ವೆಚ್ಚನಪ್ಪುಣಿಸು ಕುಂಕುಮದಣ್ಕೆ ಕದಂಬದಂಬುಲಂ
ಕನಕವಿಭೂಷಣಾಳಿ ಪೊಸಜಾದಿಯ ಪೂ ದವಳಾರವಟ್ಕಿಱಿಂ
ಜನಿಯಿಸಲಂಜೆವಾಸುಗಳೊಳೋಪಳ ಪೆರ್ಮೊಲೆವೆಂಕೆಯಿಂದದೇಂ
ತನತನಗಿಕ್ಕಿಮೆಟ್ಟಿದುದೊ ಭೋಗಿಜನಂ ಶಿಶಿರಾತಿರೇಕಮಂ ೧೯

ವ|| ಅಂತು ಶಿಶಿರದೆಸಕಂ ಮಸುಳೆ

ಮ||ಸ್ರ|| [4]ಧೃತಮಾದ್ಯದ್ವಾಮನಾಂಕ[4]ದ್ವಿರದ ಮದಜಲಾಮೋದಭಾರಂ ತ್ರಿಕೂಟಾ
ದ್ರಿತಟಾಬ್ಧಿಸ್ವೈರಚಾರಂ ಮಳಯಗಿರಿವಿಹಾರಂ ಚಳತ್ಸಿಂಹಳಸ್ತ್ರೀ
ಶ್ರುತಿಪೂರಂ ತಾಮ್ರಪರ್ಣೀನಿಕಟವನರಟದ್ಭೃಂಗಝೇಂಕಾರವಾಂದೋ
ಳಿತಚೋಳೀತಾರಹಾರಂ ಸುೞಿದುದಭಿನವಂ ದಕ್ಷಿಣಾಶಾಸಮೀರಂ ೨೦

---

1 ಧಾತ್ರಿಲತೆಗಳೆನೆ (ಖ) 2 ಪಣ್ತುದರೆಯಾದುದು (ಮೊಅ) 3 ವಂತದು ಹರ್ಷ (ಖ)
4 ದೃತಮಾದ್ಯತ್ಪುಷ್ಪದಂತೆ (ಖಗ)

ಉ॥ ಅಂತು ಬೆಡಂಗನಾಂತ ಕಳಿಕಾನಿವಹಂ ಮೊನೆದೋಱಿದನ್ನಮು
ಬ್ಜಂ ತಲೆದೋಱಿದನ್ನಮೊಸೆದನ್ಯಭೃತಂ ದನಿದೋಱಿದನ್ನಮೋ
ರಂತೆ ವಸಂತದೆಟ್ಟಿರಮೆ ತೋಱುನವೋಲ್ [1]ತಲೆದೋಱಿಂದತ್ತು ವಾ
ಸಂತಿ ವಸಂತದೂತಿವೆಸರಿಂತಿದು[1] ಸಾರ್ಥಕವಾಗಿ ತೋರ್ಪಿನಂ ೨೧

ತೆಂಕಣ ಗಾಳಿ ಬೀಸುತಿರೆ ಪಣ್ಣಲೆ ಪಣ್ಣನೆ ಬೀೞ ನೀರಸ
ತ್ವಂ ಕಿಡೆ ನುಣ್ಪಿನಿಂ [2]ಮೊನಸಿ[2] ನಿಂದೆಲೆಗಂಟೊಡೆದೊತ್ತಿದತ್ತು ಚೂ
ತಾಂಕುರವೋತಗಲ್ದ ವಧುಗಳ್ಗೆ ವಿಷಾಂಕುರಸಂಗಜಂಗೆ [3]ರಾ
ಗಾಂಕುರವುತ್ಕ[3] ಕೋಕಿಲಕುಲಕ್ಕವ್ಯತಾಂಕುರವಿಂತಿದೆಂಬಿನಂ ೨೨

ಚಂ॥ ಕಲಿಕೆಗಳೆಂಬ ಹರ್ಷಪುಳಕಾವಳಿಯಿಂ ತಳೆದಿರ್ಪಳಾಮ್ರಕೋ
ಮಲೆ ಮಧುಪಾವಳೀನಿನದವೆಂಬ ಕಳಧ್ವನಿಯಿಂದೆ ಮಲ್ಲಿಕಾ
ಲಲಿತೆ ಕಡಂಗಿ ಪಾಡಿದಪಳಬ್ಜಿನಿ ತನ್ನ ಪರಾಗವೆಂಬ ತಂ
ಬುಲವಮುಗೆ ನಕ್ಕಪಳ್ ವಿಕೃತಿಯಂ ಮಧುಸಂಗತಿಮಾಡದಿರ್ಕುಮೇ ೨೩

ಮ॥ಸ್ರ॥ ಸುಮನೋಬಾಣೇಭಕುಂಭಸ್ಥಳಕಳಿತಕನತ್ಸಾಂದ್ರಸಿಂಧೂರಮುದ್ಯಾ
ನಮಹಾಂಭೋಧಿಪ್ರವಾಳಂ ಮಧುವಿಟಪರಿರಂಭೋತ್ಥಪೃಥ್ವೀಮನೋರಾ
ಗಮಿದೆಂಬೊಂದಂದದಿಂ ರಂಜಿಸಿದುದೆಸೆವ ಪೂಗೆಂಪಿನಿಂ ದಕ್ಷಿಣಾಯಾ
ತಮರುನ್ನ್ಯಸ್ತೋತ್ಪಲಾಶಂ ಪ್ರಸವಕೃತಘನಾಳೀಪಲಾಶಂ ಪಲಾಶಂ ೨೪

ಉ॥ ತೆಂಬೆಲರೆಂಬ ಸುಯ್ ನಿಮಿರೆ ಮಲ್ಲಿಗೆಯೆಂಬಲರ್ಗಣ್ಗಳೊಳ್ ಕರಂ
ತುಂಬಿಗಳೆಂಬ ಕಾಡಿಗೆಯ ಕಣ್ಬನಿ ಪೊಣ್ಮೆ ಬೆಡಂಗುವೆತ್ತು ಮಾ
ವೆಂಬ ಲತಾಗೃಹಕ್ಕೆ ವನಲಕ್ಷ್ಮಿ ವಸಂತಕನಂ ಪಿಕಸ್ವನಾ
ಡಂಬರೆ ತಾನದೇಂ ಪಿಡಿದು ತಂದಳೊ ಸಪ್ರಣಯಪ್ರಕೋಪದಿಂ ೨೫

ತೀವಿದ ನುಣ್ಗೊನರ್ ಕಿಱುಗೊನರ್ ನಸುಬಲ್ಗೊನರೆಂಬಿವೇೞ್ಗವೆ
ತ್ತಾವಗಮೊಳ್ದಳಿರ್ ಪೊಸದಳಿರ್ ನಸುಕೆಂದಳಿರಾಗಿ ತಳ್ತ ನಾ
ನಾವಿಧದಳ್ಳಿಗೊಂಬು ಸೆಳೆಗೊಂಬೆಳಗೊಂಬುಗಳಿಂದಮೊಪ್ಪುವಿ
ಮ್ಮಾವಿನ ಬಳ್ಳಿಮಾವಿನೆಳಮಾವಿನ ಸೊಂಪೆಸೆಗುಂ [4]ವನಾಂತದೊಳ್[4] ೨೬

---

[1] ನನದೋಱಿಂದತ್ತು ವಾಸಂತಿವಸಂತದೂತಿವೆಸಱಿಂಬುದು (ಕಗ) [2] ಸೊಗಸಿ (ಮೊಅ)
[3] ರಾಗಾಂಕುರವುದ್ಘ (ಮೊಅ) [4] ವಸಂತದೊಳ್ (ಖ)

ಚಂ|| ಕಳಿಕೆ ಕೊನರ್ ತಳಿರ್ ಮುಗುಳಲರ್ ಮಿಡಿ ಕಾಯ್ ನಸುದೋರೆ ದೋರೆ
ಪಣ್
ಬಳಸಿರಲಾಗಳಾವಪರಿಯಿಂ ನಡೆನೋೞ್ಪೊಡವಂತೆ ತಾನೆ ಕ
ಣ್ಗಳ ಸಿರಿ ತಾನೆ ರಮ್ಯಮೆನಿಸಿರ್ದು ವಿಯೋಗಿಜನಕ್ಕೆ ವಲ್ಲಭಾ
ವಳಿಗಿದು ಡಾವುರಂ ಮದನತೋಮರಮಾದುದು ಬಂದ ಮಾವುರಂ ೨೭

ಮ|| ನವರತ್ನೋಜ್ವಲನೂಪುರಕ್ವಣಿತವಾಮಾವಾಮವಾಮಾಂಘ್ರಿಪ
ಲ್ಲವಸಂಘಟ್ಟನದಿಂ ತಳಿರ್ತಲರ್ದು ತನ್ನೊಳ್ ತತ್ಪದಾಲಕ್ತಕಾಂ
ಶುವ ಕೆಂಪುಂ ತಳಿರ್ಗೆಂಪುಮುಳ್ಳಲರ ಕೆಂಪುಂ ನಾಡೆಯುಂ ಜೆಲ್ವುವೀ
ಱುವಿನಂ ಮೂವಡಿಗೆಂಪುವೀಱುದುದಶೋಕಾನೋಕಹಂ ಚೈತ್ರದೊಳ್ ೨೮

ಚಂ|| ಲಲನೆಯರುನ್ನತಸ್ತನದ ಸೋಂಕಿನೊಳೀ ತರುವೇ ಪ್ರಮೋದದಿಂ
ಪುಳಕಿತಮಾಯ್ತು ಕಾಂತೆಯರ ಪೆರ್ಮೊಲೆಸೋಂಕಿನೊಳಾವಮಾನವರ್
ಪುಳಕಿತರಾಗದಿರ್ಪರೆನೆ ತನ್ವಿಯರುದ್ಧಕುಚಂಗಳೊತ್ತಿನಿಂ
ಬೆಳೆದು ನವಾಂಕುರಂ [1]ಕುರವಕೋತ್ಕರದೊಳ್[1] ಕರವೊಪ್ಪಿ ತೋಱುಗುಂ ೨೯

ಮ||ಸ್ರ|| ಹಸಿತಾಂಭೋಜಾಸ್ಯೆಯರ್ ಮುಕ್ಕುಳಿಸಿಯುಗುೞ್ವಿನಂ ಸೀದುವಂ ಸೀ
ದುವಂ ಸೇ
ವಿಸಿ ಸೊರ್ಕಿಂದೀ ಮಹೀಜಂ ತಳೆದು ಪುಳಕಘರ್ಮಾಂಬುಸಂದೋಹಮಂ ಸಂ
ತಸದಿಂ ಪಾಡುತ್ತುಮಿರ್ದತ್ತೆನಿಸಿ ಮುಗುಳ್ಗಳಿಂ ಪೂಗಳಿಂ ತಾಳ್ದಿ ಭೃಂಗೀ
ರಸವದ್ಗೇಯಪ್ರಣಾದಾಕುಳವಕುಳಕುಳಂ ಜೆಲ್ವುವೆತ್ತಿರ್ದುದೆತ್ತಂ ೩೦

ಕಂ|| ಸುದತಿಯರ ನಯನಕಾಂತಿಯೆ
ಪುದಿದಿದಱೊಳ್ ಬೞಿಕ ಪೋಗದಿರ್ದತ್ತೆನೆ ಪೂ
ತಂದು ಪಕ್ಷ್ಮಳೇಕ್ಷಣಾಲೋ
ಕದಿನುದ್ಯಾನದ್ರುಮೈಕತಿಲಕಂ ತಿಲಕಂ ೩೧

ಚಂ|| ಮನಸಿಜತೇಜದಂಕುರವನಂಗನೃಪಾಂಗನೆ ತೊಟ್ಟ [2]ಚಿನ್ನಪೂ[2]
ವನವಧುಚೈತ್ರನಂ [3]ನಿವಳಿಪುಜ್ವಲ[3] ದೀಪವೆನಲ್ ಕವಲ್ತು ಕಂ
ಪಿನೊಳನಿತುಂ ವನಾಂತರದ ಪೂಗಳ ಕಂಪನದಿರ್ಪಿ ತನ್ನ ಕಂ
ಪನೆ ಮೆಱೆಯುತ್ತುಮಿರ್ಪಲರ[4]ಜೊಂಪದಿನಂದೆಸೆದತ್ತು[4] ಚಂಪಕಂ ೩೨

---

[1] ಕುರವಕೋತ್ಕರದಿಂ (ಕಗ) [2] ಚಿನ್ನಪೂ (ಕಖ) [3] ನೆವಳಿಪುಜ್ವಲ (ಕಗ) [4] ಜಂಪಕ
ದಿಂದೆಸೆದತ್ತು (ಖ)

ಅನುನಯದಿಂದೆ ಮೂಡಿದ ಪಸುರ್ಗನೆ ಬೆಳ್ಪನೆಯಪ್ಪ ಪೊಂಗಿ ಬೆ
ಳ್ಪನೆ ಮುಗುಳಪ್ಪ [1]ಬೆಳ್ಮುಗುಳುವೊಯ್ಯನೆ[1] ಬಲ್ಮುಗುಳಪ್ಪನುಕ್ರಮಂ
ತನಗೆಸೆಯಲ್ ತೊಡಂಬೆ ಕೆಳಗಾಗೆ ಸಿಡಿಲ್ದು [2]ಮರಲ್ದುರುಳ್ವ[2] ಕಂ
ಪಿನ ಕಣಿ ತುಂಬಿಯಂ ಸೆರೆಪುತಿರ್ದುದುಮಲ್ಲಿಗೆ ಚೈತ್ರಮಾಸದೊಳ್ ೩೩

ಕಂ|| ಎಲೆಯೆಂಬ ಚೀನದುಳ್ಪುಡೆ
ತೊಲಗಿರೆ ಮಧು ನೆರೆಯೆ ತನ್ನೊಳೊಲವಿಂದೀ ಪಾ
ಟಲಿಗಾಯ್ತು ಧರದ ಕಱತಯೆನೆ
ಯಲರ್ಗೆಱಗಿರ್ದಳಿ ವಿರಾಜಿಕುಂ ಪಾಟಲಿಯೊಳ್ ೩೪

[3]ಚಿರಗಂಧ[3]ವಲ್ಲದಿರೆಯಿರೆ
ಕೊರಗುವುವೀ ಕ್ಷಣಿಕಭೋಗಕುಸುಮಂಗಳವೇ
ದೊರೆ ಮಿಕ್ಕುವೆಂದು ನೆಗುವಂ
ತಿರೆ ಬಿರಿದುವು ಸುರಯಿ ಬಿರಯಿಯೆರ್ದೆ ಬಿರಿವಿನೆಗಂ ೩೫

ಸೊವಡಿಂಗೆ ಮುಸುಱುಂದಳಿ ಮು
ದ್ರೆವೊಲಿರೆ ಮದನನ ಸುಗಂಧಭಂಡಾರದವೋಲ್
ನವಸೌರಭಮುಂ [4]ತಾಳ್ದಿ
ರ್ದುವು[4] ಸೇವಂತಿಗೆ ವಸಂತಸಮಯೋತ್ಸವದೊಳ್ ೩೬

ಚಿತ್ರಭವನಂಗರಾಗದ
ಕತ್ತುರಿ ತೀವಿರ್ದ ಪೊನ್ನ ಬಟ್ಟಲ್ಗಳೆನಲ್
ಮತ್ತಾಳಿ ಮುಸುಱೆ ನಿಲಲೆಸೆ
ಯುತ್ತಿರ್ದುವು ಕರ್ಣಿಕಾರಕುಸುಮಚಯಂಗಳ್ ೩೭

ಚಂ|| ಸೊನೆವನಿಚಂಚುವಿಂ [5]ಪನಿಯೆ[5] ಮೂಂಗೊನರಂ ನಸುಗರ್ಚಿ ಸೊರ್ಕಿನಿಂ
ತನು ದಳವೇಱತ ಕಂಠವಿವರಂ ತೊವರೇಱು ಪಟುತ್ವವೇಱತ ಕಾ
ಮನ ನನೆಯಂಬುಗಳ್ ವಿರಹಿವೃಂದದ ನೆಲ್ಲೆರ್ದೆಯಂ ಪುಗಲ್ ನಿಜ
ಧ್ವನಿ ಬಗೆಯಂ ಪುಗಲ್ ಬಿಡೆ [6]ಪುಗಲ್ ಪುಗಲೆಂದುದು[6] ಕೋಕಿಲವ್ರಜಂ ೩೮

---

1 ಬೀಗಿಮುಗುಳೊಯ್ಯನೆ (ಖ) 2 ಮರಲ್ದುರಲ್ದು (ಕ) ಮರಲ್ದುರಲ್ವ (ಖ) 3 ಸಿರಗಂಧ (ಕಗ) 4 ಕುಡುತಿರ್ದುವು (ಕಗ) 5 ಪರಿಯೆ (ಖ) 6 ಪುಗಿಲ್ ಪುಗಿಲೆಂದುದು (ಕಖಗ)

ಕಂ॥ ತಳಿರಂ ಚಿವುಂಟಿ ಪೂವಿಡಿ
ಗಳನಿಱಿಪೆಂಜಲಿಸಿ ಕಾಯ್ಗಳಂ ಪಣ್ಣ ರಸಂ
ಗಳನೀಂಟಿ ತಂಡತಂಡದೆ
[1]ಗಿಳಿ ಗೆಡೆವರೆ[1] ಗಿಳಿಗಳೆಸೆದುವೆಳಮಾವುಗಳೊಳ್ ೩೯

ಚಂ॥ [2]ಸುರಸಪಲಾಶಪುಷ್ಪ[2]ಚಯದೊಳ್ ವನಲಕ್ಷ್ಮಿಯ ರತ್ನನೂಪುರ
ಸ್ವರಮೆನೆ ಹೇಮತಾಮರಸದೊಳ್ ಜಳದೇವಿಯ [3]ವಕ್ತ್ರ[3] ಕೂಜಿತ
ಸ್ವರಮೆನೆ ಮಲ್ಲಿಕಾಮುಕುಳದೊಳ್ ರತಿಕಾಂತನ ಬಾಣಭೀಂಕೃತ
ಸ್ವರಮೆನೆ ಪೊಣ್ಮಿದತ್ತು ಮಧುರಂ ಮಧುಮತ್ತಮಧುವ್ರತಸ್ವರಂ ೪೦

ಮ॥ಸ್ರ॥ ಬೆಳಪೀಚಂದ್ರಾಂಶು ಪೂತೀವಿಚಕಿಲಮುಲೆವೀ ತಂಬೆಲರ್ ಬಗ್ಗಿಪೀ ಕೋ
ಕಿಳವೆನ್ನೊಳ್ ತಾವೆ ಮಾಟ್ಕುಂ ಭುವನಜಯಮನಾಂ [4]ಕೈದುಗೆಯ್ವನ್ನಮೇನೆಂ[4]
ದೆಳಮಾವಂ ನೆಮ್ಮಿ ತನ್ನೋಪಳ ಮೊಲೆಗೆಲಸಂ ನೋಡುತುಂ ತುಂಬಿಯಿಂದಂ
ಗಿಳಿಯಿಂದಂ ಬೀರಮಂ ಪಾಡಿಸಿ ಪೊಗೞಿಸುವಂ ಚೈತ್ರದೊಳ್ ಚೈತ್ರಮಿತ್ರಂ ೪೧

ಕಲಿಕಾಸಂವೀತಚೂತಂ ಮುಕುಳಿತವಕುಳಂ ಪಲ್ಲವೋಲ್ಲಾಸಿಕಂಕೆ
ಲ್ಲಿಲತಾಂತಾಕ್ರಾಂತವಾಸಂತಿಕವೆಸೆದುದು ಯೋಗಿವ್ರಜಸ್ವಾಂತಕುಂತಂ
ವಿಲಸನ್ಮಲ್ಲೀಲತಾಂತಂ ರಟದಳಿಪಟಲಾಕ್ರಾಂತಮಿಂದುಪ್ರಭಾಸಂ
ಕುಲಭಾಭಾಸ್ವದ್ದಿಗಂತಂ ಜಿತಸಕಲಜಗತ್ಕಂತುಕಾಂತಂ ವಸಂತಂ ೪೨

ವ॥ ಆ ವಸಂತದೊಳ್ ವನವಿಲಾಸಮನಱಿಪಲೆಂದು ಸುಪ್ರಸ್ತಾವದೊಳಾಸ್ಥಾಯಿಕೆಯಂ ಪೊಕ್ಕು

ಚಂ॥ ಸುರುಚಿರಚಂಪಕಪ್ರಸವಕಾಂಚನಪುಷ್ಪಚಯಂಗಳಂ ಮನೋ
ಹರವನಮಲ್ಲಿಕಾಮುಕುಳಸಂಕುಳನಿರ್ಮಳಮೌಕ್ತಿಕಾಕ್ಷತೋ
ತ್ಕರಮನುಪೇಂದ್ರಪಾದದುಪಭೂಮಿಗೆ [5]ಸೂಸಿದನುತ್ಸಹಂ[5] ಪೊದ
ಱ್ದರೆ ವನಪಾಲಕಂ [6]ನತಿಚಳಾಳಕ[6]ನುದ್ಗತರೋಮಜಾಳಕಂ ೪೩

ವ॥ ತದನಂತರಂ

ಚಂ॥ ಕುರವಕದಂಕುರಂ ತಿಲಕದುಜ್ಜ್ವಲಪುಷ್ಪವಶೋಕದೊಳ್ದಳಿರ್
[7]ಮುರುಗದ[7] ನುಣ್ಗೊನರ್ ದವನದೊಳ್ಗುಡಿ ಮಾವಿನ ಕೆಂದಳಿರ್ ನವಾಂ
ಬುರುಹದ ಮೊಗ್ಗೆ ಸಂಪಗೆಯಲರ್ ಸುರಹೊನ್ನೆಯ ಪೂಗಳೆಂಬಿವಂ
ಮುರರಿಪುಗಿತ್ತು ಪೆಂಚ್ಚುವಡೆದುತ್ಸವದಿಂ ನುಡಿದಂ ಪ್ರಿಯೋಕ್ತಿಯಂ ೪೪

---

1 ಗಱಿಪೆಡೆವರೆ (ಖ) 2 ಸರಸವಿಕಾಸಪುಷ್ಪ (ಕ) ಸರಸವಿಲಾಸಪುಷ್ಪ (ಗ) 3 ರತ್ನ (ಕಗ) 4 ಕೈದುಗೊಳ್ವನ್ನಮೇಕೆಂ (ಖ) 5 ಸೂಸಿದನುತ್ಸವಂ (ಕಖ) 6 ವಿನತಜಾಲಕ (ಖ) 7 ಮರುವದ (ಕಗ)

ಕಂ॥ ವನಲಕ್ಷ್ಮಿಗೆ ಮಧುವಿಂ ಯೌ
ವನಲಕ್ಷ್ಮಿ ಪೊದಟ್ದು ರಂಜಿಸಿರ್ದಪುದಾ ನಂ
ದನಲಕ್ಷ್ಮಿಗೆ ಭೋಗಾನಂ
ದನಲಕ್ಷ್ಮಿಯನುಂಟು[1]ಮಾಡು[1] ನಿಜಸಂಗತಿಯಿಂ ೪೫

ಮ॥ ತರಳಾಪಾಂಗದ ಬೆಳ್ಪು [2]ಕೆಂದಳದ[2] ಕೆಂಪೋರೊರ್ವರ್ ಪೊಣ್ಮಲ್ ತಳಿ
ರ್ಮರನುಂ ಪೂಮರನಾಗೆ ಪೂಮರನುಮಂತಾ ಬೇಗದಿಂದಂ ತಳಿ
ರ್ಮರನಾಗುತ್ತಿರೆ ಭಿನ್ನಸೃಷ್ಟಿವಡೆಯುತ್ತುಂ ಯಾನವಾಚಾಳಿತಾ
ಭರಣಂ ನಿನ್ನಬಲಾಳಿ ಪೂದಿಱುವುದಂ ನೋಡಿಂ ವನಕ್ರೀಡೆಯೊಳ್ ೪೬

ವ॥ ಎಂದು ಬಿನ್ನವಿಸಲದಂ ಮನದೆ ಕೊಂಡು

ಮ॥ಸ್ರ॥ ತೆಗೆಯುತ್ತುಂ ಮೇಲುದಂ ಪೆರ್ಮೊಲೆಗೆ ಪರಿಜೆಯಂ ಹಸ್ತದಿಂದೊತ್ತುತುಂ ಸಾ
ಪಗಿಸುತ್ತುಂ ಜೋಲ್ದ ಧಮ್ಮಿಲ್ಲಮನಳವಡಿಸುತ್ತುಂ ಕುರುಳ್ದೊಂಗಲಂ ನೀ
ವಿಗೆ ಕಾಂಚೀದಾಮಮಂ ಸಾಚರ್ುತುಮಬಲೆಯರೋರೊರ್ವರೊಂದೊಂದು
ಪಾಂಗಿಂ
ಬಗೆಗೊಂಡೇಟ್ವಿನ್ನೆಗಂ ತನ್ನೊಡನೆ ಹರಿ ವನಕ್ರೀಡೆಗೆಂಡೆಟ್ದಿನಾಗಳ್ ೪೭

ಕಂ॥ ಪಣ್ಣುಗೆಯ ರತ್ನಚಯದಿಂ
ಕಣ್ಣುಳ್ಕೆ ಜಗಂ ತಟಿಲ್ಲತಾ[3]ಪ್ರಭೆಯಿಂದಂ[3]
ಪಣ್ಣಿಗೃಹಾಂಗಣತಟದೊಳ್
ಪಣ್ಣಿರ್ದುದು ಪಟ್ಟವರ್ಧನಂ ಭದ್ರಗಜಂ ೪೮

ವ॥ ಆ ದ್ವಿಪೇಂದ್ರಮನುಪೇಂದ್ರನೇಱಿ

ಕಂ॥ ವನಕೇಳಿಗೆ ದಿಗ್ವನಿತಾ
ಜನಮುಮನಾಮಂತ್ರಿಪಂತೆ ಭೋರೆನೆ ತೂರ್ಯ
ಸ್ವನಮಖಿಲಾಂತಃಪುರಕಾ
ಮಿನೀಕುಮಾರಕಸಹಸ್ರಸಹಿತಂ ತಳರ್ದಂ ೪೯

ಚಂ॥ ಎರಲಲೆಪಿಂ ತೆಱಿಂಬೊಳೆದು [4]ಪೊಂಬಳೆದೊಂಗಲನಾಂತ[4] ಕೌಂಗುಗಳ್
ಗಿರಿವನದಲ್ಲಿ ಪೂಮರಗಳೊಳ್ ನಸುದೋರ್ಪವೊಲಿರ್ಕೆಲಂಗಳೊಳ್
ಕರಿಣಿಯನೇಱಿ ಕೈಟಭವಿರೋಧಿಗೆ ಚಾಮರವಿಕ್ಕುತಿರ್ಪ ತಾ
ಮರಸದಳಾಕ್ಷಿಯರ್ ಪಿಡಿದ ಬೆಳ್ಗೊಡೆ [5]ಚಂದ್ರಮನಂತೆ ತೋಱುಗುಂ[5] ೫೦

[1] ಮಾಡಿ (ಕಗ) [2] ಕೆಂದಳಿರ (ಕಗ) [3] ಭ್ರಮೆಯಿಂದಂ (ಖ) [4] ಪೊಮುಡಿದೊಂಗಲ
ನಾಂತು (ಖ) [5] ದೆಕ್ಕೆಯೊಳೊಪ್ಪಿತೋಱಿದರ್ (ಖ)

ಕಂ|| ಕದಳಿಕೆಯ ಪೊಯ್ಲೊಳಂಬರ
ನದಿಯಿಂ ನೊರೆವಿಂಡು ಬಂದು ಮಂಡಳಿಸಿತ್ತೀ
ರದನಿಯ ಮೇಲೆನೆ ಹರಿಗೊ
ಪ್ಪಿದುದಾನೆಯ ಮೇಲೆ ಪಿಡಿದ ಧವಳಚ್ಛತ್ರಂ ೫೧

ಎತ್ತಿದ ಪೀಲಿಯ ಸತ್ತಿಗೆ
ಮುತ್ತಿನ ಕೊಡೆ ಮೇಘಡಂಬರಂ [1]ಗೆಲೆ ಬನಮಂ[1]
ಮುತ್ತುವ ನಡೆಬನವೆನಿಸಿ ಬ
ರುತ್ತಿರ್ದುದು ಬನಕೆ ಪೆಂಡವಾಸದ ತಂಡಂ ೫೨

ವ|| ಅಂತೆಯ್ದಿವರ್ಪಲ್ಲಿ

ಮ|| ನಳಿನೀರೇಣುಗಳಂ ಕಳಲ್ದಲರ್ಗಳಂ ಕೀರಾಳಿನಾದಂಗಳಂ
ತಳೆದೆತ್ತಂ ಪಟವಾಸಮಂ ಕೆದಱುತುಂ ಶೇಷಾಕ್ಷತಾನೀಕಮಂ
ತಳಿಯುತ್ತುಂ [2]ಪರಸುತ್ತು[2]ಮೊಯ್ಯನಿದಿರ್ಗೊಳ್ವಂದದಿಂ ನಂದನಾ
ವಳಿಯಿಂದಂ ವಸುದೇವ[3]ಸೂನುಗಿದಿರ್ವಂದತ್ತೊಂದು[3] ಮಂದಾನಿಳಂ ೫೩

ವ|| ಅಂತು ಬಂದ ಗಂಧವಹನಂ ಮನದೆಕೊಂಡು ವನೋಪಕಂಠದೊಳ್ ವೈಕುಂಠನಿಭೇಂದ್ರಸ್ಕಂಧದಿಂದವನಿತಳಕ್ಕವತರಿಸಿದಾಗಳ್

ಕಂ|| ತುಡುಗೆಯ [4]ಬಂಬಲ್ವೆಳಗಿಂ
ಬೆಡಂಗುವಡೆದಂಗಕಾಂತಿಯಂ ತುಡುಕುವಿನಂ[4]
ಪಿಡಿಯಿಂದಿೞಿದಳ್ ಕಾರ್ಮುಗಿ
ಲಿಡೆಯಿಂ ಕುಡುಮಿಂಚು ಘೞಿಲನಿೞಿವವೊಲೊರ್ವಳ್ ೫೪

ವ|| ಮತ್ತೊರ್ವಳ್

ಕಂ|| ಕೆಂದಳಿರ್ವೇಱಿದ ನವ[5]ಮಾ
ಕಂದದಿನೆಳಗೊಂಬು[5] ನೆಲಕೆ ಫಳಭರದಿಂ ಜೋ
ಲ್ವಂದದಿನಿೞಿದಳ್ ಕುಚಭರ
ದಿಂದಂ ನಡು ಬಳ್ಕೆ ಪೊನ್ನ ಸಣ್ಣಗೆವಿಡಿಯಿಂ ೫೫

---

1 ತಳೆದ ಬನಂ (ಖ) 2 ಪರಪುತ್ತು (ಕಗ) 3 ಸೂನುಗಿದಿರಂ ಬಂದತ್ತು (ಖ) 4 ಬಂಬಲ್ವೆಳಗುಂ ಬೆಡಂಗುವಡೆದಂಗಕಾಂತಿಯಿಂ ತುಳ್ಕುವಿನಂ (ಖ) 5 ಮಾಕಂದದ ಸೆಳೆಗೊಂಬು (ಕಗ)

ತೆಂಗಾಳಿಯಿನಂಶುಕದ ಸೆ
ಱಂಗು ತೆಱಿಂಬೊಳೆಯೆ ಪಿಡಿಯಿನಿಟ್ಟಿದಳದೊರ್ವಳ್
ತುಂಗಪುಳಿನಾಗ್ರದಿಂ ಧರೆ
ಗಂಗಜನಿಟ್ಟಪುನ ಸಚೀನಕೇತುಶ್ರೀವೋಲ್ ೫೬

ಪಿಡಿಯಿಂದಿಟ್ಟಿದಳ್ ಪೆಱಳೊ
ರ್ಪಿಡಿಯಿಂ ನಡುಸಣ್ಣವೆನಿಪ ವಧು ಮದನನ ಕೈ
ಪಿಡಿಯಂತೆಸೆದೀಕ್ಷಿಪರಂ
ಪಿಡಿಯಂಬಿಂ ಕಾಮನಾರ್ದು ಸಾರ್ದಿಸುವಿನೆಗಂ ೫೭

ಸ್ಮರಕೃತಕಾಚಲಶಿಖರಾಂ
ತರಲತೆ ಮೇಲ್ವಾಯ್ದುದೊಂದು ಸೋಗೆಯ ಬಿಣ್ಪಿಂ
ಧರೆಗೆಱಗುವಂತದೊರ್ವಳ್
ವರಾಂಗಿ ಬಿಡುಮುಡಿಯಿನೆಸೆದು ಪಿಡಿಯಿಂದಿಟ್ಟಿದಳ್ ೫೮

ವ॥ ಅಂತು ನಿಜಾಂತಃಪುರತರುಣಿಯರ್ ಕರಿಣಿಗಳನಿಟ್ಟಿಯೆ

ಉ॥ ಅಂಗದ ರತ್ನಕೌಸ್ತುಭಮಣಿದ್ಯುತಿಪಲ್ಲವಿತಂ ಮುರಾರಿ ಬಂ
ದಂ ಗಮನಶ್ರಮಾಂಬುಕಣಭೂಷಣಮೌಕ್ತಿಕಕುಟ್ಮಳಪ್ರರೂ
ಢಾಂಗವಧೂಜನಂ ಬರೆ ವಿಳಾಸದೆ ಜಂಗಮಕಲ್ಪಭೂರುಹಂ
ಜಂಗಮಕಲ್ಪವಲ್ಲರಿಗಳಿಂ ಪರಿವೇಷ್ಟಿತಮಾಗಿ ಬರ್ಪವೋಲ್ ೫೯

ವ॥ ಅಂತು ನಡೆತಂದು

ಕಂ॥ ಸಮದ ಪಿಕಸ್ವನವಾದ್ಯಂ
ಭ್ರಮರೀರವಗೀತಮನಿಲಲುಳಿತಲತಾನೃ
ತ್ಯಮೊಡರ್ಚುವಿನಂ ಸಂಗೀ
ತಮನುಪವನರಂಗಮಂ ಮುಕುಂದಂ ಪೊಕ್ಕಂ ೬೦

ಉ॥ ಸಲ್ಲಲಿತಾಂಗಿಯರ್ ಮಣಿವಿಭೂಷಣಕಾಂತಿಯಿನೀಕ್ಷಣಾಂಶುವಿಂ
ಪಲ್ಲವಪುಷ್ಪಜಾಳಮನಪೂರ್ವಮನೆಯ್ದೆ [1]ಕುಜಾಳಿಗೀವನಿ
ತ್ತಲ್ಲದೆ[1] ಕೋಮಲಾಂಘ್ರಿರುಚಿಯಿಂ ನಖರೋಚಿಯಿ[2]ನಧ್ವವಲ್ಲಿಗಂ[2]
ಪಲ್ಲವಪುಷ್ಪಮಂಜರಿಯನಾಗಿಸುತುಂ ನಡೆದರ್ ವನೋರ್ವಿಯೊಳ್ ೬೧

[1] ಕುಜಾಳಿಗಿತ್ತನಿತ್ತಲ್ಲದೆ (ಖ) [2] ಅಧ್ವರೋಚಿಗಂ (ಖ)

ಕಂ|| ವನಮಾಲೆಯೊಳ್ ವಿಹಾರಿಸಿ
ವನಮಾಲೆಯೊಳೆಸಗುವಬ್ಜಿನೀಮಾರುತನಿಂ
ವನಮಾಲೆ ಪೊಳೆಯೆ ಕೃಷ್ಣಂ
ವನಮಾಲಯುಮಾಯ್ತು ಲೀಲೆಗೆಂಡೆನೆ ಸುಱಿದಂ ೬೨

ವ|| ಅಂತು ಸುಱಿವನಲ್ಲಿ

ಮ|| ಮೊದಲೊಳ್ ತಂಬೆಲರ್ಗಾನೆ ಬೋದಣಿಗೆಗಂಪಂ ಬೀಱಿದೆಂ ಸುಗ್ಗಿ ಬ
ರ್ಪುದನೀನಂದನಕಾನೆ ಮುಂದುದೆಗೆದೆಂ ಪುಷ್ಪೇಷುಗಂ ಪುಷ್ಪಬಾ
ಣಧ ಮುಂಗಾಣಿಕೆಗೊಟ್ಟೆನಾನೆ [1]ಪೆಱತೆನ್ನಂತಾದುದೇ ಮೈಮೆಗಾ
ಸ್ಪದಮೆಂಬಂತೆವೊಲಾಯ್ತು[1] ಮಾಧವಿ ಮದಾಳಿಧ್ವಾನಸಂತಾನದಿಂ ೬೩

ವ|| ಅದಂ ನೋಡಿ ತತ್ಸಮೀಪದೊಳೊಂದು ತುಱುಗಿ ಬಂದ ಮಂದಪವನಪರಿಧೂತಚೂತಮಂ ಕಂಡು

ಮ|| ಸೊನೆಯಿಂ ದಾನಜಲೌಘಮಂ ತೊನೆಪದಿಂ ಕೊಂಬಾಟಮಂ ಕೋಕಿಲ
ಸ್ವನದಿಂ ಬೃಂಹಿತನಾದಮಂ ಮಿಸುಪ ಕೊಂಬಿಂ ಕೊಂಬನಾಟಂದು ಕಾ
ಯ್ಪಿನ ಸೊಂಪಿಂ [2]ಪೊಳೆವಗ್ರ[2]ಪಲ್ಲಮುಮುಮೊಪ್ಪಲ್ ಮಾವಿನೊಳ್ ಪೇಱಿ ಕೈ
ಯನನಂಗದ್ವಿಪದಂತದಿರ್ಪಿದಪುದೀ ಚೂತಂ ವಿಟವ್ರಾತಮಂ ೬೪

ಪಳದಿಂದಂ ಪನಸಾದಿಸತ್ಫಲಮಹೀಜಂ ಪುಷ್ಪದಿಂ ಚಂಪಕಾ
ದಿಳಸತ್ಪುಷ್ಪಕುಜಂ ಪ್ರವಾಳದಿನಶೋಕಾದಿಪ್ರವಾಳಾಂಘ್ರಿಪಂ
ತಳೆಗುಂ ಚೆಲ್ವನದಲ್ಲದಂತು ಫಲದಿಂ ಪುಷ್ಪೌಘದಿಂ ಪಲ್ಲವಾ
ವಳಿಯಿಂ ಕೂಡೆ ವಿಳಾಸಮಂ ತಳೆಗುಮೇ ಚೂತಂಬೊಲನ್ಯದ್ರುಮಂ ೬೫

ವ|| ಎಂದು ಪೊಗೞ್ದು [3]ಕೆಲದೊಳಿರ್ದಶೋಕದ್ರುಮಮನದೊರ್ವಂ[3] ಪಾರ್ಶ್ವವರ್ತಿ ನೋಡಿ

ಚಂ|| ಸುದತಿಯರಂಘ್ರಿಪಾತದೊಳೆ ಪಲ್ಲವಿಸಿರ್ದನುರಕ್ತವೃತ್ತಿ ಪೆ
ರ್ಚಿದ ಸುಮನಶ್ಶಿಳೀಮುಖವಿಕಾರಮೆ ಈತರುರಾಜನೆಮ್ಮೊಳಿಂ
ತಿದು ಸಮವಾಗಲಾಂ ಸಲೆ ಸಶೋಕನೆನಾದೆನಶೋಕನಾದುದಿಂ
ತಿದು ವಿಪರೀತಮೆಂದು ಪೊಗೞ್ದಂ ಪರಿಹಾಸಕನಂದಶೋಕಮಂ ೬೬

---

1 ಪೆಱತೆನ್ನಿಂದಾದುದಾಂ ಮೆಯ್ಮೆಗಾಸ್ಪದಮಾಯ್ತೆಂಬವೊಲಾಯ್ತು (ಖ) 2 ಪೊಡೆವಗ್ರ (ಖ) 3 ಕೆಲದೊಳಿರ್ದಶೋಕಪನದುರ್ಬಂ (ಖ)

ವ॥ ಆ ಮಾತಿಂಗೆ ಪೀತಾಂಬರಧರಂ [1]ಸಸ್ಮಿತವದನಾರವಿಂದನಾಗಿ[1]

ಕಂ॥ [2]ಆಸವಗಂಧದ[2] ಬಲಮುಕೆಯ್
ವಾಸನೆಯೊಳ್ ದೊರೆಯಿದೆಂದು ನೋಡಿದನೊಲವಿಂ
ಕೇಸರಮುಂ ಕುಸುಮರಜೋ
ಧೂಸರಮುಂ ವನಮಹೀರುಹಾಗ್ರೇಸರಮುಂ ೬೭

ವ॥ ತದನಂತರಂ

ಕಂ॥ ತರುಣೀಸ್ತನಸಂಗದಿನಂ
ಕುರಿಸಿದ ಕುರವಕವನಚ್ಯುತಂ ವೀಕ್ಷಿಸಿ ಪೋ
ದಿರುಳೊಗೆದ ರುಕ್ಮಿಣೀಸ್ತನ
ಪರಿರಂಭವನಲ್ಲಿ ನೆನೆದು ಪುಳಕಿತನಾದಂ ೬೮

ಬಿಸರುಹನೇತ್ರೆಯರವ[3]ಲೋ
ಕಸಾಂದ್ರ[3] ಚಂದ್ರಿಕೆಯನೀಂಟೆ ಮತ್ತದನುದ್ಗಾ
ರಿಸುವಂತೆಸೆದಪುದೆಂದೀ
ಕ್ಷಿಸಿದಂ ಪೂತೆಸೆವ ತಿಲಕಮಂ ಯದುತಿಲಕಂ ೬೯

ಚಂ॥ ಬನದ ವಿಭೂತಿ ತಂಬೆಲರ ಮೆಯ್ಸಿರಿ ತುಂಬಿಯ ಗೀತಶಾಲೆ ಚೈ
ತ್ರನ ತೊಡವೋತಗಲ್ದರೆರ್ದೆದಲ್ಲಣಮೋಪರ ಸೈಪು ಕಾಮನಂ
ಬಿನ ಕಣಿ ಪುಷ್ಪಸಾಯಕನ ಕೀರ್ತಿಯ ಬಿಟ್ಟು ಮೊದಲ್ ಮೃಡಾರಿವೀ
ರನ ಜಯಶಕ್ತಿಯೆಂದಲರ್ದ ಮಲ್ಲಿಗೆಯಂ ಹರಿ ಮೆಚ್ಚಿ ನೋಡಿದಂ ೭೦

ಉ॥ ಕಾದಲರಿಷ್ಟಸಿದ್ಧಿಗವಕಾಶಮನೀಯೆ ವಿಕಾಸಮಂಧಕಾ
ರೋದಯಮಂ ವನಾವಳಿಗೆ ಪಿಂಗಿಸೆ ಪಿಂಗಮರೀಚಿ ಬಂಧುರಾ
ಮೋದವತಿಪ್ರಮೋದಮನೊಡರ್ಚೆ ಧರಿತ್ರಿಗೆ ಪೊನ್ನ ಪೂಗೆ ಕಂ
ಪಾದವೊಲಿರ್ದುದೆಂದು ಪೊಸಸಂಪಗೆಯಂ ಪೊಗಟ್ದಂ ಜನಾರ್ದನಂ ೭೧

ಚಂ॥ ನನೆಕೊನೆವೋಯ್ತು ತನ್ನ ನನೆಯಿಂ [4]ಮದನಮುರ್ವಿಗೆ[4] ತನ್ನ ಪುಷ್ಪದಿಂ
ಮನಸಿಜಯಂಗೆ ಪುಷ್ಪಶರನೆಂಬ ಪೆಸರ್ ಬೆಳಗಿತ್ತು ತನ್ನ ಪೂ
ವಿನ ಮಧುವಿಂ ಮದಾಳಿ ಮಧುಪಾಂಕಮನಾಂತುದು ತನ್ನ ಗಂಧದಿಂ
ದನಿಲನೊಳಾಯ್ತು ಗಂಧವಹನತ್ವವದೇಂ ಸುರಹೊನ್ನೆ ಚೆನ್ನನೋ ೭೨

---

[1] ವಿಸ್ಮಿತಸ್ವಾಂತನಾಗಿ (ಖ) [2] ಆಸವಂಗಧದೆ (ಖ) [3] ಲೋಕಸುಧಾ (ಖ) [4] ಮುದ ಮುರ್ವಿಗೆ (ಖ)

ವ॥ ಎಂದು ಮೆಚ್ಚಿ ಬಿಚ್ಚಳಿಸಿ ಮತ್ತಮನೇಕತರುಗುಲ್ಮಜಾತಿಗಳನತಿಪ್ರೀತಿಯಿಂ ದಲ್ಲಲ್ಲಿಗೆ ನಿರೀಕ್ಷಿಸುತ್ತುಂ ನಡೆತಂದು ವಸಂತರಾಜನೋಲಗದ ಚಿತ್ರಶಾಲೆಯಂತಿರ್ದ ಬಳ್ಳಿ ಮಾವಿನೊಳುಪೇಂದ್ರನಿಂದ್ರಲೀಲೆಯಿಂ ಕುಳ್ಳಿರ್ಪಿನಂ ಪುಷ್ಪಾಪಚಯವಿನೋದಮಂ ನೆಗಟ ಲೆಂದು

ಚಂ॥ [1]ಪುಳಿನದ ಬಾಲಪಲ್ಲವದ[1] ಕೋಮಳಶಾಖೆಯ ಜೆಲ್ವನೆಯ್ದೆ ಗೆ
ಲ್ವಳಘಕಟೀತಟಂಗಳರುಣಾಂಘ್ರಿತಳಂಗಳ ದೋರ್ಲತಾಯುಗಂ
ಗಳ ಜಯತೂರ್ಯನಾದಮೆನೆ ಕಾಂಚಿಯ ಮೆಲ್ಲುಲಿ ಗೆಜ್ಜೆಯಿಂಚರಂ
ವಳಯದ ನುಣ್ಚರಂ ನೆಗಟ್ಟಿ ನಂದನದೊಳ್ ಸುಲಿಂದರ್ ಲತಾಂಗಿಯರ್ ೭೩

ಕಂ॥ ದರಹಾಸರುಚಿಶ್ರೀಯೊಳ್
ಬೆರಸಿದ ತನ್ನಧರ[2]ಕಾಂತಿಯಂತೊಪ್ಪುವುದಂ[2]
ತರಳಾಕ್ಷಿ ಕೊಯ್ದಳಲರೊಳ್
ಬೆರಸಿದ ಮಾಂದಳಿರ ತೋಱದೊಂಗಲನೊರ್ವಳ್ ೭೪

ಉ॥ ಉಂಗುಟಮಂ ಮಹೀತಳದೊಳೂಱ ಮಡಂ ನಿಮಿರಲ್ಕೆ ನಿಟ್ಟನಿಂ
ದಂಗದ ಭಂಗಿ ಕಣ್ಗೊಳಿಸೆ ವಾಮಕರಾಂಚಿತಶಾಖೆ ಶೇಖರ
ಕ್ಕಂಗನೆ ಕೊಯ್ದಳಂದಸುಕೆಯೊಳ್ದಳಿರಂ ನಖರಾವಳೀಮಯೂ
ಖಂಗಳೊಡರ್ಚೆ ಕೆಂಪೆಸೆವಶೋಕದೊಳಂ [3]ಸಿತಪುಷ್ಪಜಾಳಮಂ[3] ೭೫

ಕಂ॥ ವಳಯರ್ಝಣತ್ಕೃತಿ ಪಸರಿಸೆ
ನಳಿತೋಳಂ ನೀಡಿ ನಯನರುಚಿಘನರಕ್ತೋ
ಜ್ವಳತಿಲಕದೊಳ್ ವರಸ್ತ್ರೀ
ತಿಳಕಂ ತಿಳಕಕ್ಕೆ ಕೊಯ್ದಳಲರನದೊರ್ವಳ್ ೭೬

ವಲ್ಲಭನ ತೋಳ [4]ಸೋಂಕುಂ[4]
ಮಲ್ಲಿಗೆಯುಂ ಕುಂದದಿರ್ಕೆ ಸಂತತಮೆನಗಾ
ಸೊಲ್ಲೆಂ ಪೆಱತನೆನುತ್ತುಂ
ಮಲ್ಲಿಗೆಯಂ ಪಿಕನಿನಾದೆ ಕೊಯ್ದಳದೊರ್ವಳ್ ೭೭

---

[1] ಪುಳಿನತಮಾಲಪಲ್ಲವದ (ಕಖಗ) [2] ಕಾಂತಿಯಿಂತೊಪ್ಪುವುದಂ (ಖ) [3] ಸಿತಬಾಷ್ಪಜಾಲಮಂ (ಕಗ) ಸ್ಮಿತಪುಷ್ಪಜಾಲಮಂ (ಖ) [4] ಸೋಂಕೇಂ (ಕ) ಸೋಂಕಿಂ (ಗ)

ಪರಿಮಳಮೆಂಬುದು ಕುಸುಮೋ
ಪರಿಮಳವೆನಿಪಳಿಗಳಿಂಜಲಿತರ[1]ಪ್ರಸವೋ
ತ್ಕರದೊಳೆನುತಬಲೆ[1] ಕೊಂಬಂ
ಕರದೊಳ್ [2]ತೆಗೆದಾಯ್ದುಳಿಸಳ[2] ಸಂಪಗೆಯಲರಂ ೭೮

ಇರೆ ಕಂದುವೊಣಗೆ ಸೌರಭ
ವಿರದಸ್ಥಿರವರ್ಣದಸ್ಥಿರಾವೋದದ ವಿ
ಕ್ಕರಲೇಭಂಡವೆನುತ್ತಂ
ಸುರಯಿಯ ಬಿಱುಮುಗುಳನಾಯ್ದುಳೊರ್ವಳಲಂಪಿಂ ೭೯

ಉ|| ಈ ತರುವಿಂಗೆ ಮುಂ ನಿಜದೊಳಿಲ್ಲದ ಪಲ್ಲವವಾದುದೀಕೆಯಿಂ
ಕೌತುಕಮೆಂಬಿನಂ ತುಱುಗಿ ಪೂತೆಲೆಯಿಕ್ಕಿದ ಪಾಟಲಾವನೀ
ಜಾತದೊಳಂ ನಿಜಾರುಣಕರದ್ಯುತಿ ಪಲ್ಲವಮಂ ನೆಗಟ್ಚಿಲೇಂ
ಪ್ರೀತಿಯಿನೊರ್ವಳಾಯ್ದಳೊ ತನೂದರಿ ಪಾದರಿಯೊಳ್ ಲತಾಂತಮಂ ೮೦

ಕಂ|| [3]ಪಾಸಿನೊಳೆಸಳುದಿರ್ದೊಡದಂ
ದೇಸೆಗೆನಲ್[3] ಮುಡಿಗಮಂತೆ ತಾಮುಳವಡುಗುಂ
[4]ವಾಸನೆಯನೀವುವೆಂದು[4] ವಿ
ಳಾಸಿನಿ ಪೆಱಳಾಯ್ದಳಲರ್ದ ಸೇವಂತಿಗೆಯಂ ೮೧

ವ|| ಮತ್ತಮಾ ಸರ್ವರ್ತುಕೋದ್ಯಾನದೊಳೊರ್ವಳ್

ಉ|| ಜಾತಿಗೆ ಪುಷ್ಪಜಾತಿಗಳ ಜಾತಿಯದೇಂ ಸಮಜಾತಿಯಪ್ಪುದೇ
ಜಾತಿಯೆ ಜಾತಿ ಮಿಕ್ಕಲರ ಜಾತಿಯದೇತಱ ಜಾತಿಯೆಂದು ತಾಂ
ಜಾತಿಯ ಜಾತಿಯಂ ಪೊಗೞ್ದು ಜಾತಿವಿಚಾರವಿದಗ್ಧೆ ಕೊಯ್ದಳಾ
ಜಾತಿಯನಾ ವಿಟೇವಿಟವಿಭೂತಿಯನಾ ರತಿರಾಗದೂತಿಯಂ ೮೨

ಕಂ|| ಗಱು ಮೂಡದಿರ್ದೊಡಱುಯೆಂ
ಗಱು ಮೂಡಿದೊಡಾಗಳಂತೆ [5]ತಲೆಗೇಱು[5] ಕರಂ
ಮೆಱತವೀ ಪೊಂಗೇದಗೆಯೊ
ಳ್ಗಱು[6]ಗಳ್[6] ಗಱುಗಟ್ಟೆ ಮಾಱವೇ ಮಿಕ್ಕಲರಂ ೮೩

---

[1] ಪ್ರಸವೋತ್ಕರಗಳೆನುತಬಲೆ (ಖ) [2] ತೆಗೆದಾಯ್ದುಳಿಸೆವ (ಖ) [3] ಪಾಸಿನೊಳೆಸಳುದಿರ್ದೊಡದುಂ ದೇಸೆಗೆನೆಲೆ (ಕ) ಪಾಸಿನೊಳೆಸಳುದಿರ್ದಡರ್ದುಂದೇಸೆಗೆನೆಲೆ (ಖ) [4] ವಾಸನೆಯಿನಿನಿಯವೆಂದು (ಖ) [5] ತಲೆಗೆದಱು (ಕಗ) [6] ಯೊಳ್ (ಕಗ)

ಮರುಳೊಡನಾಡಿದ ಕತದಿಂ
ಮರುಳಾದನದಲ್ಲದಂದಿದಂ ಸೂಡನೆ ಶಂ
ಕರನೆಂದು ಕೊಯ್ದುಳೊರ್ವಳ್
ಪರಿಮಳಮಂ ಬೀಱುತಿರ್ಪ ಪೊಂಗೇದಗೆಯಂ ೮೪

ಮ॥ ಕಚಬಂಧಂ ಬಿಡುತಂದು ನೀವಿ ಶಿಥಿಲತ್ವಂಬೆತ್ತು ನೀಲಾಲಕ
ಪ್ರಚಯಂ ಸೂಸಿ ಲತಾಂಗಲೇಖೆ ಬೆಮರಂ ತಾಳ್ದಿರ್ದು ಚೀನಾಂಚಲಂ
ಕುಚಪೊತ್ತಿಂ ನಸುಜೋಲ್ದು ಕಣ್ಗೆಸೆಯೆ ಬಂದರ್ ಮೂರ್ತಿಶೋಭಾಭರೋ
ಪಚಯ[1]ಶ್ರಾಂತೆಯರಾದವೋಲ್[1] ವನವಿಹಾರಶ್ರಾಂತೆಯರ್ ಕಾಂತೆಯರ್ ೮೫

ವ॥ ಅಂತು ನಿರ್ವರ್ತಿತಪುಷ್ಪಾಪಚಯವಿನೋದೆಯರಾಗಿ

ಮ॥ ಮೃದುಕಂಕೆಲ್ಲಿದಳಾದಿಪಲ್ಲವದೊಳಂ ಮಲ್ಲೀಲತಾಂತಾಳಿಪು
ಷ್ಪದೊಳಂ ಚೂತಲತಾಲಯಸ್ಥಿತೆಯರಿಂಬಿಂ ಮಾಡಿ ಮಂಜೀರಹಾ
ರದ ಕೇಯೂರದ ಕರ್ಣಪೂರದುಡೆನೂಲುತ್ತಂಸದೊಳ್ಪಚ್ಚವಂ
ಮದನಂ ಮೋಹನಬಾಣಮಂ ತುಡುವಿನಂ ತೊಟ್ಟರ್ ಲತಾತನ್ವಿಯರ್ ೮೬

ಕ॥ ಗುರುವೆನಿಪತಿಕರ್ಕಶವೆನಿ
ಪ ರತ್ನಭೂಷಣಮೆ ಲಘುತೆಯಂ ಮಾರ್ದವಮಂ
ಧರಿಯಿಸಿ ಕಂಪಂ ಕುಡುವಂ
ತಿರೆ ದೇಸೆಯನಾಂತುದಲರತೊಡವಬಲೆಯರೊಳ್ ೮೭

ವ॥ ಅಂತು ಪುಷ್ಪಮಂಡನಮನಾಂತು ಬಂದ ಪೆಂಡವಾಸದೆಳವೆಂಡಿರ್ವೆರಸು ವನವಿನೋದಮಂ ತೀರ್ಚಿ ಜಲಕ್ರೀಡೆಯನಾಡಲೆಂದಿರ್ಪಿನಂ

ಮ॥ಸ್ರ॥ ತನಗತ್ಯಂತಪ್ರಿಯರ್ ಪಾಂಡವರವರೊಳವಿಖ್ಯಾತಂ ಪ್ರಿಯಂ ಚಕ್ರಿಗೆಂಬ
ರ್ಜುನನಂತಾ ದೇವಕೀನಂದನನ ಬಲದ ಕಣ್ಮಯ್ಯು ಕೆತ್ತುತ್ತಿರಲ್ ಭೋಂ
ಕನೆ ಬಂದಂ ದರ್ಶನಂ ನಿರ್ಮಲಶಶಿಕಿರಣಂ ಕಣ್ಗೆ ಸಂಸ್ಪರ್ಶನಂ ಚಂ
ದನತೋಯಂ ಮೆಯ್ಗೆ ಸಂಭಾಷಣಮಮೃತರಸಂ ಜಿಹ್ವೆಗಪ್ಪನ್ನವಾಗಳ್ ೮೮

ವ॥ ಅನಂತರಂ ಉದ್ಯಾನವನಮಧ್ಯದಿಂ ತನ್ಮಧ್ಯಮಪಾಂಡವ[2]ಪ್ರಕೋಷ್ಠಾವಲಂಬಿಕರಾಂಬುರುಹನಾಗಿ[2] ತಳರ್ದಷ್ಟೋತ್ತರಶತಾಧಿಕ ಷೋಡಶ ಸಹಸ್ರಾಂತಃಪುರ

[1] ಕ್ರಾಂತೆಯರಾದವೊಲ್ (ಗ) [2] ಪ್ರಕೋಷ್ಠಾವಲಂಬಿತಕರಾಂಬುರುಹನಾಗಿ (ಕಖಗ)

ಪುರಂಧ್ರೀಜನಕ್ಕಂ ಸಾಶೀತಿದಶಶತಷಷ್ಟಿಸಹಸ್ರಾಧಿಕಲಕ್ಷಕುಮಾರರ್ಗಂ ಆ ಕುಮಾರರ್ಕಳ ಪೆಂಡವಾಸಕ್ಕಂ ಸಾಷ್ಟಶತಷೋಡಶಸಹಸ್ರ ಪುತ್ರಿಯರ್ಗಂ ಅ ರಾಜತನೂಜೆಯರ ವಲ್ಲಭರ್ಗಂ ಮತ್ತಮಸಂಖ್ಯಾತಯಾದವವಿಟವಿಟೀಜನಕ್ಕಂ ನೀರಾಡುವೊಡೆ ಸರೋವರಂ ನೆಱೆ ಯುವದುಃಕಾರಣದಿಂ ಸಮುದ್ರಮೆ ಸರೋವರಮಾಗಲೆವೇೞ್ಕುಮೆಂದು ಮನದೊಳಾಜ್ಞಾಪನಂಗೆಯ್ದು

ಕಂ॥ ಕರಿಣೀಗಣಾನ್ವಿತಂ ವನ
ಕರಿಪತಿ ನೀರಾಟವಾಡಲೊಯ್ಯನೆ ಬರ್ಪಂ
ತಿರೆ [1]ಗಜಗಮನದ[1] ಸತಿಯರ್
ಬರೆ ಬಂದಂ ಜಲಧಿಗಲಸಗತಿಯಿಂ ಕೃಷ್ಣಂ ೮೯

ವ॥ ಅನ್ನೆಗಮಾ ಸರಿನ್ನಾಥನ ತಟಂಬಿಡಿದು ಸಾರ್ದ ತೆರೆಮಾಲೆಗಳ ಪಳುಕಿನ ಸೋಪಾನಪಙ್ಕ್ತಿಗಳಾಗೆಯುಂ, ಅತಳಸ್ಪರ್ಶತೋಯಮೆ ಯಥಾಕಾಮಪ್ರಮಾಣತೋಯಮಾಗೆಯುಂ, ಲವಣಭಾವಮೆ ವಿಮಲಾಮೃತಸ್ವಾದುತ್ವಮನಪ್ಪುಕೆಯ್ಯೆಯುಂ, ಪ್ರೇಂಖಿತ ಶಂಖ ಸಮುದಯಮೆ ಬೆಳ್ದಾವರೆಗಳಾಗೆಯುಂ, ಬಾಡವಾನಲಶಿಖಾಶಕಲವೃಂದಮೆ ಕೆಂದಾವರೆಗಳಾಗೆಯುಂ, ತದುದ್ದಾಮಧೂಮಸ್ತೋಮಮೆ ನೀಲೋತ್ಪಲಂಗಳಾಗೆಯುಂ, ವ್ಯಕ್ತ ಮುಕ್ತಾಫಲಾಳಿಯೆ ಮೃಣಾಳಂಗಳಾಗೆಯುಂ, ನೀಳರತ್ನಚಯಮೆ ಚಂಚರೀಕಂಗಳಾಗೆಯುಂ, ಸಂಸಕ್ತ ಶುಕ್ತಿಪುಟಸಂಘಾತಮೆ ರಥಾಂಗಮಿಥುನಂಗಳಾಗೆಯುಂ, ಡಿಂಡೀರಪಿಂಡಪಟಲಮೆ ಹಂಸೆಗಳಾಗೆಯುಂ, ಪಾನೀಯದ್ವಿಪನಿಕಾಯಮೆ ಪುಳಿನಂಗಳಾಗೆಯುಂ, ಮಹಾಮತ್ಸ್ಯಕಚ್ಛಪಕುಳೀರಕುಂಭೀರಕಮಕರನಕ್ರಚಕ್ರಮೆ ವಿವಿಧಸುಗಂಧವಾರಿಪೂರಣಯೋಗ್ಯ ನಾನಾದ್ರೋಣೀಕಟಾಹ ಪರಿಕರಂಗಳಾಗೆಯುಂ, ಇಂತಾ ಸರಿತ್ಪತಿಯೆ ಸರಸಿಯಾದಲ್ಲಿ

ಚಂ॥ ಸರಸಿಯ ನೀರಜಂಗಳ ರಜಂಗಳ ಪೊಂಪುೞಿವೆತ್ತು ಕಂಪಿನೊಳ್
ಬೆರಸಿ ತದಂತರಂಗದ ತರಂಗದ ನಿರ್ಮಲಬಿಂದುವೃಂದಮಂ
ಧರಿಯಿಸಿ [2]ತೀರಸಾಗರದ ಸಾರಸದಾಗರಮಂ ತೆರಳ್ಚಿ ಸಂ
ಚರಿಸಿದುದೊಪ್ಪುವಂತುಪವನಂ[2] ಪವನಂ [3]ನಿಜಮಂದಚಾರದಿಂ[3] ೯೦

ವ॥ ಆ ಸರೋವರಸಮೀರಣನಂ ಸರೋಜಲೋಚನಂ ಮನದೆಗೊಂಡು ಬರ್ಪಲ್ಲಿ

---

[1] ಗಜಗಮನದೆ (ಖ) [2] ತೀರಸಾರಸದಸಾರಸದಾಸರವಂ ತೆರಳ್ಚಿ ಸಂಚರಿಸೆ ವಿರಾಜಿಸಿತ್ತು ಪವನಂ (ಖ) [3] ನಿಜಮಾಂದಿರಮಂದಚಾರದಿಂ (ಕಗ)

ಉ॥ ತಾವರೆ ವಕ್ತ್ರಮೂರ್ವಿ ನಳಿತೋಳ್ ಪೊಣರ್ವಕ್ಕಿ ಪಯೋಧರದ್ವಯಂ
ಸೇವಳರೇಕೆ ಬಾಸೆ ಪುಳಿನಂ ಜಘನಂ ಜಲಶೀಕರಾಳಿ ಮು
ಕ್ತಾವಳಿ ಬಾಳೆಮೀನ್ ನಯನಮಾಗಿರೆ ಜಂಗಮಪದ್ಮಿನೀಕುಲಂ
ಸ್ಥಾವರಪದ್ಮಿನೀಸ್ಥಳಿಗೆ ಬರ್ಪವೊಲೊಪ್ಪಿದುದಂಗನಾಜನಂ ೯೧

ಕಂ॥ ಅಂಬರದರ್ಪಣದೊಳ್ ಶೋ
ರ್ಪಂಬುಜನಾಭಾಂಗನಾಜನಪ್ರತಿಬಿಂಬಾ
ಡಂಬರಮೆನೆ ಕೃಷ್ಣಾಜ್ಞೆಯಿ
ನಂಬರದಿಂದಮರಿಯರ್ ಕೊಳಕ್ಕಿಳಿತಂದರ್ ೯೨

ವ॥ ಆ ದೇವಗಣಿಕೆಯರ್ ಪೆಂಡವಾಸದೆಳವೆಂಡಿರೊಳ್ ತಂಡಂಗಲಸಿ ನಿಲೆ

ಕಂ॥ ಜಲಧಿತಟವನಲತಾಸಂ
ಕುಲಮಂ ಶೃಂಗಾರಜಲಧಿತಟವನಲತೆಗಳ್
ಗೆಲೆವಂದು [1]ನಿಂದುವೆಂದೆನೆ[1]
ಜಲಧಿ[2]ಸರೋವೇಲೆಯಲ್ಲಿ[2] ಬಾಲೆಯರೆಸೆದರ್ ೯೩

ಮ॥ಸ್ರ॥ ಪೊಳೆವನ್ನಂ ತಾರಹಾರಂ ನೆಲೆವೊಲೆ ಪೊಡರ್ವನ್ನಂ ಕುರುಳ್ ಸೂಸುವನ್ನಂ
ಸೆಳೆವನ್ನಂ ತೆಳ್ವಸಿರ್ ಮೇಲುದು ಮಿಳಿರ್ದೆಸೆವನ್ನಂ ಭುಜಾಂದೋಳಗುಂಜ
ದ್ವಳಯಂ ವಿಕ್ಷೇಪಲೀಲಾಲಸಚರಣರಣನ್ನೂಪುರಂ ಯಾನಕೂಜ
ತ್ಕಳಕಾಂಚೀಭಾಜನಂ ಸ್ತ್ರೀಜನವಿಳಿದುದು ತತ್ತೀರಸೋಪಾನದಿಂದಂ ೯೪

ಕಂ॥ ಒದವಿದ ನಿಜಲಾವಣ್ಯದಿ
ನುದಕಂ ಸ್ಪರ್ಶಾನುಮಿತಮೆನಲ್ ಪೆಣ್ಬಡೆ ನಿಂ
ದುದು ಪೊಕ್ಕು ಜಾನುದಘ್ನೋ
ರುದಘ್ನ ಕಟಿದಘ್ನ ನಾಭಿದಘ್ನ ಸ್ಥಳದೊಳ್ ೯೫

ಅಂಗನೆಯರ್ ಜಲದೊಳ್ ಪುಗೆ
ಮೀಂಗಳಡಂಗುವುದುಮವರ ನಯನಪ್ರತಿಬಿಂ
ಬಂಗಳೆ ಪೊಳೆವೆಳಮೀಂಗಳ
ಭಂಗಿಯನನುಕರಿಸಿ ಪೊಳೆದುವಾ ತಿಳಿಗೊಳದೊಳ್ ೯೬

ವ॥ ತದನಂತರಂ

---

1 ನಿಂದುಪಿಂದೆನೆ (ಕಗ) 2 ಸರೋವಲಯದಲ್ಲಿ (ಖ)

ಮ॥ ಮಳಯಾಯಾತಸಮೀರಸಂಚಳಲತಾಸಂತಾನಕಂ ತನ್ಮರ
ಲ್ಗಳನೊಂದೊಂದಱ ಮೇಲೆ ಕೆಂದಳಿರ್ಗಳಿಂ ಸೂಸಿತ್ತೆನಲ್ ಕೇಳಿ ಸಂ
ಚಳೆಯರ್ ತುಳ್ಕಿದರೊರ್ವರೊರ್ವರೊಳತಿಸ್ವಚ್ಛಾಂಬುವಂ ಕೆಂದಳಂ
ಗಳನೀಯಲ್ ವಳಯಸ್ವನಂ ವಿಹರಣಪ್ರಸ್ತಾವನಾತೂರ್ಯಮಂ ೯೭

ಚಂ॥ ಕರತಳವಾರಿ ತಳ್ತು ನಖರದ್ಯುತಿವಾರಿಯೊಳೊಂದಿ ಹಾರಬಂ
ಧುರರುಚಿವಾರಿಯೊಳ್ ಬೆರಸಿ ಸುಸ್ಮಿತದೀಧಿತಿವಾರಿಯೊಳ್ ತನೂ
ದರಿಯುರಲಂಪಿನಿಂ ತುಳುಕೆ ಕೃಷ್ಣನ ಮೇಲೆ ಪೊದಟ್ಟುದೆಂದು ಕ
ಪ್ಪುರವಟಿಕೆಯಂತಿರಾಲಿವಟಿಕೆಯಂತಿರಲರ್ವಟಿಕೆಯಂತಿರೆತ್ತಲುಂ ೯೮

ವನರುಹಲೋಚನಂ ನಿಜಕರಾಂಜಲಿವಾರಿಯಿನೊರ್ವೆ ಪಾರ್ಶ್ವವ
ರ್ತಿನಿಯ ಸಮುನ್ನತಸ್ತನಯುಗಕ್ಕಭಿಷೇಕಮನೀಯೆ ಕಂಡು ಮಾ
ನಿನಿ ತನಗೀರ್ಷ್ಯೆ ಪುಟ್ಟೆ ಮನದೊಳ್ ನಯನಾಂಜಲಿವಾರಿಯಿಂ ಪುನಃ
ಪುನರಭಿಷೇಕಮಂ ನಿಜಸುವೃತ್ತಕುಚಕ್ಕೆ ಪೆಱಳ್ ನೆಗೞ್ಚಿದಳ್ ೯೯

ಸವತಿಯ ಮೇಲೆ ಮುಂ ತುಳುಕಿ ತನ್ನಯ ಮೇಲಧಿಪಂ ಬೞಿಕ್ಕೆ ತು
ಳ್ಕುವ ವಿಮಲಾಂಬುಗಳ್ ತನಗೆ ಮನ್ಮಥನಂಬುಗಳಂತಿರೆಯ್ದೆ ಕೋ
ಪವನೊಳಕೊಂಡು ತನ್ವಿ ಬಸಮಲ್ಲದ ಕೃಷ್ಣನ ಮೇಲೆ ತಾಂ ತುಳುಂ
ಕುವ ಸಲಿಲಕ್ಕೆ ಕುಂಕುಮದ ರಾಗಮನಿತ್ತಳಪಾಂಗರಾಗದಿಂ ೧೦೦

ಕಂ॥ ಮತ್ತೊರ್ವಳ್ ಮೇಳದ ವಧು
ವಿತ್ತಳ್ ಪರಿಹಾಸಕಾಂತಿಯಿಂ ಕೃಷ್ಣನ ಮೇ
ಲೊತ್ತುವ ನಿಜಕರಯಂತ್ರದ
ಕತ್ತುರಿನೀರ್ಗಮಲಮಲಯಜದ್ರವರುಚಿಯಂ ೧೦೧

ಮ॥ ತನು ಲಾವಣ್ಯರಸಂಗಳಂ ಪಸರಿಸುತ್ತಿರ್ಪನ್ನೆಗಂ ಕಣ್ಣುಮಂ
ಮನಮಂ ಪಂಕರುಹಾಕ್ಷನೊಳ್ ಪಸರಿಸುತ್ತುಂ ತೋಯಮಂ ತನ್ಮುಕುಂ
ದನ ಮೇಲಟ್ಟುಱುಕೆಯಿಂ ಪಸರಿಸುತ್ತಿರ್ದಳ್ ಪೆಱಳ್ ತನ್ನ ಮೇ
ಲೆನಿತಾನುಂ ನನೆಯಂಬುಗಳ್ ಪಸರಿಪನ್ನಂ ಕಾಮಕೋದಂಡದಿಂ ೧೦೨

ಉ॥ ತುಳ್ಕೆ ದರಸ್ಮಿತಂ ವದನದಿಂದನುರಾಗರಸಂ ಕಟಾಕ್ಷದಿಂ
ತುಳ್ಕೆ ಕುಚಾಗ್ರದಿಂ ತುಳುಕೆ ಹಾರಮರೀಚಿ ಲತಾಂತಲೇಖೆಯಿಂ
ತುಳ್ಕೆ ವಿಳಾಸಮಂಗಜನ ಬಾಳ ಪೊಗರ್ ನಿಜಬಾಹುಮೂಲದಿಂ
ತುಳ್ಕೆ ತುಳುಂಕಿದಳ್ ಹರಿಯಮೇಲೆ ಪೆಱಳ್ ತರಳಾಕ್ಷಿ ತೋಯಮಂ ೧೦೩

ಮ॥ಸ್ರ॥ ಸ್ಫುರಿತಾಂಗಂ ಸೂಸೆ ಲಾವಣ್ಯಮನೆಸೆವಲರ್ಗಣ್ ಚೆಲ್ಲಮಂ ಸೂಸೆ ಲೀಲಾ
ದರಹಾಸಂ ಸೂಸೆ ಬೆಳ್ದಿಂಗಳನಲಘುಕುಚಂ ಮೇಲುದಂ ಸೂಸೆ ಚಾಮೀ
ಕರಕಾಂಚೀಮಂಜುಗುಂಜಧ್ವನಿ ಕಿವಿಗಮರ್ದಂ ಸೂಸೆ ತಳ್ಪೊಯ್ದ ಸುಯ್ ಕ
ತ್ತುರಿಗಂಪಂ ಸೂಸೆ ಲಕ್ಷ್ಮೀಪತಿಯ ತನುವಿನೊಳ್ ಸೂಸಿದಳ್ ನೀರನೊರ್ವಳ್ ೧೦೪

ಸ್ತನಲಕ್ಷ್ಮ್ಯಾಲೋಕನಂ ಸಿಂಪಿಸೆ ಮುರರಿಪು ತನ್ವಂಗಿ ತಾರುಣ್ಯಭಾರಾ
ತಿನಿರೋಧಾಲಸ್ಯದಿಂ ಮೆಯ್ಮುಱಿದಳೆನೆ ಪೆಱಳ್ ಸಾಚಿಯಿಂ ನಿಂದು ಪೀನ
ಸ್ತನಪಾರ್ಶ್ವೋದ್ಭಿನ್ನವಸ್ತ್ರಾಂಚಲೆ ಹರಿಕರಿಯಂತ್ರಾಂಬುಧಾರಾವಳೀಸ್ಪ
ರ್ಶನಸೌಖ್ಯಾಪೇಕ್ಷೆಯಿಂ ಭೋಂಕೆನೆ ಮೊಲೆದೆಱೆಪಂ ಪೆತ್ತವೋಲ್ ಶೋಭೆ
ವೆತ್ತಳ್ ೧೦೫

ಕಂ॥ ಮುರಮಥನಂ ಸಿಂಪಿಸೆ ಕ
ತ್ತುರಿನೀರಂ [1]ತನ್ಮೃಗೋದ್ಭವಾಸಿತಧಾರಾ[1]
ಪರಿಕಲಿತಪರಾವೃತಮುಖಿ
ಹರಿಹಸ್ತಾಕೃಷ್ಟಕೇಶಹಸ್ತೆವೊಲೆಸೆದಳ್ ೧೦೬

ಚಂ॥ ಉದಯನಗೇಂದ್ರದಂತಿರೆ ಬೃಹದ್ಭುಜಕೂಟಯುಗಂ ಮುಕುಂದನ
ಭ್ಯುದಿತದಿನೇಶನಂ ಪಱಿಯೆ ಹಸ್ತದ ಕಾಂಚನವಾರಿಯಂತ್ರಮಂ
ತದಱಿ ನಿಮಿರ್ಕೆವೆತ್ತ ಘುಸೃಣೋದಕಧಾರೆ ನವಾರುಣಾಂಶುವೋಲ್
ಪೊದೆಯಿಸಿತಂಬುಜಾನನೆಯರೆಂಬ ನವಾಂಬುಜಿನೀಕದಂಬಮಂ ೧೦೭

ಮ॥ ಸಕಲಾಂತಃಪುರಕಾಮಿನೀನಿಕರನಿರ್ಯದ್ಯಂತ್ರಧಾರಾಕರಂ
ಬಕಮಂ ತಾಳ್ದುಳಿವಿಂಗೆ ಪೋಗೊಗೆದ ಮೂರ್ಣಾಳಂಗಳೆಂದಂಜೆವಿಂ
ಡು ಕಲಧ್ವಾನಮನೆತ್ತಲುಂ ಪಸರಿಸುತ್ತೋರಂತಮಂ ಪಾಱಿ ಪಾ
ಱಿ ಕರ್ದುಂಕಲ್ ಮೊದಲಿಟ್ಟುವೇಂ ಪಿರಿದೊ ವಾರಿಕ್ರೀಡನಾಡಂಬರಂ ೧೦೮

ಮ॥ಸ್ರ॥ ಮುಡಿಯೊಳ್ ಜೋಲ್ದಿರ್ದುದಂ ಮಲ್ಲಿಗೆಯ ಕಿಱುಮುಗುಳ್ಮಾಲೆಯಂ
ಸನ್ಮೃಣಾಳಂ
ತೊಡರ್ದತ್ತೆಂದಂತದರ್ಕೆನ್ವಳಿಸಿ ಮುಡಿಗೆ [2]ಪಾಯ್ವಂಚೆಗಂ ಬೆರ್ಚಿ[2] ಸಾಸಿ
ರ್ಮಡಿ[3]ವೆರ್ಚಲ್[3] ಭೋಂಕೆನಲ್ ಮೆಯ್ಮುಱಿದು ಪಿಡಿದ ಲೀಲಾಬ್ಜದಿಂ
ಪೊಯ್ವ ಪಾಂಗಿಂ
[4]ಕಡೆಗಣ್ಣಿಂ ಪಿಂದೆ[4] ಸೂಸುತ್ತಬಲೆ ಹರಿಯೊಳಾನಂದಮಂ ತಂದಳೊರ್ವಳ್
೧೦೯

---

1 ತನ್ಮೃಗೋತ್ಥವಾಸಿತಧಾರಾ (ಮೊಅ) 2 ಪಾಯ್ವಂಚೆಯಿಂ ಬೆರ್ಚು (ಕಗ) 3 ಪೆರ್ಚಲ್ (ಕಗ) 4 ಕಡೆಗಣ್ಣಿಂ ಪಿಂದೆ (ಕಗ) ಕಡೆಗಣ್ಗಿಂ ಪಿಂದೆ (ಮೊಅ)

ಚಂ॥ ಸವನದಿನಂಗರಾಗಮುಮಲಕ್ತಕರಾಗಮುಮೆಯ್ದೆ ಪೋಗಲಂ
ತವಯುವದಲ್ಲಿ ತೋಱುವುಗುರ್ವೊಯ್ಲ್ಗಳವಟ್ಟ ವ್ರಣಂಗಳುಂ ವಧೂ
ನಿವಹದೊಳಾವ ಮಂಡನಮುಮಂ ಗೆಲೆವಂದುವು ಮಿಕ್ಕ ಮಂಡನಂ
ಯುವತಿಜನಕ್ಕದೇವುದೊ ರತೋತ್ಸವಚಿಹ್ನಮೆ ದಿವ್ಯಮಂಡನಂ ೧೧೦

ಕಂ॥ ಶ್ರುತಿಕುಮುದಂಗಳ್ ಕೇಳೀ
ಪತಿತಂಗಳ್ ಕೊಳನ ತಡಿಗೆ [1]ಸಾರ್ದುವು ತೆರೆಯಿಂ[1]
ಶ್ರುತಿಮಂಡನವಾದೊಡಮೇಂ
ಪತಿತರ್ ನಿರ್ಗುಣರ ನಡುವೆ [2]ಯೋಗ್ಯರೆ[2] ಸುಳಿಯಲ್ ೧೧೧

ಮ॥ ಲಲನಾಸಂತತಿ ಪಲ್ಲವಾಧರದ ಕೆಂಪಂ ಕಣ್ಮಲರ್ಗಿತ್ತು ಕ
ಣ್ಮಲರ್ವೆಳ್ಪಂ ನಿಜಪಲ್ಲವಾಧರಕೆ [3]ಕೊಟ್ಟಂದೀಗ ಮಾಱುಗೊಳ್ತಿ[3]
ಸಲಿಲಕ್ರೀಡೆಯೊಳೆಂಬಿನಂ ವನಿತೆಯರ್ ನೀರಾಟದಿಂದಾದ ಕ
ಣ್ಮಲರ್ಗೆಂಪಿಂದಧರೋಷ್ಠಪಲ್ಲವದ ಬೆಳ್ಪಿಂ ನಾಡೆ ಕಣ್ಗೊಪ್ಪಿದರ್ ೧೧೨

ವ॥ ಅಂತು ಸಾಗರಕ್ರೀಡೆಯುಂಮಾಡಿ ಪುರುಷೋತ್ತಮಂ ತತ್ತೀರ ಭೂರಂಗಮ ನಲಂಕರಿಸಿ ನಿಲ್ವುದುಂ

ಮ॥ಸ್ರ॥ ಪರೆದಾನೀಳಾಳಕಂ ಜೋಲ್ದಲೆವ ಕಚಭರಂ ಕೆಂಪುವೆತ್ತಿರ್ದ ಕಣ್ದಾ
ವರೆ ಬೆಳ್ಪೇಱರ್ದ ಬಿಂಬಾಧರಮಣಿ ತನುಸಂ ನಾಂದು ಪತ್ತಿರ್ದ ಚೀನಾಂ
ಬರವಿಂಬಾಗಿರ್ಪಿನಂ ಬಂದುದು ಮೃದುತರಲೀಲಾಪದನ್ಯಾಸಮುದ್ಯ
ದ್ದರಹಾಸಂ ಪೆಂಡವಾಸಂ ವಿಜಿತರತಿವಿಳಾಸಂ ಸುಖಶ್ರೀನಿವಾಸಂ ೧೧೩

ವ॥ ಅನಂತರಂ ದಿವ್ಯಾಭರಣಭೂಷಣಂಗಳಿಂ ಪಸದನಂಗೆಯ್ದಲ್ಲಿ

ಚಂ॥ ಸಲಿಲವಿನೋದದೊಳ್ ಹರಿ ತಳುಂಕಿದ ಕುಂಕುಮವಾಃಕಣೋತ್ಕರಂ
ಮಲಯಜವಾಃಕಣಾವಳಿ ಮೃಗೋದ್ಭವವಾಃಕಣ[4]ವೃಂದಮಿಾ ಲತಾ
ಲಲಿತೆಯರಂಗದೊಳ್[4] ತೊಡರ್ದು ಪೋಗದೆ ನಿಂದುವೆನಲ್ ವರಾಂಗನಾ
ವಲಿಗೆಸೆದತ್ತು ಮಾಣಿಕದ ಮುತ್ತಿನ ನೀಲದನರ್ಘ್ಯಮಂಡನಂ ೧೧೪

ವ॥ ಆಗಳ್

---

[1] ಸಾರ್ದಾರ್ತ ತೆರೆಯಿಂ (ಕ) [2] ಯೋಗ್ಯಮೆ (ಖ) [3] ಕೊಟ್ಟಂದೀಗ ಮಾಱುಾಡಿತೀ (ಕ) ಕೊಟ್ಟೊಂದೀಗ ಮಾಱುಕೊಡ್ಡಿತೀ (ಖ) [4] ವೃಂದಮಿಾಗಳೀಲಲನೆಯರಂಗದೊಳ್ (ಖ)

ವ॥ ಕಡಲಿಂತಂಬುಜಷಂಡಮಾಯ್ತುಮರಿಯರ್ [1]ಕ್ರೀಡಾರ್ಥದಿಂದೊರ್ವೊದಲ್[1]
ನಡೆತಂದರ್ [2]ಧರೆಗಿಂತಿದರ್ಕೆ ಸಕಲದ್ವೀಪಾಧಿಪಕ್ರೀಡೆಯುಂ[2]
ಪಡಿಯಾಯ್ತಿಲ್ಲಿದಮಾನುಷಂ ವಿಭುನಿಜಾಂಬುಕ್ರೀಡೆಯೆಂದರ್ಜುನಂ
ನುಡಿಯಲ್ ಸಸ್ಮಿತವಕ್ತ್ರನಾಲಿಸುತುಮಿರ್ದಂ [3]ದೇವಕೀನಂದನಂ[3] ೧೧೫

ಇದು ಸಮಸ್ತಕಮಳಭವಾಂತಮಾಲಾಘಟೀಘಟಿತಾರಘಟ್ಟಘಟನಾ
ಸ್ವತಂತ್ರನಿಜಸ್ವರೂಪನಿರೂಪಣಚಕಿತ ಸಕಲಾಮ್ನಾಯತಂತ್ರ
ಲಕ್ಷ್ಮೀಕಾಂತಶ್ರೀಪಾದಭಕ್ತಿಯುಕ್ತ ಸುಕವೀಂದ್ರ
ರುದ್ರಪ್ರಣೀತ ಶ್ರೀಜಗನ್ನಾಥವಿಜಯಮಹಾ
ಪ್ರಬಂಧದೊಳ್ ತ್ರಿಪುರಾಂತಕದರ್ಶನ
ಹೇಮಂತಶಿಶಿರವಸಂತವನಜಲ
ಕ್ರೀಡಾವರ್ಣನಂ
ಚತುರ್ದಶಾಶ್ವಾಸಂ

---

1 ಕ್ರೀಡಾರ್ಥವೆಂದೊರ್ವೊದಲ್ (ಕಗ) 2 ಧರೆಗಿಂತಿದುಂ ಸಕಲದೇವದ್ವೀಪಸತ್ಕ್ರೀಡೆಯುಂ (ಖ) 3 ರುಕ್ಮಿಣೀವಲ್ಲಭಂ (ಖ)

ಪಂಚದಶಾಶ್ವಾಸಂ

ಕಂ॥ ಶ್ರೀ ತನಗೆ [1]ನಲ್ಲಳಪ್ಪಂ
ದಾ[1] ತೋಯಧಿತಟನೊಳಿರ್ಪವೋಲ್ ಹರಿ ವೀರ
ಶ್ರೀ ತನಗದೊಂದುಕಾರ್ಯದ
ಕೌತುಕದಿಂ ಪೊರ್ದೆ ವಾರ್ಧಿತೀರದೊಳಿರ್ದಂ ೧

ವ॥ ಅನ್ನೆಗಂ ಷಟ್ಪುರದೈತ್ಯನಾಯಕಂ ನಿಕುಂಭನಂಭೋದಮಾರ್ಗಾಂತರದಿಂ ದಂತರ್ಹಿತಸ್ವರೂಪನಾಗಿ ಬರುತ್ತುಂ ವಸುದೇವಸುತನ ಸಾಗರ[2]ಕ್ರೀಡಾವಿಲಾಸವಂ[2] ಕಂಡು ಕೌತುಕಂಬಟ್ಟು ನೋಡಿ ಲತೆಯೆ ಸತಿಯರಾದಂತೆಯುಂ ಸೌದಾಮಿನಿಯೆ ಭಾಮಿನಿಯರಾದಂತೆಯುಂ ವಿಧುಕಳೆಯೆ ವಧುಗಳಾದಂತೆಯುಂ ಮೃಣಾಳಿಕೆಯ ಬಾಳಿಕೆಯರಾದಂತೆಯುಂ ನನೆಯಂಬೆ ನಿತಂಬಿನಿಯರಾದಂತೆಯುಂ ಕಂತುಶಕ್ತಿಯೆ ಕಾಂತೆಯರಾದಂತೆಯುಂ ಸೊಗಯಿಸುವನಂತಕೋಟಿಕಾಂತೆಯರೊಳ್ ರೂಪವಿಳಾಸದಿಂ ದೇಸೆವೆತ್ತ ಯಾದವಕನ್ಯೆಯಪ್ಪ ಕಳಕಂಠರುತಿಯಂ ಮರಾಳಗತಿಯಂ ಶೃಂಗಾರವತಿಯಂ ಭಾನುಮತಿಯಂ ಕಂಡು ಕಣ್ಸೋಲ್ತು ಕನ್ನೆಯಂ ತಳೆದುಕೊಂಡು

ಮ॥ಸ್ರ॥ ವಿಲಸನ್ಮಾಣಿಕ್ಯ[3]ಭೂಷಾರುಚಿರಚಸೆ[3] ಘನಶ್ಯಾಮದೇಹಪ್ರಭಾಮಂ
ಡಲಿ ವಿಸ್ಪಷ್ಟಾಟ್ಟಹಾಸದ್ಯುತಿ ವಿತತನಭಶ್ಚಕ್ರದೊಳ್ ಸಂಜೆಯುಂ ಕ
ತ್ತಲೆಯುಂ ಬೆಳ್ದಿಂಗಳುಂ ತೀವಿದುದು ಪಗಲಿದೆಂಬಂತಗುರ್ವಾಗೆ [4]ದಕ್ಷಂ
ಖಲನಾಕಾಶಕ್ಕೆ[4] ತೊಟ್ಟೆಂದೊಗೆದನೊಗೆವಿನಂ ಯಾದವಾಕ್ರೋಶನಾದಂ ೨

ವ॥ ಆಗಳ್

ಕಂ॥ ಗಾಂಡಿವಮುಂ ಪಿಡಿದಕ್ಷಯ
ಕಾಂಡಧಿಯುಂ ಬಿಗಿದು ಕನ್ಯಕಾಚೋರನನಾ
ಖಂಡಲಸುತನೆಯ್ದಿ ನಭೋ
ಮಂಡಲನುಂ ಪುದಿದನೆಯ್ದೆ ಶರಪಂಜರದಿಂ ೩

---

[1] ನಲ್ಲಳಪ್ಪಂತಾ (ಖ) [2] ಕ್ರೀಡಾಭಿರಾಮವಿಭೂತಿಯಂ (ಖ) [3] ಚೂಡಾಮಣಿರುಚಿರ (ಕಗ) [4] ರಕ್ತೇಕ್ಷಂ ಖಲನಾಕಾಶಕ್ಕೆ (ಕ) ರಕ್ತೇಕ್ಷಣನಾಕಾಶಕ್ಕೆ (ಗ)

ಮ॥ ಅಮರೇಂದ್ರಾತ್ಮಜನೆಚ್ಚು ವಾಯುಪಥದೊಳ್ ಕೇರ್ಗಟ್ಟಿದೊಂದಸ್ತ್ರಜಾ
ಲಮನೊಟ್ಟೈಸಲದೆಂತುಮಾರದೆ ಖಳಂ ಸ್ತ್ರೀರತ್ನದಿಂ ವೀರರ
ತ್ನಮನರ್ಘ್ಯಂ ಪಿಡಿದುಯ್ವನೀತನನೆನುತುಂ ಕನ್ನೆಯಂ ಬಿಟ್ಟು ದು
ರ್ದಮದೋರ್ದರ್ಪದಿನೆತ್ತಿಕೊಂಡು ನೆಗೆದಂ ವ್ಯೋಮಕ್ಕೆ ಗಾಂಡೀವಿಯಂ ೪

ವ॥ ಆ ವ್ಯತಿರೇಕದೊಳತಿಕುಪಿತನಾಗಿ ಶಂಬರಸೂದನಂ [1]ಬೆರಸು ನಡೆತಂದು[1]

ಚಂ॥ ಧನುವಿನ ಟಂಕೃತಂ ವಿಶಿಖಭೀಂಕೃತಮುತ್ಕಟಕೋಪಹೂಂಕೃತಂ
ವನಜಭವಾಂಡಮಂ ಪುದಿಯೆ ದೈತ್ಯಹರಂ ಶರಭಿನ್ನಪಾಕಶಾ
ಸನಗಜಕುಂಭನಂ ನಯನರಾಗವಿನಿರ್ಜಿತತಪ್ತಶಾತಕುಂ
ಭನನಸಮಾನರೌದ್ರರಸಕುಂಭನನೆಯ್ದಿದನಾ ನಿಕುಂಭನಂ ೫

ವ॥ ಅಂತೆಯ್ದಿ ಕೌಂತೇಯನಂ ಕವುಂಕುಳೊ[2]ಳವುಂಕಿ ಪೋತರ್ಪ[2] ಯಾತುಧಾನ ಪ್ರಧಾನನಂ ನೋಡಿ ಬಲಭದ್ರಭೀಮಸೇನಜರಾಸಂಧಶಲ್ಯ ಪ್ರಭೃತಿ ನಾಗಾಯುತಬಲಪ್ರಖ್ಯಾತರಾತತಜ್ಯಂ ಮಾಡಲಾರದಾ ದಿವ್ಯಧನುವನೇಱಿಸಿ ಯಂತ್ರಮತ್ಸ್ಯಮನೆಚ್ಚು ಪಾಂಚಾಲರಾಜನೂಜೆಯಂ ಕೈಕೊಂಡು ಸ್ವಯಂವರಕ್ಕೆ ನೆರೆದನೇಕನರಪಾಲಕರಂ ಬೆಂಕೊಂಡ ಮಹಾಪ್ರಚಂಡನಂ, ಪಾಕಶಾಸನಪ್ರೇಷಿತಪುಷ್ಕರಾವರ್ತಘನಧಾರಾವರ್ತ ದುರ್ಭೇದ ನಿರ್ಭರಕಾಂಡಪಂಜರದಿಂ ಖಾಂಡವವನಮನಾಶುಶುಕ್ಷಣಿಯನೂಡಿ ರೂಢಿವೆತ್ತವಾರ್ಯ ಭುಜಬಲವೀರ್ಯನಂ, ಯುಧಿಷ್ಠಿರರಾಜಸೂಯಯಾಗವ್ಯಯಧನಾಗಮನಿಮಿತ್ತಮುತ್ತರ ದಿಗ್ವಿಜಯದೊಳ್ ಉತ್ತರದಿಕ್ಪಾಲಕನಪ್ಪ ಕುಬೇರನನದಿರ್ಪಿ ಕಪ್ಪಂಗೊಂಡು ಬಂದಪ್ರತಿಮ ಪ್ರತಾಪನೆನಿಸಿದನಂ, ಅನಿತಲ್ಲದಿನ್ನಾಗಾಮಿಕಾರ್ಯದೊಳಿಂದ್ರಕೀಲಕುತ್ಕೀಲದಲ್ಲಿ ಮೂಕ ದಾನವಸೂಕರವ್ಯಾಜದಿಂ ರಾಜಮೌಳಿಯಂ ಮಲ್ಲಯುದ್ಧದಿಂ ಗೆಲ್ಲಂಗೊಂಡು ಪಾಶುಪತಾಸ್ತ್ರಮಂ ಪಡೆದಪ್ರತಿಮಲ್ಲನೆನಿಸಲುಂ, ಏಕಾದಶರುದ್ರ ದ್ವಾದಶಾದಿತ್ಯಪ್ರಮುಖನಿಖಿಲಾಮರಗ್ರಾಮಣಿಚಕ್ರವರ್ತಿಯೆಂಬಾ ಮಹೇಂದ್ರಗಮಸಾಧ್ಯರುಮಾದ [3]ಹಿರಣ್ಯಪುರಸ್ಥಿತಾಖಿಲಕಾಲಕೇಯರ[3]ನಸಂಖ್ಯಾತನಿವಾತಕವಚರಂ [4]ಧುರಂಧರೋದ್ವೃತ್ತಾತಳತಳತ್ತಾಳನಿಕಾಯಮಂ[4] ಸಾಯಕಸಂಘಾತದಿಂ ಯಮಪುರಕ್ಕೆ ಕಳುಪಿ ವಿಕ್ರಮಖ್ಯಾತಿಯನಪ್ಪುಕೆಯ್ಯಲುಂ ಘೋಷಯಾತ್ರಾಮಿಷದಿಂದೈಶ್ವರ್ಯಮಂ ಮೆಱೆಯಲೆಂದು ಬಂದ ದುರ್ಯೋಧನನನಾಯೋಧನಚ್ಛಲದಿಂ ಕಟ್ಟಿಕೊಂಡುಪೋಪ ಚಿತ್ರಾಂಗದನೆಂಬ ಗಂಧರ್ವರಾಜನಂ ಮಾರ್ಗಣೌಘದಿಂ ಮೇಘಮಾರ್ಗಮಂ ಕೆತ್ತು ಪೋಗಲೀಯದೆ ತಂದು ಧರ್ಮನಂದನಂಗೊಪ್ಪಿಸಿ

---

1 ಬೆರಸಂಬುಜನಾಭಂ ನಡೆದು (ಖ) 2 ಅವುಂಕಿ ಕೊಂಡು ಪೋಗುತಿರ್ಪ (ಖ) 3 ಹಿರಣ್ಯಕಶಿಪುಪುಲಸ್ತಿತಾಳಬಳ ಕಾಲಕೇಯರ (ಖ) 4 ಧುರಧರೆಯೊಳ್ ತಳತಾಳುಕನಿಕಾಯಮಂ (ಕ) ಧರಧುರನೊಳ್ ತಳತಾಳುಕ ನಿಕಾಯಮಂ (ಮೊಅ)

ಧೀರೋದಾತ್ತವೃತ್ತಿಯಿಂಜಿಸೆಯಲುಂ ಗೋಗ್ರಹಣಕಾರಣವೇಕಾದಶಾಕ್ಷೌಹಿಣೀವಾಹಿನಿ ವೆರಸು ಬಂದ ಕುರುವೃಂದವೆಲ್ಲಮನೊಂದೆ ತೇರೊಳ್ [1]ಕಾಲಚಕ್ರಂ[1] ಸುತ್ತುವಂತೆ ಸುತ್ತಿ ಕರ್ಣ ವಿಕರ್ಣ ಕೃಪ ಕೃತವರ್ಮ ದ್ರೋಣಾಶ್ವತ್ಥಾಮ ಭೀಷ್ಮ ಧಾರ್ತರಾಷ್ಟ್ರಾದಿಗಳಂ ಚಿತ್ರ ಯೋಧಿತ್ವದಿಂ ಪ್ರತ್ಯೇಕಂ ಗೆಲ್ದುದಲ್ಲದೆ ಸಂಕುಲದೊಳಂಕೆಗೊಂಡೆಲ್ಲರುಮನೊಂದೆ ಸಮ್ಮೋಹನಾಸ್ತ್ರದಿಂ ಮೋಹಿಸಿ ಮೂರ್ಧಾಭಿಷಿಕ್ತರ ಮುಡಿಗಟ್ಟಿನ ಪಟ್ಟಿಗಳನುಗಿಪಟಂಗೊಂಡು ತಲೆಗಾದು ಕಳಿಪಿ ನಿಜಾಗ್ರಜನ ಮರ್ಯಾದೆಯಂ ನಿಲಿಸಿ ನಿಸ್ಸಹಾಯಸಾಹಸಮಂ ತೋಱಲುಂ, ಬೞಿಕಂ ಕುರುಕ್ಷೇತ್ರದೊಳೇಕಾದಶಾಕ್ಷೌಹಿಣೀಸನಾಥಂ ಕುರುನಾಥನೊಡ್ಡಿ ಕಾದುವ ಪದಿನೆಂಟು ದಿನದ ಸಮರದಲ್ಲಿ ಮುನ್ನಂ ಸಮಸ್ತಭೂಮೀಶ್ವರವಿರಾಮನಂ ಪರುಶುರಾಮನಂ ಗೆಲ್ದ ಕೌರವಜ್ಯಾಯನಂ ಗಾಂಗೇಯನಂ ಶರಶಯ್ಯೆಯೊಳೊಱಗಿಸಿ ಭುಜಗರ್ವಮನಖರ್ವಂ ಮೆಱೆಯಲುಂ ಮಹಾರಥಾತಿರಥರುಮತಿಕ್ರಮಿಸಿ ಶಕಟ[2]ವ್ಯೂಹವಿರೂಪಿಸದ್ರಥನಂ[2] ಜಯದ್ರಥನನಸ್ತಮಿತಮಸ್ತಕಚ್ಛೇದನಂಗೆಯ್ದು ಸತ್ಯಪ್ರತಿಜ್ಞನಾಗಲುಂ, ಚಾಪಾಗಮಾಚಾರ್ಯನಂ [3]ಕ್ಷತ್ರಿಯಕುಲವೈದಗ್ಧ್ಯದೀಕ್ಷಾಗುರುವಂ[3] ಕುರುವಂಶಕುಲಿಶತ್ರಾಣನಂ ದ್ರೋಣನನಮೋಘಬಾಣರಾಜಿಯಿಂ ಪರಾಜಯಮನೆಯ್ದಿಸಿ ವಿಜಯೋನ್ನತಿಯನೆಯ್ದಲುಂ, ಲಲಾಟಲೋಚನರುದ್ರನಂ ರುದ್ರಾವತಾರನಂ ದಿವ್ಯಾಸ್ತ್ರಪ್ರಭ ಭುಜಬಲೋದ್ದಾಮನ ನಶ್ವತ್ಥಾಮನಂ ಸಂಗ್ರಾಮಮಂ ತೋಱಿದು ಪೋಪಂತು ತವದ ದೊಣೆಯಿಂ ತವದ ಮಂತ್ರಾಸ್ತ್ರಪ್ರಯೋಗದಿಂ ಕೈಮಿಕ್ಕು ಮೈಮೆದಳೆಯಲುಂ, ಕೃತವರ್ಮಕಾರ್ಮುಕಕೌಶಲಾಸ್ಖಲಿತ ಸಂಖ್ಯರನಕ್ಷೌಹಿಣೀದ್ವಿತಯಪರಿಸಂಖ್ಯರಂ ಬಾಹುಬಲಾವಲಿಪ್ತಕರಂ [4]ಸಂಶಪ್ತಕರನಕ್ಷೂಣಬಾಣವರ್ಷದಿಂ[4] ಗೀರ್ವಾಣಪಥಕ್ಕೆ ಸಲಿಸಿ ಶೌರ್ಯಾಡಂಬರವನವಲಂಬಿಸಲುಂ, ಸುಪ್ರತೀಕಸಾಮಜದಿಂ ಭೀಮಸೇನನನೊತ್ತಿಸುವ ಸಾಹಸೋನ್ಮತ್ತನಂ ಭಗದತ್ತನಂ [5]ತತ್ಕರಟಿಕರಟಂಬೆರಸು ವಿಕೃತಕಂಠನಪ್ಪಂತು[5] ಒಂದೇ ಭಲ್ಲದಿಂದೆಚ್ಚು ಬಲ್ಲಾಳ್ತನಮಂ ನೆಗೞ್ಚಲುಂ, ಭಾರ್ಗವಪ್ರಸಾದಾಸಾದಿತಚಾಪವಿದ್ಯನಂ ನಾನಾಸ್ತ್ರಪ್ರಯೋಗನಿರವದ್ಯನಂ ಜಗನ್ನೇತ್ರಪುತ್ರನಂ ದುರ್ಯೋಧನ ಪ್ರಿಯಮಿತ್ರನಂ ಕಾಕಪತಾಕನಂ ಕಾಲಪೃಷ್ಠಕಾರ್ಮುಕನಂ ಸಹಜಾತವ್ಯಕುಂಡಲಕಿರಣಮಂಡಲಾಕೀರ್ಣನಂ ಕರ್ಣನಂ ದ್ವಂದ್ವಕಲಹದಿಂ ದೇವಾಂಗನಾ ರತಿಕಲಹದೊಳ್ ತೊಡರ್ಚಿ ಸಂಪೂರ್ಣಮನೋರಥನಾಗಲ್ವೇಡಿರ್ದ ಭಾರತಮಲ್ಲನಂ ಬಿಡುಬಿಡೆಂದು ಗಜಱಿ ಗರ್ಜಿಸೆ

ಕಂ॥ ಪ್ರತ್ಯೇಕಂ ಪಾರ್ಥನಿರಲ್
ದೈತ್ಯನಸಂಖ್ಯಾತಕೋಟಿಮೂರ್ತಿಯನಾಂತೊಂ
ದತ್ಯಾರಭಟಿಯಿನಿರ್ದಂ
ಪ್ರತ್ಯಗ್ರಭ್ರಾಂತಿ ಕೃಷ್ಣನೊಳ್ ನೆಗೞ್ವಿನೆಗಂ ೬

[1] ಕಾಲಚಕ್ರಮಂ (ಕ) [2] ವ್ಯೂಹನಿರೂಪಿತ ಲಸದ್ರಥನಂ (ಕ) [3] ಕ್ಷತ್ರಿಯ ಕಳತ್ರ ಪೈಥಪ್ಯದೀಕ್ಷಾಗುರುವಂ (ಖ) [4] ಸಮಸಪ್ತಕರನಕ್ಷೌಹಿಣೀಬಾಣವರ್ಷದಿಂ (ಖ) [5] ತತ್ಕರಮುಂ ಕೆಂಠಂಬೆರಸು ನಿಕೃತ್ತಕಂಠನಪ್ಪಂತು (ಕ)

ಆ ವಿವಿಧಮೂರ್ತಿಯೊಳ್ ಮಾ
ಯಾವಿಯ ನಿಜಮೂರ್ತಿಯಿಂತುಟೆಂದರಿಂದೆಚ್ಚಂ
ಜ್ಯಾವಿಪುಲವಿರುತಿ ಜಗಮಂ
ತೀವಿರೆ ರೌದ್ರಾಸ್ತ್ರದಿಂ ಜನಾರ್ದನನಾಗಳ್ ೭

ಚಂ|| ಸಿಡಿಲಿಡಲಿಂಣ್ಮುವೊಳ್ಗಿಡಿಯೊಳಂ ಪಡಿಯುಳ್ಳೆನಲೆಯ್ದೆ ಸಾಯಕಂ
ನಡೆ ಖಳನದ್ರಿಭೇದಿಕುಲಿಶಂ ನಡಡೆನ್ನನಿದೊಂದು ನಟ್ಟುದಾಂ
ಪಡೆದೆನಿಷುಪ್ರಹಾರಮನಪೂರ್ವಮನೆಂದತಿಹರ್ಷಮತ್ತನಾ
ದೆಡೆಯೊಳೆ ತನ್ನಿಶಾಟಭುಜದಿಂದೆ ನುಸುಳ್ದಿಱಿತಂದನರ್ಜುನಂ ೮

ವ|| ಆ ವಿಜಯನ ಪರಾಜಯದೀನ[1]ವದನಮಂ ಹಿರಣ್ಯಾಕ್ಷರಿಪು ನಿರೀಕ್ಷಿಸಿ[1]

ಮ||ಸ್ರ|| ನೆರೆದೆಂಟುಂ ದಿಗ್ಗಜಂಗಳ್ ದಿಗಧಿಪತಿ[2]ಭಟಪ್ರೇರಿತಂಗಳ್[2] ಧೃತಾಡಂ
ಬರಶಂಬಸ್ಪರ್ಧಿದಂತಾಗ್ರದೊಳುರಮನಸಷ್ಟಂಭದಿಂದೊತ್ತೆ ತನ್ನಿ
ಷ್ಟ್ರರದಂತಸ್ಪರ್ಶಹರ್ಷೋದ್ಗತಪುಳಕದೆ ಮಾಱಿತ್ತು ದೈತ್ಯೇಶನಾ ಭೂ
ಧರಧುರ್ಯೋಭಂಗಳಂ ತೊಟ್ಟನೆ ಕೆಡಪುವನಾಶ್ಚರ್ಯಮಾ ದೈತ್ಯವೀರ್ಯಂ ೯

ಕಂ|| ಮಾದೇವಂಗಂ ಬಲ್ಲಿದ
ನೀದೈತ್ಯಂ ಬ್ರಹ್ಮವರದಿನಿವನಿಂದೆನಗಿಂ
ದಾದುದು ಪರಿಭವಮೆಂಬೀ
ಖೇದಮಿದೇಂ ಬ್ರಹ್ಮವರಮಿದಾರ್ಗಮಲಂಘ್ಯಂ ೧೦

ವ|| ಎಂದು [3]ಪಾಂಡುನಂದನನ ಮನದ ಹೇವಮಂ[3] ವಸುದೇವನಂದನಂ ಕಳೆದು ಪೆಂಡವಾಸತಂಡಮಂ ನಿಜಪುರಕ್ಕೆ ಕಳಿಪಿ ಕಲಹಕೇಳೀ ನಿಮಿತ್ತಂ ಬರುತ್ತುಮಿರ್ಪಿನಂ ನಿಕುಂಭನಂಬರಗತಿಯಿನತಿವೇಗದಿಂ ಪೋಗಿ ಷಟ್ಪುರಬಹಿರ್ದ್ವಾರಕ್ಕನತಿದೂರದೊಳಿರ್ಪು ದೊಂದಗ್ರಹಾರದೊಳೊರ್ವಂ ಮಹಾದ್ವಿಜನ್ಮನಧ್ವರಪೂಜೆಗೆಂದು ನೆರಪಿದ ಸಮಸ್ತರಾಜ ನ್ಯಕಮಂ ಸೌಜನ್ಯಕದಿನೊಡಗೊಂಡುಯ್ದು ದುರ್ಜಯ ಭುಜಾರ್ಜಿತಂಗಳಪ್ಪ ಚತುರ್ದಶ ಭುವನೈಕಸಾರವಸ್ತುವಾಹನ ಸಮೂಹಂಗಳಿನೌಚಿತ್ಯಮಂ ಮಾಡಿ ಲಬ್ಧಸಾಂಪರಾಯ ಸಹಾಯನಾಗಿ ನಿಜನಿಧನಸೂಚಕೋತ್ಪಾತಕೌತುಕರಸಮನಾತ್ಮೋದಾರವೀರ ರಸದಿ ನೊತ್ತಂಬರಿಸುತ್ತುಂ ಅಂದಿನಿರುಳಂ ಕಳೆದಾದಿತ್ಯೋದಯದೊಳಾಹವೋತ್ಸಾಹದಿಂದಿರೆ

---

[1] ವದನಮಂ ಕಾರುಣ್ಯದಿಂ ಹಿರಣ್ಯಕರಿಪು ನೋಡಿ (ಕಗ) [2] ಭಟಾಕೀಲಿತಂಗಳ್ (ಖ)
[3] ಪಾಂಡುಸುತನ ಮನಃಖೇದಮಂ (ಕಗ)

ಉ॥ ಭಾರತನುಲ್ಲನರ್ಜುನನ ಶಂಬರವೈರಿಯ ಚಂಡಚಾಪವಾ
ವೀರನವನೇಕದೇಶದೊಳಡಂಗಿದುದಲ್ಲದೆ [1]ಕೂಡಡಂಗೆ ದಿ
ಗ್ವಾರಣವಾರ್ದಡಂಗೆ[1] ಚತುರಂತಧರಿತ್ರಿ [2]ಪೊದಟ್ದು[2] ಷಟ್ಪುರ
ದ್ವಾರದೊಳಂದು ಕೇಳಲಣಮಾದುದು ಕೃಷ್ಣನ ಶಾರ್ಙ್ಗಘೋಷಣಂ ೧೧

ಆರವಮಿಕ್ಕಿ ಡೊಕ್ಕರಿಸೆ ಬಾಯ್ದೆಱೆದುರ್ವರೆ ಘೀಳಿಡುತ್ತುಮು
ದ್ಗಾರಿಸಿದತ್ತು ಗರ್ಭಗತಷಟ್ಪುರಸೇನೆಯನೆಂಬಿನಂ [3]ಮಹೀ
ದ್ವಾರದಿನಂದು[3] ಶಾರ್ಙ್ಗರುತಿಗೇಳ್ದು ಸಸಂಭ್ರಮಘೋಷಷಟ್ಪುರೀ
ಭೂರಿಬಲನಂ ಸಹಾಯನೃಪಕೋಟಿಯುತಂ ಪೊಱಮಟ್ಟುದಾವಗಂ ೧೨

ಕಂ॥ ಪೊಱಮಟ್ಟು ಬಲಂ ಕಿಕ್ಕಿಱಿ
ಗಿಱಿದೆತ್ತಂ ನಡೆಯೆ ತನ್ಮಹಾಸೈನ್ಯಮನ
ಟ್ಟುಱಿ ಕಾಳರಾತ್ರಿ ನುಂಗಿದ
ತೆಱನಾಯ್ತು ಪದೋತ್ಥಸಾಂದ್ರಧೂಳೀತಿಮಿರಂ ೧೩

ಮ॥ಸ್ರ॥ ಬಳಭಾರಂ ಭೂಮಿಯಂ ಬಾಯ್ದೆಱೆಸೆ ನೆಗೆದ ಪಾತಾಳಮೂಲಾಂಧಕಾರಂ
ಬಳವತ್ಸೈನ್ಯೇಭಕರ್ಣಾನಿಳನುದಧಿಗಳಂ ತುಳ್ಕೆ ನೀಳ್ದೌರ್ವಧೂಮಾ
ವಳಿ ಸೇನಾಕೇತುಚಕ್ರಂ [4]ಪೊಡೆಯೆ[4] ಪೊಡರ್ದ ರಾಹುಸ್ಫುಟಾಟೋಪಮೆಂಬಂ
ತಿಳೆಯಂ ತಳ್ತುರ್ವಿ ಪರ್ವಿತ್ತಮರಪಥಮನಾ ಸೈನ್ಯಧೂಳೀತಮಿಸ್ರಂ ೧೪

ವ॥ ಅಂತು ಚತುರಂಗಬಲಂ ಕ್ಷಿತಿಕ್ಷೋಭಮಾಗೆ ನಡೆದು ಜಗತ್ತ್ರಯದ್ರೋಹಂ ವ್ಯೂಹತ್ರಯದಿನೊಡ್ಡಿ ನಿಲೆ

ಕಂ॥ [5]ಧೃತರಜನನಿಲಂ ದಿತಿಜ[5]
ಪ್ರತಿಕೂಲಂ ಹರಿಗೆ ಸೈನ್ಯದರ್ಶನದನುಕೂ
ಲತೆಯಂ [6]ಮೆಱೆದ[6]ನದುಚಿತಂ
ದಿತಿಜಪ್ರತಿಕೂಲನಚ್ಯುತಂಗನುಕೂಲಂ ೧೫

ವ॥ ಆಗಳಗುರ್ವಂ ಬೀಱು ಬೇಱೊಂದು ದೆಸೆಯೊಳೊಡ್ಡಿ ನಿಂದ ರಾಜಸೈನ್ಯಮಂ ನೋಡಿ ಚೋಳನಾಭೀಳತೆಯಂ ಮಾಳವನಾಳಾಪಮಂ ಗೂರ್ಜರನ ದೌರ್ಜನ್ಯಮಂ ಗುಜ್ಜಳನ ಬಿಜ್ಜೆಯಂ ಕರಹಾಟನ ಕೌಟಿಲ್ಯಮಂ ವರಾಟನಾಟೋಪಮಂ ಪಾರಿಯಾತ್ರನ ವೀರವೃತ್ತಿಯಂ ಪಾರಶೀಕನ ಪೌರುಷಮಂ ಕೇರಳನಾರಭಟಿಯಂ ಹಮ್ಮೀರನಣ್ಮಂ ಹೂಣ

[1] ಕೂಡಡಂಗೆ ದಿಗ್ವಾರಣವಟ್ಟಡಂಗೆ (ಕ) [2] ಪೊರಳ್ದು (ಕಗ) [3] ಬಹಿರ್ದ್ವಾರದಿನಂದು (ಕಗ) [4] ಪೊಡರೆ (ಕಗ) [5] ಹೃತರಜನೀಲಂ ದಿವಿಜ (ಖ) [6] ಮೆಱೆವ (ಕಗ)

ನಕ್ಷೋಣಬಲಮುಂ ಪಾಂಡ್ಯನ ಗಂಡಗುಣಮುಂ ಪಲ್ಲವನ ಬಿಲ್ಲಾಳ್ತನಮುಂ ಕೋಸಳನ ಸಾಹಸಮುಂ ಕೌಶಲನ ಆವೇಶಮುಂ ಡಹಳನಹಂಮಿಕೆಯುಂ ಸಿಂಹಣನ ಸಂರಂಭಮುಂ ಡೊಕ್ಕಾರನುರ್ಕಂ ತುರುಷ್ಕನಬಿರ್ಕೆಯುಂ ಬರ್ಬರನ ಗರ್ಬಮುಂ ಮುಂದರನ ದಂದು[1]ಗವ್ಯವಸಾಯಮುಂ[1] ಮಾದ್ರನುದ್ರೇಕಮುಂ ಮರುವಿನುರವಣೆಯುಂ ವಂಗನ ತುಂಗವಿಕ್ರಮಮುಂ ಅಂಗನ ಸಂಗರೋತ್ಸಾಹಮುಂ ಸೈಂಧವನ ಸಂಧ್ಯಕೋಪಮುಂ ಶಂಬರನವಷ್ಟಂಭಮುಂ ಮಗಧನ ಪೊಗದ ಮುಳಿಸಂ ಸಗರನ ಬಗೆಯ ಕಲುಷಮುಂ ಸೌರಾಷ್ಟ್ರನ ಧಾರ್ಷ್ಟ್ಯಮುಂ ಖಸಕನ ಮುಸಕಮುಂ ನಿವಾರಿಸಿ ಜಯಂಗೆಯ್ವುದೆಂದು ವಿಜಯಂಗೆ ಪೇಳ್ದು ಮತ್ತೊಂದೆಡೆಯೊಳೊಡ್ಡಿನಿಂದ ಕೋಟಿಯೋಧನಿಶಾಟಬಲಮುಂ ನೋಡಿ ಬರಸಿಡಿಲ ಬಳಗದಂತೆ ಕುಳಿಕಾಹಿಯ ಕಡುಪಿನಂತೆ ನೆಲಮುಕ್ಕನ ತೆಕ್ಕೆಯಂತೆ ಮಿತ್ತುವಿನ ಪೊತ್ತದಂತಿರ್ದಸಂಖ್ಯಾತ ದೈತ್ಯನಾಯಕರ ಮಾಯಾಪ್ರಯೋಗಮುಂ ಪ್ರತಿಹತಂಮಾಡಿ ಗೆಲ್ವುದೆಂದು ಶಂಬರಧ್ವಂಸಿಗೆ ಪೇಳ್ದು ಮಧ್ಯಪ್ರದೇಶದೊಳೊಡ್ಡಿನಿಂದಸಂ ಚಾತುರ್ದಂತವರೂಥಿನೀಸನಾಥನಂ ಷಟ್ಪುರನಾಥನಂ ಕಂಡಾನೀತನವ್ಯಾಹತದಿವ್ಯಾಯುಧಮನಪ್ರತ್ಯೂಹಸಾಹಸಮನಖಂಡಿತೋಚ್ಚಂಡತೇಜಮನವಿಶ್ರಾಂತವಿಕ್ರಾಂತಮನಪ್ರಮೇಯ ಮಾಯಾವಿತ್ವಮನನಿವಾರ್ಯಧೈರ್ಯಮನಸಾಮಾನ್ಯಸಾಮರ್ಥ್ಯಮನಪಕ್ಲಿಷ್ಟಭುಜಾವಷ್ಟಂಭಮುಂ ಭಂಗಿಸಿ ಸಂಗರಜೈತ್ರಮುಂ ಕ್ಷಣಮಾತ್ರದಿಂ ಕೈಕೊಳ್ವೆನೆಂದರವಿಂದ[2]ನಾಭನಕ್ಷೋಭದಿ[2]ನದಿರದಿದಿರಂ ನಡೆಯೆ ಕದನೋದ್ಯೋಗಶಂಖಕಾಹಳ ಭಂಭಾದಿಗಂಭೀರನಾದಮುಂಭೋರುಹ ಭವಾಂಡಮಂ ತೀವಿದಾಗಳ್

ಮ॥ ಎಲೆ ಪೊಣ್ಮಿತ್ತು ಮುರಾರಿಗಾಂತರಿಚಮೂಭಂ ಭಾರಮಂ ಭಾರಮಂ
ನೆಲಕಂ ಪಿಂಗಿಸಿ ಕೀರ್ತಿಯಿಂದಿಟಿಸಿ ನೀಹಾರಾಗಮಂ ರಾಗಮಂ
ಸಲೆ ಮಾಳ್ಕುಂ ನಮಗಚ್ಯುತಂ ತೊಲಗಿಮಿಂ ಸಂದೇಹದಿಂ ದೇಹದಿಂ
ಪುಲಕಂ ಪೊಣ್ಮಿರೆ ನೋಡುಮಂ ಪರಿಮಿಳದ್ರಾಜನ್ಯಮಂ ಜನ್ಯಮಂ ೧೬

ವ॥ ಎಂದಖಿಳವೃಂದಾರಕವೃಂದವೆತ್ತಿಂದು ನಭದೊಳಭಿರಾಮತೆಯಿನಿರೆ

ಕಂ॥ ಶಾರದಘನರುಚಿ ಸಮರವಿ
ಶಾರದ ವೀರಾವಲೋಕಸಮ್ಮದನಿರ್ದಂ
ನಾರದನಾತನ ವಿಕೃತಿಯ
ನಾರದನಂದೊಸೆದು ನೋಡಿ ವಿಸ್ಮಿತರಾಗರ್ ೧೭

ವ॥ ಅನ್ನೆಗಂ

---

1 ಧುರವ್ಯವಸಾಯಮುಂ (ಕಗ) 2 ನಾಭನತಿಕ್ಷೋಭದಿ (ಖ)

ಮ॥ಸ್ರ॥ ಮಸಕಂಗೊಂಡತ್ತಮಿತ್ತಂ ಮುಸುಱಿ ನಿಜನಿಜಾಕ್ಷೌಹಿಣೀಸೈನ್ಯಯುಕ್ತರ್
ವಸುಧೇಶರ್ ಘೋರನೋರಂತಿಸುವುದುವಿಱಿವೊಂದಸ್ತ್ರಶಸ್ತ್ರಂಗಳಂ ಛೇ
ದಿಸುತುಂ ತದ್ಭೂಪರಂಗಂಗಳನವರವರಕ್ಷೌಹಿಣೀಸೈನ್ಯಮಂ ತೆ
ತ್ತಿಸುತುಂ ಪ್ರತ್ಯೇಕಮಂಬಿಂ ಪೊಣರ್ದನತಿರಥಂ [1]ಪಾರ್ಥನಸ್ತಾರಿಸಾರ್ಥಂ[1] ೧೮

ಚಂ॥ ನರನಿಸುವಿಕ್ರಮಂ ನೆಗಟ್ದ ಖಾಂಡವದಾಹದೊಳಿಲ್ಲದದ್ಭುತಂ
ನರನಿವನೊರ್ವನಲ್ಲ ಶತಕೋಟಿನರ ನೆರೆದೆಚ್ಚರೆಂಬಿನಂ
ಶರಮಯಮಂಬರ ಪೆಣಮಯಂ ಸಮರಕ್ಷಿತಿ ಚಾಪಟಂಕೃತ
ಸ್ವರಮಯಮಷ್ಟದಿಗ್ವಳಯಮಪ್ಪಿನಮಂದಿಸುತಿರ್ದನರ್ಜುನಂ ೧೯

ವ॥ ಅದಲ್ಲದೆಯುಮಿತ್ತಲ್

ಮ॥ ಇದಿರೊಳ್ ನಿಂದು ನಿಜಸ್ವರೂಪದಿನದೆಂತುಂ ದಾನವರ್ ಕಾದಲಾ
ರದದೃಶ್ಯಾಕೃತಿಯಿಂದಿಸುತ್ತಿರಲದೃಶ್ಯಾಕಾರರಂ [2]ದಿವ್ಯಮಂ
ತ್ರದೆ[2] ತನ್ನೆಚ್ಚುರಗೇಷುಗಳ್ ನಡೆ ಬಱಿಕ್ಕಂ ಭೀಕರಾನೇಕ[3]ರೂ
ಪದ ಮಾಯಾವಿಗಳೆಯ್ದುವಂತೆ ನೆಗಟ್ದಂ ಮಾರಂ[3] ಪ್ರತೀಕಾರಮಂ ೨೦

ವ॥ ಅದೆಂತೆನೆ

ಉ॥ ವಾರಣವಾಗಿ ಪೋರ್ವ ಪುಲಿಯಾಗಿ ತಗುಳ್ವಹಿಯಾಗಿ ಕೊಲ್ವ ಕಂ
ಠೀರವವಾಗಿ ಪಾಯ್ವ ತಗರಾಗಿ ಪಳಂಚುವ ಪಂದಿಯಾಗಿ ನೀ
ರ್ದಾರಿಪ ಭೂತವಾಗಿ ಬೆದಱಿಟ್ಟುವ ಚಂಡಿಕೆಯಾಗಿ ಪೀರ್ವ ಮಾ
ಭೈರವನಾಗಿ ನುಂಗುವ ಮಹಾಸ್ತ್ರದಿನೆಚ್ಚು ಮೃಡಾರಿ ಕಾದಿದಂ ೨೧

ವ॥ ಮತ್ತಂ

ಚಂ॥ ದವಶಿಖಿಯಾಗಿ ದಳ್ಳಿಸುವ ಸಂಹರಣೋಗ್ರಸಮೀರನಾಗಿ ಬೀ
ಸುವ ಸಿಡಿಲಾಗಿ ಪೊಯ್ವ ತಮವಾಗಿ ಕರಂಗುವ ಮೇಘವಾಗಿ ಪೆ
ರ್ಚುವ ಕಡಲಾಗಿ ಘೂರ್ಣಿಸುವ ನಂಜಿನ ಪೆರ್ಮೞೆಯಾಗಿ ಕೊಲ್ವಗ
ಪ್ರವಿತತಿಯಾಗಿ ಬೀಱಿಪ್ಪಸಕನದ್ಭುತವಾದುದು ವೈಷ್ಣವಾಸ್ತ್ರದಿಂ ೨೨

---

1 ಪಾರ್ಥನುತ್ತಾರಿತಾರ್ಥಂ (ಕ) ಪಾರ್ಥನಿತ್ತಾರಿತಾರ್ಥಂ (ಗ) 2 ದಿವ್ಯಮಂತ್ರದ (ಕಗ)
3 ರೂಪದೆಮಾಯಾವಿಗಳೆಯ್ದೆ ಮತ್ತೆ ನೆಗಟ್ದಂ ಮಾಯಾ (ಕಗ)

ವ॥ ಆ ಸೆನುಯಯಧೊಳ್

ಕಂ॥ ಭೈರವಮಿದು ಸಂವರ್ತನ
ಭೈರವದೀರ್ಣಾಸ್ಯವೆನಿಸಲೇಱಿಸಿ ಬಿಲ್ಲಂ
ನಾರಿಯೊಳೊಗೆದ ರವಂ ಮುದ
ನಾರಿಯೊಳತಿಮುದಮನೀಯೆ ಹರಿ ಜೇವೊಡೆದಂ ೨೩

ಸ್ರ॥ ವೈರೀಭವ್ರಾತಕಂಠೀರವರವಮುರಿಹಂಸವ್ರಜಪ್ರಾವೃಡಂಭೋ
ದಾರಾವಂ ಶತ್ರುಗೋತ್ರಾಚಲಕುಲಬಲಭಿದ್ವಜ್ರಘೋಷಂ ವಿಪಕ್ಷ
ಕ್ರೂರಾಹಿವ್ಯೂಹತಾರ್ಕ್ಷ್ಯಧ್ವನಿಯೆನೆ ಜಗಮಂ ಕೊರ್ವಿ ಪರ್ವಿತ್ತುದಾರಂ
ಧೀರಂ ಸ್ಫಾರಂ ಗಭೀರಂ ದನುಜರಿಪುಧನುರ್ದಂಡಟಂಕಾರನಾದಂ ೨೪

ವ॥ ಆಗಳಾ ಬಿಲ್ವೋದಕೇಶ್ವರಾದಿಷ್ಟಕದನವಿಃದೆಂದಾ ಮದನಾರಿಯುಂ ಮನದೊಳ್ ನೆನೆದು

ಮ॥ಸ್ರ॥ ವಿವಿಧಾಸ್ತ್ರಂ ವ್ಯೋಮಮಂ ಟಂಕೃತಿ ರುತಿ ದೆಸೆಯುಂ ದ್ವಿಟ್ಕಬಂಧಾಳಿ ಭೂಚ
ಕ್ರಮನೆತ್ತಂ ತೀವುವನ್ನಂ ಮುರಹರನಿಸುತಿರ್ದಂ ಶರಾದಾನಸಂಧಾ
ನವಿಮೋಕ್ಷಾಲಕ್ಷ್ಯವೇಗಂ ಸ್ಫುರಿತಮಕುಟನುತ್ತಾರಹಾರಂ ಚಳತ್ಕ
ರ್ಣವಿಭೂಷಂ ಚಂಚಲತ್ಕಂಕಣನನವರತಂ ಮಂಡಲೀಭೂತಚಾಪಂ ೨೫

ಕಂ॥ [1]ಬಾಣಾಂತಗತಂ[1] ಜಗಮೆನೆ
ಬಾಣಾಳಿಯನಸುರಸೈನ್ಯದೊಳ್ ಕಱಿದೊಡೆ ಗೀ
ರ್ವಾಣಪದವಾದುದಸುರ
ಶ್ರೇಣಿಗೆ ಬಿಸವಂದಮಸುರಹರನಿಸುವಂದಂ ೨೬

ವ॥ ಅನಂತರಂ

ಮ॥ ಚಲದಿಂದೆಯ್ದೆ ಧನುರ್ವಲಂ ಕವಿದಃದಂತಶ್ರೀಯಮಂತಾ ಧನು
ರ್ವಲಮುಶ್ರೀಯಮಿದಿರ್ಚೆ ನೂಂಕಿದುದುದಗ್ರೇಭಾಳಿಯಂತಾ ಧನು
ರ್ವಲಮುಶ್ರೀಯಮಿಭಾಳಿ ಸಂಗಳಿಸೆ ತೇರ್ಗಳ್ ಸಾರ್ದುವಂತಾ ಧನು
ರ್ವಲಮುಶ್ರೀಯಮಿಭಾಳಿ ತೇರ್ಗಳಿನಿತುಂ ಬಂದಾಂತುವಬ್ಜಾಕ್ಷನಂ ೨೭

---

[1] ಬಾಣವ್ರಾತಂ (ಖ)

ನವಮೇಘಾಳಿವೊಲಂಬುವಂ ಕಱಿತನ ಧನ್ವಿವ್ರಾತಮಂ ಘೂರ್ಣಿತಾ
ರ್ಣವಭಂಗಾಳಿವೊಲೆಯ್ದು ವಶ್ವಚಯಮಂ ಸಂಚಾರಿಶೈಲಾಳಿವೊಲ್
ಜವದಿಂ ಬರ್ಪಿಭಕೋಟಿಯಂ ರಣಮುಹೋದನ್ವದ್ಘಹಿತ್ರಾಳಿಯಂ
ತೆವೊಲೆಟ್ಟಿರ್ಪ ರಥೌಘಮಂ ತವಿಸಿದಂ ದೈತ್ಯಾರಿ ನಾನಾಸ್ತ್ರದಿಂ ೨೮

ವ|| ಅನಂತರಂ

ಮ|| ಭುಜಗರ್ವಂ ಭುಜಗರ್ವದೊಳ್ ಸೆಣಸೆ ಧೈರ್ಯಂ ಧೈರ್ಯಮಂ ಬೀಱಿ ಬಾ
ಣಜನಂ ಬಾಣಜನಕ್ಕೆ ಮತ್ಸರಿಸೆ ಕೋಪಂ ಕೋಪದಿಂ ತಿಣ್ಣಮಾ
ಗೆ ಜಗನ್ನಾಥನ ಷಟ್ಪುರೇಶನ ರಣಾನ್ಯೋನ್ಯಪ್ರತಾಪೋದಯಂ
ತ್ರಿಜಗದ್ವಿಸ್ಮಯಮಾದುದೇವೊಗೞ್ದಪೆಂ ತದ್ವಂದ್ವಸಂಗ್ರಾಮಮಂ ೨೯

ಸಲಿಲಾಸ್ತ್ರಂ ಜ್ವಲನಾಸ್ತ್ರಮಂ ಗೆಲೆ ಸಮೀರಾಸ್ತ್ರಂ ಪಯೋದಾಸ್ತ್ರಮಂ
ಗೆಲೆ ಮೇಘಾಸ್ತ್ರಮಿನಾಸ್ತ್ರಮಂ ಗೆಲೆ ಪತಂಗಾಸ್ತ್ರಂ ತಮಿಸ್ರಾಸ್ತ್ರಮಂ
ಗೆಲೆ ವಜ್ರಾಸ್ತ್ರಮಗಾಸ್ತ್ರಮಂ ಗೆಲೆ ಖಗೇಂದ್ರಾಸ್ತ್ರಂ ಭುಜಂಗಾಸ್ತ್ರಮಂ
ಗೆಲೆ ಗೆಲ್ವಾಸೆಯಿನಂದು ಕೇಶವನಿಕುಂಭರ್ ತಮ್ಮೊಳೆಚ್ಚಾಡಿದರ್ ೩೦

ವ|| ಅಂತು ಕಾದುವಲ್ಲಿ

ಕಂ|| ಬಾಣಾದಿಶಸ್ತ್ರಯುದ್ಧಧು
ರೀಣತೆಯಿಂದಿರ್ಕೆ ಕೃಷ್ಣಕಾಮಾರ್ಜುನರಂ
ಪ್ರಾಣಾಹುತಿಗೊಂಡು ಜಗ
ಚ್ಛ್ರೇಣಿಯನಾಂ ಬೞಿಕೆ ತುತ್ತಿದಪೆನಶ್ರಮದಿಂ ೩೧

ವ|| ಎಂದು ಬಗೆದಂದು

ಮ|| ಮೃಡಮುಖ್ಯಾಮರರುಂ ಭಯಂಬಡುವಿನಂ [1]ಬ್ರಹ್ಮಾಂಡದಾಭಾಂಡವಿಂ
ದೊಡೆವಂತದ್ಭುತ[1]ರೂಪಮಾಯ್ತೆನೆ ದಿಶಾವ್ಯೋಮಾವಧಿಸ್ಥೂಲಮ
ಪ್ಪೊಡಲಿಂ ವರ್ಧಿಸಿ ವಕ್ತ್ರಕೋಟಿ ಬಹುಬಾಹಾವ್ಯೂಹವಾಶ್ಚರ್ಯಮಂ
ಕುಡಲಾಭೀಳವಿಭೀಷಣಾರಭಟಿಯಿಂದಿರ್ದಂ ನಿಕುಂಭಾಸುರಂ ೩೨

ಕಂ|| ಏಕಕ್ಷಣಮಿವನಿರ್ದೊಡೆ
ಲೋಕ[2]ಕ್ಷಯಮಪ್ಪುದೆಂದು ಚಕ್ರದಿನಿಟ್ಟಾ[2]
ವೈಕುಂಠಂ ಭೂತಾವಳಿ
ಗಾಕಲ್ಪಗ್ರಾಸಮಾಗೆ [3]ಮುಡಿಪಿದನವನಂ[3] ೩೩

[1] ಬ್ರಹ್ಮಾಂಡಮುಚ್ಚಂಡದಿಂದೊಡೆದಂದದ್ಭುತ (ಕ) ಬ್ರಹ್ಮಾಂಡಮುಚ್ಚಂಡದಿಂ ಪೊಡೆದಂದದ್ಭುತ (ಗ) [2] ಕ್ಷಯಮೆಂದು ಚಕ್ರದಿಂದಿಟ್ಟಾಗಳ್ (ಕಗ) [3] ಕೆಡಪಿದನವನಂ (ಕಗ)

ವ॥ ಅನ್ನೆಗಂ

ಕಂ॥ [1]ಜೃಂಭಾಸ್ತ್ರದಿಂದೆ ಬಲಮಂ
ಸ್ತಂಭಿಸಿ[1] ನೃಪವೀರಜನಮನಪ್ರತಿಮಲ್ಲಂ
[2]ಜಂಭಾರಿಸೂನು ವಿಜಯ ವಿ
ಜೃಂಭಣಮಂತೆಸೆಯೆ ತೋಱೆ ತೀರ್ದಂ[2] ಸರಲಂ ೩೪

ವ॥ ಅಲ್ಲಿಂಬೞಿಯಿಂ

ಕಂ॥ ಶಂಬರವಧ[3]ಹರ್ಷಮುಮೇ
ಶಂಬರಮೊಗೆದಂತಿರೊಗೆಯೆ[3] ಹರ್ಷಂ ಮಾಯಾ
ಲಂಬನ ದನುಜರನಂದು ವಿ
ಲಂಬನಮಿನಿಸಿಲ್ಲದಿಕ್ಕಿ ಗೆಲ್ದಂ ಮದನಂ ೩೫

ಭಾಸುರಮೆನೆ [4]ನೆಗೞ್ತೆ[4] ನಿಕುಂ
ಭಾಸುರವಧಕೀರ್ತಿ ಕಱತಯೆ ಪೂವಿನ ಮೞತಯುಂ
ವಾಸವನಾ ವಿಜಿತರಣಾ
ವಾಸವನೊಸೆದೀಕ್ಷಿಸುತ್ತೆ ತಳರ್ದಂ ಬೞಿಯುಂ ೩೬

ಮ॥ ಕ್ಷಿತಿಚಕ್ರೋದರಸನ್ನಿವಿಷ್ಟಮನನಂತಾಕ್ರಾಂಹಿಣೀದೈತ್ಯರ
ಕ್ಷಿತಮಂ ಷಟ್ಪುರಮಂ ವಿಮರ್ದಿಸಿ ಮಹಾಸ್ತ್ರಾನೀಕದಿಂ ರುಕ್ಮಿಣೀ
ಪತಿ ಬಂದೊಪ್ಪಿರೆ ಪೊಕ್ಕನಾತ್ಮಪುರಮಂ ಕಾಂತಾಕಟಾಕ್ಷಚ್ಛಟಾ
ತತಿಯೊಳ್ ಸೂಸುವ ಸೇಸೆಗಳ್ ಪಡೆವಿನಂ ಸ್ಪರ್ಶಾನುಮೇಯತ್ವಮಂ ೩೭

ಕಂ॥ ಪಾರ್ಥಂ ಯಮಜಾಧ್ವರಗೋ
ಪಾರ್ಥಂ ಬೀೞ್ಕೊಂಡು ಪೋಗೆ ಪರಿವೃತನಾರೀ
ಸಾರ್ಥಂ [5]ವಿಶ್ರುತತರಕವಿ
ಸಾರ್ಥಂ[5] ನಿಜರಾಜಗೃಹದೊಳಿರ್ದಂ ಕೃಷ್ಣಂ ೩೮

ವ॥ ಅಂತು ನಿತ್ಯೋತ್ಸವದಿನಿರ್ಪಿನಮದೊಂದುದಿವಸಂ ಶಿಶುಪಾಲನಟ್ಟಿದ ಭಟ್ಟ ಪುತ್ರಂ ಬಂದು ನೃಪಮಂದಿರಾಂಗಣದೊಳ್ ನಿಂದಿರ್ದಕಾಂಡಚಂಡಾಶನಿ[6]ಪಟಿಷ್ಠ[6]

1 ಜೃಂಭಾಸ್ತ್ರದಿನಿಸೆ ಸೈನ್ಯಂಸ್ತಂಭಿಸೆ (ಕಗ) 2 ವಿಜೃಂಭಣದಿಂದೆಸೆಯೆ ತೂಗುತಿರ್ದಂ (ಕಗ) 3 ಹರ್ಷಮುದಾಶಾಂಬರಮೊಗೆವಂತಿರೊಗೆಯೆ(ಮೊಅ) 4 ನೆಗಟ್ದ (ಕಗ) 5 ಸಂಸ್ತುತ ಸುಕವಿರಸಾರ್ಥಂ (ಕಗ) 6 ಪದಿಷ್ಠ (ಕಗ)

ನಿಷ್ಠುರಧ್ವನಿಯುಮುತ್ತಂಭಿತಭುಜಸ್ತಂಭನುಮುತ್ತಾನಿತಾಸ್ಯನುಮುಚ್ಛೃಂಖಲ ವಚನ ವಾಚಾಲನುಮಾಗಿ

ಮ॥ ಇದಮೋಘಂ ನಿಟಿಲೇಕ್ಷಣಾಧಿಕಭುಜಂಗಳ್ ಪೋದುವೆಂತೆಂತು ಸಾ
ರ್ದುದು ಭಂಗಂ ಗರುಡಚ್ಛದಾನಿಳನಿನೆಂತೆಂತಂದವಂಗೀಯೆ ಪೊ
ರ್ದಿದಳೆಂತೆಂತು ಪೆಱಂಗೆ ರುಕ್ಮಿಣಿಯಃದಂತಂತುರ್ವಿತಂತಂತೆ ಪ
ರ್ವಿದುದಂತಂತೆ ಪೊದಟ್ಟುದಾ ದನುಜನುಗ್ರಾಟೋಪಕೋಪಾನಲಂ ೩೯

ಪೊಗೆಟ್ವಂಗಗ್ಗಳವೇನನೆಂಬೆನಖಿಲಬ್ರಹ್ಮಾಂಡ[1]ಭಾಂಡಕ್ಕಮಾ[1]
ವಗೆಗಿಚ್ಚೆಂಬಿನೆಗಂ ನಿಶಾಚರನ ಕೋಪೋಗ್ರಾನಳಂ ಪೊತ್ತುತುಂ
ಪೊಗೆಯುತ್ತುಂ ಕಿಡಿಗುಟ್ಟುತುಂ ಮಸೆಯುತುಂ ದಳ್ಳೆಂಬಭೋರೆಂಬ ಭುಗ್
ಭುಗಿಲೆಂಬೇಟಿಗ್ಗಯನಾಂತು ಕೇಸುರಿಗಳಂ [2]ಸೂಸಿತ್ತಗುರ್ವಪ್ಪಿನಂ[2] ೪೦

[3]ನುಡಿಯಲ್[3] ಭಾನುವಿನಗ್ನಿ ತೀವ್ರತರನಂತಾ ಭಾನುವಿಂದಗ್ನಿಯಿಂ
ಸಿಡಿಲತ್ಯಂತದುರಾಸದಂ ಬಗೆವೊಡಂತಾ ಭಾನುವಿಂದಗ್ನಿಯಿಂ
ಸಿಡಿಲಿಂ ರುದ್ರಲಲಾಟನೇತ್ರವರಿದಂತಾ ಭಾನುವಿಂದಗ್ನಿಯಿಂ
ಸಿಡಿಲಿಂ ರುದ್ರಲಲಾಟನೇತ್ರದಿನತರ್ಕ್ಯಂ ಚೈದ್ಯಕೋಪಾನಳಂ ೪೧

ಮ॥ಸ್ರ॥ ರಣವೀರಂ ಶುಂಭನಿಂ ಜಂಭನೆ ದನುಜರೊಳಾ ಶುಂಭನಿಂ ಜಂಭನಿಂ ರಾ
ವಣನೆಂತುಂ ವೀರನಿಂತೀ ಧರೆ ಪೊಗಟ್ವನಮಾ ಶುಂಭನಿಂ ಜಂಭನಿಂ ರಾ
ವಣನಿಂದಂಧಾಸುರಂ ವೀರತೆಯೊಳಧಿಕನಾ ಶುಂಭನಿಂ ಜಂಭನಿಂ ರಾ
ವಣನಿಂದಂಧಾಸುರಾಧೀಶನಿನತಿ[4]ಶಯಮಾ ವೀರರೊಳ್ ಚೇದಿರಾಜಂ[4] ೪೨

*ಜವನುಗ್ರಂ ಮಾರಿಯಿಂ ಮಿತ್ತುವೆ ಗಡ ಜವನಿಂ ಮಾರಿಯಿಂ ಮಿತ್ತುವಿಂ ಭೈ
ರವನಾಕಲ್ಪಾಂತದೊಳ್ ರೌದ್ರನೆ ಗಡ ಜವನಿಂ ಮಾರಿಯಿಂ ಮಿತ್ತುವಿಂ ಭೈ
ರವನಿಂ ಕಾಮಾರಿ ತಾಂ ಕ್ರೂರನೆ ಗಡ ಜವನಿಂ ಮಾರಿಯಿಂ ಮಿತ್ತುವಿಂ ಭೈ
ರವನಿಂ ಕಾಮಾರಿಯಿಂ ಚೈದ್ಯನೆ ಗಡ ಜಗಮಂ ತಿಂದು ತೇಗಲ್ ಸಮರ್ಥಂ ೪೩

---

[1] ಭಾಂಡಕ್ಕದಾ (ಗ) [2] ಸೂಸುತ್ತಗುರ್ವಪ್ಪಿನಂ (ಖಗ) [3] ನುಡಿಯೇಂ (ಕ) ನುಡಿಯಿಂ (ಗ) [4] ಕ್ಷಯವೋವೀರನಾಚೇದಿನಾಥಂ (ಕಗ)

* ಜನನುಗ್ರಂ ಎಂಬಲ್ಲಿ ಕವಿಯು ಜವನೆ ಎಂಬ ತೃತೀಯಾಂತ ರೂಪವನ್ನುಪಯೋಗಿಸಿ ಉಗ್ರಂ ಎಂಬ ಪದದೊಡನೆ ಸೇರಿಸಿ ಸಂಧಿಮಾಡಿರುವಂತೆ ತೋರುತ್ತದೆ.

ಮ|| ತರುಣಾಸ್ತ್ರಹತನೆಂದು ದಾನವಚಮೂವಿಸ್ತಾರಕಂ ತಾರಕಂ
ನರಬಾಣಾಹತನೆಂದು ವಾರ್ಧಿವೃತಪೃಥ್ವೀರಾವಣಂ ರಾವಣಂ
ಸ್ಮರಕಾಂಡಾಹತನೆಂದು [1]ವೈರಿದವನಷ್ಠಾರ್ಶಂಬರಂ[1] ಶಂಬರಂ
ಪುರುಳಿಲ್ಲೆಂದಿಱಿಪಂ ನಿಜಾನ್ವಯಸುಹೃತ್ಸಂತಾನವಂ ತಾನವಂ ೪೪

ಕಂ|| ಎತ್ತಿ ಹರಿ [2]ಬರ್ಕೆ ಪೊಣ್ಮಲೆ
ದೆತ್ತುವೆನಾಂ[2] ಸೈನ್ಯಭರದೆ ಶೇಷನ ಶಿರದೊಳ್
ಪೊತ್ತುವ ಕಿಡಿ ಪೆಡೆವಣಿಗಳ
ನೊತ್ತರಿಪಿಸನೆಂದು ಚೈದ್ಯನಟ್ಟಿದನೆನ್ನಂ ೪೫

ವ|| ಎಂದು ಸಿಘ್ಘಾರ್ತಾಸ್ಫೋಟನಂಗೆಯ್ದು ನಿಲ್ವುದುಮಾ ಪ್ರಸ್ತಾವದೊಳ್ ಯುಧಿಷ್ಠಿರರಾಜಂ ರಾಜಸೂಯಯಜ್ಞಪೂಜೆಗೆಂದು ಬೞಿಯಟ್ಟಿದ ಮುಖ್ಯಪುರುಷನುಪಾಯನ ಪುರಸ್ಸರಂ ಬಂದು ಪೊಡಮಟ್ಟು ಬಿನ್ನಪಂಗೆಯ್ಯೆ ಕಾರ್ಯಪರ್ಯಾಲೋಚನತತ್ಪರನಾಗಿ

ಚಂ|| [3]ಪರಿಹೃತ[3] ಶಾರಿಕಾಶುಕಶಿಶು[4]ವ್ರಜಮುಜ್ಝಿತ[4] ಸಾಳಭಂಜಿಕೋ
ತ್ಕರಮವಿನಿರ್ಮಿತಾಪ[5]ವರಕೌಘನಪಾಸ್ತ[5] ಗವಾಕ್ಷರಾಜಿ ನಿ
ರ್ವಿರಚಿತಚಿತ್ರಮೆಂದೆನಿಪ ಮಂತಣಸಾಲೆಗೆ ಬಂದನಿಂದ್ರಸಿಂ
ಧುರಗತಿ ರೇವತೀಧವನನುದ್ಧವನುಂ ಬರೆ ರುಕ್ಮಿಣೀಧವಂ ೪೬

ವ|| ಅಂತು ಬಂದು ತನ್ಮಂದಿರನಿವಿಷ್ಟರಮಣೀಯಮಣಿವಿಷ್ಟರಂಗಳನಲಂಕರಿಸಿ

ಕಂ|| ಕಲಧೌತಸಿತಂ ರಾಮಂ
ಕಲಧೌತಪಿಶಂಗನುದ್ಧವಂ ಕೆಲದೊಳ್ ಕ
ಣ್ಗೊಳೆ ರಜತಮಹಾರಜತಾ
ಚಲಮಧ್ಯದ [6]ನೀಲಗಿರಿವೊಲೆಸೆದಂ ಕೃಷ್ಣಂ[6] ೪೭

ಮುಸುಕೆ ಹರಿಕಾಂತಿ ನೀಲೀ
ವಸನಂ ಸ್ಪರ್ಶಾನುಮೇಯಮಾದುದು ರಾಮಂ
ಗಸಿತಾಂಬರಮುಂ ಮಱೆವಿಡಿ
ದ ಸುವರ್ಣದ ವಿದ್ಧದಂತಿರುದ್ಧವನೆಸೆದಂ ೪೮

---

1 ವೈರಿವಧಹಷ್ಠಾರ್ಶಂಬರಂ (ಕಗ) ವೈರಿದವಶಂಬಾಶಂಬರಂ (ಖ) 2 ನೀಮ್ಮೆಣೆತ್ತುವೆನಾಂ (ಕಗ) 3 ಪರಿವೃತ (ಕಗ) 4 ವ್ರಜಮೂರ್ಜಿತ (ಕಗ) 5 ವರಕೌಘವಪಾರ್ಥ (ಕ) ವರಕೌಘನಪಾರ್ಥ (ಖ) ವರಕೌಘವಹರ್ಥ (ಗ) 6 ನೀಲಗಿರಿಯೆನಲ್ ಹರಿಯೆಸೆದಂ (ಖ)

ವ॥ ಆಗಳಲ್ಲಿ ರಾಮಂ ಸಾಮಜವಿರೋಧಿಯಂತೆ ಸಾನುಜೋದ್ಯಮಕೆ ಮನ
ದೊಳ್ ಮುಳಿದು ದಂಡಧರನಂತೆ ದಂಡಧರನಾಗಿ

ಕಂ॥ ಭವನಂ ಗೆಲೆ ಮೂರ್ತಿ ಸಭಾ
ಭವನಂ ಘೂರ್ಣಿಸೆ ಗಭೀರರವದಿಂ ಲುಳಿತ
ಶ್ರವಣಾಲಂಕರಣಂ ವೈ
ಶ್ರವಣಾದಿ ದಿಗೀಶರಳ್ಕೆ [1]ಹಲಿ[1] ಗರ್ಜಿಸಿದಂ ೪೯

ಇರಿಸಿ ತಮೋಗುಣಮಂ ಮಿ
ಕ್ಕರಜಸ್ಸತ್ವಂಗಳಂ ಬಹಿಷ್ಕರಿಸುವವೋಲ್
ಅರುಣಾಧರಪಾಂಡುರದಶ
ನರುಚಿಗಳಾನನದಿನೊಗೆಯೆ ಲಾಂಗಲಿ ನುಡಿದಂ ೫೦

ಉತ್ಸಾಹ॥ ಜಾತರೂಪರಕ್ತನಯನನುದಧಿಗರ್ಜನಂ ಮನೋ
ಜಾತರೂಪಮಥನಕೋಪನೆಂದನೆಮ್ಮ ಕಾರ್ಯ ಮೀ
ಜಾತ[2]ರೂಪಮಿಂತುಟೇಂ[2] ವಿರೋಧಿಕಾಂತೆಯರ್ಗೆ ಗುಂ
ಜಾತರೂಪಪಲ್ಲವಂಗಳಕ್ಕೆ ಪಚ್ಚವದ್ರಿಯೊಳ್ ೫೧

ಕಂ॥ ಸಂಗರವೆಮ್ಮ ಮತಂ ನಯ
ಸಂಗರಮತಮಿರ್ಕೆ ತಣಿಪುವೆಂ ಮುಸಲಮನೀ
ಲಾಂಗಲಮಂ [3]ರಿಪುಬಲದಬ
ಲಾಂಗಲವಂ ಭೂತಕೋಟಗಿಲ್ಲೆನೆ[3] ಧರೆಯೊಳ್ ೫೨

ಕಾಂಡನಿಪಾತಂ ವೈರಿಗ
ಕಾಂಡನಿಪಾತಮನೊಡರ್ಚುವಂತಿರೆ ನೆಗಟಲ್
ಪಾಂಡುರ ಕೀರ್ತಿಯೆ ನೆಗಟ್ಗುಂ
ಪಾಂಡುತನೂಭವರ ನಣ್ಪು ನೆಗಟ್ಗುಮೆ ಬಱಿಯಂ ೫೩

ದಮಘೋಷಸೂನುಬಳದು
ರ್ದಮಘೋಷಮುದೆತ್ತದನ್ನ ನಡೆವಂ ಮುನ್ನಂ
ಸಮವಾಯಮೆತ್ತಿ ಬರೆ ರಿಪು
ಸಮವಾಯುಮದಲ್ಲವಾಯುವಾತನೊಳಧಿಕಂ ೫೪

---

[1] ಹರಿ (ಕಗ) [2] ರೂಪಮಿಂತುಟೇ (ಮೊಅ) [3] ರಿಪುಬಲದಬಲಾಂಗಲಮಂಭೂತಕೋಟಿ
ನಿಲ್ಲೆನೆ (ಕ) ರಿಪುಬಲದೆ ಬಲಾಂಗಲಮಂ ಭೂಪಕೋಟಿ ನಿಲ್ಲೆನೆ (ಖ)

ಮ॥ ಪಿರಿದುಂ ನಿನ್ನೊಳುಪೇಂದ್ರ ಚೈದ್ಯನೆಸಗಂ ಸನ್ಮಾನವಂ ಮಾನವಂ
[1]ಹರಿಯೇನೆಂದಱಿದಿರ್ದಪಂ[1] ಸ್ಫುಟಮರುತ್ಕಂಭೀಷಣಂ ಭೀಷಣಂ
ಕರಣೀಯಂ ನಮಗಾತನೊಳ್ ಚಲಿತಭೂಭೃದ್ವಿಗ್ರಹಂ ವಿಗ್ರಹಂ
ಪರಮದ್ರೋಹನನೆತ್ತಿಪೋಗಿ ಚಲದಿಂ ಕೊಂದಿಕ್ಕುವಂ ನಿಕ್ಕುವಂ ೫೫

ಸ್ರ॥ ಧೀರಂ ಧೀರಂ ಜಿತಂ ನೀಂ ತಡೆದಿರದೆ ಯಶಸ್ಸಾಧನಂ ಸಾಧನಂ ಮು
ನ್ನೀರಂ ನೀರಂಧ್ರವಾದರ್ಪಿಸೆ ನಡೆದದಟಂ ದಾನವಂ ದಾನವಂ ದು
ಷ್ಪಾರಂ ಪಾದಂ ಕ್ಷಣಂ ಮಾರ್ಕೊಳೆ ನುಡಿಯಿಸು ಕಾಮಾರಿವೊಲ್ ಮಾರಿವೊಲ್ ನೀ
ಹಾರಂ ಹಾರಂ ಹರಾಂಗಂ ಬರೆ ನಿಜಯಶದೊಳ್ ಭಾಸಮಾನಂ ಸಮಾನಂ ೫೬

ವ॥ ಎನೆ ಕೇಳ್ದು

ಕಂ॥ ಯಮುನಾಪ್ಲವಮಂ ಗಂಗೆಯ
ವಿಮಲಪ್ಲವಮೊಂದಿದಂತೆ ಸಭೆಯಂ ಪುದಿದಂ
ಗ[2]ಮರೀಚಿಯನುಜ್ವಲ[2]ದಂ
ತಮರೀಚಿ ಪುದುಂಗೊಳಲ್ಕೆ ಕೃಷ್ಣಂ ನುಡಿದಂ ೫೭

ದಾರುಣಚೈದ್ಯಶಿರಶ್ಚೀ
ದಾರುಣಜಲಪಾನಮಂ ತದೀಯಕ್ರವ್ಯಾ
[3]ಹಾರಮನೀಯುಸ್ಮದ್ವಾಶಿ
ಹಾರಮದಿಂ[3] ಭೂತಕೋಟಿಗೀಗುಂ ಧುರದೊಳ್ ೫೮

ವ॥ ಎಂದು ಮಂದರಧರಂ ಗಂಭೀರಭಾಷೆಯಿಂ ನುಡಿದುದ್ಧವನ ವದನಮಂ ನೋಡೆ

ಕಂ॥ ಕನಕಾಚಲಚೂಳಿಕೆಯಿಂ
ದ್ಯುನದಿಯ ಪೊನಲಿೞಿವ ತೆಱದೆ ಕನಕಪ್ರಭನಾ
ನನದಿಂದುಜ್ವಲದಶನಾಂ
ಶುನಿಕಾಯಂ ಪೊಣ್ಮೆ ನುಡಿದನುದ್ಧವಸಚಿವಂ ೫೯

---

[1] ಹರಿಯೇನೆಂದುಱಿದಿರ್ದನಂ (ಕ) ಹರಿಯೇನೆಂದುಱಿದಿರ್ದಸಂ (ಖ) ಹರಿಯೇನೆಂದುಱಿದಿರ್ದನ (ಗ) [2] ಮರೀಚಿಯಿನುಜ್ವಲ (ಕ) [3] ಹಾರಮನೀಯಸ್ಮದ್ವಾಬಹಾರಮದಿಂ (ಕಗ)

ಚಂ॥ ಬವರದಿನತ್ತ ಶತ್ರು ಕರೆನಂ ಬೞಿಯಟ್ಟುವನಿತ್ತ ಮಿತ್ರನಾ
ಬವರದ ನಣ್ಪಿನುಜ್ಜುಗದೊಳೊಂದನೊಡರ್ಚಿದೊಡೊಂದು[1]ಮಾಡಪೊ
ಲ್ಲವೆ ಗಡ[1] ಕಾರ್ಯಸಂಕಟಮಿದಾದೊಡಮಿಲ್ಲಿಗೆ ಪೇೞ್ವನಂತೆ ದಾ
ನವವಧಮಂತೆ ಧರ್ಮಸುತದರ್ಶನಮೊರ್ಮೊದಲಪ್ಪುಪಾಯಮಂ ೬೦

ವ॥ ಅದೆಂತೆಂದೊಡೆ

ಮ॥ಸ್ರ॥ ಯಮಜಾತಂ ಯಜ್ಞಪೂತಂ ಬರಿಸೆ ಬರೆ ನೃಪವ್ರಾತಮಾ ಪೂಜೆಗಾತಂ
ಸಮವಾಯಂ ಬಂದಮೇಯಂ ಸಕಲನೃಪಕುಲಜ್ಯಾಯನಾಂ ಪೂಜನೀಯಂ
ಸಮನಾವಂ ಪೂರ್ವದೇವಂಗೆನಗೆನೆ ಕಿಡರ್ದಿಗ್ಗ್ರೀವನಾ ದುಷ್ಟಭಾವಂ
ನಮಗಾದಂ ಕೋಪಮಾದಂದವನೞಿಗುಮಸದ್ಭಾವದನುದ್ಯತ್ಪ್ರಮಾದಂ ೬೧

ವ॥ ಎಂಬುದುಮಾ ಮಾತನತಿಪ್ರೀತಿಯಿಂದಾದರಿಸಿ

ಚಂ॥ ನೆಱೆಯರಿದಪ್ಪ ಕಾರ್ಯಫಲಮಂ ಬಲಮಂ ಚಲಮಂ ಪ್ರಸಿದ್ಧಿಯೊಳ್
ನಿಱಿಸುವ ನೋಡಿ ಕಾಲಗತಿಯಂ ಧೃತಿಯಂ [2]ಕ್ಷಿತಿಯಂ[2] ನಿಮಿರ್ಚುವೀ
[3]ನೆಱಿವಿನೊಳೆಯ್ದಿ[3] ಕಂಡು ನಯಮಂ [4]ಜಯಮಂ[4] ಪ್ರಿಯಮಂ ಪ್ರಧಾನರಾ
ರಱಿಪುವರಿಂತಧೀಶಹಿತಮಂ ಮಿತಮಂ [5]ಮತಮಂ[5] ಮಹಾಮತೀ ೬೨

ವ॥ ಎಂದು [6]ನಿರ್ವರ್ತಿತ[6] ಮಂತ್ರಾಲೋಚನನಾಗಿ ಧರ್ಮಜಯಾಗಪೂಜಾವ್ಯಾಜದಿಂ ಚೈದ್ಯನಂ ಯುದ್ಧರಂಗಪೂಜೆಗೆ ಭಾಜನಂ ಮಾೞ್ಪುದೆ ಕಜ್ಜಮೆಂದುಪೇಂದ್ರನಿಂದ್ರಪ್ರಸ್ಥಗಮನೋದ್ಯುಕ್ತನಪ್ಪುದುಂ ಬಲಾಧ್ಯಕ್ಷಂ ವಿಜಯಪ್ರಸ್ಥಾನಭೇರಿಯಂ ಪೊಯ್ಸಿದಾಗಳ್

ಮ॥ಸ್ರ॥ ಹರಿಮತ್ಸ್ಯಾಕಾರದೊಳ್ ಪುಚ್ಛದೆ ಜಲನಿಧಿಯಂ ಪೊಯ್ದು ನಾಟ್ಯಕ್ರಿಯಾಡಂ
ಬರದೊಳ್ ಕಾಲಾಗ್ನಿರುದ್ರಂ ನಿಜಪದತಳದಿಂ ತಾಳಮಂ ಕೊಟ್ಟ ದೇವೇ
ಶ್ವರವಜ್ರಕ್ಕಳ್ಕಿಗೋತ್ರಾಚಳತತಿ ಕಡಲಂ ಪೊಕ್ಕ ತದ್ಧ್ವಾನಮಂ ಧಿ
ಕ್ಕರಿಸಿತ್ತಕ್ಷೂಣಕೋಣಪ್ರಹತಬಹುಳ ಭಾಂಕಾರಭೇರೀನಿನಾದಂ ೬೩

ವ॥ ಆ ಭೇರೀನಿನಾದಮಂ ಕೇಳ್ದು

---

1 ಮಾಣ್ಗು ಪೊಲ್ಲವೆಗೆಡೆ (ಕ) ಮಾಣ್ಗು ಪಲ್ಲವೆಗೆಡೆ (ಗ) 2 ಸ್ಥಿತಿಯೆಂ (ಖ) 3 ತೆಱವಿನೊಳೆಯ್ದಿ (ಖ) 4 ಭಯಮಂ (ಖ) 5 ಸುತಮಂ (ಕ) ನಿವೃತ್ತ (ಗ)

ಮ॥ಸ್ರ॥ ಪ್ರತಿಪಾದಕ್ಷೇಪಡೋಳಾಯಿತಧರಣಿತಳಂ ಕರ್ಣತಾಳೋತ್ಥವಾತಾ
ಹತಿಯಾತಾಯಾತಗೋತ್ರಾಚಲತತಿ ಮದವಾರಾಶಿನೀರದ್ವಿಪೌಘೀ
ಕೃತದಿಙ್ನಾಗೌಘಮುದ್ಯತ್ತರಳಕದಳಿಕಾರಣ್ಯತೀರದ್ರುಮಾಳಂ
ಕೃತತಾರಾಧ್ವಾಪಗಂ ಬಂದುದು ಘನಘಟೆಯಂ ಮುಟ್ಟಿ ಮತ್ತೇಭಸೈನ್ಯಂ ೬೪

ಕ್ಷಿತಿಚಕ್ರಂ ತನ್ನ ಪರ್ವಿಂ ತೆರೆನುಸಗಿದ ವಾರಾಸಿಯಂ ಪೋಲ್ವಿನಂ ಹೇ
ಷಿತಘೋಷಾಪೂರಿತಾಶಂ ಖುರಪರಿಪಿಹಿತಕ್ಷೋಣಿ ಪರ್ಯಾಣರತ್ನ
ದ್ಯುತಿವಲ್ಲೀಪಲ್ಲಿತಾಭ್ರಂ ನೆರೆದುದಿನಹಯೋಚ್ಚೈಶ್ರವಂಗಳ್ಗೆ ನಿಂತೀ
ಗತಿ ಸತ್ವಂ ರೂಪು ರೋಮಚ್ಛವಿ ಸಮನಿಸದೆಂಬಂತು ದಿವ್ಯಾಶ್ವಸೈನ್ಯಂ ೬೫

ಪರಿಧಾವಚ್ಚಕ್ರಮಾಲಾಚಟುಲಪತಿಜವೋತ್ಸಾಹವಾಹ[1]ಪ್ರಜೋದ್ಯ
ತ್ಖುರ[1]ಪ್ರುದ್ದಂಡಧ್ವಜಾಳಿಸ್ಫುರಿತಮಖಿಲಶಸ್ತ್ರಾಸ್ತ್ರ ಸಂದೋಹರುದ್ಧಂ
ನಿರುಪದ್ಘಂಟಾಸಮಗ್ರಂ ರಣರಸಿಕಮಹಾವೀರದುರ್ವಾರವತ್ಯು
ದ್ಧರಸೂತೋಚ್ಛೃಂಖಳಂ ಭೋಂಕನೆ ನೆರೆದುದನೂನಂ ವರೂಥಪ್ರತಾನಂ ೬೬

ಕರಿಕುಂಭೋತ್ಕಂಠಕಂಠೀರವರವಭಯದಕ್ಷ್ವೇಡಿತಂ ರತ್ನಗಾತ್ರ
ತ್ರರುಚಿಸ್ತೋಮಾವಲೀಢಂ ಗುಣಜಕಿಣಕಠೋರಪ್ರಕೋಷ್ಠಂ ಧನುಷ್ಟಂ
ಕರಣಪ್ರೋದ್ದಾಮನಂ ಸಗ್ರಥಿತ[2]ಶರಧಿ ಗೋಧಾ[2]ತಳತ್ರಾಂಗುಳಿಪ್ರ
ಸ್ಫುರಿತಂ ಧಾನುಷ್ಕಚಕ್ರಂ ನೆರೆದುದು ಚರಣಾಸ್ಫೋಟಿತಕ್ಷೋಣಿಚಕ್ರಂ ೬೭

ವ॥ ಆ ಪ್ರಸ್ತಾವದೊಳ್

ಮ॥ ಅವನೀದೇವಸಮೂಹವೇದನಿನದಂ ಮಾಂಗಲ್ಯಗೀತಾನ್ವಿತೋ
ತ್ಸವತೂರ್ಯಧ್ವನಿ ವಂದಿ[3]ವೃಂದಜಯಜೀಯಾನಂದನಾದಂ[3] ಸುಹೃ
ನ್ನಿವಹಾಶೀರವಮೊಂದನೊಂದು ಗೆಲೆವಂದೆಕ್ಕೆಕ್ಕೆಯಿಂದುರ್ವಿ ಪ
ರ್ವುವಿನಂ ಘೂರ್ಣಿಸುತಿರ್ದುದಾ ನೃಪಗೃಹಂ ಕ್ಷುಭ್ಯತ್ಸುಧಾಂಬೋಧಿವೋಲ್ ೬೮

ಚಂ॥ ತರಳವಿಲೋಚನದ್ಯುತಿ ದರಸ್ಮಿತಕಾಂತಿ ನವೀನಮೌಕ್ತಿಕಾ
ಭರಣಮರೀಚಿ ಕಣ್ಗೊಳಿಸೆ ಮಂಗಳಲಕ್ಷ್ಮಿಯ ಮೇಳದಾಕೆಯರ್
ನೆರೆದ[4]ವೊಲಾಗಳಂತಪುರದಂಗನೆಯರ್ ನಡೆತಂದು[4] ಬಾಹುವ
ಲ್ಲರಿ ಕುಡೆ ದೇಸೆಯಂ ತ್ರಿಭುವನ ಪ್ರಭುಗಿಕ್ಕಿದರೊಲ್ದು ಸೇಸೆಯಂ ೬೯

---

1 ಪ್ರಜೋಚ್ಚಾಮರ (ಕ) ಪ್ರಜೋಡ್ಡಾಮರ (ಗ) 2 ಶರಧಿಗಾಧಂ (ಕ) ಶರಧಿಗಾಢಂ (ಗ) 3 ವೃಂದವಿಜಯಾನಂದ ಪ್ರವಾದಂ (ಖ) 4 ಪೊಲಾಗಳಂಪುರತೆದಂಗನೆಯರ್ ನಡೆತಂದು (ಕ) ಪೊಲಾಗಳಂತೆ ಪುರದಂಗನೆಯರ್ ನೆರೆತಂದು (ಗ)

ವ|| ಅಂತು ಮಂಗಳಾಚಾರವೆಸೆಯೆ ಸಿಂಹಪೀಠದಿಂದೆೞ್ದು ದೈತ್ಯಮಥನಂ ಪ್ರಥಮಚಲಿತದಕ್ಷಿಣಚರಣನಾಗಿ

ಶಾ|| ವೀರಶ್ರೀ ನಲಿದೇಱಿ ತನ್ನ ಭುಜಮಂ ತೇಜಂ ದಿಶಾಧೀಶಕೋ
ಟೀರ[1]ಪ್ರಾಂತಮನೇಱಿ[1] ಶತ್ರು ದಿವಮಂ ಪೊರ್ದ್ದೇಱಿ ಬಂದೇಱಿದಂ
ಧೀರಂ ಶೌರಿ ವರೂಥಮಂ ಪ್ರಥಿತಘಂಟಾಯೂಥಮಂ ಶಸ್ತ್ರತೂ
ಣೀರವ್ರಾತಸನಾಥಮಂ ಧ್ವಜಝಷಾಪ್ತ[2]ಸ್ವರ್ಣದೀಪಾಥಮಂ[2] ೭೦

ವ|| ತದನಂತರಂ

ಮ||ಸ್ರ|| ಅತಿಕೋಪೋದ್ಭಿನ್ನಗಂಧದ್ವಿಪಘಟೆಗಳ ಘಂಟಾಠಣತ್ಕಾರದಿಂ ಬೃಂ
ಹಿತದಿಂ ವಲ್ಗತ್ತುರಂಗೋತ್ಕರದ ಖುರಖುರಾಳೀರಟತ್ಕಾರದಿಂ ಹೇ
ಷಿತದಿಂ ಸಂಗ್ರಾಮ[3]ರಾಗೋದ್ಭಟಭಟರ ಪದ[3]ಪ್ರೋಚ್ಚತಳತ್ಕಾರದಿಂ ಕ್ಷ್ವೇ
ಡಿತದಿಂ ಬ್ರಹ್ಮಾಂಡಮುಜ್ಜೃಂಭಿಸುತಿರೆ ತಳರ್ದಂ ಶ್ರೀಜಗನ್ನಾಥದೇವಂ ೭೧

ವ|| ಆ ಸಮಯದೊಳಪ್ರಮೇಯಸ್ವಕೀಯಬಲಕಳಕಳಾಕರ್ಣನೋದೀರ್ಣಕೋಪಸ್ಫುಟಿತಕಟತಟವಿಗಳದವಿರಳದಾನಧಾರಾಪಾನೀಯ ಪರ್ಯಟದಳಿಪಟಲಝಂಕೃತೋಪಬೃಂಹಿತ ಬೃಂಹಿತನಿನದಭೀಕರಾನೇಕಗಜಘಟಾನೀಕರುಂ, ಖರದಂತಖಂಡನಖಣಖಣಾಯಮಾನಖಲೀನೋತ್ಸ್ಖಲಿತ ಬಹುಳ ಲಾಲಾಪ್ರತಾನಫೇನಪೂರಘುರುಘುರುಘೋಣಾಘೋಷಣೋನ್ಮಿಷಿತಹೇಷಿತಾರವಭೀಷಣವಾಹಸಂದೋಹರುಂ, ಧರಣಿತಳಶಿಲಾಪಟ್ಟಶಲ್ಕೀಕರಣಪಟುನಿಷ್ಠುರವ್ಯಾಧಾವನ್ನೇಮಿವಳಯೋಚ್ಚಂಡಚಕ್ರ ಪ್ರಚಯಚೀತ್ಕಾರನಾದಾತಿಶಯವರೂಥಿಚಾಪಟಂಕಾರರನಭಯಂಕರ ವರೂಥಯೂಥರುಂ, ಅಸಮಸಮರಾರ್ಜಿತಾನೇಕ ವಿಜಯಾಹಂಕಾರಜನಿತ ಹರ್ಷಾವೇಶ ಬಂಹಿಮವತ್ಸಿಂಹನಾದ ವಿವಿಧ ಗತಿನರ್ತನ ಬಹುಪ್ರಕಾರ ಪ್ರಹರಣಚಾರಣಾನ್ಯೋನ್ಯವೀರಾಳಾಪಕಥನಪರಂಪರಾಭೀಷಣಪದಾತಿಸಂಘಾತರುಂ, ಯುಗಪತ್ಪ್ರಹನ್ಯಮಾನನಾನಾನಕನಿಸ್ಸಾಣಪಣವಭೇರೀ ಮೃದಂಗಡಿಂಡಿಮಡಮರುಢಕ್ಕಾತಾಳಕಾಂಶ್ಯಾತಾಳಶಂಖ ಕಾಳಹ ಕೋಳಾಹಳ ಬಧಿರಿತದಿಗಂತರಾಳರುಂ, ಕರಿಮಕರಶರಭಭೇರುಂಡಸಿಂಹ ವ್ಯಾಳಶಾರ್ದೂಲಚಿಹ್ನಪರಿವಿರಾಜಿತ ವೈಜಯಂತೀ ವಿಚಿತ್ರಪಿಂಛಚ್ಛತ್ರ ಧವಳಾತಪತ್ರಪ್ರಕರಪರಿಪಿಹಿತಮಿಹಿರಾಂಶುಜಾಳರುಂ, ಅಪ್ರಮಿತಚತುರಂಗಬಲಪದೋದ್ಧೂತಧೂಳೀಪಟಲಸಂಭವ ಮಹಾಂಧಕಾರ ನಿವಾರಣ ಪಟುಹಟನ್ಮಣಿಮಯಾಭರಣ ವಜ್ರಕವಚ ಮರೀಚಿನಿಚಯರುಮಾಗಿ ಬಂದು ದ್ವಾರಾವತಿಯ ಪೊಱವೊಟಿಲೊಳಿರ್ದನೇಕದ್ವೀಪಾವನಿಪಸೇವಕ ಕ್ಷತ್ರಿಯರಂ ತ್ರಿಯಾಮಾಚರಸೂದನಂ ಸುಪ್ರಸಾದಾವಲೋಕನದಿಂ ಸಂಭಾವಿಸಿ

---

[1] ವ್ರಾತವನೇಱಿ (ಖ) [2] ಸ್ವರ್ಣದೀಪೋತ್ಥಮಂ (ಖ) [3] ರಾಗೋದ್ಭಟರಪದತಳ (ಗ)

ಚಂ|| ಮುಗಿಯುವಿವೆಂದುವೆಂದೆನಿಪುವಂ ಹರಿ ಸೈನ್ಯರಜೋಂಧಕಾರದಿಂ
ಮುಗಿಯಿಸಿದಂ ದಿವಾಕರಕರಾಬ್ಜಮನೆಂದೊಡಿದಾವ ಕೌತುಕಂ
ಬಗೆಗಿತರಪ್ರಚಂಡರ ಕರಾಬ್ಜಮನೀಕ್ಷಣಚಂದ್ರಿಕಾಂಶುವಿಂ
ಮುಗಿಯಿಪುದೆಂಬಿನಂ ಮುಗಿದುವಂದವನೀಶಕರಾಂಬುಜೋತ್ಕರಂ ೭೨

ವ|| ಆಗಳಾ ನೃಪಕೋಟಿಯುಂ ನಿಜೋಲ್ಲಸಿತಭ್ರೂಕೋಟಿಯಿಂ ನಡೆಯಲ್ವೇೞ್ದು

ಮ||ಸ್ರ|| ಅಸಮೋಗ್ರಾನೀಕಿನೀಭಾರದಿನವನಿತಳಂ ಬಳ್ಕಲುಚ್ಚಧ್ವಜಾನೀ
ಕಸಮೀರಾಘಾತದಿಂ ಬಾಂದೊಱೆ ಕೆರೆನುಸಗಲ್ ತೂರ್ಯನಿರ್ಘೋಷದಿಂದೆ
ಣ್ದೆಸೆ ಶಬ್ದಾದ್ವೈತಮಾಗಲ್ ನೃಪಸಮಿತಿಶಿಖಾ[1]ರತ್ನಜಾಲಂಗಳಿಂದಂ[1]
ಬಿಸಿಲೆಲ್ಲಂ ಲಂಕಮಾಗಲ್ ವಿಜಯಶಿಬಿರಮಂ ಕೃಷ್ಣನೆೞ್ತಂದು ಪೊಕ್ಕಂ ೭೩

ಕಂ|| ವಿವಿಧವಿನೋದದಿನಿರ್ದಾ
ದಿವಸಂ ಪ್ರಸ್ಥಾನಶಿಬಿರದೊಳ್ ಮಱುದಿವಸಂ
ದಿವಸಕರೋದಯದೊಳ್ ವಿಜ
ಯವರೂಥನುಸೇಱೆ ನೆಗೞ್ದ ಪಟುಪಟಹರವಂ ೭೪

ಶಾ|| ಈ ಕೋಳಾಹಳದೇಕದೇಶಮುಸೆ ಪೋಲ್ಗುಂ ವಾರ್ಧಿಸಂಭೂತಮು
ಪ್ಪಾ ಕೋಳಾಹಳವೆಂಬಿನಂ ನಿಜಚಮೂಕೋಳಾಹಳಂ ದಿಙ್ಮುಖಾ
ನೀಕಾಂತಂಬರನಂಬರಂಬರಮುಜಾವಾಸಂಬರಂ ಪರ್ವಿರಲ್
ವೈಕುಂಠಂ ನಡೆದಂ ಯುಧಿಷ್ಠಿರನರೇಂದ್ರಾಲೋಕನೋತ್ಕಂಠೆಯಿಂ ೭೫

ಮ|| ಇದು ಚಿತ್ರಂ ಸಲೆ ಸತ್ವಮೂರ್ತಿಯೆನಿಸಿರ್ದಾ ವಿಷ್ಣು ತಾನೆಂತು ಮಾ
ಡಿದನಿಂದೀ ಜಗಮುಂ ರಜೋಮಯಮನೆಂದೆತ್ತಂ ರಜೋಜಾಳಪೂ
ರ್ಣದೊಳಾಕಾಶದೊಳಾತ್ಮಪಾಣಿಪಿಹಿತಾಸ್ಯರ್ ಖೇಚರರ್ ಮುಂದುಗಾ
ಣದೆ ನಿಲ್ವನ್ನೆಗಮಾದುದೇಂ ಪಿರಿದೊ ತತ್ಸೇನಾರಜೋಮಂಡಲಂ ೭೬

ಮ||ಸ್ರ|| ಪದಘಾತೋದ್ಧೂತಧೂಳೀಪಟಲಮಹಿಮರುಗ್ಬಿಂಬಮಂ ನುಂಗಿ ರೋದೋಂ
ತದೊಳಾದಂ ಧ್ವಾಂತಸಂತಾನಮನೊದವಿಸೆ ನಾನಾನಿಶಾತಾಯುಧವ್ರಾ
ತದ ಭಾಸ್ವದ್ವಜ್ರವರ್ಮಪ್ರಕರದ ನೃಪತಿಪ್ರೌಢಚೂಡಾಮಣಿಸ್ತೋ
ಮದ ಸಾಂದ್ರಜ್ಯೋತಿಗಳ್ ಕಣ್ಬೆಳಗೆನೆ ನಡೆದತ್ತಾ ಜಗನ್ನಾಥಸೈನ್ಯಂ ೭೭

1 ರತ್ನರಾಗಂಗಳಿಂದಂ (ಖ)

ದರಹಾಸಶ್ರೀನಟೀನೂಪುರದುಲಿಯೆನೆ ಮಾತಾಡುತಂ ತಪ್ತೋತ್ಕಳತ್ಯಾ
ದರದಿಂದೀವಲ್ಲಿ ಕೈಮಿಕ್ಕುದಿರ್ದ ಘುಸೃಣಕರ್ಪೂರಕಸ್ತೂರಿಕಾಸಾ
ರರಜಂ ತಳ್ಪೊಯ್ದು ನೀವೀಲತೆಗೆ ತಳಿರಲ[1]ರ್ತುಂಬಿವಿಂಡೆಂಬಿವಂ[1] ಬಿ
ತ್ತರಿಸಲ್ ಬಂದತ್ತು ಪೊಂಬಣ್ಣಿಗೆಯ ಪಿಡಿಗಳೊಳ್ ತಂಡದಿಂ ಪೆಂಡವಾಸಂ ೭೮

[2]ನಡೆದೆಳ್ತಂದತ್ತು ಕಣ್ಗೆಂಪುಱ[2] ಮೊಗವಡದಾಟೋಪಮಂ ಬೀಱ [3]ಪಕ್ಕಂ
ಬಿಡಿದಳ್ಕುತ್ತಾರೆಕಾಱರ್ ಬರೆ ಭರವಶದಿಂ[3] ಮೇಗಣಾರೋಹಕರ್ ಬಾ
ಯ್ವಿಡೆ ಪೋಪೋಗೆಂದು ದೂರಾಂತರದೊಳೊದಱ ಕಾಲ್ಗಾಪಿನಾಳ್ ನಿಂದು
ನಿಂದೋ
ರಡಿಗೋರೊರ್ಮಾಲಿಸುತ್ತುಂ ನೆರವಿಯಱಲಿಪುವಂ ವ್ಯಾಳಗಂಧೇಭಚಕ್ರಂ ೭೯

ಮ॥ ದಿಗಧೀಶರ್ [4]ಜಗದೀಶರೊಳ್[4] ಪೊಲಗಿಡಲ್ ದಿಗ್ದಂತಿಗಳ್ ಸೈನ್ಯದಂ
ತಿಗಳೊಳ್ ಪಲ್ಲಟವಾಗಲಬ್ಧಿಗಳನೇಕಾಶ್ವೇಭಲಾಲಾಮುದಾ
ಬ್ಧಿಗಳೊಳ್ ತಳ್ತಿರಲರ್ಕಕೇತು ರಥಕೇತುವ್ರಾತದೊಳ್ ಕೂಡಲಿಂ
ತಗಲಂಬೆತ್ತು ಮಹತ್ವಮಂ ತಳೆದು [5]ನೀಱದ್ದೆಳ್ತಂದನಬ್ಜೇಕ್ಷಣಂ[5] ೮೦

ಇದು ಸಮಸ್ತ ಕಮಲಭವಾಂಡಮಾಲಾಘಟೀಘಟಿತಾರಾಘಟ್ಟಘಟನಾಸ್ವತಂತ್ರ ನಿಜ
ಸ್ವರೂಪನಿರೂಪಣಚಕಿತ ಸಕಲಾಮ್ನಾಯತಂತ್ರಲಕ್ಷ್ಮೀಕಾಂತ ಶ್ರೀಪಾದ
ಭಕ್ತಿಯುಕ್ತ ಸುಕವೀಂದ್ರರುದ್ರಪ್ರಣೀತ ಶ್ರೀಜಗನ್ನಾಥವಿಜಯ
ಮಹಾಪ್ರಬಂಧದೊಳ್ ಷಟ್ಪುರೇಶ್ವರಮಥನ ಶಿಶು
ಪಾಲಾಡಂಬರ ಮಂತ್ರಾಲೋಚನ ಯುಧಿಷ್ಠಿರ
ರಾಜಸೂಯ ನಿರೀಕ್ಷಣಾರ್ಥೇಂದ್ರ
ಪ್ರಸ್ಥಪ್ರಯಾಣವರ್ಣನಂ
ಪಂಚದಶಾಶ್ವಾಸಂ

1 ತುಂಬಿವಿಂಡೆಂಬಿನಂ (ಕಗ) 2 ನಡೆತಂದತ್ತುಂದು ಕಣ್ಬೆಳ್ಪರೆ (ಖ) 3 ಪಂಕೆಂಬಿಡಿದಾರು ತ್ತಾರೆಕಾಱರ್ ಬರೆ ಭಯವಶದಿಂ (ಖ) 4 ಧರಣೀಶರೊಳ್ (ಖ) 5 ಬಂದೆೞ್ತಂದನಬ್ಜೇಕ್ಷಣಂ (ಕಗ)

ಷೋಡಶಾಶ್ವಾಸಂ

ಕಂ|| ಶ್ರೀವೃಕ್ಷಪನಸನಿವಹಮು
ಮಾವಿಷ್ಕೃತ[1]ಕುಸುಮವಿಸರಮೆನೆ[1] ಶಿಖರಿವನಂ
ತೀವಿರೆ ಶಿಖಂಡಮಣಿಕಿರ
ಣಾವಳಿಯಿಂ ಕಾಣಲಾಯ್ತು ರೈವತಶೈಲಂ ೧

ಚಂ|| ಇರೆ ಶಬರಾಧಿರಾಜಕಟಕಂ ಕಟಕಂ ಕಟಕಂ ಧರೋಗ್ರಸಿಂ
ಧುರಮೆನೆ ನಿರ್ಜರೋಲ್ಲಹರಿಯುಂ ಹರಿಯುಂ ಹರಿಯುಂ ವಿಜೃಂಭಿಸಾ
ಗಿರಿತಟದಲ್ಲಿ ದಾವಶಿಖಿಯುಂ ಶಿಖಿಯುಂ ಶಿಖಿಯುಂ ಪ್ರಭೂತಮಾ
ಗಿರೆ ಬೆಳಗಂ ತಮಂ ತಪಿಸಿಸಂ ವಿಪಿನಂ ವಿಪಿನದ್ಧ ಮೊಪ್ಪುಗುಂ ೨

ಮ|| ಕರಿದಾನದ್ರವಗಂಧಚಿತ್ರವಿಹಗಸ್ತೋಮಾರುತಂ ಮಾರುತಂ
ಬರೆ ಕೃಷ್ಣಂಗಿದಿರಂ ಪಳಂಚಲೆದು ಮೇಘಾಧ್ವಾಂತಮಂ ಧ್ವಾಂತಮಂ
ಪರಿಪುತ್ತಿರ್ದುದು ತನ್ನೊಳೊಂದಿ ನಿಲೆ ತೇಜೋವ್ಯೈಹಿರಂ ವ್ಯೈಹಿರಂ
ತರುಶಾಖಾನಿಕುರುಂಬಚುಂಬಿತದಿಶಾನೀಕಾನನಂ ಕಾನನಂ ೩

ಚಂ|| ಜರದಹಿಪೂತ್ಕೃತಂ ವಿಹಗಚೀತ್ಕೃತಮುದ್ಧತಘೂಕಹುಂಕೃತಂ
ಕರಿಕರಸೂತ್ಕೃತಂ [2]ಪವನಸೀತ್ಕೃತ[2]ಮುದ್ಧತವೇಣುಝಂಕೃತಂ
ಗಿರಿಜನದೀಜಳತ್ಕೃತಮಿಭಾರಿಘುಳುತ್ಕೃತಮುಗ್ರ[3]ದಾವಸಂ
ಚರಣಧಗತ್ಕೃತಂ[3] ಮಹಿಷಶೃಂಗಟಣತ್ಕೃತಮಾ ವನಾಂತರಂ ೪

ಮ|| ನಡುವಿರ್ದೆಟ್ಟಿರೆ [4]ಪೋತ ಚಿಕ್ಕ ಕಳಭಂಗಳ್[4] ಕೂಡೆ ಸಾರ್ದಿರ್ಕೆಲಂ
[5]ಬಿಡದಿಂಬಿಂದೆಳೆಯಾನೆಗಳ್[5] ಬರೆ ಮರಂಗೊಂಡೊಂದು [6]ಯೂಥಾಧಿಪಂ[6]
ಪೊಡೆಯುತ್ತುಂ ಬರೆ ಮುಂದೆ ಪಿಂದೆ ಪೆಜಗಿಂ ಬಂದೊಂದಿಭಂ ಪಜ್ಜೆಯುಂ
ತೊಡೆಯುತ್ತುಂ ಬರೆ ಬರ್ಪ ಯೂಥತತಿಯಿಂ ಚೆಲ್ವಾದುದಾ ಕಾನನಂ ೫

---

1 ಕುಸುಮಮಪಾದುದೆನೆ (ಖ) 2 ಪ್ಲವಗಕೀತ್ಕೃತ (ಖ) 3 ದಾವಸಂಹರಣಧಗತ್ಕೃತಂ (ಕಗ) 4 ಚಿಕ್ಕಪೋತ ಕಲಭಂಗಳ್ (ಕಖಗಪೊಅ) 5 ಬಿಡಿದಣ್ಮಿಂ ಸೆಳೆಯಾನೆಗಳ್ (ಕಗ) 6 ಯೂಥಪತಿಯಿಂ (ಖಗ)

ಉ|| ಸೈರಿಸಲಾರದುರ್ವರೆಯ ಭಾರಮನಲ್ಪಬಲಂಗಳಾ ದಿಶಾ
ವಾರಣರಾಜಿಗಳ್ ತಳೆವುವೀ ಮದವಾರಣವೃಂದದಿಂ ಮಹೀ
ಭಾರಮನೆಂದು ಧಾತ್ರ ಸಮಕಟ್ಟಿದ ವಾರಣಯೂಥಮೆಂಬಿನಂ
ವಾರಣಸಂಕುಲಂ ಬಗೆಗಗುರ್ವಿಸುತಿರ್ದುದದೊಂದುತಾಣದೊಳ್ ೬

ಚಂ|| ಅತಿಶಯಭದ್ರಮೂರ್ತಿಗೆ ಜಗಕ್ಕಿದು ಮಂಗಳಮೆಂದು ರೌದ್ರದೇ
ವತೆ [1]ಸಿಡಿದಿಕ್ಕುವಾಮಿಷದ[1] ಮುಟ್ಟಿಗೆಯೆಂಬಿನೆಗಂ ಸಿಡಿಲ್ದು ದಿ
ಗ್ವಿತತಿಗೆ ಸೂಸೆ ಮುನ್ನಮೆರೆಯಾದ[2]ರುರುವ್ರಜವಾಗಳಾಸ್ಯದಿಂ[2]
[3]ಪ್ರತಿಘದೊಳೆತ್ತಿ[3] ಬೀಸಿದುದದೊಂದು ಮದದ್ವಿರದಂ ಮಹಾಹಿಯಂ ೭

ಮ|| ಬಿದುವೋ ಕೂಟಮೊ ಕರ್ಣತಾಳಮೊ ಪತತ್ರಕ್ಷೇಪಮೋ ನಿರ್ಗಲ
ನ್ಮದಮೋ ನಿರ್ಝರಮೋ ಲಲಾಟಮೊ ಶಿಲಾವಿಸ್ತಾರಮೋ ಕಣ್ಣ ಕೆಂ
ಪೊ ದವಜ್ವಾಲೆಯೊ ಮೆಯ್ಯ ಕರ್ಪೊ ಕರಿಕೋ ಪೇರಾನೆಯೋ ವಜ್ರಿಗೊ
ಡ್ಡಿದ ನೀಲಾದ್ರಿಯೊ ಪೇೞಿದೆಂಬಿನಮಗುರ್ವಾದತ್ತು ಮತ್ತೊಂದಿಭಂ ೮

ವ|| [4]ಅದಲ್ಲದೆಯಲ್ಲಿಂ ಬೇಱೊಂದು ನೀರ್ಸೆರೆಗೆಯ್ದಿರ್ದ ಬೞಿಯಂ[4]

ಚಂ|| ಸರಿಯೆ ಝಷಾಳಿ ಸಂಭ್ರಮಕರಂ ಮಕರಂ ಮಕರಂದರೇಣುಗಳ್
ಪರೆಯೆ ಕಲಂಕೆ ಕೂಡೆ ಕಮಲಂ ಕಮಲಂ ಕಮಲಂ ಮಹೋರ್ಮಿ ಪೊ
ಣ್ಮಿರೆ ಪೊಱಮಟ್ಟಭಂ ಬಿನದದಿಂ ನದದಿಂ ನದದಿಂದ್ರವಜ್ರನಿ
ಷ್ಠುರಮೆಱಗಿತ್ತಿಭಾಪಘನಮಂ ಘನಮಂ ಘನಮಂಶಜಾಲಮಂ ೯

ಮ||ಸ್ರ|| ಒಡಗೊಂಡುಯ್ದೊಂದು ಪದ್ಮಾಕರಹಿಮಜಲಮಂ ಕೊಂಡು ಮೇಲೊಟ್ಟೆ ತಣ್ಪಂ
ಪಡೆದಂಭೋಜಾತಪತ್ರಂಗಳ ಕೊಡೆವಿಡಿದಲ್ಲಿಂ ನಿಕುಂಜ[5]ಸ್ಥಳಕ್ಕ
ಯ್ದುಡಿದತ್ತುತ್ಫಲ್ಲಮಂ[5] ಸಲ್ಲಕಿಯೆಳದಳಿರಂ ಪೇಚಕಸ್ಥಾನಮಂ ಕೈ
ದುಡುಕುತ್ತಾಘ್ರಾಣಿಸುತ್ತುಂ ನಸೆಗನುವಶಮಾಗಿರ್ದುದಂದೊಂದಿಭೇಂದ್ರಂ ೧೦

ಉ|| ಒರ್ವ ವನಸ್ಥಳೀಕಮಲಪಾಂಸುವನಿಂಬೆನೆ [6]ಮೆಯ್ಯೊಳೊಟ್ಟಿಕೊ
ಳ್ವೊವರ್[6] ಕರಾಗ್ರಮಂ ನೆಗಪಿ ಸಂಭ್ರಮದಿಂ [7]ಪರಿವೊವರ್[7] ಶೈಲಸಿಂ
ಧೂರ್ಮಿಗೆ ಬೆರ್ಚಿ ತಾಯ್ವಿಡಿಯ ಸೋಂಕಿನೊಳೊಯ್ಯನೆ ಸೋಂಕಿ [8]ನಿಲ್ವ ಮು
ದ್ದೊವರ್ಯುಮೊಪ್ಪಿ ತೋಱಿ[8] ಕಲಭವ್ರಜಮಿರ್ದುದದೊಂದು ತಾಣದೊಳ್ ೧೧

---

1 ಬೞಿದಿಕ್ಕುವಾಮಿಷದ (ಕಗ) 2 ತರುವ್ರಜವಾಗಳಾಸ್ಯದಿಂ (ಕ) ತುರುವ್ರಜವಾಗಳಾ
ಸ್ಯದಿಂ (ಮೊಅ) 3 ಪ್ರತಿಘದೊಳೊತ್ತಿ (ಕಗ) 4 ಅದಲ್ಲದೆಯುಮೊಂದೆಡೆಯೊಳ್ ಬೇಱೆ ನೀರ್ಸೆಱೆ
ಗೆಯ್ದಿರ್ದತಾಣದೊಳ್ (ಖ) 5 ಸ್ಥಳಕ್ಕುಯ್ದಿಡಿದುತ್ಫುಲ್ಲಾಘಮಂ (ಕಗ) 6 ಮೆಯ್ಯೊಳೊಟ್ಟಿ
ಕೊಂಡೊವರ್ (ಮೊಅ) 7 ಪರಿದೊವರ್ (ಕಖಗ) 8 ನಿಲ್ವವೊವರ್ವರ್ಯುಮೊಪ್ಪಿತೋಱಿ
(ಕಗ) ನಿಂದುಮೊವರ್ವರ್ಯುಮೊಪ್ಪಿತೋಱಿ (ಮೊಅ)

ವ॥ ಮತ್ತಮೊಂದವಿರಳಮಾದ ಸರಳವನದೊಳ್

ಮ॥ ಉಗುಪೆಂಟುಂ ಮದವೆತ್ತಿ ಕಟ್ಟಿ [1]ವಿಸರಚ್ಚೀತ್ಕಾರ ಭೀರುಸ್ವರಂ
ಮಿಗೆ ಬಾಯಂ[1] ಬಿಡೆ ಕೆಯ್ಯನಿಟ್ಟು ಸುಗಿವನ್ನಂ ಗರ್ಜಿಸುತ್ತೆಯ್ದಿ ಮು
ತ್ತುಗಳೆತ್ತಂ ಬಿದುವಿಂ ಸ್ವರೌದ್ರರಸಬಿಂದುಶ್ರೇಣಿವೋಲ್ ಸೂಸೆ ದಂ
ತಿಗಳಂ ಸೀಳ್ದು ಸಿಱುಂಬುಳಾಡಿದುದದೊಂದುತ್ಕಂಠಕಂಠೀರವಂ ೧೨

ವ॥ ಮತ್ತಮೊಂದು ಗಿರಿದರೀದೇಶದೊಳ್

ಕಂ॥ ಗಱುವೊಯ್ಯದೆ ಕಣ್ದೆಱೆಯದೆ
[2]ತಿಱುಳಿಂ ತನ್ನೊಡೆದ[2] ತತ್ತಿಯೊಳ್ ಭೇರುಂಡಂ
ಪೊಱಮಡಲದೊಂದು ಶರಭಂ
ಬೆಱೞ್ತೋಡಿತು ಸತ್ವನಿಧಿಯ ಶೈಶವಮೞಿದೇ ೧೩

ವ॥ ಆ ಮಹಾಗಹನಮಧ್ಯದೊಳ್

ಮ॥ಸ್ರ॥ [3]ಮರೆದಿಂದಾ ಸರ್ಪನಂ[3] ಹಸ್ತಿಯೆ ಪಿಡಿದುದುವಾ ಸರ್ಪನಂ ಹಸ್ತಿಯಂ ಕೇ
ಸರಿ ಕೋಪಾಟೋಪದಿಂ ಪೊಯ್ದುಗಿಬಗಿದುದುವಾ ಸರ್ಪನಂ ಹಸ್ತಿಯಂ ಕೇ
ಸರಿಯಂ ಸಿಂಹಾರಿಯೆಂಟುಂ ಪದದಿನಿಱಿದುದಾ ಸರ್ಪನಂ ಹಸ್ತಿಯಂ ಕೇ
ಸರಿಯಂ ಸಿಂಹಾರಿಯಂ ತುಂಡದೊಳೆ ಪಿಡಿದುಪಾಱಿತ್ತು ಭೇರುಂಡನಾಗಳ್ ೧೪

ಪರಿಬೆಂಬತ್ತೆಯ್ದು ನಾಯಂ ಬಿಡು ನಡೆಯಿಸು ದೀಪಂಗಳಂ ಪಾಸಮಂ ವಾ
ಗುರೆಯಂ ಬೀಸಾಂಕೆಗೊಳ್ಳಾರ್ದಿಸು ಪೊಣರ್ದಿಱಿಕೊಲ್ಲೆಂಬ ಘೋರಸ್ವನಂ ಪೊ
ಣ್ಮಿರೆ ವನ್ಯಪ್ರಾಣಿಗಳ್ಗಂತಕನ ಪಡೆಯೆ ದಾಳಿಟ್ಟವೋಲ್ ಬೇಡರಿರ್ದರ್
[4]ಪರುಷಾಕಾರರ್[4] ವನಾಂತಸ್ತಿಮಿರಮೆ ಶಬರವ್ರಾತಮಾಯ್ತೆಂಬಗುರ್ವಿಂ ೧೫

ಉ॥ ಪಾಸದ ನೇಣ್ಗಳಂ ಪೊಸೆವ ಜಾಲಮನೊಪ್ಪಿರೆ ಮಾಟ್ಪ ಕಲ್ಲಿಯಂ
ಕಾಸಿನ ಕಂಬಿಯಂ ಸಮೆವ ಮಾರ್ಗಣಮಂ ಗಱಿಗಟ್ಟುತಿರ್ಪ ಬಿ
ಲ್ಗೀಸುವ ಬಾಣಮಂ ತಿರುಪಿ ತಿರ್ದುವ ಮಾರ್ತಿರುವಂ ತೊಡರ್ಚಿ ನೋ
ಟ್ಪಾ ಸಹಜಕ್ರಿಯಾವನ ವನೇಚರರಿಂ ಬಗೆಗೊಂಡುದಾ ವನಂ ೧೬

---

[1] ವಿಸರಂ ಚೀತ್ಕಾರ ಭಿನ್ನಸ್ವರಂ ಮಿಗೆ ಬಾಯೊಳ್ (ಕಗ) [2] ತಿರುಳಿಂದಂದೊಡೆದು (ಖ) [3] ಮರದೆಂದಾ ಸರ್ಪನಂ (ಕಗ) [4] ತರುಶಾಖಾಳೀ (ಖ)

ಚಂ॥ ಕಮಲಜನಿಲ್ಲಿ ಬಯ್ತನೋಲವಿಂ ಕುಮುದೇಕ್ಷಣವಜ್ರದಂತವಿ
ದ್ರುಮರದನಚ್ಛದಂಗಳನಮರ್ಚಿದ ಜಂಗಮನೀಲಪುತ್ರಿಕಾ
ಸಮಿತಿಯನೆಂಬಿನಂ ಮಿಸುಪ ಕಣ್ ಸುಲಿಪಲ್ಲರುಣಾಧರಂ ಸಕಾ
ಳಿಮತನುಲೇಖೆಯೊಪ್ಪಿರೆ ಪುಳಿಂದಿಯರಿರ್ದರದೊಂದು ಠಾಣದೊಳ್ ೧೭

ಕಂ॥ ತೋರಬಿದಿರ್ಮುತ್ತಿನ ನವ
ಹಾರದ ಕೆಂದಳಿರ್ಗಳುಡೆಯ ವನಚರಿಯೊರ್ವಳ್
ತಾರಾವಳಿಯಿಂ ನವಸಂ
ಧ್ಯಾರಾಗದೊಳೆಸೆವ ನಿಶೆಯನನುಕರಿಸಿರ್ದಳ್ ೧೮

ಲಲಿತ[1]ಲತಾಕಟುತರುವು
ನ್ಮಿಲನಮಿದೆಂಬಂತೆ[1] ಶಬರದಂಪತಿಗಳ್ ಕೋ
ಮಲಿಮುಕರೋರಿಮರುರ್ವಿಗೆ
[2]ನೆಲೆಯೆನಿಸಿದರಸದೃಶಕ್ರಿಯಾ[2]ಪಟುಗಾತ್ರರ್ ೧೯

ಮ॥ ಉಗುರ್ವೊಯಿಲ್ಲಾತನ ಮೆಯ್ಯೊಳೀ ಪುಲಿಯ ಪೊಯ್ಲಿಂದಾದುದೆಂದೋಪವಳ್
ಬಗೆವಂತನ್ಯವಧೂರತೋತ್ಸವನಖಾಂಕಾನೀಕಮಂ ಮಂಚಿಪು
ಜ್ಜುಗದಿಂದಂ ಪಿಡಿದೊಂದು ಪೆರ್ಬುಲಿಯನೊರ್ವಂ ಕಕ್ಷದಿಂದೊತ್ತಿ ತ
ನ್ನ ಗೃಹಕ್ಕೆಟ್ಟಿರುತಿರ್ದನೊಂದೆಡೆಯೊಳುದ್ಯದ್ಧೀವರಂ ಧೀವರಂ ೨೦

ಚಂ॥ ಕರಿ ಪೊಣರ್ದೆಕ್ಕಲಂ ಮಲೆತು ಪೆರ್ಬುಲಿ ಪಾಯ್ದು ಗಿಯಲ್ಕೆ [3]ಡೋಣಿವಿ
ಟ್ಟುರದ ಪಿಸುಟ್ಟಿ ಪೆರ್ದೊಡೆಯ[3] ನುರ್ಗಿದ ದಂಡೆಯ ಭಂಗಿ ರೌದ್ರಮಾ
ಗಿರೆ ನೆಱೆ ಮೂಱು ಬೇಂಟೆಯುಮನಾಡಿ ತದಾಮಿಷಭಾರದಿಂದೆ ಜೀ
ರ್ಗರೆಯುತೆ [4]ಮಾಂಸವಾಂತೊಲವಿನಿಂ[4] ಬರುತಿರ್ದನದೊರ್ವ ಲುಬ್ಧಕಂ ೨೧

ವ॥ ಮತ್ತೊಂದೆಡೆಯೊಳ್

ಚಂ॥ ತೊರೆದ ಕುಚಂಗಳಿಂದೆ ಕೊಣಸಂ ನಸೆಯಿಂ ಮೃಗಮಂ ಕುರಂಗಿ ಸಾ
ರ್ತರಲೆಡೆಗೊಂಡು ಭಲ್ಲದಿನೆರಟ್ಕುಡಿಯಾಗೆ ಕಿರಾತನೆಚ್ಚೊಡಂ
ತರಿಸದೆ ಪುಲ್ಲೆ ಸಾರ್ಚೆ [5]ಮಱಿಯಂ[5] ಮೊಲೆಯಂ ನೆರೆದೇಣನಂ ಬಱಿ
ಕ್ಕೆರಡುಡಿಯಾಯ್ತು ಕೇವಲಮೆ ದೇಹಿಗೆ ಸಂಸೃತಿಮೋಹಬಂಧನಂ ೨೨

---

1 ಲತಾಕಂಟಕತರುಮಿಲನಮಿದೆಂಬಂತೆ (ಕಗ) 2 ನೆಲೆಯೆನಿಸಿದ ಸುರತವಿಕ್ರಿಯಾ (ಕಗ) 3 ದೋಱುವಿರ್ದುರದಪಿವಿಟ್ಟಿ ಪೆರ್ದೊಡೆಯ (ಖ) 4 ಮತ್ತಕಾಸಿಯೊಲವಿಂ (ಖ) 5 ಮಗನಂ (ಕಗ)

ಹರಿಣನನಾರ್ದಿಸಲ್ಕೆ [1]ಶಬರಂ ಶಬರಪ್ರಿಯಕಾಂತೆ ಬಂದು[1] ಬಿ
ಟ್ಟಿರ್ದಿರಳೆಯನೀಕ್ಷಿಸುತ್ತುಮಿರಲಾಕೆಯ ಕೇಕರಕಾಂತಿಜಾಲದಿಂ
ಪರಿವೃತವಾಗಿ ತನ್ಮೃಗಮದೇಂ ಪಡೆದತ್ತೊ ಮೃಗಾಂಕಮಂಡಲಂ
ಧರೆಗವತೀರ್ಣಮಾದುದೆನಿಪೊಂದಭಿಶಂಕೆಯನೊಂದು ತಾಣದೊಳ್ ೨೩

ಕಂ॥ ತರುಣತಮಾಲಲತೌಘದ
ಪೊರೆಯೊಳ್ ಗೇಯಸ್ವನಾನುಮಿತತನುಲತೆಗಳ್
ಕರಮೆಸೆಯೆ ಗೇಯಗೋಷ್ಠಿಗೆ
ನೆರೆದಿರ್ದ ಪುಳಿಂದಕಾಂತೆಯರ್ಕಳೊಳೊರ್ವಳ್ ೨೪

ಚಂ॥ ತುಱುಗೆವೆಗಣ್ಣ ಕಾಂತಿ ಮರಗಟ್ಟಿಲೆಯಂ ಬೆಡಱಟ್ಟೆ ತೊಂಡೆವಾ
ಯ್ದೆಱೆ ಕಿಸುಸಂಜೆವೀಱೆ ದಶನಾಂಶು ನವಾಮೃತಪೂರವೆಂಬಿನಂ
ಪೊಱಮಡೆ ಸಿಂಗವಾನೆ ಪುಲಿ ಪುಲ್ಲೆ ನವಿಲ್ ಫಣಿ ತಮ್ಮ ವೈರಮಂ
ಮಱೆದೊಡನಾಲಿಸಲ್ ಶಬರಿ ಪಾಡಿದಳಚ್ಯುತನಂಕಮಾಲೆಯಂ ೨೫

ವ॥ ಅಂತು ಮನೋಹರಮಾದ ಗಹನಮಂ ದಾಂಟಿ ಧರಣೀಧರಕಟಕಂ ರೈವತ ಧರಣೀಧರಕಟಕಮಂ ಮುಟ್ಟೆವರೆ

ಮ॥ಸ್ರ॥ ಹರಿ ಗೋಲಾಂಗೂಲ ಡೋಲಾಯಿತತರುವಿಟಪಂ ನಿರ್ಘೃಣವ್ಯಾಘ್ರ[2]ಭೀತಿ
ಸ್ಫುರಿತತ್ವಂಗನ್ಮೃಗೌಘಂ[2] ಜರದಜಗರಫೂತ್ಕಾರವಾತ ಸ್ಫುಟದ್ಗ
ಹ್ವರಗರ್ಜತ್ಸಿಂಹನಿರ್ದಾರಿತ ಮದಗಜಕುಂಭಸ್ಥಳೋನ್ಮುಕ್ತಮುಕ್ತೋ
ತ್ಕರಗುಂಜಾಪುಂಜ ಕಿರ್ಮ್ಮಿರಿತಕಟಕಮಗುರ್ವಾದುದುರ್ವೀಧರೇಂದ್ರಂ ೨೬

ಕಂ॥ ತ್ರಿದಶನಗೇಂದ್ರಂ ಧನುವಾ
ದುದು ಪಶುಪತಿಗಲ್ಪಮುನಿಗೆ ಸೆಡೆದುದು ವಿಂಧ್ಯಂ
ಸದೃಶಮೆ ಬಿಣ್ಪಿಂ ಪೆಂಪಿಂ
ಗಿದಱೊಳೆನಲ್ ತಳೆದುದಚಲಮತ್ಯುನ್ನತಿಯಂ ೨೭

ಚಂ॥ [3]ಬಳೆದ[3] ಶಿಖಂಡವಳ್ಳಿಱಿಯೆ ಕೇಸರಿ ಸೀಳೆ ಸಮೀರಪಾತಮ
ಗ್ಗಳಿಸೆ ಪುಳಿಂದರಾರ್ದಿಸೆ ಸಿಡಿಲ್ದುಗುತಂದುವು ಪುಷ್ಪಸಾಯಕಂ
ಗಳ ಪೊಗರ್ವಟ್ಟ ಚಂದ್ರಿಕೆಯ ಬಿಱಿತ್ತಳಮಿಂಚಿನ ತತ್ತಿ ತಾರಕಂ
ಗಳ ಮಱಿಯೆಂಬ ವಾರಿಧರವಾರಣವೇಣುವರಾಹಮೌಕ್ತಿಕಂ ೨೮

---

[1] ಶಬರಂ ಬರಲಾ ಪ್ರಿಯಕಾಂತೆ ಕಂಡು (ಕಗ) [2] ಭೀತಿತ್ವರಿತಂಧಾವನ್ಮೃಗೌಘಂ (ಕಗ)
[3] ಬಳಸಿ (ಕ)

ಮದಗಜಗಂಧದುದ್ದೆಸಕೆ ಭೋಂಕೆನೆ ಲಂಘಿಸಿ ಚಂದ್ರಕಾಂತಕೂ
ಟದ ಕೆಲದಲ್ಲಿ ನಿಂದಿಭದುದಗ್ರತನುಪ್ರತಿಬಿಂಬಮಂ ಮದೇ
ಭದ ತನುಗೆತ್ತು ಪಾಯ್ದು ಶಿಲೆಯಂ ಮೃತವಾದುದಿಭದ್ವಿಷಂ ಬರ್ದುಂ
ಕಿದುದಿಭವಂತೆ ನಿರ್ಮಲರ [1]ಸನ್ನಿಧಿ[1] ಮಾೞ್ಕುಮಪಾಯನಾಶಮಂ ೨೯

ಕಂ॥ ಬೆಳಗಂ ಪಸರಿಸುವರುಣೋ
ಪಳದೊಳ್ ಮೃಗಿ ನಿಲೆ ದವಾಗ್ನಿ ಮುಸುಕಿದುದದನೆಂ
ದೊಳಱಿ ಮೃಗಮಿತ್ತುಲಸುನಂ
ಕಳೆದತ್ತು ವಿವೇಕಮುಂಟೆ ಮೋಹಾಕುಲರೊಳ್ ೩೦

ಮರೆಯನೆರೆಗೊಂಡು ಮಱಿವ
ಟ್ಟಿರೆಯಿರೆ ಕಾಯ್ದುರಿವ ಸೂರ್ಯಕಾಂತದಿನೆಟ್ಟಿ
ತ್ತಿರದೋಡಿದುದಜಗರವ
ಸ್ಥಿರಗುಣನಾಶ್ರಯಧೊಳಾರುಮಿರಲಱಿದಪರೇ ೩೧

ಪ್ರತಿಬಿಂಬವನಾಳಿಗೆ ಮರ
ಕತಾಶ್ಮದೊಳ್ ಪಾಯ್ದು ಕಪಿ ಹತಾಶಂ [2]ವನಸಂ
ಹತಿಗ[2]ಮುದಂಜಿದುದಾಶಾ
ಹತಿ ಮಾಡದೆ ತಥ್ಯದಲ್ಲಿ ಮಿಥ್ಯಾಭಯಮಂ ೩೨

ಮೇದುರನೀಲಾಶ್ಮಮನಂ
ಭೋದಭ್ರಾಂತಿಯೊಳೆ ನೋಡಿ [3]ಕುಣಿದುವು[3] ಶಿಖಿಗಳ್
ಆದರದಿಂದಂ ಹರ್ಷವಿ
ಷಾದಗುಣಂ ಭ್ರಾಂತಿಸಂಭವಂ ದೇಹಿಗಳೊಳ್ ೩೩

ಕೊಳನಂ ಬಳಸಿದ ವಜ್ರೋ
ಪಳದೊಳ್ ಮಾರ್ಪೊಳೆದು ಮಱಿಗಳಿರ್ಮಡಿಯಾದಂ
ತೆಳಸಿ ಬರೆ ಹಂಸಿ ಹರ್ಷಮ
ನೊಳ[4]ಕೊಳ್ವುದಪತ್ಯರಲ್ಲಿ[4] ತಣಿವಿಲ್ಲಾರ್ಗಂ ೩೪

ವ॥ ಮತ್ತೊಂದೆಡೆಯೊಳ್ ಮಾಣಿಕ್ಯಶಿಖರದ ಶೋಣ[5]ಘೃಣಿಯೆ[5] ಘನೀಭೂತ
ವಾದಂತೆ ಕೆಂಕಮಾದ ಕಂಕೆಲ್ಲಿವಲ್ಲೀಭವನದೊಳ್ ಕಾಮುಕಲಹದಿಂ ಕೆದಱಿದ ಕಿನ್ನರಕನ್ಯೆ

---

1 ಸಂಗತಿ (ಕಗ) 2 ವನಸಂಗತಿಗ (ಕಗ) 3 ಕುಣಿವುವು (ಕಗ) 4 ಕೊಂಡುದಪತ್ಯರಲ್ಲಿ (ಖ) 5 ಘೃಣಿಯಿಂ (ಕಗ)

ಯರ ಮುಡಿಯ ಕೇದಗೆಯ ಕುತ್ತುಂಗಜುಂಗಳಾಕೆಯರ ಕೇಕರಚ್ಛಟೆಗಳ ಕೆದಱಿ ನಿಂದಂತಿರಂದಂಬಡೆಯೆಯುಂ, ಒಂದೆಡೆಯೊಳಿಂದ್ರನೀಲಮಣಿಚೂಳಿಕೆಯ ಮೇಚಕಮರೀಚಿಯೆ ಗಟ್ಟಿಗೊಂಡಂತೆ ಕರ್ಪುರ್ವೀಜುವ ಬಾಳತಮಾಳಗಳೋವರಿಗಳೊಳತನುಲೀಲೆಯಿಂ ಸೂಸಿರ್ದ ಸಿದ್ಧನಾರಿಯರ ಕರ್ಣಪೂರಕುಮುದಂಗಳಾಕೆಯರ ದರಹಾಸದ್ಯುತಿಯೆ ಸೂಸಿದಂತೆಸೆಯುತ್ತಿರೆಯುಂ, ಮುಂತೊಂದೆಡೆಯೊಳ್ ಚಂದ್ರಕಾಂತದೊಡ್ಡುಂಗಲ್ಗಳ ಕಾಂತಿಯೆ ಕುಪ್ಪಳಿಸಿದಂತವಿರಳಮಾಗಿ ಪೂತ ಚೂತಲತೆಯ ಬಾಳ್ಗೊಂಪದೊಳಲಂಪುವೆತ್ತ ಬೇಟದ ಕೋಟಿಯಿಂದುದಿರ್ದ [1]ಪರಿ[1]ಕಲಿಸಿದ ವಿದ್ಯಾಧರಪುರಂಧ್ರಿಯರ ಸಿರಿಖಂಡಪತ್ರಭಂಗಂಗಳಾಕೆಯರ ಶೃಂಗಾರರಸದ ಬಿಳಿಯ ತಿಳಿನೊರೆಯೆ ಪರಿಕಲಿಸಿ ಮುಸುಳದಿರ್ದ ಪರಿಯನನುಕರಿಸೆಯುಂ, [2]ಮುಂದೊಂದೆಡೆಯೊಳ್[2] ಗರುಡೋದ್ಗಾರದ ಪಚ್ಚೆಯ ಗಂಡಶೈಲದ ಪಸುರ್ಪೆಳಗೆ ಮುಂದ್ವೆಸಿದಂತೆ ಪಸುರ್ತ್ತೆಸೆವ ಕದಳೀಕದಂಬದಿಱುಂಬಿನೊಳ್ ಸಪ್ರಣಯಪ್ರಕೋಪದಿಂ ಪಱಿದು ಸಡಿಲ್ದ ಗಂಧರ್ವಗಣಿಕೆಯರ ಹಾರಮಂಜೀರಮಣಿಗಳಾಕೆಯರ ಲಾವಣ್ಯತೇಜದುರುಳಿಗಳೆ ಸಿಡಿಲ್ದಿರ್ದ ಭಂಗಿಯನನುಕರಿಸೆಯುಂ, ಒಂದೆಡೆಯೊಳ್ ವಜ್ರವೈಡೂರ್ಯ ಶಿಲಾಪಟ್ಟಕಂಗಳವಿರಳದೀಧಿತಿಯೆ ಕೊಳಂಗಟ್ಟಿ ತುಳುಂಕಾಡುವಂತೆ ತಿಳಿದೊಪ್ಪುವ ಸರೋವರದ ತಡಿಗಳೊಳ್ ಜಲಕ್ರೀಡೆಯಿಂ ಚೆಲ್ಲಿರ್ದ ಯಕ್ಷಯುವತಿಯರ ಕರಕಲಿತ ಕುಂಕುಮಂಗಳಾಕೆಯರ ಮನದನುರಾಗಮೆ ಚೆಲ್ಲಿರ್ದುದೆಂಬ ಚೆಲ್ವನವಟ್ಟೈಸೆಯುಮತಿರಮಣೀಯಮಾಗಿ

ಮ॥ ತರುಕಾಂಡಂ ದೆಸೆಯಾನೆಗಳ್ಗೆ ಕಟಿಕಂಡೂವ್ಯಾಪ್ತಿಯಂ ಪಿಂಗಿಸು
ತ್ತಿರೆ ಕೂಟಂ ಸ್ಥಳಯಾನಮಂ ರವಿಹಯಂಗಳ್ಗೀಯೆ ರತ್ನಾಂಶು ಚಿ
ತ್ರರುಚಿಕ್ಷೌಮವಿತಾನಮಂ ಕುಡೆ ನಭೋಗೇಹಕ್ಕೆ ತಾಳ್ದತ್ತು ವೈ
ಹಿರಮಂ ಕೇಳಿರಸಾರ್ಥವಿಶ್ರಮಿತ ನಾನಾದೈವತಂ ರೈವತಂ ೩೫

ವ॥ ಅಂತು ಮಹಿಮೋರ್ಜಿತಮಾದೂರ್ಜಯಂತಗಿರಿಸಾನುವನಿನಿಸಾನು [3]ಮಿಱಿವಲ್ಲಿ[3]

ಕಂ॥ ಗಂಧವಹಂ ಹೋಮಹವಿ
ರ್ಗಂಧ ಪರಂಪರೆಯನೆಸಗಲಸುರಾರಿ ಹವಿ
ರ್ಗಂಧಮಿದೇನೆನೆ ತತ್ಸಂ
ಬಂಧವಿದಂ ನಯವಿಶುದ್ಧ ಮುದ್ಧವನೆಂದಂ ೩೬

---

1 ಪರ (ಕಗ) 2 ಒಂದೊಂದೆಡೆಯೊಳ್ (ಕಗ) 3 ಇಱಿದಲ್ಲಿ (ಖ)

ಮುನಿಹೋಮಗಂಧಮಿದು ಪೇ
ೞ್ವನದಂ ಸ್ವರ್ಗಾಪವರ್ಗಫಲದಾಯಿ ತಪೋ
ವನಮಿರ್ಪುದು ಪಾವನಮಿಾ
ಸನಾತನಾಚಲದಗಪ್ಪ್ಯರಮ್ಯಸ್ಥಳದೊಳ್ ೩೭

ನುಡಿವ ನಡೆವಿಷ್ಟಫಲಮಂ
ಕುಡುವ ಮಹಾಜ್ಯೋತಿಯಾಗಿ ತೋಱುವ ರವಿಯಿ
ರ್ದೆಡೆಗೆ ನೆೞಲ್ವೀಱುವ ಬಾಂ
ಗಡರ್ದೇಱುವ ತರುಗಳಾ ತಪೋವನತರುಗಳ್ ೩೮

ಚಂ॥ ಇರದಘಮರ್ಷಿಸಲ್ ಬಗೆದ ಸಿದ್ಧಿಯ ನೀಪಜಂಪಂತೆ ನಿರ್ಜರಾ
ಮರತೆಯನುಂಟುಮಾಡುವೊಳಪೊಕ್ಕ ಪದಾರ್ಥಮನೆಯ್ದೆ ಕಲ್ಗಳಾ
ಗಿರಿಸುವ ಸೋಂಕೆ ಕತ್ತರಿಸಿ ಖಂಡಿಪ ಸಿದ್ಧರಸಹ್ರದಂ ಸುಧಾ
ಸರಸಿ [1]ಶಿಲೋದಕೋಗ್ರನದಿ[1] ಕತ್ತರಿವಾಣಿಯ ವಾಪಿ [2]ವಿಸ್ಮಯಂ[2] ೩೯

ಕಂ॥ ಮನುಜನಿದಱೊಂದೆ ಕುವಲಯ
ಮನೊಂದೆ ಪದ್ಮಮನುಮಾಧಿಪಂಗೇಱಸೆ ತೊ
ಟ್ಟನೆ ಕುವಲಯಪತಿಪದ್ಮೇ
ಶನಪ್ಪ ಪೂಗೊಳನೆ ಬನದ ಪೂಗೊಳನೆಲ್ಲಂ ೪೦

ಈ ತಾಪಸರಿರ್ದೆಡೆಗೆ ರ
ಸಾತಳ ಪುರುಷಪ್ರಯಾಣಕೇಳೀಯಾತಾ
ಯಾತಾಧ್ವಮೆನಿಸುತಿರ್ಪುವು
ಪಾತಾಳಸ್ಪರ್ಶಿಗಳ್ ಬಿಲದ್ವಾರಂಗಳ್ ೪೧

ಸದಸನ್ಮತಿಗಳ್ ಪಿಡಿವಂ
ದದಿನೇಕಾನೇಕಪದಮುಮಂ ಸಿರಿ ವ್ಯೈಸೋಂ
ಕಿದರಂ ಪಿಡಿವುವು ಮುಂ ಮಿಡು
ಕದಂತು [3]ತಡನಡೆವ[3] [4]ವಜ್ರಲೇಪದ ಶಿಲೆಗಳ್[4] ೪೨

---

[1] ಶಿಲೋದಕಾಗ್ರನದಿ (ಕಗ) [2] ನಿಶ್ಚಯಂ (ಖ) [3] ತಡರ್ನಡೆವ (ಖ) [4] ಸದಸನ್ಮತಿಗಳ್ ಪಡೆವಂ।ದದಿಂ ವಿವೇಕಾವಿವೇಕಪಥಮುಂ ಮುಂ ಪೊ।ರ್ದಿದರಂ ಪಿಡಿವುವು ಸಲೆಮಿಡು।ಕದಂತು ತದ್ವನದ ವಜ್ರಲೇಪದ ಶಿಲೆಗಳ್ (ಕಗ)

ಮುನಿಜನದಾಜ್ಞಾ ಬಲದಿಂ
ಮುನಿಯದೆ ಪುಲಿ ಪುಲ್ಲೆ ಸಿಂಗಮಾನೆ ನವಿಲ್ ಪಾ
ವನಿತುಂ ಕೆಳೆಗೊಂಡಿರ್ಪುವು
ಮುನಿ[1]ಧೇನುಗಳವೆನೆ ಮಚ್ಚಿ[1] ಸುಖಿಂವುವು ಪೊಲದೊಳ್ ೪೩

ನಲಿದೊಡವರಿವುವು ತಾಯ್ಗಳ
ಮೊಲೆಯಿಂ ಪಲ್ಲಟದಿನುಣ್ಣುತೊಱಗಿರ್ಪುವು ಮೆ
ಯ್ಗಲಸಿರೆ ಸಿಂಹದ ಶರಭದ
ಪುಲಿಯಾನೆಯ ಹೋಮಧೇನುವಿನ ಶಿಶುತತಿಗಳ್ ೪೪

ಯೋಗಿಗಳಿರ್ಪ ತಮಾಲಲ
ತಾಗೃಹದೋವರಿಗಳೊಳಗೆ ಸೊಡರ್ಗಳುದಂಚ
ದ್ಭೋಗಮಣಿಯಾಗೆ ದೀವಿಗೆ
ಯಾಗಿರ್ಪುವು ಫಣಿಗಳನುಪಮಂ [2]ಯೋಗಬಲಂ[2] ೪೫

ಯಮಿಗಳ ಹೋಮಾಕ್ಷತಚರು
ಸಮಿತ್ಕುಶಂ ಸೂಸಿದಂಗಳಂಗಳ ಕಸಮಂ
ಸಮಯಂದಪ್ಪದೆ ತೊಡೆವುವು
ಚಮರೀಮೃಗವಾತ್ಮವಾಳಸಮ್ಮಾರ್ಜನಿಯಿಂ ೪೬

ಕರಿಣಿಗಳಾಯೆಡೆಯೊಳ್ ಪು
ಷ್ಕರಶೀಕರನಿಕರದಿಂದೆ ನೀರ್ದಳಿವುವು [3]ಕ
ಮ್ಮರಲಿಂ ವನ[3] ಜಂಗಮವ
ಲ್ಲರಿಗಳ್ ಬಂದಲ್ಲಿ ವಿರಚಿಪುವು ಪೂವಲಿಯಂ ೪೭

ಯತಿವರರ ಹೋಮಚರುಸಂ
ತತಿಗಳ ಮೇಲೆಱಗದಂತು ಮಕ್ಷಿಕಮಶಕ
ಪ್ರತತಿಯನಾತ್ಮಚಲತ್ಕ
ರ್ಣತಾಳವೃಂತದೊಳೆ ಸೋವುವಿಭಕಲಭಂಗಳ್ ೪೮

1 ಧೇನುಗಳವನೆ ಮೆಚ್ಚಿ (ಕ) ಧೇನುಗಳವನನಮರ್ಚಿ (ಖ) 2 ಯೋಗಿಬಲಂ (ಖ)
3 ಕಮ್ಮರಲಲರಿಂ (ಖ)

ಎಳವಿಸಿಲೊಳ್ ಮುನಿಬಾಲರ್
ಜಲಧೌತಂ ಮಾಡಿ ಕಟ್ಟೆ ಸಾರಂಗಂ ನಿ
ಶ್ಚಲತೆಯಿನಾಱಿಸುವುದು ವ
ಲ್ಕಲಕೌಪೀನಂಗಳಂ ಕವಲ್ಗೊಂಬುಗಳೊಳ್ ೪೯

ತನುಕಂಡೂತಿ ತಪೋಧನ
ತನುಕಷಣದೆ ಪಸಿವು ಹೋಮದೂರ್ವೆಯೆ ತೃಷೆ ಪಾ
ವನಪಾತ್ರಜಲದೆ ಕಿಡೆ ಮೆ
ಚ್ಚಿನಿಂದೆ ಮೃಗಶಿಶುಗಳೆಸೆವುವಾ ವನಗೃಹದೊಳ್ ೫೦

ಒಡಗೂಡಿ ವೇದವೋದುವು
ವೊಡನೋದುವ ವಟುಗಳೋದನಾಲಿಸಿ ತಪ್ಪಂ
ಪಿಡಿವುವುಪನ್ಯಾಸದೆ ಬ
ಕ್ಕುಡಿಗೆಯ್ವುವು ಮುನಿಗಳೊಡನೆ ಶುಕಶಾರಿಕೆಗಳ್ ೫೧

ಮುನಿಬಾಲಕಿಯರ್ ಮಧ್ಯಂ
ದಿನದೊಳ್ [1]ಬಂದರ್ಘ್ಯ[1]ಜಲಮನುಯ್ವೆಡೆಯೊಳ್ ಮೇ
ಲೆ ನೆಟಲ್ ಪುದಿದೊದವಿರೆ ಸೋ
ಗೆನವಿಲ್ಗಳ್ ಸೋಗೆವಿರ್ಚಿ ಬರ್ಪುವು ನಭದೊಳ್ ೫೨

ಚಂ|| ಯತಿವನಿತಾವಿಲಾಸಗತಿಯಿಂ ಗತಿಗೆಟ್ಟುವಿವೆಂದು ನಿಂದಿಸಲ್
ಗತಿಗಿಡಿಪಾಜ್ಞೆಯುಳ್ಳವರೆ ಸದ್ಗತಿಯಂ ಕುಡಲಾರ್ಪರೆಂದು ಸಂ
ತತಮುಪ[2]ಧಾವಿಪಂತೆ[2] ಯತಿಕಾಮಿನಿಯರ್ ಮೊಗೆದುಯ್ವ ನೀರ್ಗಳಂ
ಲತೆಗೆಱೆವಲ್ಲಿ [3]ಕೂಡಿ[3] ಬೞಿಯೊಳ್ ಸುೞಿದಾಡುವುವಂಚೆವಿಂಡುಗಳ್ ೫೩

ಉ|| ಭಂಗನುನಾಳ್ದು ವೀಕೆಯರ ಕುಂತಳವೆಂಬುದದಿರ್ಕೆ ತುಂಬಿಗಳ್
ಭಂಗಮುನಾಳ್ದು ವೀ ಮುನಿವಧೂಟಿ ಕುರುಳ್ಗಳೆನೆಂದು ಭಂಗಿಸಲ್
ಭಂಗಚಿಕಿತ್ಸೆಗೆಯ್ದುಪುವೆನಲ್ ದುರಿತಾಪಹಮಪ್ಪ ಹೋಮಧೂ
ಮಂಗಳ ಕಂಪನುಣ್ಬುವಳಿರಾಜಿಗಳಾ ಮುನಿಗೇಹರಾಜಿಯೊಳ್ ೫೪

ವ|| ಆಗಳ್

---

1 ಬಂಡಗ್ರ (ಖ) 2 ಸೇವಿಪಂತೆ (ಮೊಅ) 3 ಕೂಡೆ (ಖ)

ಮ॥ ಒಡನಿರ್ಪೆಂ [1]ಬೆಸಸೆಂಬ[1] ಕೈಗುಡುವ ತೀರ್ಥಕ್ಕಯ್ಪ್ವ ದೇವಾರ್ಚನ
ಕ್ಕೆಡೆಯಂ ಮಾಡುವ ಹೋಮಸಾಧನ[2]ಸಮಿದ್ಧಭಾರ್ಘ್ಯ[2]ತೋಯಂಗಳಂ
ಕುಡುವಿರ್ದಲ್ಲಿಗೆ ಕಂದಮೂಲಫಲಮಂ ತಂದೀವ ಪರ್ಯಾಪ್ತಿಯಿಂ
ಪಡೆಗುಂ ತುಷ್ಟಿಯನಿಂತು ವೃದ್ಧಯತಿಗಳ್ಗಾ ಸ್ಥಾನದೊಳ್ ವಾನರಂ ೫೫

ಕಂ॥ ಎಡ್ಡವೆನಲಿಂಡೆಗಟ್ಟುವ
ಗಡ್ಡುಗೆಗುಡುವೆಡೆಗೆ ನೀರನಡಕುವ ಫಲಮಂ
ಬಡ್ಡಿಸಿ [3]ನಿವೇದ್ಯಮಾವೀ[3]
ಗೊಡ್ಡಾಟದ ಮುಸುಗಳೆಸೆವುವಾ ಮುನಿವನದೊಳ್ ೫೬

ಮುನಿಧೇನುಗಳಂ ಕಾವುವು
ಮುನಿವನಿತೆಯರ್ಗಜ್ಜಗಾಪೆನಿಪ್ಪುವು ಮುನಿಗೇ
ಹನಿಕಾಯುದ ಬಾಗಿಲ್ಗಾ
ದು ನಿಲ್ಪುವಂತಲ್ಲಿ ಜಂಬುಕಂಗಳ್ ಸತತಂ ೫೭

ಉ॥ ಈಯೆ ಮನಕ್ಕನುಕ್ರಮತಪಂ ಪರಿಣಾಮಮ[4]ನಂತೆ[4] ಕೃಚ್ಛ್ರಚಾಂ
ದ್ರಾಯಣ [5]ಪರ್ಣಭಕ್ಷ ಜಲಭಕ್ಷ ಸಮೀರಣಭಕ್ಷವೃತ್ತಿಯೊಳ್[5]
ಕಾಯಮನೆಯ್ದೆ ಸಾರ್ಚಿ ಬೞಿಕಂ ಮುನಿಗಳ್ ನಿಜಜೀವನಕ್ಕೆ ಯೋ
ಗಾಯತಸೌಖ್ಯಮೆಂಬಮೃತಸೇವೆಯೆ [6]ಕಾರಣವಾಗೆ ವರ್ತಿಪರ್[6] ೫೮

ಕಂ॥ ಸ್ವರ್ಗಫಲಮಂ ಸ್ವಕೀಯಭು
ಜಾರ್ಗಳದಿಂ ನಿಳ್ಕಿ ಕಳೆದುಕೊಂಡಪನೀತಂ
ನಿರ್ಗಹನದಿನೆನೆ ಗಹನಾಂ
ತರ್ಗತನೆಸೆದಿರ್ದನೂರ್ಧ್ವಬಾಹುವದೊರ್ವಂ ೫೯

ತ್ರಿದಶಪದಸುಖಮನೆಯ್ದಲ್
ತುದಿಗಾಲೊಳ್ ನಿಂದನೀತನೆಂಬಿನಮಂಗು
ಷ್ಠದ ಕೊನೆಯನೂಱಿ ನೆಲದೊಳ್
ಪದುಳಂ ನಿಂದಿರ್ದು ಮಾಳ್ಪನೊರ್ವಂ ತಪಮಂ ೬೦

---

1 ಬೆಸನೆಂಬ (ಕಗ) 2 ಸಮಿದ್ಧವ್ರ್ಘ್ಯ (ಖ) 3 ನೀಡುವ ವೇಢೆಯ (ಖ) 4 ನಕ್ಕೆ (ಕಗ) 5 ಪರ್ಣಭಕ್ಷಣ ಸಮೀರಣಭಕ್ಷಣ ವೃತ್ತಿಯಿಂದಮೇಂ (ಕ) 6 ಜೀವನವಾಗಿ ವರ್ತಿಪರ್ (ಕಗ)

ಕವಿಯುಂತಷ್ಟಾಪದದಂ
ತೆ ವನಸ್ಪತಿಯುಂತೆ [1]ತನ್ನೊಳುತ್ಪಾದಕ[1] ವೃ
ತ್ತಿ ವಿದಿತಮಾಗಿರೆ ಯೋಗಿ
ಪ್ರವರಂ ತಲೆಯೂಱಿ ತಪವನೊರ್ವಂ ಮಾೞ್ಪಂ ೬೧

ವ॥ ಅಂತುಮಲ್ಲದೆಯುಂ

ಕಂ॥ ಒಡಲಡಗುವೇೞ್ದು ತವುತಂ
ದೊಡೆ ಪಾೞ್ಮನೆವುಲ್ಲನುರ್ಚುವಂದದಿನೆಲ್ಲಂ
ಪಿಡಿದುರ್ಚಿ ಬೇೞ್ವರರೆಬರ್
ಸುಡಲಟ್ಟಿಸಲಾಱದಗ್ನಿ ಕಂಟಳಿಸುವಿನಂ ೬೨

ಜಲವೃಷ್ಟಿ ಮಾಣ್ದು ಧೈರ್ಯ
ಸ್ಖಲನಾರ್ಥಂ ಬೆಟ್ಟುಗಳ್ ಸಿಡಿಲ್ದೊಡೆವ[2] ಸಿಡಿ
ಲ್ಗಳ[2] ಮಟಿತಗಳೆಱಗೆ ಯೋಗಾ
ಸ್ಖಲಿತಮನರ್ ಬಯಲೊಳಿರ್ಪರಭ್ರಾಗಮದೊಳ್ ೬೩

[3]ಪುಳಕಂ ಪೊಣ್ಮಿದೊಡೈಕಿಲ
ಪುಳಕೋದ್ಗಮವೆಂದು ಯೋಗಯೋಗ್ಯಸುಖೋದ್ಯ
ತ್ಪುಳಕಂದೋಱದ ಹಿಮುವ
ಜ್ಜಳಂಗಳಂ ಪೊಕ್ಕು[3] ಮಾಗಿಯೊಳ್ ಕೆಲರಿರ್ಪರ್ ೬೪

[4]ರವಿ ಸೆಡೆಗುವಗ್ನಿ ಕಂಪಿಸು
ಗುವಾತ್ಮತೇಜಕ್ಕೆ[4] ತನುಗೆ ರವಿಯುಗ್ನಿಯು ತೇ
ಜವದಾವರಿದೆನಿಸಿ ಮುನಿ
ಪ್ರವರರ್ [5]ಪಂಚಾಗ್ನಿಸಾಧಕರ್[5] ಬೇಸಗೆಯೊಳ್ ೬೫

ಅನವಧಿ[6]ಕಾಲಾಸನದಿಂ[6]
ತನುವಂ ಪುತ್ತಡರ್ದು ಮುಚ್ಚೆ ಯೋಗಾಮೃತಸೇ
ವನೆಯಿನನಶ್ವರಮಿರ್ಪರ್
ಮುನಿಗಳವಿದ್ಯಾತಿರೋಹಿತಬ್ರಹ್ಮದವೋಲ್ ೬೬

---

1 ತನ್ನೊಳುತ್ಪಾದಿತ (ಖ) 2 ಬಿಸಿಲ್ಗಳ (ಖ) 3 ಪುಳಕಂ ಪೊಣ್ಮಿದೊಡೆ ಕೆಲರ್।ಪುಳಕೋದ್ಗಮವೆಂಬರೆಂದು ಯೋಗಸುಖೋದ್ಯ।ತ್ಪುಳಕಮುಮಂ ತೋಱದೆ ಹಿಮ।ವಳುರ್ವ ಜಳಂ ಬೊಕ್ಕು (ಕಗ) 4 ರವಿಯುಗ್ನಿ ಕಂಪಿಸುಗುಮಾತವೆ ತೇಜಕ್ಕಂಜಿ (ಖ) 5 ಪಂಚಾಗ್ನಿಮಧ್ಯದೊಳ್ (ಖ) 6 ಕಾಲಾನಶನದೆ (ಖ)

ವ|| ಎಂದು ಪೇೞ್ದ ಪದ್ಮೋದರನಾದರಂಬೆರಸು ಕೇಳ್ದು ಪಕ್ಷಿನು ಕೃತೋರ್ಜಯಂತಭೂಧರೋಪತ್ಯಕನಾಗಿ ನಿತ್ಯಪ್ರಯಾಣಂ ನಡೆವಲ್ಲಿ

ಮ|| ದಿವಿಜಾನೋಕಹ ಕಾಮಧೇನುಗಳಿ ದಿವ್ಯಾವಾಸ ದಿವ್ಯಾನ್ನ ದಿ
ವ್ಯವಿಲೇಪಾದ್ಯಭಿವಾಂಛೆಯಂ ಶಿಬಿರದೊಳ್ ಬಂದಿತ್ತುವಂದಿಂದಿರಾ
ಧವನಾಜ್ಞಾಪಿಸೆ ಬೇೞ್ಪವೇೞ್ವರವರ್ಗಲ್ಲಲ್ಲಿಗೇಂ ಸಾಖ್ಯಗೌ
ರವಮಂ ಪೆತ್ತುದೊ ಜೈತ್ರಯಾತ್ರೆ ಕಟಕಕ್ಕಾ ದ್ವಾರಕಾವಾಸದಿಂ ೬೭

ಬಲಸಂಘಟ್ಟನದಿಂ ಮಹೀವನವಶೇಷಂ ಪೋಗೆ [1]ಮತ್ತಂತೆ ಭೂ
ತಲದೊಳ್[1] ಕೂಡೆ ವಿಚಿತ್ರಭೂರುಹವನಂ ತಳ್ತಂತೆ ನಾನಾ[2]ಪ್ರಭೋ
ಜ್ವಲವಾ ಸ್ತ್ರೀಯರ[2] ರಂಗಮಂಟಪಕುಟೀಗೂಢಾಲಯ[3]ಶ್ರೇಣಿ ಕಂ
ಗೊಳಿಸಲ್[3] ಬೀಡುವಿಡುತ್ತೆ ನಿಚ್ಚಪಯಣಂ ಬಂದಂ ಮುರಧ್ವಂಸಕಂ ೬೮

ಮ||ಸ್ರ|| ಕರಟಿವ್ಯೂಹಾಂತರೀಪಂ ತುರಗಬಲತರಂಗಂ ರಥಾನೀಕನಕ್ರಂ
ಶರಶಸ್ತ್ರೋದ್ಯೋತನೀರಂ ಸುಭಟಪಟಲವಾದಿತ್ರಕೋಳಾಹಳಾಭೀ
ಳರವಂ ರಾಜನ್ಯಚೂಡಾಮಣಿಕಿರಣಗಣೌರ್ವಾಗ್ನಿ ಸೈನ್ಯಾರ್ಣವಂ ಸಾ
ಗರವಾತ್ಮಸ್ತ್ರೀಯೊಳೊಂದಿತ್ತೆನಿಸಿ ಯಮುನೆಯಂ ಮುಟ್ಟಿವಂದತ್ತಗುರ್ವಿಂ ೬೯

ಕಂ|| ತೆರೆಯಿಂ ಸಿಡಿಲ್ದ ನೊರೆವಿಂ
ಡಿರೆ ಪುಷ್ಪಸ್ತಬಕಪಟಲಮೆನೆ ವನತಟದೊಳ್
ಕರಮೆಸೆದುದು ಯಮುನಾನದಿ
ಕುರರೀಬಕಕೋಕಹಂಸಕೇಳೀಸುಭಗಂ ೭೦

ಚಂ|| ಕದಡಿ ಪದಾತಿಘಟ್ಟನದೆ ಕೋೞ್ಕಸೆಱಾಗಿ ತುರಂಗಮಾಂಘ್ರಿಪಾ
ತದೆ ಪುಡಿವಿಟ್ಟು ಕೂಡೆ ರಥಘಾತದೆ ತೀವಿ ಬೞಿಕ್ಕೆ ದಂತಿದಾ
ನದೆ ಕರಿದಾದುದಿಂತು ಯಮುನಾನದಿ ಕೆಮ್ಮನೆ ದೇಸೆಗಾಯ್ತೆ ಕ
ರ್ಜಿದೞ್ತೊಳೆನಲ್ಕೆ ದಾಂಟಿದುದು ಕೃಷ್ಣನ ಬೀಡು ಕಳಿಂದಕನ್ಯೆಯಂ ೭೧

ಕಂ|| ಮುರಮಥನಂ ಬಂದೊಸಗೆಗೆ
ಬರುತಿರೆ ಹರ್ಷಾಶ್ರು ಪೊೞಮುಡುತ್ತಿರೆ ಪುಳಕಂ
ಪುರಮಂ ಪೊೞಮಟ್ಟೊಡವರೆ
ಪರಿಗ್ರಹಂ ಧರ್ಮತನಯನೊಸೆದಿದಿರ್ವಂದಂ ೭೨

---

[1] ಮತ್ತಂತೆ ತದ್ಭೂಲದೊಳ್ (ಖ) ಮತ್ತಂತೆಯಾತಲದೊಳ್ (ಗ) [2] ಪ್ರಭೋಜ್ಜ್ವಲನ ಸ್ತ್ರೀಯುತ (ಖ) [3] ಶ್ರೇಣಿ ಸಲ್ಲಲ್ಲಿತಂ (ಕಗ)

ಮ॥ ಬರೆ ರಾಮಾಂಗಜಭೀಮಪಾರ್ಥರೆರಡುಂ ಪಕ್ಕಂಗಳೊಳ್ ಬಂದರಾ
ಭರಣದ್ಯೋತಿ ಪಳಂಚೆ ಕೃಷ್ಣ ಯಮಜರ್ ಪ್ರತ್ಯಂತ[1]ಭೂಭೃತ್ಪರಿ
ಸ್ಫುರಿತಂ ಜಂಗಮ[1] ನೀಲಶೈಲನಿಷಧಾದ್ರೀಂದ್ರದ್ವಯಂ ರತ್ನಕೂ
ಟರುಚಿವ್ಯಾವೃತವೊಂದನೊಂದಿದಿರ್ಗೊಳಲ್ ಬಂದತ್ತೊ ಪೇೞೆಂಬಿನಂ ೭೩

ವ॥ ಅಂತು ಬಂದು ಸಾನಂದಸಂಭ್ರಮಪ್ರಣಯಪರಿರಂಭಣ ಪ್ರಣತಿಗಳಂ ಯಥಾಯೋಗ್ಯಮಾಗೆ ಮಾಡಿ ಕೂಡಿದುಭಯವ್ಯೂಹದುತ್ಸಾಹವಾರಾಶಿಯ ನಿರ್ಘೋಷ ಮಿದೆಂಬಂತೆ ಬಾಜಿಸುವ ಬದ್ದವಣದ ಘೋಷಮುಮಸದಳಮೆಸೆಯುತ್ತಿರೆ ಅನಂತರಂ

ಕಂ॥ ಭೀಮಂ ಕೊಡೆ[2]ವಿಡಿಯೆ ಯಮರ್[2]
ಚಾಮರಮಂ ಬೀಸೆ ನೆಯದೆ ಕೈಗುಡೆ ಪಾರ್ಥಂ
ಭೂಮಿಾಶನೆಸಗೆ ರಥಮಂ
ತಾಮರಸಾಕ್ಷಂ ವಿಲಾಸದಿಂ ನಡೆತಂದಂ ೭೪

ಮ॥ಸ್ರ॥ ಉಪಮಾನಕ್ಕೆನ್ನೊಳೇಂ ಬಂದಪುವೆ ನೆಗೞ್ದ ನಾಗೇಂದ್ರ ಯಕ್ಷೇಂದ್ರ ದೇವೇಂ
ದ್ರಪುರಂಗಳ್ ಭೋಗದಿಂ ಸಂಪದದಿನೆಸಕದಿಂದೆನ್ನ ಕಾಲ್ವಳ್ಳಿಗಂ ಬಂ
ದಪುವೇ ಪೇೞೆಂದು ಹರ್ಮ್ಯಂಗಳ ಸೊದೆವೆಳಗಿಂದಂ ನಗುತ್ತಿರ್ಪವೋಲ್ ರಂ
ಜಿಪುದಿಂದ್ರಪ್ರಸ್ಥಮಂತಾ ಪುರಮನೊಸಗೆಯಿಂ ಬಂದು ಪೊಕ್ಕಂ ಮುಕುಂದಂ ೭೫

ಮ॥ ಕವಿವುದ್ಯತ್ಪಟವಾಸದಿಂ ತಳಿವ [3]ಕಾಶ್ಮೀರಾಂಬುವಿಂದೆತ್ತುವು
ತ್ಸವ[3] ಚೀನಧ್ವಜದಿಂ ಪೊದೞ್ದ ಪಟಹಪ್ರಧ್ವಾನದಿಂ ಮಾನಿನೀ
ನಿವಹಂ ಸೂಸುವ ಸೇಸೆಯಿಂ ಪೊಳೆವ ನಾನಾತೋರಣಾನೀಕಪ
ಲ್ಲವದಿಂ ಪಲ್ಲವಿಸಿತ್ತು ಶೋಭೆ ನಗರಕ್ಕಂಭೋಜನಾಭಂ ಬರಲ್ ೭೬

ಮ॥ಸ್ರ॥ ಹರಿಯೊಂದಾಕಾರದಂಗಚ್ಛವಿಯ ಶತಸಹಸ್ರಾಂಶದೊಂದಂಶಮಂ ಪೋ
ಲ್ತು ರತೀಶಂ ತಾನೆ [4]ಚೆಲ್ವಂ[4] ಸೊಬಗನೆನಿಸಿ ಮಿಕ್ಕಂ ಗಡಂತಾದೊಡಿಂದಾ
ವರಜಂಗೆಂತಪ್ಪ ಚೆಲ್ವೆಂತಟು [5]ಸೊಬಗದನಿಂ[5] ನೋೞ್ಪವೆಂ[6]ದೀಕ್ಷಣೌತ್ಸು
ಕ್ಯರಸ[6] ವ್ಯತ್ಯಸ್ತಶೃಂಗಾರದೆ ಪೊಳೆವೆಳೆವೆಂಡಿರ್ ಕರಂ ಶೋಭೆವೆತ್ತರ್ ೭೭

---

[1] ಭೂಭೃತ್ಕರಿಜಂಗಮ (ಕ) ಭೂಭೃತ್ಪರೀಕಲಿತರ್ಜಂಗಮ (ಖ) ಭೂಭೃತ್ಕರಿಚಲಿತಂ (ಗ) ಭೂಭೃತ್ಕರೀಂದ್ರರಟಜ್ಜಂಗಮ (ಮೊಅ) [2] ವಿಡಿದೆಮರ್ಳ (ಕ) ವಿಡಿದೆಮಳರ್ (ಖಗ) ವಿಡಿಯೆಮಳ್ಗಳ್ (ಮೊಅ) [3] ಕಾಶ್ಮೀರಾಂಶುವಿಂದೆತ್ತಲುತ್ಸವ (ಕಗ) [4] ಚೆಲ್ವಿಂ (ಖ) [5] ಸೊಬಗನಿದಂ (ಕಗ) ಸೊಬಗನಿವಂ (ಮೊಅ) [6] ಈಕ್ಷಿಪುಕ್ಕೇಕರಸ (ಖ)

ಅರಲಂಬಂ ದೃಗ್ವಿಡಂಬಂ ಕಱಿಯೆ ಕೆದಱಿ ಮಿಂಚಂ ವಿಭೂಷಾಪ್ರಪಂಚಂ
ಕುರುಳೆತ್ತಂ ನರ್ತಿಸುತ್ತಂ ಪೊಳೆಯೆ ಬಳಲೆ ಧಮ್ಮಿಲ್ಲಮುದ್ಗಂಥಿಫುಲ್ಲಂ
ದರಹಾಸಂ ಭ್ರೂವಿಳಾಸಂ ನೆಗೞೆ ನಡುಗೆ ಮಧ್ಯಂ ಸ್ತನಾಭೋಗಬಾಧ್ಯಂ
ಸ್ಫುರಿತಾಂಗಂ ಬೀಱೆ ಪಾಂಗಂ ನೆರೆದುದುರುನಿತಂಬಂ ಪುರಸ್ತ್ರೀಕದಂಬಂ ೭೮

ವ॥ ಅಂತುಮಲ್ಲದೆ

ಮ॥ಸ್ರ॥ ಇಳೆಯಂ ಪಾದಾಬ್ಜರಾಗಂ ನಖರುಚಿ ಘುಸೃಣಾಂಭಶ್ಛಟಾ[1]ಸಿಕ್ತಿಯಿಂ[1] ಪೂ
ವಳಿಯಿಂ ದಿಕ್ಚಕ್ರಮಂ ಭ್ರೂಲತೆ ಪೊಳೆವಲರ್ಗಣ್ ಕಬುರ್ವಿಲ್ಲಿಂ ಸ್ಮರಾಸ್ತ್ರಾ
ವಳಿಯಿಂ ರೋದೋಂತಮಂ ಭೂಷಣಮಣಿಕಿರಣಂ ಮಂದಹಾಸಂ ತಟಿತ್ಸಂ
ಕುಳದಿಂ ಬೆಳ್ದಿಂಗಳಿಂ ಪೂರಿಸೆ ನೆರೆದುದಜಸ್ರಂ ಪುರಸ್ತ್ರೀಸಹಸ್ರಂ ೭೯

ಅಳಕಂ ಕಸ್ತೂರಿಯಂ ಸಾಲಿಡೆ ನಸುನಗೆ ಬೆಳ್ದಿಂಗಳಂ ಬೀಱೆ ನೇತ್ರಾಂ
ಚಳಪಾತಂ ಕಾಮನಂಬಂ ಕಱಿಯೆ ಕನಕಮಂಜೀರಿಕಾಸಿಂಜಿತಂ ಚಂ
ಚಳಕಾಂಚೀಕೂಜಿತಂ ಕಂಕಣಝಣಝಣಿತಂ ಪೊಣ್ಮೆ ಬಂದತ್ತನೂನಂ
ಕಳಹಂಸೀಯಾನಮಾಸ್ಯಶ್ವಸಿತ[2]ಮಧುಪಗಾನಂ[2] ಪುರಸ್ತ್ರೀಪ್ರತಾನಂ ೮೦

ಮ॥ ಜಲಜಾತಾಕ್ಷನನೀಕ್ಷಿಪುತ್ಸುಕತೆಯಿಂ ಕೈಗೆಯ್ಯುತಿರ್ದಂತೆ ಬಂ
ದೊಲವಿಂ ನೋಡುವ ಕಾಂತೆಯೊಪ್ಪಿದಳದೊರ್ವಳ್ ದರ್ಪಣೋಪೇತಹ
ಸ್ತೆ ಲಸನ್ಮೌಕ್ತಿಕಭೂಷೆ ಕುಂಕುಮರಜೋರಮ್ಯಾಂಗಿ ಪೂರ್ಣೇಂದುಮಂ
ಡಲಮಂ ತಾರಕಕೋಟಿಯಂ ತಳೆದ ಸಂಧ್ಯಾಲಕ್ಷ್ಮಿಯೆಂಬಂತೆವೋಲ್ ೮೧

ಜಗುಳ್ವುತ್ತಂಸಮನೊತ್ತು ಸೂಸುವಳಕಾನೀಕಂಗಳಂ ತಿರ್ದು ಮೆ
ಲ್ಲಗೆ ಪೋಗಿನ್ನುಡಿದಪ್ಪುದೊಳ್ನಡು ಕುಚಪ್ರಾಗ್ಭಾರದಿಂದೆಂದು ಬು
ದ್ಧಿಗುಡುತ್ತುಂ ನಡೆತರ್ಪ ಚೇಟಿಯರ ಮಾತಂ ಮೀಱಿ ಕೈಮೀಱಿದೊ
ಲ್ಮೆಗೆ ಪಕ್ಕಾಗಿ ಪೆಱಳ್ ಮೃಗಾಕ್ಷಿ ಪರಿತಂದಬ್ಜಾಕ್ಷನಂ ನೋಡಿದಳ್ ೮೨

ಎಱಕಂ ಚಿತ್ತದೊಳುಣ್ಮೆ ಪೊಣ್ಮೆ ನಡೆತರ್ಪೌತ್ಸುಕ್ಯದಿಂ ಮೇಲುದ
ಳ್ಳಿಱುವುತ್ತುಂಗಕುಚಂಗಳಿಂ ತೊಲಗಲಂಗವ್ಯಕ್ತಿ ಪುಷ್ಪಾಸ್ತ್ರನಾ
ದೋರ್ಱಿಯಿಂದುರ್ಚಿದ ಬಾಳನೇಱಿಸಿರೆ ತನ್ನಂ ನೋೞ್ಪವರ್ ಸೋಲ್ತು ಮೆ
ಯ್ಮಱೆಯಲ್ ಮೆಯ್ಮಱೆದೊಲ್ದು ನೋಡಿದಳದೊರ್ವಳ್ ಗೋಪಮಾ
ರ್ತಂಡನಂ ೮೩

---

1 ಸಕ್ತಿಯಿಂ (ಕಖ) 2 ಮಧುರಗಾನಂ (ಖ)

ನಳಿತೋಳುಂ ತನುಮಧ್ಯಮುಂ ಜಡಿಯೆ ಮುಕ್ತಾಹಾರಮುಂ ನೀಲಕಂ
ತಳಮುಂ ನರ್ತಿಸೆ ಪೇಲುದುಂ ನಿಱುಯುಮುಡ್ಡಂಬಾರೆ ವಕ್ಷೋಜಮುಂ
ಡಳಮುಂ ಪೀನನಿತಂಬಮುಂ ಪೊಡರೆ ಕಣ್ [1]ಚೆಲ್ಲಂಗಳಿಂ ಬೀಱಿ ಕುಂ
ತಳಪುಷ್ಪಂ ಮಿಗೆ[1] ಸೂಸೆ ಬಂದಬಲೆಯೊರ್ವಳ್ ಕೃಷ್ಣನಂ ನೋಡಿದಳ್ ೮೪

ಚಂ|| ಪೊಡರ್ವ ಕುಚದ್ವಯೋರುಭರದಿಂದುಪಹಾರದ ಪೂಗಳಂ ತರಂ
ಬಿಡಪೆಡಪುತ್ತುಮಾತ್ಮಗೃಹ[2]ಹಂಸೆಗಳಿಂ[2] ಪೆಱಗಾಗಿ ಬರ್ಪವೋಲ್
ನಡೆಪೆಱಗಾಗಿ ತನ್ನ ನಿಜಚೇಟಿಯರಂ ಪೆಱಗಿಕ್ಕಿ ಬೇಗದಿಂ
ನಡೆದು ಪೆಱಳ್ ಜನಾರ್ದನನ ರೂಪವಿಲಾಸಮನೊಲ್ದು ನೋಡಿದಳ್ ೮೫

ಮ|| ಅನವದ್ಯಾಂಗನನೀ ಮುರಾಂತಕನನಾಕರ್ಣಾಂತವಿಶ್ರಾಂತಲೋ
ಚನದಿಂದಾವಗವೀಕ್ಷಿಸಲ್ ಮನಸಿಜಂ ಪುಷ್ಪಾಸ್ತ್ರದಿಂದೆಚ್ಚು ತೊ
ಟ್ಟನೆ ಕೊಂದಿಕ್ಕುಗುಮೆನ್ನನೆಂದು ಭಯದಿಂ ನೋಟ್ಪಿಂದದಿಂ ದೀರ್ಘಲೋ
ಚನೆಯೊರ್ವಳ್ ಕಡೆಗಣ್ಣ ಕೂರ್ವೊನೆಗಳಿಂ ದೈತ್ಯಾರಿಯಂ ನೋಡಿದಳ್ ೮೬

ಚಂ|| ತರುಣಮೃಣಾಳದಂತೆ ನೆಱಿದಿಂಗಳ ತಣ್ಗದಿರಂತೆ ಪಾಲ ಬೆ
ಳ್ದೆರೆಗಳ ಬಂಬಲಂತೆ ಕುಮುದೋಜ್ಜ್ವಲಮಾಲಿಕೆಯಂತೆ ತಮ್ಮ ಕೇ
ಕರನಿಕರಂ ಗವಾಕ್ಷನಿಕುರುಂಬಕದಿಂ ಪೊಱಪೊಣ್ಮೆ ನೋಡಿದರ್
ಮುರಹರನಂ ಕೆಲರ್ [3]ವಿವಿಧಹರ್ಮ್ಯಗವಾಕ್ಷವಿಲಗ್ನ ವಕ್ತ್ರೆಯರ್[3] ೮೭

ಹರಿ ಬರೆ ನೋಡುತಿರ್ಕೆಲದ ಮಾಡದ ಚೂಳಿಕೆಯಲ್ಲಿ ಬಂದು ನಿಂ
ದಿರೆ ಮುಖಸಙ್ಕುಳಿಯಿಂದೆ ಮಣಿದರ್ಪಣತೋರಣಮಾಲೆಯುಂ [4]ಸ್ಥಲೀ
ಸರಸಿಜರಾಜಿಯುಂ[4] ವಿವಿಧಪೂರ್ಣಸುಧಾಕರಮಂಡಲಂಗಳಂ
ಪರಿಭವಿಪಾಕೆಯರ್ ಪರಿಭವಂಬಡೆದರ್ ಕುಸುಮಾಸ್ತ್ರಪಾತದಿಂ ೮೮

ವ|| ಅಂತು ನೋಡುವ ಗಾಡಿಕಾರ್ತಿಯರ ಮನಮನಿರ್ಕುಳಿಗೊಂಡು ಸೂಸುವ ಸೇಸೆಗಳನಾಂತು ಸುಹೃಜ್ಜನಸಜ್ಜನಯೋಷಿಜ್ಜನಂಗಳಾಶೀರ್ವಾದಪರಂಪರೆಗಳಂ ಕೈಕೊಂಡು ಪುರದ ಸಿರಿಯನವಲೋಕಿಸುತ್ತುಂ ವಿಪಣಿಮಾರ್ಗಂಬಿಡಿದು ನಡೆತಂದು ಕಡುಚೆಲ್ವುವೀಱಿ ಮುನ್ನಮೆ ಸಮಕಟ್ಟಿ ಮಾಡಿಸಿದನರ್ಘ್ಯರತ್ನರಚನಾವಿರಾಜಿತರಾಜಭವನಮುಂ ಮಾಂಗಲ್ಯ ಸಾಕಲ್ಯವಿಭವದಿಂ ಪೊಕ್ಕು ತನ್ನೊಡನೆ ಬಂದ ನೃಪಾಲವೃಂದಮುಂ ಪೊಱಪೊಱಲ ಶಿಬಿರಕ್ಕೆ ಪೋಗಲ್ವೆಸಸಿ ಬಿಸರುಹಾಕ್ಷಂ ನವರತ್ನಖಚಿತಸಿಂಹಾಸನದೊಳ್ ಸುಖಾಸೀನನಾಗಿ

---

[1] ಚಲ್ಲಂಗಳಿಂ ಚಿನ್ನಪೂಗಳನಲ್ಲಲ್ಲಿಗೆ (ಖ) [2] ಹಂಸೆಗಳಂ (ಕಗ) [3] ವಿವಿಧಲಗ್ನ ಮನೋಹರಯುಕ್ತವಸ್ತ್ರೆಯರ್ (ಖ) [4] ಪಟೀಪರಿಕರರಾಜಿಯಿಂ (ಖ)

ಕಂ॥ ಮಗಧನೃಪಜೀವಝಷಮಂ
ತೆಗೆವುಜ್ಜ್ವಳ[1]ರಜ್ಜು ಜಾಲಮೆನೆ[1] ನಿರ್ಮಲದಂ
ತಗಭಸ್ತಿಚ್ಛಟಿ ಪಸರಿಸಿ
ಸೊಗಯಿಸುತಿರೆ[2] ವರ ಯುಧಿಷ್ಠಿರಂಗಿಂತೆಂದುಂ[2] ೮೯

ಮ॥ ಅಧಿಕೈಶ್ವರ್ಯದ ಮಾಗಧೇಶನಿರೆ ನಿನ್ನೀ ರಾಜಸೂಯಾಧ್ವರಂ
[3]ವಿಧಿಯಲ್ಲೆಂದು ಸಭೀಮನೆಯ್ದಿ[3] ಭರದಿಂ[4]ದೋರ್ಯುದ್ಧಮಂ[4] ಬೇಡಿ ಮಾ
ಗಧನೊಳ್ ಪೋರಿಸುವಲ್ಲಿ ಶಕ್ತಿಕಳೆಯಂ ಭೀಮಂಗೆ ಕೊಟ್ಟದ್ಭುತ
ಪ್ರಧನಾಟೋಪದೆ ಭೀಮನಿಂ ಕೊಲಿಸಿದಂ ಕೃಷ್ಣಂ ಜರಾಸಂಧನಂ ೯೦

ವ॥ ಅಂತು ರಾಜರಾಜಪದವೀಗರ್ವ ಖರ್ವೀಕೃತ ಸಕಲರಾಜಲೋಕನಂ ಯಮ ರಾಜಧಾನಿಯಂ ಪುಗಿಸಿ

ಮ॥ ಅನಿಲಾಪತ್ಯಪುರಸ್ಸರಂ ಮಗುೞ್ದನಂದಾತ್ಮಾಗಮೋತ್ಸಾಹವ
ರ್ಧನದಿಂದುತ್ಪಟವಾಸಮುದ್ವಿಮಳಸೇನಾನೀಕಮುತ್ತೂರ್ಯನಿ
ಸ್ವನಸುತ್ತೋರಣಮುತ್ಪತಾಕಮೆಸೆವಿಂದ್ರಪ್ರಸ್ಥಮಂ ಬಂದು ಪೊ
ಕ್ಕನುಪೇಂದ್ರಂ ತನಗೆಂದು ಬೇೞ್ದ ಸಮಕಟ್ಟಿದರ್ಾ ನೃಪಾವಾಸಮಂ ೯೧

ವ॥ ಅಂತು ಬಂದು ಪೊಕ್ಕು ಭೀಮನಂ ಪ್ರೇಮಪೂರ್ವಕಂ ನಿಜರಾಜಭವನಕ್ಕೆ ಕಳಿಪಿ ಮಜ್ಜನಭೋಜನಾನಂತರಂ ಕತಿಪಯಾಂತಃಪುರವಾಸಿನೀ ಪರಿಜನಕುಮಾರಜನ ಪರಿವೃತನಾಗಿ

ಮ॥ ವಿವಿಧಸ್ನಿಗ್ಧಗಭೀರಹೃದ್ಯಮಧುರಾರಾವಾದ್ಯದಿಂ ವಾದ್ಯದಿಂ
ಶ್ರವಣಸ್ವಾಂತಸುಖಸ್ವನಾನುಕೃತಸಾರಂಗೇಯದಿಂ ಗೇಯದಿಂ
ಸುವಿಳಾಸಸ್ಫುಟ[5]ಭಾವಭಾವಿತ[5] ನಟೀಲೀಲಾಸ್ಯದಿಂ ಲಾಸ್ಯದಿಂ
ದಿವಸಂ ಪೋಪಿನಮಿರ್ದನುತ್ಸವವನಶ್ರೀಮಾಧವಂ ಮಾಧವಂ ೯೨

ವ॥ ಅನ್ನೆಗಂ

---

[1] ರತ್ನಜಾಲಮೆನೆ (ಕಗ) [2] ಹರಿಯುಧಿಷ್ಠಿರಂಗಿಂತೆಂದಂ (ಕಖಗ) [3] ವಿಧಿಯಲ್ಲೆಂದೆನೆ ಭೀಮನೆಯ್ದಿ (ಕಗ) [4] ದಂಭೇದಮಂ (ಕ) ದಂಯುದ್ಧಮಂ (ಗ) [5] ವಿಳಾಸಸ್ಫುಟ ಭಾವ ಲಾಲಿತ (ಖ) ವಿಲಾಸಾಸ್ಫುಟಭಾವಭಾವಿತ (ಗ)

ಮ॥ಸ್ರ॥ ಇಳೆಯಿಂದಂ ಪೊಂಬಿಸಿಲ್ ಮೆಯ್ದೆಗೆದು ನಗನಿಕಾಯಾಗ್ರದೊಳ್
ಸಾಂದ್ರಧಾತು
ಸ್ಥಳಿ ಹವ್ಯೌಘಾಗ್ರದೊಳ್ ಮಾಣಿಕದ ಶಿಖರಮುದ್ಯಾನಮಾಲಾಗ್ರದೊಳ್ ಜೆಂ
ದಳಿರೆಂಬಾಶಂಕೆಯಂ ಮಾಳ್ಪಿನ[1]ಮರುಣತೆವೆತ್ತಿರ್ದ್ದು[1] ಜೆಲ್ವಾದುದಸ್ತಾ
ಚಳತುಂಗವ್ಯಾಘ್ರಜೃಂಭಾವೃತವದನಮೆನಿಪ್ಪಂದದಿಂ ಭಾನುಬಿಂಬಂ ೯೩

ಚಂ॥ ಕುವಲಯಪೀಡೆಯಂ ಪಡೆವ ಪುಷ್ಪಿತಪದ್ಮಿನಿಗೋತ ಕಾಯ್ದು ಸಂ
ಭವಿಸಿರೆ ಮಂಡಲಾಗ್ರಕರಮಂ ಕುಲಗೋತ್ರಶಿರಕ್ಕೆ ನೀಡುತ್ತಿ
ರ್ಪವಗುಣದಿಂದಮೆಯ್ದಿದುದಧೋಗತಿಯೆಂದು ವಿರಕ್ತನಾದವೊಲ್
ದಿನಕರನಂಬರಂದೊಱೆದು ಪಶ್ಚಿಮವಾರ್ಧಿಗೆ ಮೆಯ್ಯನಿಕ್ಕಿದಂ ೯೪

ಕಂ॥ ಒಂದದ ಪಗಲಿರುಳೆರಡಱ
ಸಂದುಗಳಂ ವರುಣಶಿಲ್ಪಿ ರಕ್ತಾಂಬರದಿಂ
ಸಂದಿಸಿ ಪೊಲ್ದವೊಲೆಸೆದುದು
ಮುಂದ್ವೈಸಿದ ಸಂಜೆಗೆಂಪು [2]ಪಡುವಣ[2] ದೆಸೆಯೊಳ್ ೯೫

ಇನರಥಹತಿಯಿಂ ನೆಗೆದ ಗ
ಗನ[3]ಧಾತುಸ್ಥಳರಜಂಗಳಿಂ[3] ರೂಪಱಿದ
ತ್ತೆನೆ [4]ಸಂಜೆ ಕೆಂಪು ತಳ್ತಿರೆ[4]
ಕನಲ್ದು ಪೊಣರಱಿದುವೊಡನೆ ಕೋಕಯುಗಂಗಳ್ ೯೬

ಇನಿಯಳ್ ಪೊಣರಱಿದೊಡದಂ
ನೆನೆನೆನೆದುಂ ಸುಯ್ದುಸುಯ್ದು[5]ಳಲ್ದಳ್ತಳ್ತು
ಬ್ಜಿಸಿಯಬ್ಜಿನಿದಪ್ಪದ[5] ನೋ
ಡಿ ನೋಡಿ ಜಾನಿಸಿದುದತುಲಶೋಕಂ ಕೋಕಂ ೯೭

ಇದು ಕೋಕಶೋಕಮಂ ನೋ
ಡದ ಕೃಪೆಯೆನೆ ಪದ್ಮನಯನಮಂ ಪದ್ಮಿನಿ ಮು
ಚ್ಚಿದಳೆನೆ ಭಾವಕದಿಂದ
ಲ್ಲದೆ ನಾಯಕಿ [6]ತಾಳ್ದಳಿನನಗಲ್ಕೆಯ[6] ನೋವಂ ೯೮

---

[1] ಅರುಣತೆವೆತ್ತಿತ್ತು (ಕಗ) [2] ಬೈಗಿನ (ಕಗ) [3] ಧಾತುಸ್ಥಳಿರಜಂಗಳಿಂ (ಕಖಗ)
[4] ಸಂಜೆಗೆಂಪನುಱಿದಿರೆ (ಕಗ) [5] ಅಳಲ್ದಳುರುತ್ತಬ್ಜಿನಿದಪ್ಪದೆಲ್ಲಿಯುಂ (ಕಗ) [6] ತೊಱಿದಳಿನ
ನಗಲ್ಕೆಯ (ಕಗ) ತೋಱಿಳಿನನಗಲ್ಕೆಯ (ಮೊಅ)

ಇಳಿಗೆ ಪಳಗಾಲದಂಬರ
ವೊಳಸಾಗರ್ಗಂ ಬೀೞ್ಗುಮೆಂದು ಧಾತ್ರಂ ಬಲ್ಪಿಂ
ದಳವಡೆ ಬೆಟ್ಟಿದ ಬೆಳ್ಳಿಯ
ಮೊಳೆಗಳೆನಲ್ ತೊಳಗಿ ಬೆಳಗಿದುವು ತಾರಗೆಗಳ್ ೯೯

ಅನುರಕ್ತನಾಗಿ ಧಾರಿಣಿ
ಗೆ ನಲ್ಲಳಂ ರಾಜಬಾಧೆಗೊಪ್ಪಿಸಿ ರಾಜೀ
ವಿನಿಯಂ ಸತ್ಪಥಮಂ ತೊಱೆ
ದಿನಪಯಶನೆನೆ ತಮಂ ಪೊದೆೞ್ದುದು ಜಗಮಂ ೧೦೦

[1]ಇನದೀಪಂ ನಂದಿರೆ[1] ಬಂ
ದು ನಿಶಾರಾಕ್ಷಸಿ ಚರಾಚರೌಘಗ್ರಸನಾ
ರ್ಥಿನಿ ಭುವನಭವನಮಂ ಭೋಂ
ಕನೆ [2]ಪಡಿಗೆತ್ತಂದವಾದುದೆಂದು[2] ತಮಂಧಂ ೧೦೧

*

ವ|| ಅಂತು ಜಗಮೆಲ್ಲಮಂ ಕವಿತರ್ಪ ಕೞ್ತಲೆಯೊಳ್

ಚಂ|| ಪೊಱಮಿದ ನವೀನನೀಲಪಟವಿಕ್ಕಿದ ಕತ್ತುರಿಯಣ್ಪು ತೊಟ್ಟ ನೀ
ಲವ ತೊಡವೊಪ್ಪೆ ಜಂಗಮತಮಃಕಳೆಯಂತೆ ತಮಸ್ತಮಾಲವೃ
ಕ್ಷದ ಚಲಶಾಖೆಯಂತೆ ತಮದೊಡ್ಡಿನ ಲೋಲಪತಾಕೆಯಂತೆ ಪ
ರ್ವಿದ ತಮದುರ್ವಿನೊಳ್ ಸುೞಿದರಸ್ಫುಟಚಾರಿಯರಂದು ಜಾರೆಯರ್ ೧೦೨

ಜಗುನೆಯ ಪೂರಮೊತ್ತರಿಪ [3]ಗಂಗೆಯಿನೊಡ್ಡಱುವಂತೆ[3] ಮರ್ಬಿನು
ರ್ಬುಗಿಬಗಿಯಾಗೆ ಬೆಳ್ಪನೆಗೆತಂದುದಯಾದ್ರಿಯ ಸೆಜ್ಜರಕ್ಕೆ ಪ
ಕ್ಕಿಗೆ ಬರುತಿರ್ಪ ದೇವಗಜದಂಗಮರೀಚಿಯ ಭಂಗಿವೆತ್ತಿರಲ್
ಬಗೆಗೊಳಿಸಿತ್ತು ಚಂದನರಸಂಮೊಡೆದಂದವೆ ಪೂರ್ವದಿಙ್ಮುಖಂ ೧೦೩

ವ|| ತದನಂತರಂ

---

1 ದಿನಕರನಂದುಱುವಿರೆ (ಖ) 2 ಪಡಿಗೆತ್ತಂದವಾಮದಂಧ (ಕಗ) 3 ಗಂಗೆಯನೊಡ್ಡಱುವಂತೆ (ಕ) ಗಂಗೆಯನೊಡ್ಡಱುಪಂತೆ (ಖ) * (ಖ) ಪ್ರತಿಯಲ್ಲಿ ೧೦೧ನೆಯ ಪದ್ಯದ ನಂತರ ಈ ಪದ್ಯ ಹೆಚ್ಚಾಗಿ ದೊರೆಯುತ್ತದೆ.

ಪವತಳಮಂತಳಚ್ಚಲಿಸಿನಿಲ್ಲೆನೆ ಧಾರಿಣಿ ಮಾಯಮಾದುದೋ
ವದನಮನುದ್ದಮೆತ್ತಿನಿಲಿಸಿಲ್ಲೆನೆ ವಾರಿದವೀಧಿಮೇಲೆ ಬಿ
ರ್ದುದೊ ತನುವಿಂಗೆ ಸಾರವಿನಿಸಿಲ್ಲೆನೆ ನಾಲ್ದೆಸೆ ತಾಪಿಸಿತ್ತೊ ಪೇ
ೞುದು ವಿಪರೀತಮೆಂದು ಸುೞಿವರ್ಗಿರೆ ಕೞ್ತಲೆ ಪೆತ್ತುದೇೞ್ಗೆಯಂ

ಮ॥ಸ್ರ॥ ವಿತತಪ್ರಾಚ್ಯಾದ್ರಿಪೀಠಾಗ್ರಿಮದರುಣಶಿಲಾವೃತ್ತಲಿಂಗಂಬೋಲಿಂಬಾ
ಯ್ತು ತರಂಗೊಂಡೇೞ್ಗೆಯಿಂ ರಾಗದಿನುಪಚಿತಚೇತಶ್ಚಕೋರೀಕದಂಬಂ
ದ್ಯುತಿವಲ್ಲೀಸ್ತಂಭಮುಜ್ಜೃಂಭಿತಕುಮುದಕುಟುಂಬಂ ತಮಃಶೈಲಶಂಬಂ
ರತಿಸಾಟೋಪಾವಲಂಬಂ ಜನಿತವಿಟವಿಡಂಬಂ ಸುಧಾಸೂತಿಬಿಂಬಂ ೧೦೪

ಕಂ॥ ಶೋಣತೆವೆತ್ತ ಮರೀಚಿ
ಶ್ರೇಣಿಯ ಕೆಂದಳಿರನಗ್ರದೊಳ್ ತಳೆದುದಯ
ಕ್ಷೋಣಿಧರವೆಂಬ ಕಲಶದ
ಮಾಣಿಕಗನ್ನಡಿವೊಲಾಯ್ತು ಹಿಮಕರಬಿಂಬಂ ೧೦೫

ಸಂಗಡಿಸೆ ತನ್ನೊಳರುಣಪಿ
ಶಂಗಸಿತದ್ಯುತಿಗಳೆಂಬನುಕ್ರಮರುಚಿ ಶ
ಕ್ರಂಗೆತ್ತಿದ ಮಾಣಿಕಗೊಡೆ
ಪೊಂಗೊಡೆ [1]ಬೆಳ್ಳಿಗೊಡೆಯೆನಿಸಿದುದು ವಿಧುಬಿಂಬಂ[1] ೧೦೬

ತಾರೇಶತಾರ್ಕ್ಷ್ಯನಂಶುವಿ
ಸಾರಿತಪಕ್ಷಂ ಬರಲ್ ನಭಶ್ಚಂದನಧಾ
ತ್ರೀರುಹಮಂ ಸುತ್ತಿದ ಕಾ
ಳೋರಗನೋಡುವವೊಲೋಡಿ ಪೋದುದು ತಿಮಿರಂ ೧೦೭

[2]ಮಿಾಂಗಳೆ ಮುತ್ತೆನಿಸುವ[2] ಬೆ
ಳ್ದಿಂಗಳೆ ಪಾಲ್ಗಡಲನಿಱಸೆ ಮಂಡಲಶೇಷೋ
ತ್ಸಂಗಶಯನೀಯದೊಳೆ ಕೃ
ಷ್ಣಾಂಗದ್ಯುತಿಯಂತಿರೆಸೆದುದಿಂದುಕಳಂಕಂ ೧೦೮

ಚಂ॥ ಕರಗಿಸೆ ಬೆಳ್ಳಿಯಪ್ಪುದಿದು ತೆಳ್ಪೊರೆಯೆತ್ತೆ ದುಕೂಲವಪ್ಪ ಕಂ
ಡರಿಸೆ ಮರಾಳವಪ್ಪುರುಳಿಮಾಡಿ ಸರಂಗೊಳೆ ತಾರಹಾರವ
ಪ್ಪರೆದೊಡೆ ಸೌಧಸಂತತಿಗೆ ಪಾಲ್ಸೊದೆಯಪ್ಪ ಕಲಿಲ್ಚಿ ಕೂಡೆ ಕ
ರ್ಪುರವಳುಕಪ್ಪಗುರ್ವನೊಳಕೊಂಡುದು ಚಂದ್ರಿಕೆ ಸಾಂದ್ರಭಾವದಿಂ ೧೦೯

ವ॥ ಅಂತು ಚೆಲ್ವಾದ ಚಂದ್ರಿಕಾ[3]ವಿಳಾಸದೊಳುಪೇಂದ್ರಂ ಸಾಧಾರಣವಿಟ ಪ್ರಸಾಧನಪ್ರಚ್ಛನ್ನನಾಗಿ[3] ನಿಜಪ್ರಿಯಸಖಂ ಪಾರ್ಥನೊಡವರೆ ನಾಗರಿಕವಿಟ ವಿದೂಷಕ ಪೀಠಮರ್ದಕಪುರಸ್ಸರಂ ಪೌರವಿಹಾರಕ್ಕೆ ಪೊಱಮಡೆ

[1] ಬೆಳ್ಳಿಗೊಡೆಯೆನಿಸಿದುದು ಶಶಿಬಿಂಬಂ (ಕಗ) ಬೆಳ್ಗೊಡೆಯಿದೆನಿಸಿದುದು ವಿಧುಬಿಂಬಂ (ಖ) [2] ತಿಂಗಳ ಬಿತ್ತೆನಿಸುವ (ಖ) [3] ವಿಳಾಸದೊಳುಪೇಂದ್ರಸಾಧಾರಣ ಪ್ರಸಾಧನಪ್ರಚ್ಛನ್ನನಾರಿ (ಕ) ವಿಳಾಸದೊಳುಪೇಂದ್ರಸಾಧಾರಣಪ್ರಸಾಧನಪ್ರಚ್ಛನ್ನನಾಗಿ (ಗ)

ಮ|| ನವನೀಲೋತ್ಪಲಲಕ್ಷ್ಮಿಯುಮಂ ನಗಿಸಿ ಮಲ್ಲೀರಾಮೆಯುಮಂ ಪೇೞವಾ
ಡಿ ಪಸೀಜಾತಿನಿಯುಂ ವಿಡಂಬಿಸಿ ವಿನೋದಂಬೆತ್ತು ಬಂದತ್ತು ಸ
ಬ್ಬವಕಾಜಿಂಗೆಣೆಯಾಗಿ ವಾರವನಿತಾಸೌಭಾಗ್ಯಘಂಟಾರುತಂ
[1]ಸುವಿಟಸ್ವೈರರವಾರುತಂ[1] ಕುಸುಮಚಾಪಜ್ಯಾರುತಂ ಮಾರುತಂ ೧೧೦

ವ|| ಆ ಮಂದಮಾರುತಮಂ ಮನಂಗೊಂಡು ನೆಯನಭ್ರಮರಪುಷ್ಪವಾಟವೆಂಬ ವೇಶ್ಯಾವಾಟದೊಳಗಣೆ ಬರ್ಪಾಗಳ್

ಚಂ|| ತನುಲತೆ ಶೋಭೆಯಂ ತಳೆದು ನಿಲ್ವಿನೆಗಂ ಮುಖಲಕ್ಷ್ಮಿ ಪೂರ್ಣಚಂ
ದ್ರನನಿೞಿಕೆಯ್ದು ನಿಲ್ವಿನೆಗಮಾಭರಣಪ್ರಭೆಗಳ್ ಪೊದೞ್ದು ನಿ
ಲ್ವಿನೆಗಮಪಾಂಗಮಾಳಿಕೆ ವಿಜೃಂಭಿಸಿ ನಿಲ್ವಿನೆಗಂ ಮನೋಭವಂ
ನನೆಗಣೆವೊಟ್ಟು [2]ನಿಲ್ವಿನೆಗಮೊತ್ತಿಗೆ[2] ನಿಂದೆಪೆಂಡಿರೊಪ್ಪಿದರ್ ೧೧೧

ವ|| ಅಲ್ಲಿ

ಚಂ|| ಪವಳದಿನಿಂಗಡಲ್ ಶಫರದಿಂ ಕೋಱನುನ್ಮದಭೃಂಗನಾದದಿಂ
ದವಿಸಱಪುಷ್ಪಭೂಜಮೆಸೆವಂತಿರೆ ಚಂದ್ರಿಕೆ ಭೂಷಣಾಂಶುವಿಂ
ಕವಿದಲರ್ಗಣ್ಣ ಮಾಪೊಱಳಸಿನಿಂ ಮೃದುಗೇಯದಿನೊಪ್ಪಲುಯ್ಯಲಾ
ಡುವ ಲಲಿತಾಂಗಿ ತನ್ನೆಡೆಗೆ ನೀಱರ ಚಿತ್ತಮನುಯ್ಯಲಾಡಿದಳ್ ೧೧೨

ವ|| ಅದಲ್ಲದೆಯುಂ

ಚಂ|| ಪದನಖಕಾಂತಿ ತಾರಗೆಯ ಕಾಂತಿಯನೇೞಿಸೆ ಸುಯ್ಯ [3]ಕಂಪೆರ
ಲ್ಗೊದವಿಸೆ[3] ಕಂಪನಕ್ಷಿಗಳ [4]ಚಂದ್ರಿಕೆ[4] ಚಂದ್ರಿಕೆಯುಂ ಪಳಂಚೆ ಗೇ
ಯದ ರುತಿ ಕಂತುಚಾಪ[5]ರುತಿಯೊಳ್[5] ತಡಮಾಗೆ ಮುಖೇಂದುವಿಂದುವಿಂ
ಗಿದಿರಿಡೆ ಕಾಂತೆ ಮಿಂಚು ಪೊಳೆದಾಡುವವೊಲ್ ಪೊಳೆದುಯ್ಯಲಾಡಿದಳ್ ೧೧೩

ವ|| ಮತ್ತೊರ್ವಳ್

ಉ|| ಈ ಪೊಸಸುಗ್ಗಿ ರಂಜಿಸುವುದೀ ಪೊಸ [6]ಜವ್ವನೆಯಿಂದೆನಲ್[6] ಜಸಂ
ವ್ಯಾಪಿಸೆ [7]ಭಾವಮಂ[7] ಮೆಱೆದು ಕಾಮಿನಿ ಕಾಮಭುಜಾಗ್ರಮಂ ಜಯ
ಶ್ರೀ ಪರಿದೇಱಲೇಱೆ ತಳಿರುಯ್ಯಲನಾ ಖಚರೀಜನಂಗಳೊಳ್
ರೂಪಿಡೆ ತನ್ನ [8]ರೂಪೊಲೆದು[8] ಪಾಡಿದಳಚ್ಯುತನಂಕಮಾಲೆಯಂ ೧೧೪

---

1 ಸುವಿಟಸ್ವೈರರವಾವೃತಂ (ಕಗ) ಸುವಿಟಸ್ವೇದಕಲಾರುತಂ (ಖ) 2 ನಿಲ್ವಿನೆಗಮೊತ್ತೆ ನೆ (ಖ) 3 ಕಂಪರಲ್ಗೊದವಿಸೆ (ಖ) 4 ಶುಭ್ರತೆ (ಖ) 5 ಶರದೊಳ್ (ಖ) 6 ಜವ್ವನದಿಂದೆನಲ್ (ಕಗ) 7 ಚಾಗಮಂ (ಕಗ) 8 ರೂಪೊಲಿದು (ಕಗ)

ವ॥ ಮುಂದೊಂದೆಡೆಯೊಳೊರ್ವಳ್

ಚಂ॥ ಇರೆ ನವಪದ್ಮರಾಗಚಷಕಂ ನಿಜಹಸ್ತತಳಾಗ್ರದೊಳ್ ಮನೋ
ಹರಿ ತಳಿರ್ದೊಂಗಲಂ ತಳೆದ ಕೋಮಲವಲ್ಲರಿಯಂತೆ ರಕ್ತಪಂ
ಕರುಹಮನಾಂತ ಪಂಕಜಿನಿಯಂತೆ ನವೋದಿತಚಂದ್ರಬಿಂಬಮಂ
ಧರಿಯಿಸಿದಿಂದ್ರದಿಗ್ವನಿತೆಯಂತೆಸೆದಳ್ ಮಧುಪಾನಗೋಷ್ಠಿಯೊಳ್ ೧೧೫

ವಿಧುಮುಖಿ ಮೆಲ್ಲಮೆಲ್ಲನೆ ಮಧುದ್ರವಮಂ ಸವಿದೀಂಟುವಲ್ಲಿ ತ
ನ್ನಧರದ ರಾಗದೊಳ್ ಪೊರೆದುದಂ [1]ಮನದೊಳ್[1] ಬೆಱಗಾಗಿ ನೋಡುತಂ
ಮಧುರಸಮುಲ್ತು ಕುಂಕುಮರಸಂ ದಿಟಮೆಂದು ಬೞಿಕ್ಕೆ ಶಂಕೆ ತ
ನ್ಮಧುರಸಗಂಧದಿಂ ತೊಲಗೆ ಸೇವಿಸಿದಳ್ ಮಧುಮಂ ನಿಜೇಚ್ಛೆಯಿಂ ೧೧೬

ತನುಲತೆಗಂಕುರಂ ತಳಿರಲರ್ ಮಧುಸಂಗದೊಳಾಯ್ತು ಚೋದ್ಯಮೆಂ
ದೆನೆ ಮಧುಪಾನಜಾತಪುಳಕೇಕ್ಷಣಶೋಣಿಮಘರ್ಮಬಿಂದುಗಳ್
ತನಗೆಸೆಯಲ್ [2]ಮದೋತ್ಸವದೆ ಕೋಗಿಲೆವೆಣ್ ಗಱಪಂ ನೆಗೞ್ಚುವಂ
ತನುವಿಪ[2] ಸೊರ್ಕಿನಿಂ ಪಿಕನಿನಾದೆ ಪೆಱಳ್ [3]ಗಱಪಂ[3] ನೆಗೞ್ಚಿದಳ್ ೧೧೭

ಉ॥ ಎಮ್ಮ ಕೆಲಂಗಳೊಳ್ ಮೆಱೆಡಯುತಿರ್ದಪುವೀಶ್ರುತಿಪೂರಕೈರವಂ
ತಮ್ಮ ಬೆಡಂಗನೆಂದು ಸೆಣಸುತ್ತವಱೊಳ್ [4]ತೊಡರ್ದಿಂತಿವಲ್ತೆ[4] ಕೆಂ
ಪಂ ಮುಳಿಸಿಂದಮಾಂತುವೆನೆ ಕೆನ್ನೆಮರಂ ನಿಮಿರ್ದಕ್ಷಿಗಳ್ಗೆ ರಾ
ಗಂ ಮಧುಸೇವೆಯಿಂ ನೆಗೞೆ ರಂಜಿಸಿದರ್ ಮಧುಮತ್ತಕಾಂತೆಯರ್ ೧೧೮

ಮ॥ಸ್ರ॥ ತನುಮಂ ಶೃಂಗಾರವೆಂಬಿಂಗಡಲ ನೊರೆಯೆ ಸುತ್ತಿರ್ದುದೆಂಬಂದದಿಂದಂ
ತನಗೊಪ್ಪಂಬೆತ್ತಿರಲ್ ಬೆಳ್ಪಸದನಮುಮಳಜ್ಯೋತ್ಸ್ನೆಯೊಳ್ ಮಲ್ಲಿಕಾಗಂ
ಧ ನವಶ್ರೀಖಂಡಗಂಧ ಶ್ವಸಿತಪವನಗಂಧಾನುಮೇಯತ್ವನಿಂದೊ
ಯ್ಯನೆ ಸಂಕೇತಾಲಯಕ್ಕೆಯ್ದುವಳನಗಧರಂ ನೋಡಿದಂ ಸಸ್ಮಿತಾಸ್ಯಂ ೧೧೯

ವ॥ ಆಗಳೊರ್ವಳಿಚ್ಚೆಯಾಣ್ಮನೊಳ್ ಬೆಚ್ಚಮನದಾಕೆ

ಮ॥ ನಿನಗಿಂದಾವ ಭುಜಂಗನಂ ಕರೆವೆನೆಂಬಾ ಮಾತುಗೇಳ್ದಂಬುದ
ಧ್ವನಿಯಂ ಕೇಳ್ದ ಮರಾಳಿಯಂತೆ ಬೆದಱುತ್ತುಂ ದೂತಿಯಂ ಬೈದು [5]ತಾ
ಯನುಮಿಂಗಂ ಮೊಗಸೋಲದಾವ[5] ವಿಟರುಂ ಕೊಟ್ಟೊತ್ತೆಯಂ ಕೊಳ್ಳದಿ
ರ್ಪಿನೆಗಂ ಪ್ರೀತಿಯೆ ದೂತಿಯಾಗಿ [6]ಬರೆ[6] ಬಂದಂ ಕಾಂತನಾ ಕಾಂತೆಗಂ ೧೨೦

---

[1] ಮಧುವಂ (ಕಗ) [2] ಮಧೂತ್ಸವದೆ ಕೋಗಿಲೆಗಳ್ಗಱಪಂ ತಗುಳ್ವುತಂ ತನುವಿನ (ಖ)
[3] ಮನಮಂ (ಖ) [4] ತೊಡರ್ದಂತಿರಲ್ತೆ (ಕಗ) ತೊಡರ್ದಂತಿರಲ್ಕೆ (ಮೊಅ) [5] ತಾಯನುಮಕ್ಕಂ
ಮೊಗಸೋಲದಾವ (ಕಗ) ತಾಯನುಮಕ್ಕಿಂ ಮೊಗಸೋವದಾವ (ಖ) [6] ತರೆ (ಕಗ)

ವ|| ಅದಂ ನೋಡುತ್ತೆ ಬರಲೊರ್ವನನ್ಯಕಾಂತೆಯೊಳ್ ಕೈಕೊಂಡ ಪೊಲ್ಲಮೆಯಂ ಕಳೆಯಲ್ಕೆಂದು ತನ್ನ ನಲ್ಲಳ ಕಾಲ್ಗೆಱಗೆ

ಮ|| ಎಱಕಂ ಚಿತ್ತದೊಳಿಲ್ಲ ಕಾಲ್ಗೆಱಗಿ ನೀನೇಕಾಳಿಗೊಂಡಿರ್ಪೆ ಮಾ
ಣೆಱಗಿನ್ನಾ ಪೊಸಪೇಂಟದಾಕೆಗೆನುತುಂ ಹೂಂಕಾರದಿಂ ಕಾಯ್ಪು ಕ
ಣ್ದೆಱೆಯಲ್ ವಾಮಪದಾಬ್ಜದಿಂದೊದೆಯೆ ನಲ್ಲಂಗಾದ ರೋಮಾಂಚದಿಂ
ಪೆಱಪಿಂಗಲ್ ಮುಳಿಸಾಕೆ ಪಕ್ಷ್ಮದೊಳೆ ಪಾಯ್ದುರ್ವಶ್ರುವಂ ತಾಳ್ದಿದಳ್ ೧೨೧

ವ|| ಆಕೆಯ ವಿವೇಕಮಂ [1]ವಿಚಾರಿಸುತ್ತುಂ[1] ಬರೆ ಮುಂದೊಂದೆಡೆಯೊಳ್

ಚಂ|| ತೊಲಗೆ ಮನಸ್ತಮಂ ಕಿಡೆ ನಿಜೇಕ್ಷಣರಾಗದ ಸಂಜೆಗೆಂಪು ನಿ
ರ್ಮಳದರಹಾಸಚಂದ್ರಿಕೆಯುಮಂ ಕುಡೆ [2]ಕಾಲ್ವಿಡಿದೋಪನೋಪಳಂ[2]
ತಿಳಿಪುವುದುಂ ಪ್ರಸನ್ನತೆಯಿನೋಪಳ ವಕ್ತ್ರಹಿಮಾಂಶುಮಂಡಳಂ
ಬೆಳಗಿದುದುಣ್ಮಿ ಪೊಣ್ಮಿ ಜಘನದ್ರವಚಂದ್ರಶಿಲಾಂಬುನಿರ್ಝರಂ ೧೨೨

ವ|| ಮತ್ತೊಂದು ಕೇಳೀಗೃಹದೊಳ್

ಮ||ಸ್ರ|| ಶಕುನಿವ್ರಾತಾರವಂ ಮನ್ಮಥರಥಬಲವದ್ಭೀಂಕೃತಂ ಕಂಠನಾದಂ
ಮಕರಾಂಕಜ್ಯಾಲತಾಟಂಕೃತಪತಿದೃಢಹಸ್ತಪ್ರಹಾರಸ್ವನಂ ದ
ರ್ಪಕಭೇರೀಭಾಂಕೃತಂ ತಾನೆನೆ ಯುವತಿರತಾರಂಭಕೋಲಾಹಲಧ್ವಾ
ನಕವಿಂತಾ ಕಂತುಸೇನಾಕಳಕಳದವೊಲಾಶ್ಚರ್ಯಮಂ ತಂದುದಾಗಳ್ ೧೨೩

ವ|| ಆ ಮದನಕೇಳೀಸದನಸಮಕ್ಷದುಪವನದ್ರಾಕ್ಷಾಮಂಟಪದ ಮುಂದಣ ಪ್ರಾಂಗಣದೊಳ್

ಮ||ಸ್ರ|| ಪೊಡರ್ವುತ್ತುಂಗಸ್ತನಂ ಕೊಂಕಱಿದು ನಿಮಿರ್ವ ನೀಳಾಳಕಂ ಜೋಲ್ದ ಬಂಬ
ಲ್ಮುಡಿ ಬೆಳ್ಪೇಱಿರ್ದ ಬಿಂಬಾಧರಮಣಿ ನಸುಕೊಂಕಿರ್ದ ಕರ್ಣೋತ್ಪಲಂ ಕೆಂ
ಪಡರ್ದಾ ಲೋಲೇಕ್ಷಣಂ ಕಂಪಿಸುವ ತನು ರತಿಶ್ರಾಂತಿಯಿಂದಂ ಬೆಡಂಗಂ
ಕುಡೆ ನೆಮ್ಮಿರ್ದೋಪನಂ ಮೆಯ್ಬೆಮರನೆಲರೊಳಂದಾರಿಸುತ್ತಿರ್ದಳೊರ್ವಳ್ ೧೨೪

ವ|| ಆ ಬೆಡಂಗಿಯುಮಂ ಮನದೆಗೊಂಡು ನಡೆಯಲೊಂದು ಗೃಹವನೋಪಾಂತದೇಕಾಂತನಿಳಯದೊಳ್

---

1 ಭಾವಿಸುತ್ತುಂ (ಖ) 2 ಕಾಲ್ವಿಡಿದೋಪಳೋಪನಂ (ಕಖಗ)

ಉ॥ ನೋಡುವರೊಳ್ ಮನಂಬಯಸುವಂತಿರೆ ನಲ್ಮೆ ತುಳುಂಕೆ ಬಿಂಕದಿಂ
ನೋಡುವುದ್ಯೆದೆ ಮಾತನೊಸೆದಾಡುವರೊಳ್ ಬಗೆ ಬೆರ್ಚದೋಜಿ [1]ಮಾ
ತಾಡುವುದಿತ್ತು ಕೂಡುಪರೊಳಿಲ್ಲದ ಬೇಟಮನುಂಟುಮಾಡೆ[1] ನೀಂ
ಕೊಡುವುದೆಂದು ಮುತ್ತವುದಗುಂಟಣಿ ಪುತ್ರಿಗೆ ದೀಕ್ಷೆಯಿಕ್ಕಿದಳ್ ೧೨೫

ವ॥ ಆ ಮಾತನಾಲಿಸುತ್ತುಂ ಬರೆ

ಮ॥ ಮುಡಿ ಸೊಪ್ಪಾಗದು ನೀವಿ ಬಿರ್ಚದಧರಂ ಬೆಳ್ಪೇಱದೂರುದ್ವಯಂ
ಪೊಡರ್ದಾಕಂಪಿಸದಕ್ಷಿ ಕೆಂಪಡಸದೊರ್ವಂಗೋತು ನೀನನ್ಯರೊಳ್
ಕೊಡಗೂಸಿರ್ಪವೊಲಿರ್ಪೆ ನಿನ್ನೊಳಗುಗಂಡರ್ ಗಂಡರಿನ್ನೇನುಮಂ
ಕುಡರೆಂದೆಂದು ಕನಲ್ದು ತಾಯ್ ಮಗಳನೊರ್ವಳ್ ಪುರ್ವಿನಿಂ ಜರ್ವಿದಳ್ ೧೨೬

ವ॥ ಮತ್ತೊಂದೆಡೆಯೊಳೊರ್ವಂ ತನ್ನೋಪಳನಗಲ್ದು ಪೋಪಲ್ಲಿ

ಮ॥ಸ್ರ॥ ಮದಿರಾಪಾನಕ್ಕೆ ಮೆಯ್ದಾರದೆ ಸುಱಿವೆಲರಂ ಪಾರದುದ್ಯಾನಮಂ ಸಾ
ರದೆ ಮಲ್ಲೀದಾಮಮಂ ಸೂಡದೆ ಹಿಮರುಚಿಯಂ ನೋಡದಾನಂದದಿಂ ಪಾ
ಡದೆ ಕೈಯೆಗ್ಗೆಯ್ದೊಂದಲಂಪಿಲ್ಲದೆ ಕೆಳದಿಯರೊಳ್ [2]ಸೊಲ್ಲದೇಕಾಂತದೊಳ್[2] ನಿ
ಲ್ಲದಿರಾಂ ಬರ್ಪನ್ನವಾಯಂ ನಿನಗಿದು ವಿಗತಾಪಾಯಮಪ್ಪೊಂದುಪಾಯಂ ೧೨೭

ವ॥ ಎಂದು ಬುದ್ಧಿವೇೞುತ್ತಿರ್ದಂ. ಆ ಪ್ರದೇಶಕ್ಕನತಿದೂರದೊಳತನುತಾಪ
ಸಂತಪ್ತೆಯಾಗಿ

ಚಂ॥ ಚರಿಯಿಸಿ ನಿಚ್ಚವಬ್ಜವನದೊಳ್ ವನದೊಳ್ ವನದೊಳ್ ಕಲಂಕಿದೆಂ
ಸುರಿವ ಮನೋಜಬಾಣತತಿಯಿಂ ಮತಿಯಿಂ ಧೃತಿಯಿಂದೆ ಕೆಟ್ಟೆನೀ
ಸುರುಚಿರಚಂದ್ರಿಕಾರುಚಿಕಳಾಪದ ತಾಪದ ಲೇಪದುಬ್ಬೆಗಂ
ಪಿರಿದೊಡಗೂಡು ಚಾರುತರನಂ ವರನಂ ಸ್ಮರನನ್ನನಂ ಸಖೀ ೧೨೮

ವ॥ [3]ಎಂದೊರ್ವಳ್ ಸಖಿಗೆ ಪೇೞುತ್ತಿರ್ದಳ್. ಮತ್ತೊಂದೆಡೆಯೊಳ್[3]

ಚಂ॥ ಇರುಳ ರಥಾಂಗಿಯಂತಲುತಂ ಪಗಲುತ್ಪಲಲಕ್ಷ್ಮಿಯಂತೆವೋಲ್
ಕೊರಗುತುಮಭ್ರಕಾಲದ ಮರಾಳಿಕೆಯಂದದೆ [4]ನೋಯುತಂ[4] ಭವ
ದ್ವಿರಹದೊಳಿರ್ಪ ವಲ್ಲಭೆಯನಾಱಿಸು ಬಂದೊಸೆದಕ್ಕಟೆಂತು ನಿ
ಷ್ಕರುಣಿಯುಮಿಂತು [5]ಕಲ್ಲೆರ್ದೆಯನಿಂತು ಸಗರ್ವನು[5]ಮಾಗಲಕ್ಕುಮೋ ೧೨೯

---

1 ಮಾತಾಡುವುದಿತ್ತು ಮಾಡುವರೊಳಿಲ್ಲದ ಬೇಟಮನುಂಟುಮಾಡೆ (ಕಗ) ಮಾತಾಡುವುದಿಂತು ಕೂಡುವರೊಳಿಲ್ಲದ ಬೇಟಮನುಂಟುಮಾಡಿ (ಖ) 2 ಸಲ್ಲದೇಕಾಂತದೊಳ್ (ಖ) 3 ಎಂದೊರ್ವಳಟ್ಟಿದೊಡಾಕೆಪೋಗಿ ಕೆಳದಿಯ ಕಾಂತಂಗಿಂತೆಂದಳ್ (ಖ) 4 ನೋಯುತುಂ (ಕಗ) 5 ಕಲ್ಲೆರ್ದೆಯುಮಿಂತು ಸಗರ್ವಮು (ಕಖ) ಕಲ್ಲೆರ್ದೆಯುಮಿಂತು ಸಗರ್ವನು (ಗ)

ವ॥ ಎಂದು ನುಡಿದೊಡಂಗೊಂಡು ಪೋದಳ್. ಆಗಳೊಂದು [1]ರಮಣೀಯ ಸ್ಥಾನದೊಳ್[1] ಪರಸ್ಪರ ಸ್ವೈರಾಲಾಪದಿಂದಿರ್ದ ವಿಟಜನದೊಳೊರ್ವಂ

ಮ॥ಸ್ರ॥ ಇರದೋಪಂ ಕೋಪದಿಂ ಪೋದೊಡೆ ಪೆಱಗನುಲೇಪಂ ವಿಭೂಷಾಕಲಾಪಂ
[2]ವರಧೂಪಂ[2] ಸುಪ್ರದೀಪಂ ಸೊಗಸದೊಗೆದ ಕೋಪಂ ಸಶೋಕಪ್ರಳಾಪಂ
ಸ್ಮರದೀಪಂ ಪೆಣ್ಣ ರೂಪಂ ತಳೆದುದೆನಿಪ ಪೇಪಂ ಪ್ರಭಾವೇಶರೂಪಂ
ಪರಿತಾಪಂ ತೋಱಲಾ ಪೆಣ್ಣೊಲವತಿಲಲಿತಾ[3]ಲಾಪವಾ ವಿಪ್ರಲಾಪಂ[3] ೧೩೦

ವ॥ ಎನೆ ಮತ್ತೊಂದೆಡೆಯೊಳೊರ್ವಂ ತನ್ನಿನಿಯಳಂ ನೆನೆದು

ಮ॥ ಇರು ನೀಂ ಪೋದಪೆನಾಂ ಮೃಗಾಕ್ಷಿಯೆನೆ ಕೇಳ್ದೆನ್ನೋಪಳಾ ಕಂದಿಕುಂ
ದಿರವಾ ಚಿಂತಿಸುವಂದವಾ ನಲವುಗೆಟ್ಟಾಕಾರವಾ ಬಾಷ್ಪದೊಳ್
ಪೊರೆದಾಲೋಕನವಾ ಬಳಲ್ಪ ತೆಱನಾ ಸುಯ್ಯೊಂದು ಪಾಂಗಾ [4]ಸ್ಮರ
ಜ್ವರಮಂ[4] ತಾಳ್ದುವ ಭಂಗಿ ಪಿಂಗಿರದದೇಂ ಬೆಚ್ಚತ್ತೊ ಮಚ್ಚಿತ್ತದೊಳ್ ೧೩೧

ವ॥ ಎಂಬುದುಂ ಮತ್ತೊರ್ವಂ ತನ್ನ ವಲ್ಲಭೆಯ ವಿಯೋಗವೇದನೆಯಂ ಭಾವಿಸಿ ನೋಡಿ

ಚಂ॥ ನಿನಗೆಱಗಿರ್ದ ಮನ್ಮನಮನಿನ್ನೆಱಗೆತ್ತಲರಂಬು ನಲ್ಲ ನೀಂ
ಮುನಿದುಱದಂದು ಕೇಳ್ದುಱಯಲೀಗುಮೆ ಮನ್ಮಥನೆನ್ನನೆಂದು ಮಾ
ನಿನಿ ಜಿನುಗುತ್ತುಮುಂಗುಟದಿನುರ್ವರೆಯಂ ಬರೆದಾನತಾಸ್ಯೆ ಕ
ಣ್ಬನಿಗಳನಿಕ್ಕುವೊಂದು ತೆಱನಿಕ್ಕಿದುದೆನ್ನೊಡಲಂ ಸ್ಮರಾಗ್ನಿಯೊಳ್ ೧೩೨

ವ॥ ಎಂದು ನುಡಿದು ತನ್ನ ಮನದಱಲನೆಚ್ಚಱಿಸೆ ಪೆಱನೊರ್ವಂ ಬೆಚ್ಚನೆ ಸುಯ್ಯು

ಮ॥ಸ್ರ॥ ಸುರತಕ್ಕೆಂದೊಲ್ದು ಸೋಂಕಲ್ ಸತಿ ಮುಳಿದವೊಲಾನಿರ್ಪುದುಂ ತನ್ನ ಬೆನ್ನೊಳ್
ಪರೆದೊಪ್ಪಲ್ ಕೇಶಪಾಶಂ ಕಱಯ ಚವರಿಯಂ ಕಟ್ಟಿದೊಂದತ್ಯಪೂರ್ವ
ಸ್ಮರಚಾಪಶ್ರೀಯ ಚೆಲ್ವಂ ತಳೆದು ಪೆಱಗುಗೆಯ್ದಿರ್ದೊಡಾಂ ಸೋಂಕೆ ಸಾರಂ
ತಿರೆನುತ್ತುಂ ನೂಂಕಿ ಸುಯ್ವನ್ನಿನಿಯಳ ತೆಱನಿನ್ನುಂ ಮನಂಗೊಳ್ವುದೆನ್ನಂ ೧೩೩

---

[1] ರಮಣೀಯಾಸ್ಥಾನದೊಳ್ (ಗ) [2] ವರರೂಪಂ (ಕಗ) [3] ಲಾಪವಾಜ್ಞಾಪ್ರಲಾಪಂ (ಖ) [4] ಸ್ಮರಾತುರಮಂ (ಗ)

ವ॥ ಎನೆ ಕೆಲಪೊೞರ್ದ ಪೆಱನೊರ್ವಂ ತನ್ನ ಕಣ್ಣಿವೇಟದ ಜೆನ್ನೆಯಂ ನೆನೆದು

ಚಂ॥ [1]ಕಿಱುವರೆಗಾಲದಿಂದುಱುದೆ[1]ನೋಪಳನಾನವಳಂದೆ ಗಂಡರಂ
[2]ಪೞುವೊಱಸಾಗೆ[2] ಮಾಡುವಳಪಳ್ಗೆ ಕುಚಂ ಕಚಮೂರುಭಾರವ
ೞ್ಕೞಿದು ಪೊದಲ್ದು ಕೊರ್ವಿ [3]ನಿಲಲಿನ್ನೆಗ[3]ವಾಕೆಯೊಳಿಂದ್ರಚಂದ್ರರಿಂ
ಬೞಿಕೆಯ ದೇವಕೋಟಿ ಮನುಜಾಕೃತಿಯಿಂದೊಡಗೂಡದಿರ್ಕುಮೇ ೧೩೪

ವ॥ ಎಂದು ನುಡಿದ ಪೂರ್ವಾನುರಾಗದ ನುಡಿಗಳಂ ಕೇಳ್ದು ಮತ್ತಲ್ಲಲ್ಲಿ ವಿಟವಿಟೀ ಭಾವಭಾಷಿತಂಗಳಂ ನೋಡುತ್ತುಮಾಲಿಸುತ್ತುಂ ಪೊಟ್ತುಗಳೆದು ಬಂದು ರಾಜಮಂದಿರಮಂ ಪೊಕ್ಕು ಅರವಿಂದನಾಭನರ್ಜುನನಂ ಕಳುಪಿ ಸಜ್ಜೆವನೆಗೆ ಬಿಜಯಂಗೆಯ್ದು ಸುಖದಿಂದೆ ರುಕ್ಮಿಣೀಸನಾಥನಾಗಿ ನಿಶೀಥಿನೀ ವಿರಾಮಸಮಯದೊಳ್

ಚಂ॥ [4]ತಳರ್ದ ವಿಯೋಗಿನೀನಯನವಾಃಕಣಸಂಕುಳದಂತೆ[4] ತಾರಕಾ
ವಳಿ ಮಸುಳ್ದಿತ್ತು ಯಾಮಿನಿಯ ಜೆನ್ನನೆ ಪೋಪ ದುಕೂಲಚೇಲದಂ
ಚಳಮೆನೆ ಪೋಯ್ತು ಚಂದ್ರಿಕೆ ನಭೋಪಥು ಸೂಡಿಬಿಸುಟ್ಟಮಾಲ್ಯಮಂ
ಡಳದವೊಲಿರ್ದುದಸ್ತಗಿರಿಮಸ್ತಕದೊಳ್ ತುಹಿನಾಂಶುಮಂಡಳಂ ೧೩೫

ಮ॥ಸ್ರ॥ ತೆರೆವೊಯ್ಲಿಂದೆಟ್ಬಿ ಕಾಸಾರದ ಪರಿಸರದೊಳ್ ನಿದ್ರೆಗೆಯ್ವಂಚೆವಿಂಡಂ
ದರಹಾಸಶ್ರೀಯನಂಭೋಜಿನಿಗೆ ಪಡೆದು ನೆಯ್ದಿಲ್ಗಳಿಂದುಳ್ಳಲರ್ವಂ
ಬುರುಹಕ್ಕೆಟ್ತಿರ್ಪ ಭೃಂಗಂಗಳ ಗೞುಯೆಲರಿಂ ಕೊರ್ಬಿ ಚಾಂಡಾಲಗೇಯ
ಸ್ವರದೊಳ್ ತಳ್ಪೊಯ್ದತಿಸ್ವೈರದೆ ಸುೞದುದು ವೈಭಾತಿಕಂ ಮಾತರಿಶ್ವಂ ೧೩೬

ಕಂ॥ ರತಿನಾಟಕಾಭಿನಯಮಂ
ಕೃತಕೃತ್ಯಂ ಮಾಡಿ ರಯ್ಯಮಾಗಿರೆ ದೀಪ
ದ್ಯುತಿ ಯುವತಿಯರೊಳ್ ನಿದ್ರಾ
ವತಾರವಾದತ್ತು ಮೂಡವೆಳಗಪ್ಪಾಗಳ್ ೧೩೭

ದಿವಿಜಗಜಂ ಸಜ್ಜರದಿಂ
[5]ದವೆಟ್ದುದೆನೆ ಕಾಣಲದ್ರಿಯಾ ದಂತಿಗೆ[5] ಕ
[6]ಟ್ಟುವ ಜೆಮ್ಮೊಗಪಡಮೆನೆ[6] ಜೆ
ಲ್ವುವೆತ್ತುದಂದುದಯ[7]ಸಮಯ[7] ಸಂಧ್ಯಾರಾಗಂ ೧೩೮

---

[1] ಕಿಱುವಡಿಗಾಲದಂದುಱುದೆ (ಕಗ) [2] ಪೞುವೊಜನಾಗೆ (ಗ) [3] ನಿಲವಿನ್ನೆಗ (ಕಖಗ) [4] ತಳರ್ವ ವಿಯೋಗಿನೀಹೃದಯವಾಃಕಣದಂತೆ ಸುರುಳ್ವ (ಖ) [5] ಪೆಟ್ದುದದೆ ಕಾಣಲಾದುದಾ ದಂತಿಯ (ಕಖಗ) [6] ಟ್ಟಿದಕೆಮ್ಮೊಗವಡಮೆನೆ (ಕಗ) ಟ್ಟುವಪಪಳಾಲಾನಂ (ಖ) [7] ಶೈಲ (ಕಗ)

ಚಂ॥ ಮುರರಿಪು ಪಾರಿಜಾತಕುಜಮಂ ಕೊಳೆ ಬಿಲ್ವಿಡಿದಂದು ಸೋಲ್ತ್ರನಿಂ
ಪರಿಣತನಪ್ಪಿನಡ್ಡಣದೊಳೆಂದೊಸೆದರ್ಚಿಸಿ ಮೂಡವೆಟ್ಟದೊಳ್
ಗರುಡಿಯನಿಂದ್ರನಾಂತ ಪೊಸಮಾಣಿಕದಡ್ಡಣಮಿಂತಿದೆಂಬಿನಂ
ಕರಮೆಸೆದತ್ತು ಶೋಣರುಚಿಯಿಂದುದಯಾದ್ರಿಯೊಳರ್ಕಮಂಡಲಂ ೧೪೯

ಮ॥ಸ್ರ॥ ಪರರಾಜೋದಗ್ರತೇಜಂ ಕಿಡೆ ರಿಪುಕುಮುದಂ ಕುಂದೆ ವಿದ್ವಿಟ್ತ್ರಮಂ ಪಿಂ
ಗೆ ರಥಾಂಗಂ ಲೀಲೆಯೊಳ್ ಕೂಡಿರೆ ಕರಕಲಿತಂ ಮಂಡಲಾಗ್ರಂ ಮನಂಗೊಂ
ಡಿರೆ ನಾನಾ ಪುಂಡರೀಕವ್ರಜಮಲರ್ದಿರೆ ಪಾದಂ ಜಗತ್ಸೇವ್ಯಮಾಗು
ತ್ತಿರೆ ಪೆಂಪಂ ತಾಳ್ದಿ ನಿತ್ಯಾಭ್ಯುದಯದಿನೆಸೆದಂ ಗೋಪಮಾರ್ತಾಂಡದೇವಂ ೧೫೦

ಗದ್ಯ॥ ಇದು ಸಮಸ್ತಕಮಳಭವಾಂಡಮಾಲಾಘಟೀಘಟಿತಾರಘಟ್ಟಘಟನಾ
ಸ್ವತಂತ್ರನಿಜಸ್ವರೂಪ ನಿರೂಪಣಚಕಿತ ಸಕಲಾಮ್ನಾಯತಂತ್ರ
ಲಕ್ಷ್ಮೀಕಾಂತ ಶ್ರೀಪಾದಭಕ್ತಿಯುಕ್ತ ಸುಕವೀಂದ್ರ ರುದ್ರ
ಪ್ರಣೀತ ಶ್ರೀಜಗನ್ನಾಥವಿಜಯ ಮಹಾಪ್ರಬಂಧದೊಳ್
ರೈವತಕಾದ್ರಿವಿಭವತತ್ತಪೋವನವರ್ಣನೇಂದ್ರ
ಪ್ರಸ್ಥಪುರಪ್ರವೇಶ ಜರಾಸಂಧಹರಣ
ರಾತ್ರಿವಿಹಾರ ವರ್ಣನಂ
ಷೋಡಶಾಶ್ವಾಸಂ

ಸಪ್ತದಶಾಶ್ವಾಸಂ

ಕಂ॥ ಶ್ರೀಜಾಯಾಪತಿ ಧರ್ಮಜ
ರಾಜಾವಸಥಕ್ಕೆ ಪೋಗಿ ಹರಿವಿಷ್ಟರದೊಳ್
ಪೂಜಾಸತ್ಕೃತನಿರ್ದಂ
ರಾಜಿಸೆ ನಿಜಮೂರ್ತಿ ತನ್ಮಹಾಸ್ಥಾಯಿಕೆಯೊಳ್ ೧

ಉ॥ ಮಂಗಳಭೂಷಣಾಂಬರಧರಂ ಶುಭಮೂರ್ತಿ ಸದರ್ಭರತ್ನಮು
ದ್ರಾಂಗುಳಿ ಯಜ್ಞಸೂತ್ರನಿವಹಾಂಚಿತವಕ್ಷನಶೇಷವೇದವೇ
ದಾಂಗಪಯೋಧಿ ಬಿನ್ನವಿಸಿದಂ ದನುಜಾರಿಗೆ [1]ಧೌಮ್ಯನೊಪ್ಪೆ ದಂ
ತಂಗಳ[1] ಕಾಂತಿಗಳ್ ನಿಜಸುಭಾಷಿತವಲ್ಲರಿ ಪೂತ ಮಾಱ್ಕೆಯಿಂ ೨

ಕಂ॥ ಪಾವನಿಯೊಳ್ ಪೊಣರ್ದಂ ಮಗ
ಧಾವನಿಪಂ ಪೊಣರಲಂಜಿದಂ ನಿನಗದಱಿಂ
ದ್ಯಾವಾಪೃಥಿವೀಮೂರ್ತಿಗ
ದಾವಂ ಪ್ರಾದೇಶಿಕಂ ಪೊಣರ್ಕೆಗೆ ನೆಱೆವಂ ೩

ರಜದಿಂ ತಮದಿಂ ನೀಂ ಪ
ದ್ಮಜನೀಶ್ವರನಾಗಿ [2]ಪಡೆವ ಕಿಡಿಸುವ ಪದಕೇ[2]
ತ್ರಿಜಗಮುಮಂ ಸತ್ತ್ವದಿನಂ
ಬುಜಾಕ್ಷ ರಕ್ಷಿಸುವ ಪೆಂಪಿದತಿಶಯಮಲ್ತೇ ೪

ಪರಮಾತಿಥಿ ನೀಂ ನಿನಗಾ
ದರದಿಂದಾತಿಥ್ಯಪೂಜೆಯಂ ಮೆಱೆವ ದಿನಂ
ದೊರೆಕೊಂಡುದೀ [3]ನೃಪಂಗೇಂ
ಚರಿತಾರ್ಥನೊ[3] ಸಾರ್ವಭೌಮರೊಳ್ ಯಮತನಯಂ ೫

---

[1] ಧೌಮ್ಯನಂದು ದಂತಂಗಳ (ಕಗ) ಧೌಮ್ಯನೊಪ್ಪಿರಲ್ ಕಂಗಳ (ಖ) ಧೌಮ್ಯನೊಂದೆ ದಂತಂಗಳ (ಮೊಅ) [2] ಪಡೆವ ಕಿಡಿಸುವುದರ್ಕೀ (ಕಗ) ಪಡೆವ ಕಿಡಿಸುವದಕ್ಕೀ (ಖ) ಪಡೆದು ಡಿಸುವುದಿರ್ಕೀ (ಮೊಅ) [3] ನೃಪಂಗೆನೆ ಚರಿತಾರ್ಥಂ (ಖ)

ಉರ್ವೀಶಂ ಮಖಪರಿಕರ
ಸರ್ವಸ್ವವನಾಗುಮಾಡಿ [1]ವನಜಾಕ್ಷ ಭವ
ದ್ದೋರ್ವಳದ ಬಳದಿನಲ್ಲದೆ[1]
ನಿರ್ವಹಿಸದು ಯಾಗವೆಂದು ಪಾರುತ್ತಿರ್ದಂ ೬

ವ|| ಆ ಮಹಾಧ್ವರೋಚಿತರಚನಾವಿಶೇಷಮಂ ನಿರೀಕ್ಷಿಸುವುದೆಂದು ಪುಂಡರೀಕಾಕ್ಷನನೊಡಗೊಂಡುಯ್ದು

ಮ|| ವಿಪುಲಸ್ವರ್ಣಮಯಂ ಕನನ್ಮಣಿಮಯಂ ಶೋಭಾಮಯಂ ತಾನೆನೆ
ಲ್ಕೆ ಮುಮಂ ವಿಸ್ಮಯಮಾಗೆ ಮಾಡಿದ ಸಭಾವಿಸ್ತಾರಮಂ ಶಾಸ್ತ್ರದೃ
ಷ್ಟಮೆನಲ್ಮಾಡಿದ ಯಾಗದೇಶಯಜನಪ್ರಾಗ್ವಂಶಪತ್ನೀವಿಚಿ
ತ್ರಮಹಾಶಾಲೆಗಳಂ ಸಮಸ್ತಜನಚೇತೋಹ್ಲಾದಿಯಂ ವೇದಿಯಂ ೭

ವ|| ಆ ವೇದಿಯ ಯಥೋಚಿತಸ್ಥಾನಂಗಳೊಳ್ ಸುಕೃತವನಿತಾಪತ್ಯಮೆನಿಪ ಗಾರ್ಹಪತ್ಯಮುಮಂ ಸಮಸ್ತಮುನಿಜನಸ್ತವನೀಯಮೆನಿಪಾ ಹವನೀಯಮುಮಂ ಭವಾರ್ಣವವಾಡಬಾಶುಶುಕ್ಷಣಿಯೆನಿಪ ದಕ್ಷಿಣಾಗ್ನಿಯುಮಂ ಲೋಕೋತ್ತರವೆನಿಪುತ್ತರವೇದಿಯುಮಂ ವಿಶಿಷ್ಟವಿಷ್ಟರಾರ್ಘ್ಯಪ್ರಣೀತ ಸ್ರುಕ್ಸ್ರುವಾಕ್ಷತಸುಗಂಧನವಯವಾಮಳತಿಲ ಸಮಿದ್ದರ್ಭಾದಿ ವಿವಿಧಮುಖಪರಿಕರಂಗಳುಮಂ ಬೇಱೆವೇಱೆ ತೋಱಿ

ಕಂ|| [2]ಆನಧ್ವರ್ಯುರ್[2] ಪರಾಶರ
ಸೂನು ಬ್ರಹ್ಮಂ ಮುನಿಪ್ರಜಂ ಋತ್ವಿಕ್ಸಂ
ತಾನಕಮುದ್ಗಾತೃ [3]ಲಸ
ಜ್ಜ್ಞಾನಮುಖಂ[3] ಹೋತೃ ಯಾಜ್ಞವಲ್ಕ್ಯಮುನೀಂದ್ರಂ ೮

ಅಕ್ಷೂಣವಾದೊಡಂ ಫಲ
ಮಕ್ಷಯವಾದಪುದೆ ಮಂತ್ರತಂತ್ರಕ್ರಮವ
ಬ್ಜಾಕ್ಷ ಭವತ್ಕಾರುಣ್ಯ[4]ನಿ
ರೀಕ್ಷಣದಿಂದಲ್ಲದಕ್ಕುಮೇ[4] ಯಜ್ಞಫಲಂ ೯

ಯಜ್ಞಾದಿಸುಕೃತಕಾರಣ
ಯಜ್ಞಾವನದಕ್ಷ ಯಜ್ಞಫಲದಾಯಕ ನಿ
ಮ್ಮಾಜ್ಞೆಯಿನಿನತನಯಸುತಂ
ಯಜ್ಞಮನೊಡರಿಸುಗುವಭಯಮಂ ದಯೆಗೆಯ್ಯಿಂ ೧೦

---

1 ವನಜಾಕ್ಷಭುಜಾಗರ್ವದ ಬಲದಿಂದಲ್ಲದೆ (ಖ) 2 ಆನಧ್ವರಿಯೆ (ಕಗ) 3 ಲಸದ್ದಾಮಖಂ (ಕಗ) 4 ನಿರೀಕ್ಷಣದಿಂದಕ್ಕುದಲ್ಲದೇ (ಖ)

ವ|| ಎಂದು ಧೌಮ್ಯಂ ಬಿನ್ನವಿಸೆ ಧರ್ಮಪುತ್ರನ ವದನಶತಪತ್ರಮಂ ವನಜನೇತ್ರನತಿಪ್ರೀತಿಯಿಂ ನೋಡಿ

ಮ|| ತಣಿವನ್ನಂ ಪಿತೃದೇವತಾಸಮುದಯಂ ಸ್ವರ್ಗಾಪವರ್ಗೈಕಕಾ
ರಣಮಪ್ಪಗ್ಗದ ರಾಜಸೂಯಮನೊಡರ್ಚಿಂ ವಿಘ್ನಕಾರಿದ್ವಿಷ
ದ್ಗಣದಿಂ ಭೂತಗಣಕ್ಕೆ [1]ತುಷ್ಟಿವಡೆದಪ್ಪೆಂ[1] ಶಾರ್ಙ್ಗಟಂಕಾರಘೋ
ಷಣಮಂ ಕೇಳ್ದೊಡೆ ದಕ್ಷನೇ ಕಿಡಿಸಲಾ ದಕ್ಷಾಧ್ವರಧ್ವಂಸಿಯುಂ ೧೧

ವ|| ಎಂದು ಪೂಣ್ದು ನುಡಿಯೆ ಶುಭಮುಹೂರ್ತದೊಳ್

ಮ|| ನವಮೇಘಧ್ವನಿಧೀರತೂರ್ಯನಿನದಂ ಭೋರೆಂಬಿನಂ ಮಂಗಳೋ
ತ್ಸವಶೃಂಗಾರಮನಪ್ಪುಕೆಯ್ದು ಸೆವಿನಂ ದೀಕ್ಷಾವ್ರತಂ ಸಪ್ತರಾ
ತ್ರವಿಧಾನಾಂತರದೊಳ್ ಷಡಗ್ನಿ ಪರಿತೋಷಂಬೆತ್ತು ಶಾಸ್ತ್ರಾಗಮೋ
ಕ್ತವಿಧಾದತ್ತೆನೆ ರಾಜಸೂಯಮಖಮಂ ಬೇಳ್ದಂ ಮಹೀಪಾಲಕಂ ೧೨

ಕನಕಂ ಶೋಧಿಸೆ ದರ್ಪಣಂ ಬೆಳಗೆ ರತ್ನಂ ಶಾಣಕೋಲ್ಲೀಢಮಾ
ಗೆ ನಿತಾಂತಂ ವಿಮಲತ್ವಮಂ ತಳೆವವೋಲ್ ಧರ್ಮಾತ್ಮಜಂ ರಾಜಸೂ
ಯನಿಮಿತ್ತವ್ಯಯದಿಂದೆ ನಿರ್ಮಲತೆವೆತ್ತೇಂ ತೇಜದಿಂ ರಾಜಿಸಿ
ರ್ದನೊ ಚಿತ್ರಂ ನರಲೋಕದೊಳ್ ದಿನಮಣಿದ್ವೈರಾಜ್ಯಮಾಯ್ತೆಂಬಿನಂ ೧೩

ಚಂ|| ಪದೆದಿನಿಸಂ [2]ತಳರ್ಚುವ ತಳರ್ಚಿದುದಂ[2] ಪೊಟಕಾಲ್ಗೆ ತರ್ಪ ತಂ
ದುದನುರದಿಂ ತಳುಂಬುವ ತಳುಂಬಿದುದಂ ಪೆಗಲಲ್ಲಿಗೆತ್ತುವೆ
ತ್ತಿದುದನೆ ನೆತ್ತಿಯೊಳ್ ತಳೆದು ಪೊಂಗಳ ಭಾರಮನುಯ್ವ ವಿಪ್ರವೃಂ
ದದ ಪಡಿಮಾತೆ [3]ಪೇಱದೆ[3] ಯುಧಿಷ್ಠಿರರಾಜನ [4]ಚಾಗದೇಟಿಗ್ಗಯಂ[4] ೧೪

ವ|| ಅಂತು ನಿರ್ವರ್ತಿತ ರಾಜಸೂಯನಾದ ಕೌಂತೇಯಂ ಗಾಂಗೇಯಂಗಭಿಮುಖನಾಗಿ

ಮ||ಸ್ರ|| ದಿವಸೇಂದ್ರಾನ್ವಾಯ ಸೋಮಾನ್ವಯ ಯದುಕುಲರಾಜಾಧಿರಾಜನ್ಯಕಂ ವಾ
ಸವಲೀಲಾವಾಸಮಿರ್[5]ಯಿರ್ದಪುದೆ ನೆಗಟ್ದು ರಾಜರ್ಷಿ ದೇವರ್ಷಿ ವಿಪ್ರ
ರ್ಷಿವಿತಾನಂ[5] ಪುಣ್ಯಪುಂಜೋಪಮಮಿದೆ ಶಿಶುಪಾಲಾದಿದೈತ್ಯವ್ರಜಂ ಭೈ
ರವರೂಪಾಡಂಬರಂ ಬಂದಿದೆ ನೆರೆದುದಶೇಷಂ ಪ್ರಪೂಜಾಭಿಲಾಷಂ ೧೫

---

[1] ತೃಪ್ತಿವಡೆಯಿಪ್ಪೆಂ (ಖ) [2] ತೆರಳ್ಚುವ ತೆರಳ್ಚಿದುದಂ (ಖ) [3] ಪೇಱವೆ (ಕಗ) [4] ಭಾಗ್ಯದೇಱಿಗ್ಗಯಂ (ಖ) [5] ಯಿರ್ದಪುದೆನೆ ನೆಗಳ್ದೀ ದೇವರಾಜದೃಷೀವಿಪ್ರವಿತಾನಂ (ಖ)

ವ|| ಎನೆ

ಕಂ|| [1]ಏಪೆರ್ಚೊ ಯಮತನೂಜ[1] ಸ
ಭಾಪೂಜೆಯೊಳಗ್ರಪೂಜೆ ಕೃಷ್ಣಂಗೆ ವಲಂ
ಶ್ರೀಪುರುಷೋತ್ತಮನಿರ್ದ ಸ
ಭಾಪಟಲದೊಳನ್ಯಪುರುಷನಾವಂ ಪೂಜ್ಯಂ ೧೬

ಶ್ರುತಿಪತಿ ಗೋಪತಿ ಲಕ್ಷ್ಮೀ
ಪತಿ ಸತ್ವಮಯಂ ಜಗನ್ಮಯಂ ಜ್ಞಾನಮಯಂ
ಕ್ರತುಪುರುಷನಾದಿಪುರುಷಂ
ಶ್ರುತಿಪುರುಷನಿರಲ್ಕೆ ಮಿಕ್ಕ ಪುರುಷರಪೂಜ್ಯರ್ ೧೭

ವ|| ಎಂದು ಮಂದಾಕಿನೀನಂದನಂ ನುಡಿಯೆ ಕೇಳ್ದು ಶಿಶುಪಾಲಂ ದಕ್ಷಿಣದಿಕ್ಪಾಲಕನಂತೆ ಕೆರಳ್ದು ನಿಂದಿರ್ದು

ಕಂ|| ನೀರ್ಮಾನಿಸಂ ನದೀಜಂ
ನೀರ್ಮಾನಿಸನಬ್ಧಿಶಯನನದುಕಾರಣದಿಂ
ಧರ್ಮಜ ಕೇಳ್ ಭೀಷ್ಮರ ಸಹ
ಧರ್ಮದ ಕೆಳೆ ಕೊಂಡುಕೊಂಡೆದುದೀ ಕೇಶವನಂ ೧೮

ಮೂರ್ಧಾಭಿಷಿಕ್ತರಿರೆ ಗೋ
ವರ್ಧನನಂ [2]ಪೂಜಿಸೆಂದನೞಿಯದೆ[2] ಭೀಷ್ಮಂ
ವಾರ್ಧಕದಿಂ ಮತಿವಿಕಳಂ
ಸ್ವರ್ಧುನಿಯೊಳ್ ಪುಟ್ಟಿದುದಱಿನತಿಜಡನಲ್ತೇ ೧೯

ಜ್ಞಾನಿಗಳೊಳ್ ಯೋಗಿಗಳ
ಜ್ಞಾನಿಗಳೊಳ್ [3]ಗೋಪರಧಿಕರೀ ಯೋಗಿಗಳಿಂ[3]
ದೀ ನಂದಗೋಪಪುತ್ರಂ
[4]ತಾನೆಂತೊ[4] ಪವಿತ್ರನಗ್ರಪೂಜಾಪಾತ್ರಂ ೨೦

---

1 ಏಪಚ್ಚೇಂ ಯಮತನುಜ (ಕ) ಏಪೊಚ್ಚೆಂ ಯಮತನುಜ (ಗ) 2 ಪೂಜಿಸೆಂದನಿಂದೀ (ಖ) 3 ಗೋಪರಧಿಕರದುಕಾರಣದಿಂ (ಕಗ) 4 ತಾನೇನೊ (ಕಗ)

ದೇವರ್ ನರದೇವರ್ ಭೂ
[1]ದೇವರುಮೇಂ[1] ಪೂರ್ವದೇವನಾಂ [2]ನೆಗೞ್ದಿನ್ನಿಂ
ದೇವಾದಿಗಳೞಿದರೆನ
ಲ್ಕಾವಂ[2] ಮಿಗಿಲಗ್ರಪೂಜೆಗಾನೆ [3]ಸಮಗ್ರಂ[3] ೨೧

[4]ಒಲವಿಂದೀವೊಡೆ[4] ಗೋವಂ
ಗಲಗೆ ಕೊಟಿಲ್ ಕೋಡಕಾಳೆ ಕೋಲುಡೆದೋಲ್ ಕಂ
ಬಳಿ ಕಲ್ಲಿ ಚೆಲ್ಲಿ ಪೀಲಿಯು
ತಲೆಸುತ್ತಲ್ಲದೆ ಮಹಾಗ್ರಪೂಜೆ ವಿರುದ್ಧಂ ೨೨

ನವನೀತಚೋರನಕುಲೀ
ನವಧೂಸ್ತನದುಗ್ಧ ಪೃಥುಶರೀರಂ ಗೋಪೀ
ಯುವತಿಜನಜಾರನಾಚಾ
ರವಿದೂರನೆ ಪೂಜ್ಯನಾಗೆ ನಿನಗೆ ನಿಕಾರಂ ೨೩

ಅಬುಧನಕುಲೀನನೆನ್ನದೆ
ಕುಬುದ್ಧಿ ನೀಂ ಯಮಜ ಗೋಪನಂ ಪೂಜಿಸಲಾ
ವಿಬುಧಪಿತೃ[5]ಸಮಿತಿ[5] ತಣಿದಪು
ದೆ ಬೂದಿಯೊಳ್ ಬೇಳ್ದ ಹವಿವೊಲಕ್ಕುಂ ಯಜ್ಞಂ ೨೪

ವ|| ಎಂದು ದಮಘೋಷಪುತ್ರಂ ವಸುದೇವಪುತ್ರನಂ ನಿರಾಕರಿಸಿ ನುಡಿಯಲಾ ಮಾತಿಂಗಜಾತಶತ್ರುವೆನಿಸಿದ ಧರ್ಮಪುತ್ರಂ ಕನಲ್ದು

ಉ|| ಮೇರುಮಹಾದ್ರಿಯಿರ್ದೆಡೆಯೊಳದ್ರಿಕುಲಂ ಮೃಗರಾಜನಿರ್ದ ಕಾಂ
ತಾರಕದಂಬದೊಳ್ ಮೃಗಗಣಂ ಸುರವಾರಣವಿರ್ದ ತಾಣದೊಳ್
ವಾರಣರಾಜಿ ಕಲ್ಪತರುವಿರ್ದ ವನಾಂತರದೊಳ್ ತರುವ್ರಜಂ
ಶ್ರೀರಮಣೀಶನಿರ್ದ ಸಭೆಯೊಳ್ ಧರಣೀಶರದೊಂದು ಲೆಕ್ಕಮೇ ೨೫

ಕಂ|| ಆವನ ಪದಮಂ ಧ್ಯಾನಿಸಿ
ದೇವದ್ವಿಜರಾಜ[6]ಮುನಿಗಳಭಿನುತರಾದರ್
ಭಾವಿಸು ನೀಂ ದೈತೇಯಾ
ಶ್ರೀವರನಿಂದನ್ಯನರರದೇಂ ವಿಶ್ರುತರೇ[6] ೨೬

1 ದೇವರೆನಲ್ (ಖ) 2 ನೆಗೞ್ದಿಂ ಕೇಳ್ ದೇವಾದಿಗಳೇೞಿದರೆನಲಾವಂ (ಖ) ನೆಗೞ್ದಿನ್ನೀ ದೇವಾದಿಗಳೇೞಿದರೆನಲಾವಂ (ಗ) 3 ಸಮರ್ಥಂ (ಖ) 4 ಕುಲಕೆಂದೀವೊಡೆ (ಖ) 5 ಸಮಿಧಿ (ಗ) 6 ಮುನಿಗಳಭಿಮತರಾದರ್ ಭಾವಿಸೆ ನೀಂ ದೈತೇಯಂ ಶ್ರೀವರನಿಂದ್ರಾದಿಮುನಿಗಳಿಂ ವಿಶ್ರುತನೈ (ಕಗ)

ದೇವತ್ರಯಾದ್ಯನಪ್ಪಾ
ದೇವಜ್ಯೇಷ್ಠಂ ಸ್ವನಾಭಿಕಮಳಭವಂ ಮಾ
ದೇವಂ ದ್ವಿತೀಯನೆನಿಪೀ
ದೇವಂ ಶ್ರೀವಾಸುದೇವನರ್ಘ್ಯನಮೋಘಂ ೨೭

ಅಮಲಯದುವಂಶನಿರೆ ದು
ಷ್ಟಮನ ಮಹಾ[1]ವಂಶನೆಂಬೆ ನೀನೇತಱಿಂನ
ಗ್ಗವೆ[1] ಕಲ್ಪವೃಕ್ಷಮಿರೆ ಕ
ಳ್ಳಿ ಮಹಾವೃಕ್ಷಂ ಗಡನಿತಱಿಂದದು ಪಿರಿದೇ ೨೮

ಬೂದಿಯೆ ವಿಭೂತಿಯಾದಂ
ತಾದ್ಯೆ ನೀಂ ಪೂರ್ವದೇವನಾ [2]ನಾಮದೆ[2] ಪೆಂ
ಪಾದಪುದೆ ನಿನಗೆ ವಸ್ತುಗು
ಣೋದಯವಿಲ್ಲದೊಡೆ ನಾಮಧಾರಕನಲ್ತೇ ೨೯

ಹರಿಗಂ ನಿನಗಂ ಹರಿಗಂ
ಹರಿಣಂಗಂ [3]ಹರಿಗಮುಡುಗಮಂತರಮೆಂತಂ
ತಿರೆ[3] ಹಸ್ತಿಮಶಕಪರ್ವತ
ಪರಮಾಣುಸಮುದ್ರಶೀಕರಾಂತರಮಲ್ತೇ ೩೦

ವ|| [4]ಎಂದು ಚೇದಿರಾಜನಂ[4] ನುಡಿಯೆ

ಕಂ|| ಪಂಚಮಹಾಶಬ್ದಂ ದಿ
ಕ್ಸಂಚಯಮಂ ತೀವೆ ಯಮಜನಾಜ್ಞೆಯಿನಿತ್ತಂ
ಕಾಂಚನಭಾಜನದಿಂ ನ
ಕ್ತಂಚರರಿಪುಗಗ್ರಪೂಜೆಯಂ ಸಹದೇವಂ ೩೧

ವ|| ಅದಂ ಕಂಡು

---

1 ವಂಶನೆಂದು ನೀನೇತಱಿಂನಗ್ಗಮೆ (ಕಗ) ವಂಶನೆಂಬೆ ನೀನೇತಱಿಂನೊಳ್ಪಮ (ಖ) 2 ನಾಮದ (ಖ) 3 ಹರಿಗಮುಡುಗಮೊರೆಯಿಡಲೆಂತಂತರ (ಗ) 4 ಎಂದು ಧರ್ಮರಾಜಂ ಚೇದಿ ರಾಜನಂ (ಕಖಗ)

ಉ॥ ದಾರುಣಕೋಪವಹ್ನಿ ವಿಕಟಭ್ರುಕಟೀಕೃತಧೂಮಲೇಖೆ ದಂ
ಷ್ಟ್ರಾರುಚಿವಿಸ್ಫುಲಿಂಗನಿವಹಂ ರಸನಾಶಿಖಿ ದಳ್ಳಿಸಲ್ ಜಗ
ನ್ಮಾರಣಹೋಮಕುಂಡಮೆನೆ ತುಂಡ[1]ಗುಹಾಂತರವುರ್ಬಿಸಲ್ಕೆ[1] ದು
ರ್ವಾರಕಠೋರವಾಕ್ಚಟಚಟತ್ಕೃತಮುತ್ಕಟಮಾಯ್ತು ಚೈದ್ಯನಾ ೩೨

ನಿಂದಿಸಿ ಧರ್ಮಜಪ್ರಮುಖರಂ ಮುಖರಂ ಮುಖರಂಧ್ರ ಘೋಷನಿಂ
ತೆಂದನದಿರ್ಪುವೆಂ ಪ್ರಬಳನಂ ಬಳನಂ ಬಳನಂ ಬಳಾರಿ ಗೆ
ಲ್ದಂದದಿನಾ ಕೃತಾಂತಶರಣಂ ಶರಣಂ ಶರಣಂ [2]ಮುರಾರಿಗಾ
ರಿಂದರಿವೆಂ[2] ವಿರೋಧಿಗಳಮಂ ಗಳಮಂಗಳಮಂ ನೆಗಟ್ಬುವೆಂ ೩೩

ಕಂ॥ ಭುವನಾಪಹಾಸ್ಯಮೆನಲ
ರ್ಣವದೊಳ್ ನೀಂ ಮತ್ಸ್ಯನಾಗಲಾನಂದು ಸಮು
ದ್ಭವಿಸಿದೆನಪ್ಪೊಡದಂ ಗಾ
ಣವಿಕ್ಕಿ ಪಿಡಿದೆನ್ನ ಬಾಣಸಕ್ಕೊಪ್ಪಿಸೆನೇ ೩೪

ನೀನಾದಿಕೂರ್ಮನಾದಂ
ದಾನೞ್ದೊಡೆ ಪಿಡಿದು ತಂದದಂ ಮತ್ಕ್ರೀಡೋ
ದ್ಯಾನಸರೋವರಸಲಿಲ
ಸ್ಥಾನದೊಳಿರಿಸುವ ವಿನೋದದೊಳ್ ತೊಡರ್ದಿರ್ಪೆನೇ ೩೫

ನೀಂ ಪೆಸರ ಪಂದಿಯಾದಂ
ದಾಂ ಪುಟ್ಟಿದೆನಪ್ಪೊಡಂದೆ ಬೇಂಟೆಯ ನೆವದಿಂ
ದಂ ಪಿಡಿದು ತಂದು ಪಂದಿಗ
ಲಂಪಿಂ ಸಂಬರಮನೞ್ತಯಿಸದೆ ಮಾಣ್ದಪೆನೇ ೩೬

ನಗೆಗೆಡೆಯಾಗಿರೆ ಸಿಂಗದ
ಮೊಗಮಂ ಧರಿಯಿಸಿ ನಿಶಾಟನಂ ನೀಂ ಕೊಂದೈ
ಪಗರಣಿಗರಲ್ಲದುೞಿದರ್
ಮೊಗಮಂ [3]ಪೆೞತೊಂದನೆಂತುಮೇಂ[3] ಧರಿಯಿಪರೇ ೩೭

---

[1] ಗುಹಾಂತರವರ್ಬಿಸಲ್ಕೆ (ಕಗ) [2] ಮುರಾರಿಗಾನಿಂದರಿವೆಂ (ಕಗ) [3] ಪೆೞತೊಂದನೆಂ
ದುಮೇಂ (ಗ)

ಭೂಚಕ್ರದಾನಮುಂ ವೈ
ರೋಚನನೊಳ್ ಬೇಡುವಂದು ನಿನ್ನೊಳ್ ತನುಸಂ
ಕೋಚಂ ಸಮನಿಸಿತುಚಿತಂ
ಯಾಚನೆಯೊಳ್ ನೆಗೞ್ದಾರ್ಗೆ ತನುಸಂಕೋಚಂ ೩೮

ದ್ವಿಜನೇಗೆಯುದ್ಧಮನಥ್ಯಂ
ತ್ರಿ[1]ಜಗದೊಳಂ[1] ನೆಗೞ್ದು ಜಾಮದಗ್ನ್ಯಾಕೃತಿಯಿಂ
ವಿಜಿಗೀಷು[2]ನೃಪರನಿಕ್ಕಿದೆ
ಭುಜಬಲವೇಂ ಜಾತಿಬಲಮೆ ಮೆಚ್ಚುವರದನಾರ್[2] ೩೯

ಪಾಣ್ಬನೆಳೆದುಯ್ಯೆ ನಿನ್ನ ಕು
ಟುಂಬಿನಿಯ ಕಾದೆಯಿಲ್ಲ ರಾಮಾಕೃತಿಯಿಂ
ನೀಂ ಬೞಿಕ [3]ವಾಯುಪುತ್ರಕ
ನಿಂಬೞಿತೆಯ್ದಲ್ಕೆ[3] ಪಗೆಯನಿಕ್ಕುವುದರಿದೇ ೪೦

ಉ|| ಕೋಗಿಲೆ [4]ಕಾಗೆ ಯುಂ[4]ಪೊರೆದ ಕಾರಣದಿಂ ಪರಪುಟ್ಟನಾದವೋ
ಲಾಗದ ಜಾತಿ ಗೋವಳಿತಿ ರಕ್ಷಿಸೆ ನೀಂ ಪರ[5]ಪುಟ್ಟನಾದೆ ನೋ
ಡೀಗಳಿದರ್ಕೆ[5] ನಿನ್ನ ತನುಕಾರ್ಷ್ಣ್ಯಮೇ ಸೂಚಕಮಲ್ಲವೇ ಮಹಾ
ಯಾಗದೊಳಗ್ರಪೂಜೆಗೆ ವಿಜಾತಿ [6]ಕರಾಗ್ರಮನೆಂತು[6] ನೀಡುವೈ ೪೧

ಕಂ|| ಸಾಸಿಗನೈ ಹರಿ ನೀಂ ಪೆ
ಣ್ಗೂಸಂ ವಧಿಯಿಸಿದೆ ಪಶುವನೞಿದೈ ಮತ್ತಾ
ದೋಸಕ್ಕೆ ಹೇಸದೀಗ ಮ
ಹಾಸಭೆಯೊಳಗಗ್ರಪೂಜೆಗಗ್ರಣಿಯಾದೈ ೪೨

ಅದಟಲೆದದೊಂದು ಬಂಡಿಯ
ನೊದೆದೈ ಬೇಕೊರ್ಳದ ಮುೞ್ತಿಯಂ ನೀಂ ಕಿೞ್ತೈ
ಕುದುರೆಯನೋವದೆ ಸೀಳ್ದೈ
ಮುದಗೞ್ತಿಯನಿಟ್ಟು ಕೆಡಪಿದೈ ಒಲ್ಲಿದನೈ ೪೩

---

1 ಜಗದೊಳೇಂ (ಕಗ) 2 ನೃಪರನಿಕ್ಕಿದೆ ಭುಜಬಲವೋ ಜಾತಿಬಲರದಂ ಮೆಚ್ಚುವರೇ (ಕಗ) 3 ವಾಯುಪುತ್ರಕನಿಂಬರಿಕೆಯಲ್ಕೆ (ಕಗ) ಪಾಯ್ದು ತತ್ಖಲನಂಬರಿತ್ತೈದಲ್ಕೆ (ಖ) 4 ಕಾಗೆಯಿಂ (ಕಖ) 5 ಪುಟ್ಟನಾದೆಯಂತೀಗಳದರ್ಕೆ (ಖ) 6 ಕರಾಗ್ರಮನೇಕೆ (ಕಗ)

ಕೆಱೆ ನೆಱೆ ನೀರ್ ತವುತರೆ[1] ಬಱಿ
ಗೆಱೆಯಾದುವು[1] ತೊಱೆಗಳುರ್ಕುಗೆಟ್ಟುಱತು ಬಯ
ಲ್ದೊಱೆಯಾದುವು ಬಾಂದೊಱೆ [2]ಬಿಸು
ಡೊಱೆಯಾದುದು[2] ಕಾಲವಶಮದೇನಾಗಿಸದೋ ೧೬

ತಿಳಿದೊದವೆ ಮುಂದೆ ಮುಂದಿದೆ
ಜಲವೆಂದೆಂದೆಯ್ದುತಂ ಬಿಸಿಲ್ಗುದುರೆಯನಂ
ದಳವೞಿದುವು ಕಾಲ್ಗುಂದಿದು
ಮೊಳವಾಯಿಂ ಕರಿಸೆಯುಗುೞ್ದುವೆಯ್ದೆ ಮೃಗಂಗಳ್ ೧೭

ತೆಗಳಿಗೆವಿರ್ದೊಡಲುಂ ನಾ
ಲಗೆಗಿತ್ತರೆಬಱೆತ ಬಾಯುಮುೞ್ದೆಗಣ್ಬೀ
ಡುಗಳುಂ ತಾಱುವ ತಾಳ್ಗಳು
ಮಗುರ್ವಿಸಲ್ ಕಾಡಕೋಣನೆಯ್ದಿದುದೞಲಂ ೧೮

ಬಿಸಿಲೞುರೆ ಬಿಱಿದ ಬಿದುವಿಂ
ನಸುದೋಱುವ ರಕ್ತಸಿಕ್ತಮುಕ್ತಾಫಲಮಂ
ರಸದಾಳಿಂಬದ ಬಿೞ್ತಂ
ದೊಸೆದು ಕರ್ದುಂಕುವುದು ಶುಕಕುಳಂ ಮದಗಜದಾ ೧೯

ಎಸೆವೆಮ್ಮೆಮ್ಮಥಿನಾಮದೆ
ಪೆಸರ್ವೆತ್ತರ್ ದಿವಿಜಸತಿಯರೆನಲೆಮ್ಮೊಳ್ಪಿಂ
ನಸದಳವೆಂದು ಬೆಡಂಗಂ
ಪಸರಿಸುವಂತಿರ್ದುವಲರ್ದ ಪೊಂದಾವರೆಗಳ್ ೨೦

ಉಱೆ ಕಾವ ಸೂರ್ಯರಶ್ಮಿಗೆ
ಮೊಱೆಯಿಡಲೆಂದೆತ್ತಿ ಪಿಡಿದ ತೊವಲೆಂಬಿನೆಗಂ
ತುಱುಗಿರ್ದಾವರೆಗೊಂಬಂ
ಮುಱಿದು ನೆೞಲ್ಮಾಡಿಕೊಂಡು ನಡೆವರ್ ಪಥಿಕರ್ ೨೧

---

1 ಬಱಿಗೆಱೆಯಾದುವು (ಕಖಗ) 2 ಬಿಸಿಲ್ದೊಱೆಯಾದುದು (ಕಗ)

ಎಳನೇಸರೇಱಿತ್ತ [1]ನಟನ
ಗ್ಗಳಗಣ್ಣರಿಯಾಲಿ[1]ಯೆನಿಸಿ ನೆಲಸಿತ್ತು ದವಾ
ನಳಭೀಷ್ಮಂ [2]ತಪ್ತಾಧ್ವಗ[2]
ಕುಲವೇಷ್ಮಂ ಪ್ರಬಲಪಾರ್ಥಿವೋಷ್ಮಂ ಗ್ರೀಷ್ಮಂ ೭೨

ಮ॥ಸ್ರ॥ ಒಲೆಗಳ್ವೋಲ್ಕಾಯ್ದು ಪೆಂಟೆಂದಿಗಿಭದ ಬಿದುಗಳ್ ಕಾಯ್ದ ಕರ್ಬೊನ್ನ ಪೆರ್ಗಾ
ವಲಿವೋಲಾಯ್ತಾ ನೆಲಂ [3]ಸಿಂಪಳಿಯು[3] ನೆರೆದವೊಲ್ಕಾಯ್ದು ಚುಯ್ಯೆಂದುವೇೞುಂ
ಕುಲಪಾರಾವಾರಮೀ ಬೇಸಗೆಯ ಬಿಸಿಲೊಳಿನ್ನೆಂದಿರ್ದೇಕಾರ್ಣವಂ ಭೂ
ತಲಸಚ್ಚಂ [illegible]ಱಿಸನಲ್ ಪರ್ವಿದು[4]ದತಿಶಯದುದಗ್ಲಾನಿದಾಘಂ[4] ನಿದಾಘಂ ೭೩

ಕಂ॥ ಉರಿವರಿವ ಬಿಸಿಲ ಬೆಂಕಿಯ
ಭರದೆ ಮಱಲ್ದಿಂಟೆ ಕಾಯ್ದು ಸಿಡಿಯುತ್ತಿರೆ ಪಂ
ಕರುಹಭವಾಂಡದ ಹಂಚಿನ
ಹುರಿಗಡಲೆವೊಲೊಡೆದು ಪಾಱಿದುವು ಬೆಟ್ಟಂಗಳ್ ೭೪

ಚಂ॥ ಅಳುರ್ವ ನಿದಾಘದಿಂ ತ್ರಿಭುವನಂ ನೆಱೆ ನಿರ್ಜಲಮಾದೊಡೀ ಕಮಂ
ಡಲುಜಲಸೇವೆಯಿಂ ತೃಷೆಯನಾಱಿಪೆನೆಂದರವಿಂದಜಂ ಕಮಂ
ಡಲುವಿನೊಳಂದು ಬಯ್ತು ಪಿಡಿದಾ ಜಲವಿಂದುಪಕಾರಿಯಾಯ್ತೆಲೇ
ತಿಳಿದೆನಿದೊಂದನೆಂದೊಡೆ ನಿದಾಘದ ದಾಹಮನೇನನೆಂದಪೆಂ ೭೫

ಜಲನಿಧಿತಲ್ಪನುಂ ಜಲರುಹೋದರನುಂ ಜಲಜಾತನೇತ್ರನುಂ
ಜಲಧಿಸುತೇಶನುಂ ಜಲದವರ್ಣನುಮೆಂಬುದನೀ ನಿದಾಘಮುಂ
ಕಳೆಯಲೆ ಪಣ್ಣಿಕೊಂಡನಸುರಾರಿವೊಲಾವನನಾಗತಜ್ಞನೆಂ
ದಿಳೆ ನುಡಿವಂತು ಪೆರ್ಚಿಸಿಲೊಳರ್ಚಿಸಿತುರ್ಬಿ ನಿದಾಘಮುರ್ಬಿಯೊಳ್ ೭೬

ಹಿಮಕರನಂ ತುಱುಂಬಿ ಹಿಮವಾರಿಯ ಗಂಗೆಯನಿಟ್ಟು ಜೂಟದೊಳ್
ಹಿಮಗಿರಿಪುತ್ರಿಯಂ ಮುದದೊಳಪ್ಪಿ ಹಿಮಾಂಗದ ನಾಗಮಂಡನೌ
ಘಮನೊಸೆದಾಂತು [5]ತಾಪಹರಮಪ್ಪುದನೀಶನುದರ್ಕದರ್ಶಿ[5] ಮು
ನ್ನಮೆ ಸಮಕಟ್ಟಿಕೊಂಡನೆನೆ ಬೇಸಗೆ ಬೇಸಱಿಸಿತ್ತು ಲೋಕಮಂ ೭೭

---

1 ವಿಟನಗ್ಗಳಗಣ್ಮರಿಯಾಲಿ (ಖ) 2 ತಪ್ತಾಧ್ವರ (ಖ) 3 ಸಂಪಣೆಯ (ಕಖಗ) ಸಿಂಪಿಣೆಯ (ಮೊಅ) 4 ಅತಿಶಯದಾಜ್ಞಾನಿದಾಘಂ (ಖ) ಅತಿಶಯದೃಗ್ಲಾನಿದಾಘಂ (ಮೊಅ) 5 ತಾಪಹರಮಪ್ಪಿನಮೀಶನುದಗ್ರದರ್ಶಿ (ಖ)

ರವಿ ತುಹಿನಾದ್ರಿಯತ್ತೆಳಸಿಯುಂ ಮೃಗಮೊಂದು ಹಿಮಾಂಶುಬಿಂಬಮ
ಧ್ಯಮನೆಡೆಗೊಂಡುಮನ್ಯಗತಿಶೂನ್ಯನಿಭಾನನನಾತ್ಮಜಾತರಾಂ
ಬುಜನೆ ನಿರಂತರಂ ತೆಗೆದು ಹಸ್ತದಿನೀಂಟೆಯುಮಂಗತಾಪಮಂ
ತವಿಕುಮೆ [1]ರೌದ್ರಮೀ ಬಿಸಿಲೆನಲ್ ಬಿಸಿಲಟ್ಟಿದು[1]ದಧ್ವಗರ್ಕಳಂ ೭೮

ತರುಣಿಯರಲ್ಲಿಗಲ್ಲಿಗಱವಟ್ಟಿಗೆಯೊಳ್ ಕಡುಗೋಡುಮೆತ್ತ ಕ
ಣ್ಗರಗಮನೆತ್ತಿ ನೀರೆಱೆಯೆ ಸಾಲ್ವುದೆನಲ್ ನೆರೆದಾದಮೀಂಟುತುಂ
ಬರೆ ಬಿಸಿಲಟ್ಟಿ ಕೊಳ್ವೆಸಕದಿಂ ಬಿಸಿನೀರ ತಡಂಗದಂದದಿಂ
ದಿರೆ ಬಸಿಱತ್ತು ಬಾಯೊಣಗೆ ಪಾಂಥಜನಂ ನಡೆಯಿತ್ತು ಮಾರ್ಗದೊಳ್ ೭೯

ಮ|| ಬಿಸುಪಂ ಪಚ್ಚಡ ಮುತ್ತೆ ಮುತ್ತೆ ಸರಸಶ್ರೀಖಂಡದಣ್ಪೆಯ್ದೆ ಖಂ
ಡಿಸೆ ಘರ್ಮಾಂಬುವನಾಂತ ಮಲ್ಲಿಗೆ ಕರಂ ತಮ್ಮಲ್ಲಿಗೊಳ್ಗಂಪನೆ
ಯ್ದಿಸೆ ಸಾರೋದಯಮಾಗೆ ಸಾರಘನಸಾರಂ ತಂಬುಲಂ ಚಪ್ಪರಂ
ಬಿಸಿಲಂ ಚಪ್ಪರಿಸಲ್ಕೆ ಭೋಗಿಜನಮಿರ್ಕುಂ ಭೋಗದಾಣಂಗಳೊಳ್ ೮೦

ಮ||ಸ್ರ|| ಲತಿಕಾಮೂಲಪ್ರಸೂನಂ ಕನಕಕಲಶಮುಕ್ತಾಕ್ಷತಂ ದರ್ಪಣಾಗ್ರ
ದ್ಯುತಿಪುಂಜಂ ಮುಗ್ಧ[2]ಚಂದ್ರಾಮೃತಕಳಿಕೆಯೆನಲ್[2] ಕಾಂತಕಕ್ಷೋದ್ಘನೋರೋ
ಜತಟೀ ಚಂಚತ್ಕಪೋಲ ಸ್ಫುರಿತನಿಟಿಲ ಘರ್ಮಾಂಬು ಜಿಲ್ವಾಗೆ ಸೋಂಕಿಂ
ಸತಿಯರ್ ಕರ್ಪೂರಪಾಳೀಕೃತಸತಿಯರೆನಲ್ ನಲ್ಲರೊಳ್ [3]ತಣ್ಪುದಂದರ್[3] ೮೧

ಚಂ|| ಅಸದಳದಿಂಪು ಕಂಪು ಕಡೆಯಾಣಿಯ ಪೊನ್ನ ಸರಕ್ಕೆ ಕೂಡಿದಂ
ತೆಸೆವುದಿದರ್ಕದೇನುರುವದೊರ್ಮಡಿಗಿರ್ಮಡಿಬಂದೊಡಂ ಸುಧಾ
ರಸಮೆನೆ ತೀವಿದೊಳ್ರಸದ ಮಾವಿನ ಪಣ್ಗಳನಿರ್ತಳಂಗಳಿಂ
ಪೊಸೆದೆರ್ದೆಯಾಱೆ ಪೀರ್ದಮದುರ್ವೀರ್ದವರಂ ನಗುಗುಂ ಜಗಜ್ಜನಂ ೮೨

ವ|| ಅಂತು ನಿದಾಘಸಮಯಂ ಭೋಗಿಜನಮನೋಹರಮಾಗಿ ವರ್ತಿಸುತ್ತಿರ್ದುದು ಅತ್ತಲೊಂದು ಶೋಣಿತನಾಮನಗರದೊಳ್

ಮ|| ಬಲಿದೈತ್ಯೇಂದ್ರತನೂಜನೆಂಬೆಸಕದಿಂ ಭೂಭಾರಧೌರೇಯನೆಂ
ಬಳವಿಂ ಭೂರಿಭುಜಾಸಹಸ್ರಯುತನೆಂಬಾಟೋಪದಿಂ ನಿರ್ಜಿತಾ
ಖಿಳದಿಕ್ಪಾಲಕನೆಂಬ ಶೌರ್ಯದಿನವಂ ಗೌರೀಶರಕ್ಷಾನಿರ
ರ್ಗಳನೆಂಬುನ್ನತಿಯಿಂದಜೇಯನೆನಿಸಿರ್ಪಂ ಬಾಣದೈತ್ಯಾಧಿಪಂ ೮೩

---

[1] ರೌದ್ರಮೀ ಬಿಸಿಲುಮೆರ್ಬಿಸಿಪರ್ಬಿದು (ಖ) [2] ಚಂದ್ರಾತಪಕಳಿಕೆಯೆನಲ್ (ಕಗ)
[3] ತಣ್ಪುವೆತ್ತರ್ (ಖ)

ಸ್ರ॥ ವಾರ್ಧಿಕ್ರೋಡಾವಗೂಢಂ ಹರಿ ಬಡಗೊರವಂ ಸಂಟನೀ ಯಾವಿ:ನೀಸಾ
ಥಾರ್ಥಪ್ರೋತ್ತಂಸನೆಂಬೊಂ [1]ಮುಃದುಪಸಜನಿವಂ ಚಿಃ ಕೃಪಾಪಾತ್ರನಿಲ್ಲಿಂ[1]
[2]ಸ್ಪರ್ಧೌರೇಯರ್ಕಳಿಂದ್ರಾದಿಗಳೆ ದೊರೆಯೆ ತಾವೆಂದು ಬಾಣಂ ಕರಂ ತಾಂ[2]
ನಿರ್ಧೂತಾರಾತಿದೋರ್ಗರ್ವದ ಮದದೊದವಿಂ ನಿಜ್ಜಲಿಂ ಪೆರ್ಚಿ ನಿಲ್ವಂ ೮೪

ಉ॥ ವಾಸವನಾದಿಯಾಗೆಡುತೋಳವರುಂ ಮೊದಲಾಗಿ ಕಾದುವರ್
ಸಾಸಿರತೋಳ್ಗಳುಳ್ಳೆನಗೆ ಕಾಳೆಗಮಿಲ್ಲಿನಿತೊಂದು ತೋಳ್ಗಳಂ
ದೇಸೆಗೆ ಪೊತ್ತೆನಲ್ಲದಿಱುವಂತಿರೆ ಪೊತ್ತೆನೆ ಪೇಱುವೆಂದು ಬಾ
ಣಾಸುರನಿಂತು ತನ್ನೊಡನೆ ಕಾದುವರಿಲ್ಲದುದರ್ಕೆ ಚಿಂತಿಪಂ ೮೫

ವ॥ ಮತ್ತಮಾ ವೀರೋತ್ತಮನಾಹವದೋಹಳಂ ಹೃದಯಪರಿತಾಪಮಂ ನೆಗಱ್ಚೆ ತನ್ನೊಳಿಂತೆಂದಂ

ಮ॥ ಧುರದೊಳ್ ವಜ್ರಮುಮುರ್ಚದೆನ್ನೊಡಲನುರ್ಚಲ್ತಕ್ಕಮೋಘಾಸ್ತ್ರಮು
ಳ್ಳರಿವೀರರ್ ದೊರೆಕೊಳ್ಗುಮೇ[3]ತರದಿನಸ್ತ್ರಾನೀಕವಿಂದುಳ್ಳೊಡಂ
ಬರಿದೆನ್ನಂಗದೊಳಾದ[3] ಪುಣ್ಗಳ ಗುಹಾದ್ವಾರಂಗಳೊಳ್ ಪೊಕ್ಕು ಪು
ಲ್ಮರುಳಿತ್ತಂ ನುಸುಳ್ದುರ್ಚಿ [4]ಪೋಪಿನಗ[4]ಮೆಂದಾಟೋಪದಿಂ ಕಾದುವಂ ೮೬

ಚಂ॥ ಕದನಮೊಡರ್ಚದೇಱ ಸವಿಗಾಣದ ಬಲ್ಪೆನಗೇವುದಸ್ತ್ರಪಾ
ತದೆ ಕಡಿವೆತ್ತ ಬಾಹುವನವುಂ ರಿಪುವೆಚ್ಚೆಱಿದಿಟ್ಟಕೈದುವೆ
ನ್ನುದರದೊಳೆಯ್ದೆ [5]ತಳ್ತಿಡಿದಿರಲ್[5] ಯಮರಾಜನ ಶಸ್ತ್ರಕೋಟಿ ತೀ
ವಿದ ನಡೆಮುಂದಸೆಂಬಿನೆಗಮಿರ್ಪೆನದೆಂದೊ ಮಹಾಜಿರಂಗದೊಳ್ ೮೭

ಬಳವದರಾತಿಹೇತಿ[6]ಪರಿಖಂಡಿತದೋಃಪರಿಖಂಡಮೆಂಬ[6] ಜೀ
ರ್ಕೊಳವಿಗಳಿಂದಮುಚ್ಚಳಿಪ ನೆತ್ತಱ ಕುಂಕುಮವಾರಿಯುಂ ದಿಶಾ
[7]ಲಳನೆಯರತ್ತ[7] ಸಿಂಪಿಸುತೆ ಸಿಂಪಿಣಿಯಾಡೆ ರಣೋರ್ವಿಯೆಂಬ ಪೂ
ಗೊಳನನದೆಂದೊ ವೀರರಸಪೂರದೆ ನಾಂ [8]ಕಡೆಗೋಡಿಪೋಗಿಪೆಂ[8] ೮೮

ವ॥ ಎಂದು ಬಾಣಾಸುರಂ ಸಂಗ್ರಾಮಕಾಮನಾಗಿ ತನ್ನುಪವನದೊಳ್ ಸನ್ನಿಹಿತನಾಗಿರ್ಪ ದರ್ಪಕವಿರೋಧಿಯಂ ನಾರಾಧಿಸಿ ನಿಜಮಯೂರ ಧ್ವಜಪತನೋತ್ಪಾತವಾ

---

[1] ಮುದುಪಸಜನವಧ್ವಂ ಕೃಪಾಪಾತ್ರನಿಲ್ಲಿಂ (ಖ) [2] ಸ್ಪರ್ಧಾಧೌರೇಯರಿಂದ್ರಾದಿಗಳೆನಗೆ ತೃಣಪ್ರಾಯರಂದಿಂತು ಬಾಣಂ (ಖ) [3] ತರದಿನಸ್ತ್ರಾನೀಕದಿಂದಂಧುರಂಪಿರಿದೆನ್ನಂಗದೊಳಾದ (ಕಗ) [4] ಪೋಪೆನಗ (ಕಗ) [5] ತಳ್ತಿಱಿದಿರಲ್ (ಕಗ) [6] ಪರಿಖಂಡಿತ ಖಂಡಸಹಸ್ರಮೆಂಬ (ಕಗ) [7] ಲಲನೆಯರೊತ್ತಿ (ಕಗ) [8] ಕಡೆಗೋಡಿಯಾದಪೆಂ (ಕಗ)

ಪಾಪಂ ಪಿಡಿದನಿತಱಕೂಳೇಂ
ಪಾವಡಿಗರ್ ಸುಭಟರಪ್ಪರೇ ಜಗುಸೆಯು ನೀ
ವ್ಯಾಪಂ ಪಿಡಿದನಿತಱಕೂಳು
ವ್ಯೀಪಳಿಯುಂ ಸುಭಟನೆನ್ನುವೇ ಹರಿ ನಿನ್ನಂ ೪೪

ಏಱುವವೊಲ್ ಪುತ್ತ್ರಂ ನೀ
ನೇಱಿ ಜರಾಸಂಧಭಯದೆ ಗಿರಿದುರ್ಗಮನಾ
ತೂಱಲತುದಿಯೊಳ್ ಕೇದಗೆ
ಯೇಱಿದ ಕೋಡಗದೊಲಿರ್ದ ತೆಱನಂ ಮಱೆದೈ ೪೫

ಕಾಲಯವನಂಗೆ ಗರುಡನ
ಗಾಳಿಯ ಜವದಿಂದವೋಡಿ ಜಂಘಾಬಲಮಂ
ತ್ರೈಲೋಕ್ಯವಱಿಯೆ ತೋಱಿದೆ
ಕಾಳೆಗದೊಳ್ ತೋಱಲಾರ್ಪ ಬಾಹಾಬಲಮಂ ೪೬

ವ|| ಎಂದು ವಜ್ರಘೋಷಣನಿಷ್ಠುರಭೀಷಣಘೋಷದಿಂ ಚೇದಿನಾಥಂ ಜಗನ್ನಾಥನಂ ನಿರ್ದಾಟಿಸಿ ನುಡಿಯೆಯುಮಾ ಸಮಯದೊಳ್

ಮ|| ಸಮರಸ್ಥಾನವಿದಲ್ತು ಪಲ್ಲಣಿಸುವೀ ವಾಜಿವ್ರಜಂ ಪಣ್ಣುವೀ
ಸಮದೇಭಾವಳಿ ಪೂಡುವೀ ರಥಸಮೂಹಂ ಕೈದುಗೊಳ್ವೀ ಪದಾ
ತಮಿದೇಂ ಯಾದವಚೈದ್ಯಸೈನ್ಯಯುಗದೊಳ್ ಬೇಡೆಂದು [1]ಭೀಮಾರ್ಜುನ[1]
ಪ್ರಮುಖರ್ ಮಾಣಿಸೆ ಸೈನ್ಯಮಿರ್ದುದುಭಯಂ ನಿರ್ವಾತವಾರಾಶಿವೋಲ್ ೪೭

ವ|| ಆಗಳ್

ಕಂ|| ದಶನಾಂಶುಜಾಲತತಿಯಿಂ
ಶಿಶುಪಾಲನ ಜೀವಪವನನಂ ತೆಗೆವಂತ
ಬ್ಬಿಶಯಂ ಸಕೋಪ [2]ಹಸಿತಾ
ಸ್ಯಶತಚ್ಛದನಾಗಿ[2] ದಾನವಂಗಿಂತೆಂದಂ ೪೮

[3]ಎನಗೆ[3] ನಿಜಜನನಿ ಕೈಮುಗಿ
ದು ನೂಱುಸೂಳ್ವರಮುಪೇಂದ್ರ ಶಿಶುಪಾಲನ ಪೊ
ಲ್ಲನುಡಿಗೆ ಸೈರಿಪುದೆನಲುಂ
ದಿನ ಮಾತಂ ಸಲಿಸಲಿನ್ನೆಗಂ ಸೈರಿಸಿದೆಂ ೪೯

---

[1] ಭೀಷ್ಮಾರ್ಜುನ (ಕಗ) [2] ಹಸಿತಾಸ್ಯಶರಚ್ಛದನಾಗಿ (ಕಗ) ಹಸಿತಾಭ್ಯಸಿತಚ್ಛದನಾಗಿ (ಖ) [3] ದನುಜ (ಖ)

ತೀವಿದುದು ಶಪನಶತಮಿಂ
ತೀವಿದುದದಱೊಡನೆ ಚೈದ್ಯ ನಿನ್ನಾಯುಷ್ಯಂ
ತೀವುಗುಮಾಗಳೆ ನಿನ್ನ ವ
ಧೂಪರ್ಗದ ರೋದನಸ್ವನಂ ದಿಕ್ತಟದೊಳ್ ೫೦

ಮ॥ಸ್ರ॥ ಪೊದಲೊಳ್ [1]ನವಿಮ್ರರ್ಗಲಂ[1] ಕಾದುವೊಡೆ ತಡೆವುದೇಕನ್ನೆಗಂ ದ್ವಂದ್ವಸಂಗ್ರಾ
ಮದ ಕಾಲಕ್ಷೇಪಮುಂ ದುಸ್ಸಹಮೆನಗೆ ಜಯೋತ್ಕಂಠೆ ಕೈಮೀಱಿದತ್ತೆ
ನ್ನಿದಿರೊಳ್ ಱೊಡಾಡಿದೀ ನಾಲಗೆಯುಡುಗದ ಮುನ್ನಂ ಭವನ್ಮಸ್ತಕಚ್ಛೇ
ದದಗುರ್ವಂ [2]ತೋರ್ಪೆನೆಂದರ್ಘ್ಯದ[2] ತಳಿಗೆಗೆ ಕೈನೀಡಿದಂ ಕಂಜನಾಭಂ ೫೧

ಖರರೋಚಿರ್ಮಂಡಲಂ [3]ಬೇಱಿದೆ ಗಗನತಳಂ ಭಾಸ್ಕರಾಭಾಸ[3]ಮೆಂಬಂ
ತಿರೆ ಕೂರ್ಪಂ ತೋರ್ಪ [4]ಚಕ್ರಂ ದ್ಯುತಿಕಬಳಿತ[4] ದಿಕ್ಚಕ್ರಮುನ್ಮೀಲಿತೋಗ್ರಾ
ಸುರಚಕ್ರಂ ದೇವಕೀನಂದನನ ಕರಸರೋಜಾತದೊಳ್ ರಾಜಸೂಯಾ
ಧ್ವರ ಪೂಜಾಭಾಜನವ್ಯಾಜದೆ ನೆಲಸಿದುದಂತರ್ನಿಗೂಢಪ್ರಭಾವಂ ೫೨

ಕಂ। ನೀಂ ಬಯಸಿದಗ್ರಪೂಜೆಯ
ಪೊಂಬರಿಯಣಮಿದೆ ನಿಶಾಟ ಕೊಳ್ಳೆಂದು ಸರೋ
ಜಾಂಬಕನಿಡೆ ಶಿಶುಪಾಲಶಿ
ರಂಬೆರಸಂಬರತಳಕ್ಕೆ ನೆಗೆದುದಮುತ್ರಂ ೫೩

ಮಕುಡಮಣಿ ಸೊಡರ್ಗಳೆನೆ ಮ
ಸ್ತಕಸಹಿತಮೆ ನೆಗೆದು ತಿರುಗುವಾ ಪರಿಯಣಮೇಂ
ಪ್ರಕಟಿಸಿದುದೊ ಕೃಷ್ಣನ ವಿಜ
ಯಕಾಂತೆಗಾಕಾಶಲಕ್ಷ್ಮಿ ನಿವಳಿಪ [5]ತೇಜಮಂ[5] ೫೪

ಮ॥ ಶಿರಮಾಕಾಶತಳಕ್ಕೆ ಪಾಱಿತು ಗಳರಂಧ್ರೋದ್ದೇಶದಿಂ ಪಾಯ್ವ ನಿ
ರ್ಭರರಕ್ತೋನ್ಮುಖಧಾರೆ ವಾರಿಜಭವಾಂಡಕ್ಕೆಯ್ದಿ ತದ್ಬ್ರಹ್ಮವಿ
ಷ್ಟರಪದ್ಮಾರುಣನಾಳದಂಡಮೆನಿಸಿತ್ತಿತ್ತಟ್ಟಿ ಘೋಳಿಟ್ಟುಮು
ರ್ವರೆಯೊಳ್ ತೊಟ್ಟನೆ ಬಿಟ್ಟುಬೀಳ್ವ ತೇಜದಿಂ ಬಿಟ್ಟಿತ್ತು ಚೇದೀಶನಾ ೫೫

---

1 ನವಿಮ್ರಾ ಬಲಂ (ಖ) 2 ತೋರ್ಪೆನೆಂದಗ್ರದ (ಖ) 3 ಬೇಱಿರೆ ಗಗನಗತಂ ಭಾಸ್ಕರಾಭಾಸ (ಖ) 4 ಚಕ್ರದ್ಯುತಿಕಬಳಿತ (ಕಗ) ಚಕ್ರದ್ಯುತಿ ಪಸರಿಸೆ (ಖ) 5 ತೇಜದಿಂ (ಕಖಗ)

ಉ॥ ಬೆಂಬಲವಪ್ಪೆವೆಸ್ಕೃ ಶಿಶುಪಾಲಮಹೀಪತಿಗೆಂದು ಚಾತುರಂ
ಗಂ[1]ಬೆರಸಣ್ಮಿನೊಳ್ಪೆಸೆವಿನಂ[1] ಕಡುಬಿಂಕದ ವೇಣುಧಾರಿ ಸಾ
ಲ್ವಂ ಬಲಿಸೂನು ರುಕ್ಮಿ ರಣರಾಗದೆ ಬಿಲ್ವಿಡಿದಿರ್ದು ಕಂಡು [2]ಬಿ
ಲ್ಲುಂಬೆಱಗಾದರೊರ್ವರ್ದಲೆ[2] ಪಾಱುವುದುಂ ಶಿಶುಪಾಲನುಸ್ತಕಂ ೫೬

ಮ॥ ಕ್ರತುಪೂಜಾಮಣಿಪಾತ್ರದಿಂ ರಿಪುಶಿರೋವಿಚ್ಛೇದನಂಗೆಯ್ದ ನ
ಚ್ಯುತನಿಂ ಕೈದುಗೊಳಲ್ಕೆ ಜೀವಿಸುವನಾವಂ ಯಃಪಲಾಯಃಸಜೀ
ವತಿಯೆಂದೋಡುವ ತನ್ನ ಮೆಯ್ಯುದನಸೆನಿಪ್ಪಾ [3]ರುಕ್ಮಿಗಂ ಕ್ಷೋಣಿಧಾ
ಪತಿಗಳ್ಗಂ ಶ್ರುತಿಪೂರಮಾಯ್ತು ಜಯಭೇರೀನಾದಮಾ ಕೃಷ್ಣನಾ[3] ೫೭

ಚಂ॥ ಧರೆಗಮರಾಧ್ವದಿಂ ಕಡೆವ ಚೈದ್ಯನ ಮೂರ್ಧದ ರತ್ನಭಾಃ ಪರಂ
ಪರೆ ಕುಡಿಮಿಂಚಿನಂತೆಸೆಯೆ ನಾರದನೃತ್ಯಮೆ ಕೇಕಿನೃತ್ಯಮಾ
ಗಿರೆ ಜಯದುಂದುಭಿಧ್ವನಿ ಘನಧ್ವನಿಯಂ ಗೆಲೆ ಪುಷ್ಪವೃಷ್ಟಿಯುಂ
ಸುರಿದುದು ಧರ್ಮಜಂ [4]ಪುಳಕದಿಂ ಕಡವುಳ್ಕಲರ್ದಂತಿರಿರ್ಪಿನಂ[4] ೫೮

ವ॥ ಆ ಮಹಾವಿಜಯೋತ್ಸವದೊಳಾ ಯಮತನೂಜಂ ಸಮಯೋಚಿತ ವಾಕ್ಯಪೂಜೆಯೊಳಂ ದಿವ್ಯಾಂಬರಾಭರಣಪೂಜೆಯೊಳಂ ರಾಜೀವನೇತ್ರನಂ ಪೂಜಿಸಿ ಗೀತವಾದ್ಯಾದಿ ಮಂಗಳಾಚಾರಮುಂ [5]ನೆಗೞುತ್ತುಂ ಮತ್ತಂ[5]

ಉ॥ ಶೌರಿ ಭವತ್ಪ್ರಸಾದಲವದಿಂದೆ ಮುಮುಕ್ಷುಗೆ ಮೋಕ್ಷಲಕ್ಷ್ಮಿ ಸಂ
ಸಾರಿಗೆ ರಾಜ್ಯಲಕ್ಷ್ಮಿ ದೊರೆಕೊಳ್ವುದೆನಲ್ ನಿನಗಾವ ವಸ್ತುವುಂ
ತೀರದುದಿಲ್ಲವಾದೊಡಮಿವಂ ಜನರಂಜನೆಗಿತ್ತೆನೆಂದು ದೈ
ತ್ಯಾರಿಗೆ ಕೊಟ್ಟನುತ್ತಮ ಗಜಾಶ್ವರಥಾದಿಪದಾರ್ಥಸಾರ್ಥಮಂ ೫೯

ವ॥ ಅಂತು ವಸ್ತುವಾಹನಂಗಳಂ ಮನಂಗೊಂಡು ಕೈಕೊಂಡು ಪರಿಪೂರ್ಣಮನೋರಥಂ ರಥಾರೂಢನಾಗಿ ವಿಹಗೇಂದ್ರ ಪತಾಗನಿಂದ್ರಪ್ರಸ್ಥದಿಂ ಪೊಱಮಟ್ಟು ಪೊಱವೊಟಲೊಳ್ ಪಾಂಡವರನೆಂತಾನುಂ ಬೀೞ್ಕೊಳಿಸಿ ನಿಲಿಸಿ

---

1 ಬೆರಸಣ್ಮೆನೇರ್ಪೆಸೆವಿನಂ (ಕಗ) 2 ಕಂಡು ಬಿಲ್ಲುಂಬೆರಗಾದುದೊರ್ವರ್ದಲೆ (ಕ) ಕಂಡು ಬಿಲ್ಲುಂಬೆರಗಾದುದೊರ್ವರ್ದಲೆ (ಗ) ಬಲ್ಪು ಪಿಂಗಲ್ಪೆರಗಾದುದೊರ್ವರ್ದಲೆ (ಖ) 3 ತಚ್ಚಮೂಪತಿಗಳ್ಗಂ ಶ್ರುತಿಪೂರಮಾಯ್ತು ಭಯಭೇರೀಘೋಷಣಂ ಕೃಷ್ಣನಾ (ಕಗ) 4 ಪುಳಕದುಳ್ಕಲರ್ದಂ ಧರೆಯುಂತಿರಿರ್ಪಿನಂ (ಖ) 5 ನೆಗೞುತ್ತು ಮಿರೆ (ಕಗ)

ಮ॥ಸ್ರ॥ ಅವನೀನಾಥಪ್ರತಾನಂ ಪೆಱಗೆ ಸಕಲಸಾಮ್ರಾಜ್ಯಚಿಹ್ನೋತ್ಕರಂ ಮುಂ
ದವರೋಧಸ್ತ್ರೀಕದಂಬಂ ಕೆಲದೊಳತಿಬಲೋಚ್ಚಂಡಚಾತುರ್ಬಲಂ ಸು
ತ್ತುವನೂನೋತ್ಸಾಹದಿಂದಂ [1]ನಡೆಯೆ ನಡೆದು[1] ರಮ್ಯಪ್ರದೇಶಂಗಳೊಳ್ ಬೀ
ಡುವಿಡುತ್ತುಂ ಬಂದು ಪೊಕ್ಕಂ ನಿಜಪುರವರಮಂ ಮಂಗಳಾಚಾರದಿಂದಂ ೬೦

ವ॥ ಅಂತು ಪೊಕ್ಕು ರಾಜಭವನದೊಳ್ ವನಮಾಲಿ ಲೀಲೆಯಿಂದಿರ್ದನನ್ನೆಗಂ

ಕಂ॥ ಪರಿವ ಬಿಸಿಲ್ಗು ದುರೆಗಳೊ
ಪ್ಪಿರೆ ದವಧೂಮಧ್ವಜಂಗಳೆಸೆದಿರೆ ಬೇಱಿಱಂ
ದರಸು [2]ರವಿಗೆನೆ ನಿದಾಘದ[2]
ಬರವೆಸೆದತ್ತೆಸೆವಿನಂ ಪ್ರತಾಪಂ ಜಗದೊಳ್ ೬೧

ಉರಿವರಿವನರಸುತನದೊಳ್
ಪಿರಿದು ಖಳರ್ ಗಟಿಪುವಂತಿರೆಲೆಯಿಕ್ಕಿದ ಪೆ
ರ್ಮರಗಳಿಡಿದಡವಿಯೊಳದೇಂ
ಕೆರೆದುವೊ ಸೀರಂಡುಗಳುಡುಗದಿರುಳುಂ ಪಗಲುಂ ೬೨

[3]ತಾಱಲ್ಲಿರ್ದ[3] ಮರಂಗಳ
ತೂಱಲ ತುದಿಗೋಡೊಳಿರದೆ ಬುರುಲೆಗಳಡ್ಡಂ
ಬಾಱಿಂದುವಳ್ಳಿರ್ದೆ ಪಕ್ವನೆ
ಪಾಱಿ ಕುಳಿಲ್ ಪಾಱಿ ಪಥಿಕಜನಸಂತಾನಂ ೬೩

ಮ॥ಸ್ರ॥ ಕೆಸರುಬ್ಬುರ್ಜೇಟಿಱ ನೀರ್ಬೋಬ್ಬುಳಿಸಿ ಬುಳುಬುಳುಂದೇಂಕಿ ವೆಂಡೆಯ್ದಿ ಕಂಪಂ
ಪುಸಗುತ್ತುಂ ಬತ್ತೆ ನೆರ್ಪಂಬಡೆದರೆಗೆಱಿಯೊಳ್ ಬೀಡೆವೋಗಿರ್ದ ತಣ್ಣೀ
ರೊಸದಾರ್ಣಂ ಬಾವಿಗಾದತ್ತಸಿದು ಪರಿವ ಪೆರ್ಬಳ್ಳದಿರ್ವಕ್ಕದೊಳ್ [4]ನೀ
ರ್ದೆಸೆಯೊಳ್ ಸೇದಾಲಿಸುತ್ತಿರ್ದುದು[4] ಚಳಶಫರೀಕಾಲಕೂಟಂ ಬಕೋಟಂ ೬೪

ಕಂ॥ [5]ಮಸಗಿರ್ದ ಲೋಹಿತಾಶ್ವ[5]
ಪ್ರಸರಂ ಕಾಳ್ಗರಡವೆಲ್ಲಮಂ ಮೇಯೆ ರಸಾ
ರಸಮಂ ಗೋಪತಿ ತವೆ ಕುಡಿ
ಯಿಸಿದಂ ನಿಜಗೋಸಹಸ್ರಮಂ ಬೇಸಗೆಯೊಳ್ ೬೫

---

1 ನಡೆಯೆ ಪಡೆಸು (ಕಗ) 2 ರವಿಗೇಂ ನಿದಾಘದ (ಕಗ) ರವಿತನ್ನಿದಾಘದ (ಖ) 3 ತಾಱಿಲುದಿರ್ದ (ಖ) 4 ಮಿತ್ತೆಸೆದೊಂದಂ ಜಾನಿಸುತ್ತಿರ್ದುವು (ಕಗ) ನಿಲ್ತೊಸೆದೊಂದಂ ಜಾನಿಸುತ್ತಿರ್ದುವು (ಮೊಅ) 5 ಮಸಗಿದುವುಲೋಹಿತಾನ (ಖ)

ದೆಂದು ಮಹಾಹವಮುಪ್ಪುದೆಂದು ವರಂಬಡೆದು ಬಂದೊಂದು ಸಮಯಮೊಡ್ಡೋಲಗಂಗೊಟ್ಟಿರ್ದಲ್ಲಿ ಕುಂಭಾಂಡನೆಂಬ ಮಹಾಮಾತ್ಯಂ ದೈತ್ಯಪತಿಯ ಮೊಗಮಂ ನೋಡಿ

ಚಂ॥ ಮೃಡನೊಸೆದೀಯೆ ನೀಂ ಪಡೆದ [1]ವಸ್ತುವದಾವುದೊ[1] ದೈತ್ಯರಾಜ ನೀಂ
ಗಡಮಮರತ್ವಮಂ ಪಡೆದ ವಿಶ್ವಜಗತ್ರಿತಯಾಧಿಪತ್ಯಮಂ
ಪಡೆದ ಮಹಾಸ್ತ್ರಮಂ ಪಡೆದ ತಂದೆಗೆ ಬಂಧನಮೋಕ್ಷಮುಪ್ಪುದಂ
[2]ಪಡೆದ ದಿಟಕ್ಕೆ[2] ಪೇೞೆನೆ ದರಸ್ಮಿತನಾಗಿ ಬಲೀಂದ್ರನಂದನಂ ೮೯

ಎನಗಮರತ್ವಮುಂ ತ್ರಿಭುವನಾಧಿಪತಿತ್ವಮುಮುತ್ತಮಾಸ್ತ್ರಮುಂ
ಜನಕನ ಬಂಧಮೋಕ್ಷಣಮುಮೇಗಹನಂ ರಣಮೆಂಬ ವಸ್ತುವೊಂ
ದನೆ ಪಡೆಯಲ್ ಮನಂಬಯಸಿ ಪೂಜಿಸಿದೆಂ ಧೃತಕಾಲಕೂಟನಂ
ಮನಸಿಜಘಸ್ಮರಾಂಬಕಲಲಾಟನನುಗ್ರಫಣೀಂದ್ರಜೂಟನಂ ೯೦

ಮ॥ಸ್ರ॥ ವರವಿತ್ತಂ ಶಂಭು ದೇವಾಸುರಸಮರದ ರಾಮಾಯಣೋಗ್ರಾಹವಾಡಂ
ಬರದಂತಪ್ಪೊಂದು ಸಂಗ್ರಾಮಮನೆನಗೆನುತಂ ಪೇೞ್ದುತ್ಸಾಹದಿಂದಂ
ಶಿರದಿಂ ಮುಯ್ಯುದ್ಧಮಾಗುತ್ತಿರೆ ಪುಳಕಚಯಂ ಪೊಣ್ಮೆ ವಕ್ತ್ರಾಬ್ಜದಿಂ ವೀ
ರರಸಂ ತುಳ್ಕಾಡೆ ಬೇಱೊಂದೆಸಕದಿನೆಸೆದಂ ಬಾಣದೈತ್ಯಾಧಿನಾಥಂ ೯೧

ವ॥ ಆ ದೈತ್ಯವಂಶಭೂಷಣಂಗುಷಾದೇವಿಯೆಂಬ ಕನ್ಯಾರತ್ನಮುಂಟದೆಂತೆಂದೊಡೆ

ಮ॥ ಕುರುಳೊಳ್ ಕರ್ಪು ಕಟಾಕ್ಷದೊಳ್ ತರಳಭಾವಂ ಪುರ್ಬಿನೊಳ್ ವಿಭ್ರಮಂ
ಕೊರಲೊಳ್ ರೇಖೆ ಕಪೋಲದೊಳ್ ಪೊಳೆಪು ತೋಳೊಳ್ ಕೋಮಲತ್ವಂ ಪಯೋ
ಧರದೊಳ್ ತುಂಗತೆ ಮಧ್ಯದೊಳ್ ಕೃಶತೆ ಮೆಯ್ಯೊಳ್ ಮಾರ್ದವಂ ರಂಜಿಸು
ತ್ತಿರೆ [3]ಬಾಣಾತ್ಮಜೆಯೊಪ್ಪಿದಳ್ ಮದನತೇಜೋಮೂರ್ತಿಯೆಂಬಂದದಿಂ[3] ೯೨

ಚಂ॥ ಮದನನ ಕೈದು ಕೂರ್ಪನೊಳಕೊಂಡುದೊ ಕಾಮನ ಕಲ್ಪವಲ್ಲಿ ಪೂ
ತುದೊ ಕುಸುಮಾಸ್ತ್ರರಾಜನ ಜಯಧ್ವಜಪಟ್ಟಿಕೆ ಚಿತ್ರಿಸಿತ್ತೊ ಹೃ
ತ್ಸದನನ ಪುಷ್ಪಚಾಪಲತೆ [4]ಪೂಗಣೆಮೊಯ್ದುದೊ[4] ಕಂತುದಂತಿ ಪ
ಣ್ಣಿದುದೊ ದಿಟಕ್ಕೆನಲ್ ಬಲಿಸುತಾತ್ಮಜೆ ಯೌವನದಿಂದಮೊಪ್ಪಿದಳ್ ೯೩

[1] ವಸ್ತುವದೇವುದೊ (ಖ) [2] ಪಡೆಯದಿದೇಕೆ (ಖ) [3] ಬಾಣಾತ್ಮಜೆ ರಂಜಿಪಳ್ ಮದನತೇಜಂಮೂರ್ತಿಗೊಂಡಂದದಿಂ (ಕಗ) [4] ಪೂಗಣೆವಾಯ್ದುದೊ (ಖ)

ವ॥ ಅನ್ನೆಗಮಾ ಶೋಣಿತಪುರೋಪಾಂತದ ಗೋಮತೀನದಿಯ ಪರಿಸರಪ್ರದೇಶದೊಳ್

ಮ॥ ಕಳಹಂಸೌಘವಿಹಾರಹಾರಿ ಪುಳಿನಂ ಕಂಜಾತಕಿಂಜಲ್ಕಪಾ
ಟಳನೀರಂ ಕೊಳನುನ್ಮದಾಳಿಮಿಳಿತಂ ಪುಷ್ಪದ್ರುಮಂ ರತ್ನಮಾಂ
ಸಳಕೂಟಂ ಕೃತಕಾದ್ರಿ ದಂಪತಿಯುತಂ ವಲ್ಲೀಗೃಹಂ ಪುಷ್ಪಪೇ
ಶಳಗಂಧಂ ಪವನಂ [1]ಮನಂಗೊಳಿಸಲಿರ್ಕುಂ[1] ಶೂಲಿಲೀಲಾವನಂ ೯೪

ಮ॥ಸ್ರ॥ ಸುರಚೂಡಾರತ್ನ ಬಾಲಾತಪದೊಡನಮರೀನೇತ್ರಚಂದ್ರಾತಪಂ ತ
ಳ್ತಿರೆ ಚಂಚಚ್ಚಾಮರೌಘಾನಿಲದೊಡನೆ ಸಹಾಧ್ಯಾಯಿಮಂದಾನಿಲಂ ಕೂ
ಡಿರೆ ಸಂಗೀತಪ್ರಕೋಲಾಹಲದೊಡನೆ ಮರುದ್ವಂದಿಕೋಲಾಹಲಂ ಪೆ
ರ್ಚಿರೆ ಜೀಲ್ವಾದತ್ತುಮಾಪಲ್ಲಭನ ವನಮಹೀಮಧ್ಯದಾಸ್ಥಾನರಂಗಂ ೯೫

ಮ॥ ವಿಳಸದ್ದೇವಪಧೂಸಿಕಾಯುರಸಪದ್ಗೇಯಂ ಮರುದ್ವಾದ್ಯಮುಂ
ಜುಳನಾದಂ ಸುರಲಾಸಿಕಾಲಲಿತ[2]ವಾಸ್ಯಪ್ರಸ್ಖಲನ್ಮೇಖಲಾ[2]
ಕಳಮಂಜೀರಕಶಿಂಜಿತಂ ನೆಗೞ್ವಿನಂ ಗೌರೀಶಲೀಲಸಭಾ
ವಳಯಂ ಭೋರ್ಗರೆಯುತ್ತುಮಿರ್ದುದುನದತ್ಪೀಯೂಷವಾರಾಶಿವೋಲ್ ೯೬

ವ॥ ತದನಂತರಂ

ಚಂ॥ ಗಿರಿಜೆಯ ವೇಷಮಂ ತಳೆದುಮೋಶನ ಮುಂತಿರೆ ಚಿತ್ರಲೇಖೆ ತ
ತ್ಪುರಹರನಾಕೆಯಂ ಗಿರಿಜೆಯೆಂದು ಮನೋಮುದದಿಂ ನಿರೀಕ್ಷಿಸು
ತ್ತಿರಲದನಕ್ಕಜಿಂ ಗಿರಿಜೆ ಕಂಡು ನಿಜೇಶನ ಮುಗ್ಧಭಾವವ
ಲ್ಲರಿಗೆ [3]ನಿಜಾಪಹಾಸರುಚಿಯಿಂ ಪಡೆದಳ್ ಕುಸುಮಪ್ರತಾನಮಂ[3] ೯೭

ವ॥ ಅದಂ ಕಂಡು ಖಂಡೇಂದುಚೂಡಾಮಣಿಯ ಪಾರ್ಶ್ವದೊಳಿರ್ದ ಪಾರ್ಶ್ವವರ್ತಿಗಳಿಬ್ಬರ್

ಚಂ॥ ಗಿರಿಸುತೆ ಚುನ್ನವಾಡಿ ನಗುತಿರ್ದಪಳೀಶನ ಮುಗ್ಧವೃತ್ತಿಗೀ
ಗಿರಿಜೆಗೆ ಮುಗ್ಧಭಾವಮನೊಡರ್ಚುವವೆಂದಿರದೀಶಚಿಹ್ನಮಂ
ಧರಿಯಿಸಿ ನಿಂದರಂ ಪ್ರಮಥರೆಂದಱಿದದ್ರಿಜೆ ಸಸ್ಮಿತಾಸ್ಯೆಯಾ
ಗಿರಲೆಲೆ ದೇವಿ ಗೆಲ್ದಳೆನುತಂ ನಲಿದಾಡಿದುದಪ್ಸರೋಗಣಂ ೯೮

ವ॥ ಅಂತುಮಲ್ಲದೆಯುಂ

---

1 ಮನಂಗೊಳಿಸುತಿರ್ಕುಂ (ಕಗ) 2 ಲಾಸ್ಯಪ್ರೇಂಖಲಾಮೇಖಲಾ (ಗ) 3 ನಿಜೋಪಹಾಸರುಚಿಯಿಂ ಪಡೆದಳ್ ಕುಸುಮಾಸ್ತ್ರತಾಸಮಂ (ಕಗ)

ಕಂ॥ ಬನದೊಳ್ ಮೆಱೆಯುತ್ತಿರ್ದಂ
ಬಿನದಮನೋರಂತನೇಕವಿಧದಿಂದಗನಂ
ದನೆಗಭವಂ ನಿತ್ಯಾನಂ
ದನನಾನಂದಸ್ವರೂಪನಾನಂದಮಯಂ ೯೯

ವ॥ ಆ ಸಮಯದೊಳ್ ಕತಿಪಯ ಸಖೀಜನಸಮನ್ವಿತೆಯಾಗಿ

ಉ॥ ಕನ್ನೆಯಿನೀ ವನಕ್ಕೆ [1]ಮಧುಲಕ್ಷ್ಮಿಯಿನಾಗದ[1] ಲಕ್ಷ್ಮಿಯಾದುದೆಂ
ಬನ್ನೆವರಂ ವಿಳಾಸರಸದಿಂ ಪರಿವರ್ಧಿಸುತಂ ವನಾಳಿಯಂ
ತನ್ನ ವನಾಂತರಾಂತರದ ಕೆಟ್ತಿಲೆಯಂ ಬೆದಱಿಟ್ಟುತುಂ ವಿಲೋ
ಲನ್ನಯನಾಂಶುವಿಂ ದನುಜನಂದನೆ ಬಂದಳದೊಂದು ಲೀಲೆಯಿಂ ೧೦೦

ವ॥ ಅಂತಾ ಪ್ರದೇಶದೊಳ್

ಉ॥ ರಾಗದಿನಾಡುವೀ ಹರನ ರಾಗದ ಪೊಂಪುೞು ವಸ್ತ್ರದೊಂದು ರೂ
ಪಾಗಿಯೆ ನಿಂದುದೆಂಬರುಣವಸ್ತ್ರದಿನುಜ್ವಲದೇಹವಂದು ಚೆ
ಲ್ವಾಗಿರೆ ಸಾಂಧ್ಯಮೇಘಪಟಳೀಪರಿವೇಷ್ಟಿತರಾಜತಾಚಳಾ
ಭೋಗಮೆನಲ್ ವಿರಾಜಿಸುವ ಶಂಕರನಂ ಹರಿಣಾಕ್ಷಿ ನೋಡಿದಳ್ ೧೦೧

ವ॥ ಮತ್ತಮಲ್ಲಿ

ಮ॥ ಶಿತಿಕಂಠಂ ತನಗಟ್ಟಿಱಿಂ ಮೆಱೆವ ನಾನಾಕ್ರೀಡೆಯಂ ಕೂಡೆ ನೋ
ಡುತುಮಾನಂದರಸಾಮೃತಾರ್ಣವದೊಳೋಲಾಡುತ್ತುಮಿರ್ದಾಕುಭೃ
ತ್ಸುತೆಯಂ ಭಕ್ತಜನೈಕಕಲ್ಪಲತೆಯಂ ವೃಂದಾರಕವಾತ್ರವಂ
ದಿತೆಯಂ ಕಂಡಸುರೇಂದ್ರಕನ್ಯೆ ಕೆಲದೊಳ್ ಕುಳ್ಳಿರ್ದಳುತ್ಸಾಹದಿಂ ೧೦೨

ವ॥ ಅಂತುಮಾಕಾಂತೆಯಂತಿಕದೊಳ್ ಕುಳ್ಳಿರ್ದು

ಉ॥ ಇಂತು ನಿಜಪ್ರಿಯಂ ಮೆಱೆವ ಲೀಲೆಯನೀಕ್ಷಿಸುವೊಂದು ಸೈಪಸೆಂ
ದಾಂ ತಳೆದಪ್ಪೆನೆಂದುಷೆ ಮಹೇಶ್ವರಲೀಲೆಯನೀಕ್ಷಿಪದ್ರಿಜಾ
ಕಾಂತೆಯನೊಲ್ದು ನೋಡುವುದುಮಾಕೆಯ ನೋಡುವ ಪಾಂಗನೊಂದು ಪಾಂ
ಗಿಂ ತಿಳಿದಳ್ ತದದ್ರಿಸುತೆ ಕಾಂತೆ ಪರಾರ್ಥಿನಿಯಾದಳೆಂಬುದಂ ೧೦೩

ವ॥ ಅಂತು ಚಿತ್ತಜ್ಞೆ ಕುಭೃತ್ತನೂಜೆ ನಿರ್ನಿಮಿತ್ತಪ್ರಸಾದಾಭಿಮುಖಿಯಾಗಿ

1 ಮಧುಲಕ್ಷ್ಮಿಯಿನಗ್ಗದ (ಕಗ)

ಮ॥ಸ್ರ॥ ಅದಟೆಂದಾಕಾರದಿಂ ವೈಭವದಿನೆಸೆವ ಸವಂ ಸಾಟಿಯಲ್ತೀ ತ್ರಿಣೇತ್ರಂ
ಮದನಂ ದೇವೇಂದ್ರನೆಂಬಂತೆಸೆವಖಿಲಗುಣಾಲಂಕೃತಂ ಬಂದು ವೈಶಾ
ಖದ ಶುದ್ಧದ್ವಾದಶೀರಾತ್ರಿಯೊಳನುಭವಿಕುಂ ಕನ್ನೆ ನಿನ್ನೊಳ್ ಮನೋ[1]ರಾ
ಗದಿನೊರ್ವಂ ಸ್ವಪ್ನದೊಳ್ ತತ್ಸುಭಗನೆ ನಿನಗಕ್ಕುಂ[1] ವರಂ ಪೋಗವೋಘಂ ೧೦೪

ವ॥ ಎಂದು ವರಂಗೊಟ್ಟು ಕಳುಪೆ

ಕಂ॥ ಭುವನಾಂಬಿಕೆ ಕೊಟ್ಟೀ ವರ
ವವಿತಥವೆಂಬೊಂದು ಚಿತ್ರಲೇಖೆಯ ನಿನದಂ
ಕಿವಿಗೆಯ್ದೆ ಮೇಘಲೇಖೆಯು
ರವಮಂ ಕೇಳ್ದೊಂದು ಸೋಗೆಯಂತುಷೆ ನಲಿದಳ್ ೧೦೫

ವ॥ ಅಂತು ಸಂತೋಷದಿಂದುಷೆ ಪೊೞಲ್ಗೆ ವಂದು ತಂದೆಯ ರಾಜಮಂದಿರದೊಳಗಣ ತನ್ನ ಕನ್ನೆಮಾಡದೋವರಿಯೊಳೊಂದುದಿವಸಂ ಬೆಳ್ವಸದನಂಗೊಂಡು ಸುಖಸುಪ್ತೆಯಾಗಿರೆ

ಮ॥ಸ್ರ॥ ಲಳಿತಾಕಾರಂ ವಿಲಾಸಂ ವಿಭವವೆಸೆಯೆ ದಿಕ್ಚಕ್ರಮಂ ತೇಜದಿಂದಂ
ಬೆಳಗುತ್ತುಂ ಬಂದು ಬಾಣಾಸುರನರಮನೆಯಂ ಪೊಕ್ಕು ಹರ್ಮ್ಯಸ್ಥೆಯಾಗಿ
ರ್ದಳರೂಪಂ ಕಂಡು ಕನ್ಯಾವ್ರತವೞಿದಪುದೆಂದೊಲ್ಲದಂತೊಲ್ಮೆಯಂತೋ
ರ್ಪಳೊಳಾಗಳ್ ಕೂಡಿದಂ ಸ್ವಪ್ನದೊಳೆಸೆದನಿರುದ್ಧಂ ಮನೋರಾಗರುದ್ಧಂ ೧೦೬

ವ॥ ತದನಂತರಂ

ಮ॥ ಚಪಲಾಪಾಂಗೆ ಕುಮಾರಕಂ ನೆರೆದು ತನ್ನೊಳ್ ಪೋಗೆ ಮಾಣೆತ್ತವೋ
ದಪೆ ಮದ್ವಲ್ಲಭಯೆತ್ತವೋದಪೆಯೆನುತ್ತೆಚ್ಚತ್ತಿದೇನಾರನೆಂ
ದಪೆಯೆಂದಾಳಿಯರಾಳಿಗೊಂಡು ನಗಲೇವಂ ಕೆಟ್ಟುದೀ ಕನ್ಯಕಾ
ತಪವೆಂದಾ ಕನಸೆಂದೊಡಂ ನೆನೆನೆನುತ್ತಾಂತಳ್ ಮಹಾಚಿಂತೆಯಂ ೧೦೭

ವ॥ ಆ ಸಮಯದೊಳ್

ಮ॥ ಇವಳೀ ರೂಪಿವಳೀ ವಿಳಾಸಮಿವಳೀ ಚಲ್ವೆಂದಿನಂತಲ್ಲವಿಂ
ದಿವಳಂದಂ ಪೊಸತಾದುದೀ ತರುಣಿಯೊಳ್ ರೋಮೋದ್ಗಮಂ ಸ್ವೇದಬಿಂ
ದುವಪಾಂಗಾರುಣಿಮಂ ಘನೋರುಚಲನಂ ಪೇೞಿತೆಱಿಂದಾಯ್ತೊ ಚಿ
ತ್ರವೆನುತ್ತುಂ ಸಖಿಯರ್ ನಿರೀಕ್ಷಿಸಿದರಾ ಸಂಭೋಗಚಿಹ್ನಾಂಗಿಯಂ ೧೦೮

---

[1] ರಾಗದೆ ನೋಡಲ್ ಸ್ವಪ್ನದಿಂ ತತ್ಸುಭಗನವನೆನಿಕ್ಕುಂ (ಕಗ)

ವ॥ ಅಂತು ನೋಡುವ ಪೇಳದಾಳಿಯರ ಮೊಗಮಂ ನೋಡಿ

ಉ॥ ಎನ್ನಭಿಮಾನಮೆನ್ನ ಜಸಮೆನ್ನ ಕುಲೋನ್ನತಿ ಕೆಟ್ಟುದೆನ್ನೊಳೊ
ರ್ವನ್ನೆರೆದೀಗ ಪೋದನಿದು ಲೋಕವಿರುದ್ಧಮೆನುತ್ತೆ ಕಣ್ಣ ನೀ
ರನ್ನಳಿನಾಕ್ಷಿ ಸೂಸೆ ಕನಸಿಂ ನೆರೆದಿಂತಿದು ದೋಷಮಲ್ತು ನೀಂ
ಕನ್ನೆ ಸಬಾಷ್ಪೆಯಾಗಿರದಿರೆಂದುಷೆಯಂ ನುಡಿದರ್ ವಿದಗ್ಧೆಯರ್ ೧೦೯

ವ॥ ಆಗಳಾ ಕುಂಭಾಂಡನ ಮಗಳಪ್ಪ ಚಿತ್ರಲೇಖೆಯೆಂಬ ಕೆಳದಿ

ಮ॥ ನೆನೆ ನೀಂ ಚಿತ್ತದೊಳಾಂ ಜಲಕ್ಕನಱಿಡೆಂ ಸರ್ವರ್ತುಕೋದ್ಯಾನದೊಳ್
ನಿನಗೇನೆಂದುಮೆಯೆಂದಳೆಂದ ತೆಱದಿಂದಾ ಮಾಸಮಾ ಜೋನ್ನಮಾ
ದಿನಮಾ ರಾತ್ರಿಯುಮಾದುದಂತೆ ಕನಸಿಂ ನೀನೊರ್ವನೊಳ್ [1]ಕೂಡಿತಂ[1]
ವನಜಾತಾನನೆ ಕಂಡೆ ತಪ್ಪುಗುಮೆ ಗೌರೀವಾಕ್ಯಮೀ ಲೋಕದೊಳ್ ೧೧೦

ಕಂ॥ ಎನೆ ತತ್ಪ್ರಪಂಚಮಂ ಮಾ
ನಿನಿ ಮನದೊಳ್ ತಿಳಿದು ನೋಡಿ ಬಱಿಕಂ ನೆನೆದಳ್
ಕನಸಿಂ ನೆರೆದಾತನ ಯೌ
ವನ ರೂಪವಿಳಾಸವಿಭ್ರಮಂಗಳನೊಲವಿಂ ೧೧೧

ವ॥ ಅಂತು ನೆನೆನೆನೆದಂಗಜದಹನಪರಿತಾಪದುಜ್ಜುಗಂ ಲಜ್ಜಾರಸಮನಟ್ಟಾಡಿಸೆ ಕನ್ನೆ ತನ್ನೊಳಾತನಂ ತಂದು ನೆರೆಪುವುದೆಂದು ಚಿತ್ರಲೇಖೆಗೆ ನುಡಿಯಲಾಱದೆಯುಂ ದರಹಸಿತ ವದನೆಯಾಗಿ

ಕಂ॥ ಕನಸಿಂ ನೆರೆದವನಂ ನೀಂ
ನೆನಸಿಂ ನೆರೆದಪ್ಪೆನೆಂದು ತರವೇಳ್ದಪೆ ಕಾಂ
ತನನಘಟಿತಮಿದು ಬಗೆವೊಡೆ
ಕನಸಿನ ಬತ್ತಕ್ಕೆ ಗೋಣಿಯಾಂತವರೊಳರೇ ೧೧೨

ಆರ ಮಗನಾರ ಮೊಮ್ಮನ
ದಾರೊಡವುಟ್ಟಿದನದಾರ ಗೋತ್ರದವಂ ಪೇ
ೞಾರೊಳಗೆಂದಱಿಯದೆ ರತ
ಚೋರನನಾನೆಂತು ತಂದು ನೆರೆಪುವೆನಬಲೇ ೧೧೩

---

1 ಕೂಡಿದಂ (ಖ)

ವ॥ ಎಂಬುದುಮುಳುಂಬಮಾದ ವೇದನೆಯಿಂದನಸ್ಥಾಂತರಮುನೆಯ್ದುವ ರಮಣಿಯುಂ ಕಂಡು ಕರುಣಾರಸಾರ್ದ್ರಹೃದಯೆಯಾಗಿ

ಮ॥ ನರರಂ ಕಿನ್ನರರಂ ದನುಪ್ರಭವರಂ ದೈತೇಯರಂ ಯಕ್ಷರಂ
ಸುರರಂ ಕಿಂಪುರುಷರ್ಕಳಂ ಗರುಡರಂ ಗಂಧರ್ವರಂ ಸಿದ್ಧರಂ
ಬರೆದಾಂ ಸಪ್ತದಿನಕ್ಕೆ ಚಿತ್ರಪಟಮಂ ತಂದಪ್ಪೆನಂತಲ್ಲಿ ನೀಂ
ತರುಣೀ ನೋಡಿ ಬಳಿಕ್ಕೆ [1]ಪೇಟಿ ನಿಜದೊಳ್[1] ನಿನ್ನೋಪನಾರೆಂಬುದಂ ೧೧೪

ವ॥ ಎಂದುಷಾದೇವಿಯ ಮನಮುನಾಱಿಸಿ ಪೋಗಿ ಚಿತ್ರಲೇಖೆ ಚಿತ್ರಪಟಮಂ ಚಿತ್ರಲೇಖಮುನಮುರ್ಚಿ ತೀರ್ಚಿ

ಚಂ॥ ಸೊಗಯಿಸುತಿರ್ಪ ಚಂದ್ರಿಕೆ ಚಕೋರಿಗೆ ವಾಸರಲಕ್ಷ್ಮಿ ಚಕ್ರವಾ
ಕಿಗೆ ಘನಲೇಖೆ ಚಾದಗೆಗೆ ಬರ್ಪವೊಲೊಪ್ಪಿರೆ ಚಿತ್ರಲೇಖೆ ಕ
ನ್ಯೆಗೆ ನಲವೇಱಿ ನಿರ್ವಹಣಲೇಖೆಯುಲಕ್ಷ್ಮಕದಣ್ಕೆ ಪತ್ತಿ ಕೈ
ಯುಗುರ್ಗೆಸೆಯಲ್ ಸಚಿತ್ರಪಟಧಾರಿಣಿ ಬಂದಳತಿಪ್ರಮೋದದಿಂ ೧೧೫

*
ಕಂ॥ ವಸುಧೆಗೆ ಕೌತುಕರಸಮಂ
ಪಸರಿಸುತಂ ಚಿತ್ರಲೇಖೆ ಚಿತ್ರದ ಪಟಮಂ
ಪಸರಿದಳೊಡನೆ ಗಡಣಿಸಿ
ಪಸರಿಸುತಿರೆ ಬಾಣಸುತೆಯ ಕಣ್ಣುಂ ಮನಮುಂ ೧೧೬

ವ॥ ಅಗಳ್

ಮ॥ ಇನಿಸಂ ಪೋಲೆ ಸಮಸ್ತ ಜಾತಿಗಳ ರೂಪಂ ಚಿತ್ರಿಸಲ್ ವಿಶ್ವಕ
ರ್ಮನ ಮಾಂಡವ್ಯನ ಚೀರಘಟ್ಟಿಯಳವಲ್ಲೆಂದಟ್ಕಿಱಿಂ ಚಿನ್ನಪೂ
ವಿನ ಜೆಂಬೊನ್ನ ಮಯೂಖಲೇಖೆಗಳನಂತಾ[2]ಚಿತ್ರನಿರ್ವಾಹರೇ
ಖೆ[2] ನೆರಂಬೆತ್ತಿರೆ ನೋಡಿ ನೋಡಿ ತಲೆದೂಗಿತ್ತಂಗನಾಸಂಕುಲಂ ೧೧೭

ಚಂ॥ [3]ಪಡೆದಳಿದರ್ಕೆ[3] ಚೇತನಮನೀ ಮಧುನಲ್ಲದೊಡಿಂತೆ ಚಿತ್ರವಿಂ
ತೊಡನುಡಿವಂತೆ ನೋಟ್ಟವರ ಚೇಟ್ಟವರಂಗುಡುವಂತು [4]ಕೌತುಕಂ
ಬಡೆಗುಮೆ[4] ಪೇಱಿಮೆಂದುಷೆ ನಿರೀಕ್ಷಿಸಿದಳ್ ನಿಜಲೋಚನಾಂಶು ತ
ಳ್ತಡರೆ ದುಕೂಲಕಾಂಡಪಟವಾದುದು ಚಿತ್ರಪಟಕ್ಕಿದೆಂಬಿನಂ ೧೧೮

---

1 ಪೇಟಿನಿಬರೊಳ್ (ಕಗ) 2 ಚಿತ್ರನಿರ್ಮಾಣರೇಖೆ (ಖ) 3 ಪಡೆವಳಿವರ್ಕೆ (ಕ)
4 ಕೌತುಕಂಬಡುಗುಮೆ (ಕಗ) * ಅಂತು ಬಂದು ನಿಜಾನುಚರಿಯ ಕೈಯೊಳಿರ್ದ ಚಿತ್ರಪಟಮಂ ಕಳೆದುಕೊಂಡು ಎಂಬ ವಚನವು (ಕಗ) ಪ್ರತಿಗಳಲ್ಲಿ ಹೆಚ್ಚಾಗಿದೆ.

ಲಲಿತರಗಳೆ

ಚಿತ್ರಲೇಖೆಯು ಬರೆದ ಚಿತ್ರಪಟದೊಳ್ ನೆರೆದ
ಬಹುವಿದ್ಧತತಿಯಲ್ಲಿ ಪಾಹಿವಿನುತೆ ನೋಟ್ಪಲ್ಲಿ
ಸಾಧ್ಯರಂ ಧಿಕ್ಕರಿಸಿ ಸಿದ್ಧರನಧಃಕರಿಸಿ
ರಾಕ್ಷಸರನೀಕ್ಷಿಸದೆ ಯಕ್ಷರನಪೇಕ್ಷಿಸದೆ
ಗರುಡರಂ ಬಗೆಗೊಳ್ಳದುರಗರಂ ಕೈಕೊಳ್ಳ
ದಿವರಾದಿಯಾಗಿರ್ಪ ಭುವನಸಂಸ್ತುತರಪ್ಪ
ಖಚರಸಂತಾನದೊಳ್ ದ್ಯುಚರಪ್ರತಾನದೊಳ್
ಕನಸಿನೊಳ್ ಕಂಡನಂ [1]ಮನಮನೀಟಿಕ್ಕೊಂಡನಂ[1]
ಕಾಣದಜನಂ ಬೈದು ನಾಣಟಿದು ಬಿಸುಸುಯ್ದು
ಕಂಬನಿಯೊಳೋಲಾಡಿ ಬಂಬಳವೊಗಂ ಬಾಡಿ
ನೋವಿಂ ಕರಂ ಬಳಲಲೋವಿದೇಕೆಂದಟಿಲ
ಲಿತ್ತಿತ್ತ ನೋಡರಸಿ ಚಿತ್ತೋತ್ಸವಂಬೆರಸಿ
ಭೂಭುವನಭೂಪರಂ ಶೋಭಿತಸುರೂಪರಂ
ನೀನೆಂದು ಪೇಟಿ ಸಖಿ [2]ತಾ ನೋಡಿ[2] ಚಂದ್ರಮುಖಿ
ತತ್ಸಕಲಭೂಪರೊಳ್ ಹೃತ್ಸೇವ್ಯರೂಪರೊಳ್
ಚೋಳನಂ ಪಟಿಕೆಯ್ದು ಮಾಳವನನಿಟಿಕೆಯ್ದು
ಲಾಳನಂ ಟಿಕೋಡಾಡಿ ಗೌಳನಂ ಕೋಟಿಚಾಡಿ
ಪಾರಸಿಕನಂ ಪಟಿದು ಪಾರಿಯಾತ್ರನನುಟಿದು
ಹೂಣನಂ ಕೀಟ್ಪಡಿಸಿ ಬಾಣನಂ ಪಟಿಪಡಿಸಿ
ಮಗಧನಂ ಧಿಕ್ಕರಿಸಿ ಸಗರನಂ [3]ನ್ಯಕ್ಕರಿಸಿ[3]
ಪಾಂಡ್ಯನಂ ಪರಿಹರಿಸಿ ಪಾಂಡವರನರವರಿಸಿ
ಕುರುಕುಳರನತಿಗಳೆದು ಮರುಪತಿಯುನಸಕಳಿದು
ಪಲ್ಲವನನಲ್ಲೆಂದು ವೆಲ್ಲನಂ ಹೊಲ್ಲೆಂದು
ವಂಗನೊಳ್ ಬಗೆಯಿಲ್ಲದಂಗನೊಳ್ ಮನವೊಲ್ಲ
ದತಿಚಾಟುಕಾಟಿನಂ ರತರತ್ನಚೋರನಂ
ಭೂವಿನುತರೂಪನಂ ಭಾವಿಸುತ್ತೋಪನಂ
ಬಂದು ಚೆಲ್ವಾದವರನಿಂದುಕುಲಯಾದವರ
ನಿನಿಯನಂ ಪೋಲ್ತವರನಿನಿಸು ಬಗೆಸೋಲ್ತವರ
ನೊಲವಿನಿಂ ನೋಡುತ್ತೆ ನಲವಿನಿಂ ಕೂಡುತ್ತೆ

---

[1] ಮನಸಿನೊಳ್ಕೊಂಡನಂ (ಖ) [2] ತಾನೊಸೆದು (ಕಗ) [3] ದರವೆರಿಸಿ (ಕಖಗ)

ತಾಮರಸನಾಭನಂ ಶ್ಯಾಮಜಳದಾಭನಂ
ಪೀತಪಟಲೀಲಸಂ ಪೂತವನಮಾಲನಂ
ಕೌಸ್ತುಭವಿಭಾಸಿಯಂ ಭೂಸ್ತುತವಿಳಾಸಿಯಂ
ಪತಗೇಂದ್ರಪತ್ರನಂ ಶತಪತ್ರನೇತ್ರನಂ
ದೇವಾದಿದೇವನಂ ಶ್ರೀವಾಸುದೇವನಂ
ಪ್ರಿಯಶಂಕೆಯುಂ ತಂದು ನಯನಸುಖದಿಂ ನಿಂದು
ಕರನುಚ್ಚಳಿಸಿ ನೋಡಿ ಗುರುಬುದ್ಧಿಯಂ ಮಾಡಿ
ದನುಜಹರಪುತ್ರನಂ ಕನಕರುಚಿಗಾತ್ರನಂ
ಧೃತಮಕರಕೇತುವಂ [1]ನತಸೌಖ್ಯ ಹೇತುವಂ[1]
ಕುಸುಮಕೋದಂಡನಂ ಪ್ರಸವಮಯಕಾಂಡನಂ
ಪ್ರೋದ್ಯತ್ಪ್ರಭಾವನಂ ಪ್ರದ್ಯುಮ್ನದೇವನಂ
ರೂಪಸಾದೃಶ್ಯದಿಂ[2]ದೋಪನನವಶ್ಯದಿಂ[2]
ದಿವಸೆಂದು ರಾಗಿಸುತೆ ದಿವಿಜರಿಪು ರಾಜಸುತೆ
ರೋಮೋದ್ಗಮಂ ಪೊಣ್ಮೆ ಕಾಮಾಂಬು ಕೈಗಣ್ಮೆ
ಮತ್ತಂತೆ ನಡೆನೋಡಿ ಚಿತ್ತದೊಳ್ ತಡಮಾಡಿ
ಕನಸಿನೊಳ್ ನೆರೆದಂಗೆ [3]ತನುಮನವನೊರೆದಂಗೆ[3]
ಮಕರಕೇತನವಿಲ್ಲ ಮುಕುಲಮಾರ್ಗಣವಿಲ್ಲ
ತಪನೀಯರುಚಿಯಿಲ್ಲ ವಿಪುಲೇಕ್ಷುಧನುವಿಲ್ಲ
ನಿಜದಿಂದಮೆಸೆಪನವನಜಿತಪ್ರಭಾವನವ
ನಾಕಾಂತನಪ್ಪಾತನೀ ಕಂತುವೆಂಬಾತ
ನಪ್ಪನಲ್ಲೆಂಬುದಂ ತಪ್ಪದಱಿಪೆಂಬುದಂ
ಚಿಂತಿಸಿ [4]ನಿಜಾಂತರಂ[4] ಕಾಂತೆ ತದನಂತರಂ

*

ಮ॥ಸ್ರ॥ ಕನಸಿಂದೆನ್ನೊಳ್ ರತಕ್ರೀಡೆಯನೊಡರ್ಚಿಸಿದಾ[5] ಧೂರ್ತನೀಯೆರ್ದನೀಯಿ
ರ್ದನೆ[5] ಪೋಗಾ ಕಂತುವಲ್ಲೀ [6]ವಿಮಲ[6]ವಿಭವಮಾ ರೂಪಮಾ ತೇಜಮಾ ಯೌ
ವನಮಾ ಸೌಂದರ್ಯಮಾ ಸೌಷ್ಠವಮೆನುತನಿರುದ್ಧಸ್ಫುರದ್ವಿದ್ಧವಂ ಭೋಂ
ಕನೆ ಕಂಡಾ ಕನ್ನೆ ಲಜ್ಜಾಭಯರಸವಶದಿಂ ಸಂಚಲದ್ಗಾತ್ರೆಯಾದಳ್ ೧೧೯

---

[1] ನುತಶೌರ್ಯಹೇತುವಂ (ಕಗ) [2] ಓಪನನವಶ್ಯದಿಂ (ಕಗ) [3] ತನುಮನದಧೀಶಂಗೆ (ಕಗ) [4] ನಿರಂತರಂ (ಖ) [5] ಧೂರ್ತನೇ ಈತನೇ ಇರ್ದನೆ (ಖ) [6] ವಿಪುಲ (ಖ) * (ಕಖಗ) ಪುಸ್ತಕಗಳಲ್ಲಿಲ್ಲದ ಸ್ವಾಂತದ ಸೆಗಟಿತ್ತಿಯಿಂದಿಂತೆಂದಳಟ್ಟಿತ್ತಿಯಿಂ ಎಂಬೀ ಪಾದವು (ಮೊಲಿ) ಪ್ರತಿಯಲ್ಲಿ ಮದ್ರಾಸ್ ಪ್ರತಿಯಂತೆ ಹೆಚ್ಚಾಗಿ ಸೇರಿಸಲ್ಪಟ್ಟಿದೆ.

ವ॥ ಅದಲ್ಲದೆಯುಂ

ಚಂ॥ ಪಿಡಿದವುರ್ದ[1]ಪ್ಪಲೆಂದು ನಿಮಿರುತ್ತಿರೆ ದೋರ್ಲತೆವೋಲೆವಾಯಲೆಂ
ದೊಡರಿಸೆ ದೇಹವಿನ್ನೆಗವದೇಕೆಯೊ[1] ನಲ್ಲನೆ ರೂಪುದೋಱಲೆಂ
ದೊಡನುಡಿಯಲ್ಕೆ ತೇರಯಿಸೆ ನಾಲಗೆ ಪೆರ್ಚಿದಲಂಪಿನಿಂದಮಾ
ಗಡೆ ನೆರೆವಂತುಟಾಯ್ತುಷೆಗೆ [2]ನೊಟ್ಪು[2]ದುಮುಂದನಿರುದ್ಧವಿದ್ಧಮಂ ೧೨೦

ವ॥ ಅಂತಾ ಪೆರ್ಚಿದೌತ್ಸುಕ್ಯದಿಂ ಬಾಣಪುತ್ರಿ ಚಿತ್ರಲೇಖೆಯ ಮೊಗಮಂ ನೋಡಿ

ಕಂ॥ ಇಂತುಟು ಕುಲವಿಂತುಟು ಪೆಸ
ರಿಂತುಟು [3]ರೂಪೆನ್ನ[3] ವಲ್ಲಭಂಗೆಂಬಿನಿತಂ
ನೀಂ ತಿಳಿದೆ ಕೆಳದಿ ನಲ್ಲನ
ನೆಂತಾದೊಡಮಿಂದೆ ತಂದು ನೆರಪಲೆವೇೞ್ಕುಂ ೧೨೧

ವ॥ ಎಂದು ನುಡಿಯೆ ಚಿತ್ರಲೇಖೆ ಮತ್ತಮಾಕೆಯನಱಲಿಸುವ ಬಗೆಯಿಂದಿಂ
ತೆಂದಳ್

ಉ॥ ಕಣ್ಪರಿಗೆಟ್ಟು ಕಾಮನಿಸೆ ನಾಂಟುವ ಪೂಗಣೆಯಿಂ ಬಱಲ್ದು ನೀಂ
ಬಂಬಳಬಾಡಿದಪ್ಪೆ ದೊರೆಕೊಳ್ಳದ ವಸ್ತುಗಿದೇಕವಸ್ಥೆಯಿಂ
ಮಾಣ್ಬೆಸಜಾಕ್ಷಿ ಮುನ್ನ ಕನಸಿಂದಮೆ ಕಂಡನನೀಗ ಚಿತ್ರದೊಳ್
ಕಾಣ್ಬುದೆ ಸಾಲ್ವುದಾರಱಿನರೆತ್ತಣ ಚೆನ್ನಿಗನಾವನೆಂಬುದಂ ೧೨೨

ವ॥ ಎನೆ ಬಾಣನಂದನೆ

ಚಂ॥ ಅಱಲಿಸವೇಡ ನೀನಱಿವೆ ಕಾದಲನಿರ್ದೆಡೆಯಂ ದಿಟಕ್ಕೆ ನೀಂ
ತೊಱಲದ ಪಟ್ಟಣಂ ಪುಗದ ನಂದನಮೆಯ್ದದ ರಾಜಮಂಡಲಂ
ಸುಱಿಯದ ಲೋಕಮಾವುದು ತಳಾಮಳಕಂ ನಿನಗಬ್ಜಜಾಂಡವಾ
ರುಱಿದವರಿಂತು ನಿನ್ನ ತೆಱದಿಂ ಪಡೆದರ್ ಬಹುರೂಪವಿದ್ಯೆಯಂ ೧೨೩

ವ॥ ಎಂಬುದುಮುದರ್ಕೆ ಸಂತೋಷಂಬಟ್ಟು ನಿನ್ನ ಕಾಂತನನಿಂದೀಗಳೆ ತಂದು
ಕೂಡಿದಪೆನೆಂದಾಡಿಯಾ ಕನ್ನೆ ನೋಡೆ ನೆಲೆಮಾಡದ ಭೂಮಿಯಿಂದಾಕಾಶಕ್ಕೆ ನೆಗೆದು

---

[1] ತನುವಂ ನಿಮಿಱುತ್ತಿರೆ ಮೇಲೆವಾಯಲೆಂದೊಡರಿಸೆ ಹಮ್ಮಿನಿನ್ನೆವರಮೇಕೆಯೊ (ಕಗ)
ತನುವಮಂ ನಿಮಿಱುತ್ತಿರೆ ಮೇಲೆವಾಯಲೆಂದೊಡರಿಸಿ ಹಮ್ಮಿಂದುವರವೇಕೆಯೊ (ಮೊಅ)
[2] ತೋರ್ಪು (ಮೊಅ) [3] ಬಲವೆನ್ನ (ಖ)

ಮ॥ ಮಿಳಿರಲ್ ಪೇಱುದಿನಂಚಳಂ ಪೊಡರಲುತ್ತುಂಗಸ್ತನದ್ವಂದ್ವಮು
ಜ್ಜ್ವಳಿಸಲ್ ಪೇಲೆ ವಿಲೋಚನಾಂಶು ನಿಮಿರಲ್ ನೀಳಾಳಕೌಘಂ ಕಿಡಲ್
ನಳಿಗಳ್ ಪಿಂತಲೆಯೊಳ್ ಬಟಲ್ಕ್ರುಡಿಮಲುಂಗಲ್ ಕರ್ಣಪೂರಂ ವಿಯ
ತ್ತಳದೊಳ್ ಮಿಳ್ಳಿಸೆ ಚಿತ್ರಲೇಖೆ ನವವಿದ್ಯುಲ್ಲೇಖೆವೊಲ್ ಪಾರಿದಳ್ ೧೨೪

ವ॥ ಅಂತು ಪೋಗಿ ಮನೋವೇಗದಿಂ ದ್ವಾರಾವತಿಯನೆಯ್ದಿ ಕಮನೀಯ ಕೌಮುದಿಯೊಳೊಡ್ಡೋಲಗಂಗೊಟ್ಟು ನಿಜರಾಜಾಲಯದೊಳಿರ್ದನಿರುದ್ಧಕುಮಾರನಂ ಕಂಡಾ ಕುಮಾರನುಂ ಸ್ವಪ್ನಸಂಭೋಗದೊಳ್ ಬಾಣಸುತೆಯ ರೂಪಾತಿಶಯಕ್ಕೆ ಕೂರ್ತು ¹ವಿರಹಾರ್ತನಾಗಿರ್ದ¹ ಭಂಗಿಯನಿಂಗಿತದಿಂ ತಿಳಿದದೃಶ್ಯರೂಪದಿಂ ತಾರಾಪಥದಿಂದಿೞಿ ತಂದು ಮೆಲ್ಲನೆ ನುಡಿದೊಡಂಬಡಿಸಿ ನಿಜಾಂಸಪೀಠಮನೇಱಿಸಿ ವಿಯಚ್ಚರಲೀಲೆಯಿಂ ಪೆಚ್ಚರಂ ಮಗುಳೆಪಂದನಿರುದ್ಧನಂ ಉಷಾದೇವಿಯೊಳ್ ಗಾಂಧರ್ವವಿವಾಹದಿಂ ನೆರೆಪಲ್ ವಧೂವರರ್ ಕೇಳೀಗೃಹಾಂತರದೊಳ್ ಅತಿಸ್ವೈರದಿಂದಿರ್ಪುದುಮದಂ ಕನ್ಯಾಧ್ಯಕ್ಷನಱಿದು ಬಾಣಾಸುರಂಗೆ ಪೇೞ್ದ

ಮ॥ಸ್ರ॥ ಶರಧಿಪ್ರಸ್ಪರ್ಧಿಯಾದೀ ವಿಪುಲಪರಿಖೆಯಂ ದಾಂಟಿ ಮುಂ ದೇವದೈತ್ಯ
ಗಱಿದಾದೀ ಕೋಂಟೆಯಂ ಪೊಕ್ಕತುಳಪೃಥುಳಮುದ್ಬಾಹುಮಾಲಾರ್ಗಳಾತ್ಯ
ದ್ಧುರಮಾದೀ ರಾಜಗೇಹಾಂತರದುಷೆಯೊಳಿವಂ ಕೂಡಿದೀ ಕಾರ್ಯಯೋಗಂ
ಪಿರಿದೊಂದಾಶ್ಚರ್ಯಮೆಂದೆಂದಸುರಪತಿ ಮುಹುಃಕಂಪಕೋಟೀರನಾದಂ ೧೨೫

ಶಾ॥ ಅನ್ಯಾಯಂ ಕೊಡುಗೂಸಿನೊಳ್ ಕುಡದ ಮುನ್ನಂ ಬಂದು ಕೂಡಿರ್ಪುದಾ
²ಕನ್ಯಾಜಾರನ²ನೀಗಳಿಂತೆೞೆದು ತನ್ನಿ ಪೋಗಿಮೆಂದೆಂದು ಹ
ಸ್ತ್ಯಸ್ತ್ರಾಯುಧದೈತ್ಯವೀರಭಟರಂ ಬಾಣಾಸುರಂ ಪೇೞ್ದ ತ
ತ್ಸೈನ್ಯಂ ಸುತ್ತಿದುದೆಯ್ದೆ ಕೇಳಿಗೃಹಮಂ ಪ್ರೋತ್ತಾಳಕೋಳಾಹಳಂ ೧೨೬

ವ॥ ಆಗಳ್

ಮ॥ಸ್ರ॥ ಬೆಳವಾರ್ಗೆಯೊಳ್ ಬಾಯ್ ಘನೋರುದ್ವಯದೊಳುರುಘನೋರುದ್ವಯಂ ನೀಳ್ದ ತೋಳೊಳ್
ನಳಿತೋಳ್ಗಳ್ ಮುಯ್ವೊಳಾ ಮುಯ್ವುರದೊಳುರಸಿಜಂ ತಳ್ತಿರಲ್ ತಳ್ತುಷಾಕೋ
ಮಳೆಯೊಳ್ ³ನಾರೀವರಾತ್ಮಾಕೃತಿಯೆನೆ³ ಸುಖದಿಂದಿರ್ದ ದೈತೇಯಕೋಳಾ
ಹಳಮಂ ಕೇಳ್ದೋಪಳಪ್ಪಂ ಸಡಿಲಿಸಿ ನಡೆದಂ ಕಾದಲೇಕಾಂಗವೀರಂ ೧೨೭

ವ॥ ಅದಂ ಕಂಡು

---

¹ ವಿಷಯಾರ್ತನಾಗಿರ್ದ (ಕಗ) ² ಕನ್ಯಾಚೋರನ (ಕಗ) ³ ಕೂಡಿರ್ದನಾತ್ಮಾಕೃತಿಯೆನೆ (ಕಗ)

ಮ॥ ಇನಿಯಂ ಕೋಪಾಲಯೋಪನಾಗ್ರತರರೂಪರ್ ದೈತ್ಯರಾತ್ರೀಶನೊ
ರ್ಬನನೇಕರ್ ದಿತಿಜರ್ ನಿರಾಯುಧನಧೀಶಂ ಸಂಗೃಹೀತಾಯುಧರ್
ದನುಜರ್ ಮತ್ತ್ರಿಯನಿಂದು ದಾನವರನಾನಲ್ ಸಾಲ್ವೆನೆಂದು ಕಾಂ
ಬನನಾಳೋಕಿಸುತಿರ್ದಳಂದುಷೆ ಜಯಶ್ರೀ ನೋಡುತಿರ್ಪಂತೆವೋಲ್ ೧೨೮

ವ॥ ಆ ಸಮಯದೊಳ್ ರಣರಾಗದಿಂ ವಿಜೃಂಭಿಸುವ ತನ್ನ ಭುಜಬಲಮೆ ಬಲ
ಮಾಗೆಯುಂ ಗೆಲ್ವೆನೆಂಬ ಮನೋರಥಮೆ ರಥಮಾಗೆಯುಂ ವಜ್ರೋಪಮಾನಮೆನಿಸುವ
ತಳಪ್ರಹರಣಮೆ ನಿಜಪ್ರಹರಣಮಾಗೆಯುಮಿದಿರ್ಚಿ ಕಾದುವಲ್ಲಿ

ಚಂ॥ ಹತಭುಜಗರ್ವಮಾಗಿ ದೆಸೆಗೆಟ್ಟನಿರುದ್ಧ ತಳಪ್ರಹಾರದಿಂ
ದಿತಿಜಭಟೌಘಮೋಡಿದುದಗುರ್ವಿಪ ಸಿಂಹತಳಪ್ರಹಾರದಿಂ
ಚ್ಯುತಮದವಾಗಿ ವಾರಣಘಟಾತತಿ ತಾರ್ಕ್ಷ್ಯತಳಪ್ರಹಾರದಿಂ
ಗತವಿಷವಾಗಿ ನಾಗಕುಲಮುತ್ಕಟಭೀತಿಯಿನೋಡುವಂತೆವೋಲ್ ೧೨೯

ವ॥ ತದನಂತರಂ

ಕಂ॥ ಬಳಿಸೂನು ಸಹಸ್ರಭುಜಾ
ಬಳಗರ್ವದೆ ಷಷ್ಟಿಹಾಯನಂ ತುಂಗಗಜಂ
ಕಳಭಕ್ಕಿದಿರ್ಚಿದಂತಿರೆ
ಮುಳಿದು ಕುಮಾರಂಗಿದಿರ್ಚಿ ನಿಂದವಸರದೊಳ್ ೧೩೦

ಮ॥ಪ್ರ॥ ರಸೆಯಿಂದಂ ತೇರ ಮೇಗಣ್ಗೊಗೆದಸುರನ ಶಸ್ತ್ರಪ್ರಹಾರಂಗಳಂ ಬಂ
ಚಿಸುತುಂ ಬಾಹಾಸಹಸ್ರಾಟವಿಯೊಳವಿದು ದುರ್ಲಕ್ಷ್ಯನಾದಾಗಳಾ ರಾ
ಕ್ಷಸನೇವೋ ಗೆಲ್ದೆನೆಂದಾರ್ವುದುಮವನ ರಥಾಶ್ವಂಗಳಂ ಮುಷ್ಟಿಯಿಂ ಮ
ರ್ದಿಸುತುಂ ವಿದ್ಯಾಧರೇಂದ್ರಪ್ಲುತದಿನಿಳಿದನಾ ತೇರ ಮೇಲಿಂ ಕುಮಾರಂ ೧೩೧

ವ॥ ಅಂತು ಮನ್ಮಥಸೂನು ಬಲಿಸೂನುವಂ ವಿರಥನಂ ಮಾಡೆ ರಣದೊಳೀತಂಗಭಿ
ಮುಖನಾಗಿ [1]ಗೆಲ್ವುದರಿದೆಂದು[1] ನಭೋಂತರಕ್ಕೆ ನೆಗೆದು ಅಂತರ್ಹಿತಮೂರ್ತಿಯಾಗಿ
ಬಾಣಂ [2]ನಾಗಪಾಶದಿಂದನಿರುದ್ಧನಂ[2] ನಿರುದ್ಧನಂಮಾಡೆ

ಕಂ॥ ಮಾಯೆಯೊಳೆ ಗೆಲ್ದ ದಾನವ
ನಾಯಕನಂ ನಗುವ ಮದನಸುತನುಪಹಾಸ
ಚ್ಛಾಯೆ ಬೆಡಂಗಾಯ್ತು ಯಶ
ಶ್ಶ್ರೀಯ ಮನೋಹರಸಿತಪ್ರಸಾಧನ ರುಚಿವೋಲ್ ೧೩೨

[1] ನಿಲ್ವುದರಿದೆಂದು (ಕಗ) [2] ನಾಗಬಾಣವರ್ಷದಿಂದನಿರುದ್ಧನಂ (ಕಗ)

ವ॥ ಇತ್ತಲನ್ನೆಗಂ ದ್ವಾರಾವತಿಯೊಳನಿರುದ್ಧನಂ ಕಾಣೆವೆಂಬ ಕಳಕಳದ ಸಂಭ್ರಮಂ ನೆಗಱೆ

ಕಂ॥ ಸ್ಮರಸುತನಂತಃಪುರಸತಿ
ಯರ ಹಾಹಾವಿರುತಿ ಹೇಮಹರ್ಮ್ಯಾಗ್ರದೊಳು
ದ್ಧುರಮೊಗೆದತ್ತೊಗೆವಂತಿರೆ
[1]ಕುರರೀಕ್ರೇಂಕಾರಮರುಣಜಲಧರತತಿಯೊಳ್[1] ೧೩೩

ವ॥ ಮತ್ತಂ

ಕಂ॥ ಅನಿರುದ್ಧನಂತಪುರದಂ
ಗನೆಯರ ರೋದನರವಂ ಸುಧಾಗೃಹತತಿಯೊಳ್
ಜನಿಯಿಸಿದುದು ಧವಳಾಂಬುಜ
ವನದೊಳ್ ಪೆಣ್ಣಂಚೆಯಿಂಚರಂ ಪೊಣ್ಮುವವೋಲ್ ೧೩೪

ಯಾದವರಿದೇನಿದೇಂ ಭಯ
ವಾದುದಿದೆತ್ತಣ ನಿನದವೆನುತೆ ತಳರ್ದರ್ ಗೇ
ಹೋದರದಿಂ ಬಹುಶೈಲಗು
ಹೋದರದಿಂ ತಳರ್ವ ಸಿಂಹಸಂತತಿಗಳವೋಲ್ ೧೩೫

ವ॥ ಆ ಸಂಭ್ರಮಪರಂಪರೆಯೊಳ್ ಪರಮ[2]ಜ್ಞಾನರೂಪನಜ್ಞನಂತೆ[2] ವಿಭ್ರಾಂತನಾಗಿರ್ದನಂತರಂ

ಮ॥ಸ್ರ॥ ಅನಿರುದ್ಧವ್ಯಾಪ್ತಿಯಂ ನಾರದಮುನಿ [3]ತಿಳಿದೆಟ್ಟಿಂದವಷ್ಟಬ್ಧರತ್ನಾ
ಸನನಾದತ್ತಾರ್ಘ್ಯಪಾದ್ಯಂ[3] ದಶನರುಚಿಸುಧಾಸಾರದಿಂ ಯಾದವೋದ್ವೇ
ಗನಿದಾಘಂ ಪಿಂಗೆ ವೃತ್ತಾಂತವನಱಿಪುವುದುಂ ನೋಡಿದಂ ತಿರ್ಯಗಾಲೋ
ಕನನುದ್ಯಚ್ಚಕ್ರಮಂ ಸಂಗರಪಿಶುನವಿದೆಂಬನ್ನೆಗಂ ವಾರಿಜಾಕ್ಷಂ ೧೩೬

---

[1] ಕರಂಕ್ರೇಂಕಾರಚಾರುಜಲಧರತತಿಯೊಳ್ (ಕ) ಗಿರಿಯಗ್ರಸ್ಥಲದೊಳೊಗೆವಜಲಧರತತಿಯೊಳ್ (ಗ) ಗಿರಿಯಗ್ರಸ್ಥಲದೊಳೊಳರ್ವಜಲಧರವಿರುತಂ (ಮೊಅ) [2] ಜ್ಞಾನರೂಪಂ ರೂಪಜ್ಞನಂತೆ (ಕಗ) [3] ತಿಳಿದೆಟ್ಟಿಂದನಷ್ಟಬ್ಧರತ್ನಾಸನನಾದೇಯಾರ್ಘ್ಯಪಾದ್ಯಂ (ಕ) ತಿಳಿದೆಟ್ಟಿಂದವಷ್ಟಂಭ ರತ್ನಾಸನನಾಗೀರ್ಘ್ಯಪಾದ್ಯಂ (ಖ) ತಿಳಿದೆಟ್ಟಿಂದವಷ್ಟಂಭ ರತ್ನಾಸನನಾದೇಯಾರ್ಘ್ಯಪಾದ್ಯಂ (ಗ)

ಗದ್ಯ|| ಇದು ಸಮಸ್ತ ಕಮಲಭವಾಂಡಮಾಲಾಘಟೀಘಟಿತಾರಘಟ್ಟಘಟನಾಸ್ವತಂತ್ರ
ನಿಜಸ್ವರೂಪನಿರೂಪಣಚಕಿತಸಕಲಾಮ್ನಾಯತಂತ್ರಲಕ್ಷ್ಮೀಕಾಂತ
ಶ್ರೀಪಾದಭಕ್ತಿಯುಕ್ತಸುಕವೀಂದ್ರರುದ್ರಪ್ರಣೀತಶ್ರೀಜಗನ್ನಾಥ
ವಿಜಯಮಹಾಪ್ರಬಂಧದೊಳ್ ಶಿಶುಪಾಲವಧ ನಿದಾಘ
ಕಾಲವರ್ಣನ ಬಾಣಪುತ್ರೀಮದನಪುತ್ರಸಂಯೋಗ
ವರ್ಣನಂ ಸಪ್ತದಶಾಶ್ವಾಸಂ

ಅಷ್ಟಾದಶಾಶ್ವಾಸಂ

ಕಂ|| ಶ್ರೀಲೀಲಾಗೃಹತೋರಣ
ಬಾಲಾರುಣಕಿಸಲಯೌಘಮೆನೆ ವಕ್ಷದೊಳು
ನ್ಮೀಲಿಸೆ ಕೌಸ್ತುಭಮಣಿರು
ಗ್ಜಾಲಂ ವನಮಾಲಿ [1]ಸಿಂಹಪೀಠಮೊಳಿರ್ದಂ[1] ೧

ಚಂ|| ಬಲಿಸುತನೊಳ್ ಸಹಸ್ರಭುಜನೊಳ್ ಹರಪಾಲಿತನೊಳ್ ಮಹಾಚತು
ರ್ಬಲಯುತನೊಳ್ ಜಿತಾಖಿಲಜಗತ್ತ್ರಯನೊಳ್ ರಣಕೇಳಿಕಾಮನೊಳ್
ಕಲಹಮೊಡರ್ಚಿತೆಂಬ ನಲವೇಱಿರೆ ತಾರ್ಕ್ಷ್ಯನನಾಗಳೇಱಿದಂ
ಹಲಧರಪುಷ್ಪಧನ್ವರೊಡನೇಱಿ ವಿಜೃಂಭಿಸೆ ತೂರ್ಯನಿಸ್ವನಂ ೨

ವ|| [2]ಅಂತು ಸಮರೋಚಿತಪರಿಕರಸಮೇತಂ[2] ಖಗೇಂದ್ರನನೇಱುವುದುಂ ದ್ವಾರಾವತಿಗೆ ಬಾಣನಗರಮೇಕಾದಶಸಹಸ್ರಯೋಜನಾಂತರದೊಳಿರ್ಪುದೆಂಬುದಂ ಬಗೆದು ನೋಡುತ್ತುಂ ವೈಹಾಯಸೋಡ್ಡಾಯನರಭಸೋಡ್ಡಾಮರನಾಗಿ

ಮ||ಸ್ರ|| ಕ್ರಮಪಕ್ಷಕ್ಷೇಪವಿಕ್ಷೋಭದಿನಖಿಳಮಹೀಚಕ್ರಮಲ್ಲಾಡೆ ವಾರಾ
ಶಿ ಮರುನ್ಮಾರ್ಗಸ್ಥಳಕ್ಕುಚ್ಚಳಿಸೆ ಕುಲಗಿರಿಶ್ರೇಣಿ ಕಿಱ್ತೇಱಿ ತಾರಾ
[3]ಹಿಮರುಕ್ಚಂಡಾಂಶುಗಳ್ ಸಂಚಳಿಸೆ ತುಳುಂಕೆ[3] ತಾರಾಧ್ವಗಂಗಾಜಲಂ ಸ
ಪ್ತಮವಾಯುಸ್ಕಂಧದತ್ತಲ್ [4]ನೆಗೆದನಧರಿತ[4] ಸ್ವರ್ಗದೇಶಂ ಖಗೇಶಂ ೩

ವ|| ಅಂತತಿವೇಗದಿಂ ಪೋಗೆವೋಗೆ ಮುಂದೊಂದೆಡೆಯೊಳದೊಂದು ಪಿಶಂಗ ವರ್ಣಂ ನಿಜನಿಜಾಂಗವರ್ಣಮಂ ತಳ್ಪೊಯ್ಯಲಂತದನೇಕಕುಂಡಲಂ ಕಂಡು

---

1 ಸಿಂಹಪೀಠದಿನೆಟ್ಟಂ (ಖ) 2 ಅಂತುಸಮುಚಿತಜ್ಞಾನಸಮೇತಂ (ಕಗ) ಅಂತುಸಮುಚಿತಾಜ್ಞಾಸಮೇತಂ (ಮೊಅ) 3 ಹಿಮಕೃಚ್ಚಂಡಾಂಶುಗಳ್ ಸಂಚಲಿಸುತುದುರೆ (ಕಗ) 4 ತೆಗೆಯೆನಗರಿಪು (ಕ) ತೆಗೆಯಲಡರಿದಂ (ಗ)

ಉ॥ ಅಂಬುಜನಾಭ ನಮ್ಮ ನಯನಂಗಳನೊರ್ಮೆಯೆ ನಿನ್ನ ಯುದ್ಧರಾ
ಗಂ ಬಳಸಿತ್ತೊ ಕೌಸ್ತುಭವಿಭೂಷಣದೀಧಿತಿ ವೇಷ್ಟಿಸಿತ್ತೊ ಪೀ
ತಾಂಬರಕಾಂತಿ ಸುತ್ತಿದುದೊ ವಿಸ್ಮಯಮಾದಪುದೀಗಳೆತ್ತಣಿಂ
ಕೆಂಬೆಳಗಿಂತಿದಾವರಿಸಿದತ್ತೆನೆ ಕೇಳುತುಮಬ್ಜಲೋಚನಂ ೪

ವ॥ ಅಂತೆಯ್ದೆ ಬಂದು ಮೇಘಮಾರ್ಗವ್ಯಾಪ್ತಮಾದ ಮಾರ್ಗನಿರೋಧಕ್ಷ್ಮಾ
ಶುಶುಕ್ಷಣಿಯುಂ ಕಂಡು ಖಂಡಪರಶುವಿನಾಜ್ಞೆಯಿಂದಿದರ್ಾಹವನೀಯಾಭಿಧಾನಕ್ಕೆಡೆಯಾದ
ಪಾವಕನೆಂಬುದಂ ದೇವವ್ರತಿಯ ಪೇಳ್ಕೆಯಿಂ ತಿಳಿದಿಲ್ಲಿಗೆ ತಕ್ಕುಪಾಯಮಂ ವೈನತೇಯ
ನೀನೇ ಬಲ್ಲೆಯೆನೆ ವಿಹಂಗವಲ್ಲಭಂ

ಮ॥ ಬಿದಿ ಪದ್ಮೋದರಸಂಘ್ರಯುಂ ತೊಳೆಯೆ ಮುನ್ನಂ ಪುಟ್ಟಿಬಂದೀ ಮರು
ನ್ನದಿ ಲೋಕತ್ರಿತಯಂಗಳಂ ಮುಟುಗಿಸಲ್ಕಂಡಂತದಂ ಶಂಭು ಜೂ
ಟದೊಳಾಂತಂ ತಲೆಮುಟ್ಟಿ ತಾಳ್ವುದರಿದಲ್ತೆಂಬಂತೆ ತತ್ಸಿಂಧುಬಂ
ಧದ ನೀರೆಲ್ಲಮನೊಂದುಮುಕ್ಕುಳಿಳೊಳೆ ತಂದಾ ವಹ್ನಿಯಂ ತೂಳ್ದಿದಂ ೫

ವ॥ ಆ ಪ್ರದೇಶದಿಂ ಕೇಶಿಸೂದನಂ ನಡೆವುದುಂ ಬ್ರಹ್ಮಪುತ್ರಂ ದ್ವಿತ್ರಿಯೋಜನಾಂ
ತರದಲ್ಲಿ ನಿಲ್ಲಿಸಿ

ಮ॥ ಇದಿರೊಳ್ ತೋರ್ಪುದಿದಲ್ತೆ ಶೋಣಿತಪುರಂ ನೋಡೀ ಪುರೋದ್ಯಾನದೇ
ಶದೊಳಿರ್ಪಂ ತ್ರಿಪುರಾರಿಯುಂ ಗುಹನುಮೆಂದುಂ ಬಾಣರಕ್ಷಾರ್ಥಮೆಂ
ಬುದುಮಂತಾ ತ್ರಿಪುರಾರಿಯುಂ ಗುಹನುಮಂ ಪೋ ಗೆಲ್ವೆನೆಂದಾಜಿದ
ರ್ಪದ ಕೂರ್ಪೇರಿರೆ ಬೇಱದೊಂದೆಸಕಮಂ ಕೈಕೊಂಡನಬ್ಜೋದರಂ ೬

ವ॥ ತದನಂತರಂ

ಮ॥ ಉದಿತಾಶಾಪ್ರತಿನಾದದಿಂ ದಿಗಧಿಪರ್ ಬಾಣಾಸುರಂಗಾಭಿಚಾ
ರದ ಮಂತ್ರಕ್ರಿಯೆಯುಂ ನೆಗೞ್ಚುವವೊಲಿರ್ಪಂತಚ್ಯುತಂ ಯುದ್ಧಸ
ನ್ಮದದಿಂ ಪೂರಿಸೆ ಪಾಂಚಜನ್ಯಮನಜಾಂಡಂ ತನ್ಮಹಾನಾದದಿಂ
ಪುದಿದಂತಚ್ಚರಿಯಂ ನಿಮಿರ್ಚಿದುದು ನಾದಗ್ರಂಥಿಯೆಂಬಂತೆವೋಲ್ ೭

ಕಂ॥ ಉಡಿವಂತೆ ವಿಜಯುವಲ್ಲರಿ
ಯಡರ್ಪುದ್ ತದ್ಧ್ವನಿ ಪಳಂಚೆ ಕೇಕಿಧ್ವಜಮಂ
ಧುಡಿದುದು ಸಹಸ್ರಭುಜನನ
ದುಡಿಪಕ್ಕಿದು ಸಂಚಕರಮೆನಲ್ ಬಲಿಸುತನಾ ೮

ತನ್ನಾದಹತಿಗೆ ಜೂಟದ
ಪನ್ನಗಪತಿ ಸುಗಿಯೆ ತುಳುಕೆ ಗಂಗಾಂಬು ಮಹೀ
ಭೃನ್ನಂದನೆ ಬೆದಱೆ ಹರಂ
ಗನ್ನೆಗಟ್ಟಿತ್ತಧಿಕಸಂಭ್ರಮಂ ತತ್‌ಕ್ಷಣದೊಳ್ ೯

ವ॥ ಆಗಳಾ ಮಹಾನಾದಮಂ ಪಾಂಚಜನ್ಯನಾದಮೆಂದಱಿದು ಶರ್ವಂ ಪಾರ್ವತೀಸುತನಿರ್ವಿಶೇಷನಪ್ಪ ಬಾಣಂಬರಂ ಯುದ್ಧಮೇವುದೀಯೆಡೆಯೊಳೆ ವಾರಿಜಾಕ್ಷನಂ ನಿವಾರಿಪೆನೆಂದು ಗಿರಿವ್ರಜನಾಮಪಾವಕಪುರಸ್ಸರನಂಗಿರನೆಂಬಗ್ನಿರಾಜನುಮನಲ್ಲಿಂಪಿಂತೆ ನಂದಿಪ್ರಮುಖ ನಿಖಿಲಪ್ರಮಥಯೂಥಮನಲ್ಲಿಂ ಪೆಱಗೆ ಭೈಷಜ್ಯಕಾದಿಜ್ವರನುಮಂ ಬೆಸಸೆ

ಮ॥ ಇದಿರಾಂತಂಗಿರನಗ್ನಿರಾಜನಭಿಜನ್ಯಸ್ಯಂದನಂ ಬಂದು ಕೋ
ಪದಿನಾತ್ಮೀಯಕರತ್ರಿಶೂಲದಿನಿಡಲ್ ತಚ್ಛೂಲಮಂ ಮುಟ್ಟಿವ
ರ್ಪುದನಾಗಳ್ ಪೆಱೆಯಂಬಿನಿಂ ತಱಿದು ಕೃಷ್ಣಂ ಸ್ಥೂಲಕರ್ಣಾಗ್ರಬಾ
ಣದಿನೆಚ್ಚಾತನ ವಕ್ಷಮಂ ಮಡಿಪಿದಂ ಧೂಮಧ್ವಜಾಧೀಶನಂ ೧೦

ವ॥ ಅದಂ ಕಂಡು ಗಿರಿವ್ರಜಂ ಗುಹಾಂತರಮನೋಡಿ ಪುಗೆ ಬೞಿಕಂ

ಮ॥ಸ್ರ॥ ಇಳೆಯಂ ಕಿೞ್ತೆತ್ತಿ ಪಾಱಿಂಬಳೆದಿಱುಪುವ ಚಂದ್ರಾರ್ಕಬಿಂಬಂಗಳಂ ಸೂ
ೞೊಳೆ ತಾಳಂಗುಟ್ಟುವೇೞುಂ[1]ಕಡಲುಮನುರೆ[1] ತುಳ್ಕಾಡುವಾಶಾಗಜೇಂದ್ರಾ
ವಳಿಯಂ ಕೈಜಂತ್ರದಿಂ [2]ಪೋರಿಸು[2]ವುಡುಗಣಮಂ ಮಾಲೆಯಂ [3]ಕೋವ[3] ಹೇಮಾ
ಚಳಮಂ ಬಟ್ಟಾಡುವೀಶಪ್ರಮಥಸಮಿತಿ ಬಂದತ್ತು ಸಂರಂಭದಿಂದಂ ೧೧

ಮ॥ ವಿಕೃತಾಂಗತ್ ವಿಕೃತಾಯುಧರ್ ವಿಕೃತವೇಷರ್ ಪೂಣ್ಕೆಯಿಂ ದಾನವಾಂ
ತಕನೊಳ್ ತಳ್ತಿಱಿದೀಗಳೆಲ್ಲಿತನಿತೊಂದಾಳಾಪಮಾ ವೀರವೃ
ತ್ತಕಮಂತಪ್ಪೊದಮೆಂಬಿನಂ ಪ್ರಮಥರಂಗೋಪಾಂಗಸಂಛನ್ನ ಸಾ
ಯಕಪತ್ರಂಗಳೆಱಂಕೆಯಾಗೆ [4]ಡಿಸೆಬಿಬ್ದಂ ಪಾಱಿದರ್ ಬೇಗದಿಂ[4] ೧೨

ವ॥ ತದನಂತರಂ

ಮ॥ ಜವದಿಂ ಬಂದುದು ದಳ್ಳೆನುತ್ತುರಿವ ಮೆಯ್ಯುಂ ಧೂಮದುರ್ಬೆಂಬ ಜ
ರ್ಬುವ ಪುರ್ಬುಂ ಕುಡುದಾಡೆಗಳ್ ಪೊಳೆವ ಬಾಯುಂ ಕಣ್ಗ ಗುರ್ವಾಗೆ ಮೂ
ರಿವಿಡುತ್ತುಂ ತಿರುಗುತ್ತುಮಾಗುಱುಸುತುಂ ರೌದ್ರಜ್ವರಂ ತಪ್ತಹೇ
ಮವಿಭೂಷಂ ತ್ರಿಶಿರಂ ತ್ರಿಪಾದವರುಣಾಕ್ಷಂ ರೂಕ್ಷರಕ್ತಾಯುಧಂ ೧೩

---

[1] ಕಡಲನುರಿಯೆ (ಗ) [2] ಪೂರಿಸು (ಗ) [3] ಕೊಂಡು (ಗ) [4] ದೆಸೆವಿಟ್ಟಿರ್ ಪಾಱಿದರ್ ಭೀತಿಯಿಂ (ಖ)

ಜ್ವರನಾಟೋಪದೆ ಭಸ್ಮದಿಂದಿಡುವುದುಂ ಭಸ್ಮಂ ಬಳೋರಸ್ಸ್ಥಳಾಂ
ತರಮುಂ ತಾಗಿ ಸಿಡಿಲ್ದು ಪೋಗಿ ಸುರಭೂಭೃತ್ಕೂಟಮುಂ ತಾಗೆ ತ
ದ್ಗಿರಿಕೂಟಂ ಭುಗಿಲೆಂದು ಕೇಸುರಿಗಳಂ ಸೂಸುತ್ತೆ ಬಿದ್ದತ್ತಿದೇಂ
ಜ್ವರಭಸ್ಮಾಹತಿ ವಜ್ರಿಸಜ್ರಹತಿಯಿಂದತ್ಯಂತದುರ್ವಾರಮೋ ೧೪

ವ|| ಆಗಳ್

ಕಂ|| ಉರಿಯುತ್ತಿರ್ದಪೆನಾನೀ
ಜ್ವರಮೆನ್ನೊಳ್ ತಾಗೆ ಕೃಷ್ಣ ಕೃಷ್ಣ ಭಟಾಗ್ರೇ
ಸರ ಕೇಳೆಂಬ ನಿಜಾಗ್ರಜ
ನ ರವಂ ಕಿವಿಗೆಯ್ದೆ ಕರ್ಣಶೂಲಪ್ರಖ್ಯಂ ೧೫

ಚಂ|| ಎಲೆಲೆ ಬಿಡಸ್ಮದಗ್ರಜನನಿತ್ತಿದಿರಾಗಿದಿರಾಗೆನುತ್ತೆ ಮೂ
ದಲಿಸಿ ಗದಾಯುಧಂ ಕರೆಯೆ ಬಿಟ್ಟು ಹಲಾಯುಧನಂ ಹರಜ್ವರಂ
ಪ್ರಲಯಶಿಖಿಪ್ರಚಂಡವಿಡುತುಂ ಯಮುಘಸ್ಮರಭಸ್ಮದಿಂದುರ
ಸ್ಸ್ಥಲಮನಡುರ್ತು ತಾಗಿದುದಜೇಯನನಕ್ಷಯನಂ ಮುರಾರಿಯುಂ ೧೬

ವ|| ಅಂತು ತಾಗಿದ ಮಹೇಶ್ವರಜ್ವರಮುಂ ಕಂಡು ಕನಲ್ದು ಕಂಸಾರಿ ವೈಷ್ಣವ ಜ್ವರಮುಂ ಬಿಡಲಾ ವೈಷ್ಣವಜ್ವರಂ ಮಹೇಶ್ವರಜ್ವರದೊಳ್ ಕಾದಿ ಪಿಡಿದು ತಂದು ಮುಂದಿ ಟ್ಟಿಪೆ ದನುಜಾಂತಕನದಂ ಕೊಲಲುಜ್ಜುಗಂಗೆಯ್ದು

ಕಂ|| ಇದನಕಟ ಕೊಲ್ಲದಿರ್ ಕೊ
ಲ್ಲದಿರೆಂಬಶರೀರವಾಕ್ಯ[1]ವಿಷದಿಂದುರೆ[1] ಕೊ
ಲ್ಲದೆ ಕಾದಂ ಜ್ವರಮುಂ ಲೋ
ಕದೆ ಕೃತಮುಂ ಪರಮುಪಸ್ತುವಂ ವಿಭು ಕಿಡಿಸಂ ೧೭

ಶಾ|| ಪಿಂಗಾಕ್ಷಂ ನಿಜಕಿಂಕರಾಗ್ನಿ ಬಲತೇಜೋಭಂಗದಿಂ ಭ್ರೂಕುಟೀ
ಭಂಗಂ [2]ಸ್ವಪ್ರಮಥಾಪರಾಗದಿ[2]ನಪಾಂಗಾರಾಗವಾತ್ಮಜ್ವರೋ
ಗ್ರಾಂಗಸ್ಪಂದನದಿಂ ಪೊದಲ್ದಧರಬಿಂಬಸ್ಪಂದನಂ ಪೆರ್ಚುವ
ನ್ನಂ ಗೋವರ್ಧನನೊಳ್ ಕಱುತ್ತಿಱಿವ ಕೋಪಾಟೋಪಮುಂ ತಾಳ್ದಿದಂ ೧೮

ವ|| ಅಂತಪ್ರಮೇಯಪ್ರತಿಘಮುಂ ಕೈಕೊಂಡು

1 ವಿಷದಿಂ ಪರಿ (ಖಗ) 2 ಸ್ವಪ್ರಮಥಾಸ್ತ್ರರಾಗದಿ (ಗ)

ಮ॥ಸ್ರ॥ [1]ಧರೆಗಂ[1] ವ್ಯೋಮಕ್ಕಮೆಂಟುಂದೆಸೆಗಮಡಸಿ ತೂಂಕಿಟ್ಟವೋಲ್ ಭೂತಸೈನ್ಯಂ
ಬರೆ ಬಂದಂ ಲೋಕಮಂ ಸಂಹರಿಪ ಪದದೊಳಿಂತಪ್ಪ ರೌದ್ರಸ್ವರೂಪಂ
ಹರನೊಳ್ ಮುನ್ನಿಲ್ಲೆನಲ್ ತಾವರೆಯೆಲೆಯ ಪಯೋಬಿಂದುವೆಂಬಂತೆ ಶಂಕಾ
ಭರದಿಂ ಬ್ರಹ್ಮಾಂಡಭಾಂಡಂ ನಡುಗೆ ಸಮರಸಂರಂಭದಿಂ ಭೂತನಾಥಂ ೧೯

ಉ॥ ತುಂಗವೃಷಧ್ವಜಂ ಮಿಳಿರ್ದು ಮಿಳ್ಳಿಸೆ [2]ಜೋದಿಸೆ[2] ನಂದಿಕೇಶ್ವರಂ
ಸಿಂಗದ ಪಿಂಡು ಪೂಡಿರೆ ಘನಾಧ್ವಮನೀಂಟುವ ದಿಕ್ತಟಂಗಳಂ
ನುಂಗುವಜಾಂಡಮುಂ ಗುಳಿಗೆಯುಕ್ಕವ ತಕ್ಕಿನೊಳೆತ್ತಿರಲ್ [3]ರಥಂ[3]
ಸಿಂಗಂ [4]ನೇತ್ರನೆಯ್ದಿದನುಪೇಂದ್ರನನಪ್ರತಿಮಪ್ರತಾಪನಂ[4] ೨೦

ವ॥ ಅಂತೆಯ್ದಿ ವಿಜಯಾಸ್ತಂಭದಿಂ ವಿಜೃಂಭಿಸುವಂಭೋಜಾಕ್ಷನಂ ಕಂಡು

ಉ॥ ಈ ಕಮಲಾಕ್ಷನಕ್ಷಯನಜೇಯನಚಿಂತ್ಯನದೆಂತು ಗೆಲ್ದಪೆಂ
ಪ್ರಾಕೃತರೂಪನಲ್ತೆನುತೆ ಧೂರ್ಜಟಿ ಕಂಪಿತಲೋಕಪಾಲಕಾ
ನೀಕಮನಾಶುನಿರ್ಜಿತವಿರೋಧಿಸಮಾಕಮನಸ್ತಲೋಕಲುಂ
ಟಾಕಮನಾನತಾಖಿಲದಿವೌಕಮನೇಱಿಸಿದಂ ಪಿನಾಕಮಂ ೨೧

ವ॥ ಅಂತೇಱಿಸಿ ನೀವಿ ಜೇವೊಡೆಯೆ

ಮ॥ಸ್ರ॥ ಭರದಿಂ ಗೋತ್ರಾದ್ರಿಗಳ್ ತೂಳಿಕೆಗಳ ತೆಱದಿಂ ಪಾಱಿ ಭೂಮಂಡಲಂ ಕೋ
ಮರ ಚಕ್ರಾಕಾರದಿಂ ತಿಱ್ರನೆ ತಿರಿಯೆ ಸಮುದ್ರಂಗಳರ್ಘ್ಯಾಂಬುವೋಲ್ ತು
ಳ್ಕೆ ರವಿಶ್ವೇತಾಂಶುಬಿಂಬಂ ಧರಣಿಗೆ ಕಳಿವಣ್ ಗಾಳಿಯೊಳ್ ಬೀೞ್ವವೊಲ್ ಬೀ
ೞ್ತಿರೆ ಮೂಱುಂಲೋಕಮುಂ ಪರ್ವಿದುದತಿಶಯದಿಂ ಶರ್ವಮೌರ್ವೀನಿನಾದಂ ೨೨

ಮ॥ ಕಮಳಾಕ್ಷಂ ಜಯಲಕ್ಷ್ಮಿಯುಂ ನಿಜಭುಜಾಗ್ರಕ್ಕೇಱುಸುತ್ತುಂ ಭಯ
ಭ್ರಮಮಂ ಧಾರಿಣಿಗೇಱುಸುತ್ತುಮತಿಶಂಕಾತಂಕಮಂ ಪದ್ಮಜಾ
ದ್ಯಮರರ್ಗೇಱುಸುತುಂ ಪ್ರಕೋಪಭಯಮಂ ಕಾಮಾಂತಕಂಗೇಱುಸು
ತ್ತಮರುತ್ತೇಱಿಸಿದಂ ಸ್ವಕೀಯಜಯವಲ್ಲೀ[5]ಶಾರ್ಙ್ಗವಂ[5] ಶಾರ್ಙ್ಗಮಂ ೨೩

ವ॥ ಆ ಚಂಡಕೋದಂಡಮಂ ಸಮಾಸ್ಫಾಲಿತಂಮಾಡೆ

---

1 ಧರೆಯಂ (ಗ) 2 ಜೋಡಿಸೆ (ಗ) 3 ಕರಂ (ಗ) 4 ನೇತ್ರನೆಯ್ದಿದನುಜಾರಿಯನ
ಪ್ರತಿಮಪ್ರತಾಪನಂ (ಗ) 5 ಭಾರ್ಗವಂ (ಕಖ)

ಮ॥ಸ್ರ॥ ವಸುಧಾಚಕ್ರಂ [1]ಜಲಾಂತರ್ವಿಧುವಿಲುಳಿತವಾಗಿರ್ಪಿನಂ ಪೇರೆಯಂ[1] ಸ
ಪ್ತಸಮುದ್ರಂ ಮೀಱಲೆಂದಿರ್ಪಿನಮಖಿಳಮರುತ್ಸಂಚಯಂ ಸಂಚಳನ್ಮಾ
ನಸಮಾಗುತ್ತಿರ್ಪಿನಂ ದಿಕ್ಕರಿಕುಲಮೊಱಲುತ್ತೋಡಲೆಂದಿರ್ಪಿನಂ ಮ
ರ್ಧಿಸುತಂ ಬ್ರಹ್ಮಾಂಡಮುಂ ತೀವಿದುದಸುರಹರಜ್ಯಾಲತಾಘೋರಘೋಷಂ ೨೪

ವ॥ ತದನಂತರಂ

ಚಂ॥ ಕಡುಮುಳಿದೊರ್ಬರೊರ್ಬರನಿಸುತ್ತಿರೆ ಭೀಕರಭೂರಿಭೀಂಕೃತಂ
ಗಡಣಿಸೆ ದಿಙ್ಮುಖಂ ಮುಖರಮಪ್ಪಿನಮುತ್ಕಟಮಾಗಿ ಪಾಯ್ದು ಪಾ
ಯ್ದೊಡನೊಡನೊಂದನೊಂದು ಕಿಡಿಸೂಸೆ ಸಿಡಿಲ್ ಸಿಡಿಲಂ ಪಳಂಚುವಂ
ತಡಸಿ ಪಳಂಚುತಿರ್ದುವು ಪಿನಾಕಿಯ ಶಾರ್ಙ್ಗಿಯ ಬಾಣಮುರ್ವಿಯೊಳ್ ೨೫

ಉ॥ ಧೀರರ್ ಶಂಕರಶಾರ್ಙ್ಗಿಗಳ್ ಪೊಣರೆ ತತ್ಸಂಘಟ್ಟದಿಂ ಭೂತಳಂ
ನೀರೊಳ್ ಪಾಸಿದದೊಂದು ಪೆರ್ಗಡಿತದಂತಳ್ಳಾಡಲದ್ರಿವ್ರಜಂ
ಬೇರಿಂ ಕಿೞ್ತು ನಭೋನದೀಪುಳಿನಸಂದೋಹಂಬೊಲಿರ್ದತ್ತು ಮು
ನ್ನೀರುದ್ದಂ ನೆಗೆದಿಂದ್ರನಂದನಕೆ ಪೊಯ್ನ್ನೀರಾಯ್ತುದೇಂ ರೌದ್ರಮೋ ೨೬

ಶಾ॥ ಗೆಲ್ವಂ ತಾರ್ಕ್ಷ್ಯಪತಾಕನಂ ವೃಷಪತಾಕಂ ಹೋ ಲಲಾಟೇಕ್ಷನಂ
ಗೆಲ್ವಂ ಪಂಕರುಹಾಕ್ಷನಲ್ತು ಗಿರಿಜಾಧೀಶಂ ರಮಾಧೀಶನಂ
ಗೆಲ್ವಂ ನೋಡಿಮೆನುತ್ತು ಮಿರ್ಬರಳವಂ ಕೈಮೊಯ್ದು ಸಂವಾದಿಸಲ್
ಸಲ್ವರ್ ನಾಕಿಗಳೇಂ ಸಮಾನಬಲರೋ ಕಾಮಾರಿಕಂಸಾರಿಗಳ್ ೨೭

ಕಂ॥ ಶ್ರೀಕಂಠನಿಸುವ ಕಣೆಗಳ್
ವೈಕುಂಠನನೆಯ್ದಿ ಮುಸುಱುತಿರ್ದುವು ರಣದೊಳ್
ಭೀಕರತರೌರ್ವಮಂ [2]ಮಕ
ರಾಕರವೀಚೀಕದಂಬಕಂ[2] ಮುಸುಱುವವೋಲ್ ೨೮

ಉ॥ ತಕ್ಕಿನಿನೀಶನೆಚ್ಚ ತಿಮಿರೇಷುಗಿನೇಷುವನಗ್ನಿಮಿತ್ರಬಾ
ಣಕ್ಕಹಿಬಾಣಮಂ ಗಿರಿಪತತ್ರಿಗೆ ವಜ್ರಪತತ್ರಿಯಂ ಘನಾ
ಸ್ತ್ರಕ್ಕನಿಲಾಸ್ತ್ರಮಂ ಶಿಖಿಶರಕ್ಕೆ ಪಯಶ್ಶರಮಂ ಭುಜಂಗಕಾಂ
ಡಕ್ಕೆ ಖಗೇಶಕಾಂಡಮನಧೋಕ್ಷಜನೆಚ್ಚು ಪೊಡರ್ಪು ದೋಱಿದಂ ೨೯

ವ॥ ಅಂತುಮಲ್ಲದೆಯುಂ

---

1 ಜಲಾಂತರ್ವಿದಿತವಿಲುಳಿತಾಕಾರವಾಗಿರ್ಪಿನಂ (ಕಗ) 2 ಮಕರಾಕರಶೀಕರಪೊಡರ್ಪಿನಿಂ (ಕಗ)

ಮ|| ಪೆಱತೇನಿಂತಿದೆ ಕಾಲಕಾಲನಿಶಿ ಪರ್ಬಿತ್ತೆಂಬಿನಂ ನುಂಗಿ ನೇ
ಸಱನೆಂಟುಂದೆಸೆಯುಮಂ ಕಱುಂಗೆ ತನುಮಂ ಭಿನ್ನಾಂಜನಚ್ಛಾಯೆಯುಮಂ
ಕೞಿತಯುತ್ತ್ರಂ ಹರನಲ್ಲಿಗೆಯ್ದುದುದಗುರ್ವಿಂ ವೈಷ್ಣವೋಗ್ರೇಷು ಬಾ
ಯ್ದೆಱೆಪೆಟ್ಟುಬ್ಬಿನ ಕಾಳರಕ್ಕಸನವೋಲ್ ಭೀಂಕಾರಹೂಂಕಾರದಿಂ ೩೦

ವ|| ಅದಂ ಕಂಡು ಖಂಡಪರಶುವಖಂಡಿತೋಚ್ಚಂಡಕೋಪನುಂ ಕೈಕೊಂಡು

ಮ||ಸ್ರ|| ಉರಿಗಣ್ಣಂ ಬಿರ್ಚಿದಂ ಬಿರ್ಚಿದನಿಷುಧಿಗೆ ಕೈನೀಡಿದಂ ನೀಡಿದಂ ನೋ
ಡಿರೆ ತೊಟ್ಟಂ ತೊಟ್ಟನೀ ಪಾಶುಪತಶರಮನೋಹೋ ಜಗಂ ಕೆಟ್ಟುದೆಂದಂ
ಬರದೊಳ್ ದೇವಪ್ರಜಂ ಬಾಯ್ದೆಱೆಯೆ ತೆಱೆದು ಭಾಳಾಕ್ಷನುಂ [1]ದ್ವಿಟ್ಪ್ರರೀ[1]ಸಂ
ಹರಣಂಗೆಯ್ದಸ್ತ್ರಮುಂ ತೊಟ್ಟಸಲೊಡರಿಸಿದಂ ಕೃಷ್ಣನಂ ಕೃಷ್ಣಕಂಠಂ ೩೧

ವ|| ಅಂತು

ಮ|| ಕುಪಿತಂ ಪಾಶುಪತಾಸ್ತ್ರಮಂ ತುಡೆ ಮಹೇಶಂ ಶಾರ್ಙ್ಗ[2]ಜಿತ್ತ್ರಜ್ಞನೀ[2]
ತ್ರಿಪುರಧ್ವಂಸಕನಿಂದೆ ಮುಂದೆ ಜಯಮಂ ಕೈಕೊಳ್ವೆನೆಂದೇೞ್ಗ ಬ
ಲ್ಪು ಪೊಡರ್ಪೊಂದಿರೆ [3]ಜೃಂಭಣಾಸ್ತ್ರದಿನದಂ[3] ಕೈವೇಗದಿಂದೆಚ್ಚುಮಾ
ಧಿಪನಂ ಸ್ತಂಭಿಸಿ ತಾಳ್ದಿದಂ ಜಯಮನೇಂ ಕೃಷ್ಣಂ ಜಗದ್ವೀರನೋ ೩೨

ವ|| ಅಲ್ಲಿಂ ಬೞಿಯಂ

ಮ||ಸ್ರ|| ಹರಿನೀಲೋದ್ಭಾಸಿ ಕೃಷ್ಣಂ ಕೞೆವ ಶರಗಣಾಸಾರಮಂ ಸಾರಧಾರಾ
ಧರವರ್ಷಂಗೆತ್ತು ತನ್ನೇಱುದ ನವಿಲೊಲವಿಂ ನೋಗೆಯಂ ಬಿರ್ಚುತುಂ ಸಂ
ಗರವೀರಶ್ರೀಗೆ ಚೆಲ್ವಂ ತಳೆದ ತೞತಯನೆತ್ತಿರ್ಪವೋಲೊಪ್ಪೆ ಬಂದಂ
ಚಿರಕೋಪಶ್ರೀಯವಶ್ಯಂ ಪ್ರಕಟಿತಸಮರೋತ್ಸಾಹಲಾಸ್ಯಂ ಷಡಾಸ್ಯಂ ೩೩

ವ|| ಆ ಕುಮಾರನಂ ಕಂಡು ಕುಸುಮಕೋದಂಡನಾನುಂ [4]ಕುಮಾರನೆಂದು
ಹರಿಬಕ್ಕೆಯ್ದಿದಿರಾಂತು ನಿಲೆ[4] ಶಕ್ತಿಧರಂ ನಿರೀಕ್ಷಿಸಿ

ಚಂ|| ಅನಿಮಿಷರ್ಗ್ಗಳ್ಪದಂ ಕವರ್ದು ಭೂಪರನಾಳ್ವಿಸಕೆಯ್ಸಿಕೊಳ್ವಜ
ಯ್ಯನನತಿಧೀರನಂ ನೆಗೞ್ದ ತಾರಕವೀರನನೆನ್ನ ಪುಟ್ಟಿದೇ
ೞನೆಯ ದಿನಕ್ಕೆ ಕಣ್ದೆಱೆಯದರ್ಭಕನೆಂ ಗಡ ಕೊಂದೆನೆಂದೊಡಿ
ನ್ನನುಪಮಯೌವನಂಗೆನಗನಂಗನೆ ನೀನಿದಿರಾಂತು ನಿಂದಪ್ಪೆ ೩೪

---

[1] ತ್ರೋೞಿದಂ (ಖ) [2] ಚಿತ್ತ್ರಜ್ಞನಿಂ (ಕಗ) [3] ಜೃಂಭಣಾಸ್ತ್ರದಿನಣಂ (ಕಗ) [4] ಕುಮಾರ
ನೆಂಬಹಂಮಿಕೆಯಿಂ ನಿಲೆ (ಖ)

ವ॥ ಎನೆ ಮಕರಕೇತನಂ ಮುಗುಳ್ನಗೆನಕ್ಕು

ಚಂ॥ ಎಲೆ ಗಡ ಕಷ್ಟಮೀ ನಿಜಗುಣಸ್ತುತಿಯುಂ ಪರನಿಂದೆಯುಂ ನಿರಾ
ಕುಲಮಿದು ನಿನ್ನೊಳಪ್ಪುದುಚಿತಂ ಗುಹ ನೀಂ ನೆನೆ ನಿನ್ನ ಜನ್ಮದು
ರ್ವಿಲಸಿತಮಂ ದಿಟಂ ಪಲರ್ಗೆ ಪುಟ್ಟಿದ ಕಾರಣದಿಂದಮಾನನಂ
ಪಲವೊಳವೊಲ್ದುದಂ [1]ನುಡಿಯಲೆಂದೆನೆ[1] ಕೇಳ್ದು ಕನಲ್ದು ಷಣ್ಮುಖಂ ೩೫

ಪಿಡಿವುದು ಕರ್ಬುವಿಲ್ ತುಡುವುವೈದಲರಂಬಿವನೇಕೆ ನಚ್ಚಿ ನೀಂ
ತೊಡರ್ವೆ ರತಿಪ್ರಿಯೋಪ[2]ಕರಣಂಗಳಿವೇವುವೊ[2] ಕಾಳೆಗಕ್ಕೆ ನೀಂ
ಮೃಡನೊಳಿದಿರ್ಚಿ ರೂಪುಗಿಡುವಂದಿವು ಮಾಡಿದ ಮಾಟಮಾವುದಾರ್
ಸೆಡೆವರಿದರ್ಕನೇಕನಿಶಿತಾಯುಧಕೋವಿದರಪ್ಪ ಮದ್ವಿಧರ್ ೩೬

ವ॥ ಎನೆ ಕುಸುಮಾಯುಧಂ ಸಕ್ರೋಧನಾಗಿ

ಮ॥ಸ್ರ॥ [3]ಅರಲಂಬೀ[3] ಕರ್ಬುವಿಲ್ಲೆಂದಿಱಿಪಿ ಗಳಪದಿರ್ ಕೆಮ್ಮನೀ ಕರ್ಬುವಿಲ್ಲಿಂ
ಗರಲಂಬಿಂಗಾ [4]ಮಹೇಶಂ ಮನದೊಳಳುಕಿ[4] ಸಮ್ಯಕ್ತ್ವಪೋನಿಷ್ಠೆಯಂ ಬಿ
ಟ್ಟರೆವೆಣ್ಣಾಗಿರ್ದುದಂ ನೀಂ ನೆನೆ ದಿಟವಿಂದೆ[5]ನಲ್ ಕೆಯ್ದುಗಳ್ ನಿರ್ಘೃಣಂಗಳ್[5]
ನಿರವದ್ಯಂಗಳ್ ಜಗನ್ಮೋಹನಪಟುಗಳಿವರ್ಕಂಜದುದ್ವೃತ್ತನಾವಂ ೩೭

ವ॥ ಎಂದು ನುಡಿದನಂತರಂ

ಕಂ॥ ಸಿಡಿಲ ಮೞೆಯೆನಿಸಿ ಕಱೆದರ್
ಬಿಡದೆ ಸರಲ್ಮೞೆಯನೀಶ್ವರಾಚ್ಯುತತನಯರ್
ತೊಡರ್ದು ಸರಲ್ದೆಗೆವ ಸರ
ಲ್ದುಡುವ ಸರಲ್ ಬಿಡುವ ಬೇಗಮುಱಿದೆಂಬಿನೆಗಂ ೩೮

ವ॥ ಆಗಳ್

ಉ॥ ಒಂದೆಱತೊಳೊಂದು ತಾಗಿದುವೆಱಂಕೆಯ ರೋಹಣನೀಲಶೈಲಯು
ಗ್ಮಂ ದಿಟಮೆಂಬಿನಂ ಗರುಡನುಂ ಗುಹಬರ್ಹಿಯುಮೊಯ್ದು ತಾಗಿ ಕಾ
ಯ್ಪಿಂದೊದೆಪಂಘ್ರಿಯಿಂದಿಱಿವ ಚಂಚುವಿನೋವದೆ ಪೊಯ್ವೆಱಂಕೆಯಿಂ
ತಂದುವಗುರ್ವನೇಂ ಪಿರಿದೊ ತಾರ್ಕ್ಷ್ಯಮಯೂರರ ಯುದ್ಧಡಂಬರಂ ೩೯

---

[1] ನುಡಿಯಲೇಕೆನೆ (ಖ) [2] ಕರಣಂಗಳಿವೆಲ್ಲವು (ಖ) [3] ಮರವಿಲ್ಲಂ (ಕ) ಅರಲಂಬುಂ (ಖಗ) [4] ಮಹಾದೇವನುಮಜನಿಸಿ (ಕ) [5] ದಲ್ ಕೈದುಗಳ್ ಪಂಚಶಸ್ತ್ರಂ (ಖ)

ಶಾ॥ ಸ್ಕಂದಂ ಬ್ರಹ್ಮಶಿರೋಸ್ತ್ರದಿಂದಿಸುವುದುಂ ಕಂಡತ್ತ ದೇವಾಳಿ ಪೋ
ಗಿಂದಿನ್ನೆತ್ತಣ ಕೃಷ್ಣನೆತ್ತಣ ಬಲಪ್ರದ್ಯುಮ್ನರೆಂಬನ್ನವೆ
ಟ್ಟಿಂದಾ ಬ್ರಹ್ಮಶಿರಶ್ಶರಂ ಹರಿಭುಜಾಚಕ್ರಪ್ರಭಾಚಕ್ರದಿಂ
ಮಂದೀಭೂತಮಹತ್ತ್ವಮಾಯ್ತೆಡೆಯೊಳೇಂ ಚಕ್ರಂ ಪ್ರಭೋಚ್ಚಂಡಮೋ ೪೦

ವ॥ ಅಲ್ಲಿಂ ಬಟಿಯಂ

ಮ॥ಸ್ರ॥ ಜಗಮಂ ಕಾಲಾಗ್ನಿರುದ್ರಂ ಸುಡುವನಿದಱ ಝಳಿಂದೊತ್ತಿ ಬೈತಿಟ್ಟ ಕಿಚ್ಚಿಂ
ನೆಗೆದತ್ತೀಗೆಯ್ವಿವೆತ್ತಲ್ ಪುಗುವೆವೆನುತೆ ದೇವಾಳಿ ಗೋಳುಂಡೆಗೊಳ್ವಂ
ತು ಗುಹಂ ಕಾಯ್ದಿಟ್ಟುದಂ ಶಕ್ತಿಯನೆಡೆಯೊಳೆ ಕರ್ಗೊಳ್ಳಿವೊಲ್ ಬೀೞ ದರ್ಪಂ
ನೆಗೞಲ್ ಹುಂಕಾರದಿಂ ಚಪ್ಪರಿಸಿ ಕೆಡಪಿದಂ ಕೃಷ್ಣನಾಜ್ಞಾಸಮಗ್ರಂ ೪೧

ರವಿಯಂ ದೋರ್ದರ್ಪದಿಂದಂ ತುಡುಕಿ ಪಿಡಿದನೀ ಕೃಷ್ಣನೆಂಬೊಂದಗುರ್ವು
ರ್ಬುವಿನಂ ಸ್ಕಂದಂಗೆ ಚಕ್ರಂಗೊಳೆ ಹರಿ ಗಿರಿಜಾಕಾಂತೆ ನಗ್ನತ್ವದಿಂ ಕೌ
ಟವಿ ಬಂದಡ್ಡಂ ನಿಲಲ್ ಚೀಃ ಸುಡುಸುಡು ತೊಲಗೆಂದಾ ಮುರಧ್ವಂಸಿ ಪೇಸು
ತ್ತುವೆ ತಿರ್ಯಗ್ವಕ್ತ್ರನಾಗಿರ್ಪಿನಮುಪಸರಣಂಗೆಯ್ದನತ್ತಲ್ ಷಡಾಸ್ಯಂ ೪೨

ವ॥ ಅನ್ನೆಗಮಾಗಳ್

ಕಂ॥ ಭೇರೀರವದಿಂ ತೀವಿ ಪ
ಯೋರುಹಗರ್ಭಾಂಡಮೊಡೆಯೆ [1]ಸುರಿದಪ್ಪುದಸೃ[1]
ಗ್ವಾರಿಯೆನೆ ನಭದೆ ರುಧಿರಾ
ಸಾರಂ ಸುರಿದತ್ತು ಬಾಣಗಮನೋದ್ಯಮದೊಳ್ ೪೩

ಅಸುರಬಲಭಾರದಿಂದೆ
ಣ್ದೆಸೆಯಾನೆಯ ನೆತ್ತಿ ಪೊತ್ತೆ ಪುಟ್ಟಿದ ಧೂಮ
ಪ್ರಸರಮಿದೆಂಬಿನೆಗಮುಗು
ರ್ವಿಸಿ ನೆಗೆದುವು ಧೂಮಕೇತುಗಳ್ ದೆಸೆದೆಸೆಯೊಳ್ ೪೪

ಸ್ತುತಿವಾದಮುಲ್ತು ಫಣಿಪತಿ
ಪೃತನಾ ಭರದಿಂ ಪ್ರಭಗ್ನಫಣನಾದುದು ಸೂ
ಸೃತಮೆಂದು ಸೂಚಿಪಂತ
ದ್ಭುತವಾದುದು ಬಾಣಗಮನದೊಳ್ ಭೂಕಂಪಂ ೪೫

---

1 ಸುರಿವಘನಾಸೃ (ಖ)

ದಿನಮುಂ ಜಕ್ಕುಲಿಪ ವರೂ
ಥಸೈಜಯಂತಿಗಳ ಪೊಯ್ಲೊಳಭ್ರದಿನಿಂದಿಂ
ತವಿರಳಮಾಗುದಿರ್ದುದೆ ನ
ಲ್ಕವನಿಗೆ ನಕ್ಷತ್ರಪಾತವಾಯ್ತರಿಬಲದೊಳ್ ೪೬

ವಾರಣಸೈನ್ಯಶಿರಸ್ಸಿಂ
ದೂರಂ ಪ್ರತಿಕೂಲಮಾರುತಾಹತಿಯಿಂದು
ತ್ಸಾರಿತವಾಗಿರ್ದಪುದೆನೆ
ದಾರುಣಮಾದತ್ತು ಸುತ್ತಲುಂ ದಿಗ್ದಾಹಂ ೪೭

ಚಂ|| ನೆರೆದ ನಿಶಾಚರೇಂದ್ರಬಲದೊಂದು ಪದೋದ್ಧತಧೂಳಿಜಾಳದಿಂ
ಸುರನದಿ ಬತ್ತೆ ನಿತ್ತರಿಸದೊರ್ಮೊದಲಲ್ಲಿಯ ಬಾಳೆಮೀಂಗಳೀ
ಧರಣಿತಳಕ್ಕೆ ಬಿಟ್ಟಪುವು ಭೋಂಕನೆ ಪೇಟಿಮೆನಲ್ ದಿಗೀಶ್ವರೋ
ತ್ಕರನಯನಂಗಳುಳ್ಕೆ ಯಮರಾಧಿಪನಳ್ಕೆಯುಮುಳ್ಕರಾಜಿಗಳ್ ೪೮

ವ|| ಅಂತಪಜಯಕ್ಕಾಗರನಾಗಿ ಬಾಣಂ ರಣಕ್ಷೋಣಿಯೊಳೊಡ್ಡಿನಿಲೆ

ಚಂ|| ಇಸುವ ಧನುರ್ಧರಲಂ ಭರದಿನೆಯ್ದುವ ಪೇರಣಿ ಸಾರ್ವ ಕೊಂತವೊ
ಡ್ಡಿಸುವ ರಥಾಳಿ ನೂಂಕುವಿಭಸಂತತಿ ಪಾಯಿಸುವಶ್ವವೃಂದಮಂ
ರ್ದಿಸೆ ಕವಿತರ್ಪರಾತಿಚತುರಂಗಪತಾಕಿನಿಯಂ ಮುಕುಂದನೀ
ಕ್ಷಿಸಿ ಮುಳಿದೆಚ್ಚನಾ ಪಡೆಗೆ ಮಾರ್ಪಡೆಯಂ ಪಡೆವೈಂದ್ರಬಾಣಮಂ ೪೯

ಎನಿತು ಮದೇಭದೊಡ್ಡನಿತು ತೇರೆನಿತಾಳೆನಿತಶ್ವಮಾಂತುಮಂ
ತನಿತೆ ಮದೇಭದೊಡ್ಡನಿತೆ ತೇರನಿತಾಳನಿತಶ್ವಮಸ್ತ್ರದಿಂ
ಜನಿಯಿಸಿ ಪೋರ್ದು ಮಾರ್ಪೊಣರ್ದು ತಳ್ತಿಱದೆಯ್ದಿ ಪಳಂಚಿ ಕಾದುತಿ
ರ್ದಿನೆಗಮುಪೇಂದ್ರನಿತ್ತ ಬಲಿನಂದನನಂ ಗರಿಸನ್ನೆಗೆಯ್ವುದುಂ ೫೦

ಮ||ಸ್ರ|| ತುರಗಂಗಳ್ ಸಾಸಿರಂ ಪೂಡಿದ ಕರಡಿದೊಗಲ್ ತಳ್ತ ಪೊಂಗಾಲಿ ಕಂಗೊ
ಳ್ವರುವದ್ಘಂಟಾಪ್ರತಾನಂ ಪೊಳೆವ ನವಿಲ ಸಿಂಧಂ ಬೆಡಂಗಾದ ತೇರಂ
ಭರದಿಂ ಕುಂಭಾಂಡನಂದಾರ್ದೆಸಗೆ ಭುಜಸಹಸ್ರಂಗಳೊಳ್ ಕೈದುಮಂ ಸಾ
ಸಿರಮುಂ ಕೈಕೊಂಡು ಬೀಟಲ್ಪರಿವ ಗಿರಿಯೆನಲ್ ಬಂದು ದೈತ್ಯೇಂದ್ರನೆಂದಂ ೫೧

ಚಂ|| ಹರನರಿವೆಣ್ಗ ಹಂ ವಟಿಗಣಂ ಮುರುಳಂ ನರನಾಂತುಗೆಲ್ದು ನೀಂ
ಬಿರಿದಪೆ ಬೀರದೊಳ್ ದಿಟಕೆ ಬೀರಮುದುಳ್ಳೊಡಿದಿರ್ಚಿ ನಿಲ್ [1]ನಿಶಾ
ಚರಪತಿಯಂ ಬಲೀಂದ್ರಸುತನಂ ಧೃತಬಾಹುಸಹಸ್ರನಂ[1] ಮಹೀ
ಧರ ನಿನಗಾಂತೆನಿನ್ನಱಿಯಲಪ್ಪುದು ನಿನ್ನಯ ಬೀರದೇಳ್ಗೆಯಂ ೫೨

ಕಂ|| [2]ಆವ ಭವಂ[2] ಬಂದುಂ ದೈ
ತ್ಯಾವಳಿಯುಂ ಕಾಲನಿಲಯಮಂ ಪುಗಿಸುವ ಮಾ
ಯಾವಿಯೆ ಪೊಕ್ಕಪೆ ನೀನಮ
ರಾವತಿಯಂ [3]ದ್ವಾರವತಿಯನಿಂ[3] ಪುಗಲಾರ್ಪೈ ೫೩

ವ|| ಎಂದ ಕಳಾಪಿಧ್ವಜನಾಳಾಪಮಂ ಕೇಳ್ದು

ಕಂ|| ಕೂರಂಬುಗಳಂ ನಿನ್ನೀ
ಪೇರುರದೊಳ್ ಪುಗಿಸಿ ನಿನ್ನುಮಂ ಸುರಗಣಸಂ
ಹಾರಕ ಯಮಸದನಗುಹಾ
ದ್ವಾರಮನಾಂ ಪುಗಿಸಿ ಪುಗದಿರೆಂ ದ್ವಾರಕಿಯಂ ೫೪

ವ|| ಎಂದಪರಿಮಿತೋದಾರ ಧೀರವಚನದಿಂ ನುಡಿದು

ಕಂ|| ಅಂಬರಮುಂ ದೆಸೆಯುಂ ಬಿಡ
ದಂಬನೆ ಕಾರುತ್ತುಮಿರ್ದುಮವೆನೆ ಶಾಙ್ರ್ಗ ತಗು
ಳ್ವಂಬಿನ ಮಳೆಯಂ ಕರೆದಂ
ಬಿಂಬ[4]ದ್ಯುತಿವಿತತಿ ಮಣಿವಿನಂ ದಿನಮಣಿಯಾ[4] ೫೫

ಅಯ್ಯೂಱುಬಿಲ್ಲೊಳಂಬುಗ
ಳಯ್ಯೂಱಿಱೂಗೆತರೆ ಸಹಸ್ರಭುಜನೆಚ್ಚಾಡಲ್
[5]ಕಯ್ನಿರಿದಾಡಿದನತ್ತಲ್
ಮೆಯ್ನವಿರ್ಗಳುಮೊಗೆಯೆ[5] ನಾರದಂ ಸಂತಸದಿಂ ೫೬

ಮ||ಸ್ರ|| ಇಳೆಯೊಳ್ ಬಿಲ್ಗಲ್ತೆಗೀತಂ [6]ಮಿಗಿಲಿವನ್[6] ಧನುರ್ದಂಡಟಂಕಾರಮಂ ಕೇ
ಳಲೆಬರ್ಕುಂ ಘೋರನೋರಂತಿರೆ ಸುರಿವ ಶರಾಸಾರಸಂತಾನಮಂ ಕಾ
ಣಲೆಬರ್ಕುಂ ಮಾಣದಂಬಂ ತುಡುವ ಬಿಡುವ ಕೈವೇಗಮಂ ಕಾಣನಭ್ರ
ಸ್ಥಳದೊಳ್ ನೋಟ್ಪಾ ಸಹಸ್ರಾಕ್ಷನುಮೆನೆ ಕರೆದಂ ಬಾಣಮಂ ಬಾಣದೈತ್ಯಂ ೫೭

[1] ನಿಶಾಚರಪತಿಯೆಂ ಬಲೀಂದ್ರಸುತ ಬಾಹುಸಹಸ್ರಕಬಾಣನೆಂ (ಖ) [2] ಆವವನಿಂ (ಖ) [3] ದ್ವಾರವತಿಯನೇಂ (ಕ) [4] ದ್ಯುತಿವಿರುತಿಮಣಿವಿನಂಬಿನಮಳೆಯಂ (ಕ) [5] ಕಯ್ನಿರಿದಾಡುತ್ತ ತ್ತಲ್ಮೆಯ್ನವಿರ್ಗಳುಮೊಗೆಯೆ (ಕ) [6] ಮಿಗಿಲೆನಿಸಿ (ಕ)

ಕಂ॥ [1]ಸರಲೊಂದನೊಂದು ಕಡಿದಂ
ಬರದಿಂ ಸುರಿದಿಳೆಯೊಳೊಪ್ಪಿ[1] ಬೆಟ್ಟಾಗಿರಲಿ
ರ್ವರುಮೊಡನೊಡನೆಚ್ಚರ್ ಭುಜ
ಗ ರಿಪುಧ್ವಜರಮರಕೋಟಿ ಜೀಯೆಂಬಿನೆಗಂ ೫೮

ಉ॥ ವಾರಣಬಾಣದಿಂ ಜ್ವಲನಬಾಣಮನಗ್ನಿಸಹಾಯಬಾಣದಿಂ
ನೀರದಬಾಣಮಂ ದಿವಿಜನಾಯಕಬಾಣದಿನದ್ರಿಬಾಣಮಂ
ಗಾರುಡಬಾಣದಿಂ ಭುಜಗಬಾಣಮನಂಬುಜಮಿತ್ರಬಾಣದಿಂ
ಘೋರತಮಿಸ್ರಬಾಣಮನುಪೇಂದ್ರನದಿರ್ಪೆ ಕನಲ್ದು ದಾನವಂ ೫೯

ಕಂ॥ ಅಲಘುತರಭುಜದಿನುದಯಾ
ಚಲಾಸ್ತಗಿರಿಶಾಣ[2]ಯುಗಳದಿಂ ಮಸೆವಂತೀ
ರ್ದ್ದಲಗಿನ ಕಕ್ಕಡೆಯಂ ಕದ
ನಲೋಲನಂತಂತೆ[2] ತೂಗಿ ಕೃಷ್ಣನನಿಟ್ಟಂ ೬೦

ಮ॥ಸ್ರ॥ ಕಿಡಿಯಂ ಕೆಂಡಂಗಳಂ ಕೇಸುರಿಯನುಗುಳುತಂ ಕ್ಷುದ್ರಘಂಟಾಟ್ಟನಾದಂ
ಪೊಡರ್ವನಂತೆಯ್ತರ್ಪುದಂ ಶಕ್ತಿಯನನಯವದಿಂದೊಂದು ನೀಲಾಂಬುಜಾತಂ
ಬಿಡಿಸಂತಬ್ಜಾಂಬಕಂ ಭೋಂಕನೆ ಪಿಡಿದದಱಿಂ ನಿನ್ನದಂ ನೀನೆ ಕೊಳ್ಳೆಂ
ದಿಡೆ ವಜ್ರಂ ಶೈಲಮಂ ನಾಂಟುವವೊಲಸುರನಂ ನಾಂಟೆ ಪೋದತ್ತದಾಗಳ್ ೬೧

ಉ॥ ಶಕ್ತಿಯೆ ನಾಂಟೆ ಪೋದೆಡೆಯ ಮುಂತಣ ಪಿಂತಣ ಪುಣ್ಣಬಾಯ್ಗಳಿಂ
ರಕ್ತದ ಧಾರೆ ನೀಳ್ದೊಗೆದು ತಂದುದು ನಾಕಿಜನಕ್ಕೆ ವಿಸ್ಮಯಾ
ಸಕ್ತಿಯನಾ ನಿಶಾಚರನ ಕೋಪದ ದಳ್ಳುರಿ ನಾಂಟೆ ಪೋದ ತ
ಚ್ಛಕ್ತಿಗಮಿತ್ತಲಿಟ್ಟ ಹರಿಗಂ ಹರಿದೊರ್ವೊದಲೆಯ್ದುವಂದದಿಂ ೬೨

ವ॥ ಅಂತು ಶಕ್ತಿಪ್ರಹಾರದಿಂದಾದ ಹೃದಯದ್ವಾರದಿಂ ವೀರಗ್ರಹಪ್ರವೇಶವಾದಂತೆ ವಿಜೃಂಭಿಸುವ ಸಹಸ್ರಭುಜನಂ ಮುಳಿದು ನೋಡಿ

ಮ॥ಸ್ರ॥ ಮುದಮಿಂದ್ರಂಗೊಳ್ಪ [4]ಮಾರಂಗಭಿ[4]ಮತನನಿರುದ್ಧಂಗೆ ಕೈಸಾರ್ದುದಿಂದ
ಬ್ಜದಳಾಕ್ಷಂ ಬಾಣನಂ ಗೆಲ್ದಪನೆನುತೆ ಜಯಧ್ವಾನಮಂ ಮಾಡೆ ನಾಕಾ
ಸ್ಪದರಾ ಪ್ರಸ್ತಾವದುರ್ವಾಸಮುಯದೆಸಕವಾ ಕಾಲದಾಟೋಪಮಾ ಬೇ
ಗದವಷ್ಟಂಭಂ ಜಗದ್ಜೃಂಭುಕವೆನೆ ರಿಪುವಂ ಚಕ್ರದಿಂ ಕೃಷ್ಣನಿಟ್ಟಂ ೬೩

---

1 ಸರಲೊಂದೊಂದಂಬರದಿಂ ಸುರಿದಿಳಯೊಳೊಟ್ಟೆ (ಕ) ಸರಲೊಂದೊಂದಂಬರದಿಂ ಸುರಿದಿಳೆಯೊಳಗೊಟ್ಟೆನೋಡಿ (ಮೊಅ) 2 ಯುಗಳದಿಂದಂ ಸಮೆದಂದಲಿಗಿನ ಕಕ್ಕಡೆಯಿಂ ವಿಜಯಲೋಲನಿಂತಂತೆ (ಕ) 3 ಹರಿದೊರ್ವೊದಲೆಯ್ದುವನ್ನೆಗಂ (ಖ) 4 ನಾಕಕ್ಕಭಿ (ಖ)

ವ॥ ಅಂತಿಸಲೊಡಂ

ಮ॥ಸ್ರ॥ ರವಿಯಂ ಮುಂ ನುಂಗಿ ಮತ್ತಂತುಗುಳ್ವುದು ಸಹಜಂ ರಾಹುಗಿಂದಂತುಟಲ್ತೀ
ರವಿಬಿಂಬಂ ರಾಹುಸಂದೋಹಮನುಗುಳ್ದಿ ಪುದಾಶ್ಚರ್ಯಮೆಂಬನ್ನೆಗಂ ಚ
ಕ್ರಮಗುರ್ವಿಂ ಬಾಣಬಾಹಾವನಮನನಿತುಮಂ ಛೇದಿಸಲ್ ಬಿಟ್ಟಿ ತದ್ಬಾ
ಹುವಿತಾನಂ ಯುದ್ಧರಂಗಾರ್ಣವದ ತೆರೆಗಳೆಂಬಂತೆ ತಳ್ತಿರ್ದುದೆತ್ತಂ ೬೪

ವ॥ ಆಗಳ್ ಸಹಸ್ರಭುಜಭುಜಾಟವೀಸಮುಚ್ಚಾಟನದಿಂ ದುರ್ದರ್ಶನನಾಗಿ ಬಂದ ಸುದರ್ಶನಮಂ ಮಗುಳೆ ನೆಗಪಿ ತದ್ರಿಪುಶಿರಶ್ಛೇದನಂಗೆಯ್ಯಲೆಂದಿರ್ದ ವಿಶ್ವರೂಪನ ಸಮೀಪಕ್ಕೆ ವಿರೂಪಾಕ್ಷನೆಯ್ತಂದು

ಕಂ॥ ಉಡುಗುಡುಗು ಚಕ್ರಮಂ ನೀಂ
ಬಿಡದಿರ್ ಬಿಡದಿರ್ ಬಲೀಂದ್ರಸೂನುಗೆ ಮಾಣ್ ಮಾಣ್
ಪೊಡೆಯುಲರ ಮನ್ನಿಸೆನ್ನಯ
ನುಡಿಯಂ ಗುಹನಿಂ ವಿಶೇಷಮೆನಗೀ ಬಾಣಂ ೬೫

ಮ॥ ದ್ವಯಭಾವಂ ನಮಗಿಲ್ಲ ಬಲ್ಲವರೆ ನಾನುಂ ನೀನುಮೀ ಮಾತ ನಿ
ಶ್ಚಯಮೆಂತೆಂದೆನಲೇಕಮೂರ್ತಿ ಮೊದಲೊಳ್ [1]ಸಂದತ್ತದಿನ್ನೇಕ[1]ಮೂ
ರ್ತಿಯೆ ಮೂರ್ತಿತ್ರಯಮಾಯ್ತುದಲ್ಲದೆಯುಮಾ ತ್ರೈಮೂರ್ತಿಯೊಳ್ ಸತ್ವಮೂ
ರ್ತಿಯೆ ನೀಂ ರಕ್ಷಣವೃತ್ತಿ ನಿನ್ನದದಱಿಂದಂ ರಕ್ಷಿಸೀ ಬಾಣನಂ ೬೬

ವ॥ ಎಂಬುದುಂ

ಕಂ॥ ಪರಮೇಶ ಭಕ್ತಜನವಶಂ
ಕರ ಶಂಕರ ನಿನ್ನ ಮಾತನಾಂ ಮನ್ನಿಸಿದೆಂ
ತ್ವರಿತಂ ಚಕ್ರಮನುಪಸಂ
ಹರಿಸಿದೆನೀ ಬಾಣದೈತ್ಯನಂ ರಕ್ಷಿಸಿದೆಂ ೬೭

ವ॥ ಎಂದು ಬಾಲೇಂದುಜೂಟನಂ ಕೈಟಭಾರಿ ಮನ್ನಿಸಿ ಬೀಳ್ಕೊಂಡು ನಿಲೆ ಬಾಣಂ ಮಹಾಕಾಳನಾಮದಿಂ [2]ಪ್ರಮಥ ಸಾರೂಪ್ಯಪದವಿಯಂ[2] ಪಡೆದು ಮೃಡನೊಡನೆ ಕೈಲಾಸಕ್ಕೆ ಪೋಗಿತ್ತಲ್

---

[1] ನಿನ್ನಂತೆ ನೀನೇಕ (ಕ) ಸಾದ್ಯಂತ ನಿಂನೇಕ (ಖ) [2] ಪ್ರಮಥನಾಗಿ ಸಾರೂಪ್ಯ ಪದವಿಯಂ (ಕ)

ಕಂ॥ ಕಮಲೇಕ್ಷಣಕಾಂತಿಗಳೆನೆ
ಕಮಲೇಕ್ಷಣನುರದೊಳಮಲಹಾರಂ ಪೊಳೆಯಲ್
ಸಮರಾಮನಿಯಿಂ ತಳರ್ದಂ
ಸಮರಾಮನಿಯುಕ್ತಮೆಸೆಯೆ ಸುರಪಟಹಚಯಂ ೧೮

ವ॥ ಅಂತು ಬಂದು ಬಾಣಾಸುರನ ಪೊಱಲಂ ಪೊಕ್ಕಲ್ಲಿ

ಕಂ॥ ಬಲಭದ್ರಾಚ್ಯುತರೊಲವಿಂ
ಬಲಭದ್ರಾಚ್ಯುತಶರೀರಿಯಾಗೆಂದಾಶೀಃ
[1]ಕುಲದಿಂ ನೆಗೞ್ಚಿದರ್ ನಿಜ[1]
ಕುಲಮಂಡನನಂ ಬಲೀಂದ್ರತನುಜಾಪ್ರಿಯನಂ ೧೯

ವಿನತಾತ್ಮಜನಂ ಕಂಡಂ
ವಿನತಾತ್ಮಜನಿಂದೆ ನಾಗಪಾಶಂ ಬಿಡುತಂ
ದನಿರುದ್ಧನಾಗಿ [2]ಮುಂದಿ
ರ್ದನಿರುದ್ಧನ[2]ನಾಗಳಟ್ಟಿಱಿಂ ಪ್ರದ್ಯುಮ್ನಂ ೨೦

ಪೃಥ್ವಿ॥ ಪ್ರವೃದ್ಧಪಟಹಸ್ವನಂ ಮಧುರಗೀತನಾದಂ ಸುವಿ
ಪ್ರವೃದ್ಧಜನಮಂಗಳೋಕ್ತಿ ನೆಗೞ್ವಂತು ಕುಂಭಾಂಡನಿಂ
ವಿವಾಹಮುಷೆಗಂ ಝಷಧ್ವಜಸುತಂಗಮಂದಪ್ಪುದುಂ
ವಿವಾಹನಸುರಾಂತಕಂ ತಳರ್ದನಾ ಪುರೋದ್ದೇಶದಿಂ ೨೧

ಉ॥ ದ್ವಾರವತೀಪುರಕ್ಕನತಿದೂರದ ನಂದನದಲ್ಲಿ ನಿಂದು ದೈ
ತ್ಯಾರಿ ವಿಭೂತಿಯಿಂದೆ ಮದವಕ್ಕಳನಿಂದಿದಿರ್ಗೊಳ್ವುದೆಂದು ನೀಂ
ಪೌರಜನಕ್ಕೆ ಪೋಗಿ ಮಕರಧ್ವಜ ಪೇೞಿತನೆ ಬಂದು ಕಂಡನಾ
ದ್ವಾರಕಿಯಲ್ಲಿ ಮುತ್ತಿಱಿದು ಕಾದುವ ಸಾಲ್ವನನಾ ಝಷಧ್ವಜಂ ೨೨

ಮ॥ಸ್ರ॥ ಯದುಸೈನ್ಯಾರಾತಿಸೈನ್ಯಾಹವ ಕಳಕಳಮಂ ಮೀಱುವಾತ್ಮೀಯ ಕೋದಂ
ಡದ ಮೌರ್ವೀನಾದದಿಂ ಸಾಲ್ವನನಭಿಮುಖನಂ ಮಾಡಿ ಸಂರಂಭಣಂ ದೋ
ರ್ಮದವಸ್ತಪ್ರೌಢಿ ತಮ್ಮೊಳ್ ಸರಿದೊರೆ ಸಮನೆಂಬನ್ನೆಗಂ ಧರ್ಮಮಾಯಾ
ಕದನವ್ಯಾಪಾರದಿಂ ಶಂಬರರಿಪು ಪೊಣರ್ದಾ ಸಾಲ್ವನೊಳ್ [3]ದೇಸೆಗೆಟ್ಟಂ[3] ೨೩

---

1 ಕುಲಮಂ ನೆಗೞೆ ವಿರಾಜಿಸ (ಕ) 2 ಬಂದಿರ್ದನಿರುದ್ಧನ (ಖ) 3 ಸೋದೆವಿಟ್ಟಂ (ಖ)

ವ॥ ಆ ವೃತ್ತಾಂತಮನಱಿದುಗ್ರಸೇನನಟ್ಟಿದುದ್ಧವಂ ದ್ವಿತ್ರಿಯೋಜನಾಂತರದೊಳಿರ್ದ ಜನಾರ್ದನನಲ್ಲಿಗೆ ಬರ್ಪುದುಂ

ಕಂ॥ ಉದ್ಧತರಿಪುಕೃತಭಂಗಮ
ನುದ್ಧವನಿಂಗಿತದಿನಱಿದುಮಱಿಯದ ತೆಱದಿಂ
ದುದ್ಭೂತ ಭ್ರುಕುಟಿಯಿನಂ
ದುದ್ಧುರತೇಜಂ ಮುರಾರಿ ಬೆಸಗೊಳಲಾಗಳ್ ೭೪

ನೀರದಪಥದಿಂ ಭೋಂಕನೆ
ನಾರದನಿೞಿತಂದು ತಾನೆ ಶೌರಿಗೆ ಪೇೞ್ದಂ
ವೈರಿಯ ಶೌರ್ಯಕಥಾರ್ಣವ
ಪೂರದ ಫೇನಾಂಶುವೆನಿಸೆ ರದನದ್ಯುತಿಗಳ್ ೭೫

ಮ॥ಸ್ರ॥ ಅಳವಿಂದಂ ರಾವಣಂಗಂ ಪಿರಿಯರರಿಯರಾಗಿರ್ದಸಂಖ್ಯಾತರಕ್ಷಃ
ಖಳರಂ ಕೊಂದಿಕ್ಕಿ ವಿಕ್ರಾಂತದ ಪರಿಣತಿಯಂ ತಾಳ್ದಿದಂ ಕೃಷ್ಣನಿನ್ನೆ
ನ್ನೊಳಿದಿರ್ಚಲ್ ಯೋಗ್ಯನೆಂದದ್ಭುತಸಮರರಸಂ ಸಾಲ್ವನೆಟ್ಟಿಂದು [1]ಚಾತು
ರ್ವಲರುದ್ಧದ್ವಾರಕಂ[1] ಶಂಬರಮಥನನುಮಂ ಗೆಲ್ದು ಮೆಯ್ವೆರ್ಚುತಿರ್ದಂ ೭೬

ಮ॥ ಕುಲಧಾತ್ರೀಧರದೊಳ್ ಸುಮೇರು ಕಡಲೊಳ್ ದುಗ್ಧಾಬ್ಧಿ ಪದ್ಮಾಕರಾ
ವಳಿಯೊಳ್ ಮಾನಸಮಷ್ಟದಿಕ್ಕರಿಗಳೊಳ್ ಶಕ್ರದ್ವಿಪಂ ರತ್ನಸಂ
ಕುಳದೊಳ್ ಕೌಸ್ತುಭಮುಬ್ಜಜಾದ್ಯಮರರೊಳ್ ನೀಂ ದೇವ[2] ಪೆಂಪಿಂದಮು
ಗ್ಗಳನೆಂತಂತಸುರೇಂದ್ರರೊಳ್[2] ಮಿಗಿಲಿನಂ ಸಾಲ್ವಂ ಬಲಾಟೋಪದಿಂ ೭೭

ಉ॥ ಅಕ್ಕಟದಾವ ದೋರ್ವಲಮೊ ವೇದಮನುಯ್ದು ಪಯೋಧಿಮಧ್ಯಮಂ
ಪೊಕ್ಕು ಪರಾಭವಂ ನೆಗೞಿ ದಾನವವೈರಿಯ ದೀನಮಾನರೂ
ಪಕ್ಕೆಡೆಯುಪ್ಪನೆಂದು ದನುಜೋತ್ತಮನಂ ತಮನಂ ತೃಣಕ್ಕಮೇಂ
ಲೆಕ್ಕಿಪನೇ ಪರಾಕ್ರಮಮವದಂತುಟು ದಾನವಚಕ್ರವರ್ತಿಯಾ ೭೮

ರಾಕ್ಷಸವಂಶಮಂ ಪರಿಭವಕ್ಕೆಡೆಮಾಡಿದನೇನನೆಂಬೆನ
ಬ್ಜಾಕ್ಷನಮಾಯೆಯಿಂ ಮೊಗೆದ ಪಂದಿಯ ಕೋಡೊಳ್[3]ತೋಲ ಪಾಪೆಯುಂ
ತಕ್ಷನುನಾಗಿ ನೇಲ್ದನವನೆಂದು[3] ಪುರಂದರರೂಕ್ಷನಂ ಹಿರ
ಣ್ಯಾಕ್ಷನುಮಂ ತಿರಸ್ಕರಿಸುತಿರ್ಪನೆ ದರ್ಪದೆ ಸೌಭವಲ್ಲಭಂ ೭೯

---

[1] ಚಾತುರ್ವಲಯುದ್ಧಾಧಾರಕಂ (ಕ) [2] ಪೆಂಪಗ್ಗಳಂ ತಳೆದಂತಂದಸುರೇಂದ್ರರೊಳ್ (ಕ)
[3] ಕೋಲಚಾಪೆಯುಂತಕ್ಷನುನಾಗಿಗೆಲ್ದನವನೆಂದು (ಕ)

ಚಂ॥ ಪಗಲಿರುಳಗ್ನಿಯಿಂ ಜಲದಿನಾಯುಧದಿಂ ಸುರರಿಂ ಮನುಷ್ಯರಿಂ
ಗಗನದೊಳುರ್ವಿಯೊಳ್ [1]ಮರಣಮೆಯ್ದದನಂ[1] ನರಸಿಂಹನೆಂಬನೊಂ
ದುಗುರ್ಗೊನೆಯಿಂದೆ[2] ಸೀಳ್ದು ಲಯಮೆಯ್ದಿದನೆಂದು ದಿಟಕ್ಕೆ ಸಿಗ್ಗುವಂ[2]
ಬಗೆದಪನೇ ಹಿರಣ್ಯಕಶಿಪುಪ್ರಭುವಂ ದನುಜಾಧಿನಾಯಕಂ ೮೦

ಉ॥ ಪಾಲಿಸಿದಂ ಗಡಂ ತ್ರಿಭುವನಂಗಳನೊಟ್ಟಜೆಯಿಂ ಸಮಸ್ತದಿ
ಕ್ಪಾಲರನಂಜಿಸಂ ಗಡದನಾನಱಿಯೆಂ ತುಷತೂಳಜಾಲದಿಂ
ದೇಳಿದನಪ್ಪ ವಾಮನನ ಕೈಯೊಳಗುರ್ವಿಸೆ ಕಟ್ಟುವೆತ್ತು ಪಾ
ತಾಳದೊಳಿರ್ಪನೆಂದು ಪಱಿವಂ ಬಲಿಯುಂ ಬಲಿದರ್ಪಭಂಜನಂ ೮೧

ಗಂಡಿನ ಮಾತುಗಳ್ ಪಿರಿಯವಲ್ಲದೆ ಮಾಡಿದ ಸಾಸಮುಂಟೆ ದೋ
ರ್ದಂಡ[3]ಸಹಸ್ರಮಂ ಮುನಿಕುಮಾರಕನಾತ್ಮಕುಠಾರದಿಂ[3] ಸಮಿ
ತ್ಕಾಂಡಮನೞ್ತಿಯಿಂ ತಱಿವವೋಲ್ ತಱಿದೊಟ್ಟನೆ ತನ್ನ ತೋಳ್ಗಳೇ
ಭಂಡಮೆನುತ್ತೆ ಮಾಂಕರಿಪನಗ್ಗದ ಹೈಹಯನಂ ಸುರದ್ವಿಷಂ ೮೨

ಚಂ॥ ಅವನಿಪಬಾಹುಪೀಠಜಯ[4]ಲಕ್ಷ್ಮಿಯನೀೞ್ದೞೆತಾರದಂತವೇ
ವುವೊ[4] ಬೆಳೆದಾಲಬೀೞಲೊದನಲ್ಲದೆ ತೋಳ್ಗಳೆ ಬೀೞಲೊರ್ಬಮಾ
ನವನ ಸರಳ್ಗಳಿಂ ಪಱಿವುವೇವುವೊ ಪೇೞ್ ಸೊರೆಗಾಯು ಬಂಬಲ
ಲ್ಲವೆ ತಲೆಪತ್ತೆನುತ್ತೆ ದಶಕಂಠನನಂಡಲೆವಂ ನಿಶಾಚರಂ ೮೩

ಇಳೆ ನಗುವಂತು ಬಾರದ ಭವಂಗಳುಮಂ ನೆಱೆ ಬಂದು ಮತ್ತೆ ಗೋ
ವಳಿಗರ ಪಳ್ಳಿಯೊಳ್ ನೆಲಸಿದಾ ದನಗಾಹಿಯೆನಿಪ್ಪ ಕೃಷ್ಣನೇಂ
ತಳಿಗೆಯೊಳಿಟ್ಟು [5]ಸಂಹರಿಸನೇ[5] ಕಲಹಂಬರಮುಂಟೆ ತನ್ನ ದೋ
ರ್ಬಳದ ಪೊಡರ್ಪೆನುತ್ತೆ ಶಿಶುಪಾಲನನೇಳಿಸುವಂ ವೃಕಧ್ವಜಂ ೮೪

ಕಂ॥ ಅತಿಭರದಿನವನಿ ಪಾತಾ
ಳತಳಕ್ಕಿೞಿದಪ್ಪುದೆಂದು [6]ನೋಟ್ಪರ್ಗತಿವಿ
ಸ್ಮಿತನೆನಿಪ ಸೌಭಪುರದೊಳ್[6]
ಚತುರ್ವಲಂ ಬರೆ ಸುರಾರಿ ಕಾದಲ್ ಬಂದಂ ೮೫

---

1 ಮರಣಮೆಯ್ದದನಂ (ಕಖ) 2 ಸೀಳ್ದು ಲಯಮೆಯ್ದಿದನೆಂದು ದಿಟಕ್ಕೆ ಸಿಗ್ಗನೇಂ (ಕ) ಸೇಳ್ದತೆಱದಿಂ ಲಯಮೆಯ್ದಪನೆಂದು ಸಿಗ್ಗಿನಿಂ (ಖ) 3 ಸಹಸ್ರದಿಂ ಮುನಿಕುಮಾರಕನಾತ್ಮಕುಠಾರದಿಂ (ಕ) 4 ಲಕ್ಷ್ಮಿಯನೀಳ್ದೆಳೆವಾಗಳಂತವೇವುವೊ (ಖ) 5 ಸಂಹರಿಪನೇ (ಖ) 6 ಕಾಮಗತಿವಿಸ್ಮೃತ ಮೇಘನಾದಪುರದಿಂ (ಖ)

ಸುರಮಾರ್ಗಪರಿಭ್ರಮಣದಿ
ನರಿದೆನಿಕುಂ ತ್ರಿಪುರಮನಿತೆ ಬಹುರೂಪಗತಿ
ಸ್ಫುರಿತಂ ಸೌಭಪುರಂ ತ
ತ್ಪುರವಾಹನನಾಗಿ ಕಾದೆ [1]ಸಾಲ್ವನಜಯ್ಯಂ[1] ೮೬

ವ॥ ಎಂದು ಸೌಭಪಲ್ಲಭನಾಡಂಬರಮನಂಬುರುಹಗರ್ಭತನಯಂ ಪೇಲ್ದು ಪೋಗೆ ಬಲಸಮೇತಮುದ್ಧವನೊಳ್ ಕಾರ್ಯಪರ್ಯಾಲೋಚನದಿಂ ಕಿಱಿದುಬೇಗವಿರ್ದು

ಮ॥ ಅರಿಯಂ ಕೊಲ್ವುದೆ ಕಜ್ಜಮಾ ಪದದೊಳೆಂದೀ ಯುದ್ಧಮಂ ಯುದ್ಧಮಂ
ಪರಮ[2]ಪ್ರೀತಿದಮಂ ನೆಗಳ್ಚಿದನಿದಿರ್ಚಲ್ ಸಾಲ್ವನೊಳ್[2] ಸಾಲ್ವನೊಳ್
ಧುರಮಾದತ್ತೆನಗೆಂದು ಚಕ್ರಧರನತ್ಯಾಲೋಚನಂ ಲೋಚನಂ
ಮುರಿದುನ್ಮೀಲಿಸಿ ನೋಡಿದಂ [3]ದ್ಯುತಿವೃತಾಶಾಚಕ್ರಮಂ[3] ಚಕ್ರಮಂ ೮೭

ವ॥ ಅನಂತರಮಾ ಮುಹೂರ್ತಮೆ ವಿಜಯಕಾರಣಮುಹೂರ್ತಮಾಗೆ

ಮ॥ ಗರುಡಾರೂಢನುಪೇಂದ್ರನೆಯ್ದಿ ಧನುಮಂ ವಿಸ್ಫಾರಿತಂ ಮಾಡಿದಂ
ಪರಸೈನ್ಯಾಬ್ಧಿಯುಮಬ್ಧಿಯುಂ ಕದಡೆ ವಿದ್ವಿಡ್ಭಾಮಿನೀಗರ್ಭಮುಂ
ಧರಣೀಭೃತ್ಕುಲಕೂಟಮುಂ ಕಲಿಲೆ ದೈತ್ಯಾಧೀಶನುಂ ದಿಙ್ಮದ
ದ್ವಿರದವ್ರಾತಮುಮೆತ್ತಿಕಟ್ಟಿ ಮದಮಂ ಟಂಕಾರನಿರ್ಘೋಷದಿಂ ೮೮

ಕಂ॥ [4]ಮೇಘಾಧ್ವಸ್ಥನಿಶಿಚರಬ
ಲೌಘದ[4] ಭಟಕೋಟಿ ಕಱಿಪ ಶಸ್ತ್ರಾಸ್ತ್ರ[5]ಚಯಂ
ಜ್ಯಾಘಾತಜಾತಪವನ
ವ್ಯಾಘಾತದೆ[5] ಮಸುಳಲಸುರಹರನಿಸುತಿರ್ದಂ ೮೯

ಚಂ॥ ಇದು ವಿಳಯಾಭ್ರಮಲ್ಲಿದು ನಿಶಾಚರನಾಕೃತಿ ಶಕ್ರಚಾಪಮ
ಲ್ಲಿದು ಭುಜಕೃಷ್ಟಚಾಪಲತೆ ಪೆರ್ಮೊಟಗಲ್ಲಿದು ಗರ್ಜೆ ವೃಷ್ಟಿಯ
ಲ್ಲಿದು ಸುರಿವಸ್ತ್ರಜಾಲವೆನಲರ್ವಿಸುವಾಕೃತಿ ಪರ್ವುಗೊಂಡ ಬಿ
ಲ್ಲೊದವಿದ ಗರ್ಜಿತಂ ಸುರಿವ ಸಾಯಕಮದ್ಭುತಮಾಯ್ತು ಸಾಲ್ವನಾ ೯೦

---

[1] ಸಾಲ್ವನಜೇಯಂ (ಕಖ) [2] ಪ್ರೀತಿದಮಂ ನೆಗಳ್ಚಿನಮಿದಿರ್ಚಲ್ ಸಾಲ್ವನೊಳ್ (ಕ) [3] ದ್ಯುತಿಧೃತಾಶಾಚಕ್ರಮಂ (ಕ) [4] ಮೇಘಾಧ್ವದೆ ಪರಬಲಶಬಲೌಘದ (ಕ) [5] ಚಯಮ್ಯಾಘಾತ ಜಾತಪವನಜ್ಯಾಘಾತದೆ (ಕ)

ಕಂ॥ ಮುನಿ ದೂಱಿ ಕೀಱಿ ಭರದಿಂ
ದನುಜೇಶ್ವರನಿಸುವ ಕೋಟಿಗಣಿತದ ಕಣೆಗಳ್
ಮೊನೆಯಿಂ ಪಿಳ್ಕುವರಂ ಸೌ
ವನೆ ಸೀಳ್ವಂತುರ್ಚಿಪೋದುವಚ್ಯುತನಿಸುಗಳ್ ೯೧

ಮ॥ ಕದನಂ ಭೌಮನಿಕುಂಭಬಾಣದನುಜಪ್ರಖ್ಯಾತರಿಂದಾದ ಕಾ
ಲದೊಳೀಕೂರ್ಪು [1]ಮುರಾರಿಗಿಲ್ಲಱಿಂದೆವೀಗಳ್ ಶತ್ರುವೆಂತೆಂತು ಬ
ಲ್ಲಿದನಂತಂತೆ ಮುಕುಂದನೇಸು[1] ಮಿಗಿಲೆಂದಿಂದ್ರಾದಿಗಳ್ ಕೀರ್ತಿಸಲ್
ಪುದಿದಂ ಸಾಲ್ವನನಸ್ತ್ರವಿದ್ಯೆಪರಮೆಂಬಂತಸ್ತ್ರದಿಂದಚ್ಯುತಂ ೯೨

ಕಂ॥ ನಿಂದಿಸುವ ಗರುಡರಥನಂ
ನಿಂದಿಸುವಂದದೆ ವಿಚಿತ್ರತೂರ್ಯಂ ನಾನಾ
ಚ್ಛಂದದೆ ಮೊಱಗೆ ಪುರಂ ಸ್ವ
ಚ್ಛಂದದೆ [2]ಚರಿಯಿಸಿದುದಸುರನಿರೆ ದೆಸೆದೆಸೆಯೊಳ್[2] ೯೩

ಸ್ರ॥ ಆನೀ ಮಾಯಾಪುರಕ್ಕೆಯ್ದುತಿಜವದೆ ಸಮಂ ಬರ್ಪೆನೆಂದುಚ್ಚಲತ್ಸೇ
ನಾನೀಕಂ ಕ್ಷುಭ್ಯದಂಭೋನಿಧಿ ವಿಧುತಮಹೀಮಂಡಲಂ ಪಕ್ಷವಾತಂ
ಪೀನಂ ಮೆಯ್ವೆರ್ಚುವನ್ನಂ ಭ್ರಮಿಯಿಸಿ ಸೆಡೆದಂ ಡೀನ ಸಂಡೀನ ತಿರ್ಯ
ಗ್ಡೀನೋಡ್ಡೀನಾವಡೀನಪ್ರಕೃತಿಗರುಡನೇಂ ವಿಸ್ಮಯಂ ಸೌಭವೇಗಂ ೯೪

ಕಂ॥ ಪರಿದುದು ಪಾಸುಂ ಪೊಕ್ಕುಂ
ತಿರುಗಿದುದು ಘರಟ್ಟದಂತೆ ಪರಿಧಿಯವೋಲಂ
ಬರಮಂ ಬಳಸಿದುದಿಳೆಯಂ
ತೆರೆಸುತ್ತಿದಂದದರೆ ಕೊರ್ವಿ ನಿಂದುದು ಸೌಭಂ ೯೫

ಚಂ॥ ಇದಿರೊಳ್ ನಿಟ್ಟಿಸೆ ಪಿಂತೆ ಪಿಂತೆ ನಡೆನೋಡಲ್ ಪಾರ್ಶ್ವದೊಳ್ ಪಾರ್ಶ್ವದೇ
ಶದೊಳಾಳೋಕಿಸೆ ಮೇಗೆ ಮೇಗಡರೆ ಲಕ್ಷ್ಯಂಗೆಯ್ಯೆ ಭೂಮಂಡಲಾ
ಗ್ರದೊಳಂತಲ್ಲದೆ ಕೋಟಿರೂಪದೊಳದೃಶ್ಯಾಕಾರದೊಳ್ ನಿಂದು ತಂ
ದುದು ವಿಭ್ರಾಂತಿಯನಚ್ಯುತಂಗೆ ಧುರದೊಳ್ ಮಾಯಾಪುರಂ ಸಾಲ್ವನಾ ೯೬

---

[1] ಮುರಾರಿಗಿಲ್ಲರಿದೆ ದೈತೇಯೇಶನಂತಿರ್ಕೆ ಬಲ್ಲಿದನಂ ತುತ್ತೆ ಮುಕುಂದನೀಗ (ಕ) [2] ಚರಿಯಿಸಿದುದಸುರಸೆದೆನಿಸೆ ದೆಸೆದೆಸೆಯಂ (ಕ)

ಕಂ॥ ಎತ್ತಲ್ ರಿಪುಪುರವಿರ್ದಪು
ದೆತ್ತಲ್ ಖಳನಿಸುವನೆತ್ತವಾರ್ಗಣೆ ಕವಿದ
ತ್ತೆತ್ತ ನಿವಾರಿಪೆನೆಂಬೀ
ಚಿತ್ತಂ ಹರಿಗಾದುದೇಂ ಪ್ರತಾಪಿಯೊ ಸಾಲ್ವಂ ೯೭

ಕವಿವಸ್ತ್ರಪರಂಪರೆಯುಂ
ತ್ರಿವಿಕ್ರಮಂ ಖಡ್ಗದಿಂ ನಿವಾರಿಸುತಿರ್ದಂ
ಭವಮೋಹಪರಂಪರೆಯುಂ
ವಿವೇಕದಿಂ ಪೊರ್ದಲೀಯದನಘನ ತೆಱದಿಂ ೯೮

ವ॥ ಅಂತಿರ್ದು ಕಿಱಿದಾನುಂ ಬೇಗದಿಂ

ಕಂ॥ ಕುಪಥಭ್ರಾಂತನನಾಗಳು
ಮುಪನಿಷದುಕ್ತಿಯೊಳೆ ನಿಲಿಪವೋಲ್ ಸತ್ಪಥದೊಳ್
ರಿಪುಪುರಮಂ ಸ್ತಂಭಿಸಿದಂ
ದ್ಯುಪಥದೊಳಸುರಾಂತಕಂ ನಿಜಾಜ್ಞಾ ಬಲದಿಂ ೯೯

ಮ॥ ಇವನಿನ್ನುಂ ಮೆಱೆದಪ್ಪನೆನ್ನಿದಿರೊಳಾತ್ಮಶ್ರೀಯನೆಂದಾರ್ಪಿನಿಂ
ದವೆರಟ್ಬಿಲ್ಲದಿನಬ್ಜನಾಭನಿಸೆ ಕೋಟಾಟ್ವಾಳದಿಂ ಭಿನ್ನದಂ
ಡವರಾತಿಸ್ಫುರಿತಾತಪತ್ರಯುಗಳಂ [1]ಬಿಟ್ಟಿತ್ತು[1] ತದ್ದೈತ್ಯರಾ
ಜವಧೂವಕ್ತ್ರಿಕಕರ್ಣಪತ್ರಯುಗಳಂ ಬೀೞ್ವಂತೆ ಭೂಭಾಗದೊಳ್ ೧೦೦

ಕಂ॥ ಮೇಗೆತ್ತಿದ ಬೆಳ್ಗೊಡೆಗಳ್
ಪೋಗಲೊಡಂ ರೌದ್ರರಸದ ಮುಚ್ಚುಳ್ ಪೋದಂ
ತಾಗೆ ಕಡುಮುಳಿದು ದಾನವ
ನಾಗಳ್ ದಿ[2]ವ್ಯಾಸ್ತ್ರಮಂ ಪ್ರಯೋಗಿಸುತಿರ್ದಂ ೧೦೧

ದಿತಿಸುತನಸ್ತ್ರೋತ್ಕರಮಂ
ಪ್ರತಿಕಾರಾಸ್ತ್ರಂಗಳಿಂ ನಿವಾರಿಸಿದಂ ಶ್ರೀ
ಪತಿ ತನ್ನ ನಾಮಕೀರ್ತನ
ತತಿಯಿಂ ವೈಷ್ಣವರಪಾಯಮಂ ಪಿಂಗಿಪವೋಲ್ ೧೦೨

ವ॥ ತದನಂತರಂ

---

[1] ಬಿರ್ದತ್ತು (ಕ) [2] ದಿವ್ಯಾಸ್ತ್ರದಿಂ (ಕ)

ಮ॥ ಸುರವಿಧ್ವಂಸಿಯು ಬಿಲ್ಲನೊಂದೆ ಶರದಿಂ ಗಾತ್ರತ್ರಮುಂ ಕೃಷ್ಣನಾ
ರ್ದೆರಡಂಬಿಂ ತಱುದಿಕ್ಕಿ ಮತ್ತವನ ತೋಳೊಳ್ ಭಾಳದೊಳ್ ಮೌಳಿಯೊಳ್
ಕರದೊಳ್ ಕಂಧರದೊಳ್ ಮಹೋದರದೊ[1]ಳುದ್ಯದ್ವಕ್ಷದೊಳ್ ಕಕ್ಷದೊಳ್
ಬರಿಯೊಳ್ ನೇತ್ರದೊಳೆಯ್ದೆ[1] ತೆತ್ತಿಸಿದನತ್ಯಾಭೀಳಬಾಣಂಗಳಂ ೧೦೩

ಕಂ॥ ಗಱುಗಡಿದಾಳ್ವಂಬುಗಳಿಂ
ದೊಱೆತವ ನವವ್ರಣದಿನಸುರನಾಟೋಪಂ ಕ
ಣ್ದೆಱೆದತ್ತು ಗಂಡಗರ್ವಂ
ಗಱುವೊಯ್ದುದು ರೌದ್ರರಸಮೆ ಪಲ್ಲವಿಸಿದವೊಲ್ ೧೦೪

ವ॥ ಅಂತು ರಣರಸಾಟೋಪದಿಂ [2]ಪೆಱತೊಂದು ಚಾಪಮುಂ[2] ಪಿಡಿಯಲ್ ಸಾಲ್ವ
ಸಾಲ್ವನಂ ನೋಡಿ

ಕಂ॥ [3]ಬಿನದಂ ಸುದರ್ಶನಂ ಸಾ
ಲ್ವನ ತಲೆಗೆಂದಾಯ್ತು ಸಫಲಮಕ್ಕೆಂದು ಸುದ
ರ್ಶನಜನ್ಮಮವನ ತಲೆಗೊಂ
ಡೆನುತೆ ಸುದರ್ಶನಮನಸುರಮಥನಂ ಪಿಡಿದಂ[3] ೧೦೫

ಪಿಡಿದು ಹರಿ ತಿರುಪಿದಂ [4]ಕೊ
ರ್ಪಿಡಿದ[4] ಸುದರ್ಶನಮನದಱ ಮಾರ್ಪೊಳೆಪುಗಳೊಳ್
[5]ತೊಡವಾಗಿರೆ[5] ರವಿಬಿಂಬಂ
ತಡವಾಗಿರದರಿಯನಿಕ್ಕಿ ಗೆಲ್ವುಜ್ಜುಗದಿಂ ೧೦೬

ಮ॥ಸ್ರ॥ ಮುನಿದಾತಂ ಕೃಷ್ಣನಾ ಕೃಷ್ಣನ ಭುಜಗತಮುಂ ಚಕ್ರಮಾ ಚಕ್ರದಿಂ ಸಾ
ಲ್ವನ ಮೂರ್ಧಚ್ಛೇದಮಾಚ್ಛೇದಮನತಿಮುದದಿಂ ನೋಡುವಂ ನಾವುಮೆಮ್ಮಿಂ
ದಿನಿತಾನುಂ ಧನ್ಯರಾರೆಂದಮರರೊಸೆವಿನಂ ಕೃಷ್ಣಚಕ್ರಾಹತಂ ಸಾ
ಲ್ವನ ಮೂರ್ಧಂ ಪಾಱುದತ್ತುಜ್ಜ್ವಲಮಣಿಮಕುಟಂ ಕುಂಡಲೋದ್ಭಾಸಿ ಗಂಡಂ ೧೦೭

ವ॥ ಅಲ್ಲಿಂ ಬೞಿಯಂ

---

[1] ಉದ್ಯದ್ವಕ್ಷದೊಳ್ ಪಕ್ಷದೊಳ್ ಪರಿಲೋಲಾಕ್ಷದೊಳೆಯ್ದೆ (ಖ) [2] ಪೆಱತುಚಾಪಮುಂ (ಕ) [3] ನೆನೆದು ಸುದರ್ಶನಮುಂ ಸಾ।ಲ್ವನ ತಲೆಗೊಂದಾಯ್ತು ಸಫಲಮಕ್ಕೆಂದು ಸುದ।ರ್ಶನಜನ್ಮಮವನ ತಲೆಗೊಂ।ಬಿನೆಗ ಸುದರ್ಶನಮುನಸುರಮಥನಂ ಪಿಡಿದಂ (ಕ) [4] ಮಾರ್ಪಿಡಿದು (ಕ)
ತಡಮಾಗಿರೆ (ಕ)

ಮ॥ಸ್ರ॥ ಪೊಱಮಡುಯ್ವುಂ ತಾಗೆ ಬಿಲ್ಲಂ ತೆಗೆದೆಱೆದು ಸರೋಜಾಕ್ಷನೆಚ್ಚಗ್ನಿಬಾಣಂ
ಕಱಿಯುತ್ತುಂ ಕೆಂಡಮಂ ಕೇಸುರಿಯನುಗುೞುತಂ ತ್ರ್ಯಂಬಕಂ ಭಾಳನೇತ್ರಂ
ದೆಱೆದಂತಟ್ಟುತ್ತು ಮುಟ್ಟುತ್ತೞುರ್ದುದುರಿಪಿದತ್ತಾ ಪುರೀಚಕ್ರಮಂ ಪೋ
ಗಱಿಂದೆಂ ಕಾಲಾಗ್ನಿರುದ್ರಾಕೃತಿದಳಿತಜಗಂಗಚ್ಯುತಂಗೇನಸಾಧ್ಯಂ ೧೦೮

ವ॥ ಆ ಪ್ರಸ್ತಾವದೊಳ್

ಚಂ॥ ಎಮಗಮರತ್ವವಿಂದು ದೃಢವಾದುದು ಭೂಭರವಿಂದು ಪೋಯ್ತು ವಾ
ಸವಪದವಿಂದು ಸಂದುದು ಮುರಾಂತಕನೊಳ್ ದನುಜಾಂತಕತ್ವವಿಂ
ದವಿತಥಮಾಯ್ತು ನಾರದನ [1]ಕಣ್ಬಸವೋಡಿ[1]ದುದಿಂದೆನುತ್ತುಮು
ಸ್ಸವಪಟಹಸ್ವನಂ ನೆಗೞೆ ಪೂಮೞೆಯಂ ಸುರರೊಲ್ದು ಸೂಸಿದರ್ ೧೦೯

ವ॥ ಅಂತು ವಿಜಯಮಂಗಳಂ ನೆಗೞೆ ಪರಿಪೂರ್ಣಮನೋರಥನಾಗಿ

ಮ॥ಸ್ರ॥ ಸ್ಮರರಾಜ್ಯಶ್ರೀಸಖೀಸಂಕುಲಮೆನೆ ವನಿತಾಸಂಕುಲಂ ಬಂದು ಸೂಸು
ತ್ತಿರೆ ಶೇಷಾನೀಕಮಂ ದುಂದುಭಿಯ ರುತಿ ಸುಧಾಂಭೋಧಿಘೋಷಂಬೊಲುಣ್ಮು
ತ್ತಿರೆ ನಾನಾತೋರಣೋದ್ಯದ್ಧ್ವಜಸಮಿತಿ ಪುರಶ್ರೀಯಲಂಕಾರದಂತೊ
ಪ್ಪಿರೆ ಪೊಕ್ಕಂ ದ್ವಾರಕಾಮಧ್ಯದ ನೃಪಗೃಹಮಂ ಶ್ರೀಜಗನ್ನಾಥದೇವಂ ೧೧೦

ಮ॥ ಪದಿನಾಲ್ಕುಂ [2]ಜಗಮಲ್ಲಿಗಲ್ಲಿಗೆಸೆವೀ ಬ್ರಹ್ಮಾಂಡ[2] ಲಕ್ಷಂಗಳಂ
ಗದೊಳೊಪ್ಪಿರ್ಪುವು ಹೇಮಕೀಲಘಟಿತಶ್ರೀಖಂಡಮಂ ತಂದು [3]ಪೂ
ಸಿದೊಡಾ ಪೊನ್ನರಜಂಗಳಿರ್ಪವೊಲೆನಿಪ್ಪಾ ವಿಷ್ಣು[3] ತನ್ನಂಶದಂ
ಶದೆ ಪುಟ್ಟಿರ್ದ ಕಥಾಂಶದಂಶದ ಮಹತ್ತ್ವಾಂಶಾಂಶಮಿಂತೀ ಸ್ತವಂ ೧೧೧

ಕುರುಪಾಂಡೂದ್ಭವ ಭಾರತಾಹವನಿಯುಕ್ತಾಷ್ಟಾದಶಾಕ್ಷೌಹಿಣೀ
ಧುರಮೇಂ ಗಣ್ಯಮೆ ಬೇಱೆ ಕೃಷ್ಣನೆ ವಿಪಕ್ಷಾಕ್ಷೌಹಿಣೀಲಕ್ಷಮಂ
ಧುರದೊಳ್ ಮರ್ದಿಸೆ ಭೂಭರಂ ತೊಲಗಿತೆಂಬೀ ಕಾವ್ಯಮಂ ಪೇೞ್ವ ಕೇ
ಳ್ವರೊಳಜ್ಞಾನಭರಂ ಕಿಡಲ್ ಸುಖಭರಂ ಕೈಕೊಳ್ಗುವಾತ್ಯಂತಿಕಂ ೧೧೨

---

1 ಕಣ್ಬಸಮಾಡಿ (ಖ) 2 ಜಗಮಲ್ಲಿಗಲ್ಲೆ ಸೆವಿನಂ ಬ್ರಹ್ಮಾಂಡ (ಖ) 3 ಪೂಸಿದೊಡಾ
ತ್ಮಾಂಗದತೋರ್ಕೆಯಂತಿರೆಸದಿರ್ಪಾ ವಿಷ್ಣು (ಕ)

ಉ॥ ಬಾಡಿದ ಕೆಯ್ಗೆ ಕೊಳ್ಗೆ ಮಳೆ ಸಸ್ಯಕುಲಂ ಸತತಂ ಸುಭಿಕ್ಷಮಂ
ಮಾಡುಗೆ ಗೋಧನಾಳಿ ಕೊಡವಾಲ್ಗಱೆ ಗೋಪರನಂಗರಾಗದೊಳ್
ಕೂಡುಗೆ ರುದ್ರಭಟ್ಟಕೃತಿ ವೈಷ್ಣವಕಾವ್ಯರಸಾರ್ಣವಂ ತುಳುಂ
ಕಾಡುಗೆ ಭೂಮಿನಿಲ್ವಿನಮುಹರ್ಪತಿನಿಲ್ವಿನಮಿಂದುನಿಲ್ವಿನಂ ೧೧೩

ಗದ್ಯ॥ ಇದು ಸಮಸ್ತ ಕಮಲಭವಾಂಡಮಾಲಾಘಟೀಘಟಿತಾರಘಟಘಟನಾ ಸ್ವತಂತ್ರ
ನಿಜಸ್ವರೂಪನಿರೂಪಣ ಚಕಿತ ಸಕಲಾಮ್ನಾಯತಂತ್ರ ಲಕ್ಷ್ಮೀಕಾಂತ
ಶ್ರೀಪಾದಭಕ್ತಿಯುಕ್ತ ಸುಕವೀಂದ್ರರುದ್ರಪ್ರಣೀತ ಶ್ರೀಜಗನ್ನಾಥ
ವಿಜಯಮಹಾಪ್ರಬಂಧದೊಳ್ ಅಂಧಕರಿಪುಸ್ಕಂದಯುದ್ಧ
ಬಾಣಾಸುರಸಹಸ್ರಭುಜಚ್ಛೇದನ ರಿಪುಭ್ರಮಣ ಪುರ
ಸ್ತಂಭನ ಸಾಲ್ವವಧ ದ್ವಾರಾವತೀಪ್ರವೇಶವರ್ಣನಂ
ಅಷ್ಟಾದಶಾಶ್ವಾಸಂ
ಸಂಪೂರ್ಣಂ

ಕ್ರೋಡಪತ್ರವಿಸ್ತಾರಃ

ಕಾವ್ಯ ನಾಟಕ ತರ್ಕ ವ್ಯಾಕರಣ ಚ್ಛನ್ದೋಽಲಂಕಾರದ್ಯನೇಕಶಾಸ್ತ್ರ ಪಾರಾವಾರ ಪಾರಗ ಶ್ರೀಮತ್ಸುಕವೀನ್ದ್ರ ರುದ್ರಭಟ್ಟ ಪ್ರಣೀತ ಶ್ರೀಜಗನ್ನಾಥವಿಜಯ ಮಹಾ ಪ್ರಬನ್ಧೇ ಪ್ರಥಮಂ ತಾವತ್ಸುರಜ್ಯೇಷ್ಠವಿಜ್ಞಾಪನಂ. ೨ ಸುಧಾರ್ಣವಾವತರಣೋದ್ಯೋಗಃ. ೩ ಬಲಭದ್ರಾವತಾರಃ. ೪ ಕೃಷ್ಣೋತ್ಪತ್ತಿಃ. ೫ ಬಾಲಲೀಲಾವಿನೋದಃ. ೬ ಪೂತನಾವಧಃ. ೭ ಶಕಟಾಸುರಭಞ್ಜನಂ. ೮ ಯಮಲಾರ್ಜುನೋನ್ಮೂಲನಂ. ೯ ವತ್ಸಗೋಪಾಲವಿನೋದಃ. ೧೦ ಕಾಳಿಯಸರ್ಪ ದರ್ಪದಳನಂ. ೧೧ ಪಯೋಧರಾಗಮನಂ. ೧೨ ದೇನುಕನಿರ್ಧೂನನಂ. ೧೩ ಪ್ರಲಮ್ಬನಿಶುಮ್ಭನಂ. ೧೪ ಶರತ್ಕಾಲಾಗಮನಂ. ೧೫ ಗಿರಿಯಜ್ಞಃ. ೧೬ ಗೋವರ್ಧನೋದ್ಧರಣಂ. ೧೭ ಶಕ್ರಾಗಮನಂ. ೧೮ ಗೋವಿನ್ದಾಭಿಷೇಕಃ. ೧೯ ರಾಸಕ್ರೀಡಾ ಪ್ರಾರಮ್ಭಃ. ೨೦ ರಾಸಕೇಳಿಃ. ೨೧ ಪುಙ್ಗವಾಸುರ ಸಂಹರಣಂ. ೨೨ ಕೇಶಿಮಥನಂ. ೨೩ ಅಕ್ರೂರದರ್ಶನಂ. ೨೪ ಯಮುನಾಹ್ರದದರ್ಶನಂ. ೨೫ ವಿಶ್ವರೂಪದರ್ಶನಂ. ೨೬ ರಜಕಾಸುರಪ್ರಹರಣಂ. ೨೭ ಧನುರ್ಭಙ್ಗಃ. ೨೮ ಕುವಲಯಾಪೀಡನಿಷ್ಪೀಡನಂ. ೨೯ ಚಾಣೂರಮಲ್ಲಮಥನಂ ೩೦ ಮುಷ್ಟಿಕಮಲ್ಲಮಥನಂ. ೩೧ ಕೋಸಲಕಾದಿಮಥನಂ. ೩೨ ಕಂಸಧ್ವಂಸನಂ ೩೩ ಉಗ್ರಸೇನಾಭಿಷೇಕಃ. ೩೪ ಪಾಕಶಾಸನಸಭಾಕರ್ಷಣಂ. ೩೫ ಗುರುಪುತ್ರಾಹರಣಂ. ೩೬ ಮಕರಾಕರಾಲೋಡನಂ. ೩೭ ಪಞ್ಚಜನಜನ್ಯಂ. ೩೮ ಪಾಞ್ಚಜನ್ಯಲಾಞ್ಛನಂ. ೩೯ ನನ್ದಕಾಗಮನಂ. ೪೦ ಸುದರ್ಶನಸಮಾಗಮಃ. ೪೧ ಶಾರ್ಙ್ಗಪ್ರಾಪ್ತಿಃ. ೪೨ ಕೌಮೋದಕೀಸಮಾಗಮನಂ. ೪೩ ಜರಾಸನ್ಧಯುದ್ಧಂ. ೪೪ ಪರಶುರಾಮದರ್ಶನಂ. ೪೫ ಗೋಮನ್ತದುರ್ಗಾರೋಹಣಂ. ೪೬ ತದ್ದುರ್ಗದಹನೋಪಶಮನಂ. ೪೭ ವಿಪಕ್ಷಾಕ್ಷೌಹಿಣೀಚತುರ್ವಿಂಶತಿನಾಶನಂ. ೪೮ ಜರಾಸನ್ಧ ಪ್ರಮುಖ ಮಕುಟಭಙ್ಗಃ. ೪೯ ಸೃಗಾಲವಧಃ. ೫೦ ದಿವ್ಯರಥೋಪಲಬ್ಧಿಃ. ೫೧ ದರ್ಪಿಷ್ಠನೃಪ ಸಭೋಚ್ಚಾಟನಂ. ೫೨ ರಾಜರಾಜಾಭಿಷೇಕಃ. ೫೩ ಕಾಲಯವನದಹನಂ. ೫೪ ದನ್ತವಕ್ರವಿಕ್ರಮಾಡಮ್ಬರಃ. ೫೫ ದನ್ತವಕ್ರಸಂಹರಣಂ. ೫೬ ದ್ವಾರಕಾನಗರನಿರ್ಮಾಪಣಂ. ೫೭ ತತ್ಪುರಪ್ರವೇಶಃ. ೫೮ ನಾರದಾಗಮನಂ. ೫೯ ರುಕ್ಮಿಣೀರೂಪಪ್ರಶಂಸನಂ. ೬೦ ರುಕ್ಮಿಣೀದರ್ಶನಂ. ೬೧ ತದಗ್ರಜಯುದ್ಧಂ. ೬೨ ರುಕ್ಮಿಣೀವಿವಾಹಃ. ೬೩ ಸತ್ಯಭಾಮಾವಿಪ್ರಲಮ್ಭಃ ೬೪ ತದೀಯವಿವಾಹಃ. ೬೫ ಅಷ್ಟೋತ್ತರಶತಸತೀಸ್ವೀಕರಣಂ. ೬೬ ನಾಕಜೇನ್ದ್ರಾಗಮನಂ. ೬೭ ನರಕಾಸುರಾಡಮ್ಬರಃ. ೬೮ ತದ್ವಧಃ. ೬೯ ಷೋಡಶಸಹಸ್ರ ದಿವ್ಯಕಾನ್ತಾಸ್ವೀಕರಣಂ. ೭೦ ವಿಬುಧಜನನೀ

ಕುಣ್ಡಲಪ್ರದಾನಂ. ೭೧ ರುಕ್ಮಿಣೀಪುಣ್ಯಕವ್ರತಂ. ೭೨ ಪ್ರದ್ಯುಮ್ನಾದಿಸಹಸ್ರಕುಮಾರೋತ್ಪತ್ತಿಃ. ೭೩ ನಾರದದತ್ತಪಾರಿಜಾತಪ್ರಸೂನನಿಮಿತ್ತ ಸತ್ಯಭಾಮಾಪ್ರಣಯಕಲಹಃ. ೭೪ ಪಾರಿಜಾತಾಪಹರಣಂ. ೭೫ ಸತ್ಯಭಾಮಾ ಪೌಲೋಮೀಸೋಪಹಾಸವಚನಂ. ೭೬ ಸುರೇಶ್ವರಾಪಜಯಃ. ೭೭ ತ್ರಿಪುರಾನ್ತಕದರ್ಶನಂ. ೭೮ ಹೇಮನ್ತಸಮಯಾವಾಪ್ತಿಃ. ೭೯ ಶಿಶಿರೋಪಗಮನಂ. ೮೦ ವಸನ್ತಸೇವನಂ. ೮೧ ವನಕ್ರೀಡಾ. ೮೨ ಜಲಕ್ರೀಡಾ. ೮೩ ಷಟ್ಪುರೇಶಮಥನಂ. ೮೪ ಶಿಶುಪಾಲಾಡಮ್ಬರಃ. ೮೫ ಮನ್ತ್ರಾಲೋಚನಂ. ೮೬ ಯುಧಿಷ್ಠಿರ ರಾಜಸೂಯ ನಿರೀಕ್ಷಣಾರ್ಥಮಿನ್ದ್ರಪ್ರಸ್ಥಪ್ರಯಾಣಂ. ೮೭ ರೈವತಕಾದ್ರಿವಿಭವಃ. ೮೮ ತತ್ರಪೋವನವರ್ಣನಂ. ೮೯ ಇನ್ದ್ರಪ್ರಸ್ಥಪುರಪ್ರವೇಶಃ. ೯೦ ಜರಾಸನ್ಧಹರಣಂ. ೯೧ ರಾತ್ರಿವಿಹಾರಃ. ೯೨ ಶಿಶುಪಾಲವಧಃ. ೯೩ ನಿದಾಘಕಾಲಪ್ರಾಪ್ತಿಃ. ೯೪ ಬಾಣಪುತ್ರೀಮದನಪುತ್ರಸಂಯೋಗಃ. ೯೫ ಅನ್ಧಕರಿಪುಯುದ್ಧಂ. ೯೬ ಸ್ಕನ್ದಯುದ್ಧಂ. ೯೭ ಬಾಣಾಸುರ ಭುಜಸಹಸ್ರಚ್ಛೇದನಂ. ೯೮ ರಿಪುಭ್ರಮಣಂ. ೯೯ ಪುರಸ್ತಮ್ಭನಂ. ೧೦೦ ಸಾಲ್ವವಧಃ. ೧೦೧ ದ್ವಾರವತೀಪ್ರವೇಶಃ. ಇತ್ಯೇಕೋತ್ತರಶತ ಕೃತ್ಯಾನಿ ಸಮಾಪ್ತಾನಿ.

APPENDIX.

ಜಗನ್ನಾಥ ವಿಜಯ ಪಂಚಪಾಷಾಣ ವ್ಯಾಖ್ಯಾನಂ.

ಜಗನ್ನಾಥವಿಜಯ ಮಹಾಪ್ರಬಂಧ ಮಂಗಲಾಚರಣ ಪಂಚಪಾಷಾಣ ವ್ಯಾಖ್ಯಾನಂ–

ಅಥ ಮಹಾಕವಿಃ ಉಭಯಭಾಷಾಭೂಷಿತ ಪ್ರಬಂಧ ಪ್ರವೀಣಃ ಶ್ರೀವರ್ಮಾ ರುದ್ರಭಟ್ಟ ನಾಮಾ ಪುರುಷೋತ್ತಮಚರಿತ ಪ್ರತಿಪಾದಕ ಮಹಾಭಾಗವತಶಾಸ್ತ್ರಾಂಶೀಭೂತದಶಮಸ್ಕಂಧ ಕೃಷ್ಣಾಷ್ಟಮಾವತಾರ ಕಥಾಮೃತಗರ್ಭಂ ಜಗನಾಥ ವಿಜಯಾಭಿಧಾನ ಮಹಾಕಾವ್ಯಸಂದರ್ಭಂ ಪ್ರಾರಭಮಾಣಸ್ತತ್ರಾದೌ 'ಆಶೀರ್ನಮಸ್ಕ್ರಿಯಾವಸ್ತುನಿರ್ದೇಶೋ ವಾಽಪಿ ತನ್ಮುಖಮ್' ಇತ್ಯಸ್ಯ ಮಹಾಕವಿ ಮಾರ್ಗಾನುಸಾರಿತ್ವೇನಾತ್ರಾಶಿಷೋ ಮುಖ್ಯತಯಾ ನಮಸ್ಕ್ರಿಯಾವಸ್ತು ನಿರ್ದೇಶಯೋಶ್ಚ ಗೌಣತ್ವೇನ ಚಾಧಿ ಕೃತಾಭಿಮತ ದೇವತಾಪ್ರಾರ್ಥನಾರೂಪ ನಾಂದೀಮಂಗಲಶ್ಲೋಕೇ ತ್ರಿವಿಧಮಪಿ ಮಂಗಲಮಾಚರತಿ—ಶ್ರೀರಾಮೇತಿ ॥—

೧. ಶಾರ್ದೂಲವಿಕ್ರೀಡಿತ ವೃತ್ತಂ ॥

ಶ್ರೀರಾಮಾನಟಿ ಕೌಸ್ತುಭದ್ಯುತಿಕಿರತ್ಪುಷ್ಪಾಂಜಲಿಕ್ಷೇಪವ
ಕ್ಷೋರಂಗಸ್ಥಿತೆಯಾದ ಪಾದನಖರೋಚಿರ್ಗಂಗೆ ಪೃಥ್ವೀಶಕೋ
ಟೀರವ್ಯಾಪ್ತಿಗೆ ಸಂದ ಚಕ್ರರವಿ ದೈತ್ಯಧ್ವಾಂತಮಂ ಗೆಲ್ದ ಭೂ
ಭಾರಚ್ಛೇದವಿನೋದಿ ಕೃಷ್ಣನೆಮಗೀಗಾನಂದಸಂದೋಹಮಂ ೧

ಅತ್ರ ಕಷ್ಣನೆಮಗೀಗಾನಂದ ಸಂದೋಹಮಮಿತ್ಯತ್ರಾಧಿಕೃತ ದೇವತಾಪ್ರಾರ್ಥನಾ ರೂಪಾಶೀರ್ನಿರೂಪಣಂ, ಶ್ರೀರಾಮೇತ್ಯಾದಿನಾ ಮೂರ್ತಿಧ್ಯಾನೇನ ಮಾನಸಿಕ ನಮಸ್ಕ್ರಿಯಾಭಿವರ್ಣನಂ, ಭೂಭಾರಚ್ಛೇದ ವಿನೋದೀತ್ಯನೇನ ಅವತಾರಪ್ರಯೋಜನ ರೂಪ ನರಕಾಸುರ ಸಂಹಾರಗರ್ಭ ಕಥಾಪ್ರತಿಪಾದನ ರೂಪವಸ್ತು ನಿರ್ದೇಶಪ್ರಕಥನಂ ಚ ಕೃತಂ ಭವತಿ । ಅತ್ರ ಕಷ್ಣನೆಮಗೀಗಾನಂದ ಸಂದೋಹಮಮಿತಿ ಕ್ರಿಯಾಕಾರಕ ಸಂಬಂಧಃ । ಸ ಚ ಕೃಷ್ಣಃ ಕೀದೃಶ ಇತ್ಯತ ಆಹ । ಯಸ್ಯ ಕೃಷ್ಣಸ್ಯ ಕೌಸ್ತುಭದ್ಯುತಿಕಿರತ್ಪುಷ್ಪಾಂಜಲಿ ಕ್ಷೇಪವಕ್ಷೋರಂಗಸ್ಥಿತಾ ಜಾತಾ ಶ್ರೀರಾಮಾನಟೀ ವರ್ತತೇ ಸ ಕೃಷ್ಣ ಇತಿ ಸಂಬಂಧಃ । ಅತ್ರ 'ಸೋಪಸ್ಕರಾಣಿವಾಕ್ಯಾನಿ' ಇತಿ ವಚನಾತ್ ಯತ್ತಚ್ಛಬ್ದಾವಧ್ಯಾಹಾರ್ಯೌ ಭವತಃ ; ಗಮ್ಯಮಾನಾರ್ಥಸ್ಯ ವಾಕ್ಯೈಕದೇಶಸ್ಯ ಸ್ವರೂಪೇಣೋಪಾದಾನಂ ವಾಕ್ಯಾಧ್ಯಾಹಾರ ಇತಿ ಲಕ್ಷಣಸದ್ಭಾವಾತ್ । ಏವಂ ಯಸ್ಯ ಪೃಥ್ವೀಶಕೋಟೀರವ್ಯಾಪ್ತಿಗೆ ಸಂದ ನಖರೋಚಿರ್ಗಂಗೆ ಅಸ್ತಿ ಸಃ ಭೂಭಾರಚ್ಛೇದವಿನೋದೀ ಕೃಷ್ಣ

ಇತ್ಯಧ್ಯಾಹೃತಪದೇನ ಸಹ ವ್ಯಾಖ್ಯಾಘಟನಾ। ಇದಂ ಹಿ ಖಂಡವಾಕ್ಯಂ॥ ವಾಕ್ಯಸ್ಯ—'ವಾಕ್ಯಂ ಮಹಾವಾಕ್ಯಂ ಖಂಡವಾಕ್ಯಂ' ಇತಿ ತ್ರೈವಿಧ್ಯ ಸಂಭವಾತ್ ! ಉಕ್ತಂ ಚ ಚಂದ್ರಾಲೋಕೇ—

ಸ್ಯಾತಾಂ ವಾಕ್ಯಮಹಾವಾಕ್ಯೇ ಏಕಾನೇಕಕ್ರಿಯಾನ್ವಿತೇ।
ಅಧ್ಯಾಹಾರ್ಯಪದೈರ್ಯುಕ್ತಂ ಖಂಡವಾಕ್ಯಂ ತ್ರಿಧೋಚ್ಯತೇ॥ ಇತಿ॥

ಶ್ರೀರಾಮಾನಟೀ ಶ್ರೀಃ ಮಹಾಲಕ್ಷ್ಮೀಃ ರಾಮಾ ರಮಣೀ ಸೈವನಟೀ ನರ್ತಕೀ ಮನೋಜ್ಞರಮಾನರ್ತಕೀ। ಅತ್ರ ಲಕ್ಷ್ಮೀವಾಚ್ಯೇ ಶ್ರೀಶಬ್ದಪ್ರಯೋಗೇಣ ಕಿಂ ವಿಶಿಷ್ಯತೇ? ನಾಂದೀಪದ್ಯಸ್ಯಾದೌ ಮಂಗಲವಾಚಕೇನ ಶಬ್ದೇನ ಭವಿತವ್ಯಮಿತಿ। ರಾಮೇತಿಪದೇನ ನಟ್ಯಾಃ ಕೃಷ್ಣ ಭೋಗ್ಯತಾ ಗಮ್ಯತೇ। ನ ಸಾಮಾನ್ಯನಟೀತಿ। ನಟೀತಿಪದೇನ ಲಕ್ಷ್ಮ್ಯಾಃ ಸ್ವರಮಣೇ ಸವಿಲಾಸಸ್ಥಿತಿ ರುಚ್ಯತೇ। ನಟೀತಿ ನೃತ್ಯಶೀಲಾ ಪ್ರೋಚ್ಯತೇ॥ ನಟನೃತ್ತಾ ವಿತಿಧಾತುನಿಷ್ಪತ್ತೇಃ। ನರ್ತನ ನೃತ್ತಲಾಸ್ಯ ತಾಂಡವೇಷು ನೃತ್ತಸ್ಯೈವ ಸುಕುಮಾರಾಂಗನಾಟ್ಯ ಲಕ್ಷಣಸದ್ಭಾವಾತ್। ತಥಾ ಚೋಕ್ತಂ—

ಸುಕುಮಾರಾಂಗವಿನ್ಯಾಸಂ ಲಾಸ್ಯಂ ನೃತ್ತಮುದೀರ್ಯತೇ।
ಅನ್ಯದಾರಭಟೀರೂಪಂ ನೃತ್ಯಂ ತಾಂಡವಮುಚ್ಯತೇ॥

ಇತಿ॥ ಸಾ ಕೀದೃಶೀ ಇತ್ಯತ ಆಹ। ಕೌಸ್ತುಭದ್ಯುತಿಕಿರತ್ಪುಷ್ಪಾಂಜಲಿಕ್ಷೇಪವಕ್ಷೋರಂಗ ಸ್ಥಿತೆಯಾದೇತಿ॥ ಕೌಸ್ತುಭದ್ಯುತಯಃ ಕೌಸ್ತುಭರತ್ನ ಪ್ರಭಾಃ ತಾ ಏವ ಕಿರಂತಃ ಸಮಂತಾದ್ವಿಕ್ಷಿಪಂತಃ ಪುಷ್ಪಾಂಜಲಿ ಕ್ಷೇಪಾ ಯತ್ರ ಸಃ ವಕ್ಷ ಏವ ಯೋರಂಗಃ ಸಚಾಸಾವಯಂಚ ಕೌಸ್ತುಭದ್ಯುತಿಕಿರತ್ಪುಷ್ಪಾಂಜಲಿಕ್ಷೇಪವಕ್ಷೋರಂಗಃ ತತ್ರಸ್ಥಿತಾ। ವಕ್ಷಸೋ ರಂಗತ್ವಾರೋಪಣೇನ ರಂಗ ಇವ ವಕ್ಷೋಪಿ ಜನಮನೋಹಾರಿ ವಿಶಾಲಂಚ ಭವತೀತ್ಯುಕ್ತಂ। ಮುಖಾದ್ಯವಯವೇಷು ಸತ್ಸ್ವಪಿ ವಿಷ್ಣೋರ್ವಕ್ಷಸ್ಯೇವ ಲಕ್ಷ್ಮ್ಯಾಃ ಸ್ಥಿತೇಃ ವಕ್ಷಸೋಗ್ರಹಣಂ, ತಸ್ಯಶ್ರೀವತ್ಸ ಇತ್ಯಭಿಧಾನಾತ್। ಕಿಂಚ। ಪುರುಷೋತ್ತಮಸ್ಯ ಲಕ್ಷ್ಮೀವಿಲಾಸಸಂಭವ ಸಂಭೋಗನಿರೂಪಣೇ ರತಿಸ್ಥಾನಮನುಕ್ತ್ವಾ ವಕ್ಷೋರಂಗ ಇತಿ ನರ್ತನಸ್ಥಾನ ನಿರೂಪಣಂ ಕಿಮರ್ಥಂ? ಸರ್ವೇಷಾಮಪಿ ರತಿಸುಖ ಏವಾಭಿಲಾಷಿತ್ವಾತ್ ತತ್ರೈವಾಖಿಲೇಂದ್ರಿಯ ತರ್ಪಣಾತ್। ಸತ್ಯಂ ರತಿಸುಖಾದಪಿ ನರ್ತನ ಸೌಖ್ಯಮೇವಾತ್ಯಂತಂ ಶ್ರಿಯಃ। ಅತ್ರೈಕೇನೈವ ಚಕ್ಷುರಿಂದ್ರಿಯೇಣ ತತ್ಪಂಚೇಂದ್ರಿಯ ಸುಖಾನಾಮಪ್ಯನಾಯಾಸಲಭ್ಯತ್ವಾತ್। ಲೋಕೇ 'ನಾಟ್ಯಾಂತೇಭೋಗಃ' ಇತಿ ವಚನಾತಿ। ಏಕೇನೈವೇಂದ್ರಿಯೇಣ ಪಂಚೇಂದ್ರಿಯ ಸುಖಾನುಭವನಂ ಚ ಸಂಭವತೀತಿ ಕವಿಕೇಶವೇನಾಪ್ಯುಕ್ತಮಸ್ತಿ—

ಶ್ರೀವಾಗ್ದೇವಿಗೆ ಶಬ್ದದಿ
ನಾವಾವಿಂದ್ರಿಯದ ವಿಷಯಮಂ ಶ್ರೋತ್ರದೊಳು ।
ದ್ಭಾವಿಪ ನಿರ್ಮಳಮೂರ್ತಿಗಿ
ಳಾವಂದ್ಯೆಗೆ ಶಾಸ್ತ್ರಮುಖದೊಳವನತನಪ್ಪೆಂ ॥

ಅನೇನ ಕಿಮುಕ್ತಂ ಭವತಿ ? ನಟೀತ್ಯನೇನ ಲಕ್ಷ್ಮ್ಯಾಃ ಪ್ರಾಗಲ್ಭ್ಯಂ, ವಕ್ಷೋರಂಗಸ್ಥಿತೇತಿ ತಸ್ಯಾಃ ಅನನ್ಯಾಭಿಲಾಷಿತ್ವಂ, ಸ್ವರಮಣ ಪ್ರಣಯಶ್ಚ ಧ್ವನ್ಯತೇ । ಕೌಸ್ತುಭದ್ಯುತಿಕಿರತ್ಪುಷ್ಪಾಂಜಲಿಕ್ಷೇಪ ಇತ್ಯತ್ರ ಕೌಸ್ತುಭದ್ಯುತೇಃ ಪುಷ್ಪಾಂಜಲ್ಯಾರೋಪಣಂ ಯುಕ್ತಂ । ವಜ್ರವಲಯಸ್ಯ ತಸ್ಯ ಪ್ರಭಾಯಾಃ ಶುಭ್ರತ್ವಾತ್ ! ಪುಷ್ಪಾಂಜಲೇಃ ಕಿರದಿತಿ ವಿಶೇಷಣೇನ ಕೌಸ್ತುಭಸ್ಯ ಪ್ರಭಾಯಾಃ ಅವಿಚ್ಛಿನ್ನತಾ ಪ್ರಾಚುರ್ಯಂ ಚ ಗಮ್ಯತೇ ॥ ಕಿರತ್ಪುಷ್ಪಾಂಜಲೀತಿ ವರ್ತಮಾನಪ್ರಯೋಗವಿಶೇಷಣೇನ ಪುಷ್ಪಾಂಜಲಿಪದೇನ ವಕ್ಷೋರಙ್ಗಸ್ಥಿತಾಯಾಃ ಲಕ್ಷ್ಮ್ಯಾಃ ಪೂರ್ವರಂಗರತತ್ವಂ ಸದಾ ನೃತ್ಯಶೀಲತ್ವಂ ಚ ಧ್ವನ್ಯತೇ। ಕ್ಷೇಪ ಇತಿ ಪದೇನ ಕೃಷ್ಣವಕ್ಷೋರಂಗಸ್ಯ ಕೌಸ್ತುಭಪ್ರಭಾಯಾಃ ಸದಾ ಪುಷ್ಪೋಪಹಾರಲಕ್ಷಿತತ್ವಂ ಸೂಚ್ಯತೇ ।

ಪುನಃ ಕೀದೃಶಃ ? ಯಸ್ಯ ಪೃಥ್ವೀಶಕೋಟೀರವ್ಯಾಪ್ತಿಗೆ ಸಂದ ಪಾದನಖರೋಚಿರ್ಗಂಗೆ ವಿದ್ಯತೇ ತಾದೃಶಃ । ಪೃಥ್ವೀಶಾಃ ಧರಾಧಿಪಾಃ ತೇಷಾಂ ಕೋಟೀರಾಣಿ ಕಿರೀಟಾನಿ ತತ್ರ ವ್ಯಾಪ್ತಯೇ ಪ್ರಸರಣಾಯ ಸಂಮತಾ ಸಾ ಪೃಥ್ವೀಶ ಕೋಟೀರವ್ಯಾಪ್ತಿಗೆ ಸಂದ । ಪಾದನಖರೋಚಿರ್ಗಂಗೆ ಪಾದಯೋರ್ನಖಾಃ ತೇಷಾಂ ರೋಚೀಂಷಿ ತಾನ್ಯೇವ ಗಂಗಾ ವಿಷ್ಣುಪದೀತಿ; ಅನೇನ ವಿಷ್ಣುಃ ಸಕಲಜಗದ್ವಂದ್ಯಮಾನಪಾದ ಇತ್ಯರ್ಥಃ । ಅತ್ರೋಕ್ತಿ ಲೇಶಶ್ಚ—ಗಂಗಯಾಃ ಪೃಥ್ವೀಶಕೋಟೀರ ವ್ಯಾಪ್ತತ್ವಂ ಯುಕ್ತಂ ಖಲು । ಕಥಮಿತಿ ?– ಈಶಸ್ಯ ಮಹೇಶ್ವರಸ್ಯ ಕೋಟೀರಂ ಜಟಾಜೂಟಃ ಪೃಥು ಮಹಚ್ಚ ತತ್ ಈಶಕೋಟೀರಂ ಚ ತತ್ರ ವ್ಯಾಪ್ತಿಃ ವಿಶೇಷೇಣ ಸ್ಥಿತಿಃ ತಸ್ಯೈ ಸಂಮತೇತಿ ಗಂಗಾಧರತ್ವಾತ್ ಮಹೇಶ್ವರಸ್ಯ । ಕಿಂ ಚ ಪೃಥ್ವೀಶಾನಾಂ ಕೋಟಿಃ ಭೂಪಾಲ ಸಮೂಹಃ ಸ್ಯೈವ ಈಃ ಕಮಲದಳಂ ಕಮಲಕೇಸರೋವಾ 'ಈಕಾರೋಬ್ಜದಳೇ ಲಕ್ಷ್ಮ್ಯಾಂ ವಾಣ್ಯಾಂ ಕಮಲಕೇಸರೇ' ಇತಿ ನಾನಾರ್ಥರತ್ನಮಾಲಾಯಾಂ । ಕಮಲಕೇಸರಸ್ಯ ರವ್ಯಾಪ್ತಿಃ ರವೇಃ ಸೂರಸ್ಯ ಆಪ್ತಿಃ ಸಮಾಗಮಃ ತಸ್ಯೈ ಸಮ್ಮತಾ ವಾ ಪಾದ ನಖರೋಚಿರ್ಗಂಗಾ ಯಸ್ಯ ಕೃಷ್ಣಸ್ಯ ಪಾದನಖರೋಚಿಃ ನೃಪಾಲಸ್ತೋಮಕಮಲಸ್ಯ ಪ್ರಭಾಕರಸನ್ನಿಭಂ ಇತಿ ಭಾವಃ । ತತ್ಪಾದನಖರೋಚಿಷಃ ಗಂಗಾತ್ವೋಪಪಾದನೇನ ಗಂಗಾಪದಸ್ಯ ಪರಮಪಾವನತ್ವಂ ಅತಿನೈರ್ಮಲ್ಯಂ ಪ್ರಮಾಹಿತ್ವಾದಿ ಚ ಧ್ವನ್ಯತೇ । ಪೃಥ್ವೀಶೇತ್ಯನೇನ ಜಗದ್ವಂದ್ಯತಯಾ ವಿಷ್ಣೋಃ ಸತ್ವಗುಣೋಪಿ ವ್ಯಜ್ಯತೇ ।

ಪುನಃ ಕಥಂಭೂತಃ ? ದೈತ್ಯಧ್ವಾಂತಮಂ ಗೆಲ್ದ ಚಕ್ರರವಿರ್ಯಸ್ಯ ಸತಾದೃಗ್ವಿಧಃ । ಚಕ್ರಮೇವ ರವಿಃ ದೈತ್ಯಾ ಏವ ಧ್ವಾಂತಮಂಧಕಾರಃ ಚಕ್ರಸ್ಯ ರವಿತ್ವರೂಪಕೇಣ ಅಸುರಸಂಹಾರನಿಷ್ಠಯಾಸತಾ ಧ್ವನ್ಯತೇ। ದೈತ್ಯಧ್ವಾಂತಮಿತಿ ಅಸುರಾಣಾಮತಿ ದುಷ್ಟತ್ವಾಪಿ ಧ್ವನ್ಯತೇ। ಅನೇನ ಪುನಃ ದೈತ್ಯಾರೇಃ ದುಷ್ಟನಿಗ್ರಹ ನಿಪುಣತ್ವಾದಿ ಚ ಗಮ್ಯತೇ । ಯಸ್ಯೈವಂವಿಧಾಃ ಶ್ರೀರಾಮಾ

ನಟೀ, ಪಾದನಖರೋಚಿರ್ಗಂಗಾ, ಚಕ್ರಿ ರವಿಶ್ಚ, ಭೂಭಾರಚ್ಛೇದವಿನೋದೀ ಕೃಷ್ಣಃ। ಭೂಭಾರಸ್ಯ ಪೃಥ್ವೀಭಾರಸ್ಯಚ್ಛೇದೇ ಅವರೋಹೇ ವಿನೋದೀ ವಿಲಾಸೀ। ಕಿಂಚ। ಭೂಭಾರಚ್ಛೇದೇ ವಿನೋದಃ ವಿನಾ ಗರುಡಪಕ್ಷಿಣಾ ವಾ ಗರುಡಪಕ್ಷಿಣಿ ವಾ ನೋದಃ ಪ್ರೇರಣಂ ಗಮನಂ ಚೋದನಂ ವಾಽಸ್ಯಾಸ್ತೀತಿ ಭೂಭಾರಚ್ಛೇದವಿನೋದೀ ಗರುಡವಾಹನ ಇತ್ಯರ್ಥಃ। ಅನೇನ ಅಸ್ಯ ಮಹಾವತಾರ ಪ್ರಯೋಜನರೂಪ ಕಥಾಶರೀರ ಮುಕ್ತಂಭವತಿ।

ಸ ಏವ ವಿಧಃ ಕೃಷ್ಣೋ ವಿಷ್ಣುಃ ಏಮಗಾನಂದಸಂದೋಹಮನೀಗೆ ಇತಿ। ವಕ್ತೃಶ್ರೋತೄಣಾಮಸ್ಮಾಕಂ ಆನಂದಸಂದೋಹಮಿತಿ। ಸಮ್ಯಗ್ದೋಹಃ ಸಂದೋಹಃ ಆನಂದಸ್ಯಾತ್ಮಾನುಭವ ಸದೃಶಪ್ರಮೋದಸ್ಯ ಸಂದೋಹಃ ಆನಂದಸಂದೋಹಃ ಸುಖಾಮೃತವರ್ಷಂ ತಂ ಈಗೆ ದಿಶತ್ವಿತಿ ಪರಮವೈಷ್ಣವಾಧಿಕೃತದೇವತಾಯಾಃ ಕೃಷ್ಣಸ್ಯ ಪ್ರಾರ್ಥನಾರೂಪಂ ಆಶೀರ್ಮಂಗಲಂ ಕೃತಮ್। ಶ್ರೀರಾಮಾ ನಟೀತ್ಯಾದಿನಾ ವೈಯಧಿಕರಣ್ಯ ವಿಶೇಷಣತ್ರಯೇಣ ಕೃಷ್ಣಂ ವಿಶಿಂಷತಃ ಕವೇರಿದಮಾಕೂತಂ। ಶ್ರೀರಾಮಾಯಾಃ ನಖರೋಚಿರ್ಗಂಗಾಯಾಃ ಚಕ್ರರವೇಶ್ಚ ದೇವತಾತ್ವಸಂಭವಾತ್ ತಾಸ್ತಿ ಸ್ರೋಪಿ ದೇವತಾಃ ಆನಂದಸಂದೋಹಂ ದಿಶಂತ್ವಿತಿ ಭಿನ್ನಕರ್ತೃಕತ್ವೇನ ಪ್ರತಿಪಾದನೀಯಮಿತಿ। ಯಥಾಹಿ-ಕೌಸ್ತುಭದ್ಯುತಿಕಿರತ್ಪುಷ್ಪಾಂಜಲಿ ಕ್ಷೇಪವಕ್ಷೋರಂಗಸ್ಥಿತೆಯಾದ ಶ್ರೀರಾಮಾನಟಿಯೆಮಗಾನಂದಸಂದೋಹಮಂ ಈಗೆ ಇತಿ। ಏವಮುತ್ತರತ್ರಾಪಿ ಯೋಜ್ಯಂ ಉಕ್ತಾರ್ಥೈರಭಿಮತದೇವತಾ ಪ್ರಾರ್ಥನಾ ರೂಪಮಾಶೀರ್ಮಂಗಲಂ ಪ್ರತಿಪಾದಿತಮ್। ಅಪಿಚ ಗುಣಭೂತ ಭಾವನಮಸ್ಕಾರಂ ಕುರ್ವಾಣಃ ಕವಿಃ ದೈತ್ಯಾರೇಃ ಸ್ವವಧೂ ಚಿಹ್ನಪರಿವಾರಾಯುಧ ವಾಹನಾದಿಭಿಃ ಮೂರ್ತಿಸ್ವರೂಪಂ ನಿರೂಪಯತಿ। ತದ್ಯಥಾ—ಶ್ರೀರಾಮೇತ್ಯನೇನ ಸ್ವವಧೂ ಸಹಿತತ್ವಂ, ಕೌಸ್ತುಭಸ್ಯೇತ್ಯನೇನ ಸ್ವಚಿಹ್ನ ಸಹಿತತ್ವಂ, ಪೃಥ್ವೀಶೇತ್ಯನೇನ ಸ್ವಪರಿವಾರ ಸಹಿತತ್ವಂ, ಚಕ್ರರವೀತ್ಯನೇನ ಸ್ವಾಯುಧಸಹಿತತ್ವಂ, ವಿನೋದೀತ್ಯನೇನ ಸ್ವವಾಹನಸಹಿತತ್ವಂ ಕೃಷ್ಣ ಇತ್ಯನೇನ ಸ್ವವರ್ಣಸಹಿತತ್ವಂ ಚೇತಿ। ಅನೇನ ಗುಣಭಾವೇನ ಭಾವನಮಸ್ಕ್ರಿಯಾರೂಪಂ ಮಂಗಲ ಮಭಿಧಾಯ ಭೂಭಾರಚ್ಛೇದವಿನೋದೀ ಇತ್ಯನೇನ ವಕ್ಷ್ಯಮಾಣ ಕಥಾಶರೀರ ಪ್ರತಿಪಾದನ ಲಕ್ಷಣ ವಸ್ತು ನಿರ್ದೇಶಕರೂಪಂ ಚ ಮಂಗಲಮಾಚರಿತಮ್।

ಇತಿ ಮಹಾಕವಿಃ ಶ್ರೀಪುರುಷೋತ್ತಮ ಮಹಾಲಕ್ಷ್ಮೀಪ್ರಭೃತ್ಯಧಿಕೃತಾಭಿಮತ ದೇವತಾ ಪ್ರಾರ್ಥನಾ ಪುರಸ್ಸರಂ ನಾಂದೀಮಂಗಲ ಮಾಚರ್ಯ ಸ್ವಪೋಷಕಸ್ಯ ರಾಜ್ಞೋ ಗುಣಗಣಮುಪ್ರೇಕ್ಷಾ ಲೇಶೇನ ಪ್ರತಿಪಾದಯನ್ನಾಹ—ಶ್ರೀರಾಮೇತಿ। ಅತ್ರ ಪೂರ್ವವದಥಾಹಾರ್ಯೇಣ ಸಹ ಸಂಬಂಧೋ ಯೋಜನೀಯಃ। ಶ್ರೀರಾಮಾನಟೀ ರಾಜ್ಯಲಕ್ಷ್ಮೀಲಾಸಿಕಾ। ಸಾ ಕೀದೃಶೀ? ಕೌಸ್ತುಭೇತ್ಯಾದಿ ಸ್ತೋಭನಂ ಸ್ತುಭಃ ಸ್ಥಿತಿಃ ಕೋಃ ಭೂಮೇಃ ಸ್ತುಭಃ ಕುಸ್ತುಭಃ ಭೂಸ್ಥಿತಿಃ ಕುಸ್ತುಭೇ ವಿಶ್ವಂಭರಾಧಿಪಸ್ಯ ಪ್ರಾಪ್ತ ಸಂಖ್ಯಾತಿನಃ ಸಂಭವಿನಃ ಹಾರಕೇಯೂರಾದ್ಯಲಂಕಾರಾಃ ಕೌಸ್ತುಭಾಃ ರಾಜ್ಯಾಭಿಷೇಕಾವಸರಾವಧೃತಾಧಿಪಸ್ಯ ಸೂಚಕಾಭರಣ ವಿಶೇಷಾಃ ತೇಷಾಂ ದ್ಯುತಿಕಿರತ್ಪುಷ್ಪಾಂಜಲಿಕ್ಷೇಪ ವಕ್ಷೋರಂಗಸ್ಥಿತಾ ಜಾತಾ ಶ್ರೀರಾಮಾನಟೀಯಸ್ಯ ರಾಜ್ಞಃ। ಪಾದನಖೇತಿ। ಚರಣನಖರಪ್ರಭಾಪ್ರಕರಾಃ। ಪೃಥ್ವೀತ್ಯಾದಿ॥ ಪದಾನತಸಾಮಂತಮೌಲಿ ಲಾಲಿತಾಃ। ಚಕ್ರೇತಿ। ಸೇನಾಸೂರ್ಯಃ। ಕೀದೃಶಃ? ದೈತ್ಯೇತಿ। ದೈತ್ಯಾ ಇವ ದೈತ್ಯಾಃ ಕ್ರೂರಶತ್ರವಃ। ಅತಿದುಷ್ಟತ್ವಸಾಧರ್ಮ್ಯಾತ್। ತ ಏವ

ಧ್ವಾಂತಂ ತಚ್ಛೇತ್ತಾ । ಭೂಭಾರೇತಿ । ಭೂಭಾರಚ್ಛೇದೇಪಿನೋದೀ ಸ ಕೃಷ್ಣೋ ದೇವತಾ ಯಸ್ಯ ಸ ರಾಜಾ ಇತ್ಯುಕ್ತಿಲೇಶಃ । ಅತ್ರ ರೂಪಕಾಲಂಕಾರಃ । ತಲ್ಲಕ್ಷಣಮುಚ್ಯತೇ—

'ಅತಿರೋಹಿತರೂಪಸ್ಯ ವ್ಯಾರೋಪವಿಷಯಸ್ಯ ಯತ್ ।
ಉಪರಂಜಕಮಾರೋಪ್ಯಂ ರೂಪಕಂ ತದಿಹೋಚ್ಯತೇ' ॥ ಇತಿ

ಅತ್ರ ರೂಪಕಸ್ಯ ಸಾವಯವನಿರವಯವಪರಂಪರಿತ ಭೇದೇಷು ಸಮಸ್ತೈಕ ವಸ್ತುವಿಷಯತ್ವೇನ ದ್ವಿವಿಧೇ ಸಾವಯವರೂಪಕೇ ಸಮಸ್ತಾವಯವಾನಾಮವಯ ವಿನಿರೂಪಣ ಲಕ್ಷಣಸಮಸ್ತವಸ್ತುವಿಷಯ ರೂಪಕೋಽಯಮಲಂಕಾರಃ । ಶ್ರೀರಾಮಾ ನಟೀತ್ಯಾದೌ ಲಕ್ಷ್ಮೀತ್ಯಾದ್ಯಾರೋಪವಿಷಯಸ್ಯ ತದುಪರಂಜಕಸರೂಪನಟೀತ್ಯಾದ್ಯಾರೋಪ್ಯಸ್ಯ ತಲ್ಲಕ್ಷಣಾಭಿವ್ಯಕ್ತೇಃ। ಅತ್ರತಾವತ್ ರೀತಿಃ; ತಲ್ಲಕ್ಷಣಂ ಚ 'ಗುಣಸಂಶ್ಲಿಷ್ಟ ಶಬ್ದಾರ್ಥಸಂದರ್ಭೋ ರೀತಿರಿಷ್ಯತೇ' । ಅತ್ರ ಶಯ್ಯಾ ಚ ಸ್ಫುಟ—'ಪದಾನುಗುಣ್ಯರೂಪಾ ಯಾ ಮೈತ್ರೀ ಶಯ್ಯೇತಿ ಕಥ್ಯತೇ' ಇತಿ ಲಕ್ಷಣೋಪಪತ್ತೇಃ। ದ್ರಾಕ್ಷಾಪಾಕೋತ್ರ ಇಷ್ಯತೇ 'ದ್ರಾಕ್ಷಾಪಾಕಸ್ಸವಿಜ್ಞೇಯೋ ಬಹಿರಂತಸ್ಸ್ಫುರದ್ರಸಃ' ಇತಿ ವಚನಾತ್ ॥ ವೃತ್ತಿರಪ್ಯತ್ರ ಮಧ್ಯಮಕೈಶಿಕೀ—

'ರಸಾವಸ್ಥಾನಸೂಚಿನ್ಯೋ ವೃತ್ತಯೋ ರಚನಾಶ್ರಯಾಃ ।
ಅನತಿಪ್ರೌಢಸಂದರ್ಭಾ ಮೃದುಲಾರ್ಥೇಽಪಿ ಮಧ್ಯಮಾ' ॥

ಇತಿ ಲಕ್ಷಣಾತ್ । ಓಜೋಮಾಧುರ್ಯಾದಯೋ ಗುಣಾಶ್ಚ ಅತ್ರ ಯಥಾಸಂಭವಂ ಸೂಚ್ಯಂತೇ—ಶ್ರೀರಾಮಾನಟೀತ್ಯಾದೌ ಸಮಾಸಭೂಯಸ್ತ್ವಾದೋಜೋಗುಣಃ । ಪ್ರಬನ್ಧವೈಶದ್ಯನಿರೂಪಣಾತ್ ಸಮತಾ । ರಚನಾಯಾ ಅತ್ಯುಜ್ಜ್ವಲತ್ವಾತ್ಕಾಂತಿಃ । ಕಾವ್ಯಪಠನವೇಲಾಯಾಂ ಪದಾನಾಂ ಭಿನ್ನಭಿನ್ನತ್ವೇನ ಪ್ರತೀಯಮಾನತ್ವಾನ್ಮಾಧುರ್ಯಂ ॥ ಪದಾರ್ಥಚಾರುತ್ವಜ್ಞಾಪಕಪದಾಂತರಮೇಳನಾದೌದಾರ್ಯಂ । ಏವಮನ್ಯೇಪಿ ಗುಣಾಃ ಯೋಜ್ಯಾಃ । ಅಥ ಕಾವ್ಯಸ್ಯ ಜೀವನೀಭೂತರಸಾನುವದನಪುರಸ್ಸರಂ ತದಭಿವ್ಯಂಜಕತ್ವಾದ್ಭಾವಾಶ್ಚ ಸೂಚ್ಯಂತೇ—

'ರಸಂ ಜೀವನಭೂತಂ ತು ಪ್ರಬಂಧಾನಾಂ ವಿದುರ್ಬುಧಾಃ ।
ವಿಭಾವಾದಿಚತುಷ್ಕೇಣ ಸ್ಥಾಯಿಭಾವಸ್ಸ್ಫುಟೋ ರಸಃ ॥
ನವನೀತಂ ಯಥಾಽಽಜ್ಯತ್ವಂ ಪ್ರಾಪ್ನೋತಿ ಪರಿಪಾಕತಃ ।
ಸ್ಥಾಯಿಭಾವೋ ವಿಭಾವಾದ್ಯೈಃ ಪ್ರಾಪ್ನೋತಿ ರಸತಾಂ ತಥಾ' ॥ ಇತಿ

ಅತ್ರ ತಾವತ್ ಶೃಂಗಾರವೀರಾವಂಗಿನೌ । ಶ್ರೀರಾಮಾನಟೀತ್ಯಾದೌ ಸದಾಪರಸ್ಪರಾಲೋಕನಾಲಿಂಗನಾಭಾಷಣಾದಿಸಂಭವಾತ್ ಸಂಭೋಗಶೃಂಗಾರಃ । ಚಕ್ರರವಿದೈತ್ಯಧ್ವಾಂತಮಂ

ಗೆಲ್ದ ಭೂಭಾರಚ್ಛೇದವಿನೋದೀತ್ಯಾದೌ ಚಾಲಂಬನವಿಭಾವಾದಯಃ ಸೂಚ್ಯಂತೇ ಅಸ್ಯ ಮಹಾಕಾವ್ಯಸ್ಯ ಕವೀ,ಸುಹೃದನುರಂಜಕತ್ವೇನ ಕಥಾನಾಯಕಸ್ಯ ವಿಷ್ಣೋಃ ಶೃಂಗಾರಾಧಿದೇವತಾತ್ವೇನ ಚ ಶೃಂಗಾರರಸಸ್ಯಾಂಗಿತ್ವಂ ಭೂಭಾರಚ್ಛೇದಾಸುರಸಂಹಾರ ಕಥಾಪ್ರಪಂಚ ಪ್ರತಿಪಾದನೇನಾತ್ರ ವೀರರಸಸ್ಯಾಪ್ಯಂಗಿತ್ವಂ, ತದಂಗಭೂತಾಶ್ಚಾನ್ಯೇ ರಸಾಃ, ಇತ್ಯೇತಮರ್ಥಂ ಹೃದಿ ನಿಧಾಯೈತತ್ಕಾವ್ಯಸ್ಯಾದಾವಪಿ ಶೃಂಗಾರವೀರರಸಪ್ರಧಾನತಯಾ ನಾಂದೀಪದ್ಯಂ ರಚಿತವಾನ್ ||೧||

ಅಥ ಕಾವ್ಯಕಥಾನಾಯಕಃ ಪುರುಷೋತ್ತಮಃ ಸ್ವಾಭೀಷ್ಟಂ ದದಾತ್ವಿತಿನಾಂದೀ ಪದ್ಯೇನಾಭಿಧಾಯ ಏತತ್ಪರಿಪಾಟ್ಯಾಗತಂ ಬ್ರಹ್ಮಾಣಮಭಿಯಾಚತೇ :—

೨. ಚಂಪಕಮಾಲಾವೃತ್ತಂ ||

ಜನನುತರಾಜಹಂಸನಯನಂ ಕಮಳಾವಸಥಂ ಕಳಾನಿಕೇ
ತನನೆನಿಸಿರ್ದ ಪೆಂಪುಪಮೆವೆತ್ತೊಡಮೇನೊ ಹಿರಣ್ಯಗರ್ಭನೆಂ |
ದೆನಿಸಿಯುದಾರನೆಂಬ ರಜವೊಂದದ ಸತ್ವನಿಧಾನನೆಂಬ ಪೆಂ
ಪನುಗುಣಮಾದ ಲೋಕಪಿತನೊಲ್ದು ಚತುರ್ಮುಖನೀಗೆ ರಾಗಮಂ ||

ಜನನುತರಾಜಹಂಸನಯನಮಿತ್ಯಾದಿನಾ ಬ್ರಹ್ಮವಿಷ್ಣ್ವೋಃ ಸಾದೃಶ್ಯಮಭಿಧಾನಮೂಲಮಭಿದಧಾನಸ್ಸನ್ ಪುನರ್ವಿರೋಧಾಭಾಸತಯಾ ವ್ಯತಿರೇಕಂ ವ್ಯಂಜಯನ್ ಬ್ರಹ್ಮಣೋಽರ್ಥಂ ವಿಶಿನಷ್ಟಿ—ಜನನುತರಾಜಹಂಸನಯನಮಿತಿ । ಜನನುತಾದ್ರಾಜಹಂಸಾನ್ನಯನಂ ಗಮನಂ ಯಸ್ಯ । ಣೀಞ್ ಪ್ರಾಪಣೇ । ಹಂಸವಾಹನತ್ವಾತ್ ಬ್ರಹ್ಮಣಃ । ವಿಷ್ಣು ಪಕ್ಷೇ, ಜನನುತೌ ರಾಜಹಂಸೌ ಚಂದ್ರಸೂರ್ಯೌ ನಯನೇ ನೇತ್ರೇ ಯಸ್ಯ ವಿಷ್ಣೋಸ್ಸತಥೋಕ್ತಃ, ವಿಷ್ಣೋಶ್ಚಂದ್ರ ಸೂರ್ಯನಯನತ್ವಾತ್ । ಕಿಂಚ । ಜನನುತಸ್ಯ ಲೋಕಸ್ತವನಸ್ಯ ರಾಜಾನಃ ಪ್ರಭವೋಽರ್ಹಾಃ ಜಗನ್ನುತಿಯೋಗ್ಯಾ ಯೋಗಿನಃ ತೇಷಾಂ ಹಂಸನಯನಂ ಹಂಸಸ್ಯ ಪರಮಾತ್ಮನೋ ನಯನಂ ಪ್ರಾಪ್ತಿರ್ಯಸ್ಮಾದ್ವಿಷ್ಣೋಃ ಬ್ರಹ್ಮಣಶ್ಚ ತಥೋಕ್ತ ಇತಿ। ಕಿಂಚ-ಜನನುತಶ್ಚಾಸೌ ರಾಜಹಂಸಃ ಕ್ಷತ್ರಿಯಶ್ರೇಷ್ಠೋ ಯುಧಿಷ್ಠಿರಃ 'ಪುಣ್ಯಶ್ಲೋಕೋ ಯುಧಿಷ್ಠಿರಃ' ಇತಿವಚನಾತ್ । ತಂ ನಯತಿ ರಾಜ್ಯಂ ಪ್ರಾಪಯತೀತಿ ಜನನುತರಾಜಹಂಸ ನಯನಃ ಶ್ರೀಕೃಷ್ಣಃ ॥ ಕಮಲಾವಸಥಂ ಕಮಲಮಬ್ಜಂ, ಅವಸಥಂ, ಆವಾಸೋ ಯಸ್ಯ ಸಃ । ಕಿಂಚ_ಕಸ್ಯ ಪರಮಾತ್ಮನಃ ಕೋ ಬ್ರಹ್ಮಾತ್ಮಾನಿಲಾರ್ಕೇಷು ತ್ರಿದಿವೇಶಸರ್ವನಾಮ್ನಿ ಚ' ಇತಿ ನಾನಾರ್ಥರತ್ನಮಾಲಾಯಾಂ । ಮಲತೀತಿ ಮಲಂ ॥ ಮಲಮಲ್ಲ ಧಾರಣೇ । ಕಸ್ಯ ಪರಮಾತ್ಮನಃ ಮಲಂ ಧಾರಣಂ ಯಸ್ಯ ಸ ಕಮಲಃ ಪರಬ್ರಹ್ಮನಿಷ್ಠಃ ಸ ಏವ ಆವಸಥಂ ಯಸ್ಯ ಸ ತಥಾ । ಪಕ್ಷೇ । ಕಮಲಾಯಾಃಲಕ್ಷ್ಮ್ಯಾಃ ಆವಸಥಂ ನಿವಾಸಃ ಕಮಲಾವಸಥಂ ಲಕ್ಷ್ಮೀನಿವಾಸಃ । ಕಿಂಚ—ಕಮಲೇ ಜಲೇ ಆವಸಥೋ ಯಸ್ಯ ಸಃ ಸಮುದ್ರಶಾಯಿತ್ವಾದ್ವಿಷ್ಣೋಃ । ಕಿಂಚ–ಕಮಲಸ್ಯ ನಾಭೀಕಮಲಸ್ಯ ಆವಸಥಂ ಆಧಾರಃ ಕಮಲಾವಸಥಂ ಪದ್ಮನಾಭತ್ವಾತ್ । ಕಲಾನಿಕೇತನಂ ಕಲಾಯಾಃ ಶಿಲ್ಪಸ್ಯ ಲೋಕನಿರ್ಮಾಣ ನೈಪುಣ್ಯಸ್ಯ 'ಕಲಾ

ಶಿಲ್ಪೇ ಕಾಲಭೇದೇ' ಇತಿ ನಿಘಂಟುಃ । ನಿಕೇತನಂ ಆಶ್ರಯೋ ಬ್ರಹ್ಮಾ । ಕಿಂಚ—ಕಸ್ಯ ವಾಯೋಃ ಲಾ ಆದಾನಂ ಕಲಾ, ತಸ್ಯಾಃ ನಿಕೇತನಂ ಆಧಾರಃ । ಯೋಗವಿಧಾನವಾಯುಧಾರಣನಿರತಃ । ವಿಷ್ಣುಪಕ್ಷೇ ಕಲಾನಿಕೇತನಮಿತ್ಯತ್ರ ಕಂವಾಯುಂ ಲಾತೀತಿ ಕಲಃ ಸರ್ಪಃ ।

> 'ಕೋ ಬ್ರಹ್ಮಾತ್ಮಾನಿಲಾರ್ಕಾಗ್ನಿ ಚಿತ್ತಧೀಯಮಕೇಕಿಷು ।
> ವಿಷ್ಣೌ ವಾಹತಶಬ್ದೇಽಬ್ದೇ ಸಿತವರ್ಣೇಽಥ ಸೌದ್ಯುತೌ' ॥

ಇತಿ ಏಕಾಕ್ಷರನಿಘಂಟುಃ । ಸ ಏವ ಸರ್ಪಃ ಅನಃ ಪ್ರಾಣನಮಸ್ಯಾಸ್ತೀತಿ ಕಲಾನೀ । ಗರುತ್ಮಾನ್ । ಸ ಏವ ಕೇತನೇ ಧ್ವಜೇ ಯಸ್ಯ ಸಃ ಕಲಾನಿಕೇತನಃ । ಅಥವಾ—ಕಸ್ಯ ವಾಯೋಃ ಲಾ ಆದಾನಂ ಕಲಾ ಪಕ್ಷವಾಯುಸ್ವೀಕಾರಃ । ತಯಾ ಅನಿತಿ ಪ್ರಾಣಿತಿ ಪ್ರವರ್ತತ ಇತ್ಯೇವಂ ಶೀಲೋ ಕಲಾನಿಃ ಗರುಡಃ । ತೇನೋಪಲಕ್ಷಿತಂ ಕೇತನಂ ಧ್ವಜಃ ಯಸ್ಯ ಕಲಾನಿಕೇತನಃ ಗರುಡಧ್ವಜ ಇತ್ಯರ್ಥಃ। ಅಥವಾ-ಕಲಾನಾಂ ಶೃಂಗಾರೋಜ್ಜೀವನಕ್ರಮಕಲಾನಾಂ ನಿಕೇತನಮಾಸ್ಪದಂ ಕಲಾನಿಕೇತನಂ ವಿಷ್ಣುಃ ಶೃಂಗಾರರಸಾಧಿನಾಯಕತ್ವಾತ್ ವಿಷ್ಣೋಃ । ಇತಿ ವಿಶೇಷಣತ್ರಯೇಣ ಬ್ರಹ್ಮವಿಷ್ಣ್ವೋಃ ಸಾಮ್ಯಂ ಅಭಿಧಾಯ ವ್ಯತಿರೇಕಮಭಿವ್ಯಂಜಯನ್ ತಯೋರನ್ಯತರಸ್ಮಿನ್ ಪ್ರಾಕರಣಿಕೇಽರ್ಥೇ ವಿರೋಧೇ ನಾಧಿಕ್ಯಮಭಿವ್ಯನಕ್ತಿ । ಹಿರಣ್ಯಗರ್ಭಃ ಹಿರಣ್ಯಂ ಗರ್ಭೇ ಯಸ್ಯ ಸಃ ಹಿರಣ್ಯಗರ್ಭೋ ಹೇಮಾದ್ರಿಃ । ತದ್ವನ್ಮಹಾನಿತಿ ಭಾವಃ । ತಥಾಽಪ್ಯುದಾರ ಇತಿ । ಉತ್ ಅ ಉದಾ—ಪರಮಾಣುಃ । 'ಅ ಕಾರಃ ಪರಮಾಣೌ ಚ ಘಟೇ ಸಂತಾಪಭಾವಯೋಃ' ಇತಿ ನಿಘಂಟುಃ । ತಾಂ ರಾತಿ ಆದತ್ತೇ ಉದಾರಃ ಸೂಕ್ಷ್ಮ ಇತಿ ವಿರೋಧಃ । ಉದಾರೋ ಮಹಾನಿತಿ ಪರಿಹಾರಃ । 'ಉದಾರೋ ದಾತೃಮಹತೋಃ' ಇತಿ ನಿಘಂಟುಃ । ಅಥವಾ-ಹಿರಣ್ಯಗರ್ಭಃ ಸ್ವಯಂಭೂಃ । ಉದಾರೋ ಮಹಾನಿತಿ ಅತಿಶಯೋಕ್ತಿಃ ಬ್ರಹ್ಮಾ । ವಿಷ್ಣುಪಕ್ಷೇ—ಹಿರಣ್ಯಗರ್ಭ ಇತ್ಯತ್ರ ಲೋಭೀತ್ಯರ್ಥಃ ಉದಾರ ಇತ್ಯತ್ರ ದಾತಾ । ಇತಿ ವಿರೋಧಃ । ಉದಾರೋ ದಾತೃಮಹತೋಃ ಇತಿ ನಿಘಂಟುಃ । ಹಿರಣ್ಯಗರ್ಭನೆಂದೆನಿಸಿಯುದಾರನೆಂಬ ಅರ್ಥಲೋಭಿಯೆಂದೆನಿಸಿ ದಾತೃವೆಂದು ಪೆಂಪುವೆತ್ತಂ ಇತಿ ವಿರೋಧಃ । ಹಿರಣ್ಯಗರ್ಭ ಇತ್ಯತ್ರ ಸ್ವಯಂಭೂಃ ಉದಾರ ಇತ್ಯತ್ರ ಮಹಾಂಶ್ಚ । ಅಥವಾ—ಊನಾಂ ಕ್ಷತ್ರಿಯಾಣಾಂ । 'ಉಕಾರಃ ಕ್ಷತ್ರಿಯೇ ನೇತ್ರೇ ಹರಮೌಳೌ ಹರೇ ಹರೌ'। ತೇಷಾಂ ದಾರೋ ವಿದಾರಣಂ ಪರಶುರಾಮಾವತಾರೇ ಯಸ್ಮಾತ್ಸ ತಥಾ ಇತಿ ಪರಿಹಾರಃ। ಅಥವಾ ಹರಣ್ಯಗರ್ಭನೆಂದೆನಿಸಿಯುದಾರನೆಂಬ ಅರ್ಥೇ 'ಮಹತೋ ಮಹೀಯಾನಣೋರಣೀಯಾನ್' ಇತ್ಯರ್ಥೋ ಘಟತೇ । ಅತ ಏವ ಅತಿಶಯೋಕ್ತಿಃ । ವಿಷ್ಣುಪಕ್ಷೇ—ಹಿರಣ್ಯಗರ್ಭ ಇತ್ಯತ್ರ ಸುವರ್ಣಖನಿಃ ಧನಾಢ್ಯ ಇತಿ ಭಾವಃ । ಎಂದೆನೆಸಿಯುಂ ಉದಾರ ಇತಿ । 'ಉತ್ ಅ ಉದಾ ಸಂತಾಪಃ ತಾಂ ರಾತೀತಿ ಉದಾರಃ ರಾ ಆದಾನೇ ಅಪರಿತುಷ್ಟ ಇತಿ ಯಾವತ್' । 'ಅಕಾರಸ್ತು ಘಟೇ ಭಾವೇ ಪರಿತಾಪೇ ಪಿತಾಮಹೇ' ಇತಿ ನಿಘಂಟುಃ । ಅಪರಿತುಷ್ಟನೆಂದರ್ಥಃ । ತಥಾಸತ್ಯುದಾರ ಇತಿ ಅಭಿಧಾಮೂಲೋ ವಿರೋಧೋ ಧ್ವನ್ಯತೇ । ವಕ್ತುಮಶಕ್ಯತ್ವಾದಲಮತಿ ಚರ್ಚಯಾ । ವಿಶೇಷಣಾಂತರಮಾಹ ರಜವೊಂದಿದೇತಿ । ರಜವೊಂದಿದಸತ್ವನಿಧಾನನೆಂಬ

ಇತ್ಯತ್ರ ರಜೋಗುಣಯುಕ್ತೋ ಬ್ರಹ್ಮಾ । ರಜೋಗುಣ ಸ್ವಭಾವತ್ವಾತ್ ತಸ್ಯ । ಸತ್ವನಿಧಾನಂ । ಸತ್ವಂ ಸ್ವಭಾವಃ ಸೃಷ್ಟ್ಯಾದಿಸ್ತಸ್ಯ ನಿಧಾನಮಾಸ್ಪದಂ ಚ ಬ್ರಹ್ಮಾ । ಕಿಂಚ ವಿಷ್ಣುರಪಿ ಸತ್ವನಿಧಾನಂ ಸತ್ವಸ್ಯ ಸತ್ವಗುಣಸ್ಯ ನಿಧಾನಮಾಶ್ರಯಃ । ಸತ್ವಗುಣಸ್ವಭಾವತ್ವಾತ್ತಸ್ಯ । ಸತ್ವನಿಧಾನಪದೇನಾನಯೋರೌಪಮ್ಯೇಸಾಮ್ಯೇಽಪಿ ರಜೋಯುಕ್ತಸ್ಯ ಸತ್ವನಿಧಾನಮಿತಿ ಬ್ರಹ್ಮಣ್ಯಾಧಿಕ್ಯಂ ರಜೋಯುಕ್ತೋಽಪಿ ದೋಷದುಷ್ಟೋಽಪಿ ಸತ್ವನಿಧಾನಂ ಸತ್ವಾನಾಂ ಜೀವಾನಾಂ ನಿಧಾನಂ ನಿಧಿಸ್ವಂತೋಪಕಾರೀತಿ ಶಬ್ದಶಕ್ತ್ಯಾ ವಿರೋಧೋ ವ್ಯಜ್ಯತೇ । ಎಂಬ ಪೆಂಪನುಗುಣಮಾದ ಇತಿ ಸಾಮರ್ಥ್ಯನಗತಃಕೋರ್ಥ ಇತಿ ? ಹಿರಣ್ಯಗರ್ಭೋಽಪ್ಯುದಾರಃ ರಜೋಯುಕ್ತೋಽಪಿ ಸತ್ವನಿಧಾನಮಿತ್ಯನ್ಯೋನ್ಯವಿರೋಧಿಭಿರಪಿಗುಣೈಃ ಸ್ವಮಹಿಮಾನುಗುಣೋಪೇತೋ ಲೋಕಪಿತಾ ಜಗಜ್ಜನಕಶ್ಚತುರ್ಮುಖೋಬ್ರಹ್ಮಾ । ಲೋಕಪಿತಾ ಕೃಷ್ಣಃ ರಕ್ಷಣಭರಣಾದಿನಾ ಜಗತ್ಪೋಷಕತ್ವಾತ್ತಸ್ಯ । ಚತುರ್ಮುಖಃ ಚತುರ್ಯ್ಯಾಗೇಷು ಮುಖಂ ಪ್ರಧಾನಂ ಮುಖ್ಯಃ । ಚತುರ್ಮುಖೋ ವಿಷ್ಣುಃ। ಯದ್ವಾ ಚತುರ್ಣಾಂ ದೇವಾಸುರ ಮುನಿವರಾಣಾಂ ಬ್ರಾಹ್ಮಣಾದೀನಾಂ ವಾ ಮುಖ್ಯಃ। ಇತಿ ಗುಣಮುಖ್ಯಭಾವೇನ ಕಮಲೋದರ ಕಮಲಾಸನಯೋರ್ಗುಣಕೀರ್ತನಮಭಿಧಾಯ ಕಾವ್ಯಕರ್ತಾ ಸ್ವ ಪೋಷಕಸ್ಯ ರಾಜ್ಞೋಗುಣಗಣಮುಪ್ಯುಕ್ತಿಲೇಶೇನ ವಿಶಿನಷ್ಟಿ ಜನನುತೇತಿ । ಭುವನಸ್ತುತರಾಜಶ್ರೇಷ್ಠಾನಾಂ ನಯನೋನಾಯಕಃ ಕಮಲಾನಾಂ ವರಸ್ತ್ರೀಣಾಂ ಆಧಾರಃ 'ಕಮಲಂ ಸಲಿಲೇ ತಾಮ್ರೇ ಕಮಲಾ ಶ್ರೀವರಸ್ತ್ರಿಯೋಃ' । ಕಲಾನಾಂ ಚತುಷ್ಷಷ್ಟಿಕಲಾನಾಂ ನಿಕೇತನಮಾಶ್ರಯಃ। ಹಿರಣ್ಯಗರ್ಭಃ ಸುವರ್ಣಜನನಸ್ಥಾನಂ ಸ್ವರ್ಣಖನಿರಿತಿಯಾವತ್ । ಉದಾರೋದಾತಾ । ಅರಜಃ ಅದೋಷಯುಕ್ತಃ ಸದ್ಗುಣ ಇತ್ಯರ್ಥಃ। ಅಸತ್ವನಿಧಾನಂ। ಅಸತ್ವಾನಾಂ ಅಖಿಲಾನಾಂ 'ಸತ್ವಂ ಗುಣೇಪಿಶಾಚಾದೌ ಖಲೇ ದ್ರವ್ಯಸ್ವಭಾವಯೋಃ' ನಿಧಾನಂ ಸಜ್ಜನಾನಾಂ ನಿಧಾನಮಾಶ್ರಯಃ । ಅಥವಾ ಸತ್ವಸ್ಯ ಸಾಮರ್ಥ್ಯಸ್ಯ ನಿಧಾನಮಾಧಾರಃ ಲೋಕಪಿತಾ ಭೂಪಾಲಕಃ ಚತುರ್ಮುಖಃ ಚತ್ವಾರಿಮುಖಾನ್ಯುಪಾಯಾಃ ಸಾಮಭೇದಾದಯೋ ಯಸ್ಯ ಸತತಾ ಇತ್ಯುಕ್ತಿಲೇಶಃ ॥

ಅಥ ಬ್ರಹ್ಮಾಣಮಭಿವಂದ್ಯ, ಕ್ರಮಪ್ರಾಪ್ತಸ್ಯ ಮಹೇಶ್ವರಸ್ಯ ವಂದನಾತತ್ಪರಃ ಹರಿಹರಯೋಃ ಶ್ಲೇಷಾರ್ಥಂ ಹೃದ್ಯಂ ತೃತೀಯಪದ್ಯಮುಪಕ್ರಮತೇ :—

೩. ಮಹಾಸ್ರಗ್ಧರೆ॥

ಅರಿಕಾಮಧ್ವಂಸಿ ನಾಗವ್ರಜಮಯಕಟಕಂ ರಾಜರಾಜಪ್ರತಿಷ್ಠಾ
ನಿರತಂ ಲೀಲಾಪ್ರಮೋದಂಚಿತ ನಿರವಧಿಗಾಂಗೇಯಕಂ ದ್ವಿಟ್ಪುರಪ್ಲೋ
ಷರತಕ್ರೀಡಂ ವೃಷಾಂಕಂ ವಿಬುಧನುತನಮಾಕಾಮಿನೀಜೀವಿತೇಶಂ
ಪರಮೈಶ್ವರ್ಯಾಸ್ಪದಂ ರಕ್ಷಿಸುಗೆ ವಸುಧೆಯಂ ಯುದ್ಧರಂಗತ್ರಿಣೇತ್ರಂ ॥

ಅರಿಕಾಮಧ್ವಂಸಿ ಇತ್ಯಾದಿ । ಅರಿಕಾಮಧ್ವಂಸೀ ಮಹೇಶ್ವರಃ । ಅರಿಶ್ಚಾಸೌ ಕಾಮಶ್ಚ ತಂ ಧ್ವಂಸಿತುಂ ಶೀಲಮಸ್ಯೇತಿ । ವಿಷ್ಣುರಪಿ । ಅರೀಣಾಂ ಕಾಮಃ ಅಭಿಲಾಷಃ ತಂ ಧ್ವಂಸಿತುಂ ಶೀಲಮಸ್ಯೇತಿ ಅಥವಾ—ಅರಾಣಿ ಸಂತಿ ಅಸ್ಯೇತ್ಯರಿಃ ಚಕ್ರಂ ತಸ್ಯ ಕಃ ಪ್ರಭಾ ತೇನ ಅಮ

ಧ್ವಂಸೀ ಅಮೋ ವಿಪಕ್ಷಃ ತಂ ಧ್ವಂಸಿತುಂ ಶೀಲಮಸ್ಯೇತಿ ಅರಿಕಾಮಧ್ವಂಸೀ । ಚಕ್ರತೇಜಸಾ ವಿಪಕ್ಷಕ್ಷೇಪಕಃ ಚಕ್ರಾಯುಧತ್ವಾತ್ ತಸ್ಯ । ಅಥವಾ—ಋಃ ಸ್ವರ್ಗಃ । 'ಋಕಾರಃ ಕುಂಜರೇ ಸ್ವರ್ಗೇಽಪಿ ಭೇದೇ ದೇವಮಾತರಿ । ಭಾವೇ ಭೇದೇ ರಿಪೌ ನದ್ಯಾಂ ಸುರಾಯಾಂ ವಾಸವೇ ಭವೇತ್' ಇತಿ ಏಕಾಕ್ಷರನಿಘಂಟುಃ । ರಿ ಸ್ವರ್ಗೇ ಕಾಮೋ ಅಭಿಲಾಷೋ ಯೇಷಾಂ ತೇ ರಿಕಾಮಾಃ ಸುರಾಃ ತೇ ನಭವಂತೀತ್ಯರಿಕಾಮಾಃ* ಅಸುರಾಃ ತಾನ್ ಧ್ವಂಸೀ ಅಸುರಾಂತಕ ಇತ್ಯರ್ಥಃ। ನಾಗವ್ರಜಮಯಕಟಕಃ। ನಾಗಾನಾಂ ಸರ್ಪಾಣಾಂ ವ್ರಜಃ ಸಮೂಹಃ ತನ್ಮಯಂ ತತ್ಸ್ವರೂಪಂ ಕಟಕಂ ಉಪಲಕ್ಷಣಯಾ ಕುಂಡಲಾದ್ಯಾಭರಣಂ ಯಸ್ಯ ಸ ತಥೋಕ್ತಃ । ವಿಷ್ಣುಶ್ಚ ನಾಗವ್ರಜಮಯಕಟಕಃ ನಗೇ ಪರ್ವತೇ ವನೇ ವಾ ವ್ರಜಂತಿ ಚರಂತೀತಿ ನಗವ್ರಜಾಃ ವ್ರಜಗತಾಃ ಕಪಯಃ। ನಗವ್ರಜಾನಾಂ ಸಮೂಹೋ ನಾಗವ್ರಜಂ ಕಪಿಸಮೂಹ ಇತ್ಯರ್ಥಃ। ತನ್ಮಯಃ ಕಟಕಃ ಸೇನಾ ಯಸ್ಯ ಸಃ ನಾಗವ್ರಜ ಮಯಕಟಕಃ । ಅಥವಾ—ನಗೇ ವನೇ ವ್ರಜಂತೀತಿ ನಗವ್ರಜಾಃ ವನಚರಾಃ ತನ್ಮಯಃ ಕಟಕಃ ಸೇನಾ ನಗವ್ರಜಮಯಕಟಕಃ ತೇನ ವಾನರಪ್ರಚುರ ಬಲೇನ ಜಯತಿ ರಾಕ್ಷಸಾನಿತಿ ನಾಗವ್ರಜಮಯಕಟಕಃ ರಘುರಾಮಾವತಾರೇ ವಾನರಬಲಾನುವರ್ತಿತ್ವಾತ್ತಸ್ಯ। ನಾಗಾಃ ಗಜದಂತಾಃ ತೇಷಾಂ ವ್ರಜಃ ಸಮೂಹಃ ತನ್ಮಯಂ ಕಟಕಂ ವಲಯಂ ಉಪಲಕ್ಷಣಯಾ ಗಜದಂತಾಭರಣಂ ಯಸ್ಯ ಸ ತಥಾ । ರಾಜರಾಜಪ್ರತಿಷ್ಠಾನಿರತಮಿತಿ । ರಾಜರಾಜಸ್ಯ ಕುಬೇರಸ್ಯ ಪ್ರತಿಷ್ಠಾಯಾಂ ಉತ್ಕರ್ಷಪ್ರಾಪಣೇ ನಿರತಃ ತತ್ಪರಃ ಮಹೇಶ್ವರಃ । ಕುಬೇರಸಖತ್ವಾತ್ತಸ್ಯ। ರಾಜರಾಜಸ್ಯ ಚಂದ್ರಸ್ಯ 'ರಾಜರಾಜಃ ಕುಬೇರೇಽಪಿ ಸಾರ್ವಭೌಮೇ ಸುಧಾಕರೇ' । ಪ್ರತಿಷ್ಠಾ ಪ್ರಕರ್ಷೇಣ ಸ್ಥಿತಿಃ ಜಟಾಜೂಟಾಧಿರೋಪಣಂ ತತ್ರನಿರತಃ। ವಿಷ್ಣುರಪಿ। ರಾಜರಾಜಸ್ಯ ಯುಧಿಷ್ಠಿರಸ್ಯ ಪ್ರತಿಷ್ಠಾಯಾಂ ತದ್ರಾಜ್ಯಸ್ಥಾಪನಾಯಾಂ ತತ್ಪರಃ ಕೃತಪ್ರತಿಜ್ಞಃ ಕೃಷ್ಣಃ । ಪಾಂಡವಪ್ರತಿಷ್ಠಾಪ್ರವಣತ್ವಾತ್ ತಸ್ಯ । ಕಿಂಚ—ರಾಜಾಶಕ್ರೇರಃ ಕಾಮಃ । 'ರಃ ಪುಮಾನ್ ಪಾವಕೇ ಕಾಮೇ ಕ್ಷಯೇ ವಜ್ರೇ ಶಿವೇಪ್ಯುಕ್ತ' । ಅಜೋಬ್ರಹ್ಮಾ । ತೇಷಾಂ ರಾಜರಾಜಾನಾಂ ಶಕ್ರಕಾಮಬ್ರಹ್ಮಣಾಂ ಪ್ರತಿಷ್ಠಾಯಾಂ ಯೋಗ್ಯಪ್ರವರ್ತನಾಯಾಂ ನಿರತಃ ಕುಶಲಃ । ಲೀಲಾಪ್ರಮೋದಂಚಿತ ನಿರವಧಿಗಾಂಗೇಯಕಮಿತಿ॥ ಲೀಲಾಪ್ರಮಾ ಕ್ರೀಡಾಬುದ್ಧಿಃ ತಯಾ ಉದಂಚಿತಃ ನಿರವಧಿಃ ನಿತರಾಂ ಅವಧಾನಂ ಯಸ್ಯ ಸಃ ಬಾಲಕ್ರೀಡಾಭಿಲಾಷೇಣ ಪ್ರಮೋದವಾನ್ ಗಾಂಗೇಯಃ ಕುಮಾರೋ ಯಸ್ಯ ಮಹೇಶ್ವರಸ್ಯಾಸೌ ಲೀಲಾಪ್ರಮೋದಂಚಿತ ನಿರವಧಿಗಾಂಗೇಯಕಃ 'ವಿಷ್ಣುಶ್ಚ-ಲೀಲಾಪ್ರಮೋದಂಚಿತಃ ಪ್ರಕೃಷ್ಟಾ ಮಾ ಪ್ರಮಾ ಲೀಲಾಯುಕ್ತಾ ಪ್ರಮಾ ಲೀಲಾಪ್ರಮಾ ತಯಾ ಉದಂಚಿತೋಽಲಂಕೃತಃ ಲೀಲಾಪ್ರಮೋದಂಚಿತಃ ನಿರವಧಿ ಗಾಂಗೇಯಕಃ । ನಿರವಧಿಃ ನಿರ್ ನಿಶ್ಚಯೇ । 'ನಿರ್ನಿಶ್ಚಯನಿಷೇಧಯೋಃ' ಇತಿನಿಘಂಟುಃ । ನಿಶ್ಚಯೇನ ಸ್ವಾಮಿನಿಷ್ಠಯಾ ಅವ

---

* ಋ ಶಬ್ದಕ್ಕೆ ಸಪ್ತಮ್ಯೇಕವಚನದಲ್ಲಿ "ಅರಿ"ಯೆಂದೇ ರೂಪವಾಗುವುದು.

ಅರಿ ಸ್ವರ್ಗೇ ಕಾಮೋಯೇಷಾಂತೇಯೆಂದು ಸಮಾಸಮಾಡಿದಲ್ಲಿ "ಋಕಾಮಾಃ" ಎಂದೇ ರೂಪವಾಗುವುದು. ಅಲುಕ್ಸಮಾಸಕ್ಕೆ ಇಲ್ಲಿ ಶಾಸ್ತ್ರವಿಲ್ಲ. ತೇ ನ ಭವಸ್ತೀತಿ ವಿಗ್ರಹಮಾಡಿದರೆ "ಅನ್ಯಕಾಮಾಃ" ಎಂದಾಗುವುದು.

ಸಮುಂತಾತ್ಸಂಪೂರ್ಣಾ ಧೀಃ ಭಕ್ತಿಬುದ್ಧಿಃ ಯಸ್ಯ ಸಃ ನಿರವಧಿಃ* ನಿಶ್ಚಿತಪ್ರವೃದ್ಧ ಸ್ವಾಮಿ ಭಕ್ತಿರ್ವಾ ಗಾಂಗೇಯಕಃ ಭೀಷ್ಮಾಚಾರ್ಯಃ ಯಸ್ಯ ವಿಷ್ಣೋರಸೌ ನಿರವಧಿ ಗಾಂಗೇಯಕಃ। ಲೀಲಾಪ್ರಮೋದಂಚಿತಶ್ಚಾಸೌ ನಿರವಧಿಗಾಂಗೇಯಕಶ್ಚ ಸ ತಥಾ। ದ್ವಿಟ್ಪುರಶ್ಲೇಷರತಕ್ರೋಡಂ ದಿಟ್ಪುರಸ್ಯತ್ರಿಪುರಸ್ಯಶ್ಲೇಷಃ ದಾಹಃ (ಧ್ವಂಸಃ ಭಙ್ಗಃ) ತಸ್ಮಿನ್ ರತಂ ಕ್ರೋಡಂ ಭುಜಾಂತರಂ ಅಂತಃಕರಣಂ ವಾ। ಅತ್ರಪರಾರ್ಥಪ್ರತಿಪಾದಕಕ್ರೋಡಶಬ್ದಃ ಮಹೇಶ್ವರಮುಹತ್ತ್ವಖ್ಯಾಪನಾರ್ಥಃ' ವಿಷ್ಣುಶ್ಚ ತಥಾ। ವೇದಾಪಹಾರಿಣಃ ದ್ವಿಷಃ ತಮಾಸುರಸ್ಯಪುರಂ ಶರೀರಂ। 'ಪುರಂ ಪುರೇ ಶರೀರೇ ಚ ಗುಗ್ಗುಲೇ ಕಥಿತಃ ಪುರಃ'। ತಸ್ಯ ಶ್ಲೇಷೇ ವಿನಾಶೇ ರತಃ ಆಸಕ್ತಃ ಕ್ರೋಡಃ ಮತ್ಸ್ಯಾವತಾರೋ ವಾ ಶ್ರೀಹರಿಃ। ವೃಷಾಂಕಂ ವೃಷಭಲಾಂಛನಃ ಹರಃ। ವೃಷ ಏವ ಧರ್ಮ ಏವ ಅಂಕೋ ಭೂಷಣಂ ಯಸ್ಯವಿಷ್ಣೋರಸೌ ತಥಾ। 'ಧರ್ಮೇ ಚ ಮೂಷಕೇಶ್ರೇಷ್ಠೇ ಸುಕೃತೇ ವೃಷಭೇ ವೃಷಃ' ಇತಿ ನಿಘಂಟುಃ। ವಿಬುಧನುತಂ ಏಂ ಪರಮಾತ್ಮಾನಂ ಬೋಧಂತಿ ಪ್ರೇಕ್ಷಂತ ಇತಿ ಬುಧಾಃ। 'ವಿಃ ಪಕ್ಷಿಪರಮಾತ್ಮನೋಃ' ಇತಿ ನಿಘಂಟುಃ। ಯೋಗಿನಃ ತೈಃ ನುತಃ ವಂದಿತಃ ವಿಬುಧನುತಃ। ಉಮಾಕಾಮಿನೀಜೀವಿತೇಶಂ। ಗಿರಿಜಾಕಾಂತಾಯಾಃ ಪ್ರಾಣವಲ್ಲಭಃ ಶಿವಃ। ಪುರುಷೋತ್ತಮೋಪಿ—ಉಶ್ಚ ಹರಶ್ಚ। 'ಉಕಾರಃ ಶಂಕರೇ ಪ್ರೋಕ್ತಃ'। ಮಾಕಾಮಿನೀ ಚ—ಲಕ್ಷ್ಮೀಕಾಂತಾ ಚ। ತಾಭ್ಯಾಂ ಜೀವಿತಂ ಪ್ರವರ್ತನಂ। ತಸ್ಯ ಈಶಃ ಸಮರ್ಥಃ। ಉಮಾಕಾಮಿನೀ ಜೀವಿತೇಶಃ। ಹರಿಹರ ಸ್ವರೂಪೇಣ ಲಕ್ಷ್ಮೀಪತಿತ್ವೇನ ಚ ಲೋಕೇ ವ್ಯವಹಾರಾತ್ತಸ್ಯ। ಯದ್ವಾ—ವಿಷ್ಣು ಪಕ್ಷೇ। ವಿಬುಧನುತನುಮಾಕಾಮಿನೀಜೀವಿತೇಶಮಿತಿ ಸಮಸ್ತಪದೇನಾರ್ಥಃ ಕಥ್ಯತೇ—ವಿಬುಧೈರ್ನುತೋ ವಿಬುಧನುತಃ। ನುಃ ಸ್ತುತಿಃ। 'ನ ಶಬ್ದಸ್ತುಸ್ತುತೌಸ್ತ್ರೀಸ್ಯಾನ್ನಾಸ್ತ್ರೀ ತರಣಿ ಕಾಲಯೋಃ' ತಯೋಪಲಕ್ಷಿತಾ ಮಾ ಲಕ್ಷ್ಮೀಃ ನುಮಾ। ಸಾ ಚೇಯಂ ಕಾಮಿನೀತಸ್ಯಾಃ ಜೀವಿತೇಶಃ। ವಿಬುಧನುತಶ್ಚಾಸಾನುಮಾಕಾಮಿನೀಜೀವಿತೇಶಶ್ಚೇತಿ। ವಿಬುಧನುತನುಮಾಕಾಮಿನೀಜೀವಿತೇಶಃ। ಪರಮೈಶ್ವರ್ಯಾಸ್ಪದಂ। ಪರಮೈಶ್ವರ್ಯಸ್ಯ ಅಣಿಮಾದ್ಯಷ್ಟೈಶ್ವರ್ಯಸ್ಯ ಆಸ್ಪದಂ ಸ್ಥಾನಂ ವೈಕುಂಠಲೋಕೋ ಯಸ್ಯ। ಅಥವಾ—ಪರಾ ಉತ್ಕೃಷ್ಟಾಮಾಜ್ಞಾಸಂ ಪರಮಾ ತಸ್ಯಾಃ ಐಶ್ವರ್ಯಂ ಸ್ವಾಮಿತ್ವಂ ತಸ್ಯ ಆಸ್ಪದಂ ನಿವಾಸೋ ಯಸ್ಯಸಃ ವಿಶಿಷ್ಟಜ್ಞಾನವಿಭೂತಿಮಾನಿತ್ಯರ್ಥಃ ಪರಮೈಶ್ವರ್ಯಾಸ್ಪದಂ ಶಿವೋಪೀತ್ಯರ್ಥಃ। ಉಭಯಾರ್ಥೇऽಪಿ ಸಮಾನಂ। ಯುದ್ಧರಂಗ ತ್ರಿಣೇತ್ರಂ। ಯುದ್ಧೇರಂಗೋ ರಾಗೋ ಯಸ್ಯಸಃ ಯುದ್ಧರಂಗಸ್ಸಚಾಸಾತ್ರಿಣೇತ್ರಶ್ಚ, ಯುದ್ಧರಂಗೇ ರಣಾಂಗಣೇ ತ್ರಿಣೇತ್ರಃ ಪ್ರಧಾನಂ ತೃತೀಯಂ ಲಲಾಟನೇತ್ರಂ ಯಸ್ಯ ಸಃ ಯುದ್ಧರಂಗತ್ರಿಣೇತ್ರಃ। ಯುದ್ಧರಂಗತ್ರಿಣೇತ್ರ ಇತ್ಯತ್ರ ವ್ಯಸ್ತಪದೇನಾರ್ಥಃ ಕಥ್ಯತೇ ಯುದ್ ಯುದ್ಧಂ ಆಯುಧಂವಾ। ಉಭಯತ್ರಧಾಂಕೋऽಯಂ ಯುಧಂ ಆಯುಧಂ ತ್ರಿಶೂಲಂ ಸುದರ್ಶನಂ ವಾ ಧರತೀತಿ ಯುದ್ಧರಃ। ಅಥವಾ—ಯುಧಿ ಯುದ್ಧೇ ಹರಃ ಯುದ್ಧರಃ ವಿಷ್ಣುರಿತ್ಯರ್ಥಃ। ರಾಜಪಕ್ಷೇ—ಯುದ್ಧಂ ರಾತಿ ಆಪತ್ತ ಇತಿ ಯುದ್ಧರಃ। ಸಂಗ್ರಾಮಶೂರ ಇತ್ಯರ್ಥಃ। ಗತ್ರಿಣೇತ್ರ ಇತ್ಯತ್ರವ್ಯಸ್ತ

---

* ನಿರ್ ನಿಶ್ಚಯೇನ ಅವಸಮುನ್ನಾತ್ ಧೀಃ ಯಸ್ಯ ಸಃ ಎಂದು ವಿಗ್ರಹಮಾಡಿದರೆ "ನಿರವಧೀಃ" ಎಂದೇ ರೂಪವಾಗುವುದು. ಧೀ ಶಬ್ದಕ್ಕೆ ಹ್ರಸ್ವ ಬರಲಾರದು.

ಪದೇನಾರ್ಥಃ ಕಥ್ಯತೇ 'ಗೋಃಗಣಪತಿರುದ್ದಿಷ್ಟೋ ಗಂಧರ್ವೇಗಃ ಪ್ರಕೀರ್ತಿತಃ'। ಗಸ್ಯ ಗಣಪತೇಃ ಗಂಧರ್ವಸ್ಯ ಚ ತ್ರಾತ್ರಾಣಂ। ತ್ರೈಪಾಲನೇತ್ರಾಪಾಲನೇ ಇತಿ ವಾ। ಗತ್ರಾ ಅಸ್ಯಾಸ್ತೀತಿ ಗತ್ರಿ ಪ್ರಮಥಗಂಧರ್ವಾದಿಪಾಲಕಃ। ನಃ ಪ್ರಶಸ್ತಃ। ಇಃ ಕಾಮಃ 'ಇಃ ಕಾಯಜೋ ಜರಾಭೀರುಃ' ಇತಿ ನಿಘಂಟುಃ। ನಶ್ಚಾಸಾ ಇಶ್ಚ ನೇಃ ಏಕಾರಾಂತೋಽಯಂ। ತಂ ಪ್ರಸಿದ್ಧಕಾಮಂ ಸ್ವಪುತ್ರಂ ತ್ರಾಯತ ಇತಿ ನೇತ್ರಃ। ಮನೋಭವಾನ್ವಿತೋ ವಿಷ್ಣುರಿತ್ಯರ್ಥಃ। ಅಥವಾ ಗತ್ರಿಣೇತ್ರ ಇತ್ಯತ್ರ ಗತ್ರಿಃ ಗಂಗಾ 'ಗಂಗೇತ್ರಿಪಥಗಾಮಿನಿ' ಇತಿ ವಚನಾತ್। ಸೈವ ನೇತ್ರೇ ಜಟಾಯಾಂ ಯಸ್ಯ ಸಃ ಗತ್ರಿಣೇತ್ರಃ। 'ಸ್ಯಾಜ್ಜಟಾಂಶುಕಯೋರ್ನೇತ್ರಮ್' ಇತಿ ನಿಘಂಟುಃ। ಗಂಗಾಧರ ಇತ್ಯರ್ಥಃ। ಅಥವಾ। ಗಂ ಭಗೀರಥಂ ತ್ರಾಯತೇ ಇತಿ ಗತ್ರಿಃ। ಗಂಗಾ। 'ಗಂ ಗೀತೇಗಾ ಚ ಗಾಯತ್ರ್ಯಾಂ ಗೌ ಗಾಯಕಭಗೀರಥಾವಿತಿ' ಏಕಾಕ್ಷರನಿಘಂಟುಃ। ಸೈವೇಯಂ ನೇತ್ರೇ ಜಟಾಯಾಂ ಯಸ್ಯ ಇತಿ ವಾ। ರಾಜಪಕ್ಷೇ। ಗಾನಾಂ ಗೀತಾನಾಂ ತ್ರಿ ಗತ್ರಿ ಸ್ಥಾಯಿ। ಅನುಪಮಗಾನಂ ಇತ್ಯರ್ಥಃ। ತತ್ ನಯತ ಇತಿ ಗತ್ರಿಣೇಃ ಏಕಾರಾಂತೋಽಯಂ। ತಂ ಗಾಯಕಂ ತ್ರಾಯತ ಇತಿ ಗತ್ರಿಣೇತ್ರಃ। ಗಾನಲೋಲ ಇತ್ಯರ್ಥಃ। ಗಂಧರ್ವವಿದ್ಯಾಮನೋಜ್ಞ ಇತಿ ವಾ ಮನೋಭವಾನ್ವಿತ ಇತಿ। ಅತ್ರಾಪಿ ಕವಿಃ ನಿಜರಾಜಸ್ಯಸ್ಯ ಗುಣಸ್ತುತಿಂ ಶ್ಲೇಷಾದಿನಾಽಭಿದತ್ತೇ। ಅರಿಕಾಮಧ್ವಂಸೀ। ಕಾಮ ಇತ್ಯುಪಲಕ್ಷಣಯಾ ಕ್ರೋಧಮಾನಾದ್ಯಂತರಂಗಾರಿಷಡ್ವರ್ಗ ಗ್ರಹಣಂ। ಅರಿಶ್ಚಾಸಾ ಕಾಮಃ। ತಸ್ಯಧ್ವಂಸೀ ತಥಾ। ಅಂತರಂಗಾರಿಷಡ್ವರ್ಗ ವಿಜಯೀ। ನಾಗಪ್ರಜಮಯಕಟಕಂ। ಗಜಘಟಾಬಹುಳ ವ್ಯೂಹಃ। ರಾಜರಾಜ ಪ್ರತಿಷ್ಠಾ ನಿರತಂ। ರಾಜರಾಜಾನಾಂ ಸ್ವಪಾದಾಶ್ರಿತ ಮಹಾರಾಜಾನಾಂ ಪ್ರತಿಷ್ಠಾ ನಿರತಃ ತತ್ಪದ ಪ್ರತಿಷ್ಠಾಪನಾತತ್ಪರಃ। ಲೀಲಾಪ್ರಮೋದಂ। ಲೀಲಾಸಾನಂದ ಇತ್ಯರ್ಥಃ। ಚಿತನಿರವಧಿಗಾಂಗೇಯಕಂ। ಚಿತಂ ಸಂಚಿತಂ ನಿರವಧಿ ಅಪರಿಮಿತಂ ಗಾಂಗೇಯಂ ಸ್ವರ್ಣಂ ಯಸ್ಯ ತಥಾ ರಾಜ್ಯಾಂಗತ್ವಾತ್ಕೋಶವೃದ್ಧೇಃ। ಸಂಚಿತಾಪರಿಮಿತಧನಾಢ್ಯ ಇತ್ಯರ್ಥಃ। ದ್ವಿಟ್ಪುರಪ್ಲೋಷ ರತಕ್ರೋಡಮಿತಿ ವಾ ಪಾಠಃ। ದ್ವಿಟ್ಪುರಪ್ಲೋಷರತಃ ಶತ್ರುಪತ್ತನ ದಾಹ ತತ್ಪರಃ ಕ್ರೋಡಃ ಪುಣ್ಯಲಾಂಛನಂ ಹಲಕುಲಿಶಪದ್ಮಾದಿ ಮಹಾಭಾಗ್ಯಸೂಚಕ ಸಾಮುದ್ರಿಕಲಕ್ಷಣಂ ಯಸ್ಯ ಸಚಾಸಾದ್ವಿಟ್ಪುರ ಪ್ಲೋಷ ರತ ಕ್ರೋಡಃ। ಮಹಾಪುರುಷ ಇತ್ಯರ್ಥಃ। ರಾಜ್ಞಃ ವದನಪ್ರದೇಶೇ ಕಪೋಲಭಾಗೇ ಕಪೋಲಾಂತರಾಳೇ ಶಂಖಚಕ್ರಾದಿ ಚಿಹ್ನಮಸ್ತೀತಿ ಅತ ಏವ ಮಹಾಭಾಗ್ಯಶಾಲೀತ್ಯರ್ಥಃ। ವಿಬುಧನುತಂ ವಿದ್ವನ್ನುತಃ। ಉಮಾಕಾಮಿನೀಜೀವಿತೇಶಂ। ಊನಾಂ ಕ್ಷತ್ರಿಯಾಣಾಂ 'ಉಕಾರಃ ಕ್ಷತ್ರಿಯೇ ನೇತ್ರೇ ಹರಮೌಳೌ ಹರೇ ಹರೌ'ಮಾಲಕ್ಷ್ಮೀಃ। ಉಮಾ। ರಾಜ್ಯಲಕ್ಷ್ಮೀಃ। ಸೈವ ಕಾಮಿನೀಕಾಂತಾ। ತಸ್ಯಾಃ ಜೀವಿತೇಶೋ ವಲ್ಲಭಃ। ರಾಜ್ಯ ಲಕ್ಷ್ಮೀ ವಲ್ಲಭ ಇತ್ಯರ್ಥಃ ಪರಮೈಶ್ವರ್ಯಾಸ್ಪದಂ। ಪರಮೈಶ್ವರ್ಯಂ ಆಸ್ಪದಂ ಸ್ಥಾನಂ ನಿಲಯೋ ಯಸ್ಯ ಸ ಪರಮೈಶ್ವರ್ಯಾಸ್ಪದಃ। ಅಥವಾ—ಪರಮೈಶ್ವರ್ಯಾಸ್ಪದಮಿತ್ಯತ್ರ। ಪರಮೈಶ್ವರ್ಯಂ ಸಂಪತ್ ತಸ್ಯ ಆಸ್ಪದಂ ನಿಲಯ ಇತಿವಾ। ಯುದ್ಧರಂಗತ್ರಿಣೇತ್ರಂ। ಇದಂ ಪದಂ ವ್ಯಾಖ್ಯಾತ ಮೇವ। ಏತನ್ನಾಮ ಬಿರುದಾಂಕಿತೋ ರಾಜೇತಿ ರಾಜಪಕ್ಷಾರ್ಥಃ।

ಅಥ ಕವಿಃ ಲಕ್ಷ್ಮೀಪತಿಶ್ಲೇಷೋಪಲಕ್ಷಿತ ವಿರೂಪಾಕ್ಷಗುಣವರ್ಣನ ವಿಶಿಷ್ಟ ತೃತೀಯಪದ್ಯೇನ ಜಗದಾಶಿಷಂ ಕೃತ್ವಾಽಥ ನಾರಾಯಣಗುಣಶ್ಲೇಷಾಭಿಧೇಯಾನು ಗತೇನ ಸೂರ್ಯವರ್ಣನವಿಶಿಷ್ಟ

ಚತುರ್ಥಪದ್ಯೇನಾಪಿ ಜಗದಾಶಾಸ್ತೇ ಜನಚಿತ್ತಾಹ್ಲಾದ ಪಾದಮಿತಿ—

ಜನಚಿತ್ತಾಹ್ಲಾದಪಾದಂ ಸಕಲಧರಣಿಭೃನ್ಮಸ್ತಕನ್ಯಸ್ತಮಾಗಿ ।
ರ್ಪಿನಮುಚ್ಚಂಡಪ್ರತಾಪೋದಯಮರಿಕುಮುದಾಭೋಗವಿಧ್ವಂಸಿಯಾಗಿ ॥
ರ್ಪಿನಮುದ್ಯನ್ಮಂಡಲಾಗ್ರಂ ಸಲೆ ಘನಪದವೀಶೋಭೆಯಂ ಪೆರ್ಚಿಸುತ್ತಿ ।
ರ್ಪಿನಮೊಳ್ಪಂಬೆತ್ತುದಾತ್ತಂ ಬೆಳಗುಗೆ ಜಗಮಂ ಗೋಪಮಾರ್ತಂಡದೇವಂ ॥

ಜನಚಿತ್ತಾಹ್ಲಾದಪಾದಂ ಸಕಲಧರಣಿಭೃನ್ಮಸ್ತಕನ್ಯಸ್ತಮಾಗಿರ್ಪಿನಂ ಒಳ್ಪಂಬೆತ್ತುದಾತ್ತಂ ಗೋಪಮಾರ್ತಂಡದೇವಂ ಸೂರ್ಯಂ ಜಗಮಂ ಬೆಳಗುಗೆ ಇತಿ ಕ್ರಿಯಾಕಾರಕಸಂಬಂಧಃ। ಅಸ್ಯಾರ್ಥಃ —ಯಸ್ಯ ಪಾದೇಷು ಪಾದಯೋಶ್ಚ ಸಕಲಧರಣಿ ಭೃನ್ಮಸ್ತಕನ್ಯಸ್ತೇಷು ನ್ಯಸ್ತಯೋಶ್ಚ ಜಾತೇಷು ಜಾತಯೋಶ್ಚ ಸತ್ಸು ಸತೋಶ್ಚ। ಶೋಭನಃ ಸಃ ಉದಾತ್ತಃ ಶ್ರೀಜಗನ್ನಾಥಸ್ಸೂರ್ಯೋ ಜಗತ್ಪ್ರಕಾಶಯತ್ವಿತಿ ಏವಮುತ್ತರತ್ರ ವಿಶೇಷಣದ್ವಯೇನಾಪಿ ಯೋಜ್ಯಂ। ಸೂರ್ಯಪಕ್ಷೇ—ಜನಚಿತ್ತಾಹ್ಲಾದಪಾದಂ। ಜನಚಿತ್ತಸ್ಯ ಗಮನಾಗಮನೇ ಚ ಸ್ವಸ್ವ ವ್ಯಾಪಾರಾಭಿಲಾಷವತೋ ಲೋಕಹೃದಯಸ್ಯ ಆಹ್ಲಾದಃ ಆನಂದೋ ಯೇಭ್ಯಸ್ತೇ ಚ ಪಾದಾಃ ಕಿರಣಾಶ್ಚ। ತೇ ಕಥಂಭೂತಾಃ। ಸಕಲಧರಣಿಭೃನ್ಮಸ್ತಕನ್ಯಸ್ತಾಃ। ಸಕಲಧರಣಿಭೃತಾಂ ಸರ್ವಪರ್ವತಾನಾಂ ಮಸ್ತಕನ್ಯಸ್ತಾಃ ಶಿಖರಾರೂಢಾಃ। ವಿಷ್ಣುಪಕ್ಷೇ—ಜನಸ್ಯ ಸ್ವಹಿತಾಭಿಲಾಷಿಭುವನಸ್ಯ ಚಿತ್ತಾಹ್ಲಾದೋ ಮನೋನುರಾಗಃ ಯಾಭ್ಯಾಂ ಪಾದಾಭ್ಯಾಂ ಭವತಿ। ತೌ ಯಸ್ಯ। ಜನಚಿತ್ತಾಹ್ಲಾದಪಾದಂ ಭಕ್ತಜನಮನೋನುರಾಗಚರಣಾವಿತ್ಯರ್ಥಃ। ತೌ ಪಾದೌ ಕಿಂವಿಶಿಷ್ಟೌ? ಸಕಲೇತ್ಯಾದಿ। ಸಕಲಧರಣಿಭೃತಃ ಸಮಸ್ತಪೃಥ್ವೀಪಾಲಕಾಃ ತೇಷಾಂ ಮಸ್ತಕನ್ಯಸ್ತೌ ಚೂಡಾವತಂಸಿತೌ ತೌ ಚ ಪಾದೌ ಚ ಚರಣೌ ಚ। ಕಿಂಚ। ಜನಾನಾಂ ಪ್ರಜಾನಾಂ ಚಿತ್ತಸ್ಯಾಹ್ಲಾದೋ ವಿಸ್ಮಯೋ ಯಸ್ಮಾತ್ಸಚಾಸೌ ಪಾದಶ್ಚರಣೋಪಿ। ಸ ಕಥಂಭೂತಃ? ಸಕಲೇತ್ಯಾದಿ। ಕಲಾಸಹಿತೋ ಭೂಭೃದ್ರಾಜಾ ಬಲಿಚಕ್ರವರ್ತೀ। ತಸ್ಯ ಮಸ್ತಕೇನ್ಯಸ್ತಃಪಾದಸ್ಯ ವಾಮನಾವತಾರೇ ಬಲಿನಾಮರಾಜಮಸ್ತಕಾರೋಪಿತತ್ವಾತ್। ಆಗಿರ್ಪಿನಂ ಜಾತೇ ಸತಿ ಉಂಟಾಗುತ್ತಿರಲಾಗಿ ಇತ್ಯರ್ಥಃ ಭಾಸಮಾನ ಇತಿಸಂಬಂಧಃ। ಯಸ್ಯ ಸೂರ್ಯಸ್ಯ ಉಚ್ಚಂಡಪ್ರತಾಪೋದಯಂ ಪ್ರಕೃಷ್ಟತಾಪಪ್ರಕಟನಂ ಅರಿಕುಮುದಾಭೋಗ ವಿಧ್ವಂಸಿ। ಅರಿಕುಮುದಾನಾಂ ವಿರೋಧಿಕೈರವಾಣಾಂ ಆಭೋಗಃ ಪರಿಪೂರ್ಣತಾ ತಂ ವಿಧ್ವಂಸಿತುಂ ವಿನಾಶಯಿತುಂ ಶೀಲಮಸ್ಯ ತಥಾ। ಪಕ್ಷೇಪ್ರತಾಪೋದಯಃ ಪೌರುಷಾತಿಶಯಃ ಅರಿಕುಮುದೇತಿ। ಅರೀಣಾಂ ಕುಮುದಾಭೋಗಃ ತುಚ್ಛಸಂತೋಷೋತ್ಕರ್ಷಃ। ತಸ್ಯ ವಿಧ್ವಂಸೀ ವಿನಾಶಕಾರೀ। ಆಗಿರ್ಪಿನಂ ಯಸ್ಯ ಮಂಡಲಾಗ್ರೇ ಘನಪದವೀಶೋಭಾಂ ವರ್ಧಯತಿ ಸತಿ ಸೂರ್ಯಪಕ್ಷೇ। ಮಂಡಲಾಗ್ರಂ ಉತ್ಕೃಷ್ಟಮಂಡಲಂ ಘನಪದವೀಶೋಭಾಂ ಆಕಾಶ ಮನೋಹರತಾಂ। ವಿಷ್ಣುಪಕ್ಷೇ ಮಂಡಲಾಗ್ರಃ ನಂದಕಾಖ್ಯಃ ಕರವಾಳಃ ಘನಪದವೀಶೋಭಾಂ ನಭೋವಿಭಾಸಂ। ನಂದಕಾಖ್ಯಖಡ್ಗಸ್ಯ ಸೂರ್ಯಾತಿಶಾಯಿತೇಜಸ್ತ್ವಾತ್। ವಿಭ್ರಾಜಮಾನಃ ಸಹಿ ಉದಾತ್ತೋ ಮಹಾನ್। ಧೀರೋದಾತ್ತೋ ಮಹಾನಾಯಕಃ। ರಾಜಪಕ್ಷೇ ಜನಚಿತ್ತೇತ್ಯಾದಿ। ಜನಾನಾಂ ಪ್ರಜಾನಾಂ

ಚಿತ್ತಾಹ್ಲಾದೋ ಮನೋಽನುರಾಗಃ ಯಾಭ್ಯಾಂ ತೌ ಪಾದೌ । ಪ್ರಜಾಪಾಲನವಿಶಿಷ್ಟತ್ವಾತ್ । ಅತಏವ ಸಕಲಧರಣಿಭೃನ್ಮಸ್ತಕನ್ಯಸ್ತೌ ವಿಶ್ವಪೃಥ್ವೀಶ್ವರ ಶಿರೋವತಂಸಿತೌ । ಉಚ್ಚಂಡೇತಿ । ಉಚ್ಚಂಡಃ ಅಪ್ರತಿಹತಃ ಪ್ರತಾಪೋದಯೋವಿಕ್ರಮಪ್ರಸರಃ। ಸಕೀದೃಶಃ? ಅರಿಕುಮುದೇತ್ಯಾದಿ। ಅರೀಣಾಂ ಕೌ ಭೂಪೌಮುದಾಭೋಗಃ ಮೋದವಿಸ್ತಾರಃ ತಸ್ಯ ವಿಧ್ವಂಸಿಯುಂ ಆಗಿರ್ಪಿನಂ ಆಗುತ್ತಿರುವ ಹಾಗೆ ಇತ್ಯರ್ಥಃ । ಉದ್ಯನ್ಮಂಡಲಾಗ್ರಂ ಉದ್ಧೃತಕರವಾಳಃ । 'ಕೌಕ್ಷೇಯಕೋ ಮಂಡಲಾಗ್ರಃ' ಇತಿನಿಘಂಟುಃ । ಸ ಕಿಂ ವಿಶಿಷ್ಟ ಇತ್ಯಾಹ–ಘನಪದವೀಶೋಭೆಯಂ ಪೆರ್ಚಿಸು ತ್ತಿರ್ಪಿನಮಿತಿ । ಉತ್ಕೃಷ್ಟಾಧಿರಾಜಸ್ಥಾನಾತಿಶಯಮಭಿವರ್ಧಮಾನಃ । ಉದಾತ್ತೋ ದಾತಾ । 'ಉದಾತ್ತೋದಾತೃಮಹತೋಃ' ಇತಿನಿಘಂಟುಃ । ಜಗಮಂ ಬೆಳಗುಗೆ ಇತಿ । ಜಗತ್ಪಾಲಯ ತಾತ್ ॥

ಅಥ ಕವಿಃ ಪಂಚಮಪದ್ಯೇನ ಸ್ವಕಾವ್ಯನಿರ್ವಿಘ್ನಪರಿಸಮಾಪ್ತ್ಯರ್ಥಂ ವಿಘ್ನೇಶ್ವರ ಗುಣಸ್ತವ ನೇನ ನಾರಾಯಣಮಾಶೀರೂಪೇಣ ಅಭಿಷ್ಟೌತಿ । ಅರಿರೌದ್ರಮಿತಿ । ಮತ್ತೇಭವಿಕ್ರೀಡಿತಂ—

ಅರಿರೌದ್ರಂಕರದೈರ್ಘ್ಯಮುಲ್ಲಸದಹೀನಾಲಂಕೃತಂ ಮೂರ್ತಿಸಾ
ಕ್ಷರಸೇವ್ಯಂ ನಿಜವಿದ್ಯೆ ವಿಶ್ವವಿನುತಂ ಪಾದಂ ಸದಾಳಿಪ್ರಿಯಂ ।
ವರದಾನೋನ್ನತ ಭದ್ರಲಕ್ಷಣಪದಂ ಪದ್ಮಾನುಷಂಗಿತ್ವಮಾ
ಗಿರೆ ಪೆಂಪಚ್ಚರಿಯಾದ ದೇವಗಣಪಂ ರಕ್ಷಿಕ್ಕೆ ಭೂಚಕ್ರಮಂ ॥

ದೇವಗಣಪಃ ದೇವಶ್ಚಾಸೌಗಣಪಶ್ಚ ವರಪ್ರದವಿಘ್ನರಾಜಃ ಭೂಚಕ್ರಮಂ ರಕ್ಷತ್ವಿತಿ ಕ್ರಿಯಾಕಾರಕಸಂಬಂಧಃ । ಸ ಕೀದೃಶಃ ? ಯಸ್ಯ ಗಣಪಸ್ಯ ಕರದೈರ್ಘ್ಯಂ ಅರಿರೌದ್ರಂ ಭವತಿ ಸ ದೇವಗಣಪ ಇತ್ಯತ್ರೋತ್ತರತ್ರಾಪಿಯತ್ತಚ್ಛಬ್ದಾವಧ್ಯಾಹೃತ್ಯ ಸಂಬಂಧಃ ಕರ್ತವ್ಯಃ । ಅರಿ ರೌದ್ರಂ ಪರಾದೃಶ್ಯಂ ಕರದೈರ್ಘ್ಯಂ ಹಸ್ತಾಯಾಮಃ ಕರಸ್ಯ ದೈರ್ಘ್ಯವರ್ಣನಯಾ ಗಜಾನನಸ್ಯ ವಕ್ಷ್ಯಮಾಣಭದ್ರಲಕ್ಷಣಮಭಿಹಿತಂ ಭವತಿ । ವಿಷ್ಣೋರಪಿ ಕರದೈರ್ಘ್ಯಮಾಜಾನುಬಾಹುತಾ ಅರಿರೌದ್ರಂ ಅರಣ್ಯಸ್ಯ ಸಂತೀತಿ ಅರಿಶ್ಚಕ್ರಂ. ತೇನ ಸುದರ್ಶನಚಕ್ರೇಣ ರೌದ್ರಂ ಭಯಂಕರಂ । ಪುನಃಕೀದೃಶಃ ? ಯಸ್ಯ ಮೂರ್ತಿಃ ಉಲ್ಲಸದಹೀನಾಲಂಕೃತಾ ಸ ತಾದೃಶಃ। ಉಲ್ಲಸದ ಹಯಃ ಸರ್ಪಾಃ ತೇಷಾಂ ಇನಃ ಪ್ರಭುರ್ವಾಸುಕಿಃ 'ಇನಸ್ಸೂರ್ಯೇ ಪ್ರಭಾವಿತಿ' ನಿಘಂಟುಃ । ತೇನಾಲಂಕೃತಾ ಭೂಷಿತಾ । ಲಂಬೋದರಸ್ಯ ಫಣಿಪಾಶಬದ್ಧತ್ವಾತ್ । ವಿಷ್ಣೋ ರಪಿ ಮೂರ್ತಿಸ್ತಥಾ—ಉಲ್ಲಸತ್ಪ್ರಜ್ವಲತ್ ಅಹೀನಂ ಉತ್ಕೃಷ್ಟಂ ಯಥಾಭವತಿ ತಥಾ ಅಲಂಕೃತಂ ಕೌಸ್ತುಭಾದ್ಯಲಂಕಾರೋ ಯಸ್ಯಾಃಸಾ। ಕಿಂಚ—ಉಲ್ಲಸದಹೀನಸ್ಯ ಉತ್ಫಣಶೇಷಸ್ಯ ಅಲಂಕೃತಾ ಅಲಂಕಾರಭೂತಾ ಮೂರ್ತಿಃ । ಶೇಷತಲ್ಪಶಾಯಿತ್ವೇನ ತಚ್ಛೋಭಾವಿಧಾಯಿತ್ವಾ ದ್ವಿಷ್ಣೋಃ ಪುನರಪಿ ಕಥಂಭೂತಃ ಯಸ್ಯ ನಿಜವಿದ್ಯಾಸಾಕ್ಷರಸೇವ್ಯಾ । ಅಕ್ಷಂ ಅಕ್ಷಯಂ ರಾತೀತಿ ಅಕ್ಷರಂ ಅಕ್ಷರೇಣ ಸಹ ವರ್ತಂತ ಇತಿ ಸಾಕ್ಷರಾಃ ಸಾಪೇಕ್ಷಾಃ ಭಕ್ತಾ ಇತ್ಯರ್ಥಃ । ತೈಃ ಸೇವ್ಯಾನಿಜವಿದ್ಯಾ ನಿಜಾ ಸ್ವಾಭಾವಿಕೀ 'ಸ್ವಕೇ ನಿತ್ಯೇ ನಿಜಂ ತ್ರಿಷ್ವಿತಿ' ನಿಘಂಟುಃ । ವಿದ್ಯಾ

ವಂದಾರುವರದಾತೃತ್ವಂ । ತತ್ತದಭೀಷ್ಟಪ್ರದಾನವಿಜ್ಞಾನಂ ಸರ್ವಜನಾರಬ್ಧಕಾರ್ಯವಿಘ್ನವಿನಾಶಿ। ಅತಏವ ಸಾಕ್ಷರಸೇವ್ಯಾಸಾಕ್ಷರೈರ್ವಿದ್ವದ್ಭಿಃ ಶ್ರಯಣೀಯಾ । ವಿಷ್ಣುರಪಿ ನಿಜವಿದ್ಯಾ ನಿಜಾ ನಿತ್ಯಾ ‘ಸ್ವಕೇನಿತ್ಯೇನಿಜಂತ್ರಿಷ್ವಿತಿ’ ನಿಘಂಟುಃ । ವಿದ್ಯಾ ಆನಂದೋನಿಜವಿದ್ಯಾ ನಿತ್ಯಾನಂದೊಪರಬ್ರಹ್ಮೇತ್ಯರ್ಥಃ। ಸಾಸಾಕ್ಷರಸೇವ್ಯಾ। ಕಥಮಿತ್ಯುಕ್ತೇ ಕ್ಷರಣಂ ಕ್ಷರಃ ನ ಕ್ಷರಃ ಅಕ್ಷರಃ ಅನಿಸ್ಪಂದತಾ। ತೇನ ಸಹವರ್ತಮಾನಾಃ ಯೋಗಿನಃ ತೈಸ್ಸೇವ್ಯಾ ಅನುಭಾವ್ಯಾ । ಯೋಗಿಧ್ಯಾನೈಕಗಮ್ಯತ್ವಾತ್। ಪುನರಪಿ ಕಿಂವಿಶಿಷ್ಟಃ ಯಸ್ಯ ಪಾದಃ ವಿಶ್ವವಿನುತಃ ವಿಶ್ವೈರ್ದೇವೈಃ ಪ್ರಮಥಾದಿಭಿಃ ವಿನುತಃ ಸ್ತುತಃ। ವಿಷ್ಣುಪಕ್ಷೇ। ವಿಶ್ವೇನ ಚತುರ್ದಶಭುವನೇನ ವಿನುತಃ ವಂದ್ಯಃ ಜಗನ್ನಾಥತ್ವಾತ್। ಅಥವಾ—ವಿಶ್ವೇಷು ಸಚರಾಚರೇಷು ವಿನುತಃ ಪೂಜ್ಯಃ । ಕಿಂಚ ವಿಶ್ವಸ್ಯ ಜಗತಃ ವಿಲೋಚನಂ ಸಚಾಸೌ ನುತಶ್ಚ ವಿಶ್ವವಿನುತಃ । ತಸ್ಯ ವಿಶ್ವಚಕ್ಷುಷ್ಟ್ವಾತ್ ‘ವಿ ಚಕ್ಷುಷಿ ವ್ಯೋಮ್ನಿವಾತೇ ಪರಮಾತ್ಮನಿ ಪಕ್ಷಿಣಿ’ ಇತಿ ನಾನಾರ್ಥರತ್ನಮಾಲಾಯಾಂ । ಯಸ್ಯ ವರದಾನೋನ್ನತಭದ್ರಲಕ್ಷಣಪದಂ ಸದಾಳಿಪ್ರಿಯಂ। ಸ ತಥಾ ಚೋಕ್ತಃ। ವರಮುತ್ಕೃಷ್ಟಂ ದಾನಂ ಮದಃ ಯಸ್ಯ ತದ್ವರದಾನಂ । ಉನ್ನತಮುದ್ಧೃತಂ ಭದ್ರಲಕ್ಷಣಂ ಯಸ್ಯ ತತ್ ಉನ್ನತ ಭದ್ರಲಕ್ಷಣಂ ವರದಾನಂ ಉನ್ನತ ಭದ್ರಲಕ್ಷಣಂ ಚ ತನ್ಮುಖಂ ಸದಾಳಿಪ್ರಿಯಂ ಸತತಮಳಿಪ್ರಿಯಂ ಭೃಂಗಹೃದ್ಯಂ। ವರದಾನಮಿತಿ ದಾನಸ್ಯ ಮದಜಲಸ್ಯ ಸೌಗಂಧ್ಯಮುಕ್ತಂ। ಅತಏವ ಸದಾಽಳಿಪ್ರಿಯಂ। ಸದೇತಿನಿತ್ಯಮದೋ ಗಮ್ಯತೇ* ।

* ನಮಗೆ ದೊರೆತ ಮೂಲಪ್ರತಿಯಲ್ಲಿ ಇನ್ನು ಮುಂದೆ ಗ್ರಂಥವಿಲ್ಲ.

ಪದ್ಯಗಳ ಅಕಾರಾದಿ

[ಮೊದಲ ಸಂಖ್ಯೆ ಆಶ್ವಾಸವನ್ನೂ ಎರಡನೆಯ ಸಂಖ್ಯೆ ಪದ್ಯವನ್ನೂ ಸೂಚಿಸುತ್ತದೆ]

ಪ

ಫ

ಬ

ಯ

ಶ

ಷ

ಸ

ಹ





ಕನ್ನಡ ಅಧ್ಯಯನ ಸಂಸ್ಥೆ

ಪ್ರಾಚ್ಯ ಕಾವ್ಯಮಾಲೆ

ಈಚಿನ ಕೆಲವು ಪ್ರಕಟಣೆಗಳು

೧ ಪದಾರ್ಥಸಾರ (ಭಾಗ ೧ ಮತ್ತು ೨): ಸಂ.ಎಮ್.ಸಿ. ಪದ್ಮನಾಭಶರ್ಮ
೨ ಸೂಪಶಾಸ್ತ್ರ: ಸಂ. ಎಸ್. ಎನ್. ಕೃಷ್ಣಜೋಯಿಸ್
೩ ಸೊಬಗಿನ ಸೋನೆ: ಸಂ. ಬಿ. ಎಸ್. ಸಣ್ಣಯ್ಯ
೪ ವಿಷ್ಣುಪುರಾಣ: ಸಂ. ಎಸ್. ಎನ್. ಕೃಷ್ಣಜೋಯಿಸ್
೫ ಕಂಠೀರವ ನರಸರಾಜ ವಿಜಯಂ: ಸಂ. ಡಾ. ಆರ್. ಶಾಮಶಾಸ್ತ್ರಿ
೬ ದ್ವಾದಶಾನುಪ್ರೇಕ್ಷೆ: ಸಂ. ಕೆ. ಆರ್. ಶೇಷಗಿರಿ
೭ ಹಾಲಾಸ್ಯಪುರಾಣ: ಸಂ. ಜಿ. ಜಿ. ಮಂಜುನಾಥನ್
೮ ಧರ್ಮನಾಥ ಪುರಾಣಂ: ಸಂ. ಎನ್. ಬಸವಾರಾಧ್ಯ
೯ ಸಾನಂದ ಚರಿತೆ: ಸಂ. ಎಸ್. ಬಸಪ್ಪ
೧೦ ಜೀವಂಧರ ಚರಿತ್ರೆ: ಸಂ. ಜಿ. ಜಿ. ಮಂಜುನಾಥನ್
೧೧ ಯೋಗರತ್ನಾಕರ: ಸಂ. ಜಿ. ಜಿ. ಮಂಜುನಾಥನ್
೧೨ ಸಾನಂದ ಗಣೇಶ ಸಾಂಗತ್ಯ: ಸಂ. ಡಿ. ವಿಜಯ; ಆರ್. ಎನ್. ವಿಜಯಲಕ್ಷ್ಮಿ
೧೩ ಬಸವೇಶ್ವರಪುರಾಣ ಕಥಾಸಾಗರ: ಸಂ. ಎಸ್. ಉಮಾಪತಿ
೧೪ ಪುರಾತನರ ಚರಿತೆ : ಸಂ. ವೈ. ಸಿ. ಭಾನುಮತಿ
೧೫ ರುಕ್ಮಾಂಗದ ಚರಿತ್ರೆ: ಸಂ. ಕೆ. ಆರ್. ಶೇಷಗಿರಿ
೧೬ ಕಲ್ಯಾಣಕೀರ್ತಿಯ ಕೃತಿಗಳು: ಸಂ. ಹ. ಕ. ರಾಜೇಗೌಡ
೧೭ ಅರಣ್ಯಪರ್ವ: ಸಂ. ಡಾ. ಸಿ. ಪಿ. ಕೃಷ್ಣಕುಮಾರ್